ಕರ್ಣಾಟಕ ಕಾವ್ಯಕಲಾನಿಧಿ, ಕೋಶಸಂಖ್ಯೆ—೩೯

ಮಹಾಕವಿಕಮಲಭವ

ವಿರಚಿತಮಪ್ಪ

ಶಾಂತೀಶ್ವರ ಪುರಾಣಂ

ಮಂ. ಆ. ರಾಮಾನುಜಯ್ಯಂಗಾರ್ಯ

ಅಸಿಸ್ಟೆಂಟ್‌ಮಾಸ್ಟರ್ ಮಹಾರಾಣೀ ಕಾಲೇಜ್, ಮೈಸೂರು—

ಇವರಿಂದ ಪರಿಷ್ಕರಿಸಲ್ಪಟ್ಟ

ಮೈಸೂರು

ಜೆ. ಟಿ. ಎ. ಮುದ್ರಾಶಾಲೆಯಲ್ಲಿ ಮುದ್ರಿತವಾಯ್ತು

UNIVERSAL
LIBRARY
OU_200620
UNIVERSAL
LIBRARY

ಭೂ ಮಿ ಕೆ

ಈ ಗ್ರಂಥಕರ್ತನು ಜೈನಮತದವನು ; ಮಾಘಣಂದಿಪಂಡಿತಮುನೀಶ್ವರನ ಶಿಷ್ಯನು.

" ಈತನು ತನಗೆ ಹಿಂದೆ ಇದ್ದ ಕವಿಗಳಲ್ಲಿ ಕವಿಜಕ್ರವರ್ತಿಯಾದ ಜನ್ನ ಕವಿಯನ್ನು (ಕ್ರಿ. ಶ. 1230) ಸ್ತುತಿಸುವುದರಿಂದ ಆತನಿಗೆ ಈಚೆಯವನೆಂದು ವ್ಯಕ್ತವಾಗುತ್ತದೆ. ಇವನ ಗ್ರಂಥದಿಂದ ಮಲ್ಲಿಕಾರ್ಜುನನು (ಸು. 1245) ಸೂಕ್ತಿ ಸುಧಾರ್ಣವದಲ್ಲಿ ಪದ್ಯಗಳನ್ನು ಉದ್ಧರಿಸಿ ಬರೆದಿರುವುದರಿಂದ ಅವನಿಗಿಂತ ಸ್ವಲ್ಪ ಹಿಂದೆ ಇದ್ದಿರಬೇಕು. ಅದುದರಿಂದ ಈತನು ಸುಮಾರು ಕ್ರಿ. ಶ. 1235 ಇದ್ದಿರ ಬಹುದು " ಎಂದು ಕವಿಚರಿತ್ರೆಕಾರರು ಬರೆಯುತ್ತಾರೆ ಈ ಗ್ರಂಥದ ಆಶ್ವಾಸ ೧-೬೯ ರಲ್ಲಿ ಪೂರ್ವಕವಿಗಳಾದ ಪಂಪ, ಪೊನ್ನ, ನಾಗಚಂದ್ರ, ರನ್ನ, ಬಂಧುವರ್ಮ, ನೇಮಿಚಂದ್ರ, ಜನ್ನ, ಅಗ್ಗಳ-ಇವರ ಕೃತಿಸೌಂದರ್ಯವು ತನ್ನ ಗ್ರಂಥದಲ್ಲಿ ಇರಲೆಂದು ಆಶಿಸುತ್ತಾನೆ ಅದೇ ಆಶ್ವಾಸದ ೫೭-೬೦ ಪದ್ಯಗಳಲ್ಲಿ ತನ್ನ ಯೋಗ್ಯತೆಯನ್ನು ಹೇಳಿಕೊಂಡಿದ್ದಾನೆ. ಈತನು ಇದನ್ನು ಯಾವ ಗ್ರಂಥವನ್ನು ಬರೆದಿದ್ದಾನೋ ಗೊತ್ತಿಲ್ಲ

ಈ ಶಾಂತೀಶ್ವರ ಪುರಾಣವು ಹದಿನಾಗನೆಯ ತೀರ್ಥಕರನಾದ ಶಾಂತಿನಾಥನ ಚರಿತವಾಗಿದೆ ಇದೊಂದು ಕನ್ನಡದಲ್ಲಿ ಪ್ರಸಿದ್ಧವಾದ ಅತ್ಯುತ್ತಮವಾದ ಚಂಪೂ ಪ್ರಬಂಧ. ಇದರಲ್ಲಿ ಹದಿನಾರು ಆಶ್ವಾಸಗಳಿವೆ

" ಈ ಗ್ರಂಥವು ಲಲಿತವಾಗಿದೆ. ಕವಿ ಧಾರಳವಾಗಿ ಬರೆಯುತ್ತಾನೆ. ಪದ ಗಳು ಸಿರ್ಗಳವಾಗಿ ಓಡುತ್ತವೆ. ಕಾವ್ಯದಲ್ಲಿ ವರ್ಣನೀಯಾಂಶಗಳೆಲ್ಲಾ ಚೆನ್ನಾಗಿ ವರ್ಣಿತವಾಗಿವೆ " ಎಂದು ಕವಿಚರಿತ್ರೆಕಾರರು ಈ ಗ್ರಂಥದ ವಿಷಯದಲ್ಲಿ ಅಭಿ ಪ್ರಾಯಪಡುತ್ತಾರೆ.

ಹೊನ್ನನೂ ಕೂಡ ಈ ತೀರ್ಥಕರನ ಚರಿತ್ರೆಯನ್ನೇ ಶಾಂತಿಪುರಾಣವೆಂಬ ಹೆಸ ರಿನಿಂದ ಬರೆದಿರುತ್ತಾನೆ.

ಗ್ರಂಥವು ಬಲುದೊಡ್ಡದಾದುದರಿಂದ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಬೇರೆ ಬೇರೆ ಸಂಪುಟವಾಗಿ ಮಾಡಿ, ಮೊದಲನೆಯ ಸಂಪುಟದಲ್ಲಿ ೫ ಆಶ್ವಾಸಗಳನ್ನು ಮುದ್ರಿಸಿರುತ್ತೇನೆ.

ತಾ|| 18-7-12. ಪ್ರವರ್ತಕ.

ಶಾಂತೀಶ್ವರಪುರಾಣದ

ಆಶ್ವಾಸಗಳ ವಿವರಣ ಮತ್ತು ಪುಟಸಂಖ್ಯೆ.

ಪ್ರಥಮಾಶ್ವಾಸಂ—ಜ್ವಲನಜಟಿಮಹಾರಾಜ ರಾಜ್ಯಲಕ್ಷ್ಮೀ
ವಿಲಾಸವರ್ಣನಂ ... ೧—೨೪

ದ್ವಿತೀಯಾಶ್ವಾಸಂ—ಸ್ವಯಂಪ್ರಭಾದೇವಿ ತ್ರಿಪಿಷ್ಟಯು
ವರಾಜ ವಿವಾಹಕಲ್ಯಾಣ ವರ್ಣನಂ ... ೨೫—೪೪

ತೃತೀಯಾಶ್ವಾಸಂ—ತ್ರಿಪಿಷ್ಟಯುವರಾಜ ವಿವಾಹ ವರ್ಣನಂ,
ಸಿಂಹವಿಜಯ ವರ್ಣನಂ, ಫಲಭದಾಶ್ವಗ್ರೀವ
ವಿಧ್ವಂಸನ ವರ್ಣನಂ ಚಕ್ರಲಬ್ಧಿ ವರ್ಣನಂ ... ೪೫—೬೪

ಚತುರ್ಥಾಶ್ವಾಸಂ—ಅಮಿತತೇಜ ಕುಮಾರೋದಯ
ವರ್ಣನಂ, ಜ್ಯೋತಿಃಪ್ರಭಾದೇವೀಸ್ವಯಂ
ವರ ವರ್ಣನಂ ... ೬೪—೧೦೩

ಪಂಚಮಾಶ್ವಾಸಂ—ಸುತಾರಾಹರಣ ವರ್ಣನಂ ... ೧೦೪—೧೪೩

ಷಷ್ಠಾಶ್ವಾಸಂ—ಅಶನಿಘೋಷ ವಿಜಯ ವರ್ಣನಂ,
ವಿಜಯ ಕೇವಳಿದರ್ಶನೋತ್ಸಾರಿತ ವಿಷಾದ
ತಿಮಿರ ವರ್ಣನಂ ... ೧೪೯—೧೯೬

ಸಪ್ತಮಾಶ್ವಾಸಂ—ಅಪರಾಜಿತಾನಂತವೀರ್ಯಪ್ರಾಜ್ಯರಾಜ್ಯ
ಲಕ್ಷ್ಮೀವಿಲಾಸ ವರ್ಣನಂ ... ೧೯೭—೨೦೫

ಅಷ್ಟಮಾಶ್ವಾಸಂ—ದಮಿತಾರಿವಿಜಯ ವರ್ಣನಂ ... ೨೦೬—೨೫೫

ನವಮಾಶ್ವಾಸಂ—ಅನೇಕಾಂತಾರ್ಥ ಸಮರ್ಥನವರ್ಣನಂ ೨೫೬—೨೮೯

ದಶಮಾಶ್ವಾಸಂ—ವಜ್ರಾಯುಧ ಮಹಾರಾಜರಾಜ್ಯವರ್ಣನಂ ೨೮೯—೩೨೯

ಏಕಾದಶಾಶ್ವಾಸಂ—ವಜ್ರಾಯುಧನರೇಂದ್ರಚಂದ್ರನ
ಚಂದ್ರಿಕಾ ವಿಹರವರ್ಣನಂ ... ೩೩೧—೩೫೬

ದ್ವಾದಶಾಶ್ವಾಸಂ—ವಜ್ರಾಯುಧಮಹಾರಾಜ ದಿಗ್ವಿಜಯ
ವರ್ಣನಂ, ತದ್ವೈರಾಗ್ಯವರ್ಣನಂ, ಸೌಮನ
ಕಲ್ಪಾವಹಮಿಂದ್ರ ವರ್ಣನಂ, ಮೇಘರಥಕುಮಾರ
ಬೋಧೆಕಾರಣ ವರ್ಣನಂ ... ೫೫೭—೫೮೫

ತ್ರಯೋದಶಾಶ್ವಾಸಂ—ಮೇಘರಥಮಹಾರಾಜಚರ
ಸರ್ವಾರ್ಥಸಿದ್ಧೀಶ್ವರಾವತರಣ ವರ್ಣನಂ ... ೫೮೫—೬೧೫

ಚತುರ್ದಶಾಶ್ವಾಸಂ—ಗರ್ಭಾವತರಣ ಜನ್ಮಾಭಿಷೇಕ
ವರ್ಣನಂ ... ೬೧೬—೬೩೬

ಪಂಚದಶಾಶ್ವಾಸಂ—ಶಾಂತೀಶ್ವರ ಚಕ್ರವರ್ತಿಯ ಚಕ್ರ
ವರ್ತಿವಿಭವ ವರ್ಣನಂ, ದಿಗ್ವಿಜಯ ವರ್ಣನಂ,
ವೈರಾಗ್ಯವರ್ಣನಂ ... ೬೩೬—೬೯೦

ಷೋಡಶಾಶ್ವಾಸಂ—ಪರಿನಿಷ್ಕ್ರಮಣಕಲ್ಯಾಣ ವರ್ಣನಂ,
ಕೇವಳಜ್ಞಾನೋದಯ ವರ್ಣನಂ, ಸಮವಸರಣ
ವಿಭವ ವರ್ಣನಂ, ನಿರ್ವಾಣ ಕಲ್ಯಾಣವರ್ಣನಂ ೬೯೦—೭೩೭

॥ ಶ್ರೀರಸ್ತು ॥

ಶಾಂತೀಶ್ವರಪುರಾಣಂ

ಶ್ರೀಮಚ್ಚ ಕ್ರಾಳಚಕೊ ೇತ್ಪವಕರನಮರೀವ್ಯಂದನೇತಾ್ರವಿಂದ ।
ಸೊ ೇವಾನಂದಪ್ರದಂ ಸಂಸೃತಿತಿವಿರಹರಂ ತ್ಯಕ್ತದೊೇಷಂ ವಿಶುದ್ಧೊೇ ॥
ದ್ಧಾಮಂ ತಾನಪ್ಪನೂನಃಮಲರುಚಿ ಬಾಲಾತಪೊೇದ್ಭಾಸಿ ನಿಚ್ಛಂ ।
ಪ್ರೇಮಂಬೆತ್ತೆ ಮ್ಮ ಚೇತೊೇಂಬರಮನೆ ಬೆಳಗುತ್ತಿರ್ಕೆಶಾಂತೀಶ್ವರಾರ್ಕಂ॥ ೧

ಪರಿವಿಷ್ಟಸ್ಪಷ್ಟಕರ್ಮಾಷ್ಟಕಮಲದಳದಿಂ ಕೆಳ್ಪುಗಳ್ ಪೊೇಲ್ದುವಾದಂ !
ಚರಮಾಂಗವ್ಯಕ್ತಿಯಿಂದೊಯ್ಯನೆ ತನುತೆಗೆ ಪಕ್ಕಾಗಿ ಜೀವಸ್ವರೂಪಂ ॥
ಹರಿಸಂಬೆತೊ ಪ್ಪೆ ಲೊೇಕಾಗ್ರದೊಳಮೃತರಮಾಸಂಗಸಂಭೂತಸೌಖ್ಯಾ ॥
ಕರಮುಂ ತಾಳ್ದರ್ದವರ್ಕಳ್ ಕುಡುಗೆ ನಮುಗೆ ನಿಶ್ರೇಯಸಶ್ರೀಯು ಸೈಪಂ ।

ಪಾ್ರಚುರ್ಯಾತಿಶಯಂ ಪೊದಲ್ದಿಮಳಷಟ್ಪ್ರಂಶದ್ಗುಣಶ್ರೇಣಿ ಪಂ ।
ಚಾಚಾರಂ ಸುತಪಃಪರೀಷಹಜಯಂ ಶಿಷ್ಯಾದಿಭವ್ಯೌಘಶಿ ॥
ಕ್ಷಾಚಾತುರ್ಯಮುದಗ್ರವಾದನುಪನುರ್ ಸಪ್ತರ್ದ್ಧಿಸಂಪನ್ನರ ।
ಪ್ಪಾಚಾರ್ಯರ್ ನಮಗೀಗೆ ನಿರ್ಮಳತೆವೆತಾ್ತ ಚಾರಸಂಪತ್ತಿಯಂ ॥ ೩

ವಿಳಸನ್ನಿರ್ಮಳಧರ್ಮಕರ್ಮವಿಯ ತತ್ವಾತತ್ವಭೇದಂಗಳಂ ।
ತಿಳಪುತ್ತೆಯ್ದಿ ವಿನೇಯಸಂತತಿಗನೇಕಾಂತಪ್ರತಿಜ್ಞಾಯತಂ ॥
ಗಳನಾತ್ಮೀಯಜನಕ್ಕೆ ಪೇೞ್ದಿ ನಯನಿಕ್ಷೇಪಪ್ರಮಾಣೊೇಕ್ತಿಸಂ ।
ಕುಳಶೌಚಾಯತರೊಲ್ದು ಮಾೞ್ಕಿಮಗುಪಾಧ್ಯಾಯರ್‌ಸುಖೊೇಪಾಯಮುಂ॥

ಅಗಣಿತರಪ್ರಮತ್ತಗುಣಭೂಷಣಭಾಸುರರೊಪ್ಪುವೆತ್ತ ಶಾಂ ।
ತಿಗೆ ನೆಲೆಯಾದ ನಿರ್ಮಳಮನಸ್ವಿಗಳೊಪ್ಪುವಗಾಧಬೊೇಧದೃ ॥
ಷ್ಟಿಗಳನವದ್ಯಹೃದ್ಯಚರಿತರ್ ಜಿತಮನ್ಮಥಶೌರ್ಯರಪ್ಪ ಸಾ ।
ಧುಗಳ ಪದಂಗಳೀಗೆಮಗೆ ಸಾಧುಪದೊೇನ್ನತಿಯಂ ನಿರಂತರಂ ॥ ೪

ಮಳರಹಿತಪಂಚಗುರುಗಳ ।
ವಿಳಸಿತಮೆನಿಸಿರ್ದ ಪಂಚಪದಸಂಚಯನಿ ॥
ರ್ಮಳನ ಮಣಿದೀಪಕಳಿಕಾ ।
ವಳ ಬೆಳಗುತ್ತಿರ್ಕೆ ಮನ್ಮನೋಮಂದಿರಮುಂ ॥ ೬

ಅತಿಶಯಕೇವಳಿಗಳ ಸ ।
ನ್ನುತತರಶುದ್ಧಾನುಬದ್ಧಕೇವಳಿಗಳ ಸಂ ॥
ಶ್ರುತಕೇವಳಿಗಳ ಮಹಿಮೋ ।
ನ್ನತಿಯುಂ ವರ್ಣಿಸುವ ಸುಮತಿ ಸಮನಿಸುಗೆವೊಳ್ ॥ ೭

ನಿರುಪಮನಿಜವಾಙ್ನಿರ್ಝರ ।
ಸರಿತ್ಪ್ರವಾಹದೊಳ್ ಸಕಲಲೋಕಾಘನಿಷ ॥
ದ್ವರಮುಂ[1] ಕ್ಷಾಲಿಪ ನಿರ್ಮಲ ।
ಚರಿತಂ ಗಣಧರರ ಚಾರುಚರಣಂ ಶರಣಂ ॥ ೮

ಎನಗಾವಾವ ಭವಂಗಳೊಳ್ ಬಿಡದೆ ನೆರ್ಮಾಗಿರ್ಕೆ ಕಾರುಣ್ಯವೊ ।
ಪ್ಪುವ ಮೂಲಂ ಸುಚರಿತ್ರಮುನ್ನತದೃಢಸ್ಕಂಧಂ ದಯಾನೀಕಮೆಂ ॥
ಬುವ ನೂತೊನೆದಗ್ರಶಾಖಂ ಸುಗತಿಸುಖಫಲವ್ರಾತದಿಂ ಭವ್ಯಸೇವ್ಯಂ ।
ಭವಸಂತಾಪನಿವಾರಿಯಪ್ಪ ಜಿನಧರ್ಮಾನಲ್ಪಕಲ್ಪಾಂಘ್ರಿಪಂ ॥ ೯

ಕ್ಷ್ಣರುಗ್ಮಳಾಮಯಾಬ್ದಿಕ್ಕೆಣೆಯೆನಿಸೆ ಚಳತ್ಕಾಂತಿಯುಕ್ತಾಂತರಾಂಗೋ ।
ಲ್ಬಣೆ ನಕಾರೂಢೆ ಖಡ್ಗಪ್ರಕಟಫಲಕದಂಗಾಳಪಾಶಾವಳೀತೋ ॥
ರಣದೋರ್ದಂಡಪ್ರಜೋದ್ಭಾಸುರೆ ಸಲೆ ಮುದದಿಂದಾಮುಹಾನಮಾನಸೀಯ ।
ಕ್ಷ್ಣಿಯೆಂದುಂ ಮಾಟ್ಕೆ ಶಾಂತೀಶ್ವರಚರಿತಕೃತಿಶ್ರೀಗೆ ಸೌಭಾಗ್ಯದೊಳ್ಪಂ ॥

ಹರಿನೀಳಪ್ರಭೆಯಂ ಪಟಿಂಚಲೆವ ಚಂಚತ್ಕಾಂತಿ ಸಂಪತ್ತಿ ಸೌಂ ।
ದರಗಾತ್ರಂ ವಿಲಸತ್ಪದಾಂಬುಜವಿಭಾಸ್ವದ್ವಜ್ರಚಕ್ರಾಯುಧೋ ॥
ದ್ಧುರದೋರ್ದಂಡಳಮಂಡಿತಂ ಗರುಡಯಕ್ಷಂ ವಿಕ್ರಮಾತರ್ಕ್ಯತಾ ।
ಕ್ಷ್ಯಾರಥಂ ಮತ್ಕೃಗೀಗವಿಘ್ನವಿಭವಪ್ರೋದ್ಧಾಮಮಂ ಪ್ರೇಮದಿಂ॥ ೧೧

ವಿದಿತಾಶೇಷಪದಾರ್ಥತತ್ವರುಚಿರಂ ಕಾಲತ್ರಯಾವ್ಯಕ್ತವ ।
ದ್ಗದತಾಲ್ವೋಷ್ಠಪುಟಪ್ರವರ್ತನಪರಂ ನಿಶ್ಶೇಷಭಾಷಾತ್ಮಕಂ ॥

ಟಿಪ್ಪಣಿ—1. ನಿಷದಧ್ವರ = ಕೆಸರು.

ಮೃದುವಸಾಧುರ್ಯಗಭೀರಯುಕ್ತಿಗಳನತ್ಯಾಸನ್ನದೂರಸ್ಫುಟ ।
ಪ್ರದಮುಪ್ಪಜಿನದಿವ್ಯಭಾಷೆ ನಮುಗೀಗುದ್ಯದ್ವಚೋವೃದ್ಧಿಯಂ ॥ ೧೦

ಸುಕುಮಾರಂ ಸುಕುಮಾರಕೋಭೆ ವಿಲಸತ್ಕಾಂತಿ ಪ್ಪುರತ್ಕಾಂತಿ ರೂ ।
ಪಕವಾಶ್ಚರ್ಯತರಸ್ವರೂಪಕಮನಂ ಶಬ್ದಾರ್ಥಜಾಳಂ ಕೃತಿ ॥
ಪ್ರಕರಂ ಭೂಸ್ವದಲಂಕೃತಿಪ್ರಕರಮಾಗೊಪ್ಪಿರ್ಪ ವಾಕ್ಪ್ರೀತಿ ಮಾ ।
ಡಿ ಕರಂ ಪ್ರೇಮದೊಳರ್ಕೆ ಕೋಮಳಮದೀಯಾಸ್ಯಾಂಬುಜಾವಾಸದೊಳ್‌॥

ಪರಮಶ್ರೀಜಿನಧರ್ಮದಿವ್ಯವನಿತಾನೇತ್ರತ್ರಯಂ ತತ್ವಲೋ ।
ಕರಮಾಧಾರಮರುತ್ತ್ರಯಂ ಜಿನಮತಪ್ರೋತ್ಫುಲ್ಲವಲ್ಲೀವಿಭಾ ॥
ಸುರಭೃಂಗತ್ರಯಮುಜ್ವಳಾಕ್ಷರವಧೂಟೀಕಂತರೇಖಾತ್ರಯಾ ।
ವರರತ್ನತ್ರಯಮಿರ್ಕೆ ನಿರ್ಮಳಿಸುತುಂ ಮತ್ಸ್ವಾಂತದೊಳ್ ಸಂತತಂ ॥ ೧೩

ಇಳೆ ಪೇೞ್ ಮಾತಂಗಕುಳೋ ।
ನ್ನಿಳಯಂ ಬೞಿಕೆಯ್ದಿವಿಟ್ಟು ಚರಿಯಿಪ ಮುಹಿವೂ ॥
ಕುಳದಿಂದೆಸೆದಂ ಚತುರಂ ।
ಗುಳಚಾರಣರೆನಿಸಿ ಕುಂಡಕುಂದಾಚಾರ್ಯರ್‌ ॥ ೧೪

ಪೂತತೆವಡಿಸುಗೆ ನಮ್ಮಯ ।
ಚೇತಮನುಜ್ಜ್ವಳಿಸಿ ತೊಳೆದು ಚರಣನಖಪ್ರ ॥
ದ್ಯೋತಜಲದಿಂದಲಘುಹೃ ।
ದ್ಭೂತಬಲಾಚಾರ್ಯಪುಷ್ಪದಂತಾಚಾರ್ಯರ್‌ ॥ ೧೫

ಅನವರತಮಿರ್ಕೆ ಮದ್ಭಾ ।
ವನೆಯೊಳ್ ಪಡಿಯಿಲ್ಲದಮಳಜಿನಮತವ.ಣಿಕೇ ॥
ತನದೆಸೆವ ಪಡಿಗಳಿಸಿದ ।
ಜಿನಸೇನಾಚಾರ್ಯವೀರಸೇನಾಚಾರ್ಯರ್‌ ॥ ೧೬

ವಿಳಸದನೇಕಾಂತಮತಾ ।
ವಳಕುಮುದವಲರ್ದುದಿತರಮತೆವಾದಿಮನೋ ॥
ನಳನಂ ಮುಗಿದುದು ಸುಕಳೋ ।
ಜ್ಜ್ವಳ[ಕರನ] ಳಂಕಚಂದ್ರವಾಕ್ಕಂದ್ರಿಕೆಯಿಂ ॥ ೧೭

ಕಾರ್ಯಮಿದರ್ಹದ್ಭ ಲ್ಯಾ ।
ಚಾರ್ಯಜಟಾಸಿಂಹಣಂದಿನಾವೋದ್ದಾವಾ ॥
ಚಾರ್ಯವರ ಗೃಧ್ರಪಿಂಛಾ ।
ಚಾರ್ಯರ ಚರಣಾರವಿಂದವೃಂದಸ್ತೋತ್ರಂ ॥ ೧೯

ಭವಹರಸಮಂತಭದ್ರರ ।
ಕವಿಸರಮೇಷ್ಠಿಗಳ ಪೂಜ್ಯವಾದರ ಕಾರು ॥
ಣ್ಯವರೇಣ್ಯದುಗ್ಧವಾರ್ಧಿಯೊ ।
ಳವಿರತಮಿರ್ಕೆಮ್ಮ ಚಿತ್ತಮತ್ತಮರಾಳಂ ॥ ೨೦

ಸ್ಮರನಂಸುಧ್ಯಾನದಿಂಕ್ರೋಧಮನುಪಶಮದಿಂಲೋಭಮಂಸಂಶ್ರುತಿಶ್ರೀ ।
ಕರರಾಗತ್ಯಾಗದಿಂ ಮೋಹಮನುರುತಪದಿಂ ಗರ್ವಮುಂ ಜ್ಞಾನದಿಂ ಮ ॥
ತ್ಸರಮುಂ ವಾತ್ಸಲ್ಯದಿಂ ಗೆಲ್ದಿಸೆದನವುಳಬೋಧಾಮೃತಕ್ಷಾಲಿತಾಂತಃ ।
ಕರಣಂ ಶ್ರೀಕುಂಡಕುಂದಾನ್ವಯನಿಧಿಕುಲಚಂದ್ರವ್ರತೀಂದ್ರಂ ವಿತಂದ್ರಂ ॥

ಭಾವಭವಂಗೆ ಭಂಗಮನೆ ಸಂಗಳಿಪುಗ್ರತಪಃಪ್ರಭಾವಮುಂ ।
ಭಾವಿಸೊಡಪ್ರತರ್ಕ್ಯಮದು ಮತ್ತಮಿದೊಂದು ವಿಜೆತ್ರಮುಲ್ಲಿ ಧಾ ॥
ತ್ರೀವರವಂದಿತಂ ಕನಕನಂದಿಮುನೀಂದ್ರನ ಹೃದ್ಯಮಪ್ಪ ವಿ ।
ದ್ಯಾವಳಿಯಂ ಪವಣ್ಗೊಳಿಸೊಡಂಬುಜಸೂನುಗಳುಂಬವಾವಗಂ ॥ ೨೨

ಚತುರಾಸ್ಯಂ ಸತತಂ ರಜೋಮಯನಪತ್ಯಂ [ತಾಂ] ಕುವಾರಂ ಬೃಹ।
ಸ್ಪತಿದೂರೀಕೃತಶೌರ್ಯವೇದಿ ದನುಜಾವಾತ್ಯಂ ಸ್ವಕಾರ್ಯಕ್ಷಯ ॥
ಸ್ಥಿತಿ [ವಿಜ್ಞಾನ]ವಿಹೀನನೆಂದಿಬಿಕೆಗೆಯ್ವಂ ತನ್ನ ತಕರ್ಕೋಕ್ತಿಜೆ ।
ತ್ರತೆಯಿಂದಂ ಶ್ರುತಕೀರ್ತಿಸನ್ಮುನಿವರಂ ತ್ರೈವಿದ್ಯಚಕ್ರೇಶ್ವರಂ ॥ ೨೩

ಶ್ರುತದೆಸಕಂ ಜಿನಾಗಮಕಲಾನಿಪುಣಂ ಕೃಪೆ ಸರ್ವಜೀವಸಂ ।
ತತಿಹಿತಕಾರಿ ವೀರತಪಮಂಗಜದೋರ್ವಳಭಂಜನಂ ಯಶೋ ॥
ದ್ಯುತಿ ದಶದಿಕ್ಸವಾಜಧವಳೀಕೃತವಾಯ್ತೆನುತುಂ ಬುಧವ್ರಜಂ ।
ಸ್ತುತಿಯಿಪುದಾವಗಂ ವಿನಯದಿಂ ನಯಕೀರ್ತಿ ಮುಮಕ್ಷುಮುಖ್ಯಗಂ ॥

ಖಳಕುಸುಮಾಸ್ತ್ರಗರ್ವತಮುಮಟ್ಟಿ ದಿಗಂಬರವೃತ್ತಿಯಂ ಸಮು ।
ಜ್ವಳಿಸುವ ವಿಭ್ರಮಂ ವಿಬುಧತುಷ್ಟಿಯನೀವ ಸಮಸ್ತಸತ್ಕಳಾ ॥

ವಳಯ ವಿಳಾಸವಗ್ಗಲಿಸೆ ತನ್ನಯ ನಾನುವನೋರಥಾರ್ಥವಾ ।
ಗಿಳಿಗೆಸೆದಿರ್ದನಿಂದಭಯಚಂದ್ರಮುನೀಶ್ವರನುಕ್ತಿ ಭಾಸ್ಕರಂ ॥ ೬೫

ವದನಂ ಶ್ವೇತಾಂಶುಬಿಂಬಂ ಶ್ರುತಸುಕೃತಕಳಾಳಂಕೃತಂ ಸ್ವಚ್ಛ ಶೋಭಾ।
ಹೃದಯಂ ಜೋಧಾವಲಂಬಂ ವಚನಚಯವನೂನಾಮೃತಸ್ಯಂದಿ ನೇತ್ರಂ ॥
ಸದಯೂದಾರ್ಯಲೋಕನಂ ಪಾವನನಿಧಿಚರಿತಂ ಮಂಗಳಾಂಗಂ ತಪಶ್ರೀ ।
ಸದನಂ ತಾನಾಗೆ ಸೈದ್ಧಾಂತಿಕವಿಭುವೆಸೆದಂ ವೀರಣಂದಿವ್ರತೀಂದ್ರಂ ॥ ೬೬

ಪರಮಸ್ಯಾದ್ವಾದವಿದ್ಯಾರಮೆಗಮಳಮುಹದ್ವಜ್ರಭೂಪಾಸವೂಜಂ ।
ಪರವಾದಿವಾರ್ತಚಕೇತೋಮದಕುಧರಮು ದ್ವಜ್ರನಿಘೂರ್ತಮಾಯ್ತು ॥
ಚರಿ ತನ್ನುಕ್ಪನ್ನವಾಕ್‌ಕ್ಷೇತ್ರತೆಯಿನೆ ಪೆಸವೆತ್ತಂ ಮನೋಜಾರವಿಂದ ।
ದ್ವಿರದಂ ಸಿದ್ಧಾಂತಚಕ್ರೇಶ್ವರನನುಳಯಶಂ ವೂಹಿಸುಂದಿವ್ರತೀಂದ್ರಂ॥ ೬೭

ಜಿನವೂಗಾರ್ಣಂಬುಧಿನರ್ಧನಂ ಚರಿತಪವನ್ಮತ್ತ ನ್ಯವಾದೀಂದ್ರನೂ ।
ತನಚೇತಶ್ಚ ಯವರ್ಧನಂ ನಿಜಸವೀನೋಕ್ತಿವ್ರತಂ ಸರ್ವಜೀ ॥
ವನಿಕಾಯೋತ್ಸವವರ್ಧನಂ ಕೃಪೆ ರತೀಕೋದ್ಯನ್ನನೋಭಂಗವ ।
ರ್ಧನವಾತ್ಮೀಯತಪಃಪ್ರಭಾವನೆಯಿಕುಂ ಶ್ರೀವರ್ಧಮಾನೇಂದ್ರನಾ॥ ೬೮

ಕಱುವಿಂ ಕಾರುಣ್ಯಪೀಯೂಷವನೆನೆವನಿಜಾಲೋಕದಿಂತವೊಳ್ಕೊಂದಿ।
ರ್ಪಱಿವಿಂ ಶಿಷ್ಯರ್ಗೆ ಶಿಕ್ಷಂ ಶ್ರುತದ ನೆನದಿಸೀವಂ ದಯಾಪೊರ್ದಕ್ತಿಯಿಂದೆ ॥
ಟಿಱಿಪಂ ದುಬೋರ್ಧರಂ ವಾದಿಸುವಿತರರನೇಕೋಕ್ತಿಯಿಂ ಗೆಲ್ವ ಪಾಂಗಂ।
ಬೆಱಿತೋಱುತ್ತುಂಪ್ರತಿಜ್ಞಾಜಯನನೆನೆಮಱಿದಂದೇವಚಂದ್ರವ್ರತೀಂದ್ರಂ॥

ಕಾರುಣ್ಯಂ ಕ್ಷೀರಪೂರಂ ನಿಗಱುದ್ಭಯನಯಂ ಚಾರುತೀರದ್ವಯಂ ಗಂ।
ಭೀರಂ ಬೋಧೋದಯಂ ಸದ್ಗುಣಸಮಿತಿವಣಶ್ರೀಣಿಕೀರ್ತಿಪ್ರಭಾವಿ ॥
ಸ್ತ್ರಂ ಡಿಂಡೀರಪಿಂಡಾವಳಿಯಿನೆ ಮುನಿಪಾಕಾರಪೀಯೂಷಪಾರಾ ।
ವಾರಂ ತ್ರೈವಿದ್ಯಚಕ್ರೇಶ್ವರನಿಳಿಗೆಸೆದಂ ರಾಮನಂದಿವ್ರತೀಂದ್ರಂ ॥ ೭೦

ಸ್ವಾಂತಂ ಶಾಂತರಸಾಸ್ಪದಂ ವರಚರಿತ್ರಂ ತತ್ವಸೂತ್ರಂ ತಪಂ ।
ಕಂತುಧ್ವಾಂತಹರಂ ನಿಜಪ್ರತಿಭೆ ವೈಚಿತ್ರ್ಯಾರ್ಥಶಾಸ್ತ್ರಾವಗಾ ॥
ಹಂ ತಾನಪ್ಪುದೆನಿಪ್ಪುದೊಂದೆಸಕದಿಂ ರಾರಾಜಿಪಂ ಸಿದ್ಧರಾ ।
ದ್ಧಾಂತಶ್ರೀಪತಿ ನೇಮಿಚಂದ್ರಮುನಿಪಂ ಸ್ಯಾದ್ವಾದವಿದ್ಯಾಧಿಪಂ ॥೭೧॥

ಶ್ರುತಿಲಕ್ಷ್ಮೀಲಲಿತಾಸ್ಪದಂ ವದನಮುದ್ಯಚ್ಛಾಂತಲಕ್ಷ್ಮೀಸಮಾ।
ಯತಸದ್ಮಂ ಹೃದಯಂ ತಪೋವಿಪುಲಲಕ್ಷ್ಮೀಮಂದಿರಂ ತನ್ನ ಸ ॥
ನ್ನುತಗಾತ್ರಂ ಗಡವೆಂತು ಪೆಣ್ಗಿಱಗನ್ನೆ ಭಟ್ಟಾರಕಾಗ್ರೇಸರ ।
ಶ್ರುತಕೀರ್ತಿವ್ರತಿನಾಥಸಗ್ಗದ ಚರಿತ್ರಂ ಜೆತ್ರವಿಾಧಾತ್ರಿಯೊಳ್ ॥ ೩೦

ವಿಮಳಶ್ರೀಜಿನರಾಜರಾಜಿತಚರಿತಾ ನೀಕಮಂ ವರ್ಣಿಸು ।
ತ್ತು ಮಜಸ್ರಂ ಸ್ವಪರಪ್ರಕಾಶಕೃತಮಪ್ಪುದ್ಯನ್ಮತಿಶ್ರೀಯ ವಿ ॥
ಭ್ರಮದಿಂ ರೂಢಿಯನಾಂತ ನಿರ್ಮಳಯಶಶ್ರೀಮಂಡಿತರ್ ಪಂಡಿತೋ ।
ತ್ತಮರೊಲ್ದೀಗೆಮಗಪ್ರತರ್ಕ್ಯವಿಲಸತ್ಪಾಂಡಿತ್ಯಮಂ ಸ್ತುತ್ಯಮಂ ॥ ೩೧

ವಿನಯೇಂದುವ್ರತಿನಾಥನೊಳ್ ಪುದಿದ ಸವ್ಯಜ್ಞಾನಚಾರಿತ್ರದ ।
ರ್ಶನಲಾಸ್ಯನ್ಮಹಿವೋನ್ನತಿಕ್ಕೆಯದಸಿನ್ನೀವೇೞ್ದಪೆಂ ಹಸ್ತಮೂ ॥
ರ್ಶನಣಂ ತಾಂ ಬಲವಂದುದುನ್ಮದಮನಕ್ಕಾಸಿಂಹಣೋರ್ವೀಶ್ವರಂ ।
ವಿನಮನ್ಮಸ್ತಕನಾದನುರ್ವಿ ಪೊಗೞಲ್ ಪಾಂಡಿತ್ಯಚಕ್ರೇಶ್ವರಂ ॥ ೩೪

ವಿಪುಳಾರ್ಥನ್ಮತವೃದ್ಧಿವಾಕ್ತತಿನೋಭೂಭೂತಭೂತಾಂಕುಶಂ ।
ತಪದನ್ಯನ್ಮದವಾದಿಭೇದನಕರಂ ತರ್ಕಪ್ರಗಲ್ಭೋಕ್ತಿ ಪಾ ॥
ದಪಯೋಜಾತಸಭವ್ಯಕಾಮಿತಕೃತಂ ವಾಹಾತ್ಮ್ಯಮೆಂದುರ್ವಿ ವ ।
ರ್ಷಿಪುದಿಂತೊರ್ವನೆ ಬಾಲಚಂದ್ರಮುನಿಪಂ ತ್ರೈವಿದ್ಯಚಕ್ರೇಶ್ವರಂ॥ ೩೫

ಶ್ರುತದಿಂ ಸಮ್ಯಕ್ತ್ವತತ್ವಾರ್ಥಮನಱಿದನಾತ್ಮೀಯಶಿಷ್ಯರ್ಗೆ ಭಾಗ್ಯಾ।
ಮೃತಮಂ ಹಸ್ತಾಬ್ಜದಿಂ ಮಸ್ತಕದೊಳೆ ಕಱಿದಂ ಕೂಡೆಭವ್ಯರ್ಗೆ ತಮ್ಮ್ ॥
ಗ್ರತಪಸ್ತಾಮ್ರಾಂಶುವಿಂದಂಗಜಲಬಹಳಧ್ವಾಂತಮಂ ತೂಳ್ದಿದಂ ಭೂ ।
ನುತದಕ್ಷೀಣಕ್ಷ್ವಮಾತ್ಮಂ ಗಣಧರಮಹಿಮಂ ಪದ್ಮಸೇನವ್ರತೀಂದ್ರಂ॥ ೩೬

ಪ್ರತಿವಾದಿಭಾಳಾಕ್ಷರಪ್ಪಗ್ಗದ ಪರಸಮಯಾತರ್ಕ್ಯತರ್ಕಜ್ಞರಂ ಚಿ ।
ತ್ರತರೋಹೈಕೋಕ್ತಿಯಿಂ ಕೀೞ್ಪಡಿಸಿ ಜಯಯಶಶ್ಚಿತ್ತನಾತ್ಮೀಯನಾಮೋ॥
ನ್ನತಿಯಿಂ ಸ್ಯಾದ್ವಾದವಿದ್ಯಾಂಬುಧಿವಿಭು ಜಯಕೀರ್ತಿವ್ರತೀಂದ್ರಂ ಜಿತಶ್ರೀ।
ಸುತನುರ್ವೀಸೇವ್ಯಭಟ್ಟಾರಕವಿಭುವರದೇಶೀಗಣಶ್ರೀವಿಭೂಷಂ ॥ ೩೭

ಕುಮತಧ್ವಾಂತವಡಂಗೆ ತನ್ನಯ ನಯೋಕ್ತಿವ್ರಾತಶುಭ್ರಾಂಶುವಿ ।
ಭ್ರಮದಿಂ ಸಾರ ಚತುಷ್ಟಯಾಗಮಪರಿಜ್ಞಾನೋತ್ತಮಂ ತಾನೆನಿ ॥

ಪ್ಪ ಮಹಾತ್ಮಂ ಕುಮುದೇಂದುಯೋಗಿವರಶಿಷ್ಯಾಗ್ರೇಸರಂವಾಘುಣಂ।
ದಿಮುನೀಂದ್ರಂ ಪೆಸರ್ವೆತ್ತ*ನಿಂತು ಧರೆಯೊಳ್ ಸಿದ್ಧಾಂತಚಕ್ರೇಶ್ವರಂ॥ ೩೪

ಅಕಳಂಕೈಕತ್ವಭಾವಾತ್ಮಕನುಭಯನಯಜ್ಞಂ ತ್ರಿಗುಪ್ತ್ಯರ್ಥಿಚಾತು।
ರ್ಥಕಪಾಯಧ್ವಂಸಿ ಪಂಚವ್ರತನಿಯತಷಡಾವಶ್ಯಕಂ ಸಪ್ತತತ್ವ॥
ಪ್ರಕರಜ್ಞಂ ದುರ್ವಾದಾಷ್ಟಾಪಹನಧಿಕನವಬ್ರಹ್ಮಚರ್ಯಂ ದಶೋದ್ಯ।
ತ್ಸ್ನಕೃತಂ ಸೂರಸ್ಥನಾಮೋದಯಗಣಿ ಜಯಕೀರ್ತಿವ್ರತೀಂದ್ರಂವಿತಂದ್ರಂ॥

ವಿತತಮನೂನಜೈನಸಮಯಾಂಜಿತಸಾರಚತುಷ್ಟಯಾಗಮ।
ಪ್ರತತಿ ಸಮುಂತು ತನ್ನ ರಸನಾವಳಿಯೊಳ್ ನೆಲೆ ನಾಂಟಿ ಪಲ್ಲವ॥
ಸ್ಮಿತಸುಮನಸ್ಫುಟಂ ಪ್ರದಿದು ರಾಜಿಪನೋರ್ವನೆ ಬಾಳಚಂದ್ರಪಂ।
ಡಿತಯತಿಪೋತ್ತಮಂ ಗಣಧರಪ್ರತಿಮಂ ಪ್ರತಿಭಾವಿಭಾಸುರಂ॥ ೪೦

ಕ್ಷಮೆಯಿಂ ದ್ವೀಪಿಪ್ರತಾಪೋತ್ಕಟಮನುಪಶಮಂಗೆಯ್ದು ಸಮ್ಯಕ್ತ್ವಮಾಹಾ
ತ್ಮ್ಯಮನತ್ಯಾಶ್ಚರ್ಯಮಾಗಲ್ ಮೆಱೆದವನಿಯೊಳಾರೂಢಿವೆತ್ತಿರ್ದನರ್ಹ॥
ತ್ಸ್ನಮಯಾದಭ್ರಾಭ್ರಚಂದ್ರಂನುತಚತುರ ನಿಯೋಗಾಬ್ಧಿಚಂದ್ರಂಪ್ರಭಾಚಂ।
ದ್ರಮುನೀಂದ್ರಂಚಾರುದೇಶೀಗಣಕುವಲಯಚಂದ್ರಂವಮನೋಜಾಬ್ಜಚಂದ್ರಂ

ಭುವನಾನೀಕಮನೇಕಬಾಣಮುಖದಿಂ ಗೆಲ್ದು ನ್ಮದೋಚ್ಚೆತ್ತಕಂ।
ತುವನೆಟ್ಟಿದನಿಂತುಮುಲ್ಲದೆಯುಮುಂ ಕೊ೦ಧಾದಿವಿದ್ವಿಷ್ಟವ॥
ರ್ಗವನಾಶಾಂತಿಯಿನಿಂತಿದಚ್ಚರಿ ಕರಂ ಕಾಣೂರ್ಗಣಾಂಭೋಧಿಭಾ।
ನುವೆನಿಪ್ಪಗ್ಗದ ಭಾಸುಕೀರ್ತಿಮುಲಧಾರಿಖ್ಯಾತಯೋಗೀಶ್ವರಂ॥ ೪೨

ಖದ್ಯೋತಶ್ರೇಣಿ ಮಧ್ಯಂದಿನದ ದಿನಪನೊಳ್ ತೋಱಲೇನಾಪ್ತುದೇತ।
ನ್ನುದ್ಯತ್ಪುಚ್ಚ ಪ್ರಭಾವಿಭ್ರಮಮನಿದಿಗೊಳಿನ್ನಾರೊ ಷಟ್ತರ್ಕವಿದ್ಯಾ॥
ಹೃದ್ಯರ್ ತಾವೆಂಬ ವಾದೀಶ್ವರರದು ಕತೆಯಂತಿರ್ಕೆ ತರ್ಕಜ್ಞನೊರ್ವಂ।
ವೊದ್ಯದ್ವಾದೀಭವಜಾಂಕುಶನಮಲಯಶಂ ಹೇಮನಂದಿವ್ರತೀಂದ್ರಂ॥೪೩

ಭುವನಖ್ಯಾತಯಜಾತರೂಪದರದಿಂದುದ್ಯತ್ಕ್ಷಮಾವೃತ್ತಿಯಿಂ।
ದವನೀಭೃತ್ಕುಲಸೇವ್ಯದಿಂ ವಿಬುಧಸಂತಾನಪ್ರಯುಕ್ತಪ್ರಶಂ॥
ಸವಿಳಾಸೋನ್ನತಿಯಿಂ ಸುಮೇರುವೆನಿಸಿರ್ದಂ ಚಿತ್ರಮೆಂದುಂ ನಮೋ।
ರುವೆನಿಪ್ಪಂ ಶ್ರುತಕೀರ್ತಿಸನ್ಮುನಿವರಂ ದೇಶೀಗಣಾಗ್ರೇಸರಂ॥ ೪೪

ಶತಮುಖನಂದದಿಂ ವಿಬುಧವಂದಿತನಾಗಿಯುಮೊವಗಂ ಕವಿ ।
ಸ್ತುತಿಯುತನರ್ಕನಂತೆ ಪರಿವರ್ಜಿತದೋಷ[ಸಮೂಹ]ನಾಗಿಯುಂ ॥
ವಿತತಕಲಾಧರಂ ಕುವಲಯಪ್ರಿಯನೆಂದೆನೆ ಮಾಘಮುಣಿಂದಿ ಪಂ ।
ಡಿತಯತಿನಾಥನಗ್ಗದ ಚರಿತ್ರಮೆ ಧಾತ್ರಿಗೆ ಚಿತ್ರಮುಲ್ಲವೇ ॥ ೪೫

ವರಕಳಕಾರಸಪ್ರಸರಸೇವೆಯಿನುಣ್ಮುವ ಸೌಖ್ಯಮುಂ ಪಿಕೋ ।
ತ್ಕರಮುಖಿವಂತೆ ಕಾಕಕುಳವೇನಱಿದಪ್ಪುದೆ ಸಂದ ಸತ್ಕವೀ ॥
ಶ್ವರಕೃತನವ್ಯಕಾವ್ಯಮಧುರೋಕ್ತಿಗಳಂ ಬುಧಸಂಕುಳಂ ನಿರಂ ।
ತರಮುಖಿವಂದದೇನಱಿವುದೇ ನೆರೆದಾಲಿಪ ದುರ್ಬುಧವ್ರಜಂ ॥ ೪೬

ವಿರಹಿಕುಳಂ ಕಳವೀಣಾ ।
ವಿರುತಿಗೆ ಮುಳದೆಳಸದಂತೆ ಸತ್ಕವಿಕೃತಬಂ ॥
ಧುರಕೃತಿಬಂಧದ ಮೃದುಪದ ।
ಪರಿಕರನುಂ ಕೇಳಲಿಂತು ಖಳನೆಳಸುಗುಮೇ ॥ ೪೭

ಇತರಚರಿತ್ರದುನ್ನತಿಕೆಯುಂ ನೆರೆ ದೂಷಿಸಿ ಬಾಲ್ವಿ ದುರ್ಜನಂ ।
ಸ್ತುತಿಯಿಸಲಾರ್ಪನೇ ಸುಕವಿನಿರ್ಮಿತಸರ್ವಳಕಾವ್ಯಸೂಕ್ತಿಸಂ ॥
ತತಿಯನಸೃಕ್ಪ್ರವಾಹವುನಡುರ್ಮುಖಿ ಪೀರ್ವ ಜಳೂಕಜಾಳಮೇ ।
ನತಿಶಯದುಗ್ಧಪೂರಮನೆ ತೋಱಿದೊಡೀಂಟಲೊಡರ್ಚಿ ಸಾರ್ವುದೇ ॥ ೪೮

ನಿರಸೂಯರ್ ನಿರಪೇಕ್ಷಕರ್ ಪರಗುಣಜ್ಞರ್ ಪಂಡಿತರ್ಕಳ್ ನಿರಂ ।
ತರವೊಲ್ದಾಲಿಪ ಮೆಚ್ಚಿ ಬಿಚ್ಚಳಿಪ ಭಾಸ್ವತ್ಕಾವ್ಯಮುಂ ದುರ್ಜನೋ ॥
ತ್ಕರಮಾದಂ ಪಟಿಕೆಯೊಡ್ಡಾಕೃತಿಗೆ ತಪ್ಪೀನಪ್ಪುದೇ ಮಾಯ್ದು ಪ ।
ಟ್ಟರಣಂ ಪೊರ್ದದ ಚಂಪಕಪ್ರಸವನವ್ಯಾಮೋದಮೇಂ ನಿಂದ್ಯಮೇ ॥ ೪೯

ಜಿನರಾಜಸ್ತುತಿಕಾವ್ಯಮುಂ ಖಳಭಯಕ್ಕುಳ್ಳಿಕ್ಕಿ ಪುಣ್ಯೈಕಭೂ ।
ಜನಮುಂ ನಿರ್ಮಿಸದಿರ್ಪುದೇ ಬುಧಚಕೋರವ್ರಾತಚೇತೋಮುದಂ ॥
ಜನಿಯಿಪ್ಪಂತಿರೆ ಪೇೞ್ದೊಡಾಕೃತಿಕನಚ್ಚಂದಾತಪದ್ಯೋತಿ ನೆ ।
ಟ್ಟನೆ ಮೆಯ್ವೆರ್ಚೆ ತದೀಯದುರ್ಜನನುನೋಮಿಥ್ಯಾಂಧನುಂ ತೂಳ್ದದೇ ॥

ಕನಕಂ ಸೇವಿಸೆ ಸೊರ್ಕನೀವುದೆ ವಲಂ ಮಿಥ್ಯಾತ್ವದೈವಸ್ತವಂ ।
ತನಗೆಂತುಂ ಪದೆದೀವುದಂತುಟೆ ಯಥಾಬೀಜಂ ತಥಾಂಕೂರಮೆಂ ॥

ದೆನಿಪಂತಾಫಳವೇವುದಿರ್ದೆ ಜಿನನಂ ನಿಶ್ಶೇಷಸಶ್ರೀಜಿನೇ ।
ಶನನನಾವಂದದೆ ವರ್ಣಿಪಂಗದು ಕರಂ ಕೈವಲ್ಯಲೀಲಾಕರಂ ॥ ೪೧

ಪಿರಿದುಂ ಕಾಂಚನಕಾಂಕ್ಷೆಯಿಂದಜೆರಲಕ್ಷ್ಮೀವುತ್ತರಂ ಕೀರ್ತಿಸು ।
ತ್ತಿರೆ ದೋಷಂ ಫಲವುಪ್ಪುದಂತದು ಬುಧರ್ಗೇಬಾಟಿತ್ತಿ ಹೋ ವಾಣಿಹಂ ॥
ಪರವೆಂಬೀಯೆರಡರ್ಕಮುತ್ಸವಕರಂ ಸತ್ಕಾವ್ಯಸಂಪತ್ಕರಂ ।
ಪರಮಾನಂದಕರಂ ಜಿನೇಶ್ವರಪದದ್ವಂದ್ವಾರವಿಂದಸ್ತವಂ ॥ ೪೨

ವರರತ್ನಂಗಳನಿತ್ತು ಮುತ್ತಿಱದ ಪಣ್ಣಂ ಕೊಳ್ವವೋಲ್ ಶುದ್ಧಸಿ ।
ದ್ಧರಸಂಗೊಟ್ಟಳಿಗೊಳ್ವವೋಲ್ ಸುಮತಿವೆತ್ತುಂ ಮತ್ಕವಿಂ ವರ್ಣಿಪೀ ॥
ಮರುಳಾಟಂದರಫಾಶ್ರಯಂ ಬುಧರ್ಗೆ* ಮುತ್ತಂ ಶಾಂತಿನಾಥಾಂಘ್ರಿಪಂ ।
ಕರುಹಸ್ತೋತ್ಪಲವಂ ಲಸತ್ಸುಖಕರಂ ನಿಶ್ಶ್ರೇಯಸಶ್ರೀಕರಂ ॥ ೪೩

ಎನಿತಾನುಂ ಭವಮಾಲೆಯೊಳ್ ಬರುತುಮಿರ್ದುಂ ಕಾಕತಾಲೀಯದಂ ।
ತೆ ನಿಜೋದ್ಯತ್ಕೃತಪುಣ್ಯದಿಂ ಮನುಜಜನ್ಮಂಬೆತ್ತು ಮುತ್ತಂ ಶ್ರುತ ॥
ಜ್ಞಾನೆ ತಾನಾಗಿಯುಮಿಾಜಿನಸ್ತುತಿಕಥಾಳಾಪಕ್ಕೆ ಪಕ್ಕಾಗದಾ ।
ತನ ವಾಕ್ಚಿತ್ರತೆ ನಿಷ್ಫಲಂ ನಿಜುಳವೈಕ್ಷ್ವೀದ್ಯಾನವೇನಲ್ಲವೇ ॥ ೪೪

ಮನುಜಂ ವರ್ಣಿಸಲಾವನಾರ್ತಪನೊ ಪೇೞ್ ಶಾಂತೀಶವೂಹಾತ್ಮ್ಯವ।
ರ್ಣನೆಯಂ ಮಾೞ್ಪೊಡತರ್ಕ್ಯಮಂಬುರುಹಗರ್ಭಾಂಗಂ ಫಣೀಂದ್ರಾಂಗವೆಂ।
ದೆನಲೆಂತೆನ್ನಳವನ್ನೆ ವರ್ಣಿಪುದು ಕೃತ್ಯಂ ಹಾಸ್ಯಮುಲ್ತಲ್ಲು ಮುಂ ।
ಬನಿಯಂ ಚಾದಗೆಯಿಾಂಟಿ ತನ್ನಯ ಪವಣ್ಗೀಂ ತುಷ್ಟಿಯಂ ಮಾಡದೇ ।೪೫

ಮೃದುಮಯಮಪ್ಪ ಶಬ್ದತತಿ ಶಬ್ದಸಮೂಹದೊಳೊಂದಿದರ್ಥಮು ।
ರ್ಥದೊಳವಗಾಹಮಾಗಿ ಬಿಡದುಣ್ಮುವುದಗ್ರ [ಸು]ಭಾವ[ಭಾವದೊಳ್] ॥
ಪುದಿದ ರಸಂ ರಸಪ್ರಸರದೊಳ್ ಸವಿ ಸಂಗಳಿಪಂತೆ ಮಾಣ್ದು ಪೇ ।
ೞ್ವುದು ಕೃತಿಯಂ ಚಮತ್ಕೃತಿಯೆನಲ್ ವಿಬುಧಾಳಿಗೆ ಸತ್ಕವೀಶ್ವರಂ॥ ೪೬

ವರಶಬ್ದಜ್ಞಾರನರ್ಥದರ್ಶಿಗಳನುಕ್ತಿಪ್ರೌಢರಂ ಭಾವತ ।
ತ್ಪರರಂ ನೀತಿವಿದರ್ಕಳಂ ರಸಿಕರಂ ಸಾಹಿತ್ಯದೊಳ್ ಸಂದ ಜಾ ॥
ಣರನಾಂದೋಳಶಿರಸ್ಸರೋಜಮುಖರಂ ಮಾೞ್ಪುಕ್ತಿ ಚಾತುರ್ಯಬಂ ।
ಧುರನೊರ್ವಂ ಕವಿಕಂಜಗರ್ಭನುದ್ಭವಾಕ್ಯಂದರ್ಭನಿಂತುರ್ವಿಯೊಳ್ ॥೪೭

ಸತ್ಕವಿಕಮಳಭವನ ಭಾ ।
ಸ್ವತ್ಕವಿತಾಕಾಮಧೇನು ತಾನಖಿಳಬುಧೋ ॥
ದ್ಯತ್ಕಾಮಿತಾರ್ಥಭಾವರ ।
ಸೋತ್ಕರಮುಂ ಕಱಿವುದಲ್ತೆ ಕಾವ್ಯಸ್ಥಳಿಯೊಳ್ ॥ ೫೪

ಕಮಳಭವನ ಕವಿತಾರಸ ।
ವನುರ್ದಿ*ನ ತನಿವೊಸಲನಂಗವೋಹನಬಾಣಂ ॥
ರಮಣೀಯಮಧುರರುತಿ ಬಾ ।
ಳವುರಾಳದ ನಲ್ಮೆಯಾಟಮಿನಿಯುಳ ಕೂಟಂ ॥ ೫೫

ವಿಮಳವಿಭಾಸ್ವದೇಕಮುಖನುನ್ನತಸನ್ಮತಿಸುಪ್ರಕಾಶನು ।
ತ್ತಮಚರಿತಾಂಚಿತಂ ಸಕಲಜೀವಹಿತಾಗಮವರ್ಧನೀಕೃತೋ ॥
ದ್ಯಮನವುದಾತ್ಮನಪ್ರತಿಹತಂ ದಿಟಮೆಂದೊಲವಿಂದಜಸ್ರ್ರಯೇ ।
ಕಮಲಭವಾಸ್ಯಪದ್ಮವನೆ ಪೊರ್ದಿದಳೇಂ ಗಡ ! ವಾಣಿ ಜಾಣೆಯೋ ॥ ೬೦

ಶ್ರುತದಭ್ಯಾಸದ ಸೀಮೆಯಾವುದು ಕವಿತ್ವಂ ತತ್ಕವಿತ್ವಪ್ರಗ ।
ಲ್ಭತೆಗುದ್ಯತ್ಫಲವಾವುದರ್ಹದಮಳಾಂಘ್ರಿ [ದ್ವಂದ್ವಸು] ಸ್ತೋತ್ರಸಂ ॥
ತತಿಯಂ ಸಿದ್ಧಿಪುದಾವುದಕ್ಷಯಸುಖಶ್ರೀಯೆಂದೊಡೆಂದುಂ ಜಿನ ।
ಸ್ತುತಿಕೃತ್ಯಂ ಕವಿಕಂಜಗರ್ಭನೆ ವಲಂ ಧನ್ಯಂ ಪೆಱರ್ ಧನ್ಯರೇ ॥ ೬೧

ಜಿನಸಮಯಪ್ರಕಾಶಕೃತಸತ್ಕವಿ ಪಂಪನ, ಪೆಂಪುವೆತ್ತ ಪೊ ।
ನ್ನನ, ಕವಿನಾಗಚಂದ್ರನ, ನೆಗಱ್ತಿಯ ರನ್ನನ, ಸಂದ ಬಂಧುವ ॥
ರ್ಮನ, ಬುಧನೇಮಿಚಂದ್ರನ, ಜಗಸ್ಸುತಜನ್ನನ, ರಂಜಿಪಗ್ಗಳ ।
ಯ್ಯನ ಕೃತಿಸೌಂದರೀಸುಭಗಮಾವಗಮಿರ್ಕೆ ಮದೀಯಕಾವ್ಯದೊಳ್ ॥ ೬೨

ಸಕಳಜ್ಞಂ ಶಾಂತಿನಾಥಂ ತನಗೆಸೆವ ಕುಲಸ್ವಾಮಿ ದೇಶೀಗಣಂ ಪು ।
ಸ್ತಕಗಚ್ಛಂಕೊಂಡಕುಂದಾನ್ವಯಮುರ್ದ*ಯಶೋವಮುಂಡಿತಂ ಪಂಡಿತಾಖ್ಯಾ
ಧಿಕನುದ್ಯನ್ಮಾಘಣಂದಿವ್ರತಿಪತಿ ಗುರುತಾತರ್ ದಿಟಂ ಭವ್ಯರೆಂಬೀ ।
ಸುಕೃತಪ್ರಖ್ಯಾತಿವೆತ್ತಂ ಕವಿಕಮಲಭವಂ ಸೂಕ್ತಿಸಂದರ್ಭಗರ್ಭಂ ॥ ೬೩

ವಿಮಳತೆವೆತ್ತ ನಿನ್ನಯ ವಚಸ್ಸುಧೆಯುಂ ಸುಮನಶ್ಚಕೋರಚ ।
ಕ್ರಮನೊಲವುಣ್ಮೆ ತುಪ್ಪುವಡಿಸೆಂದು ವಿನೇಯಜನಂಗಳಿಂತು ಸ ॥

ತ್ಪ್ರಮದದೆ ಪೇೞಿ ಪೇೞ್ವಿ ಬಗೆದಂದೆನದಲ್ಲದೆ ಶಾಂತಿನಾಥನು ।
ತ್ತಮಚರಿತಪ್ರಬಂಧನುನದೇಂ ನೆಱಿ ವರ್ಣಿಪ ದೇವನಾವನೋ ॥ ೬೪

ಪರಮಾರ್ಥಂ ಪರಿಭಾವಿಸಲ್ಕದು ಕರಂ ದೋಷಾವಳೀಕರ್ದಮೋ ।
ತ್ಕರನಿರ್ಧೂತಕರಂ ದಯೋದಯಕರಂ ಸವ್ಯಕ್ತ್ವಲಕ್ಷ್ಮೀಕರಂ ॥
ನಿರವದ್ಯಾಮೃತಮಂಗಳೋತ್ಸವಕರಂ ತಾನೆಂದು ಪೂಣ್ದಂ ಪ್ರಭಾ ।
ಸುರಶಾಂತೀಶ್ವರ ಸತ್ಪುರಾಣಕೃತಿಯಂ ಪೇೞ್ ಕಲ್ತನೋ ಲೀಲೆಯಿಂ ॥

ವ॥ ಅದೆಂತೆಂದೊಡೆ :—

ಚತರುಸ್ರಂಬೆತ್ತ ವೇತ್ರಾಸನದವೊಲದುಮಿರ್ಕುಂಮೃದಂಗಾರ್ದ್ಧರವ್ಯಾ
ಕೃತಿಮಧ್ಯಂ ಮತ್ತಮೂರ್ಧ್ವಂ ಮುರಜದ ತೊಣೆ ಷಡ್ದ್ರವ್ಯಸಂಯುಕ್ತ
[ಕೋಭಾ ॥

ಯುತಮುದ್ದಂ ರಜ್ಜು ವೀರೇೞಿನಿಸಿನಗಲ್ದಿ ಮೂಲೋಕಮಂ ಸುತ್ತಿವಾಯು।
ತ್ರಿತಯಂ ತಾಳ್ದಿರ್ಪುದಕ್ಕೂಣತೆವಡೆದ ನಭೋಗರ್ಭದೊಳ್ ತಾನಗುರ್ಬಿಂ॥

ಇಂತೆಸೆ[ಯುತಿರ್ಪ]ತ್ರಿಭುವನ ।
ಕಾಂತೆಯ ತನುಮಧ್ಯಮೆಂಬುದುಚಿತಮೆನಲೊಕ್ಕೇ ॥
ರಂತೇಕರಜ್ಜುವಿನ ಪವ ।
ಣಂ ತಳೆದೊಪ್ಪಿರ್ಪುದಲ್ತೆ ಮಧ್ಯಮುಲೋಕಂ ॥

*ನೆಗೞ್ದಾವುಮಧ್ಯಮುಲೋಕವೂವೃತದಸಂಖ್ಯದ್ವೀಪವಾರಾಶಿ ರಾ ।
ಶಿಗಳಂ ರಾಜಿಸುತಿರ್ಪುದಂತದಱೊಳೆಲ್ಲಾ ವಾರ್ಧಿಗಳ್ಗೆಯ್ದಿ ನೆ ॥
ಟ್ಟಗೆ ತಾಂ ಮುಖ್ಯತೆವೆತ್ತ ಕಾರಣದಿನೋರಂತಾಸಮುದ್ರಾಭುಮಂ ।
ನಗುವಂತಿರ್ಪುದನೂನಫೇನರುಚಿಯಿಂ ಲಾವಣ್ಯನೀರಾಕರಂ ॥ ೬೪

ವ॥ ಆಲವಣಜಲಧಿಯ ಮಹತ್ವಮೆಂತೆಂದೊಡೆ :—

ಚರಿಯಿಪ್ಪೊಳ್ದಾಣವೊಯ್ತನ್ನಯ ಸುತಶಶಿಗಶಾಂತಮೆಂದೆಯ್ದಿ ನೀಳ್ದಾ।
ತೆರೆದೋಳ್ದಾಣಂಗಳಿಂದಂಬರವನೊಸೆದು ತಟಿಕ್ಕೈಸುತಿರ್ದಪ್ಪುದೆಂಬಂ ॥
ತಿರೆ ತನ್ನೇಫೌಧ್ವಮಂ ತಳ್ತ ಡರ್ದು* ತುಡುಕುವಾಭೀಳಕಲ್ಲೋಲಮಾಲಾ ।
ಕರದಿಂದೊಪ್ಪಿರ್ದುದಾಶಾಬಧಿರಿತಬಹಳಧ್ವಾನರೌದ್ರಂ ಸಮುದ್ರಂ ॥ ೬೫

ವ॥ ಆಸಮುದ್ರಂ ಸರೋಜಗರ್ಭನಂತೆ ಸರಸ್ವತೀಪತಿಯಾಗಿಯುಂ
ಸತ್ವಕ್ಷೋಭಿತಮುಂ । ಶಶಿಕಲಾಶೇಖರನಂತೆ ವಿಷಾಕಳತಕಂಠಮಾಗಿಯುಂ

ಋಷಕೇತನೋಪೇತನುಂ । ನಂದಗೋಪವುಂದಿರದಂತೆ ಅನಂತಹರಿವುಯು
ವಾಗಿಯುಂ ಕಾಳಿಂದೀಸೌಂದರ್ಯಸಂಯುತವುಂ । ರಜನೀರಮೆಯುಂತೆ
ಹಿಮಕರಾನುಬಂಧಿಯಾಗಿಯುಂ ಅಹಿಮಕರಾನುಬಂಧಿಯುಂ । ಸಮಿಾರಣ
ತ್ರಯದಂತೆ ಸಕಲಭುವನಾಧಾರವಾಗಿಯುಂ ಸಂತತವುನಂತಾಶ್ರಯಸ್ಥಿತ
ವುಂ । ದಿನಕರಕರಂಗಳಂತೆ ಕಮಳಾಭಿಶೋಭಾಯವಾನವಾಗೆಯುಂ
ಕುವಳಯಾನುವರ್ತಿಯುಂ । ದನುಜೇಂದ್ರಸಭೆಯಂತೆ ಕವಿಶೋಷಭೂಷಣ
ವಾಗಿಯುಂ ಅನಿಮಿಷಕುಲಾಕೀರ್ಣವುಂ । ಪಾತಾಳಭುವನದಂತೆ ಬಹಳ
ವಿಷನಾಗಮಯವಾಗಿಯುಂ ಪ್ರಬಲಶಿಖಿಸಮೇತವುಂ । ಮತ್ತಂ ಚೈತ್ರ
ಚೂತವನದಂತೆ ಚಂಚತ್ಪ್ರವಾಳಪರಿಕಲಿತವುಂ । ಚಕ್ರಧರವಿಕ್ರಮಾಜ್ಞಾ
ಗೋಮಿನಿಯಂತೆ ಗರ್ಭೀಕೃತಭೂಭೃತ್ಸಮಾಜವುಂ । ವಿರಹಿಜನದಂತೆ ವಿಪು
ಳೋತ್ಕಳಿಕಾಸವುತ್ಕೀರ್ಣಕವುನೀಯವುಂ । ರವಾರಮಣನಾಭಿಮಂಡಲ
ದಂತೆ ರಾಜೀವರಾಜಿತವುಂ । ನೃಪಾಕಪಿಯಂತೆ ವನವಾಲಾವುನೋಹರ
ವುಂ । ಗರುಡಾಗಾರದಂತೆ ಶೇಷಶೋಭಾವಳಂಬಿಯುವಾಗಿರ್ಪುದಂತು
ವುಲ್ಲದೆಯುಂ—

ಧರಣೀರಮಣಿಗೆ ಧಾತ್ರಂ ।
ವಿರಚಿಸಿದ ವಿಚಿತ್ರಮೀಕಳಾಸೂತ್ರವೆನಲ್ ॥
ಕರೆವೆಸೆದುದಖಿಳಮಣಿಗಣ ।
ಕಿರಣಾವಳಿವಳಿಸರೀತಪಾರಾವಾರಂ ॥ ೭೦

ಆಪಾರಾವಾರದ ವೇ ।
ಳಾಪರಿವೃತವಾಗಿ ಸೊಗಯಿಸಿರ್ಪುದು ಜಂಬೂ ॥
ದ್ವೀಪಂ ಸಮಸ್ತವಸ್ತುಕ ।
ಳಾಪಂ ಸೌಂದರ್ಯಸಾರಲಕ್ಷ್ಮೀರೂಪಂ ॥ ೭೧

ವ॥ ಆಜಂಬೂದ್ವೀಪದ ಮಧ್ಯದೊಳ್

ಜನಜನ್ಮಸ್ಥಾನಪೀಠಂ ದಿವಿಜವಿಹರಣಕ್ಷ್ಮಾಣಿ ಕಲ್ಪದ್ರುಮಾನೀ ।
ಕನಿವಾಸಂ ತಾನೆನಿಪ್ಪೀವುಹಿಮವೆವಡೆದ ಪೆಂಪಿಂ ಪೊದಳ್ದಿಂತು ನೀಳ್ದಂ ॥
ತೆ ನಭೋಂತರ್ಭಾಗವುಂ ಸೋಂಕುವ ಶಿಖರಮುಖೋದ್ಗರ ಸೌವರ್ಣ
[ರುಗ್ಮಂ] ।

ಡನವುಂ [ದಿಗ್ವ್ಯಾ]ಳದೊಳ್ ಮೇಳಿಸುತುಮೆಸೆವುದಾರುಂಧ್ರಹೇವಾಚ

[ಳೇಂದ್ರಂ ॥ ೩

ವಿಯದುನ್ನತಮಪ್ಪವುರಾ ।
ದ್ರಿಯ ದಕ್ಷಿಣದೊಳ್ ನೆಗಟ್ಟಿತ್ತೆತ್ತುದು ಭುವನ ॥
ತ್ರಯದತಿಶಯಶೋಭಾಲ ।
ಕ್ಷ್ಮಾಯ ಜನ್ಮಕ್ಷೇತ್ರಮೆನಿಸಿ ಭರತಕ್ಷೇತ್ರಂ ॥ ೨೩

ಭರತಕ್ಷೇತ್ರದ ನೆಗಟ್ಟಿ ।
ತ್ತರದಕ್ಷಿಣಭರತರಮೆಗೆ ತನ್ನ ಮಯೂಖದೋ ॥
ತ್ಕರಮದು ಜೊನ್ನದ ಸಿರಿಯಾ ।
ಗಿರೆಯಾವಿಜಯಾರ್ಧಶೈಲಮೆಸೆದುದು ನಿಸದಂ ॥ ೨೪

ಚರಿಯಿಪ ಖೇಚರಾಂಗನೆಯರಾತ್ಮಮುಖಪ್ರತಿಬಿಂಬಮುಂ ಸ್ಫಳಾಂ ।
ಬುರುಹಮೆಗೆತ್ತು ಕೊಳ್ವ ಬಗೆಯಂ ತೆಗೆವಾಕೆಗಳಂ ನಗುತ್ತು ಮಿ ॥
ರ್ದಿರವೆನೆ ಪೂರ್ವಪಶ್ಚಿಮಪಯೋಧಿಯುಗಂಬರಮಿಂಬುವೆತ್ತು ಖಿ ।
ತ್ತರಿಪುದು ನೀಳ್ದ ಶುಭ್ರರುಚಿವಿಭ್ರಮದಿಂ ವಿಜಯಾರ್ಧಪರ್ವತಂ ॥ ೨೫

ಮೊವಲಿಂ ವ್ಯಾಸದ ಯೋಜನಂ ಗಣಿಯಿಸಲ್ಕೆ ೞವತ್ತು ಮೂವತ್ತು ಪ ।
ತ್ತದವುದ್ದಂ ಮೊದಲಲ್ಲಿ ಪತ್ತೆಸೆವ ಮುದ್ಯಂ ಪತ್ತು ಮೇೞ್ಮೈದು ತ ॥
ನ್ನುದಯಾರ್ಧಾರ್ಧಮದಳ್ದರಲ್ ಕೆಳಗೆ ಗಂಗಾಸಿಂಧುವಾರಿಪ್ರವಾ ।
ಹದಿನೊಪ್ಪಿರ್ಪ ಗುಹಾದಿಭಾಸಿ ವಿಜಯಾರ್ಧಕ್ಷ್ಮಾರ್ಧಧಾತ್ರೀಧರಂ ॥ ೨೬

ಪವನನನುಪ್ಪಿರಲ್ಕಿಲದುಪತ್ಯಕದೊಳ್ ಮೊದಲಲ್ಲಿ ಖೇಚರೇಂ ।
ದ್ರಾವಳಿ ಮಧ್ಯದಲ್ಲಿ ಪಿರಿದುಂ ಪರಿರಂಜಿಸುವಾಭಿಯೋಗ್ಯದೇ ॥
ವಾವಳಿಯಗ್ರದಲ್ಲಿ ಕರವೊಪ್ಪುವಕೃತ್ರಿಮರತ್ನರಮ್ಯಚೈ ।
ತ್ಯಾವಸಥಾವಳಿಯಿನೊಪ್ಪುವುದಾವಿಜಯಾರ್ಧಪರ್ವತಂ ॥ ೨೭

ಆನಗದ ದಕ್ಷಿಣದೊಳಿನಿ ।
ತಾನುಂ ಕಣ್ಗೊಳಪುದಂತೆ ಮುಂಗಳಲಕ್ಷ್ಮೀ ॥
ಸ್ಥಾನಮೆನೆ ದಕ್ಷಿಣಶ್ರೇ ।
ಣೀನಾಮುದ ವಿಷಯಮಖಿಳಶೋಭಾವಿಷಯಂ ॥ ೨೮

ಸಿತಸೌಮ್ಯಾಬ್ಜರಸಪ್ರಸನ್ನತೆ ವಿಚಿತ್ರೋದ್ಯದ್ವಿಶಾಖೋತ್ಕ್ಷಜಾ ।
ಯತವಿಸ್ತಾರತೆ ತದ್ದ್ರಾಮಪ್ರಮುಖಧಿಷ್ಣ್ಯಳೀಪುರಾಚಕ್ರಭಾ ॥
ತತಿವಿಭ್ರಾಜತೆ ಹಂಸಮಂಡಳಗುರುಪ್ರದ್ಯೋತಸಂಘಾತಶೋ ।
ಭಿತೆ ತಟ್ಟಿಯ್ದಿ ಘನಾಧ್ವನಂ ನೆನೆಯಿಸಿತ್ತಾದಕ್ಷಿಣಶ್ರೇಣಿಯೊಳ್ ॥ ೭೯

ಸತತಂ ಗೋಮಂಡಳಮುಂ ।
ಡಿತಮುದು ಮೂರ್ತಂಡಸಂತೆ ಪದ್ಮಾಕರವೇ ॥
ಪ್ಪಿತಮಬ್ಜಾಂಬಕನಂತಾ ।
ವೃತವನವಿಭ್ರಾಜಿ ವಾರ್ಧಿಯುಂತಾವಿಷಯುಂ ॥ ೮೦

ಎನಸುಂ ವಕ್ರತೆ ವಲ್ಲರೀವನದೊಳನ್ಯೋನ್ಯಾಕ್ರಮಂ ಕಾಮಿನೀ ।
ಸ್ತನದೊಳ್ ಕಾಂಚನಸಂಚಯೋದ್ಭವನುದಂ ದುತ್ತೂರದೊಳ್ ಭಂಗವ ॥
ರ್ತನಮುಂಭೋಧಿಯೊಳುಚ್ಚ ನೀಚತೆ ವಿಸಂಜೇನಾದನೋದ್ಭೂತನಿ ।
ಸ್ವನಭೇದಂಗಳೊಳಲ್ಲದಿಲ್ಲ ಪೆಱತೇನಾದಕ್ಷಿಣಶ್ರೇಣಿಯೊಳ್ ॥ ೮೧

ಗೋತ್ರವಿರೋಧಮದೆಂದುಂ ।
ಸುತ್ರಾಮನೊಳತುಳಭೀತಿ ದುರಿತದೊಳಂಕಂ ॥
ಚಿತ್ರದೊಳಾಖಡಿ ಸಲೆ ಶತ ।
ಪತ್ರಂಗಳೊಳಲ್ಲದಿಲ್ಲ ಪೆಱತೊಂದೆಡೆಗೊಳ್ ॥ ೮೨

ಆರಾನುಮುಯುಂ ಹರಿಯನ ।
ತಾರಾನಳಿಯಂತನಂತಪುರನುಯಮುದು ಲ ॥
ಕ್ಷೀರಮಣತಲ್ಪತಲದಂ ।
ತಾರಯೆ ಧನಿಯುಂತೆ ಪುಣ್ಯಜನನಿಚಯಮುಯುಂ ॥ ೮೩

ಮುಳಿಸತೆ ಮಧುಕರಕಟಕಂ ।
ಗಳೊಳೊಗೆದುನ್ಮತ್ತತೆ ಪಾವಕಾಚೆರ್ಗಳೊಳ್ ವ್ಯಾ ॥
ಕುಳತೆ ವಿಯೋಗಿಗಳೊಳ್ ಸಂ ।
ಚಳತೆ ಸವಿಾರಣನೊಳಲ್ಲದಿಲ್ಲಾನಾಡೊಳ್ ॥ ೮೪

ವೊಲೆಯಿಂದಂಬರಿವಿಟ್ಟು ಪಾಲುಗುತುವೋರಂತಿರ್ದೊಡಂ ತಮ್ಮ ಕೆ ।
ಚ್ಚಲನಂದೊಯ್ಯನೆ ಕುಂದದುರ್ವಿ ಕೆಲಸಂ ಪೆಗೊರ್ತ್ತೆಯುಂ ಕಾಲುಗ ॥

ಳ್ಗಲಸಂಬೆತ್ತಿರೆ ಪೋಗದಿಂತು ನಡೆಯುಂ ಮೂಣ್ದಲ್ಲಿ ಮೆಲ್ಕೊತ್ತುತುಂ ।
ಸಲೆ ವಿಭ್ರಾಜಿಸುತಿರ್ಪುವಾವಿಷಯದೊಳ್ ಸಾನಂದದಿಂ ಧೇನುಗಳ್ ॥ ೪೫

ಕುಡಿ ಮಿಡಿಯಲೊಡಂ ರಸವೊಸೆ ।
ರ್ದಡರ್ದಪುದೆನುತಿರ್ಪ ನುಡಿಗೆ ಕಡುಕಿನಿಸಿದವೊ ॥
ಲ್ದುಡುಗದೆನೆ ಗಂಟುಗಂಟುಗ ।
ಳೆಡೆಯಿಂ ರಸಮುಣ್ಮುವಿಕ್ಷುವಾಟಿಗಳಿಸೆಗುಂ ॥ ೪೬

ಚಾತಕಮುಲ್ಲದೆ ವೃಷ್ಟಿನಿ ।
ಪಾತವನಲ್ಲಿಯ ಜನಂಗಳಿಸರ್ ಜಲಭಾ ॥
ರಾತತಿಯನವಿರತಂ ಸುರಿ ।
ವಾತುಹಿನೋಪಳದ ಪುದಿದ ಪದೆಪಿಂದದಱೊಳ್ ॥ ೪೭

ಎನಗಾರೂಢಿಯು ನಾನು ಸೋದರ ಮೊದಲ್ಗೀವ್ಯಂದವಾನಿನ್ನವ ।
ರ್ಕೆನಸುಂ ತುಷ್ಟಿಯನೀಯದಿರ್ಪೊಡೆ ಮದೀಯಾಧಿಕ್ಯವೇಂಬಾಱಿತ್ತಯಿಂ ॥
ದೆನುತುಂ ಭೂರಮೆ ರಾಗದಿಂ ಪಡಿದಳಂಬೀವಾರ್ತೆ ತಱಿತ್ತರ್ಪುದಿಂ !
ಪಿನ ಪುಲ್ ನಾಲ್ವೆರಲುದ್ದವಾಗಿ ಪಸುರಿಂದೊಪ್ಪುತ್ತುವಾಥಾತ್ರಿಯೊಳ್ ॥

ಕೀರಕಿಶೋರಚಂಚುಹತಿಯಿಂದೆನಸುಂ ಕಣಿಶಾಗ್ರಭಾಗದಿಂ ।
ಭೋರೆನೆ ಸೋರ್ವ ಪಾಲ್ವೊನಲದಾಗೆ ಬಱಿಕ್ಕೆ ವಾರಿಯಂ ॥
ಪಾರದೆ ಸಂತತಂ ಬೆಳೆಯುತಿರ್ಪ ಮಹಾಕಳಮಪ್ಪಸಿದ್ಧಕೇ ।
ದಾರಸವಾಜದಿಂ ಸಲೆ ವಿರಾಜಿಪುದಾವಿಷಯಂ ನಿರಂತರಂ ॥ ೪೮

ನವಹೇಮಚ್ಛವಿ ನೀಳ್ದ ತಱಿತ್ತ ಕಣಿಶಾನೀಕಾಗ್ರದೊಳ್ ಮೇಗೆ ತೋ ।
ಱುವ ತದ್ಬಾ ಲಶುಕಾವಳೀವಿಳಸದಿಂ ಶಾಲೀಯಭೂಲಕ್ಷ್ಮಿಯೊ ॥
ಪ್ಪುವ ನೇರಾಣಿಯ ಪೊನ್ನ ಕಂಚುಕದೆ ಮೇಲಿಕ್ಕಿರ್ದಳೋ ಪಚ್ಚೆಸಾ ॥
ರವನೆಂಬಂತೆಸೆದಿರ್ಪುವಾಕಲವನುಕ್ಕೇದಾರಂಗಳಾನಂದದಿಂ ॥ ೪೯

ಭೋರೆನೆ ಬಂದು ಕೀರಶಿಶುಗಳ್ ನೆಱಿ ತೂಗಿ ಜಗುಳ್ದು ಕಾಲ್ವೆಯೂ ।
ಪೂರದೊಳೆಯ್ದಿ ಬಿಟ್ಟು ಪೊಱಡಲ್ಕಣವಾಱದೆ ಕೀಱಿ ತೂಗಿ ಕೀಱಿ ॥
ಕೀಱಿನುತಿರ್ಪವಂ ಕೃಪೆಯಿನೀಕ್ಷಿಪವೋಲ್ ಕಣಿಶಾಳಿ ಜೋಲ್ದು ವಿ ।
ಸ್ತಾರತೆವೆತ್ತು ತೋರ್ಪ ಕಳಮಕ್ಷಿತಿಸಂತತಿ ರಮ್ಯಮೊರ್ಮೆಯುಂ ॥ ೫೦

ಎಱಗಿರ್ದಾಶಿಶುಕೀರಜಾಳರುಚಿಯಿಂ ದೂರ್ವಾಂಕುರಭ್ರಾಂತಿಯಿಂ ।
ನೆಱಿ ಸಾರ್ದಾಶೆ ನಿರಾಶೆಯಾದ ಮೃಗಶಾಬಂಗಳ್ಗಣಂ ನಾಣ್ಚಿದಂ ॥
ತೊಱಗಿರ್ಪಾ ಕಣಿಶಂಗಳಟ್ಟಳದೊಳಿಲ್ಲಾಕಾರಮೋರಂದದಿಂ ।
ಮಿಱುಗುತ್ತೊಪ್ಪುವವಸ್ರತರ್ಕ್ಯಕಳವುಕ್ಷೇತ್ರಂಗಳಾಧಾತ್ರಿಯೊಳ್ ॥೯೦

ಕರತಳತಾಡನಂಬೆರಸು ಭೋರ್ಗರೆದಲ್ಲೊಲಿಯುತ್ತುಮಿರ್ಪ ಪಾ ।
ಮರಿಯುರ ದೋಱುವಾಯ್ದೊಱೆಗಳಂ ನೆಱಮಿಾಕ್ಷಿಸಿ ಬೀಡೆವೆತ್ತು ಬಿ ॥
ತ್ತರಿಸುವ ದಾಡಿಮವ್ರಜಮಿವೆಂಬಭಿಶಂಕೆಯನಪ್ಪುಕೆಯ್ದು ಪೀ ।
ವರಕುಚದಲ್ಲಿ ಕೇಗುವುದು ಪೋಗದೆ ಕೀರಕುಳಂ ನಿರಾಕುಳಂ ॥ ೯೩

ಅನಿಳಾಹತಿಯಿಂ ಕಱಮೆಯು ।
ತೆನೆದುಱುಗಲೊಳೊಱೆತು ಪರಿನ ಪಾಲಂ ಕಳಹಂ ॥
ಸನಿಕಾಯಮೀಂಟಿ ಪಾಳಿಯು ।
ನನವರತಂ ಬಿಡದು ಪಾಳಿಯಂ ಪಾಳಿಪವೋಲ್ ॥ ೯೪

ಮಿಗೆ ಮೊಗೆದುಂಬ ತುಂಬಿಗಳೆ ತತ್ತಟದಿಕ್ಕೆಲದೊಳ್ ಪೊದಱ್ದು ನೀ ।
ಳ್ದುಗುವ ನವೀನನಪ್ಪ ಮುಕರಂದಕಣಂಗಳ ತಂದಲಿಂದೆ ನೆ ॥
ಟ್ಟಗೆ ನೆಲನೆಯ್ದೆ ನಾಣ್ದುಱುಕೆ ಕೆಸರ್ಮಾಸಗುತ್ತಿರೆ ಕಂಪಿನಿಂಪಿನಿಂ ।
ಮಗಮಗಿಸುತ್ತುಮೊತ್ತರದಿನೊಪ್ಪುವುವಲ್ಲಿಯ ಪುಪ್ಪವಾಟಗಳ್ ॥ ೯೫

ಅರೆವಿರಿದೊಪ್ಪುವ ಪಣ್ಗಳ್ ।
ಳ್ವೆರಸಿದ ಬಿಣ್ಗೊನೆಗಳಿಂದೆ ಪಥಿಕರ ಕಣ್ಗಳ್ ॥
ಚ್ಚರಿನಡೆದು ಬಿಡದೆ ಬಾಯುಂ ।
ಬಿರಿಯಿಸುತೆಸೆದಿರ್ದುವಲ್ಲಿ ಬಾಲಚಿಯ ಪಣ್ಗಳ್ ॥ ೯೬

ಬೆಳೆಯಿಪ್ಪಂ ದಕ್ಷಿಣಶ್ರೇಣಿಯ ಧರೆಯಿನೆ ನೀರೂಡುತುಂ ವತ್ಸಸಸ್ಯಂ ।
ಗಳನಾನೆಂದಂಗಜಂ ನಿರ್ಮಿಸಿದ ಸಲಿಲಯಂತ್ರಂಗಳೆಂಬಂತೆ ನೀರ್ಗಾ ॥
ಯ್ಗಳ ವಕ್ತ್ರಾನೀತದಿಂ ಭೋರ್ಗರೆದುಗುವೆಳನೀರಂ ನವೋದ್ಯಾನನಾನಾ।
ಕಳವುಕ್ಷೇತ್ರಕ್ಕೆ ಪೂರಂಬರಿಯಿಪ್ಪುವದಱಿಂದೊಳ್ ನಾಳಿಕೇರಾಂಘ್ರಿಪಂಗಳ್ ॥

ಘನಘರ್ಮಾಪಹವಪ್ಪ ತೆಂಬೆಲರ ತೀಟಂ ಶೀತಲಂವಾಱ್ಪ ತಂ ।
ಪಿನ ಪೆಂಪುಂ ತನಿಗಂಪಿನಣ್ಪುವೊಗೆವಂಭಃಪೂರಿತಾನೂನಕಾಂ ॥

ಚನಕುಂಭಂಗಳಿನಿಂಬುವೆತ್ತಿಸೆವುವೆಲ್ಲಂ ಮಾರ್ಗಮಾರ್ಗಂಗಳೊ ।
ಳ್ಪಿನತೇಂದೂಪಲನಿರ್ಮಿತೋನ್ನತವಿಶಾಲೋದ್ಯತ್ಪ್ರಪಾಶಾಲೆಗಳ್ ॥ ೯೯

ಲಲಿತಾಂಗಂ ನಸು ಸೊಂಕಿ ನೀರೆಱಚಿವ ಕಾಂತಾಗಣ್ಯಲಾವಣ್ಯನಿ ।
ರ್ಮಲಪೀಯೂಷನುನಾಂತು ಕಣ್ಗುಡಿತೆಯಿಂದೀಂಟುತ್ತುಮೆಯ್ತಂದು ಕಂ॥
ದಳಮಂ ಕೆನ್ನೆಯೊಳೊಡ್ಡಿ ಬಾಯ್ವಱಿದೆ ಬಳ್ಕಾಡುತ್ತುಮಾಲೋಕನಾ ।
ತುಳವಿಭ್ರಾಂತಿಯ ಭಂಗಿಯಿಂ ನಗಿಸುವರ್ ಪಾಂಥರ್ಕಳಂ ಕಾಂತೆಯರ್ ॥

ಅಗಳತ್ತ ಮತ್ತೊಂದೆಡೆಯೊಳ್—

ಕುಡಿಯಲೊಡಱ್ದಿದಾಗಳೆ ತೃಷಾತುರನಾತ್ಮಶಿರೋಬ್ಜಮಂ ಸಮುಂ ।
ತೆಡೆವಿಡದೆತ್ತಿ ತೂಗುತಿರೆ ಮಾಣದೆ ತಾನೆಱಚಿಯುತ್ತುಮಿರ್ದೊಡಾ ॥
ಮಡದಿಗೆ ಮೆಚ್ಚಿ ನಿಂದು ತಲೆದೂಗಿದೊಡಾಪಥಿಕಂಗೆ ಭಂಗಿಯಿಂ ।
ತಡೆಯದಖಾಂಗವೀಕ್ಷಣಸಹಾಯನವಿತ್ತಳದೇಂ ಪ್ರಗಲ್ಭಯೋ ॥ ೧೦೦

ಮದಸವಿಹಾರಭೂಮಿಯೆನಿಸಿರ್ದ ವನಾವಳಿ ವಾರಿಜಾಕರಂ ।
ವಿದಳಿತಪುಷ್ಪರಾಜಿ ವಿಳಸಲ್ಲತಿಕಾಗೃಹಮಾಳಿ ಮುಂಗಳಾ ॥
ಸ್ಪದಪುಲಿನಸ್ಥಲಂ ಪ್ರುದಿದ ಕೆಂಪಿನ ಶಾಲಿಯು ಕೆಯ್ವೊಲಂಗಳಿ ।
ಲ್ಲಗ ತಱುಪುಂ ತಱುಂಬುನೆಲನುಂ ಪರಿಭಾವಿಸೊಡಿಲ್ಲದೆಲ್ಲಿಯುಂ ॥ ೧೦೧

ಪೊಲನೆಲ್ಲಂ ಸಲೆ ಸರ್ವಸಸ್ಯಮಯಮುರ್ವೀಜಾತಮೆಲ್ಲಂ ಲಸ ।
ತ್ಫಲಸಂತಾನಮಯಂ ಲತಾಪ್ರತತಿಯೆಲ್ಲಂ ಪುಷ್ಪಮಾಲಾಮಯಂ ॥
ಜಲಮೆಲ್ಲಂ ಸರಸೀಜರಾಜಿನಿಯಮಮೂರೆಲ್ಲಂ ಸಮುತ್ಕೃಷ್ಟಮಂ ।
ಗಲಶೋಭಾಮಯಮಾವಗಂ ಜನಮುದೆಲ್ಲಂ ಹರ್ಷಚೇತೋಮಯಂ॥ ೧೦೨

ವ॥ ಮತ್ತಮಾವಿಷಯಂ ಸುರೇಂದ್ರನಂತೆ ಸುಧರ್ಮಾವಿಷ್ಟಿತಮುಂ ವಿಬುಧಾವಳೀವೇಷ್ಟಿತಮುಂ । ದಿವಸಕಾರವಿಂದಲಕ್ಷ್ಮ್ಯಯಂತೆ ದೂರೀಕೃತದೋಷಮುಂ ರಾಜಪೀಡಾರಹಿತಮುಂ । ಶಾರ್ವರೀಲಕ್ಷ್ಮ್ಯಯಂತೆ ಕುವಲಯಾನಂದಕರಮುಂ ತೀವ್ರಕರಬಾಧಾವ್ಯಪೇತಮುಂ । ವನನಿಧಿಯಂತೆ ಬಹುವನಸಮನ್ವಿತಮುಂ ವಿವಿಧಕವಿಕುಲಾಕೀರ್ಣಮುಂ । ಗಗನಮಂಡಳದಂತೆ ರಾಜಹಂಸಾವಳೀರಮಣೀಯಮುಂ ಮುಂಗಳಗುರುಬುಧಪ್ರಭಾಕರಭಾಸುರಮುಂ । ವಿಯಚ್ಚರಾವಳಿಯಂತೆ ಸತ್ಪಥಪ್ರವರ್ತಿತಮುಂ ಕುಮಾರ್ಗವರ್ಜಿತಮುಂ । ಅಮೃತಾರ್ಣವದಂತೆ ಅನಂತಪುರುಷೋತ್ತಮಶೋಭಿತಮುಂ ದ್ವಿಜರಾಜಿರಾ

ಜಿತಮುಂ| ಸಂವೆತ್ಸರಾವಳಿಯಂತೆ.....ಬಹುಧಾನ್ಯಬಂಧುರಮುಂ|
ಸುರಕರೀಂದ್ರನಂತೆ ಸಮುನ್ನತಪುಷ್ಕರಪರಿರಂಜಿತಮುಂ ಸದಾದಾನಪ್ರಸಂಗ
ಶೋತ್ರಮುಂ | ಶಶಿಧರನಂತೆ ವೃಷೋಪಾಭಿರಾಮಮುಮುಂ ಕುವಲಯಪ್ರ
ಬೋದಕರಕಲಾಧರೋದ್ದಾಮಮುಂ ॥

ವ॥ ಮತ್ತಂ ಮಧುಸೇವೆ ಪಟ್ಪದಂಗಳೊಳ್ | ಮಿತ್ರವೈರಂ ಕುವಲ
ಯಂಗಳೊಳ್ | ಕುಮುದಂ ಷಟ್ಕೊಳಂಗಳೊಳ್ | ಪ್ರಭಂಜನಪ್ರಿಯತ್ವಂ
ಪಾವಕನೊಳ್ | ಕರ್ಕಶತ್ವಂ ಕಮಲನಾಳಂಗಳೊಳ್ | ವಿಚಾರಂ ತತ್ವ
ದೊಳ್ | ವಿಪರೀತಂ ಫಲಿತಕುಜಾತಂಗಳೊಳ್ | ಲಘುತ್ವಂ ಛಂದೋಗಣಂಗ
ಳೊಳಲ್ಲದಿಲ್ಲಮಂತುಮಲ್ಲದೆಯುಂ—

ನೆಲನುರ್ವರೆ ಪಶುತತಿ ನಿ ।
ರ್ಮಲಧೇನುವ್ರತತಿ ಸಕಲವನಸಮೃತುಷಟ್ಕಂ ॥
ಪೊಲನೆಲ್ಲ ನದೀಮಾತೃಕ ।
ನುಲಂಘ್ಯಮೂವಿಷಯದೆಸೆವ ಮಹಿಮೋಜ್ಜರ್ಯಂ ॥ ೧೦೩

ವ॥ ಆದಕ್ಷಿಣಶ್ರೇಣೀವಿಷಯದೊಳ್—

ಪದೆದು ನಿರೀಕ್ಷಿಸಲ್ ಪೊಗಟಬೆಯ್ದವು ತಮ್ಮಯ ನೇತ್ರಜಿಹ್ವೆಗಳ್ |
ತ್ರಿದಶನರೋರಗರ್ಗೆನೆ ವಿನೂತನಮಪ್ಪ ಸಮಸ್ತ ಶೋಭೆಗಾ ॥
ಸ್ಪದಮೆನಿಸಿರ್ಪುದಲ್ತೆ ಪೆಸರಿಂ ರಥನೂಪುರಚಕ್ರವಾಳಮೆಂ |
ಬುದು ಪುರಮೂಪುರಂ ಜಿತಸುರೇಂದ್ರಪುರಂ ವಿಜಿತಾಳಕಾಪುರಂ ॥ ೧೦೪

ಸಲೆ ಗರ್ಭೀಕೃತರಾಜಹಂಸವಿಭವಂ ವಾಃಖ್ಯಾತಿಕಾಮೇಖಲಾ |
ಕಲಿತಂ ಪುಣ್ಯಜನಾವಳೀಯುತಮಹತ್ವಂ ರತ್ನಕೇತೂತ್ಕರಾ ॥
ಕಲಿತಂ ಸನ್ಮಖವಾಕ್ಪ್ರವೃತ್ತಿ ತನಗೆಲ್ಲಿತ್ತೆಂದು ತತ್ಕಾಂಚನಾ |
ಚಲಮುಂ ತಾನಿಜಿಕೆಯ್ದುದಿಂತು ಕನಕಪ್ರಾಕಾರಮೋರಂದದಿಂ ॥ ೧೦೫

ಪರದಾರಾಹರಣಂಗೆ ತಾಂ ಶರಣಮಾಯ್ತಾದೋಷಸಂಬಂಧದಿಂ |
ಪಿರಿದುಂ ಪೆಣ್ಮಬಂಧನೋರುಫಲಮುಂ ತಾನೆಂದು ಲಾವಣ್ಯಸಾ ॥
ಗರಮುಂ ಪೇಱಗಲಿಸೋವದಾರ್ದುಲಿಯುತಿರ್ಪಂತಾಯ್ತು ನಾನಾಜಲೇ |
ಚರಪುಷ್ಟ ಪ್ರಬಲೋಚ್ಚಳದ್ಭುಳುಭುಳುಪ್ರಧ್ವಾನಗಂಭೀರದಿಂ ॥ ೧೦೬

ದ್ಯುನದೀಫೇನವಿತಾನವು ।
ನೆನಸುಂ ಕೆದಱುವುದು ತುಱುಗಿದಟ್ಟಳಿಗಳ ಕೇ ॥
ತನಪಡಿ ಜನಿತಾನಿಳನೆಂ ।
ದೆನಲೇವೊಗಟ್ವಿಂ* ತದೀಯವಪ್ರೋನ್ನತಿಯುಂ ॥ ೧೦೩

ಪುರಲಕ್ಷ್ಮ್ಯಾಯ ಕಾಂಚನಖ ।
ಡ್ಗರಾಹುವಿಂಗಳ್ಕಿ ತಾವೆ ಮಿಗೆ ಪುಗದೋಲ್ ಭಾ ॥
ಸ್ಕರಶಶಿಗಳ್ ಕೆಲದೊಳ್ ಪೋ ।
ಪರೆಂದೊಡಾವಪ್ರದುನ್ನತಿಯನೇವೊಗಟ್ವಿಂ* ॥ ೧೦೪

ಮುರುದಾಹತಿಯಿಂ ಸೂಸಿದ ।
ಸುರನದಿಯ ನವೀನಫೇನಸಂಚಯಮೆನೆ ಬಿ ॥
ತ್ತರಿಪುದು ತೆನೆಗಳ ಕೊನೆಯೊಳ್ ।
ನಿರಂತರಂ ತಟ್ಟು ಚಾರುತಾರಾನಿಚಯಂ ॥ ೧೦೫

ವಿಳಸನ್ನಭೋನದೀನಿ ।
ರ್ಮಳಲಹರಿಗಳಿನೆ ಕರಂ ವಿರಾಜಿಪುವಂತಾ ॥
ತೊಳಪ ತೆನೆಗೊನೆಯ ಪಟಯಿಗೆ ।
ಗಳ ಪೊಳೆವ ದುಕೂಲಚಲಪಟಾಂಚಲನಿಚಯಂ ॥ ೧೦೬

ಅಂಬರನುದು ರುಚಿರವಿಜೆ ।
ತಾಂಬರಧರಮೆನಿಸಿದತ್ತು ಮಣಿಗಣರಚಿತಾ ॥
ಡಂಬರಮೆಸೆವಟ್ಟಾಳಕ ।
ದಂಬಕದೊಳ್ ನೆಗೆದು ಪೊರೆದ ಕಾಳಚಕ್ಷುವಿಯಿಂ ॥ ೧೦೭

ಪುದಿದು ಪೊದಟ್ಟಿ ಸಾವುಜಪದಾಂಕಚತುರ್ಮುಖಗೋಪುರಂಗಳಂ ।
ವಿದಿತಮುಹತ್ಸುವರ್ಣರುಚಿವಿಭ್ರಮದಿಂ ವಿಬುಧಾವಳೀವಿಳಾ ॥
ಸದಿನುರುರಾಜಹಂಸಯುತದಿಂ ರಥನೂಪುರಚಕ್ರವಾಳವಿ ।
ರ್ದುದು ನೆಱೆ ಪೋಲ್ತು ಕಂಗೊಳಿಸುತುಂ ಸತತಂ ಶತಪತ್ರಗರ್ಭನಂ॥ ೧೦೮

ಜಿನಯೋಗಿಜ್ಯಾಯರುತ್ಸರಿತಭವದುರಿತರ್ ಭಾವಿಸುತ್ತಿರ್ಪ ತತ್ಪಾ ।
ವನಶುಭ್ರಧ್ಯಾನದೀಪ್ತಿ ನ್ನಿಜಮನ ಬಿಡಿದು ಭಾಸ್ವಜ್ಜನಾವಾಸಮಾಯ್ತಂ ॥

ದೆನೆ ಚಂಚತ್ಸಾಂದ್ರಚಂದ್ರೋಪಲವಿರಚಿತ ಚೈತ್ಯಾಲಯವ್ರಾತಮೂತಾ ।
ರನಗಶ್ರೀಯಂ ನಗುತ್ತಿರ್ಪುದು ನಿಮಿರ್ದ* ನಿಜಾದಭ್ರಶುಭ್ರಾಂಶುವಿಂದಂ ॥

ಜಿನಪಾದಾಂಭೋಜಪೂಜಾಸಮಯಸಮುದಿತಾತೋದ್ಯನಾದಂ ಜಿನಸ್ತೋ
ತ್ರನಿಕಾಯೋಚ್ಚಾರಣಾಂಚದ್ವಿನಯಜನಸುಘೋಷಂ ಜಿನೇಂದ್ರಾಗಮಾನೀ॥
ಕನವವ್ಯಾಖ್ಯಾವಿಚಿತಾರ್ಥಕ ಮುನಿಪಗಭೀರಸ್ವರಂ ತಟ್ಟು ಪುಣ್ಯಾಂ ।
ಬುನಿಧಾನಧ್ವಾನಮಾಳಾಮಯಮೆನಿಸಿ ಪುರಂ ರಮ್ಯಮಾದತ್ತು ನಿಚ್ಚಂ॥೧೧೪

ಸಿರವಲ್ತಾಗಿಯುಮೇಕಕಾಲಿಕಮಣಂ ವರ್ಷಾಗಮಂ ಸಾಲ್ವುದಿ ।
ನ್ನಿರಲಿನ್ನಿಲ್ಲಿಯೆನುತ್ತೆ ಬಂದು ಸುರಚಾಪಂ ಸಾರ್ದುದೆಂಬಂತೆ ಭಾ ॥
ಸುರನಾನಾಮಣಿಮಂಜರೀವಿರಚಿತಪ್ರೋತ್ತುಂಗಹರ್ಮ್ಯಾಂಗಳಾ ।
ಪುರದೊಳ್ ಶೋಭಿಸುತಿರ್ಪುದಂತು ಶಬಲಚ್ಛಾಯಾನಿಕಾಯಂಗಳಿಂ॥೧೧೫

ಮಿನುಕಣಸುಂ ಪೊದಳ್ದಿವುಳನೀಳಶಿಳಾಮಯಬದ್ಧಭೂಮಿ ಕಂ ।
ಪಿನ ಕರವುಪ್ಪ ಕತ್ತುರಿಯ ನೀರ್ದಳಿಪುಂ ತಡೆಯಿಲ್ಲದಿರ್ಪ ಮು ॥
ತ್ತಿನ ಕಡೆ ಮಲ್ಲಿಕಾವಳಿಯ ಪೂವಲಿ ಪೂವಲಿಯೊಳ್ ಮದಾಳಿಗಳ್ ।
ಜಿನುಗುವ ನಿಸ್ಸ್ವನಂ ಸಲೆ ವಿರಾಜಿಪುದಾಪುರವೀಥಿವೀಥಿಯೊಳ್ ॥ ೧೧೬

ವಾರಿರುಹಷಂಡದಂತಿರೆ ।
ನೀರಜದಿಂ ರಾಜಹಂಸಕುಳವಿಹರಣವಿ ॥
ಸ್ತಾರದಿನಿಂತನವರತಂ ।
ರಾರಾಜಿಪುದಲ್ತೆ ಪುರದ ವೀಥ್ಯೂಧಂ ॥ ೧೧೭

ಪುರದ ಮಣಿಹರ್ಮ್ಯಹರ್ಮ್ಯದ ।
ಪರಿಸರದೊಳ್ ನವರಜೋಭಿರಂಜಿತಕಂಜೋ ॥
ತ್ಕರಮುಯದ ತಿಳಿಗೊಳಂಗಳ್ ।
ಕರಮೆಸೆದುವು ಕಂಜಗರ್ಭನಂ ನೆನೆಯಿಸುತುಂ ॥ ೧೧೮

ಅಪರಿಮಿತವಸ್ತುಗಳ ನಿಧಿ ।
ವಿಪುಲತರೋತ್ತುಂಗಮಂಗಳಾವಧಿಯೆನಿಪಾ ॥
ವಿಪಣಿವ್ರಜದಿಂ ವಿಭ್ರಾ ।
ಜಿಪುದೆನಸುಂ ಪುರದ ರಾಜವೀಥ್ಯೂಧಂ ॥ ೧೧೯

ಧನಿ ಧನದನೆಂಬ ನಾಮಂ ।
ತನಗೇಕೆ ಪರಾರ್ಥರಕ್ಷಕಂಗೆ ಕುಬೇರಂ ॥
ಗೆನುತಿಲಿಕೆಯ್ವುರ್ ತಮ್ಮಯ ।
ಧನದೆಣಿಕೆಯುಸಳಿಯದಾಪುರದ ಸಿರಿವಂತರ್ ॥ ೧೦೦

ಬರೆಯಂ ನೋಡದೆ ನೋಡಿ ಚೆನ್ನವನೆ ಕಂಡಾಚಿನ್ನಮಂ ವರ್ಣದಂ ।
ತರಮುಂ ತಪ್ಪದೆ ಪೇಳ್ವಿ ತೂಗದೆನಸುಂ ಕೈತೂಕದಿಂ ತೂಕದಂ ॥
ತರಮಂ ಗಟ್ಟಿಗೆ ಪೇಳ್ವಿ ಮುಚ್ಚವನೆ ಲೀಲಾವ್ಯಾತ್ರದಿಂ ಕಟ್ಟುವ ।
ಚ್ಚರಿಯಿಂದಾಪುರದಲ್ಲಿ ಚೆನ್ನವರದರ್ ತಾಮಿಂತು ವಿಭ್ರಾಜಿಪರ್॥ ೧೦೧

ಪರಿಹೃತಜಳವಮಾಗಿ ಜಳಂ ।
ಕರಮಲ್ಲಿಗೆ ಬಂದುದೆಂಬ ತೆಱದಿಂ ಮಣಿಗಾ ॥
ಱರ ಪಸರಮೆಸೆವುದಾಪುರ ।
ವರದೊಳ್ ಸವರತ್ನಕ್ಕಾಂತಿಸಂತತಿಯಿಂದಂ ॥ ೧೦೨

ಸುರವೈದ್ಯನಪ್ಪ ಧನ್ವಂ ।
ತರಿ ತರಿಸುವಸಲ್ಲಿ ತನಗೆ ಬೇಡಿದ ತಂತ್ರೋ ॥
ತ್ಕರಮನೆನೆ ರೂಪವೌಷಧಿ ।
ವೆರಸಿದ ಗಂದಿಗ್ಗರ ಪಸರಮುಸದಳವೆಸೆಗುಂ ॥ ೧೦೩

ಪವಣಿಪ ಪತ್ರೋದ್ವರ್ಣಂ ।
ಗವನುದ್ಭವಿಸಿದ ವಿರಿಂಚಿಗಚ್ಚರಿಯುಂ ಬೀ ॥
ಱುವ ಬಹುವರ್ಣಂಗಳ ವ ।
ಸ್ತ್ರವಿತಾನದಿನೆಸವುದಲ್ಲಿ ದೂಸಿಗವಸರಂ ॥ ೧೦೪

ನಳತೋಳ್ ಪೆರ್ಮೊಲೆ ಕುಂತಲಂ ವಿಟರ ಚಿತ್ತಂಗೂಡಿ ತೂಗಾಡಿ ಕೆಂ ।
ದಳದಿಂ ಸಣ್ಣಿಗೆಯುಂ ತೆರಳ್ದಿ ತಿರಿಪುತ್ತುಂ ಸುಯ್ಯೆಲರ್ದಂಪನ ॥
ಗ್ಗಲಿಸಲ್ ಗಂಧನಿಷದ್ವರಕ್ಕೆ ನವಘುರ್ಮಂ ಗಾತ್ರದೊಳ್ ಪೊಣ್ಮಿ ಪ ।
ಜ್ಜಳಿಸಲ್ ಗಟ್ಟಿವುಗುಟ್ಟಿ ವರ್ ವರವಿಳಾಸೋದ್ದಾಮೆಯರ್ ಭಾವೆಯರ್॥
ಸರಲ ಲತಾಂಗಭಂಗಿ ನೆಱಿ ಕಣ್ಗೊಳಿಸುತ್ತಿರೆ ನಿಂದು ನೀಳ್ದ ಕ ।
ಣ್ಬರಿ ನವಚಂದ್ರಿಕಾವಿಸರಮಂ ಕೆದಱುತ್ತಿರೆ ಸುಯ್ಗೆ ಪೂಗೆ ಸೂ ॥

ಲ್ವಿರುತಿರೆ ತುಂಬಿಗಳ್ ಮನಸಿಜಾತನ ಶಾರಿಕೆಯಾಧಿದೇವತಾ ।
ಪರಿಕರದಂತಿರ್ದರಲ ಮೂಲೆಯನೆತ್ತಿದ ಮೂಲೆಗಾರ್ತಿಯರ್ ॥ ೧೨೬

ಲೋಲತರಂಗಲಾಲಿತವಿಯತ್ತಟಿನೀತಟಚಾರುಕಲ್ಪಭೂ ।
ಜಾಳಯ ಬೀಲವೆಂಬೆನೆ ಘನಸ್ಫಟಿಕಾಸ್ಪದನೀಳ್ದ ಕಂಬದಿಂ ॥
ಲಾಲಿತಮೌಕ್ತಿಕಾವಳಯ ಧಾಮಸಮೂಜದಿನಾದವೊಪ್ಪುವಾಂ ।
ದೋಳಮದಲ್ಲಿಗಲ್ಲಿಗೆಸೆದಿರ್ದುದು ತತ್ಪುರವೀಧಿವೀಧಿಯೊಳ್ ॥ ೧೨೭

ಅಗಣಿತಶೋಭೆವೆತ್ತ ಪುರಲಕ್ಷ್ಮ್ಮಿಯ ಚಾಪಳಲೋಚನಾಂಕುಮಾ ।
ಲೆಗಳೆನೆ ಕಾಂತಿಸಂತತಿ ದಿಶಾವಳಯೊಳ್ ಕುಡಿಯಿಟ್ಟು ನಾಡೆಯುಂ ॥
ಸೊಗಯಿಪ ಚಂದ್ರಕಾಂತಿ ಮುಕುರಾವಳರಂಜಿತರತ್ನತೋರಣಾ ।
ಳಗಳ ವಿಶಾಲಮುಗ್ಗಲಿಸಿ ತೋರ್ಪುವು ತತ್ಪುರವೀಧಿವೀಧಿಯೊಳ್ ॥ ೧೨೮

ಜಡಜಾತೋದ್ಭವನುಂ ರಜೋದ್ಭವನುಮಪ್ಪಾ ಕಂಜಭೂಸೃಷ್ಟಿ ನೋ।
ಟಿಪ್ಪೊಡೆ ಸರ್ವೋತ್ತಮನವಾಗದೆಂದು ಮದನಂ ಸೌಂದರ್ಯಸರ್ವಸ್ವದಿಂ ॥
ಪಡೆದಂ ತಾನೆನೆ ನಿರ್ಮಳಾಂಗಲತಿಕಾಲಾವಣ್ಯಸಂಪತ್ತಿ ನೂ ।
ರ್ಮಡಿಸುತ್ತಿರ್ಪಬಲಾವಳೀಮಯದೆ ವೇಶ್ಯಾವಾಟಿ ವಿಭ್ರಾಜಿಕುಂ ॥ ೧೨೯

ಅಮಣಿಹರ್ಮ್ಯದಾದಲೆಯ ಭೂಮಿಕೆಯೊಳ್ ನಡೆಪಾಡುವಂಗನಾ ।
ಸ್ತೋಮದ ಚೆಲ್ವನೀಕ್ಷಿಸಿ ಸುರಾಂಗನೆಯರ್ ಬೆಱಗಾಗಿ ಮುತ್ಪ್ರಿಯರ್ ॥
ತಾಮಿವರಂ ನಿರೀಕ್ಷಿಸಿದೊಡೆಮ್ಮನಭೀಕ್ಷಿಸರೆಂದೆನುತ್ತ ಚಿಂ ।
ತಾಮಯಚಿತ್ತರಾದಪರೆನಲ್ ವನಿತಾಜನರೂಪಮೆಂತುಟೋ ॥ ೧೩೦

ವನಿತಾಸ್ಯಶ್ವಸಿತೋಲ್ಲಸತ್ಪರಿಮಳಕ್ಕುನ್ಮುಕ್ತತಾಂಬೂಲದಿಂ ।
ಪಿನ ಕಂಪಿಂಗಜರಾಭಿಷೇಚನದ ಕಸೂರೀಜಲಾಸಾರಪಾ ॥
ವನಗಂಧಕ್ಕೆ ಶಿಖಾಪ್ರಸೂನಕುಳಸೌರಭ್ಯಕ್ಕೆ ಸಂರಂಭದಿಂ ।
ದೆನಸುಂ ಪಾಯ್ವುಳಿನೀಳ್ದುಣತ್ಕೃತದೆ ವೇಶ್ಯಾವಾಟಿ ವಿಭ್ರಾಜಿಕುಂ ॥ ೧೩೧

ತರುಣಿಯರಾಸ್ಯನಿಶ್ವಸಿತಸೌರಭವುಂ ಕೊಳುತುಂ ಕುಚಂಗಳೊಳ್ ।
ಪರಿಮಳಿಯಾಡುತುಂ ಪುದಿದ ನಾಭಿಯು ಕಸ್ತುರಿಯುಂ ತೆರಳ್ದುತುಂ ।
ಗುರುಜಘನಾಗ್ರಮುಂ ತುಡುಕುತುಂ ಬಿಡದೊಯ್ಯನೆ ನೀವಿಯುಂ ತೆಱಂ ।
ದಿರಿಪ್ಪುತುಮಲ್ಲಿ ತೀಡುವುದು ಕಾಮುಕನಂದದೆ ಪೌರವೀರುತಂ ॥ ೧೩೨

ವ॥ ಮತ್ತಮಾಪುರವರೋದ್ಯಾಂ ಧಿಷ್ಣ್ಯಮಾಗಿಯುಂ ನಕ್ತಂಚರಯು
ಕ್ತಮುಲ್ತು । ಅಗಣ್ಯಪುಣ್ಯಜನಮಯಮಾಗಿಯುಂ ವಿಬುಧವಿರಹಿತಮುಲ್ತು ।
ಸಾಮಜಸ್ವರಾಭಿರಾಮಮಯಮಾಗಿಯುಂ ರಜೋಯುಕ್ತಮುಲ್ತು । ರಾಜ
ಂಸರಮಣೀಯಮಾಗಿಯುಂ ನಯನಾಭೀತಿಪ್ರದಮುಲ್ತು । ಪ್ರಬಲಪ್ರ
ಚಂಡಹರಿಮಯಮಾಗಿಯುಂ ಮತಂಗಜಮನೋಭಯಕಾರಿಯುಲ್ತು । ವಿಜೃಂ
ಭಿತಪುಂಡರೀಕಮಯಮಾಗಿಯುಂ ಮೃಗನಯನಾತಿಭೀತಿಪ್ರದಮುಲ್ತು ।
ಸಕಲಸುಮನೋಮಯಮಾಗಿಯುಂ ಮಧುಪಾವಳೀಸಮಾವೃತಮುಲ್ತು ।
ನಿಖಿಳನಿಸ್ತ್ರಿಂಶಖಡ್ಗಮಯಮಾಗಿಯುಂ ಮಹಾಗಹನಮುಲ್ತು । ಕಮ
ನೀಯಕಳಾಧರಮಾಗಿಯುಂ ಕಮಳಾನಂದವಿದ್ವೇಷಿಯುಲ್ತು । ನಿರಸ್ತಾಗ್ಯ
ವನಮಾಲಾಮಯಮಾಗಿಯುಂ ಕರ್ತೃತ್ವಗರ್ಭೀಕೃತಮುಲ್ತು । ವಿಪುಳಾಪ್ಸ
ರೋಮಯಮಾಗಿಯುಂ ಕವಿನ್ಯಪಹೃತಮುಲ್ತು । ಕುವಲಯಾನಂದಕೇಳೀ
ಸ್ಥಾನಮಯಮಾಗಿಯುಂ ದೋಷಾಕರಪ್ರಭಾವೋಚಿತಮುಲ್ತು ॥

ಅಂತುಮಲ್ಲದೆಯುಂ,

ಕವಿಕುಲಪುಣ್ಯಜನಾಳೀ ।
ವ್ಯವಹೃತಮೆಂದಿಱಿಕೆಗೆಯ್ವುದಮರಪುರೀವೈ ॥ ೧೨

ಭವನಮುಂ ರಥನೂಪುರಚ ।
ಕ್ರವಾಳಪುರಮಖಿಳಸೌಖ್ಯಕರಲಕ್ಷ್ಮೀಪುರಂ ॥ ೧೩

ಆಪುರಮಧ್ಯದೊಳಪ್ಪುದು ।
ಭೂಪನಿವಾಸದ ಮಗಿಲ್ ಚತುರ್ಮುಖವಿಳಸ ॥
ದ್ಗೋಪುರವಿಜಿತಂ ವಿಮಳೇಂ ।
ದೂಪಲರಚಿತಂ ವಿಚಿತ್ರಮಣಿಗಣಖಚಿತಂ ॥ ೧೪

ಕೆಡೆದೊಡೆ ವಾಜಿಯನೊಂದನೆ ।
ಪಡೆದುದು ಪಾಲ್ಗಡಲದೆಂದು ಸೌಧಪ್ರಭೆ ನೂ ॥
ರ್ಮಡಿಸುವ ಹಯಶಾಲಾವಳಿ ।
ಜಡಿವುದು ವರತುರಗತತಿಯ ಹೇಷಾರುತಿಯಿಂ ॥ ೧೫

ಪ್ರಣುತಬಹುಭದ್ರಗುಣಲ ।
ಕ್ಷಣಯುಕ್ತವ್ಯಾಳನಿಜಿತ ಘಂಟಾಘಟಿತೋ ॥

ಲ ಣಮಯವಾರಣಶಾಲಾ ।
ಬ
ಗಣಮೆಸೆವುದು ವಾರಣಂಗಳಂದದಿನೆಂದುಂ ॥ ೧೩೬

ತರದಿಂದೊಪ್ಪುವುವಲ್ಲಿ ಶಕ್ರಕುಟಿ ಕೋಶಾಗಾರಮೇಕಾಂತವುಂ ।
ದಿರಮಭ್ಯಾಸನಿಕೇತನಂ ಪಚನಧಾಮಂ ಸ್ನಾನಸದ್ಮಂ ಮನೋ ॥
ಹರಶಯ್ಯಾವಸಥಂ ವಿಭೂಷಣಗೃಹಂ ದೇವಾರ್ಚನಾವಾಸವುಂ ।
ಬರವೇಶ್ಮಂ ವರಭೋಜನೌಕವುವರೋಧಸ್ತ್ರೀನಿವಾಸಾಸ್ಪದಂ ॥ ೧೩೭

ಮಿಸುಗುವ ವಿಚಕಿಲಕುಟ್ಮಳ ।
ವಿಸರದ ಪೂವಲಿ ಪೊದಳ್ದಿ ನೀಲದ ನೆಲಗ ॥
ಟ್ಟಿಸೆವುದು ನಿರಂತರಂ ನೆನೆ ।
ಯಿಸುವುದು ಭಗಣಂಗಳಿಂಬುಗಡೆದಂಬರಮುಂ ॥ ೧೩೮

ವಿನುಲತೆವೆತ್ತು ಬಿತ್ತರಿಸುವುತ್ಕಳಿಕಾವಳಿಯಿಂ ಪೊದಳ್ದಿ ವಿ ।
ದ್ರುಮಕಮನೀಯದಿಂ ಪುದಿದನಂತಹರಿನ್ಮಿತಿಯಿಂ ಸುವರ್ಣವಿ ॥
ಭ್ರಮಕರಿಯುಕ್ತದಿಂ ಶಿಖಿಸನುನ್ವಿತದಿಂ ನೆಗಳ್ದಿಂತು ಸಂತತಂ ।
ಪ್ರಮದವನಂ ಕರಂ ನೆನೆಯಿಸುತ್ತೆಸೆದತ್ತಮೃತಾಂಬುರಾಶಿಯುಂ ॥ ೧೩೯

ವಿಲಸದ್ಭದ್ರಂಗಳಿಂ ವಾರಣವುಸಖಿಳಕೂಟಂಗಳಿಂ ಮೇರುವಂ ನಿ ।
ರ್ಮಲಚಂಚಚ್ಚಿತ್ರಪತ್ರಚ್ಛದವುದೆ ಮಧುಮಾಕಂದವುಂ ಸಾಂದ್ರನಲ್ಲೀ ॥
ತಿಲಕಪ್ರೋದ್ದಾಮದಿಂ ನಂದನವುನವಿರತಂ ಶ್ರೋಲ್ಲಚಿಲ್ವಾಯ್ದು ನೂತ್ನ ।
ಖಿಲರತ್ನಾಕೀರ್ಣಕಾರ್ತಸ್ವರರಚಿತನವಾಶ್ಚರ್ಯಮಾನಂ ವಿಮಾನಂ ॥ ೧೪೦

ಕಳೆಯಲ್ಕಾರ್ತನೆ ಮಿತ್ರನೆಂದೆಸಿಸಿಯುಂ ಮಾರ್ತಾಂಡನಂತಾನಭ ।
ಸ್ಥಳಮುಂ ಮಾಣದೆ ನಿಚ್ಚ ನಿಚ್ಚ ಮಡವರ್ಮಾದೋಷಾಂಧವುಂ ತಾನೆನು ॥
ತ್ತಿಲಿಕೆಯ್ದಾ ಕರುಮಾಡದಗ್ರದ ವಿಶಾಳಸ್ಥಳಮಾಣಿಕ್ಯದಾ ।
ಕಳಶಂ ಪಜ್ಜಳಿಸುತ್ತುಮಿರ್ಪುದು ನಿಜಾಂಶುಸ್ತೋಮದಿಂ ವ್ಯೋಮವುಮಂ ॥

ರನ್ನದ ತೊಡವುಗಳಂ ತನ ।
ಗುನ್ನತಿಗೆಡೆಗೊಟ್ಟು ಗಗನರಮೆಗೀವಂತಾ ॥
ದನ್ನಭದೊಳ್ ಮಣಿಗಣಘೃಣಿ ।
ಯನ್ನೆಱೆ ಕೆದಱುತ್ತುಮೆಸೆವುದಾಕರುವಾಡಂ ॥ ೧೪೨

ಹರಿನೀಳದ್ಯುತಿವನಾಲಿಯಿಂ ತರಣಿಗಂ ಶೀತಾಂಶುಗಂ ನಾಡೆ ಭೀ ।
ಕರರಾಹುನ್ಮಜಸಂಶ್ರಯಂ ಮರಕತಾಂಶುಸ್ತೋಮದಿಂದಾದವೂ ॥
ತುರಗಶ್ರೇಣಿಗವೂಮೃಗಕ್ಕಮದು ನಿತ್ಯಂ ನವ್ಯದೂರ್ವಾಂಕುರೋ ।
ತ್ತರವಿಭ್ರಾಂತಿಯನುಂಟುಮಾಡಿ ಕರುಮಾಡಂ ರಯ್ಯಮಾಯುತ್ತವಗಂ॥೧೪೩

ಬಳಸಿ ಬಹುಪ್ರಕಾರದೊಳೆ ಬಣ್ಣವುರಂಗಳನಿಕ್ಕುವಟ್ಟಿಯಿಂ ।
ಸುಟಿನಬಲಾಜನಾವಳಿಯು ಮೆಲ್ನಡೆಯುಂ ಕಟಿಲೆಂದು ಕೂಡೆ ಬೆಂ ॥
ಬಟಿವಿಡಿದಾನುರಾಳಶಿಶು ಮುಂಡಳದಿಂ ನೆರೆನೋಟಮುಂ ಕಳಲ್ ।
ಬಟಿವರುತಿರ್ಪ ಬಾಳಮೃಗಜಾಳದಿನಾಕರುಮಾಡವೊಪ್ಪುಗುಂ ॥ ೧೪೪

ನವಮುಕ್ತಾವಾಲಿಯುಂ ವೀಕ್ಷಿಸಿ ನಲಿನ ಮುರಾಳಂಗಳಂ ನೀಲರತ್ನ ।
ಚ ವಿಯಂ ಕಂಡಟ್ಟಿಯಿಂ ನರ್ತಿಸುವ ಶಿಖಿಗಳಂ ಗಾರುಡಾಶ್ಮಪ್ರಭೂತಾಂ ॥
ಶುವನಾದಂ ನೋಡಿ ನೀಡುಂ ಸಿಮಿರ್ವ ಮೃಗಿನ್ಮೃಗಾನೀಕದಿಂ ಚೆತ್ರಶೋಭಾ।
ನಿವಹಂ ತಟ್ಟಿರ್ಪುದೋರಂತಖಿಳಮಣಿಘೃಣಿವ್ಯೂಹಮಾರಾಜಗೇಹಂ ॥೧೪೫

ತತ್ಪುರಪತಿ ವರವಿಭವನು ।
ರುತ್ಪತಿ ತೇಜೋವಿರಾಜಿತಾಹಃಪತಿ ಚಂ ॥
ಚತ್ಪರಮಯಃಪತಿ ವಿ ।
ದ್ಯುತ್ಪ್ರಭ್ಯಂ ಜ್ವಲನಜಟಿಮಹಾಖಚರೇಜ್ಯಂ ॥ ೧೪೬

ಅನತಕ್ಷ್ಮಾಪಾಲಜಾಲೋನ್ನತಕನಕಕಿರೀಟಾಗ್ರವಿನ್ಯಸ್ತಮಂ ಮಾ ।
ಡಿ ನಿಜಾಜ್ಞಾರತ್ನಮಂ ರಾಗಮನೊದವಿಸಿ ಮಿತಾಶ್ರವನೀನಾಥಚೇತೋ ॥
ವನಜಾತವ್ರಾತದೊಳ್ ಭಾಸುರವಿಶದಯಃಶೋವ್ಯಾಪ್ತಲೋಕಾಘನಾಗಿಂ ।
ತು ನಿತಾಂತಂ ರಾಜಿಸಿರ್ಪಂ ಜ್ವಲನಜಟಿಮಹಾರಾಜನಕ್ಷ್ಮಾತೇಜಂ॥ ೧೪೭

ಪಲಕಾಲಂ ಕಟಿಯಲ್ಕನಂತಭುಜಗಸ್ವಾಧೀನಿಯಾದಂತಿರಿ ।
ರ್ದೊಲವಿಂದಾವನೊಳೊಂದಿ ನಿಲ್ಲದಿಳೆವೆಣ್ಣಂ ತಾಳ್ದುವಂ ವಿಕ್ರಮಾ ॥
ತುಲಸೌಂದರ್ಯವಿಶಾಲದಿಂದೆಸಲಿಸಿ ನಿತ್ಯಂ ನೂತ್ನರತ್ನಾಂಗದ ।
ಚ್ಛಲದಿಂ ತಾಳ್ದಿ ನೆಗಟ್ಟಿವೆತ್ತನೆಸಸುಂ ವಿದ್ಯಾಧರಾಧೀಶ್ವರಂ ॥ ೧೪೮

ಮೂದೆಱನಾಯ್ತು ವಾಸರದೊಳಾರವಿತೇಜಮದಾಶ್ರಯಾಶಮಾ ।
ಯ್ತಾದಮುನಪ್ರಚಂಡತರತೇಜಮದಾಸ್ಪದಮಾದ ವಾರ್ಧಿಲೀ ॥

ಲೋದಕಶೋಷಣೀಯಕೃತವಾಯೊಗೆದಾಬಡಬಾಗ್ನಿತೇಜವೆಂ ।
ದಾದವೆ ತಾನಧಃಕರಿಪುದಾಖಚರೇಂದ್ರನ ತೇಜದೆಲ್ತಿರಂ ॥ ೧೪೯

ನಿಮಿರ್ದಾ*ಖಚರೇಂದ್ರನ ವಿ ।
ಕ್ರಮಶಿಖಿ ರಿಪುಪುರದೊಳಹಿತವನಿತಾಜನದ ॥
ಕ್ಷಮುದಯದೊಳ್ ಪುಲ್ಲಂ ನೀ ।
ರುಮನೆಂದುಂ ಬಳೆಯಿಸುತ್ತುಮಿರ್ಪುದು ಚಿತ್ರಂ ! ॥ ೧೪೦

ಇದು ಚಿತ್ರಂ ಖಚರೇಂದ್ರವಲ್ಲಭನ ಮಿತ್ರಾಮಿತ್ರದುರ್ಗಂಗಳ ।
ಗ್ಗದ ಲಕ್ಷ್ಮೀಯುತದಿಂ ದ್ವಿಜಪ್ರಕರದಿಂದುನ್ಮತ್ತದಂತಿಪ್ರತಾ ॥
ನದಿನಾರಾಜಭುಜಂಗಖಡ್ಗಚಯದಿಂ ಸ್ತ್ರೀಯೂಧದಿಂ ಪುಂಡರೀ ।
ಕದಗುರ್ವಿಂ ಘನಘೋಷದಿಂ ಪರಿಗಳಿಂ ತೀವಿರ್ಪುವಂತಾವಗಂ ॥ ೧೪೧

ನಿರುಪಮತೇಜನಾಖಚರರಾಜನ ತದ್ಭುಜಶಾಖೆಯೆಲ್ಲಿ ಬಿ ।
ತ್ತರಿಸ ನಿಶಾತಖಡ್ಗಲತೆ ತನ್ನಯ ಮುಂ ತಣಿವುಂಡ ನೀರನಾ ॥
ಪರನೃಪಕಾಮಿನೀಜನದ . . . . . ।
. . . . . ಯುಂ ತನಿಗೊರ್ವಿಸುತಿರ್ದುದದ್ಭುತಂ ॥ ೧೪೨

ಅವನೀಸೇವ್ಯಸುವಂಶಿಯೇ ಕುವಲಯೋದ್ಯತ್ಪ್ರೇಮಿಯೇ ರಾಜವೈ ।
ಭವವಿಭ್ರಾಜಿತವೇ ನಿರಂತರವಿಕಾಸೋದ್ಭಾಸಿಯೇ ನೋಟಕ್ಕಿಂ ॥
ನ್ನವೊಲೆಂದೋವದೆ ತಾನೆ ಬಂದು ನಗುತಿರ್ಪಂತಾವಗಂ ಪುಂಡರೀ ।
ಕವನಾಭೂಪನ ಪುಂಡರೀಕವೆಸವಾತ್ಮೋದಭ್ರಶುಭ್ರಾಂಶುವಿಂ ॥ ೧೪೩

ಜಿತಶತ್ರುಜ್ವಲನಜಟೆ ।
ಕ್ಷಿತಿಪತಿಯು ಮಹಾಪ್ರಧಾನರಾರೂಢಿಯು ಸು ॥
ಶ್ರುತನುಂ ಬಹ್ವಶ್ರುತನುಮಾ ।
ಶ್ರುತಸಾಗರನುಂ ಸುಮ್ಮತಿಯುಮೆಂಬರ್ ನಾಲ್ವರ್ ॥ ೧೪೪

ಕ್ಷಿತಿಗೆಸೆವಂಬರತಿಲಕದ ।
ಪತಿ ಚಂದ್ರಾಭಂಗವಾಸುಭದ್ರಾಂಗನೆಗಂ ॥
ಸುತೆಯಪ್ಪ ವಾಯುವೇಗಾ ।
ಸತಿ ಪಡೆದಳ್ ನೃಪತಿಪಟ್ಟಮಹಿಷೀಪದಮಂ ॥ ೧೪೫

ಸೊಗಯಿಪ ಸುರಭೂಜದ ಪ ।
ತ್ತು ಗೆಯುಂ ನವಕಲ್ಪಲತಿಕೆ ಪಡೆದಂತಿರೆ ನೆ ॥
ಟ್ಟಗೆ ಖಚರಾಧಿಪನೆರ್ದೆವ ।
ತ್ತು ಗೆವಡೆದಳ್ ವಾಯುವೇಗನನಿತಾರತ್ನಂ ॥ ೧೫೬

ಅವಿದ್ಯಾಧರರಾಜನಿಪ್ಪ ಸತಿಯಾದಳ್ ವಾಯುವೇಗಾನುಹಾ ।
ದೇವಿ ಖ್ಯಾತಿಯ ಪಟ್ಟಲಕ್ಷ್ಮಿ ವಿಲಸಲ್ಲಾವಣ್ಯಪೀಯೂಷಪಾ ॥
ರಾವಾರೋದ್ಭವಲಕ್ಷ್ಮಿ ಸುಶ್ರುತಕಲಾಪಾಗಲ್ಭ್ಯವಾಗ್ಲಕ್ಷ್ಮಿಯಾ ।
ಜ್ಞಾವಿಸ್ತೀರ್ಣಪರಪ್ರಸಿದ್ಧಮಹಿಮಾದಾ ಕಾಂತೆ ಕಣ್ಗಪ್ಪಳ್' ॥ ೧೫೭

ದಿವಸಶ್ರೀ ದೊರೆಕೊಂಡ ಚಕ್ರಮಿಥುನಂ ಚಂದ್ರಾತಪೋದಗ್ರವೈ ।
ಭವದೊಳ್ ಸಂದ ಚಕೋರಕಂ ಪತಿಪಯೋಜಾತಾರಕಂ ತಾಣನಾ ॥
ದ ವಿರಾಜತ್ಕಲಹಂಸಯುಗ್ಮಮೆನೆ ಕೂಡೆ ಕ್ರೀಡಿಸುತ್ತಿರ್ಪರು ।
ತ್ಸವದಿಂ ರೂಢಿಯ ವಾಯುವೇಗೆಯೆನಿಸಿರ್ಪಾದೇವಿ ಭೂವಲ್ಲಭರ್' ॥ ೧೫೮

ವಾಸವಸೌಖ್ಯನಾಖಚರರಾಜನುವಾಪೆಸರ್ವೆತ್ತ ವಾಯುವೇ ।
ಗಾಸತಿಯುಂ ಮಹತ್ಪುಣ್ಯಕೃತಸತ್ಫಲದಿಂ ಪಡೆದರ್ಕಕೀರ್ತಿಯೆಂ ॥
ಬಾಸುತನುಂ ಸ್ವಯಂಪ್ರಭೆಯೆನಿಪ್ಪ ಕುಮಾರಿಯನೀಕ್ಷಿಸುತ್ತೆ ಲೀ ।
ಲಾಸಹಚಿತ್ತರಾಗಿ ನಲವಿಂ ನೆಲೆವೆರ್ಚುವರಿಂತು ಸಂತತಂ ॥ ೧೫೯

ಉದಯಾರ್ಕಬಿಂಬನೋಡಿದ ।
ವುದಯಾಚಳಚಕ್ರಮಿಥುನದಂತಿರೆ ಮುದದಿಂ ॥
ಪುದದಿರ್ಪರರ್ಕಕೀರ್ತಿಯ ।
ವದನಮನೀಕ್ಷಿಸಿ ಧರಾಧಿಪತಿಯುಂ ಸತಿಯುಂ ॥ ೧೬೦

ಎಸೆವ ಶಶಿಪ್ರಭೆಯನಭೀ ।
ಕ್ಷಿಸಿದಂಬುಧಿಯಂದದಿಂ ಸ್ವಯಂಪ್ರಭೆಯನಭೀ ॥
ಕ್ಷಿಸಿ ಪರಮಹರ್ಷದಿಂ ಶೋ ।
ಭಿಸುವರ್ ಖಚರಾಧಿಪತಿಯುಮಾನೃಪಸತಿಯುಂ ॥ ೧೬೧

ಕವಿತಾಗೋಷ್ಠಿಯೊಳೊರ್ಮೆ ತಜ್ಜಿನಪುರಾಣಶ್ರೇಣಿಯಿಂದೊರ್ಮೆ ತ ।
ತ್ಪವಿಚಾರಂಗಳನೊರ್ಮೆ ಚಾರುಚರಿತಾದ್ಯಾಲೋಕದಿಂದೊರ್ಮೆ ಹಾ ॥

ಸ್ಯವಿನೋದಂಗಳನೊರ್ಮೆ ಮೋಹನಮಹಾಸಂಗೀತದಿಂದೊರ್ಮೆ ಶ ।
ಸ್ತ್ರವರಾಭ್ಯಾಸದಿನೊರ್ಮೆ ಪೊತ್ತುಗಳೆವಂ ವಿದ್ಯಾಧರಾಧೀಶ್ವರಂ ॥೧೬೦

ವ॥ ಮತ್ತಮಾವಿಯಚ್ಚರೇಂದ್ರಂ ಸುತಾವ್ರಮದಿಶಾದ್ರಿಯಂತೆ ಮಿತ್ರ
ಮುಂಡಳಾನುರಾಗನುಂ। ದಿನಕರತನಯನಂತೆ ದುರ್ಯೋಧನಪ್ರಿಯನುಂ। ಪೌ
ರ್ಣಮಿಪ್ರಾಪ್ತದಿನನಂತೆ ಸಕಲರಾಜಾಭಿರಾಜಿತನುಂ। ಮರುದ್ದಿಶಾಧರೆಯಂತೆ
ಮಹಾಬಲಸಮನ್ವಿತನುಂ। ವೈವಸ್ವತಸುತನಂತೆ ವಿಜಯಾಳಂಕೃತನುಂ। ಶರನಿ
ಧಿಯಂತೆ ಶರಣಾಯಾತಕುಭೃತ್ಸಮಾವೃತನುಂ। ವಿನತಾಪತ್ಯನಂತೆ ವಿಯಚ್ಚರ
ಕುಲಾಗ್ರೇಸರನುಂ। ಸುಪರ್ವಪರ್ವತಾಗ್ರದಂತೆ ಕ್ಷ್ಮಾಧರನುಮಾಗಿರ್ಪನಂ
ತುಮಲ್ಲದೆಯುಂ—

ತ್ರಿಜಗದ್ವ್ಯಾಪ್ತಮಾಗೆ ತೇಜದೆಸಕಂ ಧರಿತ್ರೀಕುಲಚ್ಛತ್ರಾಯೆಯೊಳ್ ।
ನಿಜದಿಂ ತಣ್ಣನಿರಲ್ಕೆ ರಾಜರಮೆ ವಕ್ಷೋರಂಗದೊಳ್ ಲಕ್ಷ್ಮಿ ಶು ॥
ಕ್ತಿಜಹಾರಪ್ರಭೆಯುಂತಿರೊಪ್ಪೆ ಭುಜದೊಳ್ ಕೇಯೂರಶೃಂಗಾರದಂ ।
ತೆ ಜಯಶ್ರೀ ನಿಲೆ ನಿತ್ಯಮಿಂತೆಸೆವನಾವಿದ್ಯಾಧರಾಧೀಶ್ವರಂ ॥ ೧೬೧

ಧರೆ ವಿದ್ವಿಷ್ಪ್ರಭಯವ್ಯಪೇತಮಖಿಳಾರ್ತಿವ್ರಾತಮೆಂದುಂ ವಿಯ ।
ತ್ಪರಿಪೀಡಾರಹಿತಂ ಪ್ರಜಾಳಿ ಕರಬಾಧಾವರ್ಜಿತಂ ಸಜ್ಜನೋ ॥
ತ್ಕರಮಾನಂದಸುಧಾಮಯಂ ಪರಿಜನಂ ಹರ್ಷಾತ್ಮಮಾಗಲ್ ವಿಯ ।
ಚ್ಚರಚಕ್ರಾಧಿಪನಿಂತು ತಾನರಸುಗೆಯ್ಯುತ್ತಿರ್ಪನುತ್ಸಾಹದಿಂ ॥ ೧೬೨

ಪದೆಪಿಂದೊಪ್ಪಿರ್ಪನೋರಂತಖಿಲವಿಬುಧವಿದ್ಯಾಪ್ರಸಂಗಾದಿಶೋಭಾ ।
ಸ್ಪದನಾಜ್ಞಾಹೃದ್ಯವಿದ್ಯಾಧರಕುಲತಿಲಕಂ ದುರ್ಮದಾರಾತಿಭೂಭೃ ॥
ದ್ಭಿದುರಂ ಕಲ್ಪದ್ರುಮಾಧಿಕೃತವಿತರಣನಕ್ಷ್ಮಾಣಿಕೀರ್ತಿಪ್ರಭಾಕೀ ।
ರ್ಣದಿಶಾಚಕ್ರಂ ಸಮುತ್ಸಾರಿತದುರಿತಬಳಂ ಸೂಕ್ತಿಸಂದರ್ಭಗರ್ಭಂ ॥೧೬೩

— ಗದ್ಯ —

ಇದು ವಿನಮದಮರೇಂದ್ರಮೌಳಿ ಮಣಿಕಿರಣಮಾಲಾಪರಾಗಪರಿರಂಜಿತಚರಣ
ಸರಸೀರುಹರಾಜಿತ ಪರಮಜಿನರಾಜಸಮಯಸಮುದಿತಸದಮಲಾಗಮಸುಧಾಶರಧಿ
ಶರದಿಂದು ಶ್ರೀಮಾಘಣಂದಿಪಂಡಿತಮುನೀಶ್ವರ ಮನೋಜನಿಶನಿರುಪಮದಯಾ
ಸರಸಿಸಂಭೂತಸಂಭವಾಮಳ ಸುಕವಿಕಮಲಭವ ವಿರಚಿತಮಪ್ಪ

ಶಾಂತೀಶ್ವರಪರಮ ಪುರಾಣದೊಳ್

ಜ್ವಲನಜಟಿಮುಹಾರಾಜ ರಾಜ್ಯಲಕ್ಷ್ಮೀವಿಳಾಸವರ್ಣನಂ, ಪ್ರಥಮಾಶ್ವಾಸಂ

ದ್ವಿತೀಯಾಶ್ವಾಸಂ

ಶ್ರೀವಕ್ಷದೊಳಮಳವಚ ।
ಶ್ರೀವದನದೊಳಗಲದಿರೆ ವಿಯಚ್ಚರವಂಶ ॥
ಶ್ರೀವರನೆಸೆದಂ ವಿಶದಯ ।
ಶೋವಿಭು ಜಿನಪದಪಯೋಜಮತ್ತ ಮರಾಳಂ ॥ ೧

ಸತತಂ ವ್ಯಾವೃತಮಿತ್ರರಾಜನಯದಿಂ ಭೂಸ್ವನ್ಮಹೀಭೃತ್ಕುಳಾಂ ।
ಚಿತದಿಂ ಸುತ್ತಿ ವಿರಾಜಿಸಿರ್ಪ ಸುಮನಸ್ಸಂತಾನದಿಂದುನ್ನತೋ ॥
ನ್ನತಕಲ್ಯಾಣವಿಲಾಸದಿಂ ಸೊಗಯಿಸಿರ್ಪಾ ಮೇರುವಂ ಪೋಲ್ತು ವಿ ।
ಶ್ರುತತೇಜಂ ಖಚರಾಧಿರಾಜನೊಲವಿಂದೊಡ್ಡೋಲಗಂಗೊಟ್ಟರಲ್ ॥ ೨

ಆ ಸಮಯದೊಳ್—

ಅವನಿತಳಾಲಿಂಗಿತವಿವು ।
ಳವಪ್ರನಿರ್ಟಿಲಘಟಿತಕರಕುಟ್ಮಳನಾ ॥
ಗಿ ವಿರಾಜಿಸುತೆಚ್ಚಾರುಷಿ ।
ನಿವೇದಕಂ ವಿನಯದಿಂದಮಿರದಿಂತೆಂದಂ ॥ ೩

ತನಿವೆಳ್ದಿಂಗಳ ಬಳಗಂ ।
ಮುನಿಮೂರ್ತಿಯನಾಂತುದೆನೆ ನಿಜಾಂಗಪ್ರಭೆ ನೆ ॥
ಟ್ಟನೆ ಕುಡಿಯಿಡುವ ಜಗನ್ನಂ ।
ದನರಭಿನಂದನರೆನಿಪ್ಪ ಚಾರಣಋಷಿಯರ್ ॥ ೪

ಪೊಳೆವಚಾ ತ್ರೀಯಕಾಯಪ್ರಭೆ ವನತಿಮಿರಸೋ ತ್ತೀವಮಂ ತೂಳ್ದಿ
[ಚಂದೊ ।
ಪಳದುದ್ಯತ್ಪಟ್ಟಪಾಷಾಣದೊಳವಿಚಳದೆನ್ನಿಂದು ಕೆಯ್ಯಿಕ್ಕಿ ಶುದ್ಧಾ ॥
ಚಳಶುಭ್ರಧ್ಯಾನವೂಢಂ ನೆಲಸಿ ಪುಳಕವೂಳಾವಯೂಂಗರ್ ಮುದಶ್ರೂ ।
ಚ್ಚಳದೀಪನ್ನೀಲಿತಾಕ್ಷರ್ ವಿಳಸದನಘರಿಂತಿರ್ದರಾಯೋಗಿವರ್ಯರ್ ॥ ೫

ಮುನಿಪರಮರಿಂತು ನಮ್ಮಯ ।
ಮನೋಹರಧ್ಯಾನದೊಳ್ ಶುಭಧ್ಯಾನಮಯೋ ॥

ನ್ಮನರಿರ್ದಪರವಧರಿಸುವು ।
ದೆನುತುಂ ಬಿನ್ನವಿಸೆ ಋಷಿನಿವೇದಕನಾಗಳ್ ॥ ೬

ಆರುಷಿನಿವೇದಕವಚನಪೀಯೂಷಪೂರದಿಂ ಪುಳಕಪೂರಿತಗಾತ್ರನುಂ ಹರ್ಷಾಶ್ರುಜಲವಿಲುಳಿತನೇತ್ರನುವಾಗಿ

ವಿನಯದಿನಿದಿರೆಟ್ಟಿರ್ದೀಡಿ ।
ಯನೆ ನಡೆದಾದೆಸೆಗೆ ನಿಂದು ಖೇಚರಪತಿ ಭೋಂ ॥
ಕೆನೆ ಕರಸರಸಿಜಕುಟ್ಮಲ !
ವಿನಿಹಿತವಿಲಸಲ್ಲಲಾಟಮಂಡಳನಾದಂ ॥ ೭

ಇಂತು ವಿಯಚ್ಚರೇಂದ್ರನಾನಂದಭರಿತಾಂತರಂಗನುವಾಗಿ ಮುಂಗಳಾನಕಮುಂ ಪೊಯ್ಸುವಾಗಳ್—

ಗಣನಾತೀತಚತುರ್ಬಲಂ ಬರೆ ಸುಪುತ್ರಾಂತಃಪುರಂ ಖೇಚರಾ ।
ಗ್ರಣಿಯೆಟ್ಟಿಂದು ಮನೋಹರಾಹ್ವಯಮನಕ್ಕುದ್ಭೂತಸದ್ಭಕ್ತಿ ಭೂ ॥
ಷಣನಾಗಳ್ ಮುದಮುರ್ವಿ ಮೂಮೆ ಬಲವಂದುರ್ವೀವರರ್ ಕೂಡಿ ಚಾ।
ರಣಯೋಗೀಂದ್ರಪದಾಂಬುಜಕ್ಕೆಱಗಿದಂ ಪೊಣ್ಮಲ್ ನವೋತ್ಸ್ವ ಸ್ವರಂ॥ ೮

ಚರಣಾಗ್ರಧರಣಿಯೊಳ್ ನಿಜ ।
ಕಿರೀಟತಾರಾಂಶುನಿವಹನವಕೌಮುದಿಯಂ ॥
ಪರಪಿದ ಖಚರಾಗ್ರಣಿಯಂ ।
ಪರಸಿದರಾಚಾರಣವ್ರತೀಶರ್ ದಯೆಯಿಂ ॥ ೯

ಕರವೊಸೆದ ಚಾರಣರ್ ನೃಪ ।
ವರನಂ ಪರಸುವ ಸುಧರ್ಮವೃದ್ಧಿನಿನಾದಂ ॥
ಪಿರಿದ್ಮಂ ಗೆಲೆವಂದುದು ಹಿಮು ।
ಗಿರಿಸಂಭವದಿವಿಜನದಿಯ ಮುಧುರಧ್ವನಿಯಂ ॥ ೧೦

ಇಂತು ಪರಿಲಬ್ಧಪರಮಾಶೀರ್ವಚನಸಂಚಿತನುಂ ತನ್ಮಖೋದಿತನಿರ್ಮಲಧರ್ಮಶ್ರವಣಾಲಂಕೃತನುಂ ಸಮ್ಯಕ್ತ್ವಯುಕ್ತಶ್ರಾವಕವ್ರತಗುಣನಿಗಳಸ್ವೀಕೃತನುವಾಗಿ ರಾಗದಿಂ ಮುನಿಪದಪಯೋಜಯುಗಮಂ ಪೂಜಿಸಿ ಬೀಳ್ಕೊಂಡು ನಿಜಪುರಪ್ರವೇಶನುಂ ಮಾಡಿ ರೂಢಿಯಿಂ ಖಚರಪತಿ ನಿರಂತರಸುಖದಿನಿರುತ್ತುಮಿರೆಯುಂ—

ದಿನಮೆಲ್ಲಂ ನಿಯಮವ್ರತಕ್ಕೆ ನೆಱೆಯಿತ್ತಿಲ್ಲೆಂಬ ಸತ್‌ಖ್ಯಾತಿ ನೆ ।
ಟ್ಟನೆ ತನ್ನೊಳ್ ನಿಜವಾಯ್ತೆನಲ್ಕೆ ನೆಗಟುತ್ತುಂ ಶ್ರಾವಕಾಚಾರಮಂ ॥
ಜಿನರಾಜಸ್ತವನತ್ರಯಂಗಳನೆ ಜಿಹ್ವಾಧೀನಮಂ ಮಾಡಿ ಪಾ ।
ವನರತ್ನತ್ರಯಭೂಷಿಯಾದನರಸಂ ಧನ್ಯಂ ಪೆಱರ್ ಧನ್ಯರೇ ॥ ೧೧

ಜೈನೋಪಾಧ್ಯಾಯಂ ಪೆಱ ।
ತೀನೀಖಚರೇಂದ್ರನೆಂಬ ರೂಢಿಗೆ ಪಿರಿದುಂ ॥
ತಾನೆ ನೆಲೆಯಾಗಿ ನೆಗಟು ।
ತ್ತಾನಂದದೊಳಿರುತಿರಲ್ಕೆ ಮತ್ತೊಂದುದಿನಂ ॥ ೧೨

ಶುಭಮಯಲಕ್ಷಣೋದಯತನುಪ್ರಭೆ ಮೋಹನಸತ್ಕಳಾವಳೀ ।
ಪ್ರಭೆ ಮಧುರಾವನೀಕನಕನಪ್ರಭೆ ಕಂತುವ ಖಡ್ಗವಲ್ಲರೀ ॥
ಪ್ರಭೆ ಜಿನವಾರ್ಗವಾರ್ಧಿಸಿತರುಕ್ಪ್ರಭೆಯೆಂದೆನೆ ಶೋಭಿಪಾಸ್ವಯಂ ।
ಪ್ರಭೆ ಪೆಸರ್ವೆತ್ತ* ಪರ್ವದುಪವಾಸದೊಳರ್ದಳತಿಪ್ರಭಕ್ತಿಯಿಂ ॥ ೧೩

ದಿನನಾಥಂ ಜಿನನಾಥಪೂಜೆಗೆಯೆಮೆಟ್ಟರ್ಪಂತಿರೈಂದ್ರೀದಿಶಾ ।
ವನಿಭೃಚ್ಛೃಂಗಮನೇಱಿ ತನ್ನವುಳಹೃತ್ಪ್ರೀತಾಗ್ರಮಂ ಖೇಚರಾ ॥
ವನಿಭೃನ್ನಂದನೆಯಾಸ್ವಯಂಪ್ರಭೆ ಲಸನ್ನಾನಾನಕಧ್ವಾನಮು ।
ಸ್ಮೇ ನವೀನಾರ್ಚನೆಯಿಂದಮರ್ಚಿಸಿದಳಿಂತಾರ್ಹಂತ್ಯಲಕ್ಷ್ಮೀಶನಂ ॥ ೧೪

ಮುಂದರಮುಂ ಬಲವರ್ಧಮು ।
ಲೇಂದುಕಲಾಲಕ್ಷ್ಮಿಯಂತೆ ಜಿನರಾಜನುಹಾ ॥
ಮುಂದಿರಮುಂ ಖಚರಾಧಿಪ ।
ನಂದನೆ ಬಲವಂದಳಾಸ್ವಯಂಪ್ರಭೆ ಪದೆಪಿಂ ॥ ೧೫

ಬಂದನುರಾಗದಿಂ ಜಿನಮುನೀಶ್ವರರಂ ಗುರುಭಕ್ತಿ ಪೂರ್ವಕಂ ।
ಬಂದಿಸಿ ಗಂಧಶೇಷೆಯನೆ ಕೊಂಡು ಮನೋಜನ ವಶ್ಯಸಸ್ಯಮೆಂ ॥
ಬಂದದೆ ರೂಪು ಶೋಭೆ ಜಗಮುಂ ಮಿಗೆ ಮೋಹಿಸೆಯುಂ ಸ್ವಯಂಪ್ರಭಾ ।
ಸೌಂದರಿ ತಂದೆಯೋಲಗಕೆ ತಾಂ ಬರುತಿರ್ದಳದೊಂದು ಲೀಲೆಯಿಂ ॥ ೧೬

ಸ್ಮರಶರಕಾಂತೆ ಕತ್ತಲೆಯ ಜೊನ್ನದ ಪೆರ್ಮಱೆಯಂ ನಿವಾರಿಸ ।
ಲ್ಕರದೆಡೆವೊಕ್ಕಳೆಂದೆನೆ ಲತಾಂಗದ ಸೌರಭದೊಂದಲಂಪು ಮಿ ॥

ಕ್ಕಿರೆ ಬಿಟ್ಟಿವರ್ಪ ತುಂಬಿಗಳ ಕಣ್ಗಳ ಕಾಂತಿಯು ತಟ್ಟಿ ಮುಧ್ಯದೊಳ್ ।
ಬರುತಿರಲಾಸ್ಯಯಂಪ್ರಭೆ ಕುವರಿ ಮದಾಲಸಯಾನಲೀಲೆಯಿಂ ॥ ೧೬

ಜ್ವಲನಜಟಿನ್ನಪವರಂ ಕ ।
ಣ್ಮಲರಾಱಿ ನಿರೀಕ್ಷಿಸುತ್ತುಮಿರೆಯಿರೆ ಸಾರ್ತಂ ॥
ದಲರಂಬನ ಸಮ್ಮೋಹನ ।
ಶಲಾಕೆಯೆನೆ ನೃಪಕುವರಿ ಸಭೆಯಂ ಪೊಕ್ಕಳ್ ॥ ೧೭

ಪರಿಮಳಲೋಭದಿಂ ಮಸುಳ್ದು ಬರ್ಪಳಿವಾಲಿಯನೆಯ್ದಿ ಸೋವುತುಂ ।
ಕರಧೃತರತ್ನಭಾಜನದೊಳಂತಭಿರಾಜಿಪ ಗಂಧಶೇಷೆಯುಂ ॥
ತರುಣಮೃಗಾಕ್ಷಿಯಾತರುಣಿ ನೀಡಿದಳಾದರದಿಂ ಕರಾಬ್ಜದೊಳ್ ।
ಧರಿಯಿಸಿ ತಾಳ್ದಿದಂ ತಡೆಯದಾತ್ಮಕಿರೀಟದೊಳುರ್ವರೀಶ್ವರಂ ॥ ೧೮

ಪದೆಪಿಂ ತನ್ನೆಯೆ ಸಾರ್ಗೆವಂದ ಸುತೆಯುಂದಾಶ್ಚರ್ಯಸೌಂದರ್ಯಸಂ ।
ಪದಮುಂ ಶ್ರೀಜಿನಪಾದಭಕ್ತಿಯೊದವಂ ಕಂಡಾನುಹೋತ್ಸಾಹಮು ॥
ಗ್ಗದ ರೋಮಾಂಚದ ಸಾಲನೆತ್ತುತಿರೆ ತಾನೊಲ್ದೆತ್ತಿ ವಾನುಾಂಕಪೀ ।
ಠದೊಳಾಗಳ್ ತಳೆದಂ ಸ್ವಯಂಪ್ರಭೆಯನಾಜ್ಞಾಶ್ರೀವರಂ ಭೂವರಂ ॥ ೧೯

ಎಸೆವಮೃತಾಂಶುಬಿಂಬಮಣಿಶಾಣದೊಳಂತು ಬಸಂತಗಮ್ಮಿಂ ।
ಮಸೆದು ಪಳಚ್ಚನಾಗಿ ತಳಪೆತ್ತಿದ ಕಾಮನ ಪಡ್ಗದಂತೆ ವೋ ॥
ಹಿಸಿತೆನಸುಂ ಸ್ವಯಂಪ್ರಭೆಯ ರೂಪವಿಲಾಸದ ಪಾಳಿ ಕೌಮುದೀ ।
ಪಸರದಗುರ್ವು ಪರ್ದುಪವಾಸದ ಶೋಷತೆವೆತ್ತ ಗಾತ್ರದೊಳ್ ॥ ೨೦

ಪ್ರತಿಪತ್ಸುಧಾಂಶುಕಲೆಯಂ ।
ಸತಿಯು ಶುಭೋನ್ನತಿಯನಪ್ಪುಕೆಯ್ದುದು ಭೂಭೃ ॥
ತ್ಸುತೆಯು ನಿರುಪಮಸುರೂಪೋ ।
ನ್ನತಿ ನೆಗಟ್ದುಪವಾಸಕೃಶತೆವೆತ್ತಾಕೃತಿಯೊಳ್ ॥ ೨೧

ಇಂತು ಸಕಲಸಭಾಜನವುಭಿವರ್ಣಿಸುವ ವರ್ಣನಂ ನೈಜವಾದ ತನುಜೆಯ ಮೊಗವಮಂ ನೋಡಿ ಮುದವುಮ್ಮೆ ಮುಹುರ್ಮುಹುರಾಲಿಂಗನಂ ಗೆಯ್ದು ಪಾರಣಾತಿಕ್ರಮವಾಗಲಾಗದು ಬೇಗದೊಳ್ ಪೋಗೆಂದು ಕುವರಿಯಂ ಕಳಿಪಿ ಋಚರೇಶ್ವರಂ ಸ್ವಕೀಯಮಂತ್ರಿಗಳಂ ನಾಲ್ವರಂ ಬರಿಸಿ,

ಪರಿಣಯನಮುಂಗಳಾಲಂ ।
ಕರಣಮನಾಚರಿಸಲಾದಳಾತ್ಮಜೆಯೆಂದಾ ॥
ದರದಿಂ ಭಾವಿಸಿ ನಿಜಸಜೆ ।
ವರ ಪೊಗಮಂ ನೋಡಿದಂ ನಭಶ್ಚರರಾಜಂ ॥ ೨೩

ಆವಿಯಚ್ಚರಪತಿಯ ಭಾವಾಲೋಕನಮನಱಿದು ಸುಶ್ರುತನುಂತ್ರಿ
ಯಿಂತೆಂದಂ :—

ಆವಿಸ್ತಾರೋತ್ಕರಶ್ರೇಣಿಯೊಳೆಸೆವಳಕಾಪೌರನಾಥಂ ಮಯೂರ ।
ಗ್ರೀವಂ ನೀಲಾಂಜನಾಭಾಮಿನಿಯ ವರಸುತರ್ ಖ್ಯಾತಿವೆತ್ತೈವರಶ್ವ ॥
ಗ್ರೀವಂ ಜ್ಯೇಷ್ಠಾತ್ಮಜಂ ನೀಲರಥನನುಪಮಂ ನೀಲಕಂಠಂ ಸುಕಂಠಂ ।
ಭೂವಂದ್ಯಂ ವಜ್ರಕಂಠಂ ನೆಗಟ್ದಿರೆ ನಿಜಸಾಮ್ರಾಜ್ಯದಿಂದೊಪ್ಪುತಿರ್ಪರ್ ॥

ಜನಕಂಗೈವಡಿ ಮೇಲೆನಲ್ ನೆಗಟ್ದನಶ್ವಗ್ರೀವನಾತಂಗಮಾ ।
ತನ ಚಿತ್ತಪ್ರಿಯಕಾಂತೆಯಾಕನಕಚಿತಾದೇವಿಗಂ ಪುಟ್ಟಿದರ್ ॥
ಘನಬಾಹಾಬಳದುರ್ವ್ಯದುರ್ವೆಸರ ರತ್ನಗ್ರೀವರತ್ನಾಂಗದರ್ ।
ವಿನತಾಜ್ಞಾನಿಧಿ ರತ್ನಚೂಳರಥರಾದ್ಯೈನೂರ್ವರುಂ ನಂದನರ್ ॥ ೨೪

ವಿಭವೋದ್ಯಾಸುರನರ್ಧಚಕ್ರಿಪದವೀಪ್ರಖ್ಯಾತನಾತಂಗಕಾ ।
ಲಭವಜ್ಞಂ ಶತಬಿಂದುವೆಂಬನೆ ನಿಮಿತ್ತಜ್ಞಂ ಹರಿಶ್ಮಶ್ರುವೆಂ ॥
ಬಭಿಧಾನೋತ್ತಮಮಪ್ಪ ಮಂತ್ರಿವೆಸರಶ್ವಗ್ರೀವನಿರ್ವಂ ಸ್ವಯಂ ।
ಪ್ರಭೆಯಂ ತತ್ಪಚರಂಗೆ ದೇವರೊಸೆದೀಯಲ್ವೇಟ್ಕುವೌತ್ಸುಕ್ಯದಿಂ ॥ ೨೫

ತನ್ನ ಮನಕ್ಕೈಯೆ ತೋಱದು ।
ದನ್ನೆಱೆ ಬಿನ್ನವಿಸುತಿರ್ದ ಸುಶ್ರುತಸಜೆವೋ ॥
ತ್ಪನ್ನವಚನಕ್ಕೆ ಮಱುಮಾ ।
ತನ್ನುಡಿಯದೆ ಸುಮ್ಮನಿರ್ಪುದುಂ ಖಚರವರಂ ॥ ೨೬

ಅದನಱಿದಾಗಳ್—

ಪಿರಿದುಂ ವಯೋಧಿಕಂ ಬಿ ।
ತ್ತರಿಪಶ್ವಗ್ರೀವನವನೆ ಬಾಹಾಬಲಮುಂ ॥
ಸಿರಿಯುಮದೇವಾರ್ತೆಯೆನು ।
ತ್ತರಸಂಗೆ ಬಹುಶ್ರುತಾಖ್ಯನಿರದಿಂತೆಂದಂ ॥ ೨೭

ಸರಿವರೆಯರ್ ಸಮರೂಪರ್ ।
ಸಿರಿವೆಂತರ್ ಗಗನವಲ್ಲಭಾಖ್ಯಪುರೀಸಿಂ ॥
ಹರಥಂ ಮೇಘಪುರೀಪ ।
ದ್ಮರಥಂ ಚಿತ್ರಾಖ್ಯಪುರದರಿಂಜಯಖಚರರ್ ॥ ೮೯

ತ್ರಿಪುರಿಯ ಲಲಿತಾಂಗಂ ಮೇಣ್ ।
ವಿಪುಲತೆವೆತ್ತ ಶ್ವಪುರಿಯ ಕನಕರಥಂ ರ ॥
ತ್ನಪುರಿಯ ಧನಂಜಯಂ ಸವು ।
ನೃಪರಾಗಿಯುಮನುವೆಸರ್ ಧರಾಧಿಪ ನವೊಳ್ ॥ ೯೦

ಇವರೊಳಗೆ ದೇವರೊರ್ವಂ ।
ಗೆ ವಿಚಾರಿಸಿ ಕುಡುವುದಿಂತು ಕುವರಿಯನೆಂದು ॥
ತ್ನವದಿಂ ಬಹುಶ್ರುತಂ ಬಿ ।
ನ್ನವಿಸುವ ನುಡಿಗುಸಿರದಿರೆ ವಿಯಚ್ಚರರಾಜಂ ॥ ೯೧

ಎನಿತಾನುಮಿದೊರ್ಡೋಂ ರೂ ।
ಟಿನ ಪಾಸಟಿಯಾಸ್ವಯಂಪ್ರಭಾದೇನಿಗೆ ಪೇ ॥
ಟಿನುತುಂ ಶ್ರುತಸಾಗರನೊ ।
ಯ್ಯನೆ ಮನದೊಳ್ ಭಾವಿಸುತ್ತುಮಿರದಿಂತೆಂದಂ ॥ ೯೨

ಮೊಗನೆನಿಪುದುತ್ತರಶ್ರೇ ।
ಣಿಗೆ ತಾನೆ ಸುರೇಂದ್ರಕಾಂತನಗರಂ ನೆಗಟ್ಟಿ* ॥
ನಗರಪತಿ ಮೇಘವಾಹನ ।
ನಗಣಿತಬಲನರಸಿ ಮೇಘಮಾಲಿನಿಯೆಂಬಳ್ ॥ ೯೩

ಚೇತೋಜಾತನ ಮೂರ್ತಿಗಾತನೆ ಮಿಗಿಲ್ ವಿದ್ಯುತ್ಪ್ರಭಾನಂದನಂ ।
ಜ್ಯೋತಿರ್ಮಾಳಿ ತನೂಜೆಯಂತವರ್ಗೆ* ಚೆಲ್ವಿಂ ಪಾಟಿಯಿಲ್ಲೆಂಬ ವಿ ॥
ಖ್ಯಾತೆ ತ್ರೈಜಗದೊಳ್ ಪೊದಟ್ಟಿರೆ ಮದಂಬೆತ್ತಿರ್ಪನಾಜ್ಞಾಬಲೋ ।
ಪೇತಂ ರೂಢಿಯು ಮೇಘವಾಹನನವೋಘಪ್ರಾಜ್ಯಸಾಮ್ರಾಜ್ಯದೊಳ್ ॥ ೯೪

ಮುದದಿಂದಿಂತು ಸಮಸ್ತರಾಜ್ಯರುಚಿರಶ್ರೀಯೊಳ್ ಪೊದಟ್ಟಿರ್ದದೊಂ ।
ದು ದಿನಂ ಪುತ್ರಸಮನ್ವಿತಂ ಜಿನಸದಾಂಭೋಜಾತಪೂಜಾನಿಮಿ ॥

ತ್ತದಿನಾಜ್ಞಾನಿಧಿ ಮೇಘವಾಹನಮಹಾವಿದ್ಯಾಧರಂ ಸಿದ್ಧಕೂ ।
ಟದ ವಿಖ್ಯಾತಿಯ ಚೈತ್ಯವಂದಿರಕೆ ತಾನೇಟ್ಟಿಂದನಾನಂದದಿಂ ॥ ೩೫

ಪರಿಕಿಪೊಡೆ ಮೇರು ತಾನ ।
ಚ್ಚರಿಯು ಮಹಾಮೇರು ತಾನೆನುತ್ತಮರಮಹೀ ॥
ಧರಮುಂ ಮಣಿಮಯದಿಂ ಮಾಂ ।
ಕರಿಸುವುದೌನ್ನತ್ಯಭಾಸಿ ಚೈತ್ಯನಿವಾಸಂ ॥ ೩೬

ಎಸೆವ ಮಹಾಮೇರುವೆನಿ ।
ಪ್ಪಸವೋನ್ನತಚೈತ್ಯಭವನಮುಂ ಬಲವರುತುಂ ॥
ಸಸುತಂ ಖಚರಾಧಿಪನೇ ।
ಟಿಸುತುಂ ಹಿಮತಿಗ್ಮಕರದ ಪರಿವರ್ತನಮುಂ ॥ ೩೭

ಇಂತು ಬಲವಂದು ಭಕ್ತಿಯಿನಿಂದು ನಿಸಿದಿಯೆಂದು ನಿವೇದಿತಚೈತ್ಯ ನಿವಾಸನುಮಾಗಿ ನಾನಾವಿಧಾರ್ಚನೆಗಳಂ ಪೂಜಿಸಿ ಪರಮಜಿನರಾಜನಂ ನುತಿಸಿ ನತನಾಗಿ ಮೇಘವಾಹನವಿಯಚ್ಚರೇಂದ್ರನಗಣಿತಮನೋನುರಾಗದಿಂ ದಾಗಳ್—

ತನುಕಾಂತಿವ್ರಾತನಂತರ್ಮುಖದಮಲಮಹದೊ೬ಧಮುಂಬೀಱಿ ಚೆತ್ತಂ।
ಘನಶಾಂತಿಶ್ರೀಯ ಸೈಪಂ ಪ್ರಕಟಿಸೆಯವಧಿಜ್ಞಾನಿ ತಾನಪ್ಪ ಭಾಸ್ವ ॥
ನ್ಮುನಿಧರ್ಮಾಚಾರ್ಯರಾಕ್ಷೇಸಡಿಗಡಿದಳಿರಂ ಮಾಡಿದಂ ನಾಡೆಯುಂ ಭೋಂ ।
ಕೆನೆ ತನ್ನುದ್ಯತ್ಕಿರೀಟಾರುಣಮಣಿವಿಳಸದೊ೬ಚೆಯಿಂ ಖೇಚರೇಂದ್ರಂ॥೩೮

ಅಭಿನವರತಿಪತಿ ವಿದ್ಯು ।
ತ್ಪ್ರಭನೆಸೆವಾತ್ಮೀಯವಯೌವನೋಕ್ತಿ ಕನಿಕರ ॥
ಪ್ರಭೆಯುಂ ಧರ್ಮಾಚಾರ್ಯನ ।
ಶುಭಪದನಖಕಿರಣವಿಸರದೊಳ್ ಪಸರಿಸಿದಂ ॥ ೩೯

ಮನದೊಳೊದವಿದ ದಯಾಮೃತ ।
ಮೆನಸುಂ ಪೊಱಪೊಣ್ಮೆ ನಿಮಿರ್ದುದೆನೆ ದಶನಮುಯೂ ॥
ಖನಿಕಾಯಮುಣ್ಮುತಿರೆ ಸ ।
ನ್ಮುನಿಧರ್ಮಾಚಾರ್ಯನೊಸೆದು ಪರಸಿದನಾಗಳ್ ॥ ೪೦

ಇಂತು ಪರಮಾಶೀರ್ವಚನಪರಿಲಬ್ಧನಾಗಿ ಮೇಘವಾಹನಂ ಧರ್ಮ
ಶ್ರವಣಾನಂತರಂ ಆಧರ್ಮಾಚಾರ್ಯರನೀವಿದ್ಯುತ್ಪ್ರಭಂ ತನ್ನ ಪೂರ್ವಜನ್ಮ
ಮುಂ ಪೇೞ್ವೆನಲವರಿಂತೆಂದು ಬೆಸಸಿದರ್ :—

ಪುದಿದೆಸೆವೀಜಂಬೂದ್ವೀ ।
ಪದ ಪೂರ್ವವಿದೇಹದಲ್ಲಿ ಪಿರಿದುಂ ಪೆಸರ್ವೆ* ॥
ತ್ತುದು ವತ್ಸಕಾವತೀವಿಷ ।
ಯದೊಳಪ್ರತಿಮಂ ಪ್ರಭಂಕರೀನಾಮಪುರಂ ॥ ೪೧

ಆಪುರದ ನಂದನೆಂಬ ಮ ।
ಹೀಪತಿಗಂ ವಿಜಯಸೇನೆಗಂ ಜನಿಯಿಸಿದಂ ॥
ರೂಪವಿಲಾಸದೆ ಸುಮನ ।
ಶ್ಚಾಪಂ ತಾನೆನಿಸಿ ವಿಜಯಭದ್ರಕುಮಾರಂ ॥ ೪೨

ಪದೆಪಿಂ ಮನೋಹರೋದ್ಯಾ ।
ನದೊಳೊರ್ಮೆ ವಿಹಾರಿಸುತ್ತುಮಾವ್ರಕುಜಂ ಬೀ ॥
ತುದನದನೀಕ್ಷಿಸಿ ವೈರಾ ।
ಗ್ಯದ ಸಿರಿಯಂ ತಳೆದು ವಿಜಯಭದ್ರಕುಮಾರಂ ॥ ೪೩

ವರವೈರಾಗ್ಯಸಹಾಯರಪ್ಪರಸುಗಳ್ ನಾಲ್ವಾಸಿರಂಗೂಡಿ ಸಾ ।
ದರದಿಂದಾಪಿಹಿತಾಶ್ರವವ್ರತಿಸದಾಂಭೋಜಾತದೊಳ್ ದೀಕ್ಷೆಗೊಂ ॥
ಡಿರುತುಂ ನೆಟ್ಟನೆ ಪತ್ತು ವಿಟ್ಟು ತನುವಂ ಮಾಹೇಂದ್ರಕಲ್ಪಪ್ರಭಾ ।
ಸುರದಾಶುಕ್ರವಿಮಾನದೊಳ್ ವಿಜಯಭದ್ರಂ ತಾಳ್ದಿ ದೇವತ್ವಮಂ ೪೪

ಸುರಸೌಖ್ಯಂಗಳನುಂಡು ಸಪ್ತ ಶರಧಿವ್ರಾತೋಪಮಾಯುಷ್ಯನಾ ।
ಗಿರದಲ್ಲಿಂದಮೆ ಬಂದು ನಿನ್ನುದರದೊಳ್ ವಿದ್ಯುತ್ಪ್ರಭಂ ಪುಟ್ಟಿದಂ ॥
ಚರಮಾಂಗೋದ್ಧತನೀತನೆಂದೊಸೆದು ಧರ್ಮಾಚಾರ್ಯನಾದ್ಯಂತಮಂ ।
ಪಿರಿದುಂ ಪೇೞ್ದೊಡೆ ಮೇಘವಾಹನನದಂ ಕೇೞ್ದೆಯ್ದಿದಂ ಲೀಲೆಯಿಂ ॥ ೪೫

ಇದನಾನುಂ ನೆರೆ ಕೇೞ್ದುಮಾಸಮಯದೊಳ್ ಜೈನಾಂಘ್ರಿಪೂಜಾನಿಮಿ।
ತ್ತದೆ ಪೋಗಿರ್ದದಱಿಂ ಸ್ವಯಂಪ್ರಭೆಯನಾವಿದ್ಯುತ್ಪ್ರಭಂಗೀವುದ ॥
ಗ್ಗದ ಸೌಂದರ್ಯದಿನರ್ಕಕೀರ್ತಿಗೆಣೆ ಜ್ಯೋತಿರ್ಮಾಲೆಯಂತಪ್ಪುದ ।
ಪ್ಪುದೆನುತ್ತುಂ ಶ್ರುತಸಾಗರಂ ನುಡಿಯೆ ಭೂಪಂ ಮೋನದಿಂ ತಾನಿರಲ್‌॥೪೬

ಇಂತು ನುಡಿದ ಶ್ರುತಸಾಗರನ ವಚನಮಂ ಕೇಳ್ದು ಸುಮತಿಸಚಿವ ನಿಂತೆಂದಂ :—

ನಿರುತಂ ನಿಮ್ಮಯೆ ಮೂವರುಂ ನುಡಿಯದೊಳ್ಳತ್ತಪ್ಪುದಂತಾದೊಡೇಂ ।
ಧರೆಯೊಳ್ ಪುತ್ರಕುಲಕ್ಕೆ ಶತ್ರುತೆಯದೆಂದುಂ ಪುಟ್ಟ್ದಿದಂತೀಶ್ವಯುಂ ॥
ವರಮುಂ ಮಾಡುವಮೆಂಬುದುಂ ಸುಮತಿಯೆಂದಂತಾಗಳಾತಮ್ಮ ನಾ ।
ಲ್ವರುಮೇಕೀಮತರಾಗಿ ಬಿನ್ನವಿಸಿದರ್ ಭೂಪಂಗೆ ತತ್ಕಾರ್ಯಮಂ ॥ ೪೩

ಅದಂ ಕೇಳ್ದಿಂತೆಗೆಯ್ವಮೆಂದು ಮಂತ್ರಿಗಳಂ ತಾಂಬೂಲದಾನಪುರಸ್ಸರಂ ಮನ್ನಿಸಿಬೀಳ್ಕೊಟ್ಟು ಒಲಿಕ್ಕಮಾಖಚರೇಂದ್ರಂ ಮನದೊಳಿಂತೆಂದಂ:

ಎನ್ನ ಸುತೆಗಸ್ವಿತರೊಳಾ ।
ವನ್ನಿಜಪತಿಯಕ್ಕುಮದನೆ ನೈಮಿತ್ತಿಕನಿಂ ॥
ದಿನ್ನಱಿದಪೆನೆನುತುಂ ಸಂ ।
ಭಿನ್ನಶ್ರೋತೃವನೆ ಬರಿಸಿದಂ ಖಚರವರಂ ॥ ೪೪

ತನ್ನಂಗಪ್ರಭೆ ತಪ್ತರುಕ್ಮರುಚಿಯಂ ಕೀಟ್ಮಾಡೆ ಯಜ್ಞೋಪವೀ ।
ತನ್ನೀಳ್ದರ್ಪ ಲಲಾಟನೂರ್ಧ್ವತಿಲಕಂ ಶುಭ್ರಾತುಲಶ್ಮಶ್ರು ಕೂ ॥
ರ್ಚನ್ನೇಪರ್ಪಟ್ಟರಲುಟ್ಟ ಬಾಸರದ ಬಂಬಲ್ ಡೊಳ್ಳು ಚೆಲ್ವಾಗೆ ಸಂ ।
ಭಿನ್ನಶ್ರೋತೃಧರಾಮರಂ ನೃಪತಿಗಾಶೀರ್ವಾದಮುಂ ಮಾಡಿದಂ ॥ ೪೫

ಅವಿಭಿನ್ನಾಯತಕುಡ್ಯವಪ್ರತಿರವಂ ಕಕ್ಷಾಲಯಾನೀಕಯು ।
ಕ್ತವಿಶಾಲಂ ಗೃಹಶಾರಿಕಾದಿಶಕುನಿವ್ರಾತವ್ಯಪೇತಂ ಗವಾ ॥
ಕ್ಷವಿದೂರಂ ಚತುರಂಗಮುಂತ್ರವಿಳಸಚ್ಚಿತ್ರಾಂಗದೇಕಾಂತಸ ।
ದ್ಮವನಾತ್ಮೀಯಜನಾವಳೀಪರಿವೃತಂ ಸಾರ್ತಂದನಂದಾನೃಪಂ ॥ ೪೬

ಸನ್ಮದದಿಂ ಪೊಕ್ಕಾಗಳ ।
ತನ್ಮಂದಿರದೊಳಗೆ ರೋಹಣಾಚಳಮೆನಿಪು ॥
ದ್ಯನ್ಮಣಿಮಯವಿಷ್ಟರವಿಳ ।
ಸನ್ಮಸ್ತಕರತ್ನವಾದನಾಖಚರೇಂದ್ರಂ ॥ ೪೭

ಆಸಂಭಿನ್ನಶ್ರೋತೃವ ।
ನಾಸನ್ನಾವನಿಹಿತಂ ಸವಾನಾರ್ಘ್ಯಜೆ ॥

ತ್ಯಾಸನನದಾಗಿ ಖಚರಾ ।
ಗ್ರೀಸರನಿರದಿತ್ತನಟ್ಟಿಯಿಂ ವೀಳೆಯಮುಂ ॥ ೫೦

ನುಣ್ಣಱಿಯಿಲ್ಲದ ವಿಧುವಿಂ ।
ತಣ್ಣಿದಿರೊಗೆವಂತೆ ವಿನುಳಮುಖಮುಂಡಳದಿಂ ॥
ಕಣ್ಗೊಳಿಸೆ ದಂತಕಾಂತಿ ಪ ।
ವಣ್ಣಿಳದುಳ್ಕಲ್ಕೆ ಖಚರವರನಿಂತೆಂದಂ ॥ ೫೧

ಮತ್ಸುತೆಗಾವಂ ಪತಿ ಭೂ ।
ಭೃತ್ಸುತರೊಳಗಕ್ಕುಮದನೆ ಪೇೞಿಮೆನಲ್ಕಾ ॥
ನುತ್ಸವದಿಂ ನೈಮಿತ್ತಿಕ ।
ನುತ್ಸಾರಿತಮತ್ಸರಾಗನಿರದಿಂತೆಂದಂ ॥ ೫೨

ದೇವ ಭವತ್ಸುತೆಗೆಸೆವ ಮ ।
ನೋವರನಾಪ್ರಥಮಕೇಶವಂ ತಾನಪ್ಪಂ ॥
ಭಾವಿಸಿ ಕೇಳ್ವೊಡೆ ಪೇೞ್ದಪೆ ।
ನಾವೃತ್ತಾಂತಮನೆನುತ್ತುಮಭಿಮುಖನಾದಂ ॥ ೫೩

ಆದೆಂತೆಂದೊಡೆ :—

ಬದವಿರ್ಪ್ಪಜಂಬೂದ್ವೀ ।
ಪದ ದಕ್ಷಿಣಭರತದಲ್ಲಿ ತನ್ಮಧ್ಯಮಖಂ ॥
ಡದ ಭೋಗಭೂಮಿ ಕೆಟ್ಟಂ ।
ತದುವೆ ಕರಂ ಕರ್ಮಭೂಮಿಯಿರ್ಪ್ಪಪದದೊಳ್ ॥ ೫೪

ಸುರವಿನಮಿತಪುರುಪರಮೇ ।
ಶ್ವರನಂ ನೆಗೞ್ದಾದಿಚಕ್ರಿಭರತೇಶ್ವರನಾ* ॥
ದರದಿಂ ಬೆಸಗೊಳಲೆಲ್ಲಾ ।
ಪುರಾಣಮಂ ಪ್ರಜುರಮಾಗಿ ಪೇೞ್ದಿಂಬಟಿಯಂ ॥ ೫೫

ಆಪ್ರಥಮಕೇಶವನ ಪುರಾಣವನಿಂತೆಂದು ಬೆಸಸಿದರ್—

ಉದನಿಧಿವೃತಜಂಬೂದ್ವೀ ।
ಪದ ಪೂರ್ವವಿದೇಹದೊಳ್ ಕರಂ ಪೆಸರ್ವೆಱೆದ* ॥

ಗ್ಗದ ಪುಷ್ಕಳಾವತೀವಿಷ ।
ಯದೊಳಿಸೆವುದು ಪುಂಡರೀಕಿಣೀ ಎನಿಪ ಪುರಂ ॥ ೪೪

ಇಂತೆಸೆವಾನಗರವರೋ ।
ಪಾಂತದೊಳೊಪ್ಪುವುದು ಮಧುರವನವೂವನದೊಳ್ ॥
ಸಂತತಮಿರ್ಪಂ ವಿಳಯಕ್ಕೆ ।
ತಾಂತನವೊಲ್ ಬೇಡನಾಪುರೂರವನೆಂಬಂ ॥ ೪೫

ಆಪುರೂರವನೆಂಬ ಬೇಡನೊಂದುದಿವಸಂ ಆಮಧುರವನದೊಳ್ ಸಾ
ಗರಸೇನಮುನೀಶ್ವರಂ ಪೊಲಬುಗೆಟ್ಟಿರ್ದುದುವರಂ ಕಂಡು—

ನೆಲೆ ಜವನಂತೆ ಜೀವವಧೆಗೆಯ್ವ ಪುರೂರವನೆಂಬ ಬೇಡನಂ ।
ತಲುವಲಿ ತೀವ್ರನಾಕ್ಷಣದೆ ಸಾಗರಸೇನಮುನೀಶ್ವರಂಗೆ ತಾ ॥
ನೆಲಗಿದನಲ್ತೆ ಕಾಣುತವೆ ಬಂದನನೆಂದೆನೆ ಪೇೞ್ದಾರ್ದನೇ ।
ನಲಿಯಿಸದಾರನೇನೆಲಗಿಸುತ್ತಿರದಾಕೃತಿ ತನ್ಮಹಾತ್ಮರಾ ॥ ೬೦

ಇಂತೆಲಗಿದ ಪುರೂರವನೆಂಬ ಶಬರನ ಕರ್ಮೋಪಶಮನಮನೆಱಿದು
ಧರ್ಮೋಪದೇಶಂಮಾಡೆ ಕೈಕೊಂಡು ತನ್ಮನಿಪತಿಗೆ ಬಟ್ಟೆದೋಱಿ ಬೀ
ೞ್ಕೊಂಡು ಮಧುಮದ್ಯಮಾಂಸಂಗಳಂ ತೊಱೆದು ನೆಗೞುತ್ತುಮಿರ್ದು—

ತನುವನೆ ಪತ್ತುವಿಟ್ಟು ಶಬರಂ ಪೆಸರ್ವೆತ್ತ* ಸುಧರ್ಮಕಲ್ಪದೊಳ್ ।
ಜನಿಯಿಸಿ ದೇವನಾಗಿ ಸೊಗಮಿರ್ದು ಬೞಿಕ್ಕಿರದಿಲ್ಲಿ ಬಂದು ತಾಂ ।
ನಿನಗಮನಂತಸೇನೆಗವುತಿಪ್ರಿಯಸೂನು ಮರೀಚಿಯಾದನೀ ।
ತನುಮೆನಸುಂ ಕುಧರ್ಮದುಪದೇಶದೆ ಬರ್ಕುಮನಂತಜನ್ಮದೊಳ್ ॥ ೬೧

ಎನಸುಮದೆಸೆವುದು ಭರತಾ ।
ವನಿಯಲ್ಲಿ ಸುರಮ್ಯವಿಷಯಮೂವಿಷಯದ ಪೌ ॥
ದನ ಪುರದ ರಾಜ್ಯಮನುಗತ ।
ಮೆನಲಾಳ್ವರ್ ಬಾಹುಬಲಿಯ ಸಂತತಿಯವರ್ಗಳ್ ॥ ೬೨

ಅವರೊಳ್ ಪ್ರಜಾಪತಿಕ್ಷಿತಿ ।
ಪವರಂಗಂ ತನ್ಮೃಗಾಕ್ಷಿಮೃಗಯಾವತಿಗಂ ॥
ಭುವನವಿನುತಂ ಪ್ರಥಮಕೇ ।
ಶವನುದಯಿಸುನಂ ತ್ರಿಪಿಷ್ಟನಾಮೋದ್ದಾಮಂ ॥ ೬೩

ಜನಪ ಪ್ರಜಾಪತಿಗವುಂ ।
ತನ ಸತಿ ಶತಪತ್ರನೇತ್ರೆ ವಿಜಯಾವತಿಗಂ ॥
ತನಯಂ ತಾನಪ್ಪಂ ವಿಜ ।
ಯನೆನಿಪ್ಪಭಿಧಾನದಿಂ ಪ್ರಥಮಬಲದೇವಂ ॥

ಘನಗರ್ವಪ್ರತಿವಾಸುದೇವನೆನಿಪಶ್ವಗ್ರೀವನಂ ತೂಳ್ದಿ ನೆ ।
ಟ್ಟನೆ ವಿಖ್ಯಾಜಿಸುವರ್ಧಚಕ್ರಿಪದವುಂ ಕೈಕೊಂಡು ಮತ್ತಂ ತ್ರಿಪಿ ॥
ಷ್ಟನರೇಂದ್ರಂ ಭವವಾಲೆಯೊಳ್ ತೊಟಲಿಯುಂ ತಾನಂತ್ಯತೀರ್ಥೇಶನ ।
ಪ್ಪನುಮೆಂದಾಭರತಂಗೆ ಪೇೞ್ದಿನೊಲವಿಂ ಶ್ರೇಯಾದಿತಿರ್ಥೇಶ್ವರಂ ॥ ೬೫

ಆದಿಜಿನಂ ಭರತಂಗ ।
ತ್ಯಾದರದಿಂ ಪ್ರಥಮುಕೇಶವನ ಕಥೆಯುಂ ಪು ॥
ಣ್ಯೋದಯವುನುಸಿರಲೆಸೆದಿ ।
ರ್ಪಾದಿಪುರಾಣದೊಳದೆಲ್ಲವುಂ ನೆಱೆಯುಲದೇಂ ॥ ೬೬

ಎಸವಾಕಚ್ಛನಸೂನುವಪ್ಪ ನಮಿವಂಶಂ [ನೀಂ] ಸಮುಂತಾದಿದೇ ।
ವಸಮುದ್ಭೂತಮೆನಿಪ್ಪ ಬಾಹುಬಲಿವಂಶಂ ತಾವುವರ್ ದೇವ ಭೂ ॥
ವಿಸೆ ವೈವಾಪದ ಕೂಟವುಪ್ಪುದುಜೆತಂ ಶ್ರೀವುತ್ತ್ರಿಪಿಷ್ಟಂಗೆ ರಾ ।
ಜಿಸುವೀರೂಪವತಿ ಸ್ವಯಂಪ್ರಭೆಯನೀಯಲ್ವೇೞ್ವುದೇನೊಪ್ಪದೇ ॥ ೬೭

ಭವದೀಯಾತ್ಮಜೆಯಂ ಸ್ವಯಂಪ್ರಭೆಯನಿಂತುಯಿ್ದೀವುದೌಜೆತ್ಯಮು ।
ತ್ಸವದಿಂದಿತೊಡವುತ್ರಿಪಿಷ್ಟನೆ ದಿಟಂ ಜಾವುತೃವಾಗುತ್ತಿರ ॥
ಲ್ಕವರಿಂದಂ ನಿಮಗಿನ್ನದಕ್ಕುಮುಭಯಶ್ರೇಣ್ಯಾಧಿಪತ್ಯಂ ದಲಂ ।
ದವನೀಶಂಗೆ ಮನಂಬುಗಲ್ ತಿಳಿಪಿದಂ ನೈಮಿತ್ತಕಂ ತಥ್ಯಮುಂ ॥ ೬೮

ಶುಂಭತ್ತ್ರೈಲೋಕ್ಯಲಕ್ಷ್ಮೀಪ್ರಭುತೆ ಪದೆದು ಕೈಸಾರ್ದುದೆಂಬಂದದಿಂಸಂ।
ರಂಭಸ್ವಾಂತಾನುರಾಗಂ ನಿಮಿರೆ ವಿಮಲಹರ್ಷಾಶ್ರುಮಿಕ್ಕೋಲ್ಲಸನ್ನೀ ॥
ತ್ರಾಂಭೋಜಂ ನೀಳ್ದ ವಿಖ್ಯಾಜಿಸೆ ವನವೊಸೆದಾಗಳ್ ನಿಮಿತ್ತಜ್ಞನಪ್ಪಾ।
ಸಂಭಿನ್ನಶ್ರೋತೃವಂ ಮನ್ನಿಸಿ ಕಳುಪಿದನಾನಂದದಿಂ ಖೇಚರೇಂದ್ರಂ ॥ ೬೯

ಪೆಱತೇಂಮತ್ಸುತೆಯಂಸ್ವಯಂಪ್ರಭೆಯನಾನೊಯಿ್ದೀವುದೇಕಾರ್ಯಮೀ ।
ತೆಱದಿಂದಾದೊಡಮೀನೊ ಪೌದನಪುರಶ್ರೀವಲ್ಲಭಸ್ವಾಂತದ ॥

ಕ್ಕಱದುದ್ವಾಹಶುಭಕ್ರಿಯೋಲ್ಲಿಖಿತಮುಂ ಕೊಟ್ಟಟ್ಟ ಶಿಷ್ಟೋಕ್ತಿಯಿಂ ।
ದಱಿವೆಂ ಬೇಗದೊಳೆಂದು ನಿಶ್ಚಯಿಸಿದಂ ಭೂಪೋತ್ತಮುಂ ಚಿತ್ತದೊಳ್ ॥

ಎಂದು ನಿಶ್ಚಯಿಸಿ ಮಂತ್ರಿಗಳಂ ಬರಿಸಿ ಮುದದಿಂ ತದೀಯವೃತ್ತ
ಕಮುಂ ನಿಱಿಯಱಿಪಿ ಸಮೂಲೋಚಿಸಿ ವಿಯಚ್ಚರೇಂದ್ರಂ ವಿವಾಹಸಂಬಂ
ಧಲಿಖಿತಮುಂ ಪಾಗುಡಮುಂ ಬೆರಸು ಚರಬಿಂದುವಿನ ಕೆಯ್ಯೊಳ್ ಕೊಟ್ಟು
ಪೌದನಪುರಕ್ಕಟ್ಟುವುದುಮಾತಂ ಮನೋವೇಗದಿಂ ಪೋಗೆ—

ಪಿರಿದಾನುಂ ಪೊತ್ತು ವರಂ ।
ಪರಮೋತ್ಸವಚಿತ್ತನಾಗಿ ತಾನಿರ್ದು ವಿಮು ॥
ಚ್ಚರಪತಿ ಬಱಿಕ್ಕಮತ್ಯಾ ।
ದರದಿಂ ಬೀಜಕೊಟ್ಟು ಕಳುಪಿದಂ ಮಂತ್ರಿಗಳಂ ॥ ೩೧

ನೆರೆದ ಶರದಭ್ರಪಟಳಾಂ ।
ತರದಿಂ ಪೊಱಮಡುವ ಪೂರ್ಣಚಂದ್ರನವೋಲ್ ಖೇ ॥
ಚರತಿಲಕಸಿಂದುಕಾಂತದ ।
ವಿರಾಜಿಪೇಕಾಂತನಿಲಯದಿಂ ಪೊಱಮಟ್ಟಂ ॥ ೩೨

ಬಳಸಿದ ಸುಭಟೋದ್ಭೂತಾ ।
ಸಿಲತಾಸಿಶಿತಾಂಶುವಿಸರದಿಂ ಖಚರೇಂದ್ರಂ ॥
ಪೊಳೆವಿಂಗಡಲ ತರಂಗಾ ।
ವಳಯೊಳ್ ಬರುತಿರ್ಪ ಚಂದ್ರನಂ ಗೆಲೆವಂದಂ ॥ ೩೩

ಇಂತು ಬಂದು ವಾಯುವೇಗಾಮಹಾದೇವಿಗಾವಿವಾಹಸಂಬಂಧಬಂ
ಧುರಪ್ರಸಂಗಮುಂ ಪೇೞುತ್ತುಮುತ್ಸವದೊಳುನ್ನಿದ್ರಾಮುದ್ರಿತನಾಗಿರ್ದು
ವಿಯಚ್ಚರೇಂದ್ರಂ ದಿನಮುಖದೊಳ್ ಜಿನಮುಖದರ್ಶನಹರ್ಷಜನಿತನವ
ಪುಳಕಕಳಕಾವಳೀಪರಿಕಲಿತಕಳೇವರಂ ಭೂಷಿತಗಂಧಶೇಷನುನಾಗಿ:ರಾಗದಿ
ನಿರ್ಭಾಗಳ್ :

ಕಮಳಾನಂದಪ್ರದೋದ್ಯತ್ಪ್ರಭುತೆ ವಿಗತದೋಷಾಚರತ್ವಾಸುತೇಜೋ।
ರಮಣೀಯತ್ವಂ ಮಹೀಭೃನ್ಮಕುಟನಿಹಿತಪಾದಾಬ್ಜಿಶೋಭಾಯತಂ ಚ ॥
ಕ್ರಮನೋರಾಗಕ್ರಿಯಾವೈಭವಮಿನಿತನಗಂ ಖೇಚರಂಗಂ ಸಮಂ ನೋ ।
ಟ್ಟಿಕ್ಕ ಮಹೀಲೋಕಂ ಸಮಂತೆಂಬವೊಲುದಯನಗೋತ್ತಂಸನಾದಂ ದಿನೇಶಂ॥

ಆಸಮಯದೊಳ್ ಪರಿಮಿತಪರಿಜನಂಬೆರಸು ವಿಯಚ್ಚರೇಂದ್ರಂ
ಜನೇಂದ್ರಮಂದಿರಮಂ ಪೊಱಮಟ್ಟು

ಸ್ಫುರಿತಾಂಗೋಪಾಂಗಪುಣ್ಯಪ್ರಭೆಯಭಿನವಚಂದ್ರಾತಪಶ್ರೀಯನೀಯು ।
ತ್ತಿರೆ ಮರ್ತ್ಯಾಕಾರಮಂ ತಾಳ್ದಿದ ಸಿತಕಿರಣಂ ರೋಹಣಾದ್ರೀಂದ್ರಮಂ ಸಾ॥
ದರದಿಂ ನೋಡಲ್ಕೆ ಬರ್ಪಂದದೆ ಮದಗಜಲೀಲಾಲಸದ್ಯಾನದಿಂ ಬೇ ।
ಚರರಾಜಂ ರಾಜಿಸುತ್ತುಂ ಮಣಿಮಯರಚಿತಾಸ್ಥಾನಮಂ ಬಂದು ಪೊಕ್ಕಂ ॥

ವಿಮಲಾಸ್ಯಾಂಭೋಜಶೋಭಾಯಮುನೆಯೊಳಲರ್ದಾಪುಂಡರೀಕಾಬ್ಜ
[ಮಂ ರಾ ।

ಜಮರಾಳಂ ಲೀಲೆಯಿಂದೇಱುವ ಪರಿಜದವೋಲ್ ನೀಲರತ್ನೋಲ್ಲಸತ್ಕ ॥
ಟ್ಟಮದೊಳ್ ವಿಭ್ರಾಜಿಪಿಂದರೂಪಲವಿರಚಿತಸಿಂಹಾಸನಾಸೀನನಾದಂ ।
ಕಮನಕ್ಷ್ಮಾಮಾಂಬುರಾಳಂಕೃತರುಚಿರತನೂರುಂದ್ರನಾಖೇಚರೇಂದ್ರಂ॥ ೩೬

ಕಮನೀಯಾಂಗತ್ರಿಭಂಗಿ ತ್ರಿಗುಣಿಸೆ ನಿಜಲಾವಣ್ಯಮುಂ ಲಾಲಿತಾಪಾಂ ।
ಗಮಯೂಖಂ ನೀಳ್ದ ಬೆಳ್ದಿಂಗಳ ಹರಪರಿಯುಂ ಬೀಱಿ ದೋರ್ವರ್ಲ್ಲರಿಂವಿ॥
ಭ್ರಮವೀಕ್ಷಾಲೋಲುಪಭ್ರಾಂತರ ಮನನುಸರಣಂ ಕೂಡೆ ತೂಗಾಡೆ ರಾಜೇಂ
ದ್ರಮರಾಳಂಗಿಕ್ಕುವರ್ ಚಾಮರಮನವಿರತಂ ಚಾಮರೀಭಾಮೆಯರ್ಕಳ್ ॥

ಹರಿಯೆಂದುಂ ಕವಿಗೋತ್ರಪ್ರಣ್ಯಜನತಾವಿದ್ವೇಷಿಯೆಂದಿಂತು ಮಾಂ ।
ಕರಿಸುತ್ತಿರ್ಪ ವಿಯಚ್ಚರೇಂದ್ರನ ಗಜದ್ವಿಟ್ಪ್ರೇಕ್ಷಣಶ್ವೇಭಭಯೋ ॥
ರ್ವರೆಯೊಳ್ ಬಂದು ಯಥೋಜಿತಾಸನಮನಾಗಳ್ ಪ್ರೇಮದಿಂ ತಾಮಳಂ।
ಕರಿಸಿರ್ದರ್ ವರಸುಶ್ರುತಾದಿವಿಲಸನ್ಮಂತ್ರಜ್ಞರಾಮಂತ್ರಿಗಳ್ ॥ ೩೪

ರಸಮಂ ರೂಪಿಸುತಿರ್ಪ ಸತ್ಕವಿಗಳಂ ಮಾಧುರ್ಯಮಂ ನಾಡೆ ಮೋ ।
ಹಿಸುತಿರ್ಪಾಗಮಕೀರ್ತಿಂದ್ರರಿಂ ರಸನೆಗೇಂ ಟ್ಟಿಂದುಕೆ ಯುಂ ಸುಪ್ರತಿ ॥
ಪ್ಠಿಸುತಿರ್ಪುದ್ಧತವಾದಿವೈಂದವೃತದಿಂ ವ್ಯಾಖ್ಯಾನಮಂ ಚಿತ್ರಮಾ ।
ಗಿಸುತಿರ್ಪುನ್ನತವಾಗ್ಮಿಸಂಕುಳದಿನಿಂತೊಪ್ಪಿರ್ಪುದೊಡ್ಡೋಲಗಂ॥ ೩೫

ಕುಲವೃದ್ಧಾವಳಿಯಿಂ ಕ್ಷಿತೀಶತತಿಯಿಂ ದೋರ್ದಂಡದಂಡೇಶಮಂ ।
ಡಲದಿಂದಗ್ಗದ ಮಂಡಲೇಶ್ವರಮಹಾಸಾಮಂತರಿಂ ಶೈಲಸಂ ॥
ಕುಲಮಂ ಚಾಳಿಪ ಮುಲ್ಲಜಟ್ಟಗಳನತ್ಯಾರೂಢಿಯಾರೋಹಕಾ ।
ಕುಲದಿಂ ಸಂದರ ಸಾಹಸಾವಳಿಯಿನಿಂತೊಪ್ಪಿರ್ಪುದೊಡ್ಡೋಲಗಂ ॥ ೩೦

ಸೊಗಯಿಪ ಧಾತು ಧಾತುಗಳವಟ್ಟ ಸದರ್ಥದ ಮಾತು ಮಾತಿನೊಳ್ ।
ಮಿಗೆ ಪುದಿದಿರ್ಪ ರೀತಿ ನೆಱಿ ರೀತಿ ರಸಂಬಡೆಯಲ್ ಪ್ರಬಂಧಸೂ ॥
ಳುಗಳನಱಂ ಕ್ಷಣಾರ್ಧದೊಳೆ ಪಾಡುವ ರೂಢಿಯನಾಂತು ರಂಜಿಪಾ ।
ಬಗೆಯು ರಸಾಬ್ಧಿಯಪ್ಪ ಬಗೆಗಾಱರ ವೊತ್ತಿದಿನೊಪ್ಪಿತೋಲಗಂ ॥ ೪೧

ಸರಳಾಂಗಾವಯವಂಗಳಿಂದೊಗೆವ ಲಾವಣ್ಯಾಂಶುವಂ ಮಿಕ್ಕು ಮುಂ ।
ಬರಿವನ್ನಂ ನಱದೀಪ್ತಿಯಿಂ ಕುಡಿಯಿಡುತ್ತಿರ್ಪಾಕಟಾಕ್ಷಪ್ರಭೋ ॥
ತ್ಕರದಿಂದಂ ನಿಶಿತಂಗಳಪ್ಪ ಮದನೋದ್ಯನ್ಮೋಹನಾಸ್ತ್ರಂಗಳಂ ।
ತಿರೆ ಕಣ್ಗೊಳ್ವ ವಿಳಾಸಿನೀನಿವಹದಿಂ ಚೆಲ್ವಾದುದೊಡ್ಡೋಲಗಂ ॥ ೪೨

ವರಸೌಂದರ್ಯಗಭೀರವಾರಿನಿಧಿಯೋ ಶೃಂಗಾರಸಂದೋಹಸಾ ।
ಗರವೋ ಸೌಖ್ಯಕಳಾಕಳಾಪವಿಳಸದ್ವಾರಾಶಿಯೋ ಸುಪ್ರಸ ॥
ನ್ನರಸಾಕೀರ್ಣಪಯೋಧಿಯೋ ಸಕಳಸಾಹಿತ್ಯಾವೃತಾಂಭೋಧಿಯೋ ।
ಪಿರಿದುಂ ತಾನೆನೆ ಚೆಲ್ವನಾಯ್ತು ಖಚರೇಂದ್ರೋತ್ತಂಸನೊಡ್ಡೋಲಗಂ ॥ ೪೩

ಚಳಚಮರರುಹಸವಾಜಾ ।
ನಿಳನಿಂದೊಗೆದೆಸವ ಚಾರುಕರ್ಪೂರರಜೋ ॥
ವಳಿಯಿಂ ಭೂಷಣಮಣಿಸಂ ।
ಕುಳದಿಂ ಗೆಲೆವಂದುದೋಲಗಂ ಪಾಲ್ಗಡಲಂ ॥ ೪೪

ವಿನುತಾನೂನಸಭಾನ್ಯಪಾವಳಿಯು ನಾನಾಭೂಷಣಾನರ್ಘ್ಯನೂ ।
ತನರತ್ನಾಂಶುನಿಕಾಯದಿಂ ಖಚರವಂಶಾಧೀಶನಾಸ್ಥೈನ್ಯವಿ ॥
ತೆನಸುಂ ಕಣ್ಗೊಳಿಸಿರ್ದುದಲ್ತೆ ಮುನಿಸಿಂದಾಕರ್ಷಿಸಲ್ ಕುಂಭಜ ।
ನ್ಮನ ಹಸ್ತಕ್ಕೊಳಗಾಗಿಯುಸ್ತಜಡನಾದಂಭೋಧಿಯೆಂಬಂದದಿಂ ॥ ೪೫

ಕಣ್ಣೆಳಗುಂ ಲಲಿತಾಂಗದ ।
ನುಣ್ಣೆಳಗುಂ ತೊಟ್ಟ ಮುತ್ತಿನೊಳ್ದೊಡವುಗಳಾ ॥
ತಣ್ಣೆಳಗುಂ ಪದೆಪಿಂದೆ ಪ ।
ವಣ್ಣಡಿಪೊಡಳುಂಬವೊದುದೋಡ್ಡೋಲಗದೊಳ್ ॥ ೪೬

ಶ್ರೀವಿಪುಳಪ್ರಭಾವಭೃತದಿಂದೆ ಸುದರ್ಶನಶೋಭೆಯಿಂದೆ ನಾ ।
ನಾವಿಬುಧಾಭಿವರ್ತನತೆಯಿಂದೆ ತವೋಹ್ಯತತೇಜದಿಂದೆ ರಾ ॥
ಮಾವೃತರವ್ಯದಿಂದೆ ನೆಲೆವೆರ್ದೆದನಂತವಿಳಾಸದಿಂದೆ ರಾ ।
ಜೀವದಳಾಕ್ಷನಂತೆಸೆವುದೋಲಗಮಾಖಚರಾಧಿರಾಜನಾ ॥ ೪೭

ಸಮುಭಾವಶೋಭೆಯಿಂ ಕಾಂ ।
ತಿಮನೋಹರದಿಂ ಪ್ರಸಾದದಿಂ ಸದುದಾರ ॥
ಕ್ರಮದಿಂದಮುಲಂಕೃತಿಶಾ ।
ಸ್ತ್ರಮನೆನಸುಂ ಪೊೞ್ವುದೋಲಗಂ ಖೇಚರನಾ ॥ ೪೪

ನಿರುಪಮತೇಜದಿಂ ದಿನಪನೋಲಗದಂದಮೆ ಚಾರುಭೋಗಬಂ ।
ಧುರದಿನಹೀಂದ್ರನೋಲಗದ ಸನ್ನಿಭಮುನ್ನತಕಾಂತಿಶೋಭೆಯಿಂ ॥
ಸುರುಚಿರಚಂದ್ರನೋಲಗದ ಪಾಸಟ ವಿಶ್ರುತವೈಭವಪ್ರಭಾ ।
ಸುರತೆಯಿನಿಂದ್ರನೋಲಗದ ಪಾಟ ವಿಯಚ್ಚರರಾಜನೋಲಗಂ ॥ ೪೫

ತಪನ ತುಹಿನಾಂಶುಗಳನೇ ।
ಱಿಪ ತೇಜೋರಾಕೆಗಳೊದವಿದಂತಿರೆ ಖಚರಾ ॥
ಧಿಪನೋಲಗಂ ಪೊದಱ್ದಿವ್ಯ ।
ತಪಯೋನಿಧಿಯಂತಶೇಷಶೋಭಾಧಿಗತಂ ॥ ೪೬

ವ॥ ಇಂತು ಶೋಭೆವೆತ್ತೋಲಗದೊಳ್ ಲೀಲೆಯಿಂದಿರ್ಪಗಳ್—

ಸಮಮೆನ್ನೊಳ್ ಖಚರೇಂದ್ರನುಂ ಕುವಲಯಾಲೀಲಾಕರಕ್ಷಾತಿ ನಿ ।
ತ್ಯಮಣಂ ಸನ್ಮಾರ್ಗವರ್ತಿತ್ವದೆ ವಿಬುಧನುನೋಹರ್ಷಿತೋದ್ಯತ್ಕಳಾವಿ ॥
ಭ್ರಮದಿಂದುಷ್ಣಾಂತ್ವಹೀಚಕ್ರಮನಳರಿಸ(?) ಬಲ್ಪಿಂದದಿಂ ನೋೞ್ಪಿವೆಂದಿಂ।
ದುಮೆ ತಾನೇೞ್ತರ್ಪನೆಂಬಂದದೆ ವರಚರನಪ್ಪಿಂದುವೇೞ್ತಂದನಾಗಳ್ ॥ ೪೭

ಇಂದುವೆ ಪಾಲ್ಗಡಲಂ ಪುಗು ।
ವಂದದೊಳಸೆವಿಂದುಕಾಂತಕೃತರಾಜಸಭಾ ॥
ಮಂದಿರಮಂ ಪದೆಪಿಂ ಬಂ ।
ದಿಂದುಚರಂ ಪೊಕ್ಕನಿಂದುರುಚಿರುಚಿರಾಂಗಂ ॥ ೪೮

ಪರಿಣಯನಾಸುಬಂಧಮಿದು ಸಿದ್ಧಿಸಿತೆಂಬನುರಾಗದಿಂ ವಿಯ ।
ಚ್ಚರಪತಿಗಾತ್ಮಮೌಳಿಮುಖದಿಂ ನೆಱಿ ಸೂಚಿಸುತಿರ್ಪವೋಲ್ ಪದಾಂ ॥
ಬುರುಹದ ಕಾಂತಿ ಕೊರ್ವಿರೆಯಗುರ್ವಿನ ಕೆಂಬೆಳಗಿತ್ತನಲ್ತೆ ಚೆ ।
ಚ್ಚರದೆ ಕಿರೀಟಶೋಣಮಣಿದೀಪ್ತಿಯಿನಿಂದುಚರಂ ವಿಯಚ್ಚರಂ ॥ ೪೯

ವ॥ ಇಂತು ವಿನತನಾದ ನಿಜಚರನಪ್ಪಿಂದುಚರನಂ ವಿಯಚ್ಚರೇಂ
ದ್ರಂ ರುಂದ್ರಮೆನಿಪಾತ್ಮೀಯಪಾದಪೀಠಾಂತಿಕಾಸೀನನಂ ಮಾಡಿದಾಗಳ್

ಅವಧರಿಪುದು ದೇವರ್ ಬಿ ।
ನ್ನವಿಸೆಂ ಪೌದನಪುರಾಧಿಪತಿ ನಿವೊಳ್ ಮೂ ॥
ಲ್ಪಿವಿರಳಮಪ್ಪನುಬಂಧೋ ।
ತ್ಸವಮನೆನುತ್ತಾ ಗಳಿಂದುಚರನಿಂತೆಂದಂ ॥ ೪೪

ಭವದಾಜ್ಞಾಮಣಿಮೌಳಿಯೂಗಿ ಲಿಖಿತಂಗೊಂಡಾವುರುದ್ವೇಗದಿಂ ।
ದವೆ ಪೋಪನ್ನೆಗವೂಪ್ರಜಾಪತಿನುಹಾರಾಜಂ ನಿಮಿತ್ತಜ್ಞವೃಂ ॥
ದವಿಭಾಸ್ವಜ್ಜಯಿಗುಪ್ತನಂ ಬರಿಸಿ ವೈವಾಹಕ್ರಿಯಾಸುಪ್ರಸಂ ।
ಗವರಂ ಪುಷ್ಪಕರಂಡಕಾಕ್ಷವನದೊಳ್ ತಾನಿರ್ದನಾನಂದದಿಂ ॥ ೪೫

ವ। ಅಂತಿರ್ದ ಪ್ರಜಾಪತಿಮಹಾರಾಜಂ ಜಯಗುಪ್ತನಿಮಿತ್ತಜ್ಞಂಗೆ ಇಂತೆಂದಂ:—

ಸಮನಿಪಳಾವ ನೃಪಾಳೋ ।
ತ್ತಮಸುತೆ ಮತ್ಸುತನ ಪಟ್ಟಮಹಿಷೀಪದವಿ ॥
ಭ್ರಮವೆನಿಪಳದಂ ಪೇೞಿಂ ।
ದು ಮಹಾಪೌದನಪುರಾಧಿಪತಿ ಬೆಸಗೊಂಡಂ ॥ ೪೬

ಶ್ರೀವಿಭುವೀತಿಸಿಷ್ಟಧರಣೀಧರನಗ್ಗದ ಲಕ್ಷ್ಮಿಪಟ್ಟವೂ ।
ದೇವಿ ದಿಟಂ ಸ್ವಯಂಪ್ರಭೆಯೆ ತಾಂ ರಥನೂಪುರಚಕ್ರವಾಳಪೌ ॥
ರೀವರಪುತ್ರಿಯಾತರುಣಿಯುಂ ತರವೇೞ್ವುದು ದೇವ ನೀವಿದಂ ।
ಭಾವಿಸುದೆಂದು ಪೇೞ್ದಿನೊಲವಿಂ ಜಯಗುಪ್ತನಿಮಿತ್ತಕೋತ್ತಮಂ ॥ ೪೭

ವ॥ ಅನಿಮಿತ್ತಕನ ವಚನಮುಂ ಕೇಳ್ದಾನಂದಮನೆಯ್ದಿ ಪ್ರಜಾಪತಿಮಹಾರಾಜನಿಂತೆಂದಂ:—

ಅದಱಿಂ ಬೇೞ್ಪುದು ತಾನೆ ಸಂಗಳಿಸದತ್ತೀಗಳ್ ದಿಟಂ ಕಚ್ಚನ ।
ಗ್ಗದ ವಂಶಕ್ಕಮುದಗ್ರಬಾಹುಬಲಿವಂಶಕ್ಕಂ ವಿವಾಹಂ ಸಮಂ ॥
ತದು ಪಾರಂಪರೆಯಿಂದೆ ಬಂದುದೆ ವೊಲಂ ಮುನ್ನೆಂದು ಮೆಯ್ವೞಿ ತಾ ।
ಳ್ದಿದನಾಗಳ್ ಪಿರಿದುಂ ಪ್ರಜಾಪತಿಮಹಾರಾಜಂ ಮಹೋತ್ಸಾಹಮುಂ॥ ೪೮

ವ॥ ತದೀಯಪ್ರಸ್ತಾವದೊಳ್—

ಘನಪಥದಿಂದಿೞಿದಾಂ ಭೋ ।
ಕೆನೆ ವಿನಮಿತನಾಗೆ ಮನ್ನಿಸದನೆನ್ನಂ ನೆ ॥

ಟ್ಟನೆಯುಚಿತಾಸನಮಿತ್ತೊಡ ।
ನನುನಯದಿಂದವನಿಮಹಿಮನಾವೊರಾಯುಂ ॥ ೯೯

ಮೊದಲೊಳ್ ಪಾಗುಡನುಂ ಕುಡೆ ।
ಪದೆಪಿಂ ಕೈಕೊಂಡು ಲಿಖಿತಮುಂ ಕುಡೆ ತಳೆದಂ ॥
ತದನಾಪೌದನಪುರಪತಿ ।
ಮುದದಿಂ ಗಣಕಂಗೆ ನೀಡಿ ವಾಚಿಸವೇೞ್ದಂ ॥ ೧೦೦

ಅನುವಾಚಿಸಿ ಲಿಖಿತಾರ್ಥಮು ।
ನನುನಯದಿಂ ತದ್ಗತಾರ್ಥಮುಂ ತಿಳಿದು ಸಮುಂ ॥
ತೆನಸುಂ ಗಣಕಂ ವಾಚಿಸ ।
ಲನುಗೆಯ್ದಂ ದೇವರವಧರಿಪುದೆನುತಾಗಳ್ ॥ ೧೦೧

ವ॥ ಸ್ವಸ್ತಿ, ಶ್ರೀಮದಾದಿಭಟ್ಟಾರಕದಾರಕ ಬಾಹುಬಲಿಕುಮಾರವಂ ಶಾಬ್ಧಿರಾಜನಪ್ಪ ಶ್ರೀಪ್ರಜಾಪತಿಮಹಾರಾಜಂಗೆ ಶ್ರೀಮತ್ಕಚ್ಛಸುತ ನಮಿಚಕ ರಾಧಿಪವಂಶವಾರಿರುಹಪತಿಗ್ಗದೀಧಿತಿಯುಂ ರಥಸೂಪುರಚಕ್ರವಾಳಪುರಾಧಿ ಪತಿಯುಮಪ್ಪ ಜ್ವಲನಜಟಿಮಹಾರಾಜಂ ಮಹೀತಲಲಲಿಂಗಿತಲಲಾಟಪಟ್ಟ ನಾಗಿ ವಿನಯದಿಂ ಕಾರ್ಯಮುಂ ಬಿನ್ನವಿಕ್ಕಿ ಮತ್ತಪ್ಪುದುಂ—ಎಮಗಂ ತಮು ಗಂ ಪಾರಂಪರೆಯಿಂ ಬಂದ ವಿವಾಹಸಂಬಂಧಮುಂಟಿಱಿದು ಭವತ್ತಸೂಭವ ತ್ರಿಪಿಷ್ಟಕುಮಾರಂಗಂ ಮದೀಯಸಂದನೆ ಸ್ವಯಂಪ್ರಭೆಕುಮಾರಿಗಂ ಪರಿಣ ಯಮುಮೊಡಬರ್ಪೆ ತಾಮೆಮಗೆ ಮಾಜ್ಪಿ ಸುಪ್ರೀಮುಮುಂ ನಿಮಿರ್ಚ್ಚುವುದು ವುಂಗಳಮಹಾಶ್ರೀ । ಎಂದು ಗಣಕಂ ವಾಚಿಪುದುಂ ಕೇಳ್ದಾಗಳ್—

ಇದು ಜೆತ್ರಂ ದೈವಸೂತ್ರಂ ಜ್ವಲನಜಟಿಮಹಾರಾಜನಂ ಬೇೞ್ದಿ ನಾವು ।
ಟ್ಟದ ಮುನ್ನಂ ತಾನೆ ತನ್ಮಾತ್ಮಜೆಯುನೆಸೆವ ನಮ್ಮಾತ್ರಿಪಿಷ್ಟಂಗೆ ಕೂರ್ತೀರ್ ॥
ವುದನೀಗಳ್ ಪೂಣ್ದು ಲೇಖಾರ್ಥಮನೆ ಕಳುಪಿದಂ ಕಾಮಿತಂ ಕಣ್ಗೆ ವಂದಂ ।
ದದಿನಾರ್ತಂ ನಾಡೆಯುಂ ಪೌದನವರನೃಪನುತ್ಕರ್ಷಹರ್ಷಾತ್ಮನಾದಂ ॥೧೦೨

ವ॥ ತದನಂತರದೊಳ್—

ಜಯಗುಪ್ತನಿಮಿತ್ತಕನಂ ।
ಪ್ರಿಯದಿಂ ಮನ್ನಿಸಿ ಪುರಕ್ಕೆ ತಂದಂ ನೃಪನೆ ॥

ನ್ನಯ ಕ್ಕೆವಿಡಿದಾಗಳ್ ನಿ ।
ಮ್ಮಯ ಯೋಗಕ್ಷೇಮಕುಶಲಮಂ ಬೆಸಗೊಂಡಂ ॥ ೧೦೩

ಪಿರಿದುಂ ಮನ್ನಿಸಿ ಮುನ್ನ ಮೆನ್ನನೊಲವಿಂದಾಪೌದನೋರ್ವೀಶನಾ ।
ದರದಿಂ ನಿಮ್ಮಡಿಗಿತ್ತ ಪಾಗುಡಮೆನುತ್ತುಂ ನೀಡಿ ವೈವಾಹಭಾ ॥
ಸುರಸಂಬಂಧದ ಬಂಧುರಾರ್ಥವನಿದಂ ತಾನಟ್ಟಿದಂ ಕೊಟ್ಟು ದೇ ।
ವರಿದಂ ಕೇಳ್ವುದೆನುತ್ತುಮಿಂದುಚರನಾಲೇಖಾರ್ಥವಂ ನೀಡದಂ ॥ ೧೦೪

ಅಲಿಖಿತವನೋದೆಂದು ಸ ।
ಲೀಲಂ ನೃಪನೊಲ್ದು ನೀಡೆ ಗಣಕನದಂ ತಾ ॥
ನಾಲೋಚಿಸದನುವಾಚಿಸ ।
ದಾಲಿಖಿತದವಧರಿಪುದೆಂದನೇಂ ಮತಿಯುತನೋ ॥ ೧೦೫

ಶ್ರೀನದ್ವಿವಾಹಧರೇಂದ್ರಂ ಜ್ವಲನಜಟಿನೃಪಂಗಾದಿದೇವಾನ್ವಯಶ್ರೀ ।
ದಾನಮುಂ ಸುಪ್ರೀತಮದಿಂದಂ ಕಳುಹಿದ ಲಿಖಿತಂ ನೋಟ್ಟೊಡೆಮ್ಮೊಳ್ ನಿರಸ್ತ ॥
ವ್ಯಾವೋಹಂ ತನ್ನೊಳಾಯತ್ತಾಪರಿಣಮನಸನಿಮಿತ್ತಂ ಬರುತ್ತಿರ್ದಪೆಂ ಮು ।
ತ್ತೇವಮಾತುದ್ವಾಹನಮಾಗುತ್ತಿರೆ ಬಜಿಕೆ ಜಯಂ ಭದ್ರಮೆಂದೋದೆ ಕೇಳ್ದಂ॥

ಅಲಿಖಿತಾರ್ಥಮೆಂಬಮೃತಪೂರಮಣಂ ಶ್ರುತಿಪೂರಮಾಗೆ ಚೇ ।
ತೋಲಲಿತಾಸ್ಪದಂ ಪ್ರಮದಪೂರಮುದಾಯ್ತು ವಿಶಾಲಲೋಚನಂ ॥
ಲಾಲಿತಹರ್ಷಬಾಷ್ಪಕಣಮಾಲೆಯುದಾಯ್ತು ಮುಖಂ ಪ್ರಸನ್ನಲ ।
ಕ್ಷ್ಮಾಲಲಿತಪ್ರಭಾಪ್ರಸರಪೂರಮುದಾಯ್ತು ವಿಯಚ್ಚರೇಂದ್ರನಾ ॥ ೧೦೬

ವ॥ ಆಗಳಂತು ಮಹೋತ್ಸವಸ್ಯಾಂತನಾಗಿ ವಿಯಚ್ಚರೇಂದ್ರನಿಂದು ಚರನಂ ಮನ್ನಿಸಿ ಮಂತ್ರಿಗಳ ವೊಗಮಂ ನೋಱ್ಪುದುಮಾತೆಱನನಱಿದು—

ಅದು ಕಾರ್ಯಂ ದೇವ ಮುನ್ನಂ ನಿಮಗೆ ಪದೆದು ನೈಮಿತ್ತಿಕಂ ಪೇಳ್ದು ದಂತ । ಲ್ಲದೆ ನಾವೆಂತಿಲ್ಲಿ ವೈವಾಹಮನೊಡರಿಸಿಯುಂ ಕೇಳ್ದೊಡಂ ನಿಲ್ಲ ನಾದು ॥ ರ್ಮದನಶ್ವಗ್ರೀವನಾಕೋಟಲೆಯ ಪುದುವದೇತಕ್ಕೆ ತಾಂ ತಕ್ಕುದೊಯ್ದಾ । ವುದೆನುತ್ತುಂ ಮಂತ್ರಿಗಳ್ ಬಿನ್ನವಿಸಲದನೊಡಂಬಟ್ಟನಾಖೇಚರೇಂದ್ರಂ ॥ ೧೦೭

ಇರಿಸಲ್ವೇಡಿರ್ದರನಾ ।
ದರದಿಂ ಪೆಱಗಿರಿಸೆ ಸಮುಚಿತಾರಾತಿಜನಂ ॥

ಬಿರಸನುರಾಗದೆ ಪೌದನ ।
ಪುರಕ್ಕೆ ಪೋಪುದೆನೆ ನೆಗಟ್ದಿನಾಖಚರೇಂದ್ರಂ ॥ ೧೦೯

ವ॥ ಮತ್ತಂ ಮದೀಯಾಗಮನಮನಱಿಪೆಂದು ಖಚರೇಂದ್ರಂ ಚರನ
ಪ್ಪಿಂದುವಂ ಮುಂದೆ ಕಳುಪಿ—

ಧರೆಗಾಶ್ಚರ್ಯಮಯಂ ಸ್ವಯಂಪ್ರಭೆಯ ವೈವಾಹಂ ದಿಶಾಧೀಶರಾ ।
ದರದಿಂದೀಕ್ಷಿಪುದೆಂದವರ್ಗಱಿಪಲೆಯಿದ್ದಿತ್ತೆಂಬಿನಂ ದಿಕ್ಕುಳಾಂ ॥
ತರಮುಂ ಭೋಂಕೆನೆ ಸೋಂಕಿ ನೀಳ್ದ ಸಭವುಂ ತುಂಬಿತ್ತು ಮೆಯ್ವೆರ್ಚಿಪೆ।
ಚರವಂಶಾಗ್ರಣಿ ಪೊಯ್ಸ ಪೊಣ್ದಿದ ಗಭೀರಾನಂದಭೇರೀರವಂ ॥ ೧೧೦

ಮೆಱೆವನ್ನಂ ಮಂಗಳಪ್ರಸ್ಫುಟಪಟಪರವಂ ಕೇತನಶ್ರೇಣಿ ನೀಳ್ದ ।
ಳ್ಳಱಿವನ್ನಂವೋಘವಾಗೋರ್ದರವನುರುಭಟೋತ್ಖಾತಖಡ್ಗಾಂಶುಜಾಳಂ
ಜಱಿವನ್ನಂ ದಿಕ್ಸಮೂಜಾತುಲತಿಮಿರವನುನಿಂತುದ್ಘಸ್ರೋನಾಸಮೇತಂ ।
ಪೊಱಮಟ್ಟಂ ಬೇಗದಿಂ ಪೌದನಪುರಿಗೆ ವರಪ್ರೇಮದಿಂ ಖೇಚರೇಂದ್ರಂ ॥ ೧೧೧

ಕರಿಜಾಲಂ ನೀಲಮೇಘಾವಳಿಯನೊಗೆವ ನಾನಾನಕಧ್ವಾನಮುಂಭೋ ।
ಧರನಾದಶ್ರೇಣಿಯಂ ಭೂಷಣಕಿರಣಗಣಂ ಶಕ್ರಚಾಪಾಳಿಯುಂ ಖ ॥
ಡ್ಗರುಚಿವ್ರಾತಂ ತಟಿನ್ಮಾಳೆಯನಿಱಿಸೆ ನವಾಬ್ದಾಗಮಂ ತಾನಿದೆಂಬಂ ।
ತಿರೆ ಪೋಗುತ್ತಿರ್ದನಾಪೌದನಪುರಿಗೆ ವಿಯನ್ಮಾರ್ಗದಿಂ ಖೇಚರೇಂದ್ರಂ ॥

ಖಚರೇಂದ್ರಂ ಕಳುಪಲ್ಕೆ ಪೌದನಪುರಾಧೀಶಂಗದಂ ಪೇೞಲಿಂ ।
ದುಚರಂ ಮುಂದೆ ಮರುಜ್ಜವಂಬುದಿದು ಪೋಗುತ್ತಿರ್ಪ ತತ್ಕಾಲದೊಳ್ ॥
ಸಚಿವಾತ್ಮೀಯಯುತಂ ಪ್ರಜಾಪತಿಮಹಾರಾಜಂ ಪ್ರಚಂಡಸ್ವಕೀ ।
ಯಚತುಃಸೈನ್ಯಸಮನ್ವಿತಂ ಪೊಱಮಡುತ್ತಿರ್ದಂ ಪುರೀದ್ವಾರದಿಂ ॥ ೧೧೩

ಆಸಮಯದೊಳಿಂದುಚರಂ ।
ವಾಸರದ ಬಿಸಿಲ್ಗೆ ತಣ್ಪುಗುಡೆ ತನುರುಚಿ ಲೀ ॥
ಲಾಸಹಮುಮನಿಱಿದಾಜಿತ ।
ವಾಸವಪುರಮೆನಿಪ ಪೌದನಪುರಾಂತಿಕದೊಳ್ ॥ ೧೧೪

ಪೊಱಮಟ್ಟೀೞ್ತಿರುತಿರ್ದ ಪೌದನಪುರೀಶಂ ದೂರದೊಳ್ ಕಂಡಿವಂ ।
ಪೊಱಮಲ್ತಾ ಖಚರೇಂದ್ರನಾತ್ಮಚರನೆಂದಾಳೋಕಿಸುತ್ತಿರ್ದನಂ ॥

ನೆಱಿ ಸಾರ್ದಿಂದುಚರಂ ಪ್ರಜಾಪತಿಮಹಾರಾಜಾಂಘ್ರಿಪದ್ಮದ್ವಯ ।
ಕ್ಕೆಱಗಲ್ ಮೌಳಿವಿಶಾಳಮೌಕ್ತಿಕಚಯಂ ಬೀಱುಲ್ಕೆ ಬೆಳ್ದಿಂಗಳಂ ॥ ೧೧೫

ಮನದಭಿಮತಮದು ಚರರೂ ।
ಪನೆ ತಳೆದೇಱ್ತಂದುದೆಂದು ಭಾವಿಸುತುಂ ಪೌ ॥
ದನಪುರಪತಿಯಿಂದುವಿನಾ ।
ನನವಿಮಳೇಂದುವನಭೀಕ್ಷ್ಣಿಸಿದನುತ್ಸವದಿಂ ॥ ೧೧೬

ಬರುತಾನಿರ್ದಪೆನೀಗಳಲ್ಲಿಯೆ ವಿವಾಹೋದ್ಯತ್ಕ್ರಿಯಾವಸ್ತುವಿ ।
ಸ್ತರಮಂ ನಿರ್ಮಿಪುದೆಂದು ಬಿನ್ನವಿಸು ಸೀನೆಂದೆನ್ನನಸ್ಮದ್ವಿಯ ॥
ಚ್ಛರರಾಜಂ ಭವದಂಘ್ರಿಗಟ್ಟಿದನೆನಲ್ ಕೇಳ್ದಾಗಳಪ್ಪಾರ್ಥಮಂ ।
ಚರನಪ್ಪಿಂದುಗೆ ಕೊಟ್ಟು ಪೌದನಪುರೇಶಂ ಲೀಲೆವೆತ್ತಿರ್ಪುದುಂ ॥ ೧೧೭

ಪಡೆದಳ್ ಪೂರ್ಣೇಂದುಬಿಂಬಂಗಳನೆಸೆವ ನಭೋಲಕ್ಷ್ಮಿತಾನೆಂಬಿನಂ ಬೆ।
ಳ್ಗೊಡೆಗಳ್ ತಟಿತ್ಪ್ರೌಶಸತ್ಪ್ರಾವಳಿಯಬೆಳಗುಬಾಲಾತಪಶ್ರೀಗೆಕೊರ್ವಂ॥
ಕುಡೆ ಕೇತುವ್ರಾತಘಂಟಾನಿನದವೊದವಿ ನಾನಾನಕಧ್ವಾನಮುಂ ಕೀ ।
ಱ್ಪಿಡಿಸಲ್ಕೈತಂದುದಾಖೇಚರಪತಿಯ ನಿಜಾನೂನಸೇನಾಪ್ರತಾನಂ ॥ ೧೧೮

ಆಖೇಚರಪತಿ ಬಲಂಬೆರಸಿ ವರ್ಪುದಂ ಕಂಡು ಭೂಚರಪತಿ ಪ್ರಜಾಪತಿಮಹಾರಾಜಂ ನಿಜಸೇನಾಸಮನ್ವಿತನಿದಿರ್ವಂದು ನಿಂದಿರ್ಪಾಗಳ್:

ಎರೆದಗಿರ್ಗಿವರದಲ್ಲದಿಂತು ವರಕನ್ಯಾರತ್ನಮಂ ತಂದು ಕೊ ।
ಟ್ಟರದಾರ್ ನೋೞ್ಪೊಡಮಿತ್ರಿಪಿಷ್ಟಯುವರಾಜಂಗಾರ್ ಸಮಂ ಪುಣ್ಯನೇ॥
ಱ್ತಿರದಿಂದಾಖಚರೇಂದ್ರನಾತ್ಮಸುತೆಯಂ ತಂದೀಯಲುಂ ಬಂದನ ।
ಚ್ಚರಿಯೆಂದೀಕ್ಷ್ಣಿಸುತಿರ್ದುದಾಪುರಜನಂ ತಂತಮ್ಮ ಹರ್ಮ್ಯಾಗ್ರದಿಂ ॥ ೧೧೯

ಕಡೆಯೊಳ್ ತೀರ್ಥಕರಂ ತ್ರಿಪಿಷ್ಟನಿದನಿಂದಾಂ ನೋೞ್ಪೆನೆಂದುತ್ಸವಂ ।
ತೊಡದೇರ್ದೇಱ್ತರ್ಪವರೇಂದ್ರನೆಂದೆನೆ ಸಮಸ್ತೈಶ್ವರ್ಯಸಂಪತ್ತಿನೂ ॥
ರ್ಮಡಿಸುತ್ತಿರ್ಪನವಾಗಳುರ್ವಿಗಿಜಿತಂದಂ ಬಂಧುರಾನಂದಮುಂ ।
ಪಡೆಯುತ್ತುಂ ಜಗತೀಜನಕ್ಕೆ ಪಿರಿದುಂ ವಿದ್ಯಾಧರಾಧೀಶ್ವರಂ ॥ ೧೨೦

ಎನಿತಾನುಂ ಪ್ರಿಯಮಾನಧೂವರರೊಳಂ ಮುನ್ನಾದುದಿಲ್ಲೆಂದು ಭೂ ।
ಜನಮೊಚ್ಚರ್ಯದಿನೀಕ್ಷ್ಣಿಸುತ್ತಿರೆ ಮಹೀಚಕ್ರೇಶನುಂ ಖೇಚರೇ ॥

ಕನುವೊಲ್ದಿಂತಿದಿರ್ವಂದರಾಗಳದಿರ್ವಂದೊಪ್ಪಲ್ಕೆ ಹರ್ಷಾಶ್ರುವುಂ ।
ಘನರೋಮಾಂಚಮುಮುಣ್ಮೆ ತಮ್ಮಯ ವಿಶೋಭಾನೇತ್ರದೊಳ್ ಗಾತ್ರ
[ದೊಳ್ ॥ ೧೨೧

ವಿನಯಾಲಂಕಾರಚಿತ್ತಂ ಜ್ವಲಸಜಟಿಮಹಾರಾಜನಾನಮ್ರನಾಗ ।
ಲ್ಕೆನಸುಂ ಪಾದಾರವಿಂದಕ್ಕಭಿಮುಖಮಣಿಕೋಟೀರನಾಗುತ್ತಿರಲ್ ಭೋಂ॥
ಕೆನೆ ಕಂಡುತ್ಸಾಹದಿಂ ಪೌದನಪುರಪತಿ ಹಸ್ತಾಗ್ರದಿಂದೆತ್ತುತುಂ ನೀ ।
ಳ್ದ ನಿಜೋದ್ಯದ್ಬಾಹುವಲ್ಲೀಯುಗದೆ ತೆಗೆದು ತಾನಪ್ಪಿದಂ ತ್ಯಕ್ತದರ್ಪಂ॥೧೨೨

ಉಗುತಿರೆ ಹರ್ಷಾಶ್ರುಗಳ ।
ಪ್ಪುಗೆ ಪುದಿದು ಪರಸ್ಪರಪ್ರಿಯಂ ತಲ್ತುದಱಂ ॥
ದಗಲದೆ ನೃಪರಿರ್ವರುಮತಿ ।
ಸೊಗಯಿಸುತುಂ ಕಿಱಿದುಪೊಜ್ತು ವರಮಂತಿರ್ದರ್ ॥ ೧೨೩

ವ॥ ಆಗಳುರ್ವೀನಾಥರಿರ್ವರುವೋರೊರ್ವರಗರ್ವನಿರ್ಭರಪ್ರಮೋ
ದಾಶ್ರುವಿಶ್ರಿತಾಯತಾಕ್ಷಿಗಳಂದೀಕ್ಷಿಸುತ್ತುಮನುರಾಗದಿಂ ಯೋಗಕ್ಷೇಮ
ಕುಶಲಪರಿಪ್ರಶ್ನಾವಚನಾಕೀರ್ಣಕರ್ಣಪೂರೇಂದೀವರದ್ವಯಂರಾದನಂತರಂ
ಪುರಂಭಿಮುಖರಂಗಿ—

ಅವನೀನಾಥಸುತತ್ರಿಪಿಷ್ಟಯುವರಾಜಂಗಪ್ಪ ವೈವಾಹದು ।
ತ್ಸವಮುಂ ನೋಡುವೆವೆಂದು ತಾಮಿಱಿದು ಗಂಗಾಸಿಂಧು ಬಂದಿರ್ದುವೆಂ ॥
ಬವೊಲಿಂಬಾಗೆ ದುಕೂಲದೊಳ್ಪಡಿಗಳುಂ ವ್ಯೋಮಾಗ್ರಮುಂ ಚುಂಬಿಸಂ ॥
ತೆವೊಲೀಟ್ಟಿರ್ದುವು ತಲ್ತು ಪೌದನಪುರೀಹರ್ಮ್ಯಾಳಚೂಳಂಗಳೊಳ್॥೧೨೪

ತುಂಗತೆವೆತ್ತ ಜೈತ್ರಮಯಕೂಟಕಲಾಪದ ಬಳ್ಳನಾಡವಾ ।
ಡಂಗಳ ಚೈತ್ಯಚೈತ್ಯಭವನಂಗಳ ಪೆರ್ಮೆಯನಾಂತ ಹರ್ಮ್ಯಾಹ ॥
ರ್ಮ್ಯಂಗಳ ರಾಜರಾಜನಿಳಯಂಗಳ ಚೂಳಿಕೆಯೊಳ್ ದುಕೂಲಚೇ ।
ಲಂಗಳ ನೀಳ್ದ ಪೆರ್ಗುಡಿಗಳಿತ್ತಿ ವಿರಾಜಿಸಿದತ್ತು ತತ್ಪುರಂ ॥ ೧೨೫

ಅವನಿಪತಿತ್ರಿಪಿಷ್ಟನ ವಿವಾಹಮನೀಕ್ಷಿಪುದಾಯ್ತೆನುತ್ತುಮು ।
ತ್ಸವದೊಳವಿಂದೆ ನರ್ತಿಸುವ ಪೌದನ ಪೌರರಮಾಸುಪಾಣಿಪ ॥
ಲ್ಲವತತಿಯಂತೆ ಕೆಂದಳಿರ ಪೆರ್ಗುಡಿಗಳ್ ಪರಿರಂಜಿಸಿರ್ದುವಿಂ ।
ತವಿರಳವಾಗಿ ತೂಗಿ ತೊನೆಯುತ್ತಿರೆ ಮುಂದಮರುತ್ಪ್ರಪಾತದಿಂ ॥ ೧೨೬

ಸುರುಚಿರಮೌಕ್ತಿಕಪ್ರಕರಮಂ ಹರಿನೀಳಸವಾಜಮುಂ ಸಮುಂ ।
ಬೆರಸು ಸಮುಂತು ನಿರ್ಮಿಸಿದರೆಂದೆನೆ ಷಟ್ಪದಶ್ರೇಣಿ ತಱು ಝೀಂ ॥
ಕರಿಸುವ ಮಲ್ಲಿಕಾವಿಮಳಕುಟ್ಮಲಮಾಲೆ ಪೊದಳ್ದ ತೋರಣೋ ।
ತ್ಕರಮೆನಿಸುಂ ವಿರಾಜಿಸುತುಮಿರ್ದುದು ತತ್ಪುರವೀಧಿವೀಧಿಯೊಳ್ ॥ ೧೦೩

ಸೊಗಯಿಪ ಮಂಗಳಾನಕರವಂ ನಿಮಿರಲ್ ಪುರಮಂ ಪ್ರಭೋದದಿಂ ।
ಪುಗುವ ನರೇಂದ್ರರಿರ್ವರ ವಿಲಾಸವನಾನಗರೀವೃಗಾಕ್ಷಿಯರ್॥
ಮಿಗೆ ಮಿಗೆ ನೀಳ್ದ ನೋಟ್ಪಿ ನಿಡುಗಣ್ಗಳ ಕಾಂತಿ ವಿರಾಜಿಸುತ್ತೆ ಕೇ ।
ಗದೆಯೆಸಲ್ಗರ್ಚಿ ಪಾಱುವ ಮದಭ್ರಮರಾಳಯ ಬಂಬಲೆಂಬಿನಂ ॥ ೧೦೪

ಇಂತು ಪುರಮಂ ಪೊಕ್ಕು ವಿಮುಚ್ಚರಾಧಿಪಬಲಮುಯರಾಜಿತನುಚೀ ಭಾಗದೊಳ್ ಬೇಗದಿಂ ಬೀಡುವಿಡಿಸಿ,

ಅವಿಭೇದಭಾವಮುಂ ತೋ ।
ಱುವ ತೆಱದಿಂ ಜ್ವಲನಜಟಿನೃಪಾಲಂಗೆ ಮುಹೋ ॥
ತ್ಸವದಿಂ ಸ್ವಕೀಯಭೂವರ ।
ನವಸಮನೆಡೆಗೊಟ್ಟನಾಪ್ರಜಾಪತಿಭೂಪಂ ॥ ೧೦೫

ಕೃತಜಿನಪದಾಬ್ಜ ಪೂಜಾ ।
ಧೃತಬಂಧುರಗಂಧಶೇಷರವ್ಯಂ ತಾಂ ಸ್ವೀ ॥
ಕೃತರಾಗಿ ಬಱಿಕ್ಕಮಿಳಾ ।
ಪತಿಗಳ್ ತಾಮಿರೆ ವಿಲಾಸದಿಂದೋಲಗದೊಳ್ ॥ ೧೦೬

ಆಸಮಯದೊಳ್—

ಪಳಕಿನ ಬದ್ಧಭೂಮಿ ಮಣಿವೇದಿಕೆ ಪಚ್ಚೆಯ ಭಿತ್ತಿ ವಜ್ರದು ।
ಜ್ಜ್ವಳಪ ವಿತಾನವಾನಿರ್ದ ನೀಲದ ಪಟ್ಟಳೆ ಕಂಭಮಿಂಬುವೆ ॥
ತ್ತಳವಡೆ ತೋರಮುತ್ತುಗಳ ಸೂಸಕವೊಪ್ಪೆ ಸುರಾಸ ಕಾಂತಿಸಂ ।
ಕುಳದ ವಿಜೆತ್ರಕೋಶಮೆನೆ ಮಂಡಿತವಾಯ್ತು ವಿವಾಹಮಂಡಪಂ ॥ ೧೦೭

ವಿಲಸನ್ಮಣಿಮಯವೇದಿಕೆ ।
ಪೊಳೆವಿಂದೂಪಲದ ಪಟ್ಟವಣೆಯಂ ತಳೆಯೊಳ್ ॥
ತಳೆದು ನೆನೆಯಿಪುದು ಶಶಿನುಂ ।
ಡಳಮಂ ತಳೆದಿರ್ಪ ರೋಹಣಾದ್ರಿಯು ಚೆಲ್ವಂ ॥ ೧೦೮

ಪರಿಕಿಸೆ ಮಿತ್ರರಾಜವಿಭವಾಸ್ಪದನೆನ್ನವೊಲೀತ್ರಿಪಿಷ್ಟಭೂ ।
ವರನದಱಿಂದಮಿತನ ವಿವಾಹಮನೀಕ್ಷಿಪೆನೆಂಬ ರಾಗಮುಂ ॥
ಧರಿಯಿಸಿದಂ ವಿಯನ್ನೃಪತಿ ತಾನೆನಿಪಂದದಿನಾವಿವಾಹಮುಂ ।
ದಿರದ ತದಗ್ರರತ್ನಕಲಶಪ್ರಭೆಯಿಂ ಕಿಸುವೆತ್ತು ದಾಗಸಂ ॥ ೧೩೩

ಭೃಂಗಾರಾವಮಳರುಕ್ಮಪು ।
ಟಂಗಳ್ ಮರಕತಪುಟಂಗಳೆನೆ ಮಿಸುಗುವ ಜಾ ॥
ಗಂಗಳ ಪಸುರ್ವೆಳಗಿಂದೆ ಮು ।
ನಂಗೊಳಿಸಿದುವಾವಿವಾಹಗೇಹಾಂತರದೊಳ್ ॥ ೧೩೪

ರತ್ನದ ಬಣ್ಣವುರಂ ಪೊಸ ।
ಪನ್ನೀರ ಪೊದಳ್ದಿ ಸಾರವಣೆ ಪೂವಲಿ ಚೆ ॥
ಲ್ವನ್ನಯನಕ್ಕೊದವಿದ ಕಂ ।
ಪನ್ನಾಸಿಕೆಗೀಯುತಿರ್ದುದಾಮುಂದಿರದೊಳ್ ॥ ೧೩೫

ಘನಸಾರಂ ಶುಭದೂರ್ವಾವಳಿ ನವಯುವೆ ಕಸ್ತೂರಿ ಲಾಜಾಚಯಂ ಚಂ।
ದನವಿಂದೂದ್ಯತ್ಕಳಾಭಾಕ್ಷತತತಿ ಮಣಿವೀಪಾಳಿ ತನ್ಮಂಗಳದ್ರ ॥
ವ್ಯನಿಕಾಯಾಕೀರ್ಣಸೌವರ್ಣದ ಸುರುಚಿರಪಾತ್ರಂಗಳಿಂ ಕೋಣ್ಬಚಾತು ।
ಪ್ಕನಿಷಣ್ಣ ಸ್ವರ್ಣಕುಂಭಪ್ರಸರದಿನೆಸೆದತ್ತೀಗಳುದ್ವಾಹಗೇಹಂ ॥ ೧೩೬

ವ॥ ಎಂದು ಗೃಹಮುಹತ್ತರಂ ಬಿನ್ನವಿಸೆ ಪೌದನಪುರಾಧಿಪತಿ ತತ್ಸಮು
ಯಮುಹೂರ್ತಿಕಪ್ರದತ್ತಾಸನ್ನಶುಭಲಗ್ನಶ್ರವಣಸಂಭ್ರಮಸ್ವಾಂತನಾಗಿ,

ಪೊಡೆಯಿಸೆ ಪೊಣ್ಮಿ ತತ್ಸಮಯಮಂಗಳವಾದ್ಯದ ಹೃದ್ಯನಾದಮಿಂ ।
ಪೊಡವಿಯನುರ್ವಿ ಪರ್ವುತಿರೆ ತನ್ನೃಪಸುಂ ಖಚರಾಧಿನಾಥನುಂ ॥
ತಡೆಯುತಿರಲ್ಕೆ ತನ್ನೃಪತಿಯರ್ ವೊಲವುಣ್ಮಿ ತದೀಯವಿವಾಹಶೋಭೆ ನೂ।
ರ್ಮಡಿಸಲೊಡರ್ಚಿದರ್ ಜನದ ನೇತ್ರಚಯಕ್ಕೆ ವಿಜೆತ್ರಮಪ್ಪಿನಂ ॥ ೧೩೭

ನಲಿದೋರಂತಿರೆ ತತ್ಕ್ರಯಾತುರದಿನುದ್ಯನ್ಮಂಗಳದ್ರವ್ಯಸಂ ।
ಕುಲಭೃತ್ಪಾಣಿಗಳಾಗಿ ಸಂಚರಿಸ ಕಾಂತಾನೀಕಮಂಜೀರಮುಂ ॥
ಝಲನಾದಂ ಪುದಿಯುಲ್ಕೆ ಜೇವೊಡೆಯೆ ಪೊಣ್ಮುತ್ತಿರ್ಪ ಕಂದರ್ಪಚಾ ।
ಪಲತಾರಾವಮೆನಲ್ ಕರಂ ಸೊಗಯಿಸಿತ್ತು ದ್ವಾಹಗೇಹಾಂತರಂ ॥ ೧೩೮

ಅಸವುಯದೊಳ್—

ಮುಂಗಳಸವನಾನಂತರ ।
ಮುಂಗೀಕೃತಶುಭವಿಭೂಷರಂ ಮಾಡಿ ಜಿತಾ ॥
ನಂಗನೆನಿಪಾಕುಮಾರಕ ।
ನಂ ಗಾಮಿನಿಯೆನಿಪ ಖೇಚರಪತಿನಂದನೆಯುಂ ॥ ೧೩೯

ಉದಯಿಪ ಘೋಷವಾಗಿ ಮೊಜಗುತ್ತಿರೆ ಮುಂಗಳವಾದ್ಯನಾದವು ।
ಗ್ಗದ ಯುವರಾಜನುಂ ಖಚರನಂದನೆಯುಂ ತೆರೆಯೆತ್ತೆ ಹರ್ಷವು ॥
ಣ್ಮಿದ ಕುಲವೃದ್ಧರೆಯ್ದಿ ಪರಿವೇಷ್ಟಿಸಿಕೊಂಡು ಪುರೋಹಿತೋಪದಿ ।
ಷ್ಟದಿನೊಳಪೊಕ್ಕರಿಂತೆಸೆಯುತಿರ್ಪ ವಿವಾಹಗೃಹಾಂತರಾಳವುಂ ॥ ೧೪೦

ಕಳಕಳವುಂ ಮಾಣ್ದು ನಿರಾ ।
ಕುಳಚಿತ್ತದೆ ತನ್ಮಹೂರ್ತಿಕಾಶೀರ್ವಾದಂ ॥
ಗಳನಾಲಿಸುತಿರ್ದುದು ವಳಿ ।
ಗಳಡಂಗಿದ ಕಡಲ ತೆಱದಿನಾಜಸವುನಿತುಂ ॥ ೧೪೧

ಪರಿಕಿಸಿ ಮೌಹೂರ್ತಿಕನಾ ।
ನಿರುಪಮಶುಭಲಗ್ನನಿಪ್ಪನೋ ಪೂರ್ಯಮೆನಲ್ ॥
ತೆರೆ ತೊಲಗೆ ಪಟ್ಟವಣೆಯುಂ ।
ತ್ವರಿತದೆ ಬಂದಾಗಳೀಱಿದರ್ ದಂಪತಿಗಳ್ ॥ ೧೪೨

ಶರಧಿಪ್ರಕ್ಷೋಭನುಂ ಕೀಲ್ಪಡಿಸಿ ಮೊಜಗೆ ನಾನಾನಕಂಗಳ್ ಧರಿತ್ರೀ ।
ಸುರವೃಂದಾಶೀರ್ವಚಸ್ಸಂಚಯನುಮುರರವಂ ತೀವೆಯುಗ್ಮಾನ್ವಯೋದ್ಭ ॥
ತರತೀವಾನಂದದಿಂದಂ ಸಲೆಯುತಿರೆ ಮಹೀಶಂ ತ್ರಿಪಿಷ್ಟಂಗೆ ತಾಂ ಹ ॥
ರ್ಷರಸಂ ಕೈವಿಾಱಿ ಕೈನೀರೆಱಿದು ಸುತೆಯನೊಲ್ದಿತ್ತನಾಖೇಚರೇಂದ್ರಂ ॥

ವರರಾಜ್ಯಜೆಹ್ನವುಂ ತದು ।
ಪರಿಶೇಷಂ ತನಗೆನಲ್ಕೆ ಖೇಚರಪತಿ ಸಾ ॥
ದರದಿಂದಳಿಯುಂಗಿತ್ತಂ ।
ಕರಿತುರಗಾದ್ಯಖಿಳವಸ್ತುವಂ ಬಟಿವಟಿಯುಂ ॥ ೧೪೪

ತನಗೆ ನೆಗಟ್ಟಿನ್ವಯಾಗತ ।
ವೆನಿಸಿರ್ದಾಸಿಂಹಗರುಡವಾಹಿನಿವೆಸರ ॥

ಪ್ಪನುಪಮವಿದ್ಯೆಗಳಂ ಸಾ ।
ಧನವಿಧಿವೆರಸಿತ್ತ ಸಂತಮಂ ಬಟೆವಟಿಯಂ ॥ ೧೪೫

ವ ॥ ಇಂತು ಪರಿಣಯನಪರವೋತ್ಸವದಿಂದುಡಲುಂ ತೊಡಲುಂ ಕೊಟ್ಟು ಪರಿತುಷ್ಟರಾಗೆ ರಾಗದಿಂ ಪ್ರಜಾಪತಿಮಹಾರಾಜನಂ ಕಳುಪಿಯುಂ ಜ್ವಲನಜಟಿಮಹಾರಾಜಂ ನಿಜರಾಜಧಾನಿಯಪ್ಪ ರಥನೂಪುರಚಕ್ರವಾಳನಗರೀನಿವೇಶಿತನಾಗಿ—

ಮನುಚಾರಿತ್ರಂ ಚರಿತ್ರಂ ನಿಖಿಲವಿಬುಧರಕ್ಷ್ಮಾರ್ಥಮರ್ಥಂ ನಿಜೋದ್ಯ ।
ದ್ಧನವಿಕ್ರಾಂತಂ ವಿರೋಧಿಕ್ಷಿತಿಪಕುಲಕೃತಾಂತಂ ತ್ರಿಲೋಕೀರವಾನ ॥
ವ್ಯನಿವಾಸಂ ಕೀರ್ತಿಭಾಸಂ ಕುಲಭಚರಸವಾಜಾಸ್ಪದಂ ಸಂಪದಂ ತಾ ।
ನೆನೆ ರಾಜ್ಯಂಗೆಯ್ಯುತಿರ್ದಂ ಶುಭಗುಣನಿಲಯಂ ಸೂಕ್ತಿಸಂದರ್ಭಗರ್ಭಂ ॥

— ಗದ್ಯಂ —

ಇದು ವಿನಮದಮರೇಂದ್ರಮೌಳಿ ಮಣಿಕಿರಣಮಾಲಾಪರಾಗಪರಿರಂಜಿತಚರಣ ಸರಸೀರುಹರಾಜಿತ ಪರಮಜಿನರಾಜಸಮಯಸಮುದಿತಸದಮಲಾಗಮಸುಧಾಶರಧಿ ಶರದಿಂದು ಶ್ರೀಮಾಘಣಂದಿಪಂಡಿತಮುನೀಶ್ವರ ಮನೋಜನಿತನಿರುಪಮದಯಾ ಸರಸಿಸಂಭೂತಸಂಭವಾಮಳ ಸುಕವಿಕಮಲಭವ ವಿರಚಿತಮಪ್ಪ

ಶಾಂತೀಶ್ವರ ಪರಮಪುರಾಣದೊಳ್

ಸ್ವಯಂಪ್ರಭಾದೇವಿ ತ್ರಿಪಿಷ್ಟಯುವರಾಜ ವಿವಾಹ ಕಲ್ಯಾಣವರ್ಣನಂ,

ದ್ವಿತೀಯಾಶ್ವಾಸಂ.

ತೃತೀಯಾಶ್ವಾಸಂ

ಶ್ರೀ ನೆಲಸಿದಂತೆ ವಕ್ಷ ।
ಸ್ಥಾನದೊಳನುರಾಗಲಕ್ಷ್ಮಿ ಪದೆಪಿಂ ಮನದೊಳ್ ॥
ತಾ ನೆಲಸಿರುತಿರ್ದಂ ಪ್ರತಿ ।
ಭಾನಿಧಿಜಿನಪದಪಯೋಜರಾಜಮರಾಳಂ ॥ ೧

ಸ್ಥಿರರಾಜ್ಯವಿಭವದಿಂ ಬಿ ।
ತ್ತರಿಸುತ್ತುಂ ಜ್ವಲನಜಟಿಮಹಾರಾಜಂ ಖಲೇ ॥
ಚರದಿವಿಜರಾಜನೆಂದೆನೆ ।
ನಿರಂತರಂ ಸುಖದಿನಿರುತಿರಲ್ ಮತ್ತಿತ್ತಂ ॥ ೨

ಸತತಂ ಪ್ರಜಾಪತಿಕ್ಷಿತಿ ।
ಪತಿ ಪೌದನಪುರಿಯೊಳತುಳಸಾಮ್ರಾಜ್ಯವಿರಾ ॥
ಜಿತನಾಗಿ ರಾಗದಿಂ ಸತಿ ।
ಸುತಸಜೀವಸಮನ್ವಿತಂ ಸಮಂತಿರುತಿರೆಯುಂ ॥ ೩

ಧರಣೀರಮಣಿಯ ಮಣಿನೂ ।
ಪುರಮೆನಿಸ ಪುರಂಗಳಂ ಪುರಾವೃತಶೋಭಾ ॥
ಕರವನದಿಂ ವನಪರಿವೃತ ।
ಸರಸಿಜದಿಂ ಸಿಂಧುವಿಷಯಮೆಸೆವುದು ನಿಸದಂ ॥ ೪

ಆಸಿಂಧುವಿಷಯದೊಳ್

ಸಿಡಿಲಂ ನೆಟ್ಟಗೆ ಬಟ್ಟುಗೆಯ್ದ ತೆಱನಪ್ಪಾದಿಟ್ಟಿಯುಂ ದಿಟ್ಟಿಗಳ್ ।
ಕಿಡಿಯುಂ ಕೇಸುರಿಯುಂ ಕಡಂಗಿ ಸುರಿತಪರ್ಜಾಭೀಳದಿಂ ಕಾಲನಂ ॥
ಪೊಡೆದಿಕ್ಕಲ್ ವಿಳಯಾಂತಕಂ ಮುಳಿದಿಭದ್ವಿಣ್ಮೂರ್ತಿಯಂ ತಾಳ್ದಿದಂ ।
ಗಡಮೆಂಬಂತೆ ಕೊಲುತ್ತು ಮಿರ್ದುದು ಸಮಂತುತ್ಕಂಠಕಂಠೀರವಂ ॥ ೫

ಇದು ಕುಂಭಿವ್ರಾತಶುಂಭದ್ಭಿದುಗಳ ವಿದುಳಂ ತಿಂದು ಸಂತುಷ್ಟಿಯಂ ತಾ।
ಳ್ದದೆ ಸಂಭೂತಕ್ಷುದಗ್ನಿಜ್ವಲಿತ ಜಠರನೋರಂತೆ ನಾನಾಮೃಗಾನೀ ॥
ಕದ ಕರ್ಗಂಡಂಗಳಂ ದೊಂಡೆಗಳನಡಸಿ ನುಂಗುತ್ತುಮತ್ತಲ್ಲಿಯುಂ ನಿ ।
ಲ್ಲದೆವುತ್ತಂ ಮರ್ತ್ಯರಂ ಮಾನುಷಮಸಗಿಕೊಲುತಿರ್ದುದಂತಾಮೃಗೇಂದ್ರಂ ॥

ಇರದೂರೂರ ಪೊಲಂಗಳೊಳ್ ಸುಟಿವರಂ ನೀಟ್ಟಿಕ್ಕುತುಂ ಬಟ್ಟೆವೋ।
ಪರನೆಬ್ಬಟ್ಟ ಕೊಲುತ್ತುಮಾಂತ ಭಟರಂ ತುತ್ತೆತ್ತುತಂತಿರ್ದ ನಿಂ ॥
ಧುರವಿದ್ವಿಡ್ಭಯದಿಂದೆ ನಿಂಧುವಿಷಯಂ ಪಾಟಾಗೆಯುಂ ತಜ್ಜನೋ ।
ತ್ಕರಮೇೞ್ತಿಂದನಿತುಂ ಪ್ರಜಾಪತಿಮಹಾರಾಜಂಗೆ ಪುಯ್ಯಲ್ಲಿದರ್ ॥ ೭

ಇದು ಕಂಠೀರವದಂದಮಲ್ತು ಮುನಿಸಿಂ ಕಾಲಾಂತಕಂ ನಿಂಹರೂ ।
ಪದೆ ಪೋ ಕೊಂದಪನೆಂದು ತನ್ನಯ ಸಭಾರಾಜನ್ಯಕಶ್ರೇಣಿ ಚಿ ॥
ತ್ತದೊಳಾಗಳ್ ಭಯಮುತ್ತು ಕಂದಿರೆ ದರಸ್ಮೇರಾಸ್ಯನೀರೇಜನಾ ।
ಗಿ ದಿಟಂ ಪೊಯ್ದಿನನಾನೃಪಂ ದೆಸೆಗಳಂ ತಟಿಪ್ಪೊಯ್ಯೆ ಭೇರೀರವಂ ॥ ೮

ಆಸಿಂಹವಧೋದ್ಯೋಗದಿಂದಾಳ್ಪಱುಮಡುವ ರಭಸಮುಂ ಕೇಳ್ದು ವಿಜಯತ್ರಿಪಿಷ್ಟಯುವರಾಜರ್ ಬಂದು ತಂದೆಗಿಂತೆಂದರ್:—

ದೇವ ಭವತ್ಪ್ರಸಾದದೆಸಕಕ್ಕಿದು ಪಾಟಯೆ ತನ್ಮೃಗೇಂದ್ರಜೇ ।
ವಾವಿಗೆಗೆಯ್ದು ನಿಂಧುವಿಷಯಕ್ಕಭಯತ್ವಮನಿತ್ತು ಬರ್ಪುದ ॥
ಕ್ಕಾವೆ ಸವುಂತು ಸಾಲ್ವೆನೆನುತುಂ ವಿಜಯೋಪಚಿತಂ ತ್ರಿಪಿಷ್ಟಧಾ ॥
ತ್ರೀವರನಾಗಳಂತೆ ನಡೆದಂ ಕಡುಪಿಂ ಭಟಸೈನ್ಯಸಂಯುತಂ ॥ ೯

ಕಡುಗೊರ್ವಿಂದಿಡಿದೆಯ್ದಿ ಕಟ್ಟಿಲಿಪ ಕಾಂತಾರಕ್ಕೆ ದಾವಾನಳಂ ।
ನಡೆದಂತುಣ್ಮಿದ ಕೋಪವಹ್ನಿ ಕಡೆಗಣ್ಣಿಂ ದಳ್ಳಿಸುತ್ತುರ್ವಿ ಮುಂ ॥
ನಡೆವನ್ನಂ ಭಟಸೈನ್ಯಜಾಳಪರಿವಿಷ್ಟಾಭೀಳರಾಸಿಂಹವಿ ।
ರ್ದೆಡೆಗಾಗಳ್ ನಡೆದರ್ ಕಡಂಗಿ ವಿಜಯಶ್ರೀಮತ್ತ್ರಿಪಿಷ್ಟೋರ್ವಿಪರ್ ॥

ಸಲೆ ತನ್ನುಗ್ರಕರಂಗಳುಚ್ಚಲಿಸಲಮ್ಮಂ ಭಾನು ತಾನೆನ್ನೊಳಂ ।
ದುಲಿವಂತಾವಗಮೆಯ್ದಿ ನೀಳ್ದೊಗೆವ ಭೇರೀರಾವದಿಂ ತಟ್ಟುಕ ॥
ಟ್ಟಿಲಿಸುತ್ತಿರ್ಪ ತವೊಳದೊಂದು ಪೊದಱೊಳ್ ಕಣ್ಗೆಂಪು ಕೆಂಡಂಗಳಂ ।
ಗೆಲೆ ಕಂಠೀರವನಿರ್ದುದಲ್ಲಿ ಜನಿಸುತ್ತುತ್ಕೋಪದಾಟೋಪಮಂ ॥ ೧೧

ಪ್ರಕಟಾಭೀಳಮುಖಂ ದ್ವಿಪಾರ್ಶ್ವಸಮವೀಕ್ಷಾಕ್ಷಿದ್ವಯಂ ಹಸ್ತಿ ಮು ।
ಸ್ತ್ತಕಮುಸ್ತಿಪ್ಪನವವ್ರಣಾರುಣತೆಂದಘ್ರ್ಯನ್ಯಕ್ತರಕ್ತಾದವೌ ॥
ಕ್ತಕಜಾಲಗ್ರಥಿತಾಚ್ಛವಕ್ತ್ರನಖರಂ ಲಂಬೋಲ್ಲಸತ್ಕೇಸರ ।
ಪ್ರಕರಂ ಕೇಸರಿಯಿರ್ದೊಡಂತದನೆ ಕಂಡರ್ ಕೂಡೆ ಸೇನಾಭಟರ್ ॥ ೧೦

ಇರೆ ಕಂಠೀರವನಿರ್ದುದಿರ್ದುದೆನುತುಂ ಸೇನಾಭಟರ್ ಕೂಡೆ ಕಾ।
ಯ್ದುಲಿಯುತ್ತುಂ ಪರಿದೆಯ್ದಿ ಮುತ್ತಲನುಗೆಯ್ದುಗ್ರಾಸ್ತ್ರದಸ್ತ್ರಂಗಳಂ॥
ಸಲೆ ಸನ್ನದ್ಧತೆವೆತ್ತು ಬೊಬ್ಬಿ ಱಿಯುತಾಗಳ್ ಪೊಯ್ಸಿದರ್ ದಿಗ್ಗಜಾ।
ತುಲಕರ್ಣಾವಳಿ ಕೂಡೆ ಘಿಮ್ಮಿಡುವಿನಂ ಯುದ್ಧಾನಕಾನೀಕಮುಂ ॥೧೩

ಇರದೆಟ್ಟಿಂದಾಭಟಾನೀಕಿನಿಯ ಕಟುರವಂಗೇಳ್ದಕಾಯ್ದೆಟ್ಟು ರೋಷೋ
ತ್ಕರಮುರ್ವೀಚಿಲ್ಕೆಮೆಯ್ಗೆ ತ್ತೊಗೆದು ತೊನೆಯೆ ವಾಲಾಗ್ರಮುಂಕಣ್ಗಳಂಕೇ॥
ಸುರಿಸೂಸಲ್ ಪದ್ಮಜಾಂಡಂ ಬಿಱಿಯೆ ಘುಳುಘುಳುಧ್ವಾನಸಂರಂಭಮುಣ್ಮ
ತ್ತಿರಲಾಗಳ್ ಗರ್ಜಿಸುತ್ತುಂ ಮುಳಿದು ಮುಸಕಮುಂ ತಾಳ್ದದತ್ತಾ

[ಮೃಗೇಂದ್ರಂ ॥

ಘನಕೋಪಾಟೋಪದಿಂ ಗರ್ಜಿಸಿದ ಮೃಗಪತಿಧ್ವಾನದಾವಜ್ರಪಾತ।
ಕ್ಕಸತುಂ ಜೀಱಿಟ್ಟಿದ್ದ ಪಾಱುತ್ತಳವಟಿದೊಳಱುತೊಡೆ ಗೂಡಗ್ಗಿ ಪೊಗ್ಗು॥
ತ್ತಿಸುಂಬಾಯ್ವಿಟ್ಟು ಕಟ್ಟಾಯುಮನುಱಿದಟಲುತ್ತೆಯ್ದಿ ಸೇನಾಭಟಭೋರ್ಂ।
ಕೆನೆ ತಾಱುಂತಟ್ಟುವೀಱಿಲ್ಲ ದಿರದಿದಿರೊಳಾಂತಿರ್ದನಂತಾಕುಮಾರಂ ॥೧೪॥

ಆಗಳ್ ವಿಜಯಬಲದೇವನಂ, ದೇವ! ನೀವು ಪಿಂತಿರ್ಪುದೀಸಿಂಗದ ಸಂಗರಕ್ಕಾನೆ ಸಾಲ್ವನೆಂದು ಪಿಂದೆ ನಿಲಿಸಿ, ಬಲದಿಂ ತ್ರಿಪಿಷ್ಟಯುವರಾಜಂ ತಡೆಯದಿದಿರ್ಚೆ ನಡೆಯೆ—

ವಸುಧಾವ್ಯೋಮದ ಸಂಧಿಬಂಧನದಂ ಬಿರ್ಚೆತ್ತೆನಲ್ ಪೆರ್ಚೆ ಗ।
ರ್ಜಿಸುತುಂ ಕೇಸರವಾಲಿ ಸೂಸೆ ಕಡೆಗಣ್ಣಿಂದಾಕ್ಷಣಂ ಪಾಯ್ದು ಲಂ ॥
ಘಿಸಿ ಮೇಲ್ವಾಯ್ದ ಮೃಗೇಂದ್ರನಂ ಬಗೆಯದಾರ್ದಾರ್ದಂಡೆಗೊಂಡೆತ್ತಿ ಕಿ।
ಟಿಸಿಲಿಂ ಕೂರಲಗಿಂದೆ ಕುತ್ತಿ ಯುವರಾಜಂ ಕೊಂದನುಗ್ರಾಜಿಯೊಳ್ ॥

ಬ

ಕೇಸರಿಯಂ ಪುಗಿಸಿ ಯುವಾ ।
ವಾಸವನಾಸಿಂಧುವಿಷಯಜನಮಂ ಹರ್ಷಾ ॥
ವಾಸಂಬುಗಿಸಿದನಭಯನಿ ।
ವಾಸನಿಳೀಶಂ ತ್ರಿಪಿಷ್ಟನೇಂ ಸಾಸಿಗನೋ! ॥ ೧೬

ಎಂದಿಂತು ಜನಂ ಪೊಗಟಿಸಿ ನೆಗಟಿತ್ತೆವಡೆದು ನಿಜಬಲಂಜೀರಸು ವಿಜ
ಯವಿರಾಜಿತಂ ತ್ರಿಪಿಷ್ಟಯುವರಾಜಂ ಪುರಾಭಿಮುಖನಾಗಿ ಬರುತ್ತುಮಿರ್ದಾ
ಗಳ್—

ಇದಿರೊಳ್ ಬರುತ್ತುಮಡಿಗೆಱ ।
ಗಿದ ಶಿಷ್ಟರನಾತ್ರಿಪಿಷ್ಟಯುವರಾಜಂ ಬೇ ॥
ಗದೊಳೀಪಾಗುಡಮುಂ ನೀ ।
ವಿದೇನದಾರ್ಗುಯ್ವಿರೆಂದು ನೆರೆ ಬೆಸಗೊಂಡಂ ॥ ೧೪

ದೇವರ್ ಕಳುಪಿದರಶ್ವ ।
ಗ್ರೀವಂಗವನರ್ಘಚಕ್ರಿಯತಿಬಲನೆಂಬೀ ॥
ಭಾವದೊಳೀಪಾಗುಡಮುವು ।
ನಾವುಯ್ದುಪೆವೆಂದು ಶಿಷ್ಟರಿರದಿಂತೆಂದರ್ ॥ ೧೫

ಅವನೊರ್ವಂ ಗಡಮರ್ಧಚಕ್ರಿ ಗಡಮಶ್ವಗ್ರೀವನೆಂಬಂ ಗಡಂ ।
ತವನಾರ್ಗಂ ನೆರೆ ಬಲ್ಲಿದಂ ಗಡಮವಂಗೇಕಟ್ಟಿದರ್ ದೇವರೆ ॥
ಮ್ಮುವನಾಲೋಚಿಸದೆಂದು ಪಾಗುಡಮನಾಗಳ್ ಕೊಂಡು ತಾನಿತ್ತನು ।
ತ್ಸವದಿಂದಂ ವಿಜಯುಂಗೆ ಸಿಂಹವಿಜಯಶ್ರೀಮತ್ತ್ರಿಪಿಷ್ಟೋರ್ವಿಪಂ ॥ ೧೦

ಮತ್ತಮಲ್ಲಿಂ ತಳರ್ದು ಪುರಕ್ಕೆ ಬರುತ್ತುಮಿರೆ--

ಬಗೆಯದೆ ಪಾಯ್ದ ಕೇಸರಿಯ ಜೀವಸಮಿೂರಣನಂ ಕೃತಾಂತಪ ।
ನ್ನಗಪತಿಗಿತ್ತು ಸೇನೆಯ ಭಟಾಸುಕುಲಕ್ಕೆ ಪೊಡರ್ಪನಿತ್ತು ಧಾ ॥
ತ್ರಿಗೆ ಪೆಸರ್ವೆತ್ತ ಸಿಂಧುವಿಷಯಕ್ಕಭಯತ್ವಮನಿತ್ತು ಮೂಜಗಂ ॥
ಪೊಗಜಿಕೆ ನೆಗಜಿಕ್ತೆವೆತ್ತು ಬರುತಿರ್ದಪನಲ್ತೆ ಭವತ್ಕುಮೂರಕಂ ॥ ೧೧

ಎನೆ ಕೇಳ್ದಾಕ್ಷಣದಿಂದೆ ಪೌದನಪುರಶ್ರೀಕಾಂತನಂತಾಚರಂ ।
ಗೆ ನಿಜಾಲಂಕೃತಿಯಂಗಜಿತ್ತವನೆ ಕೊಟ್ಟುತ್ತಾಸಹಭೇರೀರವಂ ॥
ರನಿನಾದಂ ದೆಸೆಗೆಯ್ದೆ ಪೊಯ್ಸಿ ಪುರಮುಂ ಕೈಗೆಯ್ಸಿ ಪುತ್ರಾವಲೋ ।
ಕನಕೌತೂಹಲಚಿತ್ತನಾಗಳಿದಿರ್ವಂದಿರ್ದಂ ಪುರೋಪಾಂತದೊಳ್ ॥ ೧೨

ಯತನಿಪ್ಪಂದತರಾಪ್ತಪಕ್ಷಪುಟನುದ್ಗ್ರೀವಾಸ್ಯನೀರೇಜನಾ ।
ಗಿ ತನೂಜಾಗಮನಾವಳೋಕನದಿನಿಂತುರ್ವೀಶನಿರ್ಪನ್ನಮು ॥
ಚ್ಚ್ರಾತಶುಭ್ರಾತಪವಾರಣಪ್ರತತಿಯಿಂ ನಾನಾನಕಧ್ವಾನಸಂ ।
ಗತಿಯಿಂ ಶೋಭಿಸುತುಂ ತದೀಯಯುವರಾಜಂ ಬಂದನಾನಂದದಿಂ ॥ ೧೩

ಮೃಗರಾಜವಿಜಯರಾಗಂ ।

ದ್ವಿಗುಣತೆವಡೆದಂತೆ ನಿರ್ವ* ಮಕುಟವಮಣಿಜ್ಯೋ ॥
ತಿಗಳಂ ಕುಮೊರನಾಗಳ್ ।
ದ್ವಿಗುಣಿಸಿದಂ ನೃಪನ ಚರಣದರುಣಪ್ರಭೆಯಂ ॥ ೮೪

ಇಂತೆಱಗಿದ ತನಯಂಗೊಲ ।
ವಿಂ ತಳವ ಸಮುಜ್ಜ್ವಳಾತ್ತ ಶೇಷಾಕ್ಷತಜಾ ॥
ಳಂ ತಾನೆನೆ ಹರ್ಷಾಶ್ರುಕ ।
ಣಂ ತರದಿಂದುಗುತಿರಲ್ಕೆ ನೋಡಿದನರಸಂ ॥ ೮೫

ಆಗಳ್ ಸ್ವಕೀಯಪುಣ್ಯೋದಯದಿಂ ಪದಸನ್ನಿಧಿಗೆ ವಂದ ಮಣಿನಿಧಿಗಳನೆತ್ತುವಂತೆ ಮಕುಟಾಗ್ರಮುಂ ಪಿಡಿದೆತ್ತಿ ಕಮಲದಂತೆ ಕಂಟಕಿತವಾದ ಬಾಹುಕಾಂಡಂಗಳಿಂ ಕುಮೊರನಂ ತಱಿಕ್ಕಿಸಿ ತೀಕ್ಷ್ಣತೇಜನಪ್ಪ ವೈರಾಜಯೋಧನದೊಳಕ್ಷತಗಾತ್ರನಾಗಿರ್ದ ತ್ರಿಪಿಷ್ಟನ ತನುವಂ ನೋಡಿ ಪ್ರಜಾಪತಿಮಹಾರಾಜಂ ವಿಸ್ಮಯಸ್ವಾಂತನಾಗಿ,

ಸೊಗಯಿಪ ಕಂಪವಿಟ್ಟ ತನುದಿಧಿತಿಯಿಂದನುರೇಂದ್ರದಂತಿಯುಂ ।
ಮಿಗೆ ನೆಱಿ ಪಣ್ಣಿ ಬಂದ ಗಜರಾಜನನಾಗಳೆ ತಂದು ಸಾರ್ಚಿ ಶೋ ॥
ಭೆಗೆ ನೆಲೆಯಾಗಿ ಧಾತ್ರಿಗೆ ಜಯಂತನೆ ತಾನೆನಲೇಱಿದಂ ಪ್ರತಾ ।
ಪಿಗಳೆಱಿಯಂ ತ್ರಿಪಿಷ್ಟಯುವರಾಜನದಂ ವಿಜಯೋಪಯುಕ್ತದಿಂ ॥ ೮೬

ಮತ್ತಮಾಗಳ್ ಮಂಗಳಾನಕರವಂ ಪೊಣ್ಮುತ್ತಿರೆ ಪ್ರಜಾಪತಿಮಹಾರಾಜಂ ಯುವರಾಜಗಜೇಂದ್ರಂ ಮುಂದಾಗಿ ಪುರವುಂ ಪುಗುವಾಗಳ್—

ಸಿಂಗವನೋವದೆಕ್ಕತುಳದಿಂ ತವೆ ತೂಱಿದೆಯೆ ಸಿಂಧ ವೇಶದಿಂ ।
ಪಿಂಗಿಸಿದಂ ಮಹಾಭಯಮನೀಯುವರಾಜನೆನುತ್ತೆ ವಿಸ್ಮಯಾ ॥
ಲಿಂಗಿತಚಿತ್ತರಾಗಿ ನೆರೆದೊತ್ತರದಿಂ ಮಣಿಹರ್ಮ್ಯಹರ್ಮ್ಯಚಯ ।
ಳಂಗಳೊಳಿಂತು ವರ್ಣಿಸುತೆ ವೀಕ್ಷಿಸುತಿರ್ದುದು ತತ್ಪುರೀಜನಂ ॥ ೮೭

ಸಡಿಲೆ ಮುಡಿ ಬಳ್ಕೆ ನಡು ದಡ ।
ದಡಿಸುತ್ತಿರೆ ತೊಡೆಗಳುಣ್ಕೆ ನೂಪುರನಿನದಂ ॥
ನಡೆತಂದು ನೋಡಿದಳ್ ಕ ।
ಣ್ಗುಡಿವೆಳಗಡರುತ್ತುಮಿರೆ ಕುಮೊರನನೊರ್ವಳ್ ॥ ೮೮

ಚರಣತಳಕ್ಕೆ ಬೀೞ್ವ ಮಣಿಕಾಂಚಿಯನೆತ್ತದೆಯುಚ್ಚುತಿರ್ಪ ನೂ ।

ಪುರಮನೆ ಸೈತು ಸಾರ್ಚಿ ಬೆ ಜಗುಳ್ದಿ ಟಿವಾಭುಜಭೂಷಣಂಗಳಂ ॥
ಪರಿಕಿಸದುನ್ನತಸ್ತನದೆ ಜಾಱುವ ಮೇಲುದನೊರ್ವ ಕಾಂತೆ ಸಂ ।
ಹರಿಸದೆ ಬಂದು ಸಂಭ್ರಮದೊಳೀಕ್ಷಿಸಿದಳ್ ಪದೆಪಿಂ ತ್ರಿಪಿಷ್ಟಪಂ ॥ ೮೯

ಎಟಿಲೆ ಕಟಿಲ್ದು ಮೇಲುದು ಜಗುಳ್ದ ಬಟಿಲ್ಮಡಿ ಜೋಲ್ದು ಪೂಲೆವೂ।
ಕಟಿಲೆ ಸಡಿಲ್ದು ನೀವಿ ನಸುಬೀಱಿ ರೆ ನಾಣ್ಬ ದನಂಗಜೌಕದಿಂ ॥
ದಿಟಿತರೆ ಘರ್ಮವಾರಿಕಣಗಣಂ ನೆಗೆಯುತ್ತಿರೆ ನೋಡುತಿರ್ದಳಾ ।
ಕುಳತೆಯಿನೊರ್ವೆ ಚಂದ್ರಮುಖಿ ಮೆಯ್ಮಱೆದಾನರನಾಥಪುತ್ರನಂ ॥ ೯೦

ಆವರಿಸಿರ್ದ ಮಧ್ಯದ ಕಳಂಕನದಂ ಸೊದೆಯಿಂದೆ ಕರ್ಚಿ ಮ ।
ತ್ತಾವಿಧುಬಿಂಬಮುಂ ತಳೆದು ನಿರ್ಮಳಮಾಯ್ತೆನೆ ನೋಱ್ಪಿ ರೋಕ್ಷಿಣೀ ।
ದೇವಿಯೊ ತಾನೆಸಲ್ ಮಿಸುಪ ಕನ್ನಡಿಯುಂ ಪಿಡಿದೊರ್ವ ಕಾಂತೆ ನಿಂ ।
ದಾನಗವಿಂತಭೀಕ್ಷಿಸುತುಮಿರ್ದಳಿಳಾಧಿಪಪುಷ್ಪಚಾಪನಂ ॥ ೯೧

ಅಂಗಜರಾಜರಮ್ಯಕೃತಕಾದ್ರಿಗಳಂತೆಸೆದಿರ್ಪ ಬಳ್ಳವಾ ।
ಡಂಗಳನೋಲ್ ನೋಱ್ಪಿ ಥವಳಾಂಬಿಕೆಯರ್ಕಳ ಲೋಲನೇತ್ರಜಾ ॥
ಲಂಗಳ ನೀಳ್ದ ನುಣ್ಪಳಗು ತಳ್ತಿರೆ ಪಾಲ್ಗಡಲಂ ಕಳಾವಿಳಾ ।
ಸಾಂಗದಿನೀಸಿ ಬರ್ಪ ಸಸಿಯಂತೆಸೆದಂ ನಿಸದಂ ನೃಪಾತ್ಮಜಂ ॥ ೯೨

ವಿಮಳತರಾರುಣಾಧರವಮರೀಜಕಾಳಂ ನಿಮಿರಲ್ಕೆ ಕಾಮಿನೀ ।
ಸಮುದಯವಾಗಳೆತ್ತು ವ ಮಣಿನ್ಮಜವುಂಗಳದೀಪಿಕಾಳಯಿಂ ॥
ದಮೆ ಪೊಸಸಂಜೆಯೊಳ್ ಮಿಸುಪತಾರೆಗಳೊಳ್ಪೊಳೆಯುತ್ತುಮಿರ್ದಚಂ ।
ದ್ರಮನ ವಿಳಾಸವುಂ ನೆನೆಯಿಸುತ್ತು ಮಿಳೇಶತನೂಜನೊಪ್ಪಿದಂ ॥ ೯೩

ಪಿರಿದನುರಾಗಂ ಪೌರಜನ ।
ಪರಿಜನಕುಲಜನಮನೋನಿವಾಸಮನೆಸಗು ॥
ತ್ತಿರೆ ತತ್ಕುಬೇರಕಂ ಬೆರ ।
ಸರಮನೆಯುಂ ಪೊಕ್ಕನಾಪ್ರಜಾಪತಿಭೂಪಂ ॥ ೯೪

ಆನರೇಂದ್ರಂ ನಿಜನರೇಂದ್ರಮುಂದಿರದ ಪುರೋಭಾಗದೊಳ್ ನಿಂದು ನಿವಾರಿತಪರಿವಾರನಾಗಿ—

ಮೃಗಲೋಚನೆ ಮೃಗಯಾವತಿ ।
ಮಗನೆ ಪೊಗಂನೋಡಲೆಂಳಗಣಂ ಬರುತಾಗಳ್ ॥

ಮಿಗೆ ನೆನೆಯಿಸಿದಳ್ ಮದನನ ।
ಮೊಗಮುಂ ನೋಡಲ್ಕೆ ಬರ್ಪ ಲಕ್ಷ್ಮ್ಮಯು ಚೆಲ್ವಂ ॥ ೫೫
ವಿತತಂ ಪ್ರಜಾಪತಿಕ್ಷ್ಮಿತಿ ।
ಪತಿಸುತನತಿವಿನಯದಿಂದೆ ಪಡೆದಂ ಮೃಗಯೂ ॥
ವತಿದೇವಿಯ ಚರಣನಖ ।
ದ್ಯುತಿಸಲಿಲಕ್ಕಬ್ಜಶೋಭೆಯುಂ ನಿಜಮುಖದಿಂ ॥ ೫೬
ಪದನತನಾದ ಪುತ್ರನ ಕಿರೀಟನಗಕ್ಕಭಿಷೇಕಶೋಭೆಯುಂ ।
ಮೊದಲೊಳದಂ ಪಯೋಧರಪಯೋಧರವಾತ್ಮಪಯಃಕಣಂಗಳಿಂ ॥
ದೊದವಿಸೆ ಕಣ್ಮಲರ್ ತಣಿಯೆ ನೀಳ್ದ ಮುದಶ್ರುಕಣಾಕ್ಷತಂಗಳಿಂ ।
ಪದೆದವುರ್ದಪ್ಪಿದಳ್* ತೆಗೆದು ತನ್ಮೃಗಯೂವತಿ ಹರ್ಷಭಾವದಿಂ ॥ ೫೭
ಬಲಿಕಾಸ್ವಯಂಪ್ರಭೆಯನೆಲೆ ।
ಜಳಜಾನನೆ ನಿನ್ನ ಕರ್ಣಪತ್ರದ ಪುಣ್ಯ ॥
ಕ್ಕಿಳಿಯೊಳದಾರ್ ಪಡಿಯೆನುತಾ ।
ಗಳೆ ತಕ್ಕೈಸುತ್ತುಮರಸಿ ಪರಸಿದಳಾಗಳ್ ॥ ೫೮

ತದನಂತರಮರಸಿಯುಮರಸನುಂ ತನೂಜನಂ ತದೀಯಮೃಗರಾಜ ವಿಜಯದೆಸಕಮುಂ ಬೆಸಗೊಳುತ್ತು ಮುತ್ಸವಮನೆಯ್ದುತ್ತುಮಿಂತು ಸಂತೋಷದೊಳವಿಚಲಪ್ರಾಜ್ಯಸಾಮ್ರಾಜ್ಯದೊಳ್ ನಲಿಯುತ್ತುಮಿರಲತ್ತಲ್,

ಅಳಕಾಪುರಪತಿ ಖೇಚರ ।
ಕುಳಶೇಖರನರ್ಧಚಕ್ರಿಪದವೀಶೋಭಾ ॥
ವಿಳಸತ್ಖಗ್ರೀವಂ ನಿ ।
ಶ್ಚಳದಿಂ ತಾನರಸುಗೆಯ್ಯುತಿರ್ದೊಂದು ದಿನಂ ॥ ೫೯

ಪರಿವಿಪ್ಲಾನೇಕವಿದ್ಯಾಧರಕುಲವಿಲಸನ್ಮೌಳಿರತ್ನಾವಳೀನ ।
ವ್ಯರುಜೆವ್ಯಾಕೀರ್ಣದಿಂ ಭಾಸುರಸುರವರಬಾಣಾಸನವ್ಯಾವೃತೋದ್ಯ ॥
ತ್ಪುರಶೈಳಶ್ರೀಯ ಚೆಲ್ವಂ ಸಲೆ ನೆನೆಯಿಸಿದಂ ನಾಡೆಯುಂ ಖೇಚರಾಧೀ ।
ಶ್ವರನಶ್ವಗ್ರೀವನಿಂತೋಲಗದೊಳಿಸೆಯುತುಂ ರಾಗದಿಂದಿರ್ದನಾಗಳ್ ॥ ೬೦

ಅಸಮಯದೊಳ್

ಅಕುಟಿಲಮಪರ್ವಮುಪಲಿ ।
ಪ್ತಕನದ ಹುವರ್ಣಮುಪ್ಪ ನೇತ್ರಂ ಪುದಿದೊ ॥
ಪ್ಪೆ ಕರಾಬ್ಜ ವೊರ್ವ ದೌವಾ ।
ರಿಕನಾಖಚರೇಂದ್ರನೋಲಗಕ್ಕೆ ಕೃತಂದಂ ॥ ೪೧

ಕೆಲಸಾರ್ದು ನಿಂದು ವಕ್ಷ ।
ಸ್ಥಲವಿನಿಹಿತವೇತ್ರನಾಗಿ ಕರಸರಸಿಜಕು ॥
ಟ್ಮಲಘಟಿತನಿಟಿಲಶೋಭಾ ।
ಕಲಿತಂ ದೌವಾರಿಕಂ ಸಮಂತಿಂತೆಂದಂ ॥ ೪೨

ಅವಧರಿಪುದು ದೇವರ್ ಬಿ ।
ನ್ನವಿಪಿನಿತಂ ನಮ್ಮ ಪುರದೊಳಿಂದೀಗಳ್ ಸಂ ॥
ಭವಿಸಿದುದುತ್ಪಾತವಾ ।
ತವದಪ್ಪೊಡಭೂತಪೂರ್ವಮೀನಂ ಪೇಟ್ವೆಂ ॥ ೪೩

ಪುರವೀಥೀಮಧ್ಯದೊಳ್ನೀಳ್ದೊಗೆದುದವಿರಳೋದ್ದಾಮಧೂನುಂಪೊದೆದೀ।
ಳ್ಪ ರಥಂಗಳ್ ಪೂಡಿದಿರ್ದಚ್ಚಡಿದುವನಿಲಪಾತಕ್ಕೆ ಪಕ್ಕಾಗದೊರಂ ॥
ತಿರೆ ನಾನಾದೇವಸದ್ಮಧ್ವಜತತಿ ಕೆಡೆದತ್ತಶ್ರಗಳ್ ವಾಜಿನೇತ್ರಾಂ ।
ತರದಿಂ ಪೊಣ್ಮಿತ್ತು ಮತ್ತಂ ಮದವುಡುಗಿದುದುಚ್ಚಂಡವೇತಂಡತಂಡಂ ॥

ಎಂದು ಬಿನ್ನವಿಸಿದಾಗಳ್

ಅದನೆಯ್ದಿ ಕೇಳ್ದ ಮನದೊಳ್ ।
ಬೆದಱಿ ದಿಟಂ ಬೆದಱದಂತೆ ಖೇಚರಪತಿ ನೇ ॥
ರಿದನಾಗಿ ಪೊಱಗೆ ತಾಂ ಬರಿ ।
ಸಿದನಾಶತಬಿಂದುವೆಂಬ ನೈಮಿತ್ತಿಕನಂ ॥ ೪೪

ಗುರುಸಮಶತಬಿಂದುಮಹೀ ।
ಸುರನಾಶೀರ್ವಚನನಿಚಯನವಮುಕ್ತಾಳಂ ॥
ಕರಣಮನಿತ್ತೊಡೆ ಖಚರೇ ।
ಶ್ವರನೊಸೆದಿರದಿತ್ತನಾಗಳುಜೆತಾಸನಮುಂ ॥ ೪೫

ಮತ್ತಮಾಖಚರವರನುತ್ಪಾತಪ್ರಪಂಚಮುಂ ಪೇಟ್ದು ಇವಱ ಫಲಮುಂ
ಪೇೞ್ವೆಮೆಂದು ಶತಬಿಂದುವಂ ಬೆಸಗೊಂಡಾಗಳ್—

ದೇವಗಿರ್ದವಱ ಫಲಂಗಳ ।
ನೇವೇೞ್ವೆಂ ಪೇೞಿಕ್ಕೊಡೆನ್ನ ಮನಕೆನಸುಂ ಶಂ ॥
ಕಾವಹಮೆಂದೆನಲಶ್ವ ।
ಗ್ರೀವಂ ನೀಮುಂಜದೆನಗೆ ತಿಳಿಪುವುದೆಂದಂ ॥ ೪೩

ಪೆಱತೇಂ ದೇವಗಿರ್ದನಾ ।
ನಱಿಪಿದಪೆಂ ನಿಮಗೆ ಶತ್ರು ಪುಟ್ಟಿದನೆಂದಿಂ ॥
ತಱಿಪುವ ಫಳಂಗಳಿಂತಿವ ।
ನಱಿವುದು ನೀಮಿದುವೆ ಪುಸಿದನೆನ್ನದೆ ಮನದೊಳ್ ॥ ೪೪

ತಾನೊರ್ವನೆನಗೆ ಹಗೆಯೆಂ ।
ಬೀನುಡಿ ಕಿವಿದಾಗಿದೆನುತುಮಾಖಚರೇಂದ್ರಂ ॥
ಜಾನಿಸುತುಸಿರದೆಯುಂ ಕಿಱಿ ।
ದಾನುಂ ಪೊಚ್ಚುವರಮಿರ್ದು ಬಜಿಕಿಂತೆಂದಂ ॥ ೪೫

ಇನಿತಂ ಭಾವಿಸು ಸಿಂಧುದೇಶದೊಳದಾವಂ ಸಿಂಹಮುಂ ಕೊಂದನಾ ।
ತನೆ ನಿಮ್ಮಲ್ಲಿಗೆ ಬರ್ಪ ಪಾಗುಡನುನಾವಂ ಕೋಪದಿಂ ಕೊಂಡನಾ ॥
ತನೆ ನಿನ್ನಂ ನೆರೆ ಪೊರ್ದಲಿರ್ದ ವಧುವಂ ವೈವಾಹದಿಂ ತಾಳ್ದನಾ ।
ತನೆ ನಿನ್ನುಗ್ರವಿರೋಧಿಯೆಂದಱಿ ದಿಟಂ ವಿದ್ಯಾಧರಾಧೀಶ್ವರಾ ॥ ೪೬

ಎನೆ ಶತಬಿಂದು ನಿಮಿತ್ತ ।
ಜ್ಞಾನ ವಾತಂ ಮನದೆಗೊಂಡು ಖೇಚರಪತಿ ಭೋಂ ॥
ಕೆನೆ ನೋಡಲ್ ಜೆಂತಾಗತಿ ।
ಮನೋಗತಿಯೆನಿಸ್ಪ ಖಚರರದೆ ಬೆಸನೆಂದರ್ ॥ ೪೭

ಶತಬಿಂದುದ್ವಿಜನಿಂತು ಪೇೞ್ದಿ ಕುಱುಪಂ ಭೂಚಕ್ರದೊಳ್ ಕೂಡೆ ನೋ।
ಡಿ ತೊಱಲ್ದಾರಿಪುವಾರ್ತೆಯುಂ ತಡೆಯದೀಗಳ್ ತನ್ನಿಮೆಂದಟ್ಟಲಿಂ ॥
ತತಿಸಂವೇಗದಿನತ್ತಲ್ಯೆದಿದರವರ್ ತಾನಿತ್ತಲಿರ್ದಂ ಬಹಿ ।
ರ್ಧೃತಿಯಿಂದೋಲಗದೊಳ್ ಸಲೋಲಮನನಶ್ವಗ್ರೀವವಿದ್ಯಾಧರಂ ॥ ೪೮

ಆಸವಮಯದೊಳ್

ದಿನಪಂ ಖೇಚರತೇಜವಿನ್ನಿಱಿದುವೆನ್ನಂತೆಂಬವೋಲ್ ತೇಜವು ।
ಟ್ಟಿನಭೋಮಂಡಳವಿಂ ಪ್ರತಿಂಜೆಗಿಜು ಮುತ್ತಿರ್ದಂ ರಥಾಂಗಾನುರಾ ॥

ಗನಿಕಾಯಂ ಮನದಿಂ ಜಗುಟ್ಟಿದೆಂವಿನಂ ನೀರೇರುಹಸ್ಮೇರಲ ।
ಕ್ಷ್ಮಿಸವಾತಂಕಮನಪ್ಪುಕೆಯ್ದಿಟ್ಟಿವಿನಂ ಭೂಮುತ್ರಯಾರ್ಧಾಂತ್ಯದೊಳ್ ॥
ಕಮಳನಿ ಕುಟ್ಮಳಾಕೃತಿಯನೆಯ್ದಿ ರಥಾಂಗಚಯಂ ವಿಯೋಗಖೇ ।
ದಮನಣಮೆಯ್ದಿ ಪಶ್ಚಿಮದಿಗಂಗನೆ ರಾಗಮನೆಯ್ದಿ ಕೈರವಂ ॥
ಪ್ರಮುದಮನೆಯ್ದಿ ಪಕ್ಷಿತತಿ ಕೂಡೆ ಕುಲಾಯಮನೆಯ್ದಿ ಪುಂಶ್ಚಳೀ ।
ಸಮಿತಿ ಪೊಡರ್ಪನೆಯ್ದಿ ರವಿಯೆಯ್ದಿದನಾಕ್ಷಣಮಸ್ತಶೈಳಮಂ ॥ ೫೪
ತಮಗಧಿಪನಪ್ಪ ತಪನೀ ।
ಯಮಹೇಂದ್ರನ ತೇಜಮಂ ಶಿರೋಮಂಡಳದೊಳ್ ॥
ಸಮಸಂದು ತಳೆದುವೆನೆ ಗಿರಿ ।
ಸಮುದಯಶಿಖರಂಗಳಲ್ಲಿ ಪೊಂಬಿಸಿಲೆಸೆಗುಂ ॥ ೫೫
ಅನುರಕ್ತತೆಯಿಂದನ್ಯಾಂ ।
ಗನೆಯಂ ಕುಮುದಿನಿಯನೆಯ್ದಿ ತೊಡರ್ದಪುದಿಂ ತೊ* ॥
ಟ್ಟನೆ ತೊಡರ್ದುದಭ್ರಭಾವಂ ।
ತನಗೆನೆ ತಿಗ್ಮಪ್ರಭಂ ಗತಪ್ರಭನಾದಂ ॥ ೫೬
ಘನತೇಜೋಗರ್ವದುರ್ವಿಂದಳಿಯದೆ ಪಿರಿದುಂ ತನ್ನ ಪಾದಂಗಳಿಂ ಸ ।
ನ್ಮನಿವೃಂದಾಗಣ್ಯಪುಣ್ಯಾಮಳತನುತತಿಯುಂ ಮುಟ್ಟಿಯುಂ ಮುಟ್ಟದಾದೋ॥
ಪನಿವಾರಕ್ಕಾಗಳಂತಂಬರಮನುಟ್ಟಿದು ಶೈಲಾಗ್ರದೊಳ್ ತಾಂ ತಪೋರೂ ।
ಪನದಂ ಕೈಕೊಂಡವೊಲ್ ಸಾರ್ದಪರಗಿರಿಶಿರೋಭೂಷಣಾದಂ ದಿನೇಶಂ ॥
ಪೊಡೆಯಿಪ್ಪಾಭೀಳನಿಸ್ವಾಳದ ಪಟುರವಕಾಶೇಭಕಣೋರ್ತ್ಕರಂ ಘಿ ।
ಮ್ಮಿಡೆ ಸೈನ್ಯೋದ್ಭೂತನಾನಾಪಟಹಪಟಲನಾದಂ ನಭಕ್ಕೊರ್ವೊದಲ್ ಧೀಂ।
ಕಿಡೆ ಕೇತುವ್ರಾತಭಾಸ್ವದ್ಬಿರುದಪಟಕುಲಾಕೀರ್ಣದಿಂ ವಾಯು ಯಾನಂ ॥
ಗಿಡೆ ಕೋಪಾಟೋಪದಿಂ ಖೇಚರಪತಿ ಪೊಱಮಟ್ಟಂ ರಣಪ್ರೀತಿಯಿಂದಂ ॥
ಪಡೆಯು ಬಹಳತೆಯಿನಾಗಸ ।
ವೆಡೆಗಿಡೆ ನಡೆತಂದು ಖೇಚರೇಂದ್ರಂ ಬೀಡಂ ॥
ಬಿಡಿಸಿದನಸದಳದೆಸಕಂ ।
ಬಡೆದ ರಥಾವರ್ತಗಿರಿಯ ಕಂಧರಧರೆಯೊಳ್ ॥ ೫೯
ಮತ್ತಮಾಸನಯದೊಳ್

ಮುಳಿದಾಗಳ್ ಖಚರೇಂದ್ರನೆತ್ತಿ ಬರುತಿರ್ಪಾವೃತ್ತದಾದ್ಯಂತಮುಂ ।
ತಿಳದೇಟ್ಟಿಂದರಸಂಗದಂ ಪ್ರಣಿಧಿಗಳ್ ಪ್ರಚ್ಛನ್ನದಿಂ ಪೇಟಿಯುಂ ॥
ಪೆಳಱುತ್ತುಂ ಪಿರಿದುಂ ಪ್ರಜಾಪತಿನರೇಂದ್ರಂ ನಂದನಂಗೆಂದನ ।
ಸ್ಖಲಿತಾತ್ಮಂ ನಗುತಿರ್ದನೇಟಿಸಿ ಕುಮಾರಂ ಧೀರನಾಸ್ಥಾನದೊಳ್ ॥ ೬೦

ಆಗಳ್ ದೌವಾರಿಕನತಿ ।

ವೇಗದಿನೈತಂದು ದೇವ ವಿನ್ನಪಮುವಧಾ ॥
ರೀಗಳ್ ಬಂದಪರಿರ್ದರ್ ।
ಬಾಗಿಲೊಳುತ್ಕಂಠನಶ್ವಕಂಠನ ಶಿಷ್ಟರ್ ॥ ೬೧

ಎನೆ ಕೇಳ್ದರಸಂ ಚಕಿತಚಿತ್ತನಾಗಿ ಸುತನ ಮೊಗಮುಂ ನೋಡಲೊ
ಡಮುವಂ ನಸುನಗುತ್ತುಂ ಬರವೇೞ್ದುಂ ಬಂದ ಶಿಷ್ಟರಿಂತೆಂದರ್—

ಧರಣೀನಾಥರನೆಯ್ದಿ ಕಾಣಿಸಿಕೊಳುತ್ತುಂ ವಿಕ್ರಮೋತ್ಕಂಠಕಂ ।
ತರನಾಟಂದಲೆಯುತ್ತು ಮಾನತರನೀಗಳ್ ಕಾಯುತುಂ ಬಂದು ಬಿ ॥
ಟ್ಟು ರಥಾವರ್ತಗಿರೀಂದ್ರದೊಳ್ ಕಳುಪಿದಂ ನಿಮ್ಮಲ್ಲಿಗೆಮ್ಮಂ ವಿಯು ।
ಚ್ಚರಚಕ್ರೇಶ್ವರನಪ್ರತರ್ಕ್ಯಬಲನಶ್ವಗ್ರೀವನೀನೇಗದಿಂ ॥ ೬೨

ಪೊಱತೀನೆಮ್ಮಧಿಪತಿಗ ।
ಕ್ಕಱಿನ ಮುಗಂ ಜ್ವಲನಜಟಿನೃಪಂ ಸುತೆಯುಂ ತಾ ॥
ನಱಿಯದೆ ನಿಮಗಿತ್ತಂ ಗಡ ।
ಮೆಱವಿವ್ರದು ನೀವುಟ್ಟ ಬೇಗದಿಂ ಪೆರ್ಮೆಯುಮುಂ ॥ ೬೩

ತ್ವರಿತದೆ ಕಳಪ್ಪುವುದಾಸುಂ ।
ದರಿಯಂ ಕಳಸದೊಡೆ ಒಲಿಕಮಸುವಂ ವಸುವಂ ॥
ಬೆರಸಲ್ಲದೆ ಕೊಳ್ಳಂ ಖೇ ।
ಚರಪತಿ ಹಯಕಂಠನೆಂದು ತಾಮಿಂತೆಂದರ್ ॥ ೬೪

ಇಂತೆಂದ ಶಿಷ್ಟರ ದುಷ್ಟೋಕ್ತಿಗೆ ಕಡುಮುಳಿದು ಕಡೆಗಾಲದೆ ಪೊಡೆವ
ಸಿಡಿಲಂತೆ ಘುಡುಘುಡಿಸಿ ಕುಮಾರಂ ನಿಮ್ಮೊಡೆಯನಂ ರಥಾವರ್ತಗಿರಿ
ಯೊಳ್ ಕಡೆಗಣಿಸಿ ಕುಡುವೆವೆಂದವರನವಮಾನಿಸಿ ನೂಂಕಿಸಿ ಸಂಗರೋ
ದ್ಯೋಗದಿಂದಾಗಳ್ ಪೊಱಮಟ್ಟು
ಬಲನಾರಾಯಣನಾಗಳ್ ।

ಬಲವದ್ಬಲಮುಂ ಸಮುಂತು ಸಂಗಳಿಸಿ ರಣ ॥
ಕ್ಕೊಲವಿಂ ನಡೆವುಜ್ಜುಗಮು ।
ಗ್ಗಲಿಸಿರೆಯುಂ ಬಂದು ತಂದೆಯುಂ ಬೀಟ್ಕೊಂಡಂ ॥ ೬೫

ಆ ಸಮಯದೊಳ್

ಖಳನಶ್ವಕಂಧರಂ ಕಡು ।
ಮುಳಿಸಿಂದಮೆ ಬಂದ ವಾರ್ತೆಯುಂ ಕೆಳ್ದಾಗಳ್ ॥
ಜ್ವಳನಜಟಿಖಚರಪತಿಸುತ ।
ಬಳಸಂಯುತನಾಗಿ ರಾಗದಿಂದೈಯ್ತಂದಂ ॥ ೬೬

ಇಂತು ಬಂದ ಮಾತುಲಂಗೆ ಸಂತಸದಿಂದೆಱಗಿಯುರ್ಕಕೀರ್ತಿಯನ
ಕ್ಕಱಿಂ ತಕ್ಕೈಸಿ ತಡೆಯುದೆ ಪಡೆಯುಂ ಗಡಣಿಸಿ ಯುವರಾಜನಾಗಳ್

ಧರೆ ಕಂಪಂಗೊಳೆ ದಿಕ್ಕುಲಂ ಬಿರಿಯೆ ವಾರ್ಧಿಶ್ರೇಣಿ ತುಳ್ಳಾಡೆ ಸಂ ।
ಗರಯಾತೋತ್ಸವಭೇರಿಯುಂ ಪೊಡೆಸಿ ದಿವ್ಯಾಸ್ತ್ರೋತ್ಕರಾಕೀರ್ಣದಿ ॥
ವ್ಯರಥದ್ವಂದ್ವಮನೇಱಿ ರಾಜಿಪ ರಥಾವರ್ತಾಚಲೇಂದ್ರಕ್ಕೆ ಬಕೆ ।
ಚ್ಚರದಿಂದಾಯುವರಾಜನಿಂತು ನಡೆದಂ ಚಾತುರ್ಬಲೋಪೇತದಿಂ ॥ ೬೭

ಮುರುದಧ್ವಾಪಗೆಯುಂ ಕೆಸರ್ಮಸಗಿಸಲ್ ಸೇನಾವಳೀಯಾನಜಾ ।
ತರಜಸ್ಸಂಕುಲವಾಯುಧಪ್ರಚಯುರೋಜೆರ್ಜಾಲವಾಶಾತವೋ ॥
ಹರಮುಂ ಮಾಡೆ ಬಳಾನಕಧ್ವನಿ ಜಗದ್ವ್ಯಾಕೀರ್ಣಮಾಗಲ್ಕೆ ಪೋ ।
ಗಿ ರಥಾವರ್ತಮಹೀಧರಾಗ್ರಧರೆಯೊಳ್ ಬಿಟ್ಟಂ ನರೇಂದ್ರಾತ್ಮಜಂ ॥ ೬೮

ಇಂತು ಬೀಡಂ ಬಿಟ್ಟು ವಿದ್ವಿಷ್ಟವಿಜಯರಪ್ಪ ವಿಜಯತ್ರಿಪಿಷ್ಟರ್
ತದೀಯರಥಾವರ್ತಗಿರಿಯುಂ ನೀಡುಂ ನೋಡಿ ವಿಸ್ಮಯಸ್ವಾಂತರಾಗಿ

ಕರಿಕುಂಭಶ್ರೇಣಿಯುಂ ಪಾಯ್ದುಗಿಬಗಿನ ಮಹಾರಾವಸಂರಂಭಸಿಂಹೋ।
ತ್ಕರದಿಂ ಸಿಂಹಂಗಳಂ ಘೋತಿಸ ಕಟುಸಿನದಾಷ್ಟಾಪದಾನೀಕದಿಂ ಭೀ ॥
ಕರಮುಷ್ಟಾಷ್ಟಾಪದಾನೀಕಮನೆ ಪಿಡಿದು ತುಂಡಾಗ್ರದಿಂ ಖಂಡಿಪುಗ್ರೋ ।
ದ್ಧುರಭೇರುಂಡಂಗಳಿಂದದ್ಭುತರಸಮಯಮಾಯ್ತಾ ರಥಾವರ್ತಶೈಲಂ ॥ ೬೯

ಭರತಕ್ಷ್ಮಾಗೋಮಿನೀದೇವಿಯ ಮಣಿಮಯಕೋಟೀರವೋದ...

[ದೊಳ್ ಬಿ ।
ರ್ದ್ದರಮುಂ ಸಂಪ್ರೀತಿಯಿಂ ಮುಂ ಪಡೆದ ಜನಕನೋ ತಾನಿದೆಂಬಂದದಿಂದ ॥

ಚ್ಚರಿಯಾಗಲ್ ಕೂಡೆ ದಿಗ್ಭಿತ್ತಿಗಳನವರತಂ ಜೆತ್ರಿಸುತ್ತಿರ್ದುದಾ ಭ್ರ ।
ಸುರನಾನಾರತ್ನಂ ಶೃಂಗಾರವಿಲುಳಿತವಿಶಾಲಂ ರಥಾವರ್ತಶೈಳಂ ॥ ೭೦

ವಿಳಸತ್ಕಂಚುಕಿನೇತ್ರಾ ।
ವಳಯಿಂ ಖಡ್ಗಿಪ್ರತಾನದಿಂ ಮಹಿಷೀಸಂ ॥
ಕುಳಶೋಭೆಯಿಂ ಮಹೀಶ್ವರ !
ನಿಳಯದವೋಲೆಸೆವುದಾರಥಾವರ್ತನಗಂ ॥ ೭೧

ತವಕದೆ ತವೆ ಪೀರ್ದಾವಾ ।
ಯುವನಕ್ಕಿಸಲಾಱುದಾಗಳುದ್ಗಾರಿಸುತಿ ॥
ರ್ದುವೆನಲ್ ಫಣಿಗಳ್ ಪ್ರೊತ್ಕರಿ ।
ಸುವ ರವಮಯವಾದುದಾರಥಾವರ್ತನಗಂ ॥ ೭೨

ಮೃಗಮಯದಿಂ ಖಗಮಯದಿಂ ।
ಭೃಗುಮಯದಿಂ ಭುಜಗಮಯದಿನಿಂದುಗೆ ತಾರಾ ॥
ಳಿಗೆ ನಭಕೆ ಫಣಿವಧೂಟಿಗೆ ।
ಮಿಗೆ ಸರಿ ಪಡಿ ಪಾಟ ದೊರೆಯೆನಿಪ್ಪುದು ಶೈಲಂ ॥ ೭೩

ಆನಗೇಂದ್ರೋಪಕಂಠದೊಳ್—

ಗಾಳದ ಡೊಂಕೆಯಗ್ರಮನೆ ಬಾಳರನಿಂಪಿಡಿದರ್ದುವಾರ್ದ್ರಮುಂ ।
ಜಾಳಿಸಿ ಜಾಲಮುಂ ಬಿಸಿಲೊಳಿಕ್ಕುವ ಬೆಂಕೆಯೊಳೊಡ್ಡಿ ಕಾಸಿಕೊಂ ॥
ಡಾಳಿಸಿ ಸೆಂದು ಕೋಲನುಡಿಗಟ್ಟುವ ಕೆಂಗಱಿಯುಂ ಸಕಾಳಿಯೊಳ್ ।
ಮೇಳಿಸಿ ಸುತ್ತುತಿರ್ಪ ಶಬರರ್ಕಳಿಸಿಂತೆಸೆದತ್ತು ಪಕ್ಕಣಂ ॥ ೭೪

ತಿರುವೊಯ್ಲಿಂದಾದ ದಡ್ಡಬ್ಬರಿಸಿ ಮೆಱೆವ ಮುಂಗೆಯ್ಗಳಿಂ ವನ್ಯಮೂತಂ।
ಗರದಾಘೂತಕ್ಷತಂ ಕಣ್ಗೊಳಪಗಲ್ದುರದಿಂ ಕಾಳಮುಂ ಕಾನನಕ್ಕು ॥
ಬ್ಬರಮಾಗಲ್ ಬೀಱುವಾಭೀಳತರವಪುವಿನಿಂದೊಪ್ಪಿ ತಾನಿರ್ದನಾಬೇ ।
ಡರೊಳೊರ್ವಂ ತೂಗುತುಂ ಕೂರ್ಸರಲನರುಣನೇತ್ರಾರವಿಂದಂ ಪುಳಿಂದಂ॥

ಲಯಕಾಲಾಭೀಳಕಾಯಂ ಕರಿಮದತಿಲಕಂ ಕುಬ್ಜಕೇಶಂ ಶುನೀಪಾ ।
ಶಯುತೋದ್ಯತ್ಪವ್ಯಹಸ್ತಂ ನಕುಲದಜಿನದಾವಾಕೃತೋಷ್ಣೀಷನುಗ್ರಾ ॥
ಶಯನುದ್ವೃತ್ತಂ ಸಗುಂಜಾಭರಣನತುಳರಕ್ತಾಂಬಕಂ ಭೂಕುಟಿಭ್ರೂ ।
ದ್ವಯನಿರ್ದಂ ನಿರ್ದಯಂ ಬೇಡರ ಪಡೆಗೊಡೆಯಂ ಬಾಣನುಂ ತೂಗುತಾಗಳ್॥

ಮೃಗರಕ್ತಾಸಕ್ತಿಯಿಂ ಮುನ್ನಮೆ ನೆಱಿ ನಿಮಿರ್ದಂತಾಸ್ಯದಿಂ ನೀಳ್ದ ತೆಳ್ನಾ।
ಲಗೆಯಂ ಸಾಲಿಕ್ಕುತುಂ ಲಾಲೆಯ ಕಿಱುವನಿಯಂ ಯಾನದಿಂ ಕಾರ್ಶ್ಯಮುದ್ಯಂ॥
ಮಿಗೆ ಬಳ್ಕಲ್‌ಚಕ್ರವಾಳಂ ತೊನೆಯಲೆಸೆವ ನುಣ್ಮೈಯ್ ಬಿಸಿಲ್‌ತಾಗೆಬೇಳಂ।
ಪೊಗೆದೊಪ್ಪಲ್‌ನಿಂದುದಾಕಾಡೊಡೆಯುನೊಡನೆಕಾಳೇಯಕಸ್ತ್ರೀನಿಕಾಯಂ

ಅರೆ ಬಿಳಿದಂ ಪೊದಱಿದ್ದಿಸೆವಿನಂ ಹರನೀಲಮರೀಚಿಮಾಲೆಯಂ।
ಸರಸಿಜಸೂನು ತಾನೆನಿಸುವಂಗದ ಕೋಮಲಕಾಳಮಪ್ರಭಾ॥
ಪರಿಕರದಿಂ ತಟಿಲ್ಲತೆಯ ಸಾಲನೆ ಸೂಸುವಪಾಂಗಕಾಂತಿಯಿಂ।
ಕರಮೆಸೆದಿರ್ದರಲ್ಲಿ ಶಬರಾಂಗನೆಯರ್ ಪೆಱತೊಂದು ತಾಣದೊಳ್॥ ೭೪

ಅದಲ್ಲದೆಯುಂ—

ಮನಸಿಜನ ವಶೀಕರಣಾಂ।
ಜನಪುಂಜದ ಪುತ್ರಿಕಾಳಿಯೆನೆ ಕಾಳಮುಮಂ॥
ತನಿಗೆದಱುವ ತನುರುಚಿ ಮೋ।
ಹನನುಯವಮಾಗಿರ್ದರೆಸೆವ ಶಬರಾಂಗನೆಯರ್॥ ೭೫

ಬಲಿದುದು ಸಾಂದ್ರಚಂದ್ರಿಕೆಯದೆಂಬಿನಮುಜ್ವಲಕಾಂತಿಶೋಭೆಯಿಂ।
ಸಲೆ ತಳೆದಿಂಬುವೆತ್ತ ಶಶಿಕಾಂತದ ಪಾಸಱಿಯೊಳ್ ವಿಲಾಸಮು॥
ಗ್ಗಲಿಸೆ ಲತಾಂಗಕಾಂತಿ ಪುದಿಯುತ್ತಿರಲಿರ್ದರಲ್ಲಿ ತ।
ಮ್ಮೊಲವಿನೊಳುನ್ಮದಪ್ರಮದೆಯರ್ ಪದೆದಾಮಧುಪಾನಕೇಳಿಯೊಳ್॥ ೭೦

ಹೃದಯದಲಂಪು ಪೋಗೆ ಪದೆದೀಂಟದೆ ಮುನ್ನಮೆ ತನ್ನ ಕಂಪಿನಿಂ।
ಮೆದದ ಪೊದಱಿಕ್ಕೆಯಂ ಮನಕೆ ಮಾಟ್ಪಿ ವಿನೂತನ ವೃಕ್ಷಧಾನ್ಯಸಾ॥
ರದೆ ಮಧುಪಾಳಿಗಳ್ ಸುಱಿಗೊಳುತ್ತಿರಲೊಪ್ಪುವ ನೂತ್ನಚಂದ್ರಕಾಂ।
ತದ ಘಟಿಜಾಲಮಂ ತಳೆದು ತಾಂ ಪಿರಿದೊಪ್ಪಿದುದಾಶಿಲಾತಲಂ॥ ೭೧

ವೊಗೆವೊಗೆದೀಂಟುತುಂ ಬಸಿಯೆ ನುಣ್ಬಲಿಂ ಬಳಯುತ್ತೆ ಕಂಪು ನೆ।
ಟ್ಟಗೆ ನಿಲೆಯಟ್ಟನೆಯ್ದಲೆಯುಂ ಮೆಲುತುಂ ಮಗುಟಿದ್ದಿತ್ತಿ ಮುತ್ತೆ ಮು॥
ತ್ತುಗೆ ಮಿಗೆ ಪೀಯುತುಂ ತಣಿದು ತೇಗಿಯುವೋಯೆಸುತುಂ ಮುದಂ ಮನ।
ಕ್ಕೊಗೆದು ವಿರಾಜಿಸಿತ್ತು ಮಧುಪಾನದೊಳಾಶಬರಾಂಗನಾಜನಂ॥ ೭೨

ಬಸೆಯ ಕೆಸರ್ಗಳೊಳ್ ನಲವಿನಿಂ ನಡೆದಾಡುವ ಬಿಟ್ಟ ಕೇಸರ।
ಪ್ರಸರದ ಬಾಯ್ಗಳೊಳ್ ಕರಮನಾನಿಸಿ ನೀಡುವ ಸೂಕರಂಗಳೇ॥

ಱಸಲೊಡೆ ತೋರ್ಪ ಮೆಲ್ಲಿದುಳನಂದೆಡಗೆಯ್ದಳಿಸುರ್ಚಿಕೊಂಡು ಚ ।
ರ್ಚಿಸುವ ವಿನೋದದಿಂದೆಸೆದುದಾಶಬರಾಳಯ ಬಾಳಕವ್ರಜಂ ॥ ೪೩

ಆಶಬರಶಿಶುವ್ರಾತದ ।
ಶೈಶವದ ವಿನೋದದೊಂದು ಜಾತಿತ್ವವನು ॥
ವ್ಯಕ್ತಿಶಕುಮಾರರ್ ನೋಡಿ ನಿ ।
ಜಾಶಯದೊಳಗವರಗಾಧವಿಸ್ಮಯರಾದರ್ ॥ ೪೪

ಇಂತು ವಿಜಯತ್ರಿಪಿಷ್ಟಯುವರಾಜರ್ ವಿಸ್ಮಯಸ್ವಾಂತರಾಗಿ ನೀಡುಂ
ನೋಡುತ್ತುಮಿರ್ಪಾಗಳ್ ಗಿರೀಂದ್ರರುಂದ್ರಸಾನುಸನ್ನಿವೇಶದೊಳ್—

ಶರಭೋದ್ಗಾರಾವವ್ಯೂಹಾರಭವಿರುತಿ ಚಳತ್ಕೇಸರಿಧ್ವಾನವ್ಯೂಹಕ್ಕೇ ।
ಸರಿಭೋಷೋದ್ಭೂತದಂತಿಪ್ರಕರನಿನದವ್ಯೂಹದಂತಿನಾದಭ್ರಮದ್ದ್ವೀ ॥
ಪಿರನವ್ಯಾಕೀರ್ಣವಾದ್ವೀಪಿರವದುರುಭಯೋದ್ಯನ್ಮೃಗಾಳೀಪ್ರಣಾದೋ ।
ತ್ಕರವೆತ್ತಂ ತಟ್ಟು ಶಬ್ದಾದ್ಭುತಕವೆನಿಸಿದುದಂತಾರಥಾವರ್ತಶೈಲಂ ॥ ೪೫

ಅದಲ್ಲದೆಯುಂ ಮತ್ತೊಂದೆಡೆಯೊಳ್—

ಕುಳಿಸಕ್ಕುಳ್ಳಳ್ಳಿ ನೀಲಾಚಲಮದಿಭಕುಲಾಕಾರಮಾಯ್ತೆಂಬಿನಂ ಕ ।
ಣ್ಗೊಳೆ ಮೆಯ್ಯೊಡ್ಡುರ್ವಿದುತ್ಕರ್ಬುರರುಚಿವಿಗಳದ್ದಾನಧಾರಾಕಪೋಳ ॥
ಸ್ಥಳವೀಪದ್ವಕ್ರದಂತಂ ದಶಯುಗಳನಖಂ ದೀರ್ಘಹಸ್ತಂ ಸಮುದ್ಯ ।
ಚ್ಚಳಕರ್ಣಂ ಸಲ್ಲಕೀಖಾದನಬಿನದದಿನಂದಿರ್ದುದಾಹಸ್ತಿವೃಂದಂ ॥ ೪೬

ಇಂತು ಸಲ್ಲಕೀಪಲ್ಲವಗ್ರಸನಕೇಳಿಯಿಂ ಮೇಳಿಸಿರ್ದ ಮಾತಂಗ
ಸಂಘಾತದ ಸವಿಾಪದ ಕುಂಜಪ್ರದೇಶದೊಳ್—

ನೊರೆವೀಲಲ್ ದಾಡೆಗುಟ್ಟುತ್ತೆ ರಡುಬರಿಪಿಣಿಲ್ಗಂಡಮುಂಪೇಱಿಕೊರ್ವಿಂ।
ಬಿರಿಯುತ್ತುಂಲೋಹಸೂಜೀಸವಸಮುಚಿತರೋಷೋತ್ಕರಸ್ಕಂಧಭಾರೋ
ದ್ಧುರನವ್ಯಾಸ್ಯಂ ಸಕುಚ್ಚಶ್ರವಣಯುಗಮದತ್ತಂಧಕಾಲಜ್ಞ ಬಾಲಂ ।
ಪಿರಿದಾಶ್ಚರ್ಯಕ್ಕೆ ಪಕ್ಕಾಗರೆ ನೆರೆದು ಸಮುತ್ಕೇಸರಂ ಸೂಕರೌಘಂ ॥ ೪೭

ಆವರಾಹಸಂದೋಹಮಿರ್ದ ಶಾಲೆಯ ತ್ರಾಸಲೊಳ್—

ಬಡಲಿರ್ಚಿನ್ನಪ್ಪಿನಂ ಕೊರ್ವಿರೆ ಪೊಳೆವ ತನುಚ್ಛಾಯೆ ಮೆಯ್ವೆರ್ಚಿ ಕೆಚ್ಚಲ್
ಮಡುಗೊರ್ವಂ ತಾಳ್ದಿ ನೀಳ್ದುಂ ಬಿರಿವಿಡೆ ವೊಲೆಗಳ್ ಪಾಲುಗಲ್ಕಂದು ನಿಂದಾ

ಕಡೆವಾಯಿಂ ಬೀಱಿ ರೋಮಂಥದ ನೊರೆವನಿ ಮೆಲ್ಕೊತ್ತುತುಂ ನಿಂದು
[ವೋರೊಂ]

ದೆಡೆಯೊಳ್ ತಮ್ಮಿಚ್ಛೆ ಯಿಂದಿರ್ದುದು ವನವುಹಿಷೀವೃಂದವುಾನಂದದಿಂದಂ ॥

ಅದಲ್ಲದೆಯುಂ ಮತ್ತಮೋರೊಂದೆಡೆಯೊಳ್—

ತರುಕಾಂಡೋದ್ಘೃಷ್ಟಜಾತೋಲ್ಬಣಕಿಣವಿಸರತ್ಕಂಧರಂಬಂಧುರೋದ್ಭಂ।
ಗುರಶೃಂಗಂ ವೃತ್ತಗಾತ್ರಂ ವಿದಿತವುದವುಖಂ ಕುಬ್ಜಪುಷ್ಟತ್ತಚಾತು ॥
ಶರಣಂ ವ್ಯಾಳಂಬಿವಾಳಂ ವಿಕಟನಿಟಿಳರೋವೌಘನವ್ಯಾಕುಳೋದ್ಭಾ ।
ಸುರಶೋಣಾಪಾಂಗನಿಂತಿರ್ದುದು ಪರಿವೃತಪಂಕಾರ್ದ್ರಕಾಯಂ ಲುಲಾಯಂ॥

ಮತ್ತಮಾರಥಾವರ್ತಗಿರೀಂದ್ರಂ ನಂದಗೋಪಘೋಷದಂತೆ ಸಮು
ತ್ತುಂಗಶೃಂಗೋಲ್ಲಸಿತ ಗೋಮಂಡಲೋರ್ಜಿತವುಂ ಅನಂತಬಭ್ರುವಿ
ಭ್ರಾಜಿತವುಂ । ಧಾನುಷ್ಕಸೇನೆಯಂತೆ ಕಂಚುಕೋದಂಜಿತವುಂ ಶರಬಾ
ಣಾಸನಸಮನ್ವಿತವುಂ । ಸಮನ್ವಿತಸಂಗರಾಂಗಣದಂತೆ ನಿಸ್ತ್ರಿಂಶಬಹುಭ
ಲ್ಲವ್ಯಾಕೀರ್ಣವುಂ ಪ್ರಪತಿನಾನೇಕಪತ್ರವುಯವುಂ । ವಾರವನಿತಾವಾಟ
ಯಂತೆ ವಿಜೆತ್ರವುತ್ತವಾರಣವಿರಾಜಿತವುಂ ರಾಜಾಂಗಾವಳೀಶೋಭಿತ
ವುಂ । ಸಕಲಸಾವ್ರಾಜ್ಯಸಂಪತ್ತಿಯಂತೆ ವಿಜೃಂಭಿತಪುಂಡರೀಕಪ್ರಚಯ
ವುಂ ಪ್ರಚುರಪ್ರಚಂಡಹರಿವುಯವುಂ । ಗಗನವುಂಡಳದಂತೆ ಖಗಾವಳೀ
ಕವುನೀಯವುಂ ವಿಶಾಖಾಜಿತ್ರಕುಜರಾಜಿರವುಣೀಯವುಂ । ಅಂಧಾಸುರ
ಧ್ವಂಸಧುರಧರಣಿಯುಂತೆ ನೀಲಕಂಠನೃತ್ಯಾಡಂಬರವುಂ ಸರಭಸಾಶ್ಚರ್ಯ
ಭೂತವುಂ । ಮತ್ತವುದು ಮಹೋರ್ಜಿತವಜ್ರವಾಗಿಯುಂ ನಗಜಾತ
ವ್ಯಪೇತವುಲ್ತು । ಮಾತಂಗಕುಲಪ್ರಯುಕ್ತವಾಗಿಯುಂ ವರವಂಶವಿರಹಿತ
ವುಲ್ತು । ಕಂಠೀರವಕಟುರವೋದ್ಭಾವುಭೀವುವಾಗಿಯುಂ ಫಣಿಕೇತುಪರಿ
ವೃತವುಲ್ತು । ತವುಸೋತ್ತೀವಾಕೀರ್ಣವಾಗಿಯುಂ ರಾಜಾರ್ಕಬಿಂಬವ್ಯವ
ಹೃತವುಲ್ತು । ವಿಜೃಂಭಿತವುದನವುಯವಾಗಿಯುಂ ಶಂಬರಸವುತ್ಸಾರಿತ
ವುಲ್ತು । ಶಂಬರಾಕರವಾಗಿಯುಂ ಕುಟಜನರ್ಜಿತವುಲ್ತು ॥ ಅಂತುವುಲ್ಲ
ದೆಯುಂ—

ಇದು ವಿದ್ಯಾಧರದಂಪತಿವ್ರಜವುನೋರಾಗಪ್ರದಾಗಾರವುಂ ।
ತಿದು ನಾನಾವಿಧರತ್ನಕಾಂತಿಕುಳಸಸ್ಯೋದ್ಭೂತಕೇದಾರವುಂ ॥

ತಿದು ಸೌಂದರ್ಯದಿಗಂಗನಾನಿವಹರೂಪಾಲೋಕನಾದರ್ಶಮಿಂ ।
ತಿದು ನೇತ್ರೋತ್ಸವಪಾತ್ರಮೆಂದೆನೆ ರಥಾವರ್ತಾದ್ರಿ ವಿಭ್ರಾಜಿಕುಂ ॥ ೯೦

ಇಂತೆಸೆವ ರಥಾವರ್ತನ ।
ಗಾಂತಿಕದೊಳ್ ಬಂದು ಬಿಟ್ಟನಹಿತನೆನಲ್ ಕ ॥
ಲ್ಪಾಂತಕೃತಾಂತನವೊಲ್ ಕಾ ।
ಯ್ದಂ ತಳೆದಂ ಖೇಚರೇಂದ್ರನಶ್ವಗ್ರೀವಂ ॥ ೯೧

ಅದಂ ಕಂಡು ಯುವರಾಜಂ ನಿಜಸೇನಾಸಮನ್ವಿತಂ ಸನ್ನದ್ಧನಾಗಿ ಸಿಂಹವಾಹಿನಿ ಗರುಡವಾಹಿನಿಯೆಂಬ ವಿದ್ಯಾಬಲದಿಂದೊಡ್ಡಿ ನಿಂದಾಗಳ್—

ಸಿಡಿಲಂ ಸೀಳ್ವ ದವಾಗ್ನಿಯಂ ವೊಗೆವ ಧಾತ್ರೀಚಕ್ರಮಂ ವಿೞುಂಟುವಾ।
ಕಡಲಂ ಕೂಡೆ ಕಲಂಕುವೊಂದು ಕಡುಸಂ ಕೈಕೊಂಡು ಕಾಲಾಂತಕಂ ॥
ಗಡ ತಾನೆಂದೆನೆ ಖೇಚರೇಂದ್ರನುರಿದೆೞ್ದೀರಂತೆ ನೇತ್ರಂಗಳಂ ।
ಕಿಡಿಸೂಸುತ್ತಿರೆ ಶತ್ರುಸೇನೆಗೆನಸುಂ ಕೈವೀಸಿದಂ ಸೈನ್ಯಮಂ ॥ ೯೨

ವಿಳಯಜಳಧರದವೊಲ್ ಕಡು ।
ಮುಳಿಸಿಂ ಖಚರೇಂದ್ರಸೇನೆ ಕವಿದೆನಸುಂ ತ ॥
ಕ್ಕೆೞಿಯೆ ರಿಪುಬಲದ ಮೇಲಾ ।
ಗಳೆ ಸುರಿದುದು ತರನೆ ಸರಲ ಬಲುಸರಿವೞಿಯಂ ॥ ೯೩

ಆಗಳದಂ ಕಂಡು—

ಭ್ರುಕುಟಿ ಭೂಯುಗಭೂಳಮುದ್ಗತಘನಸ್ವೇದೋದಬಿಂದುಪ್ರಕೀ ।
ರ್ಣಕಪೋಲದ್ವಯಮಪ್ಪಿನಂ ಕಲುಷಮಂ ಕೈಕೊಂಡು ಬಂದಾತ್ರಿಪಿ ॥
ಷ್ಟಕುಮಾರಂ ಭುಜದಂಡದಿಂ ಜಯವಧೂಜನ್ಮಾಬ್ಜಿನೀಕಾಂಡಮಂ ।
ಪ್ರಕಟೋಗ್ರಾಹಿತಕಾಲದಂಡಮನುದಗ್ರೋಚ್ಚಂಡಕೋದಂಡಮಂ ॥ ೯೪

ಧನುವಂ ಕೊಂಡೆತ್ತಿ ತನ್ಮೌರ್ವಿಯನಟನಿಗೆ ಹಸ್ತಾಗ್ರದಿಂದೆತ್ತಿ ಭೂಭೃ ।
ತ್ತನಯಂ ಕಾಯ್ದಾನದಾರ್ದೇಱಿಸುವ ಸರಭಸಕ್ಕುರ್ವಿ ತಗರ್ತ್ತು ನಾಗೇಂ ॥
ದ್ರನ ಭೋಗಂ ಬಳ್ಕಸಲ್ ಸಿಕ್ಕಿದುದು ಗಿರಿವ ಘಂಟಾಘಿಘೂತಕ್ಕೆ ಬೆನ್ನೋ ।
ಡಿನ ಪೊಂಗಳ್ಬಿರ್ದೆಕೂರ್ಮಂ ಕುಸಿದನೊಳಱಿಕೂಗಿತ್ತು ದಿಗ್ದಂತಿವರ್ಗಂ॥

ಕಡುಪಿಂದಾಗಳ್ತ್ರಿಪಿಷ್ಟಂ ಜಯವಡೆಯೆ ಧನುರ್ಜ್ಯಾರವಾಪಾತದಿಂದಂ ।
ನಡುಗಿತ್ತುರ್ವಿತಳಂ ಬಿರ್ದುದವಿರಳದಿಕ್ಸಂಧಿಬಂಧಂಗಳೆತ್ತಂ ॥

ಕಡಲಾಗಳ್ ಕೂಡೆ ತುಳ್ಕಾಡಿದುದು ದಿಗಧಿಪರ್ ಬೆರ್ಚ್ಚಿದರ್ ದೇವವೃಂದಂ ।
ಬಿಡದೆತ್ತಂ ಬೆಕ್ಕಸಂಬೆತ್ತುದು ಬಿರಿದೊಡವಂತಾದುದಬ್ಜೋದ್ಭವಾಂಡಂ ॥ ೯೬

ಗಱಿನೆಟಲಿಂ ಜಗಂ ನೆರೆ ತವೋವಯವಾಗಿಸುತುಂ ಕಡಂಗಿ ಬ ।
ರ್ಪಱಿಕೆಯ ಬಿಲ್ಲ ಬಲ್ಲಣಿಯನೆಯ್ದಿ ಸರಲ್ ತಿರುವಿಲ್ ಕರಂ ಕರಂ ॥
ಪಱಿಯೆ ಪೆಗಲ್ ಮೊಗಂ ಬಸಿಱುರಂ ತೊಡೆ ತೋಳ್ ಶತರಂಧ್ರವಾಗಲೆ ।
ಚ್ಚು ಱದೆ ಕುಮಾರಕಂ ತವೆಯೆ ತೂಳ್ದಿದನಾಜಿಯೊಳಸ್ತ್ರಕೋಟಿಯಿಂ ॥ ೯೭

ಬಲಜಲದಾಗ್ರದಿಂದಿರದೆ ಪಾಯ್ವ ತಟಲ್ಲತಿಕಾನಿಕಾಯದಂ ।
ತಲಗಿನ ಬೆಳ್ಪು ತಟ್ಟು ನಿಮಿರುತ್ತಿರೆ ನೂಂಕುತೆ ಕೊಂತಕಾದರಂ ॥
ಮಲೆವಿದಿರೋಳೆ ಬೀೞ್ವತೆಱದಿಂ ಪಡೆಯೊಟ್ಟಲೊಳೆಯ್ದಿ ಬೀೞಲು ।
ಚ್ಚಳಿಸಿ ನಿಶಾತಬಾಣತತಿಯಿಂದುಱದಾಯುವರಾಜನಾಜಿಯೊಳ್ ॥ ೯೮

ಅತುಳತರೋಗ್ರವಾಯುಗಡರ್ದೇಱುವ ಮೇಘತರಂಗದಂತೆ ಸಂ ।
ಗತಿವಡೆದೆಯ್ದಿ (ನಾಡೆ) ತಲೆಮುಟ್ಟಲಿಬೊರ್ಮೆಯೆ ನೂಂಕುವಡ್ಡಣಾ ॥
ಯತವಡೆಯುಂ ಕುಮಾರನಿಸೆ ನಟ್ಟು ಮರುಂಗಿದ ಬಾಣಜಾತದಿಂ ।
ಕ್ಷ್ಮಿತಿಗೊಱಗಿತ್ತು ಬೆಂಗಱಿಗಳುಣ್ಮಿದ ಕೂರ್ಮಸಮೂಹಮೆಂಬಿನಂ ॥ ೯೯

ಗಡಣಿಸಿ ಮೇಲೆ ನೂಂಕುವ ತುರಂಗದಳಂಗಳನಾಕುಮಾರಕಂ ।
ಬಿಡದಿಸೆ ನಾಡೆ ಮೆಯ್ ಗಱಿಮಯಂ ದಲೆ ನಲ್ ನೆಱಿ ನಟ್ಟು ಧಾತ್ರಿಯುಂ ॥
ನಡೆ ನಿಶಿತೋಗ್ರಬಾಣಗಣಮಂತವಱಿಂ ವಿಗತಾಸುವಾಗಿಯುಂ ।
ಕೆಡೆಯದೆ ವಾಜಿರಾಜಿ ಸರವಾಜಿಗಳಂದದಿನಿರ್ದುವಾಜಿಯೊಳ್ ॥ ೧೦೦

ಇರದೆ ಕಡಂಗಿ ನೂಂಕಿದ ಮದೇಭಘಟಾವಳಿ ತೊಟ್ಟಸಲ್ಕೆ ಚೆ ।
ಚ್ಚರದೆ ಕುಮಾರನಸ್ತ್ರಗಣದಿಂ ಗಱಿಗೂಡುಗಳಾಗಿ ಬೀೞ್ದುವಾ ॥
ಸುರಪತಿ ಕೋಪದಿಂ ತಿರುಪೆ ತತ್ಕುಲಿಶೋದ್ಭವತಾತಘಾತದಿಂ ।
ಧರಣಿಗೆಱಂಕೆಗೂಡಿ ಕೆಡೆದುನ್ನತನೀಳನಗಂಗಳಂಬಿನಂ ॥ ೧೦೧

ಘನಪದಮಂ ಪಟಿಂಚಲೆಯೆ ಕೇತುಗಳುದ್ಧತಜೇತೃಕೃತೋತ್ಕರ ।
ಧ್ವನಿ ದೆಸೆಯಂತಮಂ ಪುದಿಯೆ ನೂಂಕುವ ತೇರ್ಗಳ ವಾಜಿಸೂತಕೇ ॥
ತನರಥಚಕ್ರಚಕ್ರವುಱನೇಮಿಯುವಸ್ಕರ ಕೂಬರಾಣಿಯೆಂ ।
ಬಿನಿತುಮೆನಾತ್ರಿಪಿಷ್ಟನೆನಸುಂ ಶರಕೋಟಿಯಿನೆಚ್ಚು ತೂಳ್ದಿದಂ ॥ ೧೦೨

ಆಗಳ್—

ಸೊಡರ್ವೆಳಗಡರ್ವ* ಪತಂಗದ ।
ಪಡೆಯಂತೆನಸುಂ ತ್ರಿಪಿಷ್ಟನಸ್ತ್ರಾನಳನಿಂ ॥
ಮುಡಿವ ನಿಜಬಲಮನೀಕ್ಷಿಸಿ ।
ಕಡುಮುಳಿಸಂ ತಳೆದನಶ್ವಕಂಧರನಾಗಳ್ ॥ ೧೦೩

ಬಿಳುತೊಳಗುವ ನಿಜಬಲಮುಂ ।
ನೆಳೆ ಕಂಡು ಕಡಂಗಿ (ಕೊಂಡು) ಕೋದಂಡಮನಾ ॥
ದುರ್ಜಯದೇಳಿಸಿ ಕೂಗೊರ್ದಲಂ ।
ಕಳುತ್ತು ತಾನುರ್ಚೆ ಕೋಪದಿಂ ಖಚರೇಂದ್ರಂ ॥ ೧೦೪

ತಳರದ ಕಾಯ್ಪಿನಿಂ ಖಚರನೆಚ್ಚೊಡಮೆಚ್ಚ ಸರಲ್ಗಳಂ ಕರಂ ।
ಗಳಲನೆ ತಾನವಂ ನೃಪಕುಮಾರಕನುಗ್ರಶರಂಗಳಿಂದಿಸ ॥
ಲ್ಕಳುರ್ದು* ಪಱಿಂಚೆ ಬಾಣತತಿ ದಳ್ಳುರಿ ಮಿಳ್ಳಿಸೆ ಘೂರು ಘುಣ್ಮುಘುವ್ ।
ಖಳಲೆನಿಪುಗ್ರನಾದವೊದವುತ್ತಿರೆ ಮಧ್ಯದೊಳಾದುದದ್ಭುತಂ ॥ ೧೦೫

ಧರೆ ಪೊತ್ತುವಿನಂ ಕಿಡಿಗಳ ।
ಸರಿ ಭೋರೆನೆ ಸುರಿಯುತಿರೆ ಪಱಿಂಚುವ ಬಾಣೋ ॥
ತ್ಕರಯುದ್ಧಂ ನೆನೆಯಿಸಿದುದು ।
.....ವಿಳಯಕಾಲದಬ್ದಾಗಮಮುಂ ॥ ೧೦೬

ಕಡುಮುಳಿಸಂ ತಳೆದಾಗಳ್ ।
ಕಡೆಗಾಲದ ಕಾಲನಂತಿರಾಖಚರೇಂದ್ರಂ ॥
ಬಿಡೆ ಕಟ್ಟಿ ಕೊಲ್ವೆನಿವನಂ ।
ತಡೆಯದೆನುತ್ತುರಗಬಾಣದಿಂದಾರ್ದೆಚ್ಚಂ ॥ ೧೦೭

ಬಿಸದುರಿ ನೀಳ್ದ ಮುಂಬರಿದು ಕಣ್ಗಿಡಿಗಳ್ ಕೆದಱೀಲಿ ಭೋರೆನು ।
ತ್ತಸದಳವಾಗಿ ಪನ್ನಗಶರಾವಳಿಗಳ್ ಕವಿತಂದಸಂಖ್ಯೆಯಿಂ ॥
ಮುಸುಱಿ ವರೂಥಸೂತಹಯಕೇತುಗಳಂ ಬಿಗಿದೊತ್ತಿ ಸುತ್ತಿ ಬಂ ।
ಧಿಸೆ ದಿಟ ಬೇಗದಿಂದೆ ಯುವರಾಜನನಾನೆಗಱ್ದಾ* ಜಿರಂಗದೊಳ್ ॥ ೧೦೮

ನಡು ತೊಡೆ ಜಾನು ಜಂಘೆ ನಿಡುದೋಳುರಮಂಘ್ರಿಕಿರೀಟಕಂಠಮೆಂ ।
ಬೆಡೆಗಳನುಗ್ರಪನ್ನಗಶರಾವಳಿಗಳ್ ಬಿಗಿದೊತ್ತಿ ಸುತ್ತಿಯುಂ ॥

ಮಿಡುಕದೆ ನಟ್ಟು ನಿಂದು ಫಣಿಭೂಷಣನುಂ ನೆರೆ ತಾಳ್ದುದಾವ್ಯೂಡಂ ।
ಗಡಮೆನಿಪಂತಿರಿರ್ದನವನೀಶಕುಮಾರಕನಾವರೂಥದೊಳ್ ॥ ೧೦೯

ಸ್ಮರಿಯಿಸೆ ತಾರ್ಕ್ಷ್ಯಮಂತ್ರಮನಿಳೇಶತನೂಭವನಾಗಳಂತದ ।
ರ್ಕಿರದುರಿಯುಂ ತಗುಳ್ದು ದೊಣೆಯಿಂ ತಲೆದೋರ್ಪ ತದ್ಭಯಂ ॥
ಕರಗರುಡಾಸ್ತ್ರದೊಂದು ಮಸಕಕ್ಕೆ ನಿಜಾಂಗಮನೊತ್ತಿ ಸುತ್ತಿ ಫೂ ।
ತ್ಕರಿಪುರಗಾಸ್ತ್ರಕೋಟಿ ಪರಿಪಟ್ಟುದು ತೊಟ್ಟನೆ ದಗ್ಧರಜ್ಜುವೋಲ್ ॥ ೧೧೦

ತೊಟ್ಟನೆ ಮುನಿದು ಕುಮಾರಂ ।
ತೊಟ್ಟಸೆ ಗರುಡಾಸ್ತ್ರಮುರಿಯನುಗುಱುತ್ತುಂ ಬೆ ॥
ನ್ನಟ್ಟ ನೆಱೆ ನುಂಗಿ ನೊಣೆದುದು ।
ನೆಟ್ಟನೆ ಖಚರೇಂದ್ರನುರಗಬಾಣಾವಳಿಯಂ ॥ ೧೧೧

ಅದಂ ಕಂಡು ಕಡುಮುಳಿದು ಖಚರೇಂದ್ರಂ ಮಾಯಮಾಯುದ್ಧಮನೊ
ಡರ್ಚಿಯುಂ ಯುವರಾಜನೊತ್ತುವ್ರೋಗದುತ್ತವಳನಾಗಿ ಕಾದುತ್ತುಮಿರೆ
ಯುಮುವಂ ಬೇಸಱನಪ್ಪುಕೆಯ್ದು

ಮುನಿದಾಗಳ್ ಖಚರೇಂದ್ರನಿನ್ನಿವನನಾಂ ಕೊಂಡಾಡಲೇಕೆಂದು ತೊ।
ಟ್ಟನೆ ಕೋಪಂ ನೆಲೆವೆರ್ದೆ ನೀಡೆ ಕರಮುಂ ತಾಂ ಭುಂ ಭುಗಿಲ್ ಧಂ ಧಗಿಲ್ ॥
ಎನುತುಂ ದಳ್ಳುರಿ ವಿಳ್ಳಿಸುತ್ತಿರೆ ಸಮಂತಾಚಕ್ರಮೇೞ್ತಂದುದಿ ।
ನ್ನೆನಸುಂ ಭೂತಳಮುಳ್ಕ ತಲ್ಲಣಿಪಿನಂ ದಿಕ್ಪರ್ ಭಯಂಗೊಳ್ವಿನಂ ॥ ೧೧೨

ಗದಗಂಪಂಗೊಳೆ ಲೋಕವಾಕ್ರಮದೆ ಬಂದಾಚಕ್ರಮುಂ ಕೊಂಡುಕೋ।
ಪದವಜ್ವಾಳೆ ನಿಜಾಕ್ಷಿಯಿಂ ನಿಮಿರಲಶ್ವಗ್ರೀವನಾರ್ದಾಗಳೋ ॥
ವದೆ ತಾನಿಟ್ಟೊಡೆ ಬಂದು ಮೂಮೆ ಬಲವಂದಾದಿತ್ಯಬಿಂಬಂಬೊಲಿ ।
ರ್ದುದು ವಿಭ್ರಾಜಿಸುವಂ ತ್ರಿಪಿಷ್ಟಪಸವ್ಯೋದ್ದಂಡದೋರ್ದಂಡಮುಂ ॥

ಆಚಕ್ರಮುಂ ಕಂಡು ಯುವರಾಜಂ ನಿಜಾಗ್ರಜನಪ್ಪ ವಿಜಯನ
ವೊಗಮುಂ ನೋಡೆ ನೀನೀಚಕ್ರದಿಂದಾವಿಯುಚ್ಚರಚಕ್ರಿಯನಿಡೆಂದು
ಪೇೞ್ವುದುಂ—

ತಡೆಯದೆ ಕೊಂಡಾಚಕ್ರದಿ ।
ನಡಸಿ ಕುಮಾರಂ ವಿಯುಚ್ಚರನ ಶೀರ್ಷಮನಾ ॥
ರ್ದಿಡಲೊಡನೆ ಪಱಿದು ಬಿರ್ದುದು ।

ಪೊಡವಿಗೆ ಪರಕಲಿಸಿ ಕೆದಱಿ ಮಕುಟದ ಮಣಿಗಳ್ ॥ ೧೧೪

ಪರಚಕ್ರಾಳಿಗೆ ಕಾಲಚಕ್ರಮೆನಿಪಶ್ವಗ್ರೀವವಿದ್ಯಾಧರಂ ।
ಗೆ ರಣಕ್ಷ್ಮಾಣಿಯೊಳಾಕೃತಾಂತಪುರಿಯುಂ ಕೊಟ್ಟತ್ತು ಕೊಂಡಂ ವಣಿ ॥
ಗ್ವರನಂತಗ್ಗದ ಚಕ್ರಮುಂ ತರುಣನೆಂದೋರಂತೆ ಮೆಚ್ಚುತ್ತುಮ ।
ಚ್ಚರಿಯಿಂ ಪೂವುಱಿಯುಂ ಕಡಂಗಿ ಕಱಿದರ್ ತಾವುಂದು ವೃಂದಾರಕರ್ ॥

ಅತ್ರಿಪಿಷ್ಟ್ಯುವರಾಜಂ ಗೆಲ್ದ ಸಂಗರಾಂಗಣಂ ಜರತ್ತಟಾಕದಂತೆ ಜರ್ಝರಿತವಾರಣಾವಳಿಯುಂ । ವಿಗತಪ್ರವಾರ್ವಾಹಿನಿಯಂತೆ ಪುಷ್ಕರಪರಿಕಲಿತಮುಂ । ಮಹಾನಿಲಯಮುಖಸರಸಿಯಂತೆ ವಿಸ್ತೀರ್ಣಸ್ಯಂದನಮಯಮುಂ । ಶಿಶಿರಸಮುದ್ಭವಾವಳಿಯಂತೆ ವಿಗಳಿತಪತ್ರಪ್ರತಾನಮುಂ। ವಿಪುಲತರವಿಪಿನಾಂತರನಂತೆ ವಿದಳಿತಭಲ್ಲಜಾಲಮುಂ । ವರ್ಷಾಕಾಲದಂತೆ ವಿಮುಲತರವಾರಿನಿಹಿತಮಹೀತಲಮುಂ।ಸಾಗರದಂತೆಶೋಣಾಂಬುಪ್ರವಾಹಪರಿಯುಕ್ತಮುಂ । ಕುವಲಯಷಂಡದಂತೆ ನವೋತ್ಪಲಪ್ರಕರೋಪೇತಮುಂ । ಜನಿತೋತ್ಕಳಿಕಾರ್ಣವದಂತೆ ನರ್ತಿತಕಬಂಧಸಂದೋಹಮುಂ । ಪಶ್ಚಿಮಾಶಾಮಂಡಲದಂತೆ ಜಂಬೂಕವ್ಯಾಕೀರ್ಣವಾಗಿರ್ದುದಂತುಮಲ್ಲದೆಯುಂ—

ಸಲೆ ಶಬವರ್ತಿಯಾಯ್ತು ಮುಱಿಗಾಲದ ಮೇದಿನಿಯಂದದಿಂ ಶಿವಾ ।
ಕಲಿತಮುದಾಯ್ತು ಶೀತಕರಶೇಖರನಂದದಿನಪ್ರತರ್ಕ್ಯಜಾಂ ॥
ಗಲಮುಯುಮಾಯ್ತು ಭಾರತಮಹೀತಲದಂದದಿನಸ್ತ್ರಘಾತಮಾ ।
ಯ್ತು ಲಘುತರಾಮರೇಂದ್ರ ಕುಲಿಶಾಯುಧನಂದದಿನಾರಣಾಂಗಣಂ ॥ ೧೧೬

ನೆಱಿದು ನಿಶಾಚರಾವಳಿ ನಿರೀಕ್ಷಿಸೆ ಸಂಗರರಂಗಮುಂ ಬಭಾ ।
ಪುಱಿ ನಮಗಾವಗಂತವಿಲನೆಯ್ದದ ನಲ್ಲಣಿಸಿತ್ತನೆಂದು ಚೆ ॥
ಚ್ಚಱಮನುರಾಗಮುಣ್ಮೆ ವಿಜಯಾನುಜನಿಂದಿರ ಜೀವು ಹೋ ಎನು ।
ತ್ತುರುತರಸಂಭ್ರಮಂಬೆರಸು ನರ್ತಿಸುತಿರ್ದುದು ಮೆಱ್ಚಿ ಬಿಱ್ಚಿತಂ ॥ ೧೧೭

ಇಂತು ಮಹಾದ್ಭುತವಾಗಿರ್ದ ರಣಾಂಗಣಮಂ ಪೊಱಮಟ್ಟು ವಿಜಯತ್ರಿಪಿಷ್ಟ್ಯುವರಾಜರ್ ಜ್ವಲನಜಟಿಮಹಾರಾಜಂಬೆರಸು ವಿಜಯಪಟಹಪಟುರವಂ ಪೊಣ್ಮುತಿರೆ ಪುರಾಭಿಮುಖರಾಗಿ ಬರುತಿರ್ಪಾಗಳ್—

ಪರಿತಂದು ಚರರ್ ಹಯಕಂ ।
ಧರನಂ ಕೊಂದಂ ಕುಮಾರನೆಂದೆನೆ ಕೇಳ್ದಾ ॥

ಪುರಮುಂ ಕೈಗೆಯ್ದು ಮಹೀ ।
ವರನಿದಿರ್ವಂದಿರ್ದನೀಕ್ಷಣೋತ್ಸವಚಿತ್ತಂ ॥ ೧೦೪

ಮಿಗೆ ಸಂರಂಭದಿನೆಯ್ದಿವಂದು ಪದಪದ್ಮಕ್ಕೊರ್ಮೊದಲ್ ನಮ್ರಮೌ ।
ಳಿಗಳಾಗಿರ್ದ ತನೂಜರಂ ನಿಮಿರ್ದು ತಾನಿತ್ತಾಳ್ದಳಂ ದಿಬ್ಬರಂ ॥
ತೆಗೆದೋರಂತವರ್ದಪ್ಪುತುಂ ಪರಸುತುಂ ಹರ್ಷಾಕ್ಷಿಯಿಂ ನೋಡುತುಂ ।
ಮಗುಳ್ದಂ ಭೂಪನಮೇರು ಪೌದನಪುರಕ್ಕಾಗಳ್ ಮನೋರಾಗದಿಂ ॥ ೧೦೫

ಬಲಪಾದೋದ್ಧೂತಧೂಳಿಪ್ರಜನಮಯನುನಿಳಾಧ್ವಂ ಭಟಾನೀಕಶಸ್ತ್ರೀ
ಚ್ಛಲಿತಪ್ರದ್ಯೋತವಾಲಾನುಯಮುಖಿಲಮುಹೀಮಂಡಳಂ ಸೈನ್ಯಜಾತಾ ॥
ತುಲನಾನಾತೋದ್ಯಹೃದ್ಯಸ್ವರಚಯನುಯವಾಶಾಂತವಾಗುತ್ತಿರಲ್ಕಾ ।
ಗಳಿಳೀಶಂ ಬಂದನಿಂದ್ರಂ ನಿಜನಗರಿಗೆ ಬರ್ಪಂತೆ ಸಾನಂದದಿಂದಂ ॥ ೧೦೦

ಇಂತು ಪುರಮುಂ ಪುಗುವಾಗಳ್:—

ಮಗಮಗಿಪಚ್ಚ ಕತ್ತುರಿಯು ನೀರ್ದಳಿಸಂ ವಿಚರನ್ಮದಾಳಿವಾ ।
ಲೆಗಳಿನಣಂ ಮರುಳ್ಗೊಳಿಪ ಪೂವಲಿ ರನ್ನದ ಪೆರ್ವೊಡರ್ಗಳೋ ॥
ಳಗಳಳವಟ್ಟು ಬಿತ್ತರಿಪ ಮುತ್ತಿನ ಬೆಂಗಡೆಗಳ್ ಪೊಡಲ್ಬಿ ಶೋ।
ಭೆಗೆ ನೆಲೆಯಾಗಿ ಕಣ್ಗೊಳಪುದಾಪುರದಗ್ಗದ ವೀಧಿವೀಧಿಯೊಳ್ ॥ ೧೦೧

ವಿನುತಂಬೆತ್ತನವದ್ಯಹೃದ್ಯಮೆನಿಪುದ್ಯತ್ಪ್ರಾಜ್ಯಸಾವಾಜ್ಯಪ ।
ಟ್ಟನವಾಲಂಕರಣಂ ತ್ರಿಪಿಷ್ಟನೆವೊಲಂ ತಾನಪ್ಪನೆಂದಿಂತು ತೊ ॥
ಟ್ಟನೆ ಭೂಕಾಂತೆಗೆ ಪರ್ಬೆ ಪೇಳ್ವಿ ತೆಱನಾಯೊತ್ತೀರಂತೆ ಪುಷ್ಪೋಪಹಾ ।
ರನಿಕಾಯಕ್ಕೆಱಗಿರ್ದ ಮಾವ್ಯದಳಿಸೀಳ್ದುಂಕಾರಸಾರಸ್ವನಂ ॥ ೧೦೨

ಅಗಣಿತಮೆನೆ ಮಿಗೆ ಸೊಗಯಿಪ ।
ದುಗಲದ ಪೆರ್ಗುಡಿಗಳಿತ್ತಿ ಬಿತ್ತರಿಸಿದುವಾ ।
ವಗವಾಪುರಾಮೃತಾಬ್ಧಿಯೊ ।
ಳೊಗೆದು ತುಱುಂಗಿದ ತರಂಗವಾಲಿಯು ತೆಱನಂ ॥ ೧೦೩

ಕದನದೊಳಾಂತ ಖೇಚರನ ಚಕ್ರವನೀವದೆ ಕೊಂಡನೀತನೆಂ ।
ದೊದವಿದ ಲೀಲೆಯಿಂ ನೃಪಕುಮಾರನನೀಕ್ಷಿಸುತಿರ್ದ ತತ್ಪುರೀ ॥
ಸುದತಿಯು ನೀಳ್ದ ಕಣ್ಬೆಳಗಿದೆಂಬಿನವಾವಣಿತೋರಣಂಗಳ ।
ಗ್ರದ ಪೊಳಿವಿಂದುಕಾಂತವುಕುರದ್ಯುತಿ ತಟ್ಟಿಸೆದತ್ತು ನಾಡೆಯುಂ ॥ ೧೦೪

ಶರದಭ್ರಂ ಪರಿವೃಪ್ಪವುಪ್ಪ ವಿಲಸನ್ನೀಲಾದ್ರಿಯೆಂಬಂತೆ ಬಿ ।
ತ್ತರಿಸುತ್ತಿರ್ಪ ದುಕೂಲಚೇಲನಗಳಿಂ ಚೆಲ್ವಾಗಿ ತೋರ್ಪಾವುದೋ ॥
ದ್ಧುರವಾತಂಗವನೇಱಿ ಬರ್ಪನೆ ದಿಟಂ ರಾಜೇಂದ್ರನೆಂದಾದವಾ ।
ದರದಿಂದೀಕ್ಷಿಪುದಾಪುರೀಜನವನೂನೋತ್ತುಂಗಹರ್ಮ್ಯಾಂಗಳೊಳ್ ॥ ೧೬೫

ಬೋಳವಿಸುತ್ತುವಾತುರಗಮುಂ ಗಳಮೂಳವುಹುರ್ಮುಹುರ್ಮೈದು।
ಸ್ಖಲನಪಾಣಿ ಪಟ್ಟರುಣರಶ್ಮಿಕಶಾದ್ರುತವಾವುಹಸ್ತನಾ ॥
ಲೋಳನವೋತ್ತರೀಯವಸನಾಂಚಲನುಜ್ಜ್ವಲರತ್ನಕುಂಡಲಾಂ ।
ದೋಳನವಂ ತ್ರಿಪಿಷ್ಟನೆನುತುಂ ನಡೆನೋಡಿದುದಂಗನಾಜನಂ ॥ ೧೬೬

ಮೇಲವುರ್ದೆತ್ತಿ ಬಿತ್ತರಿಪ ಬೆಳ್ಗೊಡೆಯಾನೇಲೊಳ್ ನಖಪ್ರಭಾ ।
ವಾಲಿಕೆ ನೀಳ್ದ ಮುಂಬರಿಯೆಯುಂ ಹಯಕಂಧರಮೂಲಲಾಲಿತಾ ॥
ಸ್ಖಲನಹಸ್ತನಾಗಿ ಬರುತಿರ್ಪನೆ ತಾಂ ವಿಜಯಂ ದಲೆಂದು ಲೀ ।
ಲಾಲಸನೇತ್ರವಾಗಿ ಪದೆದೀಕ್ಷಿಸುತಿರ್ದುದು ತತ್ಪುರೀಜನಂ ॥ ೧೬೭

ಸೊಗಯಿಪ್ಪನರನಾಥನಂದನರ ರೂಪಾಲೋಕನಾಶಕ್ತಿ ಕೈ ।
ಮಿಗೆ ಕಾಂಜೇಲತೆಗಳ್ ಜಗುಲ್ತೆರೆ ಲಸದ್ಧಮ್ಮಿಲ್ಲಪ್ಪಲ್ಲಂಗಳ ॥
ಲ್ಲುಗೆ ಬಂದೇಱಿದುದಿಂದುಕಾಂತವುಣಿಹರ್ಮ್ಯಾಗ್ರಂಗಳಂ ಕಂತುಚಾ ।
ಪಗುಣಾರಾವವೆಸಲ್ದೆ ನೂಪುರರವಂ ಪೊಣ್ಮಲ್ ಪುರಸ್ತ್ರೀಜನಂ ॥ ೧೬೮

ವದನದ ಸೌರಭಕ್ಕೆ ಸುಱಿಗೊಳ್ವ ವುದಾಳಿಗಳಂ ಕಡಂಗಿ ಸೋ ।
ವುದನದನಾವಗಂ ವುಱಿದು ಭೂಪತನೂಜನ ರೂಪಶೋಭೆಯುಂ ॥
ಸುದತಿ ಕರಂ ನಿಜಾತುರದಿನೀಕ್ಷಿಸುತಿರ್ದಳುದಗ್ರನೀಲಮೇ ।
ಘದ ವುಱಿಗೊಂಡು ನೋಡುವ ವಿಯಚ್ಚರಿಯೆಂದೆನಿಪೊಂದು ಭಂಗಿಯಿಂ ॥

ಕ್ಷಿತಿಗೆಸೆದಿರ್ಪ ಪೌದನಪುರಾಬ್ಧಿಯೊಳೊಪ್ಪುವ ತಜ್ಜಲಾಧಿದೇ ।
ವತಿಯರ ವೊತ್ತವೆಂದೆನೆ ವಿಜೆತ್ರಮಹಾವುಣಿಭೂಷಣಾವಳೀ ॥
ದ್ಯುತಿತತಿಯುಂ ದಿಶಾತತಿಯನಿಂದ್ರಧನುರ್ವುಯವಾಗಿಸುತ್ತೆ ಭೂ ।
ಪತಿಗೆ ನವೀನರತ್ನದ ನಿವಾಳಿಯನೆತ್ತಿದುದಂಗನಾಜನಂ ॥ ೧೬೯

ಇಂತು ಬಂದು ಪ್ರಜಾಪತಿಮಹಾರಾಜಂ ಜ್ವಲನಜಟಿಮಹಾರಾಜನುಂ ವಿಜಯಪ್ರತಾಪರಪ್ಪ ವಿಜಯತ್ರಿಪಿಷ್ಟರುಂ ಬೆರಸು ನಿಜರಾಜಮಂದಿರಮುಂ ಪೊಕ್ಕು—

ಜಯಲಕ್ಷ್ಮೀಕಾಂತೆಗತ್ಯಾಶಯಭುಜವನುದಾರಾತಳಶ್ರೀಗೆ ಶೋಭಾ ।
ಮಯಹಸ್ತಾಂಭೋಜಮಂ ನಿಶ್ಚಳರಮೆಗೆ ನಿಜೋರಸ್ಸ್ಥಳೀರಂಗವಂ ನಿ ॥
ರ್ಭಯಭಾಸ್ವಚ್ಛ್ರೀಗೆ ನಿತ್ಯೋರ್ಜಿತವನಮನುದಂಚದ್ಯಶಶ್ರೀಗೆ ಲೋಕ।
ತ್ರಯಮುಂ ತಾನಿಂಬುಗೊಟ್ಟಂತೆಸೆದನಸದಳಂ ಸೂಕ್ತಿ ಸಂದರ್ಭಗರ್ಭಂ ॥

— ಗದ್ಯ —

ಇದು ವಿನಮದಮರೇಂದ್ರಮೌಳಿ ಮಣಿಕಿರಣಮಾಲಾಪರಾಗಪರಿರಂಜಿತಚರಣ ಸರಸೀರುಹರಾಜಿತ ಪರಮಜಿನರಾಜಸಮಯಸಮುದಿತಸದಮಲಾಗಮಸುಧಾಶರಧಿ ಶರದಿಂದು ಶ್ರೀಮಾಘಣಂದಿಪಂಡಿತಮುನೀಶ್ವರ ಮನೋಜನಿತನಿರುಪಮದಯಾ ಪರಸರಸೀಸಂಭೂತಸಂಭವಾಮಳ ಸುಕವಿಕಮಲಭವ ವಿರಚಿತಮಪ್ಪ

ಶಾಂತೀಶ್ವರ ಪರಮಪುರಾಣದೊಳ್

ತ್ರಿಪಿಷ್ಟಯುವರಾಜವಿವಾಹವರ್ಣನಂ ಬಲಭದ್ರಾಶ್ವಗ್ರೀವವಿಧ್ವಂಸನ ವರ್ಣನಂ ಚಕ್ರಲಬ್ಧಿವರ್ಣನಂ, ತೃತೀಯಾಶ್ವಾಸಂ.

ಚತುರ್ಥಾಶ್ವಾಸಂ

ಶ್ರೀದಯಿತಂ ವರವಿಜಯ ।
ಶ್ರೀದಯಿತಂ ಭುವನಭವನಧವಳಿತಕೀರ್ತಿ ॥
ಶ್ರೀದಯಿತನಿರ್ದನಖಿಳವಿ ।
ನೋದದೆ ಜಿನಪದಪಯೋಜರಾಜಮುರಾಳಂ ॥ ೧

ಪರಿಲಬ್ಧೋತ್ಸವನಾನರೇಂದ್ರಮುಕರಂದಂ ಬಂದು ತನ್ನಂದನ ।
ವೈರಸಾಸಂದಿತಲೋಕಲೋಚನವೆನಿಪ್ಪಾಸ್ಥಾನಮಂ ತಾನಳಂ ॥
ಕರಿಸಿರ್ದಂ ಕರವೊಪ್ಪೆ ತನ್ನ ತೊಡೆ ಯುಗ್ಮಂ ಚಾರುತಾರಾದ್ರಿಚಂ ।
ಚುರನೀಲಾದ್ರಿಯುಗೋಪಭೂಷಿತವಿಭಾಸ್ವತ್ಕಂಧರಂ ಮಂದರಂ ॥ ೨

ವ॥ ಇಂತು ಸಂತಸದಿನೋಲಗದೊಳಿರ್ದು ಜ್ವಲನಜಟಿನುಹಾರಾಜನಂ ಬರಿಸಿ ವಿಷ್ಟರವಿಭೂಷನನಾಗಿಸಿ ನಮಗೆ ಸಮನಿಸಿದನುವರಮಂ ಕೇಳ್ದ ಸುತಸಮನ್ವಿತನೈತಂದನೆಂದು ಸಮುತ್ಕರ್ಷಚಿತ್ತನಾಗಿ ಉಭಯಶ್ರೇಣ್ಯಾಧಿ ಪತ್ಯಮನಿತ್ತು ಮುಸದಲ್ಕಳಿಂದರ್ಕಕೀರ್ತಿಗೆ ವಿಜಯತ್ರಿಪಿಷ್ಟರುಂ ನಿಜಾನು

ಜೆಯಪ್ಪ ಜ್ಯೋತಿರ್ಮಾಳಾದೇವಿಯಂ ವೈವಾಹಕಲ್ಯಾಣದಿಂ ಕೊಟ್ಟು ಸಕ
ಲವಸ್ತು ವಾಹನಂಗಳಂ ಬಟವಟಿಯಂ ಕೂಡೆ ಪಡೆದು ತಡೆಯದೆ ವಿಯುಚ್ಚ
ರೇಂದ್ರಂ ಪ್ರಜಾಪತಿಮಹಾರಾಜನಂ ಬೀಳ್ಕೊಂಡು ನಿಜರಾಜಧಾನಿಯಪ್ಪ
ರಥನೂಪುರಚಕ್ರವಾಳಪುರಮನೆಯ್ದಿ ನಿಖಿಲಸಾಮ್ರಾಜ್ಯಸುಖದಿಂದಿರುತ್ತು
ಮಿರೆ—

ರತಿಯಂ ರಮೆಯಂ ಹಿಮಗಿರಿ ।
ಸುತೆಯಂ ರೂಪಿಂ ಸ್ವಭಾವದಿಂ ಸೊಬಗಿಂ ಮಿ ॥
ಕ್ಕತಿಶಯದಿನರ್ಕಕೀರ್ತಿಯ ।
ಸತಿ ಜ್ಯೋತಿರ್ಮಾಳೆ ಪೆಣ್ಗಳೊಳ್ ಕಣ್ಗಳಪಳ್ ॥ ೩

ನಗೆ ವೊಗಮಿಂದುವಂ ನಗುವುದೊಳ್ನಡೆ ಮತ್ತ ಮರಾಳಯಾನಮುಂ ।
ಮಿಗುವುದು ಕಣ್ಗಳಂಗಜಶರಂಗಳನೇಱಿಪುವಂಗಭಂಗಿ ನೆ ॥
ಟ್ಟಗೆ ಲತೆಯಂ ನಿರಾಕರಿಪ್ಪುದೊಳಗುರುಳ್ ಮದಭೃಂಗವಾಳೆಯಂ ।
ತೆಗಟ್ವುದೆನಲ್ಕದೇವೊಗಟ್ವುದಾಸತಿಯಗ್ಗದ ರೂಪಶೋಭೆಯುಂ ॥ ೪

ಪೊಳೆವವುಳೇಂದುಬಿಂಬದ ಕಳಾವಳಿಯಂ ತೆಗೆದಾಸುಧಾಂಬುವಿಂ ।
ತೊಳೆದು ಪಟಿಚ್ಚನಾಗಲದಱಿಂದೊಳ್ ಭುವನತ್ರಯದೊಂದು ಚೆಲ್ವನೊ ॥
ರ್ವಳೆಯೆನೆ ಮೂಡಿ ಕೂಡೆ ಪಡೆದಂ ಜಲಜೋದ್ಭವನೆಂದೆನಲ್ಕೆ ಕ ।
ಣ್ಗೊಳಿಸುವುದರ್ಕಕೀರ್ತಿಸತಿಚರೇಂದ್ರನ ಕಾಂತೆಯ ರೂಪವಿಭ್ರಮಂ ॥

ನಿಡುಗಣ್ಗಳ್ ನಳತೋಳ್ಗಳಿಂದುವದನಂ ಬಿಂಬಾಧರಂ ನುಣ್ಗೂರಲ್ ।
ಕುಡುವರ್ವಾನಡುವೆಂದು ಬಣ್ಣಿಸುವ ಬೇಳಂಬಂಗಳಂತಿರ್ಕೆ ಮಾ ॥
ರ್ಪಡಿ ಮೂಲೋಕದೊಳಲ್ಲ ವೋಹಿಸುತುಮಿರ್ಪಿತನ್ನ ಚೆಲ್ವಿಂಗೆ ತಾಂ ।
ಪಡಿಯೆಂಬಂತೆವೊಲರ್ಕಕೀರ್ತಿಸತಿ ಜ್ಯೋತಿರ್ಮಾಳೆ ವಿಭ್ರಾಜಿಪಳ್ ॥ ೫

ಜ್ಯೋತಿರ್ಮಾಳಾದೇವಿಯು ।
ಚೇತಸ್ಸರಸೀರುಹಾಳನೆನಿಸಿದ ಪರಮ ॥
ಪ್ರೀತಿ ನಿಜಮಾಗೆ ಮಿಗೆ ವಿ ।
ಖ್ಯಾತಿಯನಾಂತರ್ಕಕೀರ್ತಿಖೇಚರನೆಸೆವಂ ॥ ೬

ಇಂತು ಕೆಲವಾನುಂ ದಿನಸಂ ಕಂತುಕೇಳೀಸುಖಪರಿಪುಷ್ಟಸ್ವಾಂತರಾಗಿ ನಲಿಯುತ್ತುಮಿರಲ್ಕೊಂದು ದಿನದೊಳ್

ಸುದತಿಯರೊಳ್ ಸುರೂಪವತಿ ಸರ್ವಕಳಾವತಿ ಸಚ್ಚರಿತ್ರಸ ।
ಮ್ಮದವತಿ ಸೌಖ್ಯಸಾರವತಿ ಚಾರುದಯಾವತಿಯೆಂಬ ಪೆರ್ಮೆಯೊಳ್ ॥
ಪುದಿದೆನಸುಂ ಪೆಸರ್ವಡೆದ ಖೇಚರಕಾಂತೆ ವಸಂತಕಾಂತಸಂ ।
ಗದ ಲತೆಯಂತೆ ಪುಷ್ಪವತಿಯಾಗಿ ವಿರಾಜಿಸಿದಳ್ ವಿಳಾಸದಿಂ ॥ ೪

ತನಗಧಿಪನರ್ಕಕೀರ್ತಿಯ ।
ಮನೋನಟೀನರ್ತನೋಪದೇಶಂಗೆಯ್ವಾ ॥
ಮನಸಿಜನಾಜ್ಞಾದೇವತೆ ।
ಯೆನಲ್ಕೆ ಸೆಳೆವಿಡಿದು ಕಾಂತೆ ಕಣ್ಗೆಸೆದಿರ್ದಳ್ ॥ ೫

ಇದು ಪೊಸತಲ್ತೆ ಪುಷ್ಪವತಿಯಾದ ಲತಾಂಗಿಯ ಗಂಧದಣ್ಪಿನಿ ।
ಕ್ಕದ ತನು ಹಾರವಿಲ್ಲದ ಕುಚಂ ಮಣಿನೂಪುರಮಿಲ್ಲದಂಘ್ರಿ ತಿ ॥
ರ್ದದ ಕುರುಳೋಳಿಗಳ್ ತಿಳಕಮಿಲ್ಲದ ಭಾಳವುದಗ್ರಕಾಂತಿಯಿ ।
ಲ್ಲದ ಕಟಿ ಕಣ್ಗೆ ನೂರ್ಮಡಿಸಿ ಮೋಹಿಸುತಿರ್ದುದು ರೂಪಶೋಭೆಯಂ॥೧೦

ಮದನನ ಮಧ್ಯವಾಸ್ತ್ರಮನದಂ ಸೊದೆಯಿಂ ಪುಟಿಗರ್ಚುವಂತೆ ಪೆ ।
ರ್ಚಿದ ಮುದದಿಂ ಸಮಸ್ತ ಪರಿಚಾರಿಕೆಯರ್ ತಲೆವಿಕ್ಕಿ ಗಂಧತೈ ॥
ಲದಿನೆಸೆವಚ್ಛ ಗಾಂಗಸಲಿಲೋತ್ಕರದಿಂ ಕರಮರ್ಕಕೀರ್ತಿಯ ।
ಗ್ಗದ ಸತಿಗಾಚಕುರ್ಥದಿನದೊಳ್ ಸವನಕ್ರಿಯೆಯಂ ನಿಮಿರ್ಚಿದರ್ ॥ ೧೧

ಲಲಿತಾಂಗಂ ಲತೆ ಕೆಂದಳಂ ತಳಿರಲರ್ ಕಣ್ಗಳ್ ಕುರುಳ್ ಭೃಂಗಸಂ ।
ಕುಲಮುತ್ತುಂಗಕುಚಂಗಳುದ್ಫಲವಮಾಗಂಗನಾಕಾರಕ ॥
ಲ್ಪಲತಾನೀಕಮೆನಲ್ಕೆ ನಿಂದು ಕೆಲದೊಳ್ ಪುಣ್ಯಾಂಬುಧಾರಾಳಿಯಂ ।
ನಲವಿಂ ದೇವಿಯು ಶೀರ್ಷದೊಳ್ ಸುರಿಯುತುಂ ಕಣ್ಗೊಪ್ಪಿದರ್ ಕಾಂತೆಯರ್ ॥

ಪನಿನುಣುಗಲುಗುವ ಖೇಚರ ।
ವನಿತೆಯ ಕಮನೀಯಕೇಶಪಾಶಮದೆನಸುಂ ॥
ನೆನೆಯಿಸಿದುದವ್ಯತನವಬಿಂ ।
ದುನಿಕಾಯಮನುಗುಲ್ವ ಕಾವುಕಾಳೋರಗನಂ ॥ ೧೩

ತನುವಂ ತುಱುಗಿದ ನವಬಿಂ ।
ದುನಿಕಾಯದಿನಾವಿಯಚ್ಛರಾಂಗನೆ ಮುಗುಳ್ವಾ ॥

ತ್ತ ನವೀನಕಲ್ಪಲತೆಯಂ ।
ನೆನೆಯಿಸುತುಂ ಪೊಕ್ಕಳಿಸೆವ ಭೂಷಣಗೃಹವುಂ ॥ ೧೪
ಉಟ್ಟು ದುಕೂಲಚೇಲವನುದಂಚಿತವೌಕ್ತಿಕಭೂಷಣಂಗಳಂ ।
ತೊಟ್ಟು ನವೀನ ಚಂದನಲಲಾಮುಕವುಂ ನೊಸಲೊಳ್ ವಿರಾಜಿಸೆ ॥
ಲ್ಕಿಟ್ಟು ಸಿತಾಬ್ಜವುಂ ಪಿಡಿದು ಮಲ್ಲಿಗೆಯುಂ ಮುಡಿದುದ್ಭಶೋಭೆ ನೇ ।
ರ್ಪಟ್ಟರೆ ದೇವಿ ಭೂಷಣಗೃಹಾಂತರದಿಂ ಪೊಱವಟ್ಟಳಲ್ತಿಯಿಂ ॥ ೧೫
ಮಿಸುಗುವ ದಂತಕಾಂತಿ ಪೊಳೆಪಂ ಬಿಡೆ ಬೀಱುವ ಲೋಚನಾಂಶು ರಂ।
ಜಿಸುವ ಸುಕೋಮಲಾಂಗರುಚಿಯುಟ್ಟ ದುಕೂಲದ ಸನ್ಮರೀಚಿ ರಾ ॥
ಜಿಸೆ ನೆಱಿ ತೊಟ್ಟ ಮೌಕ್ತಿಕವಿಭೂಷಣರೋಚಿಗಳಿಂ ಲತಾಂಗಿ ಕ ।
ಣ್ಗೊಸೆದಳಪೂರ್ವಚಂದ್ರಕಳೆ ತಾಂ ವನಿತಾಕೃತಿಯಾದುದೆಂಬಿನಂ ॥ ೧೬
ಸಿತಕಾಂತಿಕೋಶದಧಿದೇ ।
ವತೆ ತಾನೆನಲರ್ಕಕೀರ್ತಿಖೇಚರನ ಮನ ॥
ಸ್ಪತಿ ವಿವಿಧಮಂಗಳಾಳಿಂ ।
ಕೃತಿತತಿಯಿಂ ಸುಕೃತಮಣಿಶಲಾಕೆವೊಲಿರ್ದಳ್ ॥ ೧೭
ಜನಿಯಿಪನಲ್ತೆ ಭಾವಿ ಜಿನನಪ್ಪ ಕುಮಾರಕನೆಂದು ಸೂಚುವಂ ।
ತನುಪಮರತ್ನನೂಪುರದ ನುಣ್ದನಿ ಪೊಣ್ಮೆ ಕಲಾಪಕೆಂಕಿಣೀ ॥
ಧ್ವನಿ ಪುದಿದುಣ್ಮೆ ಬಂದಳಭಿರಾಜಿಸುತುಂ ವಿಭುವರ್ಕಕೀರ್ತಿಯಂ ।
ಗನೆ ಪರಚಾರಿಕಾಜನಸಮನ್ವಿತವಾಗಿ ಮೆಸೋನುರಾಗದಿಂ ॥ ೧೮
ಮನಸಿಜನ ವಿಜಯಲಕ್ಷ್ಮಿಯೇ ।
ವನಿತೆಯವೊಲ್ ವನಿತೆ ಬಂದು ಪೊಕ್ಕಳ್ ತನಿಗಂ ॥
ಪಿನ ತಾಯ್ವನೆ ತತಿರಾಗದ ।
ಜನನಮಿದೆನೆ ರಯ್ಯಮಪ್ಪ ಶಯ್ಯಾಗೃಹಮುಂ ॥ ೧೯
ರತಿ ರತಿರಮಣನ ಶಚಿ ಸುರ ।
ಪತಿಯ ರಮಾರಮಣಿ ಹರಿಯ ಶಯ್ಯೆಗೆ ಬರ್ದಂ ॥
ತತಿಮುದದಿಂ ಸತಿ ಖೇಚರ ।
ಪತಿಯ ವಿರಾಜಿಸುವ ಶಯ್ಯೆಗಂದೆಟ್ಟಿಂದಳ್ ॥ ೨೦
ಇಂತು ಕಂತುಕ್ರೀಡಾನಂತರಂ ಸುಖಸುಪ್ತರಾಗಿ ಖಚರಪತಿಯುಂ

ಸತಿಯುಂ ದೋಷವರ್ಜಿತರಪ್ಪುದುಱಿಂ ದೋಷಾವಸಾನವುಪ್ಪಿನಮಿರ್ದುಪ್ಪ
ವಡಿಸಿದಾಗಳ್—

ಜಿನವಕ್ತ್ರೇಂದುವನೊಲ್ದು ನೋಡುವ ಜಿನಸ್ತೋತ್ರಂಗಳಂ ಮಾಡುವಾ।
ಜಿನಪೂಜಾಕ್ರಿಯೆಯಂ ನಿಮಿರ್ಚುವ ಜಿನೇಂದ್ರಾವಾಸಮಂ ಭಕ್ತಿಯಿಂ ॥
ದೆನಿತಾನುಂ ಬಲವರ್ಪ ತಜ್ಜಿನಮುನಿವ್ರಾತೋಕ್ತಿಯಂ ಕೇಳ್ವ ಸೈ।
ಪನೆ ತಾಳ್ದಂತೆಸೆದಿರ್ದರಲ್ತೆ ಸತಿಯುಂ ತತ್ಪ್ರೇಚರಾಧೀಶನುಂ ॥ ೧೧

ಮನಮೆಂತುಜ್ಜಿಗಿಸಿರ್ದುದಿರ್ದ ತೆಱದಿಂದಶ್ರಾಂತವೂಳೋಚರೇಂ।
ದ್ರನುಮಾಕಾಂತೆಯುಮೂತ್ಕಭಕ್ತಿಭರದಿಂ ನಿಶ್ಶ್ರೇಯಸಶ್ರೀನಿವಾ।
ಸನನರ್ಹತ್ಪರಮೇಶನಂ ಸಲೆ ಸಮಂತಾರಾಧಿಸುತ್ತಿರ್ಪ ಪಾ।
ವನಕೇಳೀವಯಶೀಳರಾಗಿ ನೆಗಟುತೊಪ್ಪಿರ್ದರೋರಂದದಿಂ ॥ ೧೨

ಸುರಭೂಜದ ವರಬೀಜಂ।
ಧರಣೀರಮೆಯುದರದಲ್ಲಿ ನೆಲಸುವವೋಲ್ ಖೇ ॥
ಚರಸತಿಯ ಜಠರಜಳಜಾಂ।
ತರದೊಳ್ ನೆಲಸಿದುದು ಹರ್ಷಗರ್ಭಂ ಗರ್ಭಂ ॥ ೧೩

ಮಿಸುಪಮೃತಕಿರಣಕಲೆಯಿಂ।
ಪೊಸಕಪ್ಪುರದೊಪ್ಪ ಸಲಗೆಯಿಂ ಮಿನುಕ್ಕೇಳ್ವಂ ॥
ತಸಮುಶರನೊಪ್ಪವಿಟ್ಟವೊ।
ಲೆಸೆದುದು ನೃಪಸತಿಯು ಮೆಯ್ಯ ಪೊಳಪೆಳವಸಿಱಿಂಳ್ ॥ ೧೪

ತಲೆದೋಱಿತ್ತಳಗರ್ಪು ಚೂಚುಕದೊಳಂತಾಬಾಸೆಯೊಳ್ ಮಧ್ಯದಿಂ।
ತೊಲಗಿತ್ತಾ ನವಳರೇಖೆಯುಂ ತನುತೆಯುಂ ನೇತ್ರಂಗಳೊಳ್ ವಕ್ತ್ರಮಂ ॥
ಡಲದೊಳ್ ಸಂಗಳಿಸಿತ್ತು ನೀಳ್ದ ಪೊಳಪುಂ ಬೆಳ್ಪುಂ ಸಮಂತಾಗಲ।
ಸ್ಖಲಿತಂ ದೇವಿಯ ಗರ್ಭದೊಳ್ ನೆಲಸಿ ಚೆಲ್ವಂ ಬೀಱುವಾಗರ್ಭದಿಂ॥ ೧೫

ಜನಿಸಿದ ಗರ್ಭವಿಭ್ರಮದೊಳಾಖಚರಾಂಗನೆಯಂಗದೊಳ್ ಪೊದ।
ಟ್ಟಿನುಪಮಮಪ್ಪ ಚೆಲ್ವು ಸತಿ ಕೌತುಕವಾಗಲದರ್ಕೆ ಲೋಕಲೋ ॥
ಚನಪರಿಪಾತದೋಷಹರಕಾರಣದಿಂದವಳಟ್ಟ ರಕ್ಕೆವೊ।
ಟ್ಟಿನೆ ನಸುಗಪ್ಪು ಕಣ್ಗೊಳಿಸಿದತ್ತು ಕುಚಂಗಳ ಚೂಚುಕಂಗಳೊಳ್ ॥ ೧೬

ಮರುದಾಹತಿಯಿಲ್ಲದ ಸರ।

ಸಿರುಹಾಕರಸಲಿಲದಂತೆ ವಳರೆಂಖಾವಿ ॥
ಸ್ತರವಟ್ಟಿದು ಖಚರಕಾಂತೆಯು ।
ಸುರುಚಿರತನುಮುಧ್ಯಮೆಸೆದುದಿಂತೆಳವಸಿಱಿಂಳ್ ॥ ೦೩
ವಿಳಸಜ್ಜ್ಯೋತಿರ್ಮಾಳೆಯು ।
ಪೊಳೆವುದರದೊಳೊದವಿದವುಳಗರ್ಭದ ಭರದಿಂ ॥
ದಟ್ಟಿಗವಿಯು ಕವಿತೆವೊಲ್ ಸಂ ।
ಗಳಿಸಿ ಕಗಂ ಮೂಂಜ್ಯವಾಯ್ತು ಪದವಿನ್ಯಾಸಂ ॥ ೦೪
ಉದರದ ತನುಮನ ಸಿರಿ ಮು ।
ಧ್ಯದ ಕಡುಬಡತನವುಸಿರದೆ ನೂಂಕಿದುದೆನೆ ತ ॥
ತ್ಪ್ರದತಿಯು ಗರ್ಭದ ಕೊರ್ಬೆಸೆ ।
ದುದು ಸುಜನರ ಸಂಗದೆಸಕಮುಂ ನೆನೆಯಿಸುತುಂ ॥ ೦೫
ಉದಯಿಪ ನಂದನಂ ರಮೆಯು ನಂದನನಿಂ ವಿುಗೆ ಚೆಲ್ವನೆಂದು ತ ।
ತ್ಪ್ರದತಿಯು ರೂಪು ಸೂಜೆಸುತುವಿರ್ದುದು ಮೇರುಮಹತ್ವವೆಂಬುದಂ ॥
ವೃದುಸದವಾಂದ್ಯಯಾನವುದು ಪೇಟುತುವಿರ್ದುದು ನೂಪುರಪ್ರಣಾ ।
ದದ ನೆವದಿಂ ತದೀಯವರಗರ್ಭದ ವಿಭ್ರವುದೊಂದಗುರ್ವಿನೊಳ್ ॥ ೦೬
ಸಂಗಳಿಸಿದ ಜಡಗತಿಯಿಂ ।
ಪಿಂಗದೆ ಕರ್ಪೊದವಿದುರುಪಯೋಧರವುಖದಿಂ ॥
ದಂಗನೆ ವುಟ್ಟಿಗಾಲದ ಚೆ ।
ಲ್ವಿಂಗೆಣೆಯಾದಳ್ ತದೀಯಗರ್ಭದ ಕೊರ್ಬಿಂ ॥ ೦೭
ಗುರುವುಧ್ಯೆಯಾದಳಾಜೇ ।
ಚರಸತಿ ಬುಧಶುಕ್ರರಂತೆ ಛಂದೋಷ್ಟಗಣಂ ॥
ತರದೊಳೆಸೆವರ್ಕಗಣದಂ ।
ತುರುತರವೆನೆ ಸೊಗಯಿಸಿರ್ಪ ಗರ್ಭದ ಕೊರ್ಬಿಂ ॥ ೦೮
ಲಲಿತೋದ್ಯಾನದೊಳಂ ವಿಹಾರಿಸುವ ವಾರಿಕ್ರೀಡೆಯುಂ ಮೂಡುವು !
ಜ್ವಲಚಂದ್ರಾತಪಶೋಭೆಯೊಳ್ಸುಲಿವ ದಿವ್ಯಾವೋದವುಂ ಕೊಳ್ವಕೋ॥
ವುಲವೀಣಾರುತಿಗೇಳ್ವ ಪೂವಸೆಗಳೊಳ್ ಪಟ್ಟರ್ಪ ಸೌಖ್ಯಾಳಿದೋ ।
ಹಳಕೇಳೀವುದವುಂ ಸವುಂತು ತಳೆದಳ್ ತತ್ಕಾಂತೆಯಿಂತಾವಗಂ ॥ ೦೯

ಉದರದೊಳಿಂಬುವೆತ್ತು ಬಳೆಯುತ್ತಿರೆದಿರ್ದಪನಲ್ತೆ ಸೂನುವೆಂ ।
ಬುದಿತಮಹಾನುರಾಗದೆನಸುಂ ನೆಲೆಗೊಂಡ ಮನಂ ಬಹಿರ್ವಿನೋ ॥
ದದ ಪದೆಪಿಂಗೆ ತಾನವಚರಂ ನೆಱಿ ತಾಳ್ದಿದುದೆಂದೆನಲ್ಕೆ ಜೈ ।
ತ್ತದೊಳೆ ಸಮುದ್ಭವಂಬಡೆದುದಾಸತಿಗುದ್ಭವಿಸಿರ್ದ ಗರ್ಭದೊಳ್ ॥

ದೇವಿಯ ಮನದಲಸವನಱಿ ।
ದಾವಗಮೆಡೆವಿಡದೆ ಬಹುಕಲಾವಿದೆಯರ್ ನಾ ॥
ನಾವಿಧವಿನೋದತತಿ ಸೌ ।
ಖ್ಯಾವಹವನಾಗಲ್ಕೆ ಲೀಲೆಯಿಂದೋಲಗಿಪರ್ ॥

ಮನಕೆ ಲವಾಲಕಂ ಜನಿಸದಂತೆ ವಿಚಿತ್ರವಿನೋದಕೋಟಿಯುಂ ।
ವಿನಯುದಿನೊರ್ಮೆಯುಂ ನೆಗಱುತುಂ ವರಗರ್ಭದ ರಕ್ಷಣಾರ್ಥಮು ॥
ಪ್ಪನಿತು ವಿಧಾನಮಂ ವಿರಚಿಸುತ್ತಮೆ ದೇವಿಯನಿಂತು ಸಂತತಂ ।
ತನತನಗಾವಿಳಾಸಿನಿಯರೋಲಗಿಸುತ್ತಿರೆ ಸುತ್ತಿ ಲೀಲೆಯಿಂ ॥

ಪರಿಪೂರ್ಣಮನೋರಥಹೈ ।
ತ್ಸರಸೀರುಹರಾಗುತಿರೆ ವಿಯಚ್ಚರನಾಗಳ್ ॥
ಪರಿಪೂರ್ಣಸುಧಾಂಶುವ...
..... ॥

ಸದಮಳಬೋಧನುದ್ಭವಿಪ ನಂದನನೆಂದು ಸಮಂತು ಸೂಚಿಪಂ ।
ದದೆ ಸರಸೀಸವಾಜಸಲಿಲಂ ಸಲೆ ನಿರ್ಮಳವಾಯ್ತು ಸುಪ್ರಸ ॥
ನ್ನದ ನಿಧಿ ವಕ್ತ್ರಮೆಂದಱಿಪುವಂತೆ ದಿಶಾಸ್ಯಕುಳಂ ಪಱಿಚ್ಚ ನಾ ।
ಯ್ತುದಿತಸುತೇಜನೆಂದು ನೆಱಿ ತೋರ್ಪವೊಲುಜ್ಜ್ವಳವಾಯ್ತು ನೋದಯ

ಜನಿಸುವ ಬಚರೇಂದ್ರನ ತನ ।
ಯನ ತೇಜಮಿದೆನಗೆ ಮಿಗಿಲೆನುತ್ತುಂ ಬಗೆಗೊಂ ॥
ಡನಿಶಮುಭಿನಯಿಸುವಂದದಿ ।
ನನಲಂ ಜಲಜಲಿಸಿ ನೆಗಪ್ಪುದೆಲ್ಲೆಡೆಗಳೊಳಂ ॥

ಎನೆಸುಂ ಬಹುಳಂ ನೃಪತನು ।
ಜನ ಮನಮೆನ್ನಂತಿರೆಂಬ ಹರ್ಷೋತ್ಕರ್ಷಂ ॥

ತನಗವುಳಭೂರವೊದಂ ।
ತನಿಳಂ ತೀಡಿದುದು ನಾಡೆ ಮುಂದತೆಯಿಂದಂ ॥ ೪೦

ಘನಸತ್ಯಚಿತ್ತನುದಯಿಪ ।
ತನಯಂ ತಾನೆನ್ನದಿರ್ಪನೆಂದು ನಿತಾಂತಂ ॥
. . . . ಮನಡಗಿದುದು ರಜ ।
ಮಿನಲಪಗತರೇಣುಜಾಳವಾಯ್ತವನಿತಳಂ ॥ ೪೧

ಪವನಪಥಂ ಪ್ರಸನ್ನತರವಾಯ್ತು ಗಜೋತ್ಕರಮುತ್ಕರಾಗ್ರವಾ ।
ಯ್ತು ವಿರಳಹರ್ಷದಿಂ ಹರಿಗಣಂ ಗುಡಿಗಟ್ಟಿದುದುತ್ಸವಂಗಳೊ ।
ಪ್ಪುವ ಮಣಿದೀಪಿಕಾಳಿ ಕುಡಿಯಿಟ್ಟುದನಾಹತದಿಂ ಸಮಂತು ಸಂ ।
ಭವಿಸಿದುದೆಯ್ದಿ ದೇವಭವನಂಗಳ ಮಂಗಳವಾದ್ಯನಿಸ್ವನಂ ॥ ೪೨

ಎನಿತಾನುಂ ಶುಭಜೆಹ್ನಕೋಟಿ ಬಹುಳಂಬೆತ್ತೆಯ್ದಿ ಪುಟ್ಟುತ್ತುಮಿ ।
ರ್ದಿನಮೆಲ್ಲಾಗ್ರಹಮೇಕಸುಸ್ಥಿತಿಯೊಳೋರಂತಿರ್ಪ ತತ್ಕಾಲಸಂ ॥
ಜನಿತೋತ್ಕೃಷ್ಟಮುಹೂರ್ತದೊಳ್ ಬೆಸಲೆಯಾದಳ್ ದೇವಿ ಸತ್ಪುತ್ರನಂ ।
ಘನತೇಜೋಮಯಗಾತ್ರನಂ ನಿರುಪಮೋದ್ಯಲ್ಲಕ್ಷಣಾಮಿತ್ರನಂ ॥ ೪೩

ಆಗಳ್ ಪರಿಚಾರಿಕೆಯೊರ್ವಳ್ ಖಚರೇಂದ್ರನಲ್ಲಿಗೆ ಪರವಾನುರಾ
ಗದಿಂ ಪೋಗಿ ಪೊಡೆವುಟ್ಟು
ಎಲೆ ವಿದ್ಯಾಧರನಾಥ ದೇವಿ ಪಡೆದಳ್ ಭೂಭಾನುವಂ ಸೂನುವಂ ।
ಲಲಿತಾಗಣ್ಯವರೇಣ್ಯಲಕ್ಷಣಮಣಿವ್ರಾತೋಕಸಂ ತೋಕನಂ ॥
ಜಲಧಿವ್ಯಾಪೃತಕಾಶ್ಯಪೀಜನವನೋಬ್ಜಾನಂದನಂ ಕಂದನಂ ।
ವಿಲಸನ್ಮೋಹನರೂಪವೈಭವಯಶಶ್ರೀಪುತ್ರನಂ ಪುತ್ರನಂ ॥ ೪೪

ಎನೆ, ಕೇಳ್ದಾಗಳ್—

ತನಯಂ ಪುಟ್ಟಿದನೆಂಬ ಸದ್ವಚನಪೀಯೂಷಪ್ಲವಂ ಖೇಚರೇಂ ।
ದ್ರನ ಕರ್ಣದ್ವಯನಾಳವುಂ ಪುಗಲೊಡಂ ಚಿತ್ತೊತ್ತವು ಕ್ಷ್ಮೋಣಿಯೊಳ್॥
ಕೊನರೆಟ್ಟುದ್ಬಿ ಪೊದಟ್ಟಿ ಹರ್ಷಲತಿಕೋದ್ಯತ್ಕೋರಕಾನೀಕಮೆಂ ।
ದೆನೆ ತಟ್ಟಿತ್ತೆಯ್ದಿ ವಿರಾಜಿಸುತ್ತೆ ನೆಗೆದಾರೋಮೋದ್ಗಮಂ ಗಾತ್ರದೊಳ್ ॥

ಇಂದು ಸನಾಥನಾಯ್ತು ಸಕಳೋರ್ವರೆಯಿಂದು ಮದೀಯರಾಜ್ಯಸೌ ।
ಖ್ಯಂ ದೊರೆವೆತ್ತುದಿಂದಖಿಳವೈಭವನವಲ್ಲಿ ಪದಾಭಿಶೋಭೆಯಿಂ ॥

ದೊಂದಿದುದಿಂತು ಸಂಭವಿಸೆ ನಂದನನೆಂದೆನುತುಂ ಸಮುದ್ಭವಾ ।
ನಂದದಿನಾವಿಯಚ್ಚರವರಂ ತಳರ್ದಂ* ಸುತವೀಕ್ಷಣೋತ್ಸುಕಂ ॥ ೪೬

ಆಪರಿಚಾರಿಕಾಪ್ರಕೋಷ್ಠಪುಟಹಸ್ತಾರವಿಂದಂ ವಿಯಚ್ಚರೇಂದ್ರಂ
ಪರಿಮಿತಪರಿಜನಂಬೆರಸು ಬರ್ಪಾಗಳ್—

ನಲವಿಂ ನರ್ತಿಪ ವೃದ್ಧಕಾಂತೆಯರುಮಂ ಬದ್ಧೋರ್ವಿಯೊಳ್ಕೂಡೆ ಪೂ।
ವಲಿಯಂ ಬಿತ್ತರಿಪಂಗನಾವಳಿಯುಮಂ ತನ್ಮಂಗಳದ್ರವ್ಯಸಂ ॥
ಕುಲದತ್ತಾತುರಯಾನಭೂಮಿಯರುಮಂ ನೋಡುತ್ತಮಾನಂದಕಂ ।
ದಳಜೆತ್ತಂ ಖಚರೇಂದ್ರನಿಂತು ಪುಗುತಂದಂ ಸೂತಿಕಾಸದ್ಮವುಂ ॥ ೪೭

ಮೊಳಗುವ ಮಂಗಳಾನಕನಿನಾದದಿನಾಸವುಯೋಜಿತಕ್ರಿಯಾ ।
ಕಳಿತಕುಲಾಂಗನಾಜನಕಲಧ್ವನಿಯಿಂ ವಿಲಸನ್ಮಹೂರ್ತಿಕಾ ॥
ವಳಿ ಶುಭವಾಕ್ಯಮೋದುವ ಮೃದುಸ್ವರದಿಂ ವರವಿಪ್ರಸಂಕುಳಂ ।
ನಲವಲಿಸುತ್ತುಮಿರ್ಪ ರವದಿಂದೆಸೆದಿರ್ದುದು ಸೂತಿಕಾಗೃಹಂ ॥ ೪೮

ಪರಿಯುಕ್ತವಜ್ರಿಯಿಂ ಸುರ ।
ಪ್ಪರದಂತೆ ವಿಭೂತಿಶೋಭೆಯಿಂದಮರಾಧೀ ॥
ಶ್ವರನಂತೆ ಕಣ್ಗೆವಂದ ।
ಚ್ಚರಿವೆತ್ತುದು ಸೂತಿಕಾನಿವಾಸದ್ವಾರಂ ॥ ೪೯

ಜನಿಸಿದ ಕುವರನ ವರಜಯ ।
ವನಿತೆಯು ಕಣ್ಣಿಳಗಿದೆನಿಸಿ ತತ್ಪ್ರಸವನಿಕೇ ॥
ತನಮಂ ಬಳಸಿದುವಾಕಾ ।
ಪಿನ ಸುಭಟೋತ್ಖತಖಡ್ಗಧಾರಾದ್ಯುತಿಗಳ್ ॥ ೫೦

ಉದಯಿಸಿದೀಕುಮಾರನಖಿಲೋರ್ವರೆಗೊರ್ವನೆ ವಲ್ಲಭಂ ಪ್ರತಾ ।
ಪದೆ ಪೆಱನಿಲ್ಲೆನುತ್ತ ನೆಱಿ ಪೂಣ್ದ ವಿರಾಜಿಸ ರಾಜ್ಯಲಕ್ಷ್ಮಿ ರಾ ॥
ಗದೆ ಬೆರಲೆತ್ತಿದಂತೆ ನಿಮಿರ್ದು*ನ್ನತಿವೆತ್ತ ಸವೀನಜೇನಜೇ ।
ಲದ ಗುಡಿ ಕಣ್ಗೆವಂದುದು ತದೀಯಗೃಹೋತ್ತರಭೂಮಿಕಾಗ್ರದೊಳ್ ॥

ನಿಱಿಯ ಸೆಱಂಗನೆತ್ತಿ ನಿಜದೀವಿಯೊಳೊಲ್ದು ತೊಡರ್ಚಿ ಕೆನ್ನೆಯೊಳ್।
ಮಿಱುಪಳಕಾಳೆಯಿಂ ಸಲೆ ಕೊಡಂಕೆಗೆ ಸಾರ್ಚಿಯುಮೇಱಿ ನೂಂಕಿಯುಂ ॥
ನೆಱಿ ಮಣಿಕಂಕಣದ್ವಿತಯಮುಂ ಕರಪಲ್ಲವದಿಂದೆ ಮಾಡಿದರ್ ।

ಮೆಱೆವಿನವೊಲ್ದು ಬಾಲವತಿಗಂದಱಿಕ್ಷ್ವಾಕವನಂಗನಾಜನಂ ॥ ೫೦

ನುತವುಂತೊಲ್ದಪಜೆತಾಖಿಳೋರ್ವಧಿವಿಳದ್ಧಾನ್ಯಮ್ಲ ಸಂಸೇಚನೋ ।
ತ್ಕೃತಕಾಂತಾಕರಕಂಕಣೋದ್ಭವಝಣತ್ಕಾರಂಗಳಿಂ ಕಾಮಿನೀ ॥
ತತಿ ಸಂರಂಭದೆ ಸುತ್ತಿ ಸೂಸುವ ಲಸತ್ಕರ್ಪೂರಪಿಷ್ಟಾತಕಾ ।
ವೃತದಿಂ ಕಣ್ಗೊಳಿಸುತ್ತುಮಿರ್ದುದು ಕರಂ ತತ್ಪ್ರೀತಿಕಾಮಂದಿರಂ ॥ ೫೧

ಆಸೂತಿಕಾಗಾರದ್ವಾರಕ್ಕೆ ಬಂದು ನಿವಾರಿತಪರಿವಾರನಾಗಿ ವಿಯಚ್ಚರ
ವರಂ ಸಚಿವಸಮನ್ವಿತಂ ಪುಗುತಪರ್ದಾಗಳ್—

ಪರಿಚಾರಕಿ ತಂದೊಲವಿಂ ।
ಸುರುಜೆರಪಿಚುಮುಂದಪಲ್ಲವೋಪಜೆತಂ ಬಿ ॥
ತ್ತರಿಪಂಗನೆಯರ್ ಜಲದಿಂ ।
ದರಸನ ಚರಣಾರವಿಂದಮುಂ ಕ್ಷಾಲಿಸಿದರ್ ॥ ೫೪

ಹರಿಶಿಶುರಾವಪೂರಿತಹಿಮಾದ್ರಿಗುಹಾಂತರಮುಂ ಸಮುಂತು ಕೇ ।
ಸರಿ ಪುಗುತರ್ಪವೋಲೊಗೆವ ಬಾಲಕರೋದನನಾದವಾದವೂ ॥
ವರಿಸಿ ವಿರಾಜಿಸರ್ಪ ಶಶಿಕಾಂತದ ನೂತನಸೂತಿಕಾಗೃಹೋ ।
ದರಮನೆ ಪೊಕ್ಕನಾಗಳರಸಂ ಸಚಿವಂಬೆರಸುಂ ಪ್ರದೀಪ್ತಿಯಿಂ ॥ ೫೫

ಅನುರಾಗೋನ್ನತಿಸಸ್ಯದಂತೆ ವಿಲಸತ್ಸಾವ್ಯಾಜ್ಯಸಂರಂಭನೂ ।
ತನತೇಜೋಂಕುರದಂತೆ ದೇವಿಯ ವಿಭಾಸ್ವತ್ಪಾರ್ಶ್ವದಲ್ಲಿರ್ದ ಕೋ ॥
ಣನವಾಂಶುಸ್ಥಗಿತಾಂಗಬಾಲಕನನಾಹರ್ಪಾಶ್ರಸಮ್ಮಿಶ್ರಲೋ ।
ಚನದಿಂ ಭೋಂಕೆನೆ ಕಂಡನಾಗಳಿದಿರೊಳ್ ವಿದ್ಯಾಧರಾಧೀಶ್ವರಂ ॥ ೫೬

ಮಿಸುಗುವ ಬೆಳ್ಳಗಿಲೊಳಗುದ ।
ಯಿಸಿದಿನಬಿಂಬದವೊಲೆಸೆವ ದುಗುಲದ ಸೆಱಗಿಂ ॥
ಮುಸುಕಿದ ಶೋಣಚ್ಛವಿ ರಂ ।
ಜಿಸುವಂಗದ ಬಾಲನಂ ನೃಪಾಲಂ ಕಂಡಂ ॥ ೫೭

ಮನಮಾನಂದಪಯಃಪಯೋಧಿಯೊಳೆ ತೇಂಕಾಡುತ್ತಿರಲ್ ನಾಡಿಯುಂ।
ತನು ಚಂಚತ್ಪುಲಕಾಳಿಭಾರದೊಳೆ ತೂಗಾಡುತ್ತಿರಲ್ ಚಾರುಲೋ ॥
ಚನಮತ್ಯುತ್ಸವಬಾಷ್ಪದೊಳ್ ನೆಱೆ ಕಳಿರ್ಕ್ಕೋಡುತ್ತಿರಲ್ ನೋಡುತಿ ।
ರ್ದನಿಳಾವಲ್ಲಭನಿಂತು ಪಾಟಳಿತಕೋಭಾಗಾತ್ರನಂ ಪುತ್ರನಂ ॥ ೫೮

ಜನಿತಾಪೂರ್ವಸುಧಾಂಶುವಿಂದಭಿಷವಂಗೆಯ್ವಂತೆಯುಂ ನವ್ಯಚಂ ।
ದನದಿಂ ಚರ್ಚಿಸುವಂತೆಯುಂ ದುಗುಲದಂಚಕ್ಕೀಲದಿಂದಾದವಿಂ ॥
ಬಿನೊಳಾಚ್ಛಾದಿಸುವಂತೆಯುಂ ನಯನಕಾಂತಿಶ್ರೀಣಿ ತಟ್ಟಿಪ್ಪಿಯ್ಯುತಿ ।
ರ್ಪಿನವಾದೇವಿಯುಮುಂ ತನೂಭವನುಮುಂ ನೋಡುತ್ತುರ್ದಂ ನೃಪಂ ॥

ವರಲಕ್ಷ್ಮಚ್ಛಲದಿನಲಂ ।
ಕರಿಸಿದ ಕಜ್ಜಲದ ತಿಲಕವುಂತದು ಕುಱುಪಾ ॥
ಗಿರೆ ಕಳೆಯಿಂ ನೆಱೆದುದಯಿಸಿ ।
ದುರುತರಮೆನಿಪಾಸುಧಾಂಶುವಂ ನೆಱೆ ಪೋಲ್ತಂ ॥ ೬೦

ಚಕ್ರಧರನೀತನುರ್ವೀ ।
ಚಕ್ರಾಧಿಪನೀತನೆಂದು ಸೂಚಿಪ ತೆಱದಿಂ ॥
ಚಕ್ರಾದಿಚಿಹ್ನವೊಗೆದು ಕ ।
ರಕ್ರಮಕಮುಲಂಗಳಿಸೆದುವಾಬಾಲಕನಾ ॥ ೬೧

ಅತನುವೆ ನೋಡಲ್ ತನ್ನೊಂ ।
ದತನುತೆಯುಂ ಬಿಟ್ಟು ಪುಟ್ಟಿದಂ ಕಮನೀಯಾ ॥
ಕೃತಿಯಿನೆನೆ ಬಾಳಕನ ಸ ।
ನ್ನುತಿವೆತ್ತ ಸುರೂಪವಿಭವವೇನತಿಶಯುವೋ ॥ ೬೨

ಇಂತು ಸುತನಂ ನೋಡುತ್ತೆ ಹರ್ಷಾಯತ್ತಚಿತ್ತನಾಗಿ ಪೇಚರೇಂ
ದ್ರಂ ಪುರವುಂ ಕೈಗೆಯ್ಸಿಯಾನಂದಭೇರಿಯುಂ ಪೊಯ್ಸಿದಾಗಳ್—

ಇಂದು ನೃಪಂಗೆ ಸಂಭವಿಸಿದಂ ಜಿತರೂಪನುಕುಂದನಂದನಂ ।
ನಂದನನೆಂದು ಪೇೞ್ದು ದಿಗಧೀಶ್ವರರಂ ಪರವಾಸುರಾಗದಿಂ ॥
ದೊಂದಿಸಲೆಯ್ದಿದತ್ತೆನೆ ದಿಶಾವಳಯಂ ಪರಿದೆಯ್ದಿ ತಟ್ಟುದಾ ।
ನಂದದೆ ಪೊಯ್ಸಿ ಪುಟ್ಟಿದುರುಭೇರಿಯ ಭೂರಿಗಭೀರನಿಸ್ವನಂ ॥ ೬೩

ಸುತನನಪೂರ್ವವಾರ್ಧಿಸುತನಂ ವಿಳಸತ್ಪಚರೇಂದ್ರನೀಮಹಾ ।
ಸತಿ ಪಡೆದಳ್ ಸಮಂತಿರದೆ ಬಪ್ಪುದು ಬಾಯಿನಕೆಂದು ದಿಗ್ವಧೂ ॥
ತತಿಯನೆ ಪೌರಲಕ್ಷ್ಮಿ ಕರಪಲ್ಲವದಿಂ ಕರೆವಂದವಾಯ್ತು ವಾ ।
ರುತಚಲನಧ್ವಜಾಗ್ರವಸನಾಂಚಳಸಂಚಳಚಾರುನರ್ತನಂ ॥ ೬೪

ಮುನ್ನಮೆ ಸತ್ಕುವಾರಜನನೋತ್ಸವಮಂ ನೆಱೆ ಪಾರ್ದಿರುತ್ತುಮಿ ।
ರ್ಪನ್ನಿಗವಾಗಳಾಸುತಸಮುದ್ಭವಸೂಚನೆ ದುಂದುಭಿಪ್ರಣಾ ॥
ದನ್ನಿಮಿರಲ್ಕೆ ಕೇಳ್ದು ಜಲದಧ್ವನಿಗೇಳ್ದ ಮಯೂರದಂತೆ ಲೀ ।
ಲೋನ್ನತಿವೆತ್ತು ಬಂದುದಖಿಳಶ್ರುತಿಭೂಸುರಭೂಸುರವ್ರಜಂ ॥ ೬೫

ವರವಿಪ್ರಾದ್ಯಖಿಲಾರ್ಥಿಗಳ್ಗೆ ಮನದಾರ್ತಂ ತಗ್ಗುವನ್ನಂ ವಿಭಾ ।
ಸುರಹೇಮೋತ್ಕರಮಂ ಸುಧೇಸುಕುಲಮಂ ವಸ್ತ್ರಾಳಿಯುಂ ಮಂಗಳಾ ॥
ಭರಣಶ್ರೇಣಿಯನುದ್ಯರತ್ನಚಯಮುಂ ಮಾತಂಗಸಂಘಾತನುಂ ।
ತುರಗವ್ರಾತವನಿತ್ತನರ್ಥಿ ನಿಮಿರಲ್ ವಿದ್ಯಾಧರಾಧೀಶ್ವರಂ ॥ ೬೬

ದಾನವ ವರಪತಿ ಮುಖ್ಯನು ।
ಹಾನಿಧಿಗಳ ತಣಿವನೆನೆ ಯಥಾಯಾಚಕಸಂ ॥
ತಾನದ ಮನಮುನಿತುಂ ಪಿರಿ ।
ದಾನುಂ ತಣಿನಂತೆ ಖಚರಪತಿ ಪದೆದಿತ್ತಂ ॥ ೬೭

ಪುರಜನಕಂ ಪರಿಜನಕಂ ।
ಪರಮಾಪ್ತಜನಕ್ಕಮಾತ್ಮಬಂಧುಜನಕ್ಕಂ ॥
ಪಿರಿದೊಲವಿಂ ಖಚರಾಗ್ರಣಿ ।
ಪರಿತೃಪ್ತಿಯನೆಯ್ದಲೀಪ್ಸಿತಾರ್ಥಮನಿತ್ತಂ ॥ ೬೮

ವ॥ ಇಂತು ಜಾತಕರ್ಮೋತ್ಸವಾನಂತರಂ ದ್ವಾದಶದಿನದೊಳ್—

ತನಯಂ ತಾನಗಣಿತತೇ ।
ಜನಪ್ಪನೆಂದರ್ಕಕೀರ್ತಿಯಱಿದೀತಂ ನೆ ॥
ಟ್ಟನೆ ಸಾರ್ಥಕಮಪ್ಪವೊಲಾ ।
ತನೂಭವಂಗಮಿತತೇಜನೆಂಬಾಪೆಸರಂ ॥ ೬೯

ಜನನಿಯ ಜನಕನ ಕಮನೀ ।
ಯನಿಜಾಂತರ್ಜನಿತಹರ್ಷಲತಿಕೆಗಳೊಡನಂ ॥
ದೆನಿತಾನುಂ ಬಳೆಯುತ್ತಿ ।
ರ್ದನುದಂಚಿತರೂಪವಿಭವಪಾತ್ರಂ ಪುತ್ರಂ ॥ ೭೦

ಸಿತಪಕ್ಷದ ಪ್ರತಿಪತ್ಸಂ ।
ಗತಿವೆತ್ತ ಶಶಾಂಕನಂತೆ ಕುವಲಯಲೀಲೋ ॥

ನ್ನತಿಯಂ ಬಳೆಯಿಸುತುಮಿಳಾ ।
ಪತಿಸುತನುರುಕಾಂತಿವೆರಸು ಬಳೆಯುತುಮಿರ್ದಂ ॥ ೭೧

ಅತಿಮೃದು ಸುಸ್ನಿಗ್ಧಂ ಸೂ ।
ಕ್ಷ್ಮತರಂ ನೃಪಸುತನ ಮನಮದೆಂದಱಿಪುವವೋಲ್ ॥
ಅತಿಮೃದು ಸುಸ್ನಿಗ್ಧಂ ಸೂ ।
ಕ್ಷ್ಮತರಂಬಡೆದೆಸೆದುದಾಶಿರೋಜಸವಾಜಂ ॥ ೭೦

ಪುದಿದಿರ್ಪ ಸಕಲಸಾವಾ ।
ಜ್ಯದ ಪಟ್ಟಸಿತಿಗೆ ಪದೆಪಿನಿಂ ಮುನ್ನವೆ ತಾ ॥
ನದು ತೆಱಪುಗೊಟ್ಟುದೆನಲೆಸೆ ।
ದುದು ಬಾಲನ ಫಾಲವಾವಿಶಾಲತೆಯಿಂದಂ ॥ ೭೧

ಮಿಸುಕದೆ ನಿಮ್ಮ ನಿಮ್ಮ ನಿಜರಾಜಿತರಾಜ್ಯವಿನೋದದಲ್ಲಿ ಸಂ ।
ತಸದೊಳಮಿರ್ಪುದೆಂದೊಸಗೆ ಮುನ್ನವೆ ತಾಂ ನಯನಾವಲೋಕನ ॥
ಪ್ರಸರದೊಳನ್ಯಭೂಪತತಿಗಿಂತು ನಿರೂಪಿಸುತಿರ್ಪವೋಲ್ ಸಮಂ ।
ತೆಸೆದುದು ಬಾಲಕಂ ಬಳಸಿ ನೋಡುವ ನೋಟದ ನೇತ್ರವಿಭ್ರಮಂ ॥ ೭೪

ಅಗಲದೆ ನೋಡಿ ನೋಡಿ ನಲವೇಱುವ ದೇವಿಯ ಖೇಚರೇಂದ್ರನಾ ।
ಸೊಗಯಿಪ ದೃಕ್ಕಕೋರಚಯಸೇವೆಗೆ ಮೆಚ್ಚಿ ಮುಖೇಂದುಮಂಡಳಂ ॥
ಮಿಗೆ ಮೊಗದಿಂದೆ ಜೊನ್ನದ ಪಸಾಯನಮಿತ್ತಪುದೆಂಬವೊಲ್ ಮುಗು ।
ಳ್ನಗೆ ಪದೆಪಿಂ ಪೊದಳ್ದುದು ಕುಮಾರನ ಕೋಮಳವಕ್ತ್ರಬಿಂಬದೊಳ್ ॥

ವಿತರಣವಿಜಯಯಶಶ್ರೀ ।
ತ್ರಿತಯಾಧಿಪನೆಂದು ಕನುಲಜಂ ಮುಂ ಬರೆದಂ ॥
ತತಿಶಯರೇಖಾತ್ರಿತಯಾಂ ।
ಜಿತಕಂಬುಗ್ರೀವಮೆಸೆದುದಾಬಾಲಕನಾ ॥ ೭೬

ಭೂಪತಿಯಂ ವರವಿಜಯ ।
ಶ್ರೀಸತಿಯಂ ತಳೆವ ತವಕದಿಂ ಪೆರ್ಚುವವೋಲ್ ॥
ಭಾಸುರವಾಗಿರ್ದುವುವೆಸೆ ।
ದಾಸೊಗಯಿಪ ಬಾಲಕನ ಭುಜಾಂಸದ್ವಿತಯಂ ॥ ೭೭

ಕವುನೀಯನಿಜಾಂಗವುರು ।
ದ್ಗವುದೆರಡುಂ ಕೆಲದೊಳಿಸೆವ ಬೀಟಿಲ್ಗಳಿನಲ್ ॥
ನಿಮಿರ್ದಿಸೆದುವು ಜಾನುದ್ವಿತ ।
ಯುವುನೆನಿಸುಂ ಮಿಕ್ಕು ಬಾಳಕನ ನಿಡುದೋಳ್ಗಳ್ ॥ ೩೪

ಅವಧೃತಿಯಿಲ್ಲದೊರ್ಮೆಯುವುರಾತಿಭಯಕ್ಕೆ ಬಿಗುರ್ದು ಡಕ್ಕೆವಾ ।
ರುವ ನೃಪಯೂಥವಕ್ಷದೊಳರಲ್ಕಣವೊಲ್ಲದೆ ತತ್ಕುವೂರನು ॥
ದ್ಭವನುನೆ ಪಾರುತಿರ್ದತುಳಲಕ್ಷ್ಮಿಗಿರಲ್ ವಿಪುಲಾಸ್ಪದಂಗಳಾ ।
ದವೊಲಭಿರಾಜಿಸಿರ್ದುದು ಸವುಂತು ವಿಶಾಲತೆವೆತ್ತು ರಸ್ಥಳಂ ॥ ೩೫

ಈನುಧ್ಯಮಿದನುಪವುಶೋ ।
ಭಾವುಧ್ಯಮಿದೆನುತ ವುಂದಿಳಂ ಬೆರಲಿಂದಂ ॥
ತಾವುರಸೋದ್ಭವವೆನಲಭಿ ।
ರಾವುಂಬೆತ್ತುದು ಕುವೂರಕನ ನಾಭಿವುಖಂ ॥ ೩೬

ಷಂದೋಲಂಕಾರಗಳೊಂ ।
ದಂದದಿನೆಸಸುಂ ಸುವೃತ್ತಶೋಭಾಯುತದಿಂ ॥
ಸೌಂದರ್ಯ(ವೃತ್ತ)ಸೆಯುತ ।
ದಿಂದೆಸೆದತ್ತಾ ಕುವೂರನೂರುದ್ವಿತಯಂ ॥ ೩೭

ವಿನುತರ್ಗನುರಾಗವುನೊ ।
ಲ್ದಿನಿತುವುನಿತ್ತೆಸೆವ ಜಸವುನಾಂತಪೆವೆಂಬಾ ॥
ಅನುರಾಗದಿನಿರ್ದುವು ತಾ ।
ವೆನೆ ವಿುಗೆ ವಿಸುಗಿದುವು ಬಾಲಕನ ಕೇಸಡಿಗಳ್ ॥ ೩೮

ತಳತಳಿಸಿ ನಿಟಿಲತಟದೊಳ್ ।
ತೊಳಗುವ ತನ್ಮಣಿಕಪಟ್ಟಕಾವಳಿಯಿಂ ಕ ॥
ಣ್ಗೊಳಿಸಿದನಾನೃಪನಂದನ ।
ನಿಳೆಗವತರಿಸಿರ್ದ ತರುಣಫಣಿಪನ ತೆಱದಿಂ ॥ ೩೯

ಅರುಣೋಪ್ಮದ ನಿಜಕಾಂತಿಗೆ ।
ಪುರುಡಿಸಿ ನಿವಿರ್ದಂತೆ ತತ್ಕಪೋಲಂಗಳನಾ ॥

ವರಿಸಿದರುಣಾಂಶುವಂ ಬಿ ।
ತ್ತರಿಪುದು ಮಣಿಕುಂಡಲಂಗಳಾಬಾಲಕನ ॥ ೪೪

ಪಿರಿದೆಸೆವ ವದನವಿಧುವಿನ ।
ಪರಿವೇಷಮಿದೆಂಬ ತೆಱದೆ ಬಹುರುಚಿಗಳ್ ಬಿ ॥
ತ್ತರಿಸ ನವರತ್ನಕಂಠಿಕೆ ।
ಕರಮೆಸೆದತ್ತಾ ಕುಮಾರಕನ ಕಂಧರದೊಳ್ ॥ ೪೫

ಸುರುಚಿರಚಮೂರುನಖಮದು ।
ವರವಕ್ಷದೊಳೆಸೆಯುತಿರೆ ಕರಂ ಶ್ರೀವತ್ಸಂ ॥
ಬೆರಸುದಯಿಸಿರ್ದ ಕೃಷ್ಣನ ।
ಪರಿಜಮನಾನೃಪಕುಮಾರಕಂ ನನೆಯಿಸಿದಂ ॥ ೪೬

ಜಯಲಕ್ಷ್ಮೀಧರಣೀಕಾಂ ।
ತೆಯ ಪರಿಣಯನಕ್ಕೆ ತಳೆದ ಮಂಗಳಸೂತ್ರ ॥
ದ್ವಯವೆನಿಸಿ ಮಿಸುಗಿದುವು ಮಣಿ ।
ಮಯಕಂಕಣಯುಗಳಮಾಕುಮಾರನ ಕರದೊಳ್ ॥ ೪೭

ಪುರುಷಾಕೃತಿಯಿಂ ತಾನವ ।
ತರಿಸಿದ ಶಶಿಯೆಂದು ಬಂದು ಬಳಸಿದ ತಾರಾ ॥
ಪರಿಕರಮೆನೆ ಕಣ್ಗೆಸೆದುದು ।
ಪಿರಿದುಂ ಬಾಲಕನ ಮೌಕ್ತಿಕದ ಕಟಿಸೂತ್ರಂ ॥ ೪೮

ಮದನನ ಮೂಡಿಗೆಯೆನೆ ತುಡಿ ।
ಸಿದ ಬಹುವಿಧವರ್ಣವಲಯದಂತಿರೆ ನವರ ॥
ತ್ನದ ಕಟಕಂಗಳ್ ಕಣ್ಗೊಳಿ ।
ಸಿದುವಾನೃಪಸುತನ ಚರಣಕಾಂಡದ್ವಯದೊಳ್ ॥ ೪೯

ಚರಣಸರಸಿಜಪರಾಗಂ ।
ಬೊರೆದಳಿವಾಳಿಕೆಗಳಂತೆ ಝಂಕೃತಿರವಮು ॥
ಬ್ಬರಿಸೆ ಮಣಿನೂಪುರಂಗಳ್ ।
ಪರಿರಂಜಿಪುವಾನೃಪಾಳಸುತನಂಘ್ರಿಗಳೊಳ್ ॥ ೫೦

ಸ್ತನತಟಹಾರರೋಚಿಯ ನಿಕಾಯದೊಳಂ ಪೊಳೆಯಲ್ಕೆ ತನ್ನ ರೂ ।
ಪನೆ ಪಿರಿದುಂ ನಿರೀಕ್ಷಿಸಿ ಕುಚಾವೃತಸೇವೆಯುನೊಲ್ಲದಾಬೆರ ॥

ಲ್ಲೊನೆ ನೆಗಟಿಕ್ಕೊಂಡ್ಯಯ್ಯನೀಂಟುವ ತುಡುಂಕುವ ಮೆಲ್ಲನೆ ಸಾರ್ದು ನೋಲ್ಪಿನಂ।
ದನನ ನವೀನಮುಗ್ಧತೆ ಮುಗುಳ್ನಗೆಯಂ ಪಡೆದತ್ತು ದೇವಿಯೊಳ್ ॥೯೦॥

ಜನನಿಯು ಪೀವರಸ್ತನಪಯಃಪರಿಸೇವನೆಯಿಂ ವಿಲಾಸಿನೀ ।
ಜನಮದು ತೊಟ್ಟಿಲಂ ಪಿಡಿದು ತೂಗೆ ಕೊರಲ್ ವೊಗವೆಂಬ ಸಂದೆಗಂ ॥
ಜನಿಯಿಸೆ ಕೂಡೆ ಪಾಡುವ ಸುಗೇಯಸುಧಾರಸಸೇವೆಯಿಂದೆವ ।
ರ್ಧನತೆಯನೆಯ್ದುತಿರ್ಪನನಿಶಂ ನಿಜಶೈಶವದೊಳ್ ಕುಮಾರಕಂ ॥೯೦॥

ರಸನೆಗೆ ಬರ್ಪಳನ್ನಿರದೆ ವಾಕ್ಸತಿಯೆಂದು ವಿನೂತನಾಕ್ಷರ ।
ಪ್ರಸರವೆ ಶಕ್ತಿವೆತ್ತುದಯಿಸಿತ್ತೆನೆ ಕಣ್ಗೊಳಪಾಕುಮಾರನು ॥
ಲ್ಲಸಿತಮುಖಾಂಬುಜಾಂತರದೊಳಾಲ್ಲಸಿತದ್ವಿಜಪಙ್ತಿ ಪುಟ್ಟಿ ರಾ ।
ಜಿಸಿದುದು ವಕ್ತ್ರಜಾತದರಹಾಸದ ಬೀಜಸಮೂಜಮೆಂಬಿನಂ ॥೯೯॥

ನಿನಗಧಿಪನಾನೆ ಪೆಱತಿ ।
ಲ್ಲೆನುತಿಳೆಗಱಿಪುತ್ತುಮಿರ್ದವೋಲ್ ಝಂಕಾರ ॥
ಧ್ವನಿ ನೆಗೆಯೆ ನೇವುರದಿನೊ ।
ಯ್ಯನೆ ದಟ್ಟಡಿಯಿಡುವನೆಸೆವ ಖಚರಕುಮಾರಂ ॥೯೪॥

ಸುಲಲಿತಮಪ್ಪ ವೀಣೆಗೆ ಕಲಾಲವಕಾಷ್ಠದೊಂದು ಸಂಗತಿ ।
ಚ್ಛಲದೊಳೆ ಸುಸ್ವರಂ ಜನಿಸುವಂತೆ ತೊದಳ್ನುಡಿಗಲ್ವಲಂಪಿನಿಂ ॥
ದಲಘುತರಪ್ರವೋದದೊದವಿಂ ಸತಿಯುಂ ಖಚರಾಧಿನಾಥನುಂ ।
ಸಲೆ ನುಡಿಸುತ್ತುಮಿರ್ಪ ನುಡಿಗಲ್ತನಂ [ಬಲೀಕಾ] ಕುಮಾರಕಂ ॥೯೫॥

ಮೃದುಪದವಿನ್ಯಾಸವಿಳಾ ।
ಸದಯೆಸಕಂ ಸುಕವಿಯಂತೆ ಪಾಂಸುಕ್ರೀಡಾ ॥
ಪುದದಿಂ ಮೊದ್ದಜದಂ ।
ತುದಾತ್ತನೆಸೆವಂ ಕುಮಾರಕಂ ಶೈಶವದೊಳ್ ॥೯೬॥

ಧೃತಿಲವಮಿಲ್ಲದಿರ್ಪ ದುರಿತಾತ್ಮಕತಪ್ಪ ನೃಪಾಲಜಾಲಸಂ ।
ಗತಿ ಪೆಱಪಿಂಗಿತಾದನೆನಗೀತನಧೀಶ್ವರಸುದ್ಭವೈಯ್ಯನು ॥
ನ್ನತಸುಚರಿತ್ರನೆಂದವನಿ ತಾನೊಸೆದಪ್ಪಿದಳೆಂಬಿನಂ ಕುಳ್ಳೈ ।
ತ್ಸುತನ ಶರೀರಲಿಪ್ತರಜಮಿಂತೆಸೆದಿರ್ದುದು ಪಾಂಸುಕೇಳಿಯೊಳ್ ॥೯೭॥

ಜಿನಪತಿಪದಮುಂ ಪೂಜಿಸಿ ।
ಜಿನಪದವೀಕಂಗೆ ಮಾಡಿದಂ ನಿಜತನಯಂ ॥
ಗನುನಯದಿಂದನ್ನಪ್ರಾ ।
ಕನಮುಂ ಚೌಲೋಪನಯನಮುಂ ಶುಭದಿನದೊಳ್ ॥೯೪॥

ತನುವಂ ಕೋಮಲಕಾಂತಿಲಕ್ಷ್ಮ್ಮಿ ಲಲಿತಪ್ರತ್ಯಂಗಸಂಘಾತಮುಂ ।
ಘನಸೌಂದರ್ಯಾವರೇಣ್ಯಲಕ್ಷ್ಮ್ಮಿ ಮನಮುಂ ಪ್ರಜ್ಞಾಲಸಲ್ಲಕ್ಷ್ಮ್ಮಿ ಲೋ ॥
ಚನಮುಂ ಮೋಹನಲಕ್ಷ್ಮ್ಮಿ ಚಾರುಮುಖಮುಂ ಚಂಚತ್ಪ್ರಭಾಸಾರಲ ।
ಕ್ಷ್ಮ್ಮಿ ನಿತಾಂತಂ ನೆರೆ ಪೊರ್ದಿ ಪೆಂಪುವಡೆದತ್ತಾ ಲೋಲನಂ ಬಾಲನಂ ॥೯೯॥

ವ॥ ಇಂತು ರಾಜಿಸುವಮಿತತೇಜಕುಮಾರಂ ಸಿತಪಕ್ಷದ ಪ್ರತಿಪ
ತ್ಸುಧಾಸೂತಿಯುಂತೆ ಪ್ರತಿದಿನಪ್ರವರ್ಧಮಾನನುಂ ವರ್ಧನೀಕೃತ ಗುರುಜನ
ಮನುಪಯೋನಿಧಾನನುಂ, ಉದಯಾದ್ರಿಪ್ರಶಸ್ತಗಭಸ್ತಿಹಸ್ತನಂತೆ ಉತ್ತ
ರೋತ್ತರಸಮುನ್ಮಿಳಿತಮಹತ್ತೇಜನುಂ ಪ್ರಕಾಶೀಕೃತಮಾತೃಪಿತೃತೇಜ
ಸ್ಸರೋಜನುವಾಗಿ ಬೆಳಗುತಿರ್ದನಂತುಮಲ್ಲದೆಯುಂ

ಖಳವಿರಹಿಗೆ ಸಾಧ್ವಸಮಂ ।
ಬಳೆಯಿಸುತುಂ ವಿಬುಧತತಿಗೆ ವಿಪುಳೋತ್ಸವಮಂ ॥
ಬಳೆಯಿಸುತುಮಮಿತತೇಜಂ ।
ಬಳೆವನಣಂ ಮಿಸುಪ ತರುಣಸಿತಕಿರಣನವೊಲ್ ॥೧೦೦॥

ಅಮಿತಬಲನಮಿತಸುಂದರ ।
ನಮಿತಮಹದೊ ೀಧನಮಿತವಿಶದಯಶೋವಿ ॥
ಭ್ರಮವೊಡನೆ ಬಳೆಯೆ ಬಳೆಯುಂ ।
ತ್ತುಮೆ ತಾನೆಸೆದಿರ್ದನಮಿತತೇಜಕುಮಾರಂ ॥೧೦೧॥

ವ॥ ಇಂತು ಜಿತರೂಪವೈಭವಕುಬೇರಕುಮಾರನಪ್ಪಮಿತತೇಜಕು
ಮಾರಂ ತಮ್ಮಯ ಸಂಬಂಧಲತಿಕೆಯಂ ಬೆಳೆಯಿಸುತ್ತುಮೆಚಿಯುತ್ತುಮಿರ
ಲರ್ಕಕೀರ್ತಿಯುಂ ಜ್ಯೋತಿರ್ಮಾಳೆಯುಂ ಸಂತಸದಂತನೆಯ್ದಿರ್ದಾಖಚರ
ಕಾಂತೆ ನಂದನಮುಖಾರವಿಂದಮಂ ನೋಡಿ—

ಈತನಯನಂತೆ ವರರೂ ।
ಪಾತಿಶಯದ ಸುತೆಯೆ ಜನಿಸುಗೆನಗಿನ್ನೆನುತುಂ ॥

ಪ್ರೀತಿಯೊಳೆ ಬಯಸುತಿರ್ದಳ್ ।
ಜ್ಯೋತಿರ್ವ್ಯಾಳಾಸತಿ ಸ್ವಜೆತ್ತದೊಳಾಗಳ್ ॥೧೦೨॥
ಆದೋಹಳವುದು ಪೂರ್ವಕೃ ।
ತೋದಿತಪುಣ್ಯಾನುಬಂಧವೊಡಗೂಡಿ ಸಮಂ ॥
ತಾದುದು ಸತಿ ಜ್ಯೋತಿರ್ವ್ಯಾ ।
ಳಾದೇವಿಗೆ ಗರ್ಭವನುಪವೋತ್ಸವಗರ್ಭಂ ॥೧೦೩॥
ತೊಳಪ ಶಶಿಬಿಂಬಲಕ್ಷ್ಮ್ಮಗೆ ।
ಕಳೆಗಳ್ ಕೈಗೂಡುವಂದದಿಂ ನವಮಾಸಂ ॥
ವಳತಿವಿತರರ್ಕಕೀರ್ತಿಯು ।
ಕುಳಸತಿಗೊಗೆದಿರ್ದ ಗರ್ಭದುರುವಿಭ್ರಮದೊಳ್ ॥೧೦೪॥

ವ॥ ಆಸಮಯದೊಳ್ ಸುಪ್ರಾಪ್ತಶುಭಮುಹೂರ್ತದೊಳ್—

ಸ್ಮರಶರಲಕ್ಷ್ಮ್ಮ ವೋಹಿಸುವ ಪೂಗಣೆಯುಂ ಪಡೆವಂತೆ ವಿದ್ರುವೋ ।
ತ್ಕರವನಲಕ್ಷ್ಮ್ಮ ಕಲ್ಪಲತೆಯಂ ಪಡೆವಂತೆ ನವೀನಸೌಂದ್ರಬಂ ॥
ಧುರಶಶಿಬಿಂಬಲಕ್ಷ್ಮ್ಮ ಕಳೆಯುಂ ಪಡೆವಂತೆ ವಿಯಚ್ಚರೇಂದ್ರಸೌಂ ।
ದರಿ ಪಡೆದಳ್ ವಿಜೆತ್ರವರರೂಪವನೋಹರಿಯುಂ ಕುವೂರಿಯಂ ॥೧೦೫॥
ಎಸಕದ ಸುತಾರೆ ಸಲೆ ಸಮ ।
ನಿಸಿದನುಪವಸನ್ಮುಹೂರ್ತದೊಳ್ ಪುಟ್ಟದಳೆಂ ॥
ದೊಸೆದು ಸುತೆಗಿತ್ತನಾಖಚ ।
ರಸವೂಜಾಗ್ರಣಿ ಸುತಾರೆಯೆಂಬೀಪೆಸರಂ ॥೧೦೬॥
ರತಿಪತಿಯಾಜ್ಞೆಯಂತೆ ಕುಸುಮಾಸ್ತ್ರನ ಮೋಹನಕಲ್ಪವಲ್ಲಿಯುಂ ।
ತತನುವ ತೇಜದಂತೆ ಮಕರಧ್ವಜನಗ್ಗದ ವಶ್ಯಸಸ್ಯದಂ ॥
ತತಿಕಮನೀಯವಾಗಿ ಬಳೆಯುತ್ತಮೆ ಕಣ್ಗೊಳಸುತ್ತುಮಿರ್ದಳ ।
ಪ್ರತಿಮವಿಳಾಸವುಗ್ಗಳಿಕೆವೆತ್ತು ಸುತಾರೆ ಶಿಶುಪ್ರಭಾವದೊಳ್ ॥೧೦೭॥
ವಿಮಲೇಂದುಕಲೆಯ ಬೆಳವಿಗೆ ।
ಕಮಲಾಹಿತಮೆಂದು ಪಟಿಯುತುಂ ಕಮಲಾನಂ ॥
ದಮನೆಸೆವ ಕುವಲಯಪ್ರಮು ।
ದಮನೊದವಿಸುತ್ತುಂ ಕುವೂರಿ ಬಳೆಯುತ್ತಿರ್ದಳ್ ॥೧೦೮॥

ನಿರವಧಿತೇಜನಪ್ಪಮಿತತೇಜಕುಮಾರನುಮಾಸುತಾರೆಯುಂ ।
ಸುರತರುಸಸ್ಯದಂತೆ ಕಮನೀಯನಪೋಂದುಪ ಲೇಖೆಯುಂತೆ ಭೂ ॥
ಸುರತಿಯನಪ್ಪುಕೆಯ್ದು ಬಳೆಯುತ್ತಿರಲೀಕ್ಷಿಸುತುಂ ಮುದಂ ಪೊದ ।
ಟ್ಟಿರುತಿರಲರ್ಕಕೀರ್ತಿ ಖಚರೇಂದ್ರನುಭೂಸತಿಯುಂ ನಿರಂತರಂ ॥೧೦೯॥

ತನುಗೆ ಜಗತ್ತ್ರಯಾಧಿಪತಿಸಂಪದವುಂತದು ಸಾರ್ದವೊಲ್ ಕಲಾ ।
ಸಮಿತಿಯನಪ್ಪುಕೆಯ್ದವ್ಯತರೋಚಿಯು ದರ್ಶನವಾದ ವಾರ್ಧಿವೋಲ್ ॥
ಪ್ರಮುದವನೆಯ್ದುತಿರ್ಪರೆನಸುಂ ಪದೆದೀಕ್ಷಿಸುವರ್ಕಕೀರ್ತಿಯುಂ ।
ಪ್ರಮದೆಯುವಿಂತು ತಾನುಮಿತತೇಜಕುಮಾರಕನಂ ಸುತಾರೆಯುಂ ॥೧೧೦॥

ಅವಿರತಮಿಂತು ಖೇಚರನರಂ ನಲವಿಂ ನೆಲೆವೆರ್ಚುತಿರ್ದ ಶೈ ।
ಶವಮನೆ ಪತ್ತುವಿಟ್ಟಮಿತತೇಜಕುಮಾರಕನಂ ಶ್ರುತಾಚ್ಛವೈ ॥
ಭವದೆ ಪೊದಟ್ಟಿ ಪತ್ತುಗೆಯ ಪೊತ್ತಿದೆನುತ್ತುಮೆ ಬಂದು ಸಶ್ರುತಾ ।
ರ್ಣವಮುನಿವುಂಗವಾಂಘ್ರಿಗೆ ಸಮರ್ಪಿಸಿದಂ ನತನಾಗಿ ರಾಗದಿಂ ॥೧೧೧॥

ದೀಪಸ್ಪರ್ಶನವಾದ ವರ್ತಿ ನಿಮಿಷಕ್ಕಾದೀಪರೂಪಂ ಸವುಂ ।
ತಾಪೊತ್ತೆಯ್ದುವಪೊಲ್ ಮದೀಯಜನಯೋಗಿಜ್ಯಾಯಕಾರುಣ್ಯನೇ ॥
ತ್ತಾಪಾಂಗದ್ಯುತಿಸಂಗದಿಂದಮಿತತೇಜಂ ಹೃದ್ಯವಿದ್ಯಾವಿಳಾ ।
ಸೋಪೇತಾತ್ಮಕನಾದನಾಮುನಿಯ ತನ್ಮಾಹಾತ್ಮ್ಯಮಿನ್ನೆಂತುಟೋ ॥೧೧೨॥

ಆಱಿಯೆಂ ಗಣಿಯಿಸಲಣಮಿ ।
ನ್ನಱಿಕೆಯ ಕಮಲಭವನಮಿತತೇಜಕುಮಾರಂ ॥
ನೆಱಿಯುಱಿದ ಸತ್ಕಳಾಳಿಯ ।
ತೆಱನೆಂದೊಡದಾವ ಶಬ್ದಗಂ ಬಣ್ಣಿಸುವಂ ॥೧೧೩॥

ಸದಮಲಶೋಭೆವೆತ್ತ ಮುಖದೊಳ್ ಪೊಳಪೇಱಿ ವಿಲೋಚನಂಗಳೊಳ್ ।
ಪುದಿದ ವಿಲಾಸವೇಱಿ ತನುಯಷ್ಟಿಯೊಳಿಂಬುವ ಪುಷ್ಟಿಯೇಱಿ ಚಿ ॥
ತ್ತದೊಳೊದವಿರ್ಪುದಾರಪುದವೇಱಿ ನಿಜಾವಯವಪ್ರತಾನದೊಳ್ ।
ಪೊದಪಿನ ಚೆಲ್ವದೇಱಿ ನವಯೌವನವೇಱಿದುದಾಕುಮಾರನೊಳ್ ॥೧೧೪॥

ಸ್ಮರನೀಕಾಭೀಳಭೂಳಾಂಬಕಶಿಖಿಮುಖದೊಳ್ ಮಗ್ಗಿದಂ ಮುನ್ನಮೊಂದಂ
ಬರುಹೋದ್ಭೂತಂ ಕರಂ ಕೌತುಕಮೆನಿಸುವ ಸಲ್ಲಕ್ಷ್ಮಣಾನೀಕಶೋಭಾ ॥

ಕರಭದಾ ್ರಕಾರನಂ ತಾಂ ಪಡೆದನೆಲೆ ಜಗಕೆಲ್ಲ ಕಂಜಕರ್ಣಂ ಪಿರಿ ।
ತ್ತರದಿಂದೆಂಬಂತೆ ಸವ್ಮೋಹಿಸುವನಸಮುಸಾಂದರ್ಯಸಾಲಂ ಕುತಪ್ರಪದ ॥
ತನಗಶ್ಮಾಕೃತಿಯೇವುದೀನಿರುಪಮಸ್ನಿಗ್ಧಾಸಿತಜ್ಯೋತಿಯೊಂ ।
ದೆನುತುಂ ಪದ್ಮಜನಿಂದ್ರನೀಲರುಜೆಯಂ ತಾನೀಟ್ಟುಕೊಂಡುಂ ವಿನೂ ॥
ತನರುಗ್ಮಂಜರಿಯಿಂದೆ ರಂಜಿಸಿದನೀವಿದ್ಯಾಧರಾಧೀಶನಂ ।
ದನನಾಭಂಗುರಕೇಶಪಾಶಮೆಸೆಗುಂ ನೀಲಪ್ರಭಾಜಾಳದಿಂ ॥೧೦೬॥

ಕುಂದದ ಕಳೆಗಳನೆಂದು ಮು।
ಖೇಂದುವನಧೇರ್ಯಂದು ಸಾರ್ದನೆಂದೆನಿಪೀಯೊಂ ॥
ದಂದದಿನೆಸೆದುದು ಖೇಚರ ।
ನಂದನನ ಲಸತ್ಪ್ರಭಾವಿಶಾಳಂ ಭಾಳಂ ॥೧೦೭॥

ಮನುಗಳ ದೊರೆ ಚರಿತದೊಳೀ ।
ತನೆ ಎನುತಿರ್ಕ್ಕಯ್ಗಳಂ ವಿರಿಂಚಿಯೆ ಬರೆದೇ ॥
ಟಿನೆಯೆರಡು ಲೆಕ್ಕಮೆನೆ ನೃಪ ।
ತನಯನ ತದ್ಭ್ರೂಲತಾಯುಗಂ ಸೊಗಯಿಸುಗುಂ ॥೧೦೮॥

ಕಮಲಂ ತಾಂ ದ್ವಿಜರಾಜವೈರಿ ಸತತಂ ಚಾಂಡಾಳನೀಪೀತಶೇ ।
ಷಮಧುವ್ರಾತದ ಭಾಜನಂ ಕುವಲಯಂ ದೋಷಾನುಬದ್ಧ ಪ್ರಭಾ ॥
ವಮಿನಾರಾತಿಯೆನುತ್ತ ವಂ ಪಟಿದು ರಾಗಂಬೆತ್ತು ವೆಂಬಂತೆ ಕೆಂ ।
ಪಮರ್ದಿಂತೊಪ್ಪಿದುವಾಕುಮಾರಕನ ದೀರ್ಘಾಲೋಲಲೀಲಾಕ್ಷಿಗಳ್ ॥೧೦೯॥

ಕಮನೀಯಭ್ರೂಲತಿಕಾ ।
ಯುಮಳೋದ್ಭವಮೂಲದಂದಮೆಂಬಿನಮತಿವಿ ॥
ಭ್ರಮಮುಂ ಬೀಱುತ್ತಿರ್ದುದು ।
ಕುಮಾರನಾನನದೊಳೆಸೆವ ನಾಸಾಮುಕುಳಂ ॥೧೧೦॥

ಶ್ರವಣಾಲಂಕರಣಶ್ರೀ ।
ಯುವತಿ ನಿರೀಕ್ಷಿಸುವ ನಿರ್ಮಳಾದರ್ಶಮಿದೆಂ ॥
ಬವೊಲೆಸೆಯುತಿರ್ಪುವಾಖಚ ।
ರನರ ಕುಮಾರನ ಲಸತ್ಕಪೋಲಪ್ರಭೆಗಳ್ ॥೧೧೧॥

ಪರವೂಕ್ಷರಮಂಜರಿಯೆನಿ ।
ಪ್ಪಿರುತರ ತಾರಾವತಂಸಶೋಭೆಗೆ ಕೋಭಾ ॥
ಕರಮಂ ಕೂಡುತಿರ್ಪುದೆ ಖೇ ।
ಚರರಾಜತನೂಜನೆನೆವ ಕರ್ಣಯುಗಂಗಳ್ ॥೧೨೨॥

ಪುದಿದ ನವಯೌವನೇಭದ ।
ಮದಲೇಖಾಯುಗಮಿದೆನಿಸಿ ತೋಱಿದುದತಿಚೆ ॥
ಲ್ವೊದವಿದ ಕುಮಾರಕನ ವದ ।
ನದೊಳಸಿತಕ್ಷ್ಮಶ್ರುಸೂಕ್ಷ್ಮಲೇಖೆಸ್ತೋಮಂ ॥೧೨೩॥

ಚಿತ್ತವನಾವರಿಸಿದ ಪದ ।
ಪೊತ್ತರಿಸಿರೆ ಹೃದಯಮಂ ಪುಗಲ್ ಸಮಯಂಬಾ ॥
ರುತ್ತಿರ್ಪ ರಾಗವೆನೆ ಖಚಕ ।
ರೋತ್ತವನ ಕುಮಾರನಧರಮಣಿ ಕಣ್ಗೊಳಕುಂ ॥೧೨೪॥

ಕಡೆಯ ಭವದೊಳ್ ಜಗತ್ರಯ ।
ದೊಡೆಯಂ ತಾನಪ್ಪನೀಕುಮಾರಕನೆಂದಾ ॥
ಜಡಜಭವಂ ಬರೆದಂತಿರೆ ।
ಕಡುಚೆಲ್ವಾದತ್ತು ಕೊರಲ ರೇಖಾತ್ರಿತಯಂ ॥೧೨೫॥

ಜಿನನಾಥವೃಷಭನಂತೀ ।
ತನೆ ಧಾತ್ರಿಯೊಳೆಂದು ಸೂಚಿಪಂತಿರೆ ಸವ್ಯೋ ॥
ಹನರೂಪನಮಿತತೇಜಾಂ ।
ಕನ ರುಂದ್ರಗವೇಂದ್ರಕಂಧರಂ ಸೊಗಯಿಸುಗುಂ ॥೧೨೬॥

ವಸುಮತಿಯೊಳನುಪಹತವೂ ।
ನಸುವರ್ಣಗಿರೀಂದ್ರನಮಿತತೇಜನ ರಾರಾ ॥
ಜಿಸುವ ಭುಜಶಿಖರಯುಗಳವು ।
ವೆಸೆದುವು ತತ್ಪಾರ್ಶ್ವಕೃಂಗಯುಗ್ಮದ ತೆಱದಿಂ ॥೧೨೭॥

ಇಳೆಯಂ ಮುಂ ತಳೆದಿರ್ದ ಶೇಷನೆನಿತಾನುಂ ವೃದ್ಧನಾಯ್ತೆಂದು ತಾಂ ।
ಜಳಜಾವಾಸಸಹೀಂದ್ರಯುಗ್ಮನುನೆ ಬಾಹಾವ್ಯಾಜದಿಂ ಮಾಡಿದಂ ॥

ಗಳವೆಂಬಂತೆ ತಳಂ ಫಣಂ ನಖಚಯಂ ರತ್ನೌಘವೊಗಿಂತು ಶ ।
ಣ್ಗೊಳಿಕುಂ ಖೇಚರರಾಜಪುತ್ರನ ಜಯಶ್ರೀಗೇಹಬಾಹುದ್ವಯಂ ॥೧೫೪॥

ಕ್ಷಿತಿಯನಿಲೆಯ್ದು ತಾನ ।
ಪ್ರತಿಹತವಿಪುಲತೆಯನುದ್ಭವಿಪ್ಪಂಪತೆಯಿಂ ॥
ದತಿಶೋಭಿಸುತಿರ್ಪುದು ಖಚ ।
ರತನೂಜನ ನಿಜವಿಶಾಲವಕ್ಷೋರಂಗಂ ॥೧೫೫॥

ತನುಮುಧ್ಯಂ ನಿರುಪಮರೂ ।
ಪನವೀನವಿಶಾಲನಿಧಿಯ ತನ್ಮಧ್ಯಂ ವೋ ॥
ಹನರೋಚಿಯ ಸನ್ಮಧ್ಯಮಿ ।
ದೆನಿಪುದು ಖಚರೇಂದ್ರನಂದನನ ತನ್ಮಧ್ಯಂ ॥೧೫೬॥

ಅಗಣಿತನುತಪುಣ್ಯೋದಯ ।
ನಗಾಧಹೃದಯಂ ದಲೆಂದು ಸೂಚಿಪ ತೆಱದಿಂ ॥
ಸೊಗಯಿಪುದು ದಕ್ಷಿಣಾವ ।
ರ್ತಗಭೀರವೆನಿಪ್ಪ ನಾಭಿ ನೃಪನಂದನನ ॥೧೫೭॥

ಕರಿಕುಂಭೋಪಮೆಯಂ ನಿರಾಕರಿಸುತುಂ ಕಂಠೀರವೋತ್ಕೃಷ್ಟವಿ
ಷ್ಟರವಿನ್ಯಸ್ತವಿಶಾಲಮುಳ್ಳದಱಿನತ್ಯಾಶ್ಚರ್ಯಸೌಂದರ್ಯಬಂ ॥
ಧುರಪಿಂಡದ್ವಯಮೆಂಬ ವರ್ಣನೆಗಣಂ ಪಕ್ಕಾಗಿ ವೃತ್ತೋನ್ನತಿ ।
ಸ್ಫುರಿತಂಬೆತ್ತು ಕಟೀಯುಗಂ ಸೊಗಯಿಸಿತ್ತಾ ಖೇಚರಾಪತ್ಯನ ॥೧೫೮॥

ಕಾಮನ ಸಮ್ಮೋಹನವದ ।
ಸಾಮಜವೊಸೆದಿರ್ಪ ಮಿಸಗುವಾಲಾನಂಗಳ್ ॥
ತಾಮಿವೆನಲಮಿತತೇಜನ ।
ಕೋಮಲಮಪ್ಪೂರುಕಾಂಡಮುವು ಕರಮೆಸೆಗುಂ ॥೧೫೯॥

ಹರನಯನಾನಲಹತಿಯಿಂ ।
ದರೆಯೊತ್ತಿದ ಕುಸುಮಶರನಿಷಂಗೋಪಮೆಯಂ ॥
ಪರಿಭವಿಪುದಾಕುವೊರನ ।
ಸುರುಚಿರಜಂಘೆಗಳನೂನವಿಮಳಚ್ಛವಿಯಿಂ ॥೧೬೦॥

ವಿನತನೃಪಗನ್ನೆತಿಕಯಿ ।
ನನೊಸಯುದಿಂದೀಪ ಪೆಂಪನೆಳಿಸುವಿಸುವವೋಲ್ ॥
ವಿನುತಚ ವಿವಡೆದಾನೃಪ ।
ತನಯನ ಮೇಗಾಲ್ಗಳೆಸೆದುವತ್ಯುನ್ನತಿಯಿಂ ॥೧೩೫॥

ಕಡುಗೊರ್ವಿ ಕಾಯದೀಧಿತಿ ।
ಕುಡಿಯಿಟ್ಟುದು ಕೋಮಲಾಂಗುಳವ್ರಜಮುಖದಿಂ ॥
ಗಡಮೆಂಬ ತೆಱದಿನೆಸಕಂ ।
ಬಡೆದುದು ಖೇಚರಸುತಾಂಘ್ರಿನಖರುಜೆಸಿಚಯಂ ॥೧೩೬॥

ಯುವತಿಪದಪಾತದಿಂ ಪ ।
ಲ್ಲವಿಪಸುಗೆಯ ತಳರ ಪೊಳೆಪನುಪವೂನಿಪ ದು ॥
ಪ್ಪವಿಯನವವೂನಿಪುವು ಖಚ ।
ರವರತನೂಭವನ ಚರಣದರುಣದ್ಯುತಿಗಳ್ ॥೧೩೭॥

ವ॥ ಇಂತು ವಿರಾಜಿಸುವಮಿತತೇಜಕುವೂರಂ ರೂಪಕನುನೀಯ ಪ್ರಾಯಜೆತ್ರಕಾಯನಾಗಿಯುಂ ಮೃಗನಯನಾತಿಭೀತಿಪ್ರದಪ್ರಭಾವನಲ್ಲಂ। ಪ್ರಬಲತರ ಪ್ರದ್ಯುಮ್ನನಾಗಿಯುಂ ಮಧುಪಾವಳೀಪರಿಜನಪರೀತನಲ್ಲಂ। ಸೌಂದರ್ಯಸಂಪತ್ಕಳಾಧಿನಾಥನಾಗಿಯುಂ ಮಿತ್ರವ್ಯಪೇತಪ್ರವರ್ತನಲ್ಲಂ। ತೇಜಃಪ್ರಭಾವತಿಗಾಂಶುವಾಗಿಯುಂ ಕುವಲಯಯೂರಾತಿಯಲ್ಲಂ। ಪ್ರಸನ್ನ ಲಕ್ಷ್ಮೀಜನಿತಾಸ್ಯರಾಜೀವನಾಗಿಯುಂ ರಜೋವಮಯನಲ್ಲಂ। ಧರಾಧರಣ ಭೋಗಿಭುಜಭುಜಗೇಂದ್ರನಾಗಿಯುಂ ಮದಾಕಲಿತವಾಂದ್ಯಭಾವನಲ್ಲಂತುವು ಲ್ಲದೆಯುಂ—

ವಿಸಟಂಬರಿವಬಲಾದೃ ।
ಗ್ವಿಸರಕ್ಕಿದೆ ಬೀಡುದಾಣವುಂ ಪಡೆದನೊ ತಾ ॥
ನೆಸೆಸೆದೆಂಬುಜಭವನೆನೆ ವೋ ।
ಹಿಸಿದತ್ತೆಸೆವಮಿತತೇಜನನುಪಮರೂಪಂ ॥ ೧೩೮॥

ವ॥ ಇಂತು ವಿರಾಜಿಸುವಮಿತತೇಜನಂ ನಿರೀಕ್ಷಿಸುತ್ತ ರ್ಕಕೀರ್ತಿಯುಂ ಜ್ಯೋತಿರ್ಮಾಲಾದೇವಿಯುಂ ಸುಖದಿನಿರುತ್ತಿರೆಯುದಿತ್ತ ಲಾಜೌದನಪುರಿಯೊಳ್

ಭೂವರಭೂಸುರಾಸ್ಯಕಮಲಪ್ರತಿಬಿಂಬಿತಪಾದಪೀಠಶೋ ।
ಭಾವಿಭವಂ ತ್ರಿಪಿಷ್ಟಪೃಥಿವೀಪತಿಗಂ ನೆಗಳ್ದಾ ಸ್ವಯಂಪ್ರಭಾ ॥
ದೇವಿಗಮಿರ್ದರುದ್ಭವಿಸಿದರ್ ಸುತರಾನತರಕ್ಷಣಕ್ಷಮರ್ ।
ಶ್ರೀವಿಜಯಾಖ್ಯನುಂ ವಿಜಯಭದ್ರನುಮೆಂಬ ಕುಮಾರಮನ್ಮಥರ್ ॥೧೫೯॥

ತ್ರಿಭುವನಮನೊಂದೆ ಸರಲಿಂ ।
ದಭಿಭವಿಪ ಮನೋಜರಾಜನಾಜ್ಞಾಶಕ್ತಿ ॥
ಪ್ರಭೆಯೆನೆ ಮೋಹಿಪ ಜ್ಯೋತಿಃ ।
ಪ್ರಭೆಯಂ ನೆಗಳ್ದಾ ಸ್ವಯಂಪ್ರಭಾಸತಿ ಪಡೆದಳ್ ॥೧೬೦॥

ಬಲವತ್ಕಂದರ್ಪದರ್ಪೋತ್ಕರವೊಡವಳೆಯಲ್ ಮೂತ್ರತಾತಪ್ರಮೋದಾ
ತುಲವಲ್ಲೀಯುಗ್ಮಮುರ್ವಂತಳದೊಡವಳೆಯಲ್‌ಪೊರ್ದಿದಾಶ್ಚರ್ಯಸೌಂದ॥
ರ್ಯಲಸದ್ಭಾಸಂ ಬಿಡದೊಡವಳೆಯಲ್ ಧಾತ್ರಿಯುಂ ಮೋಹಿಸುತ್ತುಂ ।
ಬಳೆಯುತ್ತಿರ್ದಳ್ ತ್ರಿಪಿಷ್ಟಾವನಿಪತಿಯ ತನೂಜಾತೆ ವಿಖ್ಯಾತಿಯಿಂದಂ॥೧೬೧

ಸೊಗಯಿಪ ಶಶಿಲೇಖಾಲ ।
ಕ್ಷ್ಮಾಗೆ ಸಮನಿಸುವಂತೆ ಸಾಂದ್ರಚಂದ್ರಿಕೆ ವಿಲಸ ॥
ನ್ಮೃಗಸಯನೆಗೆ ಜ್ಯೋತಿಪ್ರಭೆ ।
ಗಗಣಿತಮೆನೆ ಸಮನಿಸಿತ್ತು ಯೌವನವಿಭವಂ ॥೧೬೨॥

ಅಲರ್ಗಣ್ಗಳ್ ಪೊಳಪೇಱೆ ಕುಂತಳಕುಳಂ ಕಪ್ಪೇಱೆ ವಕ್ತ್ರೇಂದುಮುಂ\
ಡಲಮುಲ್ಲಾಸವಿಲಾಸಮೇಱೆ ತನುವಲ್ಲೀಚ್ಛಾಯೆ ಸೊಂಪೇಱೆ ಸುಯ್ ॥
ಸಲೆ ಕಂಪೇಱೆ ಕದಂಪು ನುಣ್ಪೊಗೆದು ಸೂಕ್ಷ್ಮಾಲಂಭಕಣಂ ಬೀಱೆ ಸಂ ।
ಚಲಸದ್ಯೌವನವೇಱೆ ಕಣ್ಗಳಿಸತಾಜ್ಯೋತಿಃಪ್ರಭಾದೇವಿಯೊಳ್ ॥೧೬೩॥

ಅಳಗಳ್ ಪಿಂ ಮಧುಪಂಗಳಿಂದು ಮಳನಾತ್ಮಂ ಮೂವು ಕೈವೋಕನೀ ।
ಕಳಕಂಠಾಳಿ ವಿಜೃಂತಿ ಸಂಚರತರಂ ಮಂದಾನಿಳಂ ನಿರ್ಗುಣಂ ॥
ಮಿಳವೀರ್ಕರ್ವಿನ ಬಿಲ್ಲೆನುತ್ತುಮವನಾಗಳ್ ಬಿಟ್ಟು ಗೆಲ್ವೆಂ ಜಗಂ ।
ಗಳನೀಪೌದನರಾಜನಂದನೆಯನಾನೆಂದಂಗಜಂ ಪೊಂಗುವಂ ॥೧೬೪॥

ಅನುದಿನಮುಡಿಯೂಡಿಸಿ ಕೊ ।
ಳ್ವನಿತಜ್ಜಿಗವೆಂತುಮಿಲ್ಲ.....ಶುಭಲಾಂ ॥

ಘನಕೋಣಾಂಟುಜರುಜೆಯಿಂ ।
ದೆನೆ ಜ್ಯೋತಿಃಪ್ರಭೆಯು ಕೇಸಡಿಗಳಂತೆಸೆಗುಂ ॥೧೪೫॥

ಕುಂದದ ಸತ್ಕಳಾವಳಿಯನುಜ್ಜ್ವಲದಂಕುವನೈದಿಸೀಗಳೆ ।
ಮ್ಮಿಂದುಗೆ ದೇವಿ ನಿನ್ನ ವದನೇಂದುವಿನಿಂದೆನುತುಂ ಪದಕ್ಕೆ ಸಾ ॥
ರ್ತಂದೆಱಗಿರ್ದ ತಾರೆಗಳನಲ್ಕೆ ನಖಂಗಳತೀವಕಾಂತಿಯಿಂ ।
ದೊಂದಿ ವಿರಾಜಿಸಿರ್ಪುವು ಕುವಾರಿಯ ಕೋಮಳವುಂಗಳಾಂಘ್ರಿಯೊಳ್‌॥

ಸೌಂದರ್ಯಕಲ್ಪಲತಿಕಾ ।
ಕಂದಪೊಳಾದಯಿಸಿದ ಕುಡಿಗಳಂತೆಸೆದುವು ಚೆ ॥
ಲ್ವೊಂದಿದ ಜ್ಯೋತಿಃಪ್ರಭೆಯ ಪ ।
ದೇಂದೀವರದೆಸಟ್ಗಳಿನಿಪ ಲಲಿತಾಂಗುಲಿಗಳ್‌ ॥೧೪೬॥

ಅವಿರಳಮತಿಕಠಿನಂ ಕಾಂ ।
ತಿವಿವರ್ಜಿತಮೆಂದು ಕಮಠನಂ ಸುಸ್ನಿಗ್ಧ ॥
ಚ್ಛವಿಯಿಂದವವಾನಿಸುತೆಸೆ ।
ದುವು ಜ್ಯೋತಿಃಪ್ರಭೆಯ ಮಿಸುಗುವಾಮೇಂಗಾಲ್ಗಳ್‌ ॥೧೪೭॥

ಸತತಂ ಶಿಲೀಮುಖಾಸ್ಪದ ।
ಮನುವ ತೂಣೀರಮೆಂದು ಪಲ್ಕೆಯ್ದುವುಳ ॥
ದ್ಯುತಿಯ ಪದೆಫಿಂದೆ ಜಂಘೂ ।
ದ್ವಿತಯಂ ಕಣ್ಗೊಳಿಸದತ್ತು ಜ್ಯೋತಿಃಪ್ರಭೆಯು ॥೧೪೮॥

ಮದಪಂಕಮಿಳಿತಮೆಂದಾ ।
ಮದನಗಜಾಲಾನದುಪಮೆಯಂ ಪಲ್ಕೆಯ್ದೆ ॥
ಪ್ಪಿದುದವುಳಕಾಂತಿಯಿಂ ಸೊಂ ।
ಪೊದವಿದ ವೃತ್ತೋರುಕಾಂಡವನೃಪಸುತೆಯ ॥೧೪೯॥

ಅತುಲಕುಚಕಮಲಪೂಜಾ ।
ವೃತವರತನುಮಧ್ಯರತ್ನಲಿಂಗಶಲಾಕಾ ॥
ಯತಭಿಮಮೆಂಬ ತೆಱದಿಂ ।
ನಿತಂಬವೆಸೆದುದು ಪೊಸಟ್ಟ ಜ್ಯೋತಿಃಪ್ರಭೆಯ ॥೧೫೦॥

ಕತಮುಖಭವಾಭವಾದ್ಯರ ।
ಧೃತಿ ಮುತಿ ಮುದಲತೆಯುನೆಯ್ದೆ ಪರಿಷರಿಗೆಯುಂ ॥
ರತಿರಮಣನಾಡುವೊಲನೆನ ।
ಲತಿಸೊಗಯಿಪುದಸಿಯನಡು ನರೇಂದ್ರಾತ್ಮಜೆಯೂ ॥೧೪೦॥

ವಿಳಸದುರುಕುಚದ ಭರದಿಂ ।
ಸೆಳೆನಡು ಬಳ್ಕುಗುಮಿದೆಂದು ನಳನಾಸನಸಿ ॥
ಟ್ಟೆಳನೀಳದಂಡದೊತ್ತಿನೆ ।
ತಳತಳಪ್ಪದು ನೀಳ್ದ ಬಾಸೆ ಜ್ಯೋತಿಃಪ್ರಭೆಯು ॥೧೪೧॥

ಘನಸೌಂದರ್ಯಸುಧಾರಸ ।
ಮನುದಿನಮುಣ್ಮುತ್ತು ಮಿರ್ಪ ವಾಟಿಯೆ ತಾನೆಂ ॥
ದೆನಲಿಂತೆಸೆವುದು ಗಂಭೀ ।
ರನಾಭಿಮಂಡಳಮದವನಿಪತಿನಂದನೆಯೂ ॥೧೪೨॥

ಕಾಮನ ಕೃತಕಾದ್ರಿಗಳೆಂ ।
ಬೀಮೂತಂತಿರ್ಕೆ ಜಗಮನೊಟ್ಟಿಕೆಯ್ದು ಮನೋ ॥
ಜಾಮಳಮಣಿಮುಕುರಂಗಳ್ ।
ತಾಮೆನಿಪುವು ತರುಣಿಯಾಸುವೃತ್ತಕುಚಂಗಳ್ ॥೧೪೩॥

ತಾವೆನಸಂ ಕುಜನ್ಮಮಿನಿತಾಗಿಯುಮುನ್ಮಸವೃತ್ತಿಯಿಂ ಸಮಂ ।
ತಾವಗಮಿಪ್ಪುವೆಂದು ಲತಿಕಾಳಿಗಳಂ ನಿಜಭಂಗುರಾತಿಶೋ ॥
ಭಾವಿಲಭಂಗಿಯಿಂ ಪಟಿಯುತುಂ ನಗುತಿಪ್ಪುವು ತನ್ನಖಾಂಶುಮಾ ।
ಲಾವಳಿಯಿಂದೆ ಪೌದನನರೇಂದ್ರತನೂಜೆಯ ಬಾಹುವಲ್ಲಿಗಳ್ ॥೧೪೪॥

ಸರಿ ದೊರೆ ಸಮನಿಲ್ಲೆಸೌಂ ।
ದರತೆಗೆ ಮೂಜಗದೊಳೆನುತುಮಾಕಮಳಭವಂ ॥
ಬರೆದಂತೊಪ್ಪಿದುದು ತನೂ ।
ದರಿ ಜ್ಯೋತಿಃಪ್ರಭೆಯು ಕೊರಲರೇಖಾತ್ರಿತಯಂ ॥೧೪೫॥

ಅಡಿಗಡಿಗೆಯ್ದೆ ಬಾಯ್ಗುಡಿತೆ ರಾಹುವಿನಿಂ ಕಡುಗಂದುಕುಂದುಗಳ್ ।
ತೊಡರ್ದುದಲ್ಲದಿಂದು ಹಟದಾಡನೆನುತ್ತಿಟ್ಟೆಯ್ದು ಪದ್ಮಜಂ ॥

ಪಡೆದನಿದೊಂದಪೂರ್ವವಿಧುವಂ ವದನಚ್ಛಲದಿಂದೆನಲ್ಕೆ ನೂ ।
ರ್ಮಡಿ ಮಿಸುಗಿತ್ತು ಪೌದನನೈಪಾತ್ಮಜೆಯಾಸ್ಯಸುಧಾಂಶುಮಂಡಲಂ ॥೧೪೪॥

ಪೊಳೆವ ಮುಖವಿಭ್ರಮಾರ್ಣವ।
ದೊಳಗುಣ್ಮಿದ ಸುಪ್ರವಾಳಲೇಖೆಯಿದೆನೆ ಕೆಂ ॥
ಬೆಳಗಿಂದಮುಧರಮಣಿ ಕ ।
ಣ್ಗೊಳಪುದು ಪಜ್ಜಳಕೆವೆತ್ತು ಜ್ಯೋತಿಃಪ್ರಭೆಯ ॥೧೪೫॥

ಮಿಸುಪವಳವದನಪೀಯೂ ।
ಷಕರಧಿಯೊಳಮುಳ್ಗಳಾಗಿ ನೆಗೆದಿಂದುಗಳೆಂ ॥
ಬೆಸಕಮನಾಂತಿರ್ದುವು ರಾ ।
ಜಿಸಿ ಜ್ಯೋತಿಃಪ್ರಭೆಯ ನಿಜಕಪೋಲಸ್ಫುಟಂಗಳ್ ॥೧೪೬॥

ಅವತಂಸಲಕ್ಷ್ಮ್ಮಗುತ್ತಂ ।
ಸವೆನಿಪ್ಪ ವಿಲಾಸದಿಂದಲಂಕಾರಾರ್ಥ ॥
ಶ್ರವಣಂ ಸೊಗಯಿಸಿದುವು ಪೌ ।
ರವನರಪಕುಮಾರಿಯೆನಿಪ ಜ್ಯೋತಿಃಪ್ರಭೆಯ ॥೧೪೭॥

ನೆಱೆಯೆ ವಿಜೆತ್ರವಾಗಿ ಪಡೆದಾಕೃತಿಯುಂ ನಡೆನೋಡುತಿಂದು ಕ ।
ಣ್ಡೆಱೆವೆಡೆಯುಲ್ಲಿ ಪದ್ಮಜನ ಕೈಯೆರಡುಂ ಶ್ರವಣದ್ವಯಾಂತಿಕ ॥
ಕ್ಕುಱೆ ಜಗುಬ್ದಿತ್ತೆನಲ್ ಕಿವಿವರಂ ನಿಮಿರ್ದುಜ್ಜ್ವಳಕಾಂತಿಮಾಲೆಯುಂ ।
ಕಱೆವುವು ಚಾರುಪೌರವನರೇಂದ್ರತನೂಜೆಯ ಚಾಪಳಾಕ್ಷಿಗಳ್ ॥೧೪೮॥

ಮಿಗೆ ನಿಮಿರ್ದು ಕಣ್ಗಳವು ಬೆರ।
ಸುಗುವೆಂದಜನಿಟ್ಟ ಮಧ್ಯಮಣಿದಂಡದವೋಲ್ ॥
ಸೊಗಯಿಸುವುದು ನಾಸಿಕೆ ಸೊಂ ।
ಪೊಗೆದಾನಗೆವೊಗದೊಳಿಂತು ಜ್ಯೋತಿಃಪ್ರಭೆಯ ॥೧೪೯॥

ಮೊದಲೊಳ್ ತಾಂ ಜಡವೃತ್ತಿಕಾಜನಿತವಾಗಿರ್ದುಂ ಗುಣಂ ತನ್ನೊಳ।
ಲ್ಲ ದಿಟಂ ಕರ್ಬಿನ ಬಿಲ್ಲದೇವುದೊ ಮುನೋಜಂಗೆಂದು ಪದ್ಮೋದ್ಭವಂ ॥
ಪದೆಪಿಂ ಭೂಜ ಲದಿಂ ಧನುರ್ದ್ವಿತಯಮುಂ ವಾಡಿಟ್ಟವೋಲ್ ವಿಭ್ರಮಾ ।
ಸ್ಪದಜ್ಯೋತಿಃಪ್ರಭೆಯಾಸ್ಯವಾರಿರುಹದೊಳ್ ವಿಭ್ರಾಜಿಕುಂ ಭ್ರೂಗಳ್॥

ವನಲಕ್ಷ್ಮ್ಮಿಯಂತೆ ತಿಳಿಕದ ।
ಘನಶೋಭೆಗೆ ತಾಣಮಪ್ಪಿನಂ ನಿರ್ಮಿಸಿದಂ ॥
ವನಜಭವಂ ಜ್ಯೋತಿಃಪ್ರಭೆ ।
ಯ ನಿಜಾಸ್ಯದೊಳಿಸಿದುದಾವಿಶಾಳಂ ಭೂಳಂ ॥೧೩೫॥
ಅಳಕಚ್ಛಲದಿಂ ಪಟ್ಟದ ।
ಕುಳಮಾವರಿಸಿರ್ದುದಾಸ್ಯವನಜಮೆನೆನೆ ಕ ॥
ಣ್ಗೊಳಿಸಿದುದು ನಿಟಿಲತಟದೊಳ್ ।
ಸುಳಿಗುರುಳ್ಗಳ ಬಳಗವಿಂತು ಜ್ಯೋತಿಃಪ್ರಭೆಯ ॥೧೩೬॥
ಮದನಾಸಿತೋರಗಂ ಕ ।
ರ್ದೊದವಿದ ತನುಕಾಂತಿ ಮಿಳಿರೆ ಮಂಡಲಗೊಂಡಿ ॥
ರ್ದುದು ತಾನಿನೆಂಬಿನಂ ತೋ ।
ರ್ದುದು ಜ್ಯೋತಿಃಪ್ರಭೆಯ ಕವನಕಬರೀಭಾರಂ ॥೧೩೭॥

ವ॥ ಇಂತು ರೂಪಾತಿಶಯವನಪ್ಪೆಯ್ದಿ ಜ್ಯೋತಿಃಪ್ರಭಾದೇವಿ ಬಳೆಯುತಿರ್ಪಿನವೊಂದಿನದೊಳ್ ಪ್ರಜಾಪತಿಮಹಾರಾಜಂ ವಿಜಯಶ್ರೀಪ್ರಿಯ ಯುವರಾಜರ್ವೆರಸು ಲೀಲೆಯಿಂದೋಲಗದೊಳರ್ದಲ್ಲಿ—

ಸಲೆ ಪಾತಾಳಫಣಿಪ್ರತಾನಮುಖಫೂತ್ಕಾರಾನಿಳಂ ನೀಳ್ದು ಭೂ ।
ತಲಮುಂ ಶಾಂ ಬಗೆದೆತ್ತಲುಚ್ಚತರ ವೆಯ್ವೆರ್ಚೆತ್ತೆನಲ್ ಭೂರಜ ॥
ಸ್ಥಲಮುಂ ಕೂಡೆ ತೆರಳ್ದಿಕೊಂಡು ಕೆಲವುರ್ವೀಜಂಗಳಂ ಕಿಟ್ಟು ಕೊಂ ।
ಡುಲಿಯುತ್ತಿರ್ದು ನಭಂಬರಂ ನಿವಿರ್ದುದಾವಾತೂಲಿಕಾಡಂಬರಂ ॥೧೩೮॥
ತಿಗುಳಿಯ ಭಂಗಿಯಂ ನೆಳೆ ತೆಳಂದಿರಿದತ್ತು ಧರಿತ್ರಿಯಂ ಪುಹ ।
ದ್ದಗನಮನೆತ್ತಿ ಕೆಟ್ಟ ಲೆ ಕೆಟಿಂದಲೆಯಾಗಿಪುದೆಂಬ ಶಂಕೆ ಕೈ ॥
ಮಿಗೆ ಜಗತೀಜನಕ್ಕೆ ಬಿಳುಬೇಳಿನುತುಗ್ರತಮಂ ಪೊದಟ್ಟು ನೆ ।
ಟ್ಟಗೆ ಮಿಗೆ ಪುಟ್ಟ ಪೊಣ್ಮಿದುದು ಸುಟ್ಟುರೆಗಾಳಿ ನಭೋಂತರಾಳಮೆಂ॥೧೩೯॥
ನರರಾಯುಂ ಯೌವನನುಂ ।
ಶರೀರಮುಂ ನೋಟಕ್ಕೊಡಿಂತುಟೆಂದಳ್ಕುವವೊಲ್ ॥
ಕರಗಿದುದಾಕ್ಷಣದೊಳ್ ಸು ।
ಟ್ಟುರೆಗಾಳಿಯ ನೆಗೆದು ನೀಳ್ದ ದಂಡಾಕಾರಂ ॥೧೪೦॥

ತೊಟ್ಟನೆ ನರನಾಥನ ಕ ।
ಣ್ಮುಟ್ಟನೊಳದ್ಭುತದಿನೊಗೆದು ನೆರೆ ಬಯಲಾದಾ ॥
ಸುಟ್ಟುರೆ ಮನಕ್ಕೆ ಪಡೆದುದು ।
ನೆಟ್ಟನೆ ವೈರಾಗ್ಯಲಕ್ಷ್ಮ್ಮಯಂ ತತ್‌ಕ್ಷಣದೊಳ್ ॥೧೬೧॥

ಕಿಡುವೊಡಲಂ ಪಡೆದಿದಱಿಂ ।
ಕೆಡೆದಕ್ಷಯವೋಕ್ಷಸಿದ್ಧಿವಡೆಯದ ಜಡನೀ ॥
ಯೊಡಲಱಿದು ಚತುರ್ಗತಿಯೊಳ್ ।
ಬಿಡದೆ ಬರುತ್ತಿರ್ಕುಮೆಂದು ಬಗೆದಂ ಭೂಪಂ ॥೧೬೨॥

ವ॥ ಅಗಳಿಂತು ನಿರ್ವೇಗಪರನಾಗಿ ಪ್ರಜಾಪತಿಮಹಾರಾಜಂ ವಿಜಯ
ಕುಮಾರನ ಮೊಗಮುಂ ನೋಡಿ

ತನಯಂಗೊಳ್ಗಣಮಾವುದಾತ್ಮಜನಕಾಜ್ಞಾವೃತ್ತಮುಂ ವಿಸ್ತರಂ ।
ದ್ಗನಿತಂ ನೋಟಿಪ್ಪೊಡಮಾಗುಣೋನ್ನತಿಕೆ ನಿನ್ನೊಳ್ ನೈಜಮುಂತಾಡೊಡಂ
ತೆ ನೆಗಟ್ಟೀಯತಮಿರ್ದಿವೀನಿಖಿಲಸಾಮ್ರಾಜ್ಯೋಲ್ಲಸತ್ಪಟ್ಟಮಂ ।
ಪನೆಳ್ಚಾಳಸ್ಥನಪ್ಪುದಂ ತನುಜ ಕೈಕೊಳ್ಳೆಂದನಂದಾನೃಪಂ ॥೧೬೩॥

ದುರ್ವಹಮಪ್ಪ ರಾಜ್ಯಭರದಿಂ ನೆರೆ ಪಿಂಗಿಸಿ ಮತ್ತಮೆಮ್ಮನಾ ।
ನಿರ್ವೃತಿಸೌಖ್ಯಮುಂ ಪಡೆವ ಮಾರ್ಗಮನೆಯ್ದಿಸಿ ವೈರಿವರ್ಗದೊಳ್ ॥
ದೋರ್ವಲಮುಂ ವಿಗುರ್ವಿಸಿ ಜಗತ್ರಯದೊಳ್ ಸಲೆ ನಿನ್ನ ಕೀರ್ತಿಯುಂ ।
ಪರ್ವಿಸಿ ಪುತ್ರ ನೀಂ ಮುದದೆ ಮಾಡು ಮದೀಯಮನಃಪ್ರಮೋದಮಂ ॥

ವ॥ ಅನರೇಂದ್ರನ ಪದಕ್ಕೆ ವಿನಮ್ರನಾಗಿ ವಿಜಯಕುಮಾರನಿಂತೆಂದಂ:—

ಅವಿಚಾರಾತ್ಮಕತಾಗಿ ನೇಮಿಸುವಿರೀಗಳ್ ಬಿಸ್ನಪಂ ದೇವ ನಿ ।
ಮ್ಮವೊಲಾಂ ತಾಳ್ದುವುದರ್ಕೆ ತಕ್ಕನೆ ಸಮಂತೀಪ್ರಾಜ್ಯಸಾಮ್ರಾಜ್ಯಭಾ॥
ರವನಾರಯ್ವೊಡೆ ವಾರಣಾಧಿಪತಿಯಪ್ಪೈರಾವಣಂ ತಾಳ್ದವಂ ।
ತೆವೊಲೇಂ ಬಾಳಪಟೀಲಿಕಂ ತಳವುದೇ ವಿಶ್ವಂಭರಾಭಾರಮಂ ॥೧೬೪॥

ಎಲೆ ವಿಜಯಲಕ್ಷ್ಮ್ಮೀಲಲನಾ ।
ಲಲಾಮ ನೀನಿಂ ಮದಾಜ್ಞೆಯುಂ ವಿಸ್ತರಿದಿರೆ ॥
ನ್ನೊಲವಂ ಪಾಲಿಸು ಪಾಳಯೊ ।
ಳಲಂಘ್ಯನೆಂದೆನಿಸು ಧರಿಸು ರಾಜ್ಯಶ್ರೀಭರಂ ॥೧೬೫॥

ಮನದೊಳ್ ವಿಸಾಯುವುದಿಲ್ಲ ನಿಮ್ಮ ವಚನಾಜ್ಞಾ ಮಾತ್ರಮುಂ ದೀನ ಮು
ತ್ತನಗೀರಾಜ್ಯದ ವಾಂಛೆ ಪುಟ್ಟದದಱಿಂ ನೀವಿಂತಿಪಿಷ್ಟಂಗೆ ನೆ ॥
ಟ್ಟನೆ ರಾಜ್ಯಾಭಿಷವಂಗೆಯಲ್ಕದು ಮದೀಯಪ್ರೇಮಮೆಂದಿಂತು ತಾ ।
ತನ ಚಿತ್ತಂಬಡೆದಂ ದಿಟಂ ವಿಜಯನಂತಿನ್ನಾರುಧಾರಾತ್ಮಕರ್ ॥೧೫೬॥

ತನುಜನ ಮಹತ್ವಮುಂ ಮನ ।
ದನುಪಮವಾಸತ್ವಮುಂ ನಿರೀಕ್ಷಿಸಿ ಚೇತೋ ॥
ಜನಿತಾತುಲವಿಸ್ಮಯದಿಂ ।
ಜನಪತಿಯಾಂದೋಳವುಳಿಮುಂಡನಾದಂ ॥೧೫೮॥

ನೃಪನೆಯ್ದುತ್ತಿರೆ ಮುದಮುಂ ।
ತ್ರಿಪಿಷ್ಟನಂ ಸಕಲರಾಜ್ಯಲಕ್ಷ್ಮೀಲಲನಾ ॥
ಧಿಪನಂ ಮಾಡಿದನಾರೂ ।
ಢಿ ಪೊದಱಿದ್ದಿರೆ ಮುದವದಹಿತವಿಜಯಂ ವಿಜಯಂ ॥೧೬೯॥

ಬಲನೆ ತನಗಿಂದು ಬಲನಾ ।
ಬಲನೆ ಮಹೋದಗ್ರನಪ್ಪ ಬಾಹಾಬಲನಾ ॥
ಬಲನೆ ಬಲವಾಗಿ ರಾಜ್ಯದ ।
ವಿಲಾಸಮೊಂದಿರ್ಪನಾತ್ರಿಪಿಷ್ಟನರೇಂದ್ರಂ ॥೧೬೦॥

ಸಮಸಂದೆಂಟುಂ ಗಜಂಗಳ್ ತನಗೆ ಬರೆ ಸಹಾಯಂಗಳಾಗಳ್ ಧರಾಜಕ ।
ಕ್ರಮನಾದಂ ಶೀರ್ಷದೊಳ್ ತಾಳ್ದಿದನೆನುತುಮಣಂ ಶೇಷನಂ ತನ್ನಭಾನೀ ॥
ಕಮಯೂಖವ್ಯಾಜದಿಂದಂ ನಗುವುದಿಳೆಯನೇಕಾಂಗದಿಂ ತಾಳ್ದಿ ವಿಕ್ರಾಂ ।
ತಮಹೋಚ್ಚಂಡತ್ರಿಪಿಷ್ಟವನಿಪನ ಭುಜದಂಡಂ ಮಿಳತ್ಸತ್ವಸೋಪಂ॥೧೬೧

ವ॥ ಮತ್ತಮಾತ್ರಿಪಿಷ್ಟಮಹಾರಾಜಂ ವಿಕೃತಾಕಾರಧಾರಿಯುಮಲ್ಲದ
ಸತ್ವಮುಮುಸ್ವಾಂತಸರಸಿಜಾಕ್ಷನಪ್ಪುದಱಿಂ ಕ್ಷಮಾಧರನುಂ। ಉಗ್ರವಲ್ಲದ
ಭರ್ಗನಪ್ಪುದಱಿಂ ವೃಷೋಮಾಭಿರಾಜಿತನುಂ। ರಜೋಮಯನಲ್ಲದ ವಾಣೀ
ವಗರ್ಭನಪ್ಪುದಱಿಂ ವಾಗ್ವಿಲಾಸನುಂ।ವಿಯಚ್ಚರನಲ್ಲದ ವಿದ್ಯಾಧರನಪ್ಪುದ
ಱಿಂ ಮಹೋದಾರಧೀರನುಂ।ಪರದಾರಾಸಕ್ತನಲ್ಲದ ಪುರಂದರನಪ್ಪುದಱಿಂ
ಸುಧರ್ಮಾನುರಾಗಿಯುಂ।ಅತನುವಲ್ಲದ ರತಿರಮಣನಪ್ಪುದಱಿಂ ಸನ್ಮೋ
ಹನಸ್ವರೂಪನುಂ। ದೋಷಾಕರನಲ್ಲದ ಕಲಾಧರನಪ್ಪುದಱಿಂ ಕುವಲಯಾ

ಸಂಪತ್ಕಾರಿಯುಂ। ಅಸ್ತಂಗತನಲ್ಲದ ಗಭಸ್ತಿವಾಲಿಯಪ್ಪುದಱಿಂ ಜಗನ್ಮಿತ್ರನುಂ। ಪ್ರಕೃತಿಚರನಲ್ಲದ ಜಗತ್ಪ್ರಾಣನಪ್ಪುದಱಿಂ ಮಹಾಬಲನುಂ। ದಿಕ್ಪ್ರವರ್ತಿಯಲ್ಲದ ಪುಣ್ಯಜನೇಶ್ವರನಪ್ಪುದಱಿಂ ರಾಜರಾಜನುಂ। ಆಶ್ರಯಾಶನಲ್ಲದ ಬೃಹದ್ಭುಜನವಪ್ಪುದಱಿಂ ತಮೋವಿರಹಿತನುಂ। ಜಡಪ್ರಕೃತಿಯಿಲ್ಲದ ರತ್ನಾಕರನಪ್ಪುದಱಿಂ ಸಕಲಕವಿಕುಲಸೇವ್ಯನುಂ। ಅಪ್ಪಾಪದರೂಪಮಲ್ಲದವುರಾಚಳೇಂದ್ರನಪ್ಪುದಱಿಂ ಸಕಲಭೂಭೃತ್ಪರೀತಪ್ರತ್ಯಾಖ್ಯಾತನುಮಾಗಿರ್ದಂ. ಅಂತುಮಲ್ಲದೆಯುಂ

ತ್ರಿದಿವದಧೀಶನಲ್ಲದ ಬಲಾಹಿತನಲ್ಲದ ಗೋತ್ರವೈರಿಯು।
ಲ್ಲದ ಕವಿಶತ್ರುವಲ್ಲದ ಸತೀರತರಾಗವಿನಿಂದ್ಯನೆಂಬುದ ॥
ಲ್ಲದ ಪೆಸರ್ವೆತ್ತ* ಪುಣ್ಯಜನವಿದ್ವಿಷನಲ್ಲದ ಶಕ್ರನೆಂಬ ಪೆಂ।
ಪೊದವೆ ನೃಪಂ ತ್ರಿಪಿಷ್ಟನೆಸೆವಂ ನಿಜರಾಜ್ಯವಿಶಾಲಲೀಲೆಯಿಂ ॥೧೪೦॥

ವ॥ ಅತ್ರಿಪಿಷ್ಟನುಹೀಕಾಂತನಿಂತಿರ್ಪುದುಂ ಪ್ರಜಾಪತಿಮಹಾರಾಜನೊಂದು ದಿವಸದೊಳ್

ನುತನಿಶ್ರೇಯಸಲಕ್ಷ್ಮೀತಾಂ ಕಳುಪೆ ಬಂದಾದೂತಿಯೆಂಬಂತೆ ಸ।
ನ್ನುತವೈರಾಗ್ಯಮದಾಗಳೊರ್ಮೆ ಪಡಿಗಾಗಳ್ ಪೊಗಿ ಬೇಗಂ ಪ್ರಜಾ ॥
ಪತಿರಾಜಂ ಪಿಹಿತಾಸ್ರವವ್ರತಿಪದಾಬ್ಜೋಪಾಂತದೊಳ್ ದೀಕ್ಷೆಗೊಂ।
ಡು ತಪಂಬಟ್ಟಿರುತುಂ ಬಲಿಕ್ಕಮಪವರ್ಗಶ್ರೀಯನಂತೆಯ್ದಿದಂ ॥೧೪೧॥

ವ॥ ಅದಂ ಕೇಳ್ದು ರಥನೂಪುರಚಕ್ರವಾಳಪುರಪತಿ ನಿರ್ವೇಗವನಾಗಿ

ಸಲೆ ಸಕಳರಾಜ್ಯಪದವಿಯ।
ನೊಲವಿಂ ಕೊಟ್ಟಕ್ಕ ಕೀರ್ತಿಗಂತಾಕ್ಷಣದಿಂ ॥
ಜ್ವಲನಜಟಿವೀಚರಾಗ್ರಣಿ।
ವಿಲಸಿತವೈರಾಗ್ಯಪದವಿಯಂ ಕೈಕೊಂಡಂ ॥೧೪೨॥

ವಿಸಮಿತಭುಗಸಂದೋಹಮುನಿ।
ಪಸೆ ಪದಯುಗಳದ ಸವಿಾಪದೊಳ್ ದೀಕ್ಷಿತನಾ ॥
ಗಿ ನಿರತಿಶಯತಪೋಭಾಮಿನಿ।
ಗಿಸೆನಾದಂ ಜ್ವಲನಜಟಿವಿಯೆಸಕ ರರಾಜಂ ॥೧೪೩॥

ವ॥ ಇಂತು ತಪೋವಿಭವನವನಪ್ಪೈಕೆಯುಂ ಕಾಲಾಂತರದೊಳ್ ಜ್ವಲನಜಟಿಮಹಾರಾಜಂ ನಿರ್ವೃತಿಸುಖವನೆಯ್ದಿ ಪೋಗೆ

ಪರವಾನಂದದೊಳರ್ಕಕೀರ್ತಿಖಚರೇಂದ್ರಂ ಖೇಚರಾಧೀಶಭೂ ।
ಸುರಸಾವಾಮ್ರಾಜ್ಯವಿಳಾಸಪಟ್ಟವನದಂ ಕೈಕೊಂಡುದಂ ಕಂಡು ವಿ ॥
ಸ್ಫುರಿತಾನೂನಸುಧಾಂಶುದರ್ಶನಸುಖಂ ಕೈಸಾರ್ದ ಪೀಯೂಷಸಾ ।
ಗರದಂತಾಯ್ತು ಪುರೀಜನಂ ಪರಿಜನಂ ವಿದ್ವಜ್ಜನಂ ಸಜ್ಜನಂ ॥೧೪೬॥

ತವುತವುಗೆಯ್ದಿ ಕಾಣ್ಕೆಗಳನಿತ್ತಿನಸುಂ ಮುದಮುಣ್ಮೆ ರಾಜಲೋ ।
ಕಮುದನಿತುಂ ಸಮಂತೆಱಗುತಿರ್ದುದು ಸಂಭ್ರಮದಿಂ ಸ್ವಕೀಯವಿ ॥
ಭ್ರಮವರವಾಳರತ್ನಭೃಣಿರಾಜಿಸಮುದ್ಗತಶೀರೀಣರೇಣುಜಾ ।
ಳಮದೆಸೆವರ್ಕಕೀರ್ತಿಸಚರಾಂಘ್ರಿಸರೋಜಪರಾಗವೂಗೆಯುಂ ॥೧೪೭॥

ಕ್ಷ್ಮೆಯೊಳ್ ಕೂಡಿ ಮಹತ್ವವಾಯ್ತು ವಿಪುಳಸ್ಥೈರ್ಯಕ್ಕೆ ಪ[ಕ್ಕಾಯ್ತು ವಿ ।
ಭ್ರಮಸತ್ವಕ್ಕೆಡೆಯಾಯ್ತುದಾತ್ತಗುಣಸಂತಾನಕ್ಕೆ ಸಂಸ್ಥಾನವಾ ॥
ಯ್ತು ಮಹೋದ್ಯತ್ಕನಕಾದ್ರಿಯಂತೆ ಪೆಸರ್ವೆತ್ತೀಯರ್ಕಕೀರ್ತೀಶಜೆ ।
ತ್ತವೆಸುತ್ತುಂ ಪೊಗೞ್ತುಮಿರ್ದುದು ಬುಧಸ್ತೋಮಂ ಮನಃಪ್ರೇಮದಿಂ॥

ಹರಿಯೆಂತಂತೆ ವಿನೀತನುಂ ವಿಬುಧರಕ್ಷ್ಮಾವಿಕ್ರಮಖ್ಯಾತನುಂ ।
ವರಸತ್ಕೋವಜಿತಾತ್ಮವುಂ ನೆಗೞ್ವನಂತುದ್ಯದ್ಬಲೋಪೇತನುಂ ॥
ಪರಮಜ್ಞಾನವಿಯೋದ್ಧವುಂತ್ಕಯುತನುಂ ವಿದ್ಯಾಸಮಂತರ್ಕ್ಷಮಾ ।
ಧರನುಂ ತಾನೆನಲರ್ಕಕೀರ್ತಿ ಪೆಸರ್ವೆತ್ತಂ ಪಾಜ್ಯಸಾವಾಮ್ರಾಜ್ಯದೊಳ್ ॥

ವ॥ ಇಂತು ಸಾವಾಮ್ರಾಜ್ಯಲೀಲೆಯನಪ್ಪೈಕೆಯೊಪ್ಪುತ್ತುಮಿರ್ದರ್ಕಕೀರ್ತಿಖಚರೇಂದ್ರಂ ಬಂದು ದಿನದೊಳಮಿತತೇಜಕುಮಾರನ ವೊಗಮಂ ನೋಡಿ ಗಾಡಿಯುಂ ಯೌವನಾರೂಢಿಯುವೊಂದಿದುವೆಂದು ವಿವಾಹಮಂಗಳಸಂಗತಿಯಂ ಮಾಟ್ಪುದಂ ಮನದೆ ಗೊಂಡಿರ್ಪುದುಮತ್ತಲ್

ಪರವೋತ್ಸವದಿಂ ಪೌದನ ।
ಪುರಪತಿ ತಾನೊಂದುದಿವಸವೋಲಗದೊಳ್ ಬಿ ॥
ತ್ತರಿಸುತ್ತುಮಿರ್ದು ಸುತೆಯಂ ।
ತರಿಸಿ ನಿರೀಕ್ಷಿಸಿದನಲ್ತೆ ಜ್ಯೋತಿಃಪ್ರಭೆಯಂ ॥೧೪೯॥

ಕಂತುಗೆ ಸೋಲಮುದ್ಭವಿಸುವಂತೆ ಕುಮಾರಿ ನವೀನಯೌವನಾ ।
ಕ್ರಾಂತಲತಾಂಗಿಯಾದುದನದಂ ಪದೆದೀಕ್ಷಿಸಿ ಹರ್ಷದಿಂ ನಿಜ ॥
ಸ್ವಾಂತದೊಳಾತ್ರಿಪಿಷ್ಟಪೃಥಿವೀರಮಣಂ ಬಗೆದಂದನೀಕೆಗೇ ।
ನುಂ ತಡವಿಲ್ಲದಾಂ ನೆಗಟ್ಟಿಸಲ್ತೆ ವಿವಾಹಮನೀಗಳೆಂಬುದಂ ॥೧೯೧॥

ಅರಿಯಟ್ಟುತಿರ್ದಪರ್ ಖೇ ।
ಚರಭೂಚರನರಪವರ ಕುಮಾರಿಯನಾವಂ ॥
ಸರಿ ಕುಡುವಮೆಂದು ಪುರುಕುಲ ।
ದರಸಂ ಬೆಸಗೊಂಡನಲ್ತೆ ವಿಜಯನನಾಗಳ್ ॥೧೯೨॥

ಭೂತಲದೊಳ್ ನಿರೀಕ್ಷಿಪೊಡೆ ನಮ್ಮ ತನೂಜೆಯ ರೂಢಿವೆತ್ತ ರೂ ।
ಪಾತಿಶಯಕ್ಕೆ ಪಾಟಿಯಹ ರಾಜಜರೆಂತುಮದಿಲ್ಲ ಬೇಗದಿಂ ॥
ಪ್ರೀತಿಯೊಳೆಲ್ಲರಂ ಬರಿಸಿ ಮಾಬ್ಪುದು ನಾಮೆನಸುಂ ಕುಮಾರಿಗಿಂ ।
ತೀತಿಯದಿಂ ಸಯಂಬರಮನೆಂದೆನಲಾವಿಜಯಂ ಪ್ರಮೋದದಿಂ ॥೧೯೩॥

ವ॥ ಇಂತು ವಿಜಯಬಲದೇವರೊಲವಿಂ ಪೇಟ್ದನಂತರಂ ರಾಜಂ ಗೃಹ
ಮುಹತ್ತರಂಗೆ ಸ್ವಯಂವರಶಾಲೆಯಂ ರಚಿಯಿಸೆಂದು ನೇಮಿಸಲಾಗಳ್:—

ಮಯನ ಮನಕ್ಕೆ ವಿಸ್ಮಯಮನುದ್ಭವಿಸುತ್ತಿರೆ ಶಾಸ್ತ್ರಲಕ್ಷಣೋ ।
ದಯದಯದಿಂ [ವಿಜಿತ್ರತ] ವಿಜಿತ್ರ ಸುಪತ್ರಲತಾವಿತಾನ ಸಂ ॥
ಚಯಮಯದಿಂ ವಿಶಾಲಮಣಿಚಿತ್ರಸಮಾವೃತವೇದಿಕಾಸಮು ।
ಚ್ಚಯಮಯದಿಂ ಸ್ವಯಂವರನಿವಾಸಮದಚ್ಚರಿಯಾಯ್ತು ನೋಡೆಯುಂ ॥
ವರಶಶಿಕಾಂತಚಿತ್ರಘನಕೇತುಸಮೇತದಿನಬ್ದಮಾರ್ಗದಂ ।
ತುರುತರಭದ್ರಜಾತಿಯುತಪದ್ಮಸಮನ್ವಿತಮತ್ತವಾರಣ ॥
ಸ್ಫುರಿತವಿಳಾಸದಿಂ ಗಜಘಟಾವಳಿಯಂತೆ ಸುಸೂತ್ರವಲ್ಲರೀ ।
ಪರಿವೃತದಿಂ ವಸಂತವನದಂತೆ ಮನೋಹರಮಾಯ್ತು ಮಂಡಪಂ ॥೧೯೪॥

ಪೊಳೆವ ಹರಿನೀಲಕುಟ್ಟಿಮ ।
ತಳವೆಳಮುತ್ತುಗಳ ರಂಗವಲಿಯಿಂ ಸಲೆ ಕ ॥
ಜ್ಜೊಳಪುದು ಸಿತಾಬ್ಜ ಸಂಕುಳ ।
ವಿಳಸಿತಕಾಳಿಂದಿಯಂದನುಂ ನೆನೆಯಿಸಿತುಂ ॥೧೯೫॥

ತೊಳಗುವ ಪಂಚರತ್ನರಚಿತಾಂಜಿತವಂದನವಾಲೆಯಿಂ ಸಮು ।
ಜ್ವ್ವಳಶಶಿಕಾಂತಕಾಂತಮುಕುರಾವಳಿಯಿಂ ಹರಿನೀಳಪಟ್ಟಕಾ ॥
ಕುಳದಿನುದಗ್ರವಿದ್ರುಮದ ಕಂಬದ ಸಾಲ್ಗಳನಿಂಬುವೆತ್ತು ಕ ।
ಣ್ಗೊಳಪ ವಿಚಿತ್ರಜಿತ್ರಿತವಿತಾನದೆ ಮುಂಡಿತಮಾಯ್ತು ಮಂಡಪಂ ॥೧೯೩॥

ಅಮುಂಡಪಲಕ್ಷ್ಮೀವದ ।
ನಾಮುಳದರಹಾಸರುಚಿಯು ಬೀಱಿಲ್ಗಳೆನಲ್ ॥
ತಾಮೆಸೆದುವಸದಳಂ ಮು ।
ಕ್ತಾಮಣಿಗಣರಚಿತರುಚಿರಲಂಬೂಷಂಗಳ್ ॥೧೯೪॥

ಪರಪಿದ ಪಚ್ಚೆ ಗಪ್ಪುರದ ನುಣ್ಗೊಳಪಿಂಗೆ ನವೀನವಲ್ಲಿಕಾ ।
ಪರಿಕರದಚ್ಚಪೂನಲಿಗೆ ಕತ್ತುರಿನೀರ್ದಳಿಪಕ್ಕೆ ಪಾಯ್ದು ಸಂ ॥
ಚರಿಸುವ ಚಂಚರೀಕಚಯದಿಂಪಿನ ಸೊಂಪಿನ ಗಾವರಂ ವಿಯು ।
ಚ್ಚರಿಯರ ನೂಪುರಧ್ವನಿ ತಡಂಗಲಿಸಿತ್ತು ವಿವಾಹಗೇಹದೊಳ್ ॥೧೯೫॥

ಅನುಪಮನಿರಸ್ತತೇಜಮು ।
ನಿನಂಗೆ ಕುಡಲಿಂತು ನೀಳ್ದುದೆನೆ ಮುಂಡಪದ ॥
ಗ್ಗನವೀನರುಚಿರಮಣಿಕಲು ।
ಶನಿಜಪ್ರಭೆ ನಿಮಿರ್ದು* ಚುಂಬಿಸುವುದಂಬರಮಂ ॥೧೯೬॥

ಅಗಣಿತಮಣಿಮಯದಿಂ ಮಿಗೆ ।
ಸೊಗಯಿಪ ವೇದಿಕೆ ವಿಚಿತ್ರರುಚಿಯುಂ ಕಣ್ಗೋ ॥
ಲಗಿಸುತ್ತೆಸೆದುದು ರೋಹಣ ।
ನಗವನದಂ ಪಡೆದ ಜನಕನೆಂದೆನಲೆನಸುಂ ॥೧೯೭॥

ಅಪದಸ್ಥಂ ಚಂದ್ರಮನೆಂ ।
ದುಪಹಾಸಂಗೆಯ್ಯುತಿರ್ಪವೊಲ್ ಬೆಳ್ವೆಳಗಿಂ ॥
ದಪರಿಮಿತಂಬೆತ್ತು ವಿರಾ ।
ಜಿಪುದಿಂದೂಪಲದ ಪಟ್ಟವಣೆ ವೇದಿಕೆಯೊಳ್ ॥೧೯೮॥

ಮರಕತಮಣಿಕರ್ದಮಚಂ ।
ಚುರಚರ್ಜಿತಮೆನಿಸಿ ಕನಕಭೃಂಗಾರಘಟೋ ॥

ತ್ಕರಮೆಸೆದುದು ಮಾರ್ಪೊಳೆಯು ।
ತ್ತಿರೆ ಜಾಗಂಗಳ ಪೊದಳ್ದ ಪಸುರ್ವೆಳಗಿಂದಂ ॥೦೫॥

ಜಳಧರಲಕ್ಷ್ಮ್ಮನೀಳಲತೆ ಸುಸ್ಥಿರರೂಪದ ಶಕ್ರಚಾಪಸಂ ।
ಕಾಳಮೆನೆ ಬೇಗದಿಂ ಪಡೆಯುತಿರ್ದಪುವೆಂದೆನೆ ಪಂಚರತ್ನಮಂ ॥
ಡಳರುಜಿವಾಲೆ ನೀಳ್ದೊಗೆಯೆ ಪೂತಪಯೋಭರಿತೇಂದುಕಾಂತದು ।
ಜ್ಜ್ವಳಕಳಶಂಗಳೊಪ್ಪಿದುವು ತಟ್ಟು ತದೀಯವಿವಾಹಗೇಹದೊಳ್ ॥೦೬॥

ಕನಕಾಮತ್ರಂಗಳೊಳ್ ತೀವಿದ ನವರಸ ಕರ್ಪೂರ ಕಸೂರಿ ಗೋರೋ-
ಚನಕುಭ್ರಾಂಭೋಜದಿವ್ಯೌಷಧಿ ವಿವಿಧಫಲಶ್ವೇತದೂರ್ವಾಲಸಚ್ಚಂ ॥
ದನಪಂಕಂ ಕುಂಕುಮೋದ್ಗರ್ಕ್ಷತಮಣಿಕುಲದೀಪೌಘಸಿದ್ಧಾರ್ಥಮುಖ್ಯ ।
ಭಿಮತೋದ್ಯನ್ಮಂಗಳದ್ರವ್ಯದ ವಿಭವದಿನೊಪ್ಪಿರ್ದುದುದ್ವಾಹಗೇಹಂ ॥೦೭॥

ಮುದದಿಂ ಜ್ಯೋತಿಃಪ್ರಭೆಯ ।
ಗ್ಗದ ಮದುವೆಯನೀಕ್ಷಿಸಲ್ಕೆ ಕಣ್ಬಡೆದಂತೊ ॥
ಪ್ಪಿದುವು ಮಣಿಸ್ತಂಭಂಗಳ್ ।
ಪದೆಪಿಂ ಮಾರ್ಪೊಳೆವ ರತ್ನದೀಪೋತ್ಕರದಿಂ ॥೦೮॥

ನೀಲದ ಮುತ್ತಿನ ವಿಶ್ರದ ।
ಮಾಲೆಗಳನೆ ಕಣ್ಗೆನಂದುದಾಮುಂಡಪದು ॥
.....ವ್ರಜವೆಱಗಿ ।
ರ್ದಾಲಂಬಳದೆಸೆವ ಕುಸುಮದಾಮಸ್ತೋಮಂ ॥೦೯॥

ನಲವಿಂದವಾಕುಮಾರಿಯ ।
ಸುಲಲಿತರೂಪಮನಭೀಕ್ಷಿಸಲ್ ಶಶಿ ಮುಕುರ ॥
ಚ್ಛಲದಿಂ ಪಲವಾಕೃತಿಯಂ ।
ಸಲೆ ತಳೆದಂತೆಸೆದುವಾದವಾದರ್ಶಂಗಳ್ ॥೧೦॥

ಸಂಗಳಿಸಿದ ಪಲವಾನುಂ ।
ಮಂಗಳವಸ್ತುಗಳ ಕಾಂತಿ ತಟ್ಟು ಕರಂ ಚೆ ॥
ಲ್ವಿಂಗೆಡೆಯಾಯ್ತು ವಿವಾಹಗೃ ।
ಹಂ ಗೊಂದಳವೆಳಗಿನಗೆಯ ನೆಲೆಯೆಂಬಿನೆಗಂ ॥೧೧॥

ವ॥ ಆಸ್ಥಯುಂವರನಿವಾಸದ ಭಾಸುರತೆಯುಂ ನೋಡಿ ಪ್ರಾದನಪುರೇ
ಶಂ ಗೃಹವುಹತ್ತರಂಗೆ ಮೆಚ್ಚುಗೊಟ್ಟು
ಅಪ್ರತಿಮರೂಪವತಿ ಜ್ಯೋ ।
ತಿಃಪ್ರಭೆಯು ಸಯಂಬರಕ್ಕೆ ಬರಿಸಲ್ ಪುರುರಾ ॥
ಜಪ್ರತತಿಗೆಯ್ದಿ ಪುರುವಂ ।
ಶಪ್ರಭು ಕಳುಪಲ್ಕೆ ಪೋಯ್ತು ಚರಚಯವೂಗಳ್ ॥೦೧೦॥
ಬರವೇೞ್ದಾದರದಿಂ ತ್ರಿಪಿಷ್ಟನೃಪನಟ್ಟಲ್ ಶಿಷ್ಟರಿಂ ತತ್ಸ್ವಯಂ ।
ವರಮಂ ಕೇಳ್ದನುರಾಗನಾಗಿ ಖಚರೇಂದ್ರಂ ಬೇಗದಿಂದಾತ್ಮಸೌಂ ॥
ದರನುಂ ನಂದನನುಂ ಸುತಾರೆಯುವನೇಕಾತ್ಮೀಯವುಂತ್ರೀಶರುಂ ।
ಬೆರಸಾಗಳ್ ಪೊಱವಟ್ಟನಲ್ತೆ ಪರಿಯುಕ್ತಾಶ್ವರ್ವಚಾತುರ್ವಲಂ ॥೦೧೧॥
ಗಗನಾಂತರ್ಭಾಗವುಂ ಜಕ್ಕುಲಿಸೆ ಕದಳಿಕಾಗ್ರಂಗಳಂಭಃಕಣಶ್ರೀ ।
ಣಿಗಳಿತ್ತಂ ಸೂಸುವನ್ನಂ ಕೆದಱಿ ಜಳಧರವ್ರಾತವುತ್ಖಾತಖಡ್ಗಂ ॥
ಶುಗಳಾಶಾಚಕ್ರವುಂ ಬಾಸಣಿಸೆ ಜನಿತನಾನಾನಕಧ್ವಾನಜಾಳಂ ।
ಜಗವುಂ ತೀವುತ್ತಿರಲ್ ಪ್ರಾದನಪುರಿಗಿರದೇೞ್ತಂದನಾಖೇಚರೇಂದ್ರಂ ॥೦೧೨॥
ಪುರುವಂಶಾಭರಣಂ ತ್ರಿಪಿಷ್ಟನೃಪನಾವಿದ್ಯಾಧರೇಂದ್ರಂಗೆ ಸಾ ।
ದರದಿಂ ತಾನಿದಿರ್ವಂದು ತಂದು ನಿಜರಾಜಾವಾಸದೊಳ್ ಚಿತ್ರಭಾ ॥
ಸುರವುಪ್ಪೊಂದು ವಿಚಿತ್ರವುಂದಿರವುನಿತ್ತಾಚಿತ್ಯವಾಗ್ವೃತ್ತಿವಿ ।
ಸ್ತರದಿಂ ಮನ್ನಿಸುತುಂ ಸಮಂತು ಮೆಱೆದಿದಂ ತತ್ಕರ್ಮಯಂ ಪೆರ್ಮೆಯಂ॥
ವ॥ ಆಸನಮಯದೊಳ್
ಎಲೆ ಪೊಸತೀಗಳಾಗಸಮಿದೆಯ್ದಿ ಸುಧಾಕರಸೂರ್ಯಬಿಂಬಸಂ ।
ಕುಲವುಯವೂಯ್ತು ನುತ್ತಮೆ ಪುರೀಜನವಿೂಕ್ಷಿಸುತಿರ್ಪಿನಂ ಸಮು ॥
ಜ್ವಲಿನವಿವೂನಕೋಟಿಗಳನೇೞ್ದು ವಿಲಾಸದಗುರ್ವುವಿೂೞ್ದ ತ ।
ನ್ನೊಲವಿನೊಳಂತು ಬಂದುದು ವಿಯಚ್ಚರರಾಜಸವೂಜವೂಕ್ಷಣಂ ॥೦೧೪॥
ಲೀಲೆಯೊಳಾಗಳಂತು ನೆರೆ ಬಂದುದು ಕೊಂಗ ಕಳಿಂಗ ವಂಗ ಬಂ ।
ಗಾಳ ಮತಂಗ ವೂಳವ ವರಾಳ ತೆಲುಂಗ ತುರುಷ್ಕ ಗೌಳ ವೇ ॥
ಪಾಳ ಸುರಾಷ್ಟ್ರ ಬದ್ಧಹರ ಬರ್ಬರ ಘುರ್ಜರ ಪಾರಿಯಾತ್ರ ಪಾಂ ।
ಚಾಳವಿವಾದಿಯಾದಖಿಳದೇಶದ ಭೂಸುರ ಭೂಮಿಪನ್ರಜಂ ॥೦೧೫॥

ಸೊಗಯಿಪ ರೂಪಮಂತೆ ಗಡ ನೋಡುವೆವೆಂದು ಕೆಲಂಬರಾಕುವೂ ।
ರಿಗೆ ನಿಜಮೂರ್ತಿಶೋಭೆಯನೆ ತೋಱುವೆವೆಂದು ಕೆಲಂಬರೀಧರಿ ॥
ತ್ರಿಗೆ ಪೊಸತೀಸ್ವಯಂವರಮನೀಕ್ಷಿಪೆವೆಂದು ಕೆಲಂಬರಿಂತು ನೆ ।
ಟ್ಟಗೆ ನೆಱಿ ಬಂದುದಾಕ್ಷಣದೆ ಖೇಚರಭೂಚರಭೂವರೋತ್ಕರಂ ॥೨೧೬॥

ಸುರುಚಿರಶೋಭೆವೆತ್ತು ನೆಱಿದಾಕ್ಷಣದಿಂದಮೆ ಬಂದ ಖೇಚರೇ ।
ಶ್ವರರನಿಳಾವರೇಶ್ವರರನಾದರಿಸುತ್ತಮೆ ಬಂದ ತತ್ಸ್ವಯಂ ॥
ವರಮಣಿಮಂಡಪಾಂತರದೊಳಂತನಿತಕ್ಕುಜೆತಾಸನಂಗಳಂ ।
ನಿರವಿಸಿ ಬೇಱಿವೇಱಿ ಮಿಗೆ ವನ್ನಿಸಿದಂ ಪುರುವಂಶವಲ್ಲಭಂ ॥೨೧೭॥

ಇದು ದಲ್ ಸ್ವಯಂವರಮುಹೂ ।
ರ್ತದ ಪೊೞ್ತಿನುತುಂ ಮುಹೂರ್ತಿಕಂ ಬಿನ್ನವಿಸಲ್ ॥
ಮುದದಿಂದಾವುಹಿಪತಿ ಪೊ ।
ಯ್ದಿನದಗ್ಗದ ಮಂಗಳಾನಕಂಗಳನಾಗಳ್ ॥೨೧೮॥

ವ॥ ಅದಂ ಕೇಳ್ದು ಕುಲಾಂಗನೆಯರ್ ಕುಮಾರಿಗೆ ಮಂಗಳಾಭಿಷ
ವಣಮನುಜ್ಜಗಿಸಿ,

ಸಲೆ ಪರಿಮಳಕ್ಕೆ ಸುೞಿಗೊ ।
ಳ್ವಳಕುಳವಮಂ ಕರದೆ ಸೋವುತುಂ ಪೊಸಪೊಂಬ ॥
ಟ್ಟಲೊಳೆಱಿದು ಸುರಭಿತೈಲವು ।
ನಲಘುಸ್ತನವತಿಯರಿಂತು ತಂದರ್ ಮುದದಿಂ ॥೨೧೯॥

ಭರತಕುಚಂ ಕದಕ್ಕದಿಸೆ ನರ್ತಿಸೆ ತೋಳ್ ತೊನೆದಾಡೆ ಹಾರವ ।
ಲ್ಲರಿ ನಡು ಬಳ್ಕೆ ಕಂಪಿಸೆ ನಿತಂಬ[ಯುಗಂ] ಪೊಸಮುತ್ತಿನೋಲೆ ಬಿ ॥
ತ್ತರಿಪ ಕಪೋಲದೊಳ್ ಪೊಳೆಯೆ ಪಾಣಿನಖದ್ಯುತಿ ನೀಳ್ದ ಮಿಂಚೆ ಸೌಂ ।
ದರಿಗೆ ಸಮಂತು ನೆಯ್ಯನೊಸೆದೇಱಿಸಿದರ್ ಕುಲಕಾಮಿನೀಜನಂ ॥೨೨೦॥

ಸ್ತನಮುಂ ಮೇಲ್ವೆಱಗಿಂದಮರ್ದಿ ನಿಱಿಯುಂ ತತ್ಕಾಂಚಿಯೊಳ್ ಸೆರ್ಕಿಪೂ।
ವಿನ ಭಾರಕ್ಕೆಱಿವಾಬಲಿಲ್ಮಡಿಯನೆಲ್ಲಂ ಚೊಲ್ಲೆಯಂಗೆಯ್ದು ಮು ॥
ತ್ತಿನ ಹಾರಂಗಳನುತ್ಕುಚಾಂಶುಕದ ರಂಧ್ರಸ್ಥಾನದೊಳ್ ಸಾರ್ಚಿ ಕಾ ।
ಮಿನಿಯರ್ ಕಣ್ಗೊಳಪಾಕುಮಾರಿಯ ಕೆಲಕ್ಕೇೞಂದು ನಿಂದೊಪ್ಪಿದರ್ ॥

ಸದಮಳಶೋಭೆವೆತ್ತ ಸುರಸಿಂಧುವ ಗಂಧವುಯೋಷ್ಣವಾರಿ ತೀ ।
ವಿದ ವಿಮಲೇಂದುಕಾಂತಕಲಶಂಗಳನಾಕರಪಲ್ಲವಾಂಶುಸಂ ॥
ಗದೆ ನೆಱಿ ಶೋಣರತ್ನಕಲಶಂಗಳವೆಂಬಭಿಶಂಕೆಯಂ ಮನ ।
ಕ್ಕೊದವಿಸುತಿರ್ದರಿಂತು ನೃಪನಂದನೆಯಿರ್ಕೆಲದೊಳ್ ಲತಾಂಗಿಯರ್ ॥

ತಲೆಮಿಕ್ಕು ಪಾಯ್ವ ಲಾವ ।
ಣ್ಯಲಸತ್ಪೀಯೂಷಪೂರವೆನೆ ಸುರಿದುದು ತ ॥
ಲ್ಲಲನಾಜನಮನುರನದೀ ।
ಸಲಿಲಮನವನೀಶಸುತೆಯು ಶೀರ್ಷಾಂಬುಜದೊಳ್ ॥೦೨೩॥

ಹಿಮರುಚಿಕಳೆಗಭಿಷವಮುಂ ।
ಸಮುಂತು ಮಾಱಿಂದುಕಾಂತಪುತ್ರಿಕೆಗಳನಾ ॥
ದಮೆ ನೆನೆಯಿಸಿತ್ತು ಮೆಸೆದರ್ ।
ಬಿಮರ್ನಿಗಳ್* ತುಱುಗಿದಾವಧೂಜನವೊಗಳ್ ॥೦೨೪॥

ಅತನುವ ಮಧ್ಯಮಾಸ್ತ್ರನುನೆ ಚೆಂಬೊಗರೇಱಿಸಲೆಂದು ಮುಂತ್ರದೇ ।
ವತೆಯರತಿಪ್ರಮೋದದಿನದಂ ತೊಳೆವಂತೆ ಸುರೂಪಮೋಹನಾ ॥
ನ್ವಿತೆಯೆನಿಪಾನರೇಂದ್ರಸುತೆಗಿಂತಭಿಷೇಕಮನೊಲ್ದು ಮಾಡಿದರ್ ।
ವಿತತಮುರುತ್ತರಂಗಿಣಿಯು ಮಂಗಳವಾರಿಯನಂಗನಾಜನಂ ॥೦೨೫॥

ನವಸುಧೆಯಿಂ ಕ್ಷಾಲಿಸುವಿಂ ।
ದುವ ಕಳೆಯಂತಿರ್ದ ತರುಣಿಯಂ ಕೈಗೊಟ್ಟಾ ॥
ಯುವತೀವ್ರಜವೊಡಗೊಂಡು ।
ತ್ಸವದಿಂ ಪೊಕ್ಕುದು ವಿಚಿತ್ರಭೂಷಾಗೃಹಮುಂ ॥೦೨೬॥

ಭೂಷಣವಸನಂಗಳ ಮುಂ ।
ಜೂಷೆಗಳಂ ತೆಗೆದುಕೊಂಡು ಸುದತಿಯರಂತಾ ॥
ಭೂಷಣವಸನಾವಳಿಯಿಂ ।
ಭೂಷಿಸಲೆಂದಾತ್ರಿಪಿಷ್ಟನೃಪನಂದನೆಯಂ ॥೦೨೭॥

ಉಡಿಸುವ ತುಡಿಸುವ ತೊಡುವುಡು ।
ವೊಡೆ ಸಮುಚಿತಭೂಷಣೋಜ್ವಲದ್ಯುತಿಯುಮುಂ ॥

ತಡೆಯದೆ ತಮತಮಗನಿತುಂ ।
ಪಡೆದುದು ಸುದತಿಯ ಸವಾಜಂವುಂತಾಪದದೊಳ್ ॥೨೦೪॥

ತೊಳಗುವ ಸಾಂದ್ರಚಂದ್ರಿಕೆಯ ಕರ್ದಮವೊಯ್ತೆನೆ ಕಣ್ಗೆವಂದ ಸ ।
ನ್ಮಳಯಜಗಂಧಮಂ ಮಿಸುಪ ಮುತ್ತಿನ ಸಿಪ್ಪಿನೊಳೊಪ್ಪೆ ತಂದು ಕೋ ॥
ಮಳಿಯವಳೊರ್ವಳಾಗಳನುಲೇಪನಮಂ ನಯದಿಂದೆ ವಾಡಿದಳ್ ।
ತಳತಳಿಸುತ್ತು ಮಿರ್ಪ ಪುರುರಾಜತನೂಜೆಯ ಮಂಗಳಾಂಗದೊಳ್ ॥೨೦೫॥

ಮಿಱುಪಮಿತಾಂಕುವ ಕಳೆಯೊಳ್ ।
ಪೊಱವೊರೆಯಂ ಕಳೆದು ತಿರುಳ ಪೊರೆಯೆತ್ತಿದವೋಲ್ ॥
ನೆಱಿ ಮಿಸುಗುವ ದುಗುಲಮನೊ ।
ಳ್ಪಿಱಿವಿಡಿದಂಗನೆಗೆ ತಂದು ನೀಡಿದಳೊರ್ವಳ್ ॥೨೦೬॥

ಮಡದಿಯುಡಿಗರುಣರುಚಿಯುಂ ।
ಪಡೆವಂದದಿನಲ್ತು ಜತುರಸಕ್ಕರುಣತೆಯುಂ ॥
ಪಡೆವಂದವಪ್ಪುದೆನೆ ಕೇ ।
ಸಡಿಯೊಳಲಕ್ತದ ರಸಮನೂಡಿದಳೊರ್ವಳ್ ॥೨೦೭॥

ಭಂಗಿಪೊಡೆವೊಗೆದು ಸೂಸುವ ।
ಶೃಂಗಾರರಸಕ್ಕೆ ಸೇತುಗಟ್ಟುವವೋಲ್ ಜೆ ॥
ತ್ತಂಗೊಳಪ ರತ್ನಕಾಂಚಿಯ ।
ನಂಗನೆಯ ನಿತಂಬದೊಳ್ ತೊಡರ್ಚಿದಳೊರ್ವಳ್ ॥೨೦೮॥

..... ।
.....ತೆಱದಿಂ ನವಮೌಕ್ತಿಕದಿಂ ॥
ನೆಱಿ ಮಿಸುಪ ನೂಪುರಂಗಳ ।
ನೆಱಕದಿನಾಮಡದಿಯುಡಿಗೆ ತುಡಿಸಿದಳೊರ್ವಳ್ ॥೨೦೯॥

ಗುರುಕುಚಗಿರಿವಳ್ಗೆ ನಿ ।
ರ್ಝರಧಾರೆಯನೊದವಿಪವಲಕ್ಷ್ಮಿಯವೋಲ್ ವಿ ॥
ಸ್ಫುರಿತಪಯೋಧರೆ ತನ್ಸಂ ।
ದರಿಗಿಕ್ಕಿದಳಮಳಪೃಥುಳಹಾರಮನೊರ್ವಳ್ ॥೨೧೪॥

ಸ್ಥಿರಮದು ನಿನ್ನ ನಿನ್ನಧಿಪನಾದ ನರೇಂದ್ರನ ಕೂರ್ಮೆಯೆಂದು ಸೌಂ ।
ದರಿ ಪದೆಪಿಂದದಂ ಕುಸುಮಕಾಂಡನ ನೇಮದೊಳಲ್ಲಿ ಶಾಸನಂ ॥
ಒರೆದಪನೆಂಬಿನಂ ಮೃಗಮದೋತ್ಕರಗರ್ದಮದಿಂದವಾತನೂ ।
ದರಿಯು ಕುಚಂಗಳೊಳ್ ನಯದೆ ಚಿತ್ರಿಸಿದಳ್ ವರಪತ್ರಭಂಗಮಂ ॥೦೩೫॥

ಸುರಿಗುವೊ ಲಾವಣ್ಯರಸಂ ।
ಕರನಖರುಚಿವಿಷದಿನೆಂದು ಮುದ್ರಿಪ ತೆಱದಿಂ ॥
ತರುಣಿಯರೆಬೆರಲೊಳಕ್ಕಿದ ।
ಳರುಣಾಧರೆ ಮಣಿಮಯಾಂಗುಳೀತತಿಯಿಂದಂ ॥೦೩೬॥

ನಳತೋಳ ನುಣ್ಪಿಳಗು ಜಗು ।
ಟ್ಟಿದಿದು ಕಡಲ್ವರಿಗುಮೆಂದಮುಳ್ಗಟ್ಟಿಯನಿ ॥
ಟ್ಟಳೆನಲ್ಕೆ ಮೌಕ್ತಿಕದ ಕರ ।
ವಳಯಂಗಳನಬಲೆಗಿಂತು ತುಡಿಸಿದಳೊರ್ವಳ್ ॥೦೩೭॥

ಗಳರೇಖಾನೀಕದ ಪ ।
ಜ್ಜಳಕೆಗೆ ಪಡಿಯಿಟ್ಟು ನೋಲ್ಪಿವೋಲ್ ಕಟ್ಟಿದಳಾ ॥
ಜಳಜಾಕ್ಷಿಯ ಕೊರಲೊಳ್ ನಿ ।
ರ್ಮಳಮುಕ್ತಾವಳಯ ಪಂಚಸರಮನದೊರ್ವಳ್ ॥೦೩೮॥

ಸೊಗಯಿಸುವ ವದನವಿಧುವಂ ।
ತ್ರಿಗುಣಿಪಳೆಂಬಂತೆ ವಿಮಳರುಗ್ಮಾಲೆಗೆ ಶಾ ॥
ಲೆಗಳೆನಿಪ ಮುತ್ತ ಸರದೋ ।
ಲೆಗಳನಲಂಕರಿಸಿದಳ್ ತನೂದರಿಗೊರ್ವಳ್ ॥೦೩೯॥

ಲೋಕತ್ರಿತಯದ ವನಿತಾ ।
ಲೋಕವಿತಾನಕ್ಕೆ ತಾನೆ ಮೂಕುತಿಯೆನಿಪಾ ॥
ಆಕಮನೀಯಕುಮಾರಿಗೆ ।
ಮೂಕುತಿಯಂ ತಂದು ತಡೆಯದಿಕ್ಕಿದಳೊರ್ವಳ್ ॥೦೪೦॥

ಮನಸಿಜನ ಕೆಯ್ಯ ಕೂರಲ ।
ಗಿನ ಧಾರೆಗೆ ಗರಳದಾಂಕೆಗೆಯ್ವಂತೊರ್ವಳ್ ।

ವನಿತೆ ಕುವಮಾರಿಯು ಚಳಲೋ ।
ಚನದೆವೆಗಳನಂಜನಾಂಶುವಿಂ ರಂಜಿಸಿದಳ್ ॥೭೮॥

ಲಲನಾಜನಕ್ಕೆ ತಾನೀ ।
ಲಲನೆ ದಿಟಂ ತಿಲಕಮೆಂದು ವರ್ಣಿಸುತೊಲವಿಂ ॥
ತಿಲಕಿಸುವ ತೆಱದಿನೊರ್ವಳ್ ।
ತಿಲಕವನಿಟ್ಟಳ್ ತನೂದರಿಯು ಪೆಱಸಿನೊಸಲೊಳ್ ॥೭೯॥

ಸುದತಿಯು ಮುಖಾಬ್ಜಮದು ಲೋ ।
ಭದೆ ಪಣೆಗೊಂಡಿರ್ಪ ಪರಮೆವಱಿಗಳವೆನೆ ನು ॥
ಣ್ಪೊದವಿದಳಕಾಳಗಿಕ್ಕಿದ ।
ಳದೊರ್ವಳಾಚೆನ್ನ ಚೆನ್ನಪೂಗಳನಾಗಳ್ ॥೭೮॥

ಲಲನೆಯವಳ್ವೃಥಾ ಮದನಬಾಣನಿಕಾಯಮನೀಳ್ದುಕೊಂಡಳೆಂ ।
ದುಲಿಯುತೆ ಬರ್ಪವೊಲ್ ಪರಿಮಳಕ್ಕೆ ಝಣತ್ಕರಿಸುತ್ತೆ ತುಂಬಿವಿಂ ॥
ಡಿಱಿತರೆ ಸೋವುತುಂ ಸುದತಿಯೊರ್ವಳ ಪೂರ್ವನವಪ್ರಸೂನಸಂ ।
ಕುಳವನೆ ತಂದಲಂಕರಿಸಿದಳ್ ಕಬರೀಭರದೊಳ್ ಕುವಮಾರಿಯು ॥೭೪॥

ಪ್ರತಿ ತನಗಿಲ್ಲ ಸಲ್ಲಲಿತರೂಪದಿನೀತ್ರಿಜಗಂಗಳಂಗನಾ ।
ತತಿಯೊಳಗೊಂದೆ ತಾಂ ಪ್ರತಿ ನಿಜಪ್ರತಿಮಾನಮೆನುತ್ತುಮಂತದಂ ॥
ನಿತಕರನೊಲ್ದ ತೋರ್ಪ ಬಗೆಯಿಂ ಮುಕುರಾಕೃತಿಯಾದವೊಲ್ ಬೆಳ ।
ರ್ಪತಿಶಯಮುಳ್ಪ ದರ್ಪಣಮನಂಗನೆಗೊರ್ವಳೆ ತಂದು ತೋಱಿದಳ್ ॥೭೫॥

ವರಶೃಂಗಾರಕಳಾಧಿದೇವತೆಯೊ ಲಾವಣ್ಯಾಮೃತಾಪಾರಸಾ ।
ಗರದೊಳ್ ಪುಟ್ಟಿದಪೂರ್ವಲಕ್ಷ್ಮಿಯೊ ಜಗನ್ನೇತ್ರಾಂಬುಜಾಕೃಷ್ಟಿಗೆ ॥
ಯ್ದು ರವಾದೇವಿಯೊ ಕಂತುರಾಜನ ಜಯಶ್ರೀಕಾಂತೆಯೋ ತಾನೆನಲ್ ।
ಧರಣೀಕಾಂತಕುವಮಾರಿ ಕಣ್ಗೊಳಿಸಿದಳ್ ಸಾಶ್ಚರ್ಯಸೌಂದರ್ಯದಿಂ ॥

ವ॥ ಆಗಳಕ್ಕರ್ಕೀರ್ತಿ ಖಚರೇಂದ್ರನಂ ತಂದು ಸಮುಚಿತಾಸನಾಸೀನನಂ ಮಾಡಿ

ಪಿರಿದಾನುಂ ಪ್ರಿಯದಿಂದವಾವಿಜಯನುಂ ತತ್ಪಾದನೋರ್ವೀಶನುಂ ।
ವರಮಂತ್ರೀಶ್ವರಮಿತ್ರಗೋತ್ರಯುತರುಂ ತಾವಾಗಳೇಟ್ಟಿಂದು ಬಿ ॥

ತ್ತರಿಸುತ್ತಂಗ ತದೀಯವೇದಿಕೆಯು ಶೀರ್ಷಾಸೀಸರಾಗಿರ್ದರ ।
ಚ್ಚರಿವೆತ್ತಾ ವರರಾಜಲೋಕವನುದಂ ನೋಡುತ್ತುಮಾರೂಢಿಯಿಂ ॥೨೪೩॥

ವ॥ ಆಪೌದನನೃಪನಿಯುಮುದೆ ದೌವಾರಿಕಂ ನೈಪಥ್ಯನಿವಾಸಮುಂ ಪೊಕ್ಕು ಜ್ಯೋತಿಃಪ್ರಭಾದೇವಿಗಿಂತೆಂದಂ:—

ಭವದಾಲೋಕನಹೃತ್ಕುತೂಹಳನೃಪಾನೀಕಾಂಬಕಾಂಭಶ್ಚರೋ ।
ತ್ಸವಮಂ ನಿನ್ನಯ ರೂಪವಿಭ್ರಮಪಯಃಪುಣ್ಯಾಬ್ಧಿಯಂ ಮಾಟ್ಪುದ ॥
ಕ್ಕವನೀಶಂ ಬರವೇಟ್ಟಿಸಿಂಗಳೊಲವಿಂ ಜ್ಯೋತಿಃಪ್ರಭಾದೇವಿಯೆಂ ।
ದು ವಚಃಪ್ರೌಢಿಯಸಿಂತು ಬಿನ್ನವಿಸಿದಂ ದೌವಾರಿಕಂ ರಾಗದಿಂ ॥೨೪೪॥

ತೆರೆಮಸಗಿದ ಶೃಂಗಾರೋ ।
ತ್ಕರಶರಧಿಯೆನಲ್ಕೆ ಸರಿನೃತಾಂಗನೆಯರ ನೂ ॥
ಪುರಳುಂಕೃತಿರುತಿ ಪೊಣ್ಮಾ ।
ತ್ತಿರೆ ಪೊಱವುಟ್ಟಳ್ ಕುಮಾರಿ ಭೂಷಣಗೃಹದಿಂ ॥೨೪೫॥

ತಾರಾನಳವೆರಸಿಂದುಕ ।
ಳಾರಮೆ ಬರ್ಪಂದದೊಂನೆ ಜ್ಯೋತಿಃಪ್ರಭೆ ಕೈಂ ॥
ಗಾರಂ ಪ್ರಜ್ವಲಿಸುವ ಪರಿ ।
ವಾರಾಂಗನೆಯರ ವಿಲಾಸದಿಂ ಕಣ್ಗೆಸೆವಳ್ ॥೨೪೬॥

ಪಡೆದ ಕಡುನೋಹದಿಂ ಬಿಡ ।
ದೊಡನಿರ್ದಂ ಸಿರಿಯನಾತಪತ್ರಚ್ಛಲದಿಂ ॥
ಗಡ ಪುಂಡರೀಕಮೆನೆ ಚೆ ।
ಲ್ವೊಡರಿಸಿತಂಗನೆಗೆ ಪಿಡಿದ ಧವಳಚ್ಛತ್ರಂ ॥೨೪೭॥

ವರಶೃಂಗಾರಪ್ರಭೆ ದೆಸೆ ।
ವರಿದಪುದೆನೆ ಭಂಗಿ ಪಡೆದು ಮುಡಿಗಳ ಪುಡಿಗ ॥
ತ್ತುರಿ ಪರೆದೇಟಿಂ ಕುಮಾರಿಗೆ ।
ತರುಣೀಜನಮಿಕ್ಕುವನುಲಚವುರಜದೆಲರಿಂ ॥೨೪೮॥

ಸ್ಮರಚಾಪಜ್ಯಾರವಂ ನೂಪುರಮೃದುರುತಿಯೊಳ್ ಕೂಡಿ ಕೊವ್ವೇಳ್ಕಿ ಲೋಲೇ ತರಲೀಲಾಪಾಂಗರುಗ್ಮಾಲೆಯಿನಲರ್ಗಣೆ ಕೂರ್ಪೇಳ್ಕಿ ಸೌಂದರ್ಯಸಾರೋ ॥ ತ್ಕರದಿಂ ಕಂದರ್ಪರಾಜೋನ್ಮದನೊದವಿ ಪೊಡವೇಳ್ಕಿ

ಬಂದೇಱಿದಳ್ ಸೌಂ । ದರದಿಂ ಜ್ಯೋತಿಃಪ್ರಭಾಭಾಮಿನಿ ರಥಮನಣಂ
ಪೊಣ್ಮೆ ವಾದಿತ್ರನಾದಂ ॥೬೫॥

ಪರಿವೃತಕನ್ಯಕಾಜನದ ನೂಪುರಜಾಳಝಣತ್ಕೃತಿಸ್ವರಂ ।
ಸರಭಸದಿಂ ಧರಾತಳಮನುಗ್ಘಡಿಸುತ್ತುಮುದಗ್ರಭಂಗಿ ಬಿ ॥
ತ್ತರಿಸುವ ಚಾವುರೀಕುಳದ ಕಂಕಣಝಂಕೃತಿ ನೀಳ್ದ ಸಾಱುತುಂ ।
ಬರೆ ಬರುತಿರ್ದನೃಪಕುಮಾರಿ ಮನೋಜವಿಶಾಲಲೀಲೆಯಿಂ ॥೬೬॥

ವ॥ ಇಂತು ಬಂದು ಸ್ವಯಂವರನಿವಾಸಭಾಸುರಮುಖದ್ವಾರಧಾರಿ
ಣಿಯಲ್ಲಿ ಮನ್ಮಥಮನೋರಥಮೆನಿಪ ರಥಮನಿಱಿದಾಗಳ್—

ಕಳಭೃಂಗೀಮಂಗಳೋದ್ಯತ್ಪಟಹಪಟಳಮುಂ ಪೊಯ್ಸುತುಂ ಚಾಪಳಾಪಾಂ।
ಗಳಸನ್ನಿಸ್ತ್ರಿಂಶಪುಷ್ಪಾಸ್ತ್ರಮನೆ ತಿರುಪುತುಂ ಭೂಧನುರ್ದಂಡಲೀಲಾ ॥
ವಳನಂಗೆಯ್ಯುತ್ತುಮಂಗೋದ್ಭವನೊಡವರೆ ಜ್ಯೋತಿಃಪ್ರಭಾದೇವಿಬಂದಳ್,
ಬಳಸಿರ್ದಾರಾಜಲೋಕಪ್ರಕರಶರನಿಧಿಕ್ಷೋಭಮುಂ ಪುಟ್ಟಿಸುತ್ತುಂ ॥

ಬರುತಿರ್ದಪ್ಪಿಳಿಯರ್ ತಾಂ ನೃಪಸುತೆ ಪದೆಪಿಂದಾವನಂನೋಲ್ಪಿಳೋಚೆ।
ಚ್ಚರದಿಂದಾವಂಗಪಾಂಗಪ್ರಭೆಯನೆಸೆವಳೋ ತಂದು ಪೂಮಾಲೆಯುಂ ಸಾ ॥
ದರದಿಂದಾವಂಗೆ ತಾನಿಕ್ಕುವಳೊ ತಡೆಯುದಿಂದಿಂತು ತಳ್ಕಂಕದಿಂದೊಂ ।
ದಿರುತಿರ್ದಂತೇಯೆ ವೀಕ್ಷ್ಯಾತುರಮಯನಯನಾನೀಕಮಾರಾಜಲೋಕಂ ॥

ಎಳಮಿಂಚಂ ಸುತ್ತಿ ಸೂಸುತ್ತಿರೆ ತರದೆ ತಳಾಪಾಂಗಮಂಗಪ್ರದೇಶಾ ।
ವಳಿ ಲಾವಣ್ಯಾಂಶುವಂ ಸಲ್ವರಿಯಿಸೆ ನಭರುಗ್ಮಾಳೆ ಪುಷ್ಪೋಪಹಾರಂ ॥
ಗಳ ಚೆಲ್ವಂ ಬೀಱಿ ಮುಂಜೀರದ ಕಳರುತಿ ಕಾಂಚೀಮಿಳತ್ಕಿಂಕಿಣೀಸಂ ।
ಕುಳನಾದಂ ಪೊಣ್ಮೆ ಜ್ಯೋತಿಃಪ್ರಭೆ ಪರಿಣಯನಾಗಾರಮಂ ಪೊಕ್ಕಳಾಗಳ್॥

ಮನದನುರಾಗಮುರ್ಕಿ ತವಕಂ ತಲೆಮಿಕ್ಕು ಸಿಮಿರ್ಕೆವಾಯ್ದು ನೋ ।
ಟ್ಪಿನುಪಮರಾಜಲೋಕನಯನಪ್ರಭೆಯಂ ಪ್ರತಿಬಿಂಬದಿಂ ಮನೋ ॥
ಜನೆ ನವನೀಳನೀರಜದಳಾವಳಿಯಿಂ ನೆರೆ ಪೂಜೆಗೆಯ್ದು ವೋ ।
ಹನಕರಲಕ್ಷ್ಮಿಯಂತೆ ನೃಪನಂದನೆ ವೋಪಿಸುತಾದವೊಪ್ಪಿದಳ್ ॥೬೪॥

ಅನಿತಿಂದ್ರಿಯಂಗಳುಂ ಲೋ ।
ಚನಮುದೆ ಸಾರ್ದಂತೆ ಪಾರ್ದು ನೋಡುವ ನೃಪನಂ ॥

ದನರಂದನಿಮಿಷರಾಗಿರ್ದ ।

ತ್ತೆನೆ ಜ್ಯೋತಿಃಪ್ರಭೆಯು ರೂಪವೆನೆಚ್ಚರಿಯೋ ॥೬೫॥

ಆಗಳ್ ಜ್ಯೋತಿಃಪ್ರಭೆಯನು ।

ರಾಗದೆ ನಡೆತಂದು ಜನಕರಂಘ್ರಿನಖಂಗ

ಳ್ಗಾಗೆಸೆದಳಿಸೆವ ಪೊಳಿಪಂ ।

ಬ್ಗೇಗದಿನಮಳಾನನೇಂದುಚಂದ್ರಿಕೆಯಿಂದಂ ॥೬೬॥

ಅಂತು ವಿನಯವಿನಮಿತೆಯಾದ ತನೂಜೆಯುಂ ವಿಜಯಾರ್ಧಪರ್ವತ ಮಹಾ ರಾಜರ್ ಪರಲಬ್ಧಪಾರ್ಥಿವ ಪುಂಗವಾನುಷಂಗೆಯಾಗೆಂದು ಪರಸಿ ಪುರೋ ಹಿತಕಂಚುಕಿಗಳಂ ಬಟಿಯೊಳ್ ನಿರವಿಸಿದಾಗಳ್:—

ಪರಿಮಳವಾಳಿಯುಂ ಭ್ರಮರಜಾಳವಿರಿಭ್ರಮವಾಳಿಯುಂ ಮನೋ ।

ಪರತರವಾಳಿಯುಂ ಮದನವೋಹನಭಾಸುರಪಾಶವಾಳಿಯುಂ ॥

ಸುರುಜೆರಪುಪ್ಪವಾಳಿಯನದಂ ಚಪಲೇಕ್ಷಣೆ ಕಾಂತಿವಾಲೆ ಬಿ ।

ತ್ತರಿಸ ಕುವಾರಿಗಾಸದದೊಳೊರ್ವ ತನೂದರಿ ತಂದು ನೀಡಿದಳ್ ॥೬೬॥

ಆವನೀಪಾಲಕುವಾರಕ ।

ನವರವರನ್ವಯವುನಖಿಪಿ ರೂಪಕಳಾವೈ ॥

ಭವನಮುಂ ತೋಱುವ ಪದೆಪಿಂ

ದವೆ ಕಂಚುಕಿ ತಳರ್ದ*ನಾಕುವಾರಿಯು ಕೆಲದೊಳ್ ॥೬೬॥

ನವಕಾಟ್ಮಲವಿಚಕಿಳಸಿಚ ।

ಯವನೊಪ್ಪಿರೆ ಸೂಡುವೊಂದು ನೆವದಿಂದಂ ಪ ॥

ಲ್ಲವಮುಂ ಮೆಱಿವಾತನೆ ಪ ।

ಲ್ಲವನೃಪನ ಕುವಾರನೀಕ್ಷಿಸಬ್ಜದಳಾಕ್ಷೀ ॥೬೬॥

ಮಲಯಜನವಾನುಲೇಪನ ।

ವಿಲಾಸದಗ್ಗಲಿಸಿದಾಕುವಾರಕನಂತಾ ॥

ಮಲಯಾವನೀಶತನಯುಂ ।

ಗಳ ! ನೋಡೆಲೆ ಮಲಯಪವನನಿಶ್ವಸಿತಮುಖೀ ॥೬೬॥

ಮೃಗನಯನೆ ನೋಡ ನೀನಾ ।

ಸೊಗಯಿಪ ನಕ್ಷತ್ರವಾಲೆ ಪೊಳೆವಗಲ್ದುರದಿಂ ।

ಗಗನಮನೆ ಪೋಲ್ತು ಪಿರಿದುಂ ।
ನೆಗಟ್ತಿವಡೆದವನೆ ಪಾಂಡ್ಯನೃಪನ ಕುಮಾರಂ ॥೬೬॥

ಬಳಸಿದ ಪರಿಹಾಸಕಸಂ ।
ಕುಳವಾಗ್ಮಿಪದಿಂ ಮುಗುಳ್‌ನಗುತ್ತಡಿಗಡಿಗಾ ॥
ಕುಳಶನಿಭದಂತಪಙ್ತಿಯು ।
ಪೊಳಪಂ ಮೆಱೆವಾತನಂಧ್ರಭೂಪಕುಮಾರಂ ॥೬೬॥

ಅಂಗದ ಮುರಿಯೊಪ್ಪಿ ನವೀ ।
ನಾಂಗದಮುಂ ತಿರ್ದುವಂತೆ ನಿಜಭುಜಶಿಖರಾ ॥
ಗ್ರಂಗಳನೆ ತೋಱುವಾತಂ ।
ಬಂಗಾಳನೃಪಾಲನಂದನಂ ಚಂದ್ರಮುಖೀ ॥೬೬॥

ವನಜಾಕ್ಷೀ ನೋಡಿನಂ ಮಾಳವನೃಪಸುತನಾತಂ ಮತಂಗಾವಸೀಭೃ ।
ತ್ತನಯಂ ನೇಪಾಳಭೂಪಾಳಕಸುತನವನಾತಂ ಕಳಿಂಗಕ್ಷ್ಮಾಧೀ ॥
ಶನ ಪುತ್ರಂಮತ್ತಮಾತಂ ಮಗಧನೃಪಸುತಂಶರ್ವಣೋರ್ವೀವಣೋದ್ಭ ।
ತನವಂ ಬಾಸೀಕಭೂವಲ್ಲಭಸುತನವನಂಗಾಧಿನಾಥಪ್ರಸೂತಂ ॥೬೮॥

ಇಂತು ಭೂಚರಮಹೀಕುಮಾರರಂ ಕೂಡೆ ತೋಱುತ್ತುಂ ಅಲ್ಲಿಂ
ತಳರ್ದು ತದನಂತರದೊಳ್:—

ಶ್ರವಣಾಭರಣದ ನವರ ।
ತ್ನವಿತಾನಚ ಮಿಯನಂತುಮಿಂತುಂ ಸವೆ ನೋ ॥
ಡುವ ನೆವದಿನವನೆ ತವೆ ತೋ ।
ಱುವನಾತಂ ಮೇಘಪುರದ ಪದ್ಮರಥಾಖ್ಯಂ ॥೬೯॥

ಸುರುಚಿರಸುವೃತ್ತಶೋಭಾ ।
ಕರಪ್ರಕೋಷ್ಠದ್ವಯಾಂಗಳಂ ನೇವಳವುಂ ॥
ಕರದಿನಿರದೇಱಿನೂಂಕುವ ।
ಪರಿಯಂ ತೋರ್ಪವನೆ ಕನಕರಥಖಚರೇಂದ್ರಂ ॥೭೦॥

ಕನಕಕಿರೀಟಾಗ್ರದ ನೂ ।
ತನರತ್ನಮನದನೆ ಸಸಿನವೊತ್ತುವ ನೆವದಿಂ ॥

ತನತು ಭುಜಮೂಳವುಂ ಮೆಱಿ ।
ವನೆ ಜಿತ್ರಪುರೇಶನಪ್ಪರಿಂಜಯಖಚರಂ ॥೨೬೧॥
ತನುಮುಧ್ಯದ ಚೆಲ್ವಂ ನೆ ।
ಟ್ಟನೆ ನೆರೆ ತೋಱಲ್ ವಿಳಂಬಿಹಾರವುನದನೊ ॥
ಯ್ಯನೆ ನೆಗಪಿ ಬಿಡುತುವುಂತಿ ।
ರ್ಪನವಂ ತ್ರಿಪುರದ ವಿಜಿತ್ರರಥಖಚರೇಂದ್ರಂ ॥೨೬೨॥
ತರುಣೀಜನಮಿಕ್ಕುವ ಚಾ ।
ಮರದಗ್ರಮನೀಕ್ಷಿಪಂತೆ ಮೊಗವೆತ್ತಿ ಗಳೋ ॥
ದರರೇಖೆಗಳಂ ತೋರ್ಪನೆ ।
ನರನೀತಿಪುರೇಶನಪ್ಪ ಹರಿಕಂಪಾಖ್ಯಂ ॥೨೬೩॥
ಕೊನೆವೆರಲಿಂದಳಕಮನೊ ।
ಯ್ಯನೆ ಸಾರ್ಚುವ ನೆವದೆ ನೀಳವುಂ ನೆಱಿ ತೋರ್ಪಾ ॥
ತನೆ ಗಗನವಲ್ಲಭಪುರೇ ।
ಶನೆನಿಪ್ಪ ಸಿಂಹರಥವಿಯಚ್ಛರನಾಥಂ ॥೨೬೪॥
ಕಲವೀಣಾರುತಿಗೆನಸುಂ ।
ತಲೆದೂಗುವ ತೆಱದೆ ತನ್ನ ಮುಕುಟದ ಚೆಲ್ವಂ ॥
ಸಲೆ ಮೆಱಿವಾತಂ ತ್ರಿಪುರದ ।
ಲಲಿತಾಂಗದನೆಂಬ ಖೇಚರಂ ಲಲಿತಾಂಗೀ ॥೨೬೫॥
ವರಮಣಿಮುದ್ರಿಕೆ ಬಿಗಿದಂ ।
ತಿರೆ ತಿರಿಪುವನಡಿಬೆರಲ್ಗಳಂ ಮೆಱಿವಾಖೇ ॥
ಚರನೆ ಪವನಂಜಯುಂ ಕೆ ।
ನ್ನರನೀತಿಪುರಾಂಗನಾಸ್ಯಮಂಗಳತಿಳಕಂ ॥೨೬೬॥
ಎಲೆ ಜ್ಯೋತಿಃಪ್ರಭೆ ನೋಡುನೋಡು ಮದನಂ ಪ್ರತ್ಯಕ್ಷಸನ್ಮೂರ್ತಿಯುಂ ।
ಸಲೆ ತಾಳ್ದರ್ಪವೊಲಿರ್ದಪಂ ಸಕಲಲೋಕಾನೀಕವಕ್ತ್ರಕ್ಕವಂ ॥
ತಿಲಕಂ ರಾಜಿಸುವರ್ಕಕೀರ್ತಿಖಚರೇಂದ್ರಾಪತ್ಯನಾಜ್ಞಾಕಳಾ ।
ಕಳಿತಂ ನಿನ್ನಯ ಭಾವನಪ್ಪವಿಮತತೇಜಂ ಹೃದ್ಯವಿದ್ಯಾಧರಂ ॥೨೬೭॥

ಎನೆ ಕೇಳ್ದಾಪ್ತಸುವೃದ್ಧ ಕಂಚುಕಿಯು ಮಾತಂ ಮುನ್ನಮಾಕರ್ಣಿಗುಂ !
ಮನಮುಂ ಬೇಗದೊಳೆಯ್ದಿ ಬೆಂಬಟಿಯೊಳ್ ಮುಂ ಬೆರಗುಂ ತ (?) ॥
ಳನವಾಖೇಚರನಂದನಶ್ರವಣರಂಧ್ರಂಬೊಕ್ಕು ರೋಮಾಂಚನಮುಂ ।
ತನಗೀಯುತ್ತಿರೆ ತತ್ಕುಮಾರಿ ಕಳಹಂಸೀಯಾನೆ ತಾನೆಯ್ದಿದಳ್ ॥೨೪॥

ದರಹಾಸಶ್ರೀವಿಲಾಸಂ ವೊಗದೊಳೊಗೆಯೆ ಹರ್ಷಾಶ್ರುಲೋಲೇಕ್ಷಣಾಬ್ಜಾಂ ।
ತರದೊಳ್ ತಾನುಣ್ಮೆ.....ಹಂಸೀ ॥
ವರಲೀಲಾಯಾಸದೊಳ್‌ಮಾಂದ್ಯಮದೊದವೆನಿಜಸ್ವಾಂತದೊಳ್‌ಚಿತ್ತಭೂರಾ
ಗರಸಂ ಕೈಗಣ್ಮೆ ಜ್ಯೋತಿಃಪ್ರಭೆ ಖಚರಸುತೋಪಾಂತಿಕಕ್ಕಂತುಬಂದಳ್ ॥

ಸ್ಮರನಾತ್ಮೀಯಶರಕ್ಕಡುರ್ತು ಕರಮುಂ ತಾನಿಕ್ಕೆ ರಾಜನ್ಯಕೋ ।
ತ್ಕರಮೆಲ್ಲಂ ಮನಮಿಕ್ಕೆ ಬಂಧುಕುಲಮತ್ಯಾನಂದದಿಂದುರ್ಕೆ ಸೌಂ ॥
ದರಿ ಜ್ಯೋತಿಃಪ್ರಭೆಯಾಗಳಂತವಿತತೋಜಂಗಿಕ್ಕಿದಳ್ ಚೆಚ್ಚರಂ ।
ತರಳಾಪಾಂಗಮರೀಜಿನಾಲೆವೆರಸಾಪೂನಾಲೆಯಂ ಲೀಲೆಯಿಂ ॥೨೯॥

ಜಳಧಿಪ್ರಕ್ಷ್ವೇಭನುಂ ಮಂಗಳಪಟಹರವಂ ಪೊಣ್ಮೆ ಕೀಲ್ಮಾಡೆ ನೀಡುಂ।
ಸಲಿಯುಲ್ಮಾವಂಶಜರ್ ಮೇಲ್ ಪೆಱಗಿನ ಗುಡಿಯುಂ ಕೂಡೆತಟ್ಟಿತ್ತಿಹಸ್ತೋ॥
ಚ್ಚಲನವ್ಯಾಕೀರ್ಣದಿಂ ಕಂಕಣಗಣಮುಲಿಯುಲ್ ನರ್ತಿಸುತ್ತಿರ್ದುದೆತ್ತಂ ।
ಕುಲಕಾಂತಾನೀಕಮೋರಂತೊಸಗೆ ಮಸಗಿ ಸೌರಂಭಗಂಭೀರದಿಂದಂ॥೩೦॥

ಪರಪುವ ಪೂವಲಿ ಸೂಸುವ ।
ಸುರುಚಿರಕರ್ಪೂರಪಾಂಸುಪಿಷ್ಟಾತಕಮಾ ॥
ವರಿಸುವ ಭೃಂಗೀಗಣಮುಂ ।
ಕರಣಂ ಕರಮೆಸೆದುದಸದಳಂ ತತ್ಪುರದೊಳ್ ॥೩೧॥

ನಮಗಿಂದು ನೆನೆದಭೀಷ್ಟಂ ।
ಸಮನಿಸಿತೆಂದಿಂತು ಚಕ್ರಧರನುಂ ಖಚರೋ ॥
ತ್ತಮನರ್ಕಕೀರ್ತಿಯುಂ ನಿರು ।
ಪಮತರಪರಮಪ್ರಮೋದಮಾನಸರಾದರ್ ॥೩೨॥

ಪರಿಣಯನವೇದಿಕಾಶೇ ।
ಖರಪದಪಂಕರುಹರಾಗಿಸಲ್ಕೆಂದು ವಧೂ ॥

ವರರನೊಡಗೊಂಡು ಬಂದರ್ ।
ಪುರೋಹಿತವರೋಪದಿಷ್ಟದಿಂ ಕುಲವೃದ್ಧರ್ ॥೮೪॥

ಜನಿತಾತೋದ್ಯರವಂ ಪಯೋದಪಥವುಂ ನೀಳ್ದೀಱಿ ವಂಕಾಭಿವೃ ।
ದ್ಧನಿಕಾಯೋತ್ತುಜತ್ತವಾರಿಜಕುಲಂ ನೀಱೀಱಿ ರೋವೋದ್ಗಮಂ ॥
ತನುವಂ ತಜ್ಜವದೇ*ಱಿ ತಾನವಿತತೇಜಂ ಬಂದ ಜ್ಯೋತಿಃಪ್ರಭಾಂ ।
ಗನೆಯುಂ ಕೈವಿಡಿದಾಗಳೇಱಿದನುದಗ್ರೋದ್ಯಾಹವೇದ್ಯಗ್ರಮಂ ॥೮೫॥

ಚರಣಾರುಣರುಚಿಯಿಂ ಸಿತ ।
ಕಿರಣಾಶ್ಮದ ಪಟ್ಟವಣೆಯಸಂತಾಕ್ಷಣದಿಂ ॥
ದರುಣಮುಮಾಗಿಸುತ್ತುಂ ।
ಕರಮಭಿರಾಜಿಸಿದರಾವಧೂವರರಾಗಳ್ ॥೮೬॥

ತನಗೆಸೆಯಲ್ ತತ್ಸಮುಮು ।
ಕ್ತನುಗತವಾಗಿರ್ಪ ಮುಂಗಳಾಳಂಕೃತಿಯಿಂ ॥
ದೆನಸುಮಳಂಕೃತಿಗೆಯ್ದುರ್ ।
ತನತನಗಾದಂ ವಧೂವರ್ಕಳನಾಗಳ್ ॥೮೭॥

ಸುರುಚಿರಪಂಚರತ್ನರುಚಿಗಳ್ ಪೊಳಪೊಣ್ಮುವ ಪುಣ್ಯವಾರಿಯಿಂ ।
ಭರಿತಮೆನಿಪ್ಪ ಪೊಂಗಳಸಮುಂ ಕುಡೆ ತಂದು ಪುರೋಹಿತಂ ಕರಾಂ ॥
ಬುರುಹದೊಳಾಗಳಿಂತು ತಳೆದುಂ ಕರಪಲ್ಲವಕಾಂತಿ ಪಲ್ಲವೋ ।
ತ್ಕರಮಯವಾಗೆ ಕಣ್ಗೊಳಿಸದಂ ನೃಪನಾವುಣಿವೇದಿಕಾಗ್ರದೊಳ್ ॥೮೮॥

ಪರಮಾನಂದಾಬ್ಧಿಫೇನಾಪಂ ಗಡವೆನೆ ಪೊಡೆಯಿಪ್ಪಾನಕಧ್ವಾನ ಮುಣ್ಮು ।
ತ್ತಿರೆ ವಿಪ್ರಾಶೀರ್ವಚಸ್ಸಂಚಯಮಧುರರವಂ ತೀವೆ ಯುಗ್ಮಾನ್ವಯೋದ್ಭೂ ॥
ತರ [ಚೇತೋರಾಗವಾಗಳ್] ನಿಮಿರಲಮಿತತೇಜಂಗೆ ಸಂಪ್ರೀತಿಯಿಂ ಹ ।
ರ್ಷರಸಂ ಕೈವಿಱಿ ಕೈನೀರೆಱಿದು ಸುತೆಯನಿತ್ತಂ ತ್ರಿಪಿಷ್ಟಾವನೀಶಂ ॥

ಮೊಳೆತ ಪುಳಕಾವಳೀಕು ।
ಟ್ಮಳಮಯ ಜ್ಯೋತಿಃಪ್ರಭಾಂಗಲತೆಗಾಗಳ್ ಕ ॥

ಣೊಳಪಾಶ್ರಯುವಮಾದಂ ನೃಪ ।
ನಿಳಂಪಧರಣೀಕನವಿತತೇಜಕುವಮಾರಂ ॥೦೯೦॥

ಬಲವರಿಸಿ ಯಾಗಕುಂಡ ।
ಸ್ಥಳಯಂ ಜಿನರಾಜಪದಪಯೋಜಕ್ಕೆನಸುಂ ॥
ನಲವಿಂ ಪೊಡೆವುಡಿಸಿದರಾ ।
ಕುಲವೃದ್ಧರ್ಕಳ್ ವಧೂವರರ್ಕಳನಾಗಳ್ ॥೦೯೧॥

ನೆಗಟ್ಟುರ್ವೀಚಕ್ರದುರ್ವೀಸುರಸಮಿತಿಯಿನೀರೆಂಟು ಭೇದೋಭಿದಾನಾ ।
ದಿಗಳಂ ತತ್ಪಾದನೋರ್ವೀಪತಿ ಬರಿಸಿ ಸುನರ್ಣಾಫುಮಂ ಸಾಲ್ವುದೆಂಬ ॥
ನ್ನೆಗವಿಸಾಯುತ್ತಿರ್ದನಿರ್ದಂದವನಱಿದೆಲೆ ಕೈನೀಡುಗುಂ ಕಾಂಚನಕ್ಕೆಂ ।
ದಗಿದಾಯುಕ್ಷ್ವಧಿಸಂಗೊಟ್ಟದಗಿದನವುರರಾ ಮೇಱುವಂ ಮೆಟ್ಟಿ ನಿಂದರ್ ॥

ಎರೆವರ್ಗಿಷ್ಟರ್ಗೆ ಶಿಷ್ಟರ್ಗಖಿಳಪರಿಜನಕ್ಕಾಪ್ತವರ್ಗಕ್ಕೆ ಮುಂತ್ರೀ ।
ಶ್ವರಸಂತಾನಕ್ಕೆ ಬಂಧುಪ್ರತತಿಗೆ ಪರಮಾಭೀಷ್ಟಮಪ್ಪುದ್ಧವಸೂ ॥
ತ್ಕರಮುಂ ಸಂತುಷ್ಟಿಯಪ್ಪಂತಿರೆ ಸಲೆ ಕುಡುತಿರ್ದಂ ತ್ರಿಪಿಷ್ಟಕ್ಷ್ಮಾಧೀ ।
ಶ್ವರನಾಕಲ್ಪದ್ರುಮಂ ಪಾಲ್ಗಡಲ ನಡುವೆ ಕೈವಂದುದೆಂಬಂದದಿಂದಂ॥೦೯೩॥

ನೆರೆದಿರ್ದಾಖೇಚರಭೂ ।
ಚರ ಭೂಪರ ಪವಣನಱಿದು ಪಾಗುಡತತಿಯುಂ ॥
ಪಿರಿದುಂ ಮನ್ನಣೆವೆರಸಾ ।
ತುರದಿಂ ಕೊಟ್ಟೆಯ್ದೆ ಕಳುಪಿದಂ ಕ್ಷಿತಿನಾಥಂ ॥೦೯೪॥

ನೆಗಟ್ದಿ* ವಿವಾಹಕ್ರಿಯೆಯಿಂ ।
ದ್ವಿಗುಣಂ ತ್ರಿಗುಣಂ ಚತುರ್ಗುಣಂ ಪಂಚಗುಣಂ ॥
ಮಿಗಿಲೆನೆ ಮಾಡಿದನರಸಂ ।
ಸೊಗಯಿಸ ಚಾತುರ್ಥದಿನದ ಸವನಕ್ರಿಯೆಯಂ ॥೦೯೫॥

ವ॥ ಇಂತು ನಿರ್ವರ್ತಿತವಿವಾಹಕಲ್ಯಾಣಕ್ರಿಯಾನೀಕನಾದ ಪೌದನ ಪುರಾಧಿಪತಿ ಬಲದೇವಾರ್ಕಕೀರ್ತಿ ಪ್ರಮುಖನಿಖಿಳಾತ್ಮೀಯರ್ವೆರಸು ಅನುರಾಗದಿಂ ನಿಜನೃಪನಿವಾಸವಿವೇಶಿತನಾಗಿ—

ಪರಿಲಬ್ಧಾಗಣ್ಯಪುಣ್ಯಪ್ರಚಯಾನುಪಚಿತಪ್ರಾಜ್ಯಸಾಮ್ರಾಜ್ಯರಾಗೋ ।
ತ್ಕರನುರ್ವೀಸರ್ವವಂದಿಸ್ತುತನಮಳನುದಾರಂ ಸುಚಾರುಕ್ರಿಯಾಳಂ ॥
ಕರಣಂ ವಿದ್ವಜ್ಜನೋದ್ವಂದಿತವಿವಿಧಕಲಾನೀಕನೇಪಥ್ಯನಿಂತೊ ।
ಪ್ಪಿರುತಿರ್ದಂ ವರ್ಧನೀಯಾತುಳವಿಶದಯಶಂ ಸೂಕ್ತಿಸಂದರ್ಭಗರ್ಭಂ ॥

— ಗದ್ಯಂ —

ಇದು ವಿನಮದಮರೇಂದ್ರಮೌಳಿಮಣಿಕಿರಣಮಾಳಾಪರಾಗಪರಿರಂಜಿತ ಚರಣ ಸರಸೀರುಹರಾಜಿತ ಪರಮಜಿನರಾಜಸಮಯ ಸಮುದಿತಸದಮಲಾಗಮಸುಧಾಶರಧಿ ಶರದಿಂದು ಶ್ರೀಮಾಘಣಂದಿಪಂಡಿತಮುನೀಶ್ವರ ಮನೋಜನಿತನಿರುಪಮದಯಾ ರಸಸರಸೀಸಂಭೂತಸಂಭವಾಮಳ ಸುಕವಿಕಮಲಭವ ವಿರಚಿತಮಪ್ಪ

ಶಾಂತೀಶ್ವರ ಪರಮಪುರಾಣದೊಳ್

ಅಮಿತತೇಜಕುಮಾರೋದಯವರ್ಣನಂ ಜ್ಯೋತಿಃಪ್ರಭಾ
ಸ್ವಯಂವರವರ್ಣನಂ,

ಚತುರ್ಥಾಶ್ವಾಸಂ.

ಪಂಚಮಾಶ್ವಾಸಂ

ಶ್ರೀವಿತರಣವಿಜಯಯಶೋ ।
ಮಾವಧುವರರುತ್ಕರಾಬ್ಜಭುಜವದನದೊಳಂ ॥
ತಾವಗಮಿರಲೆಸೆದಂ ಪ್ರ ।
ಜ್ಞಾವಿಭು ಜಿನಪತಿಪಯೋಜರಾಜಮುರಾಳಂ ॥೧॥

ಪ್ರತಿವಾಸರಪತಿಯುದಯಮು ।
[ಳತಿಕಯದಿಂ]ದರ್ಕಕೀರ್ತಿ ಖೇಚರಪತಿ ಸಂ ॥
ಯುತದಿಂ ತ್ರಿಪಿಷ್ಟಧರಣೀ ।
ಪತಿ ತಾನೋಲಗದೊಳಿರ್ದನಿರ್ದಾಪದದೊಳ್ ॥೨॥

ಕೃತಿ ಜಿನಪದಾಬ್ಜಪೂಜಾ ।
ತತಿಯಾಗೆ ಸುತಾರೆ ಗಂಧಶೇಷಾಕ್ಷತಮಂ ॥
ಪಿತೃಮಾತೃಗಳ್ಗೆ ಕುಡಲೆಂ ।
ದತಿಮುದದಿಂ ಬಂದಳತನುಗಜಗತಿಯಿಂದಂ ॥೩॥

ಮುದದಿಂ ಸುತಾರೆ ತಾ ನೀ ।
ಡಿದೊಡಾಗಳೆ ರಾಗವೊದವೆ ತಳೆದರ್ ಪುಣ್ಯ ॥
ಪ್ರದಮಪ್ಪ ಗಂಧಶೇಷೆಯ ।
ನುದಾತ್ತಮವರರ್ಕಕೀರ್ತಿಚಂದ್ರಧರರ್ಕಳ್ ॥೪॥

ವ॥ ಆಗಳಾಪೌರವನರೇಶ್ವರಂ ಸುತಾಂತಾದೇವಿಯುಂ ನೀಡುಂ ನೋಡಿ—

ಸೊಗಸಂ ರೂಪಿನ ಭಂಗಿ ಬೀಱಿ ನಿಡುಗಣ್ಗಳ್ ಚೆಲ್ಲಮುಂ ಚೆಲ್ಲೆ ಚೆಂ ।
ಬೊಗರಂ ತೋಳ್ವೊದಲ್ ತುಜುಂಕೆ ನಱುಸುಯ್ಯಂ ನುಣ್ಮೊಗಂ ಸೂಸೆನು॥
ಣ್ಪಿಗಳಂ ಪುರ್ವುಗಳೀಯೆ ತುಂಬಿಗುರುಳಂ ಕರ್ಪೆಯ್ದೆ ನೇರ್ಪಾಗೆ ಕಂ ।
ತುಗೆ ಕಾಯ್ದುಂ ನವಯೌವನಂ ಕುಡೆ ಸುತಾರಾದೇವಿ ಕಣ್ಗೊಪ್ಪಿದಳ್ ॥೫॥

ಕಡೆಗಣ್ಮುಕ್ತಾವತಂಸಾಂಕುಗೆಕುಡಿಕಡುಗೊರ್ದಂಪುನೋರುಸ್ತನಂಗಳ್।
ಪಡೆಯಲ್ಕಾಸ್ಯೇಂದುವಿಂಗುನ್ಮಖತೆಯುನವಳಾಂಗಂ ಲತಾಭಂಗಿಯುಂ ಮುಂ ॥
ದಿಡೆ ನುಣ್ದೊಂಗಳ್ಗಳ್ ಶಿರೀಷಪ್ರಸವದೆಸಕಮಂ ಬೀಱಿ ಭೂಕಾಂತೆಗಾಕೇ ।
ಸಡಿ ರಾಗಶ್ರೀಯನೀಯುತ್ತಿರೆ ಖಚರತನೂಜಾತೆ ಕಣ್ಗಿಷ್ಟಮಾದಳ್ ॥೬॥

ನುಡಿ ಮುಡಿ ಪಿಕಪೀಲಿಗಳೊಳ್ ।
ಪಡಿ ಪಾಸಟಿ ಕರಿಗೆ ಹರಿಗೆ ಸರಿ ದೊರೆ ನಡೆ ನು ॥
ಣ್ಣಡು ಕದಳೀಪಲ್ಲವದೊಳ್ ।
ತೊಡೆ ಮೆಲ್ಲಡಿಗಳ್ ಸವುಂ ಸುತಾರಾಂಗನೆಯು ॥೩॥

ಮೆಯ್ಮೊಗಮುಲರ್ಗಣ್ ನೆಲೆವೊಲೆ ।
ಕೆಯ್ಮುಡಿ ನಡು ಕೊರಲ ಬೆರಲ ಚೆಲ್ವುಂ ನೀಡುಂ ॥
ಮೆಯ್ಮೈಯೊಳ್ ಪೊಗಲ್ವಿಂತುಟು ।
ಕೆಯ್ಮುಟ್ಟದೆ ಪಡೆದನಬ್ಜಜಂ ಸೌಂದರಿಯುಂ ॥೪॥

ವ॥ ಇಂತೆಸೆವ ರೂಪಾತಿಶಯಮುಂ

ನೋಡಿ ಸುತಾರಾದೇವಿಯು ।
ಗಾಡಿಗೆ ವಿಸ್ಮಯಮನೆಯ್ದಿ ಪೌರವಭೂಪಂ ॥
ನೀಡುಂ ಭಾವಿಸುತಾಗಳ್ ।
ನೋಡಿದನಿಂತರ್ಕಕೀರ್ತಿಖೇಚರಪತಿಯುಂ ॥೫॥

ವ॥ ಅದನಱಿದಾಗಳ್

ದೇವ ಸವುಂತು ನೀವೆ ನೆನೆದಂದವೆ ನಾನೆಸೆದಿರ್ದಿನಿಂತು ಸಂ ।
ಭಾವಿಸವೇೞ್ಪುದಾಯ್ತು ಪೆಱತೇಂ ನೆಸೆವಂತಿರೆ ಮಾೞ್ಪುದರ್ಥಿಯಿಂ ॥
ಶ್ರೀವಿಜಯಂಗೆ ಮತ್ಸುತೆ ಸುತಾರೆಯನೆಂದು ವಿಯುಚ್ಚ ರೇಂದ್ರನಾ ।
ಭೂವರಚಕ್ರಿಗುತ್ಸವಮನಿತ್ತನುದಾತ್ತವಚಃಪ್ರವೃತ್ತಿಯಿಂ ॥೬॥

ನೆನೆದಂತೆ ಕಾರ್ಯಮದು ನೆ ।
ಟ್ಟನೆ ಸಂಗಳಿಸುವುದು ಪೂರ್ವಪುಣ್ಯದ ಪಾಂಗೆಂ ॥
ದೆನುತುಮೊಡರಿಸಿದನಾಗಳ್ ।
ತನಯನ ಪರಿಣಯನಮಂ ತ್ರಿಪಿಷ್ಟನೃಪಾಳಂ ॥೭॥

ಇದು ಮುನ್ನಾದ ವಿವಾಹದೊಂದೆಸಕದಿಂದಾರ್ಹ್ಯಸಂಪತ್ತಿವೆ ।
ತ್ತುದೆನುತ್ತುಂ ಮುದಮುಣ್ಮೆವರ್ಂಸುತುವಿಭಾಭೂಲೋಕವಾಲೋಕಿಸಲ್ ॥
ಪದೆಪಿಂ ಶ್ರೀವಿಜಯಂಗಮಗ್ಗದ ಸುತಾರಾದೇವಿಗಂ ಪೂಣ್ದುವಾ ।
ಡಿದನಕ್ಕಾಣಮೆನಲ್ಕೆ ಪೌರವನೃಪಂ ವೈವಾಹಕಲ್ಯಾಣಮಂ ॥೮॥

ವ॥ ಇಂತು ಪರಿಲಬ್ಧ ಪರಿಣಯನಪರಮಹರ್ಷೋತ್ಕರ್ಷರಾಗಿ ಪಲವಾನುಂ ದಿವಸಂ ಕೆಲವಾನುಂ ದಿವಸಮೆನಿಸಿ ಪದೆಪಿಂದಮಿರ್ದು ತಮ್ಮೊಳರ್ವರುಂ ಓರೊರ್ವರ್ಗುಡಲುಂ ತೊಡಲುಂ ಕೊಟ್ಟು ಅರ್ಕಕೀರ್ತಿ ಪ್ರೌದನಪುರೇಶನಂ ಬೀಳ್ಕೊಟ್ಟು ಕಳಿಪುವಡೆದಾಗಳ್—

ಪರಿಶೇಷಂ ರಾಜ್ಯಚಿಹ್ನಂ ತನಗೆನೆ ಮದವತ್ಸಿಂಧುರಶ್ರೇಣಿಯುಂ ಬಂ ।
ಧುರವಾಜಿವ್ರಾತಮುಂ ನೂತನಮಣಿಮಯನೇಪಥ್ಯಯೂಧಂಗಳುಂ ಭಾ ॥
ಸುರವಾರಸ್ತ್ರೀಯರಂ ಬೇಳ್ಪಿನಿತಸಮಿತತೇಜಂಗೆ ತಾನಿತ್ತನತ್ಯಾ ।
ದರದಿಂದಾಗಳ್ ಜಗಂ ಭೂಪನೆ ಬಲಿವಲಿಯುಂ ಪೌರವಕ್ಷ್ಮಾಣಿಪಾಳಂ॥೧೩॥

ಮನದಾಣ್ಮಂ ನಿನಗರ್ಕಕೀರ್ತಿತನಯಂ ತಾನಾಗೊಡಂ ಪ್ರೀತಿಯಿಂ ।
ದನುಕೂಲತ್ವಮನಪ್ಪುಕೆಯ್ವುದು ವಿನೇಯೋಪೇತದಿಂದತ್ತಿ ಮಾ ॥
ವನ ಮಾತಂ ಬಗೆಗೊಳ್ವುದಾಪರಿಜನಕ್ಕೆಂದುಂ ಪ್ರಿಯೋಕ್ತಿ ಪ್ರದಾ ।
ನನೆಯಾಗಿರ್ಪುದು ಮಾಜ್ಪುದೆಮ್ಮಯ ಮನಕ್ಕಾನಂದಮುಂ ನಂದನೇ ॥೧೪॥

ಮುತ್ತಿನ ಹಾರದ ತೆಱದಿಂ
ಕೃತ್ರಿಮಗುಣಯುಕ್ತಮಲ್ತು ನಂಬನೆ ಸಿನ್ನಿ ।
ಚಿತ್ತದೊಳಾದೊಡಮಖಿಳಗು
ಣೋತ್ತಮೆಯೆಂಬೆನಿಸಿ ನೆಗಲ್ದು ಪೊಗಲ್ಪುನೆವ್ವಂ ॥೧೫॥

ಸಿನ್ನಯ(?)ನಾಚರಿಸುವರಂ ।
ಮನ್ನಿಪುದನ್ವಿತರನುರುಪತಿವ್ರತಗುಣಸಂ ॥
ಪನ್ನೆಯಿಸಿಪ್ಪುದು ಸುಚರಿತ ।
ವನ್ನೆಗಜ್ವುದು ಮಗಳೆ ಮಾಜ್ಪುದೆಮಗುತ್ಸವಮುಂ ॥೧೬॥

ವ। ಎಂದಿಂತು ತನ್ಮಯ ಮೋಹನವಚನರುಚಿರಪ್ರಸೂನರಚಿತಾವತಂಸಭೂಷಿತಶ್ರವಣೆಯುಂ ಮಾಡಿ ಮಣಿಭೂಷಣಾಂಗಳಂ ಕೊಟ್ಟು ತ್ರಿಪಿಷ್ಟನೀಶನುಂ ಸ್ವಯಂಪ್ರಭಾದೇವಿಯುಂ ಪರಿತುಷ್ಟಚಿತ್ತರಾಗಿ—

ನಿನಗೆಂತುಂ ಪ್ರಿಯೆಯೀಕೆಲೋಕಮಹಿನುಲ್ಜ್ಯೋತಿಃಪ್ರಭಾದೇವಿತಾಂ।
ವಿನಯಂದಪ್ಪುವಳಲ್ಲ ತಪ್ಪಿದೊಡಮೆನ್ಮಂ ನೋಡಿ ಮನ್ನಿಪ್ಪುದೆಂ ॥
ದು ನರೇಂದ್ರಂ ಸತಿಗೂಡಿಯಿಂತಳಿಯನಂ ಕೆಯ್ಯೊಡ್ಡಿ ಬೀಡುತ್ತುಮಿ ।
ರ್ದನೆನಲ್ ಮುಕ್ಕಳ ಮೋಹಮೆನ್ನರುಮನಿನ್ನಾರಯ್ವೋಡೇಗೆಯ್ಯದೋ॥೧೭॥

ವ|ಆಗಳ್ ಸ್ವಯಂಪ್ರಭಾದೇವಿಯುಂ ಜ್ಯೋತಿರ್ಮಾಳಾದೇವಿಯುಂ ಸಮ್ಮದದಿಂ ತಮ್ಮಿರ್ವರ ವಿನಯವುಂ ನಡಿಯುತುಂ ಮುದಶ್ರುವಂ ಸಿಡಿಯುತುಂ ಪುನಃಪುನರಾಲಿಂಗನಂಗೆಯ್ಯುತುಂ ಮಗುಳ್ದು ಕಳಿಪಿದಾಗಳ್—

ಘನಘೋಷಾನೀಕಮಂ ಕೇಳ್ಪಡಿಸಿ ಮೊಱಗೆ ನಾನಾನಕಧ್ವಾನಮಾಸ್ಯಂ।
ದನಚೇತ್ಕಾರಂ ಬಱಿಕ್ಕಾತುರಗರಥಗಜಾನೀಕಘೋಷಂ ಮಹಾಧ್ವಾ ॥
ನನಿಕಾಯಂ ತೀವೆ ದಿಕ್ಚಕ್ರವನತಿಯುದದಿಂದರ್ಕಕೀರ್ತಿರ್ಕ್ಷಮಾಧೀ ।
ಶನನಾಗಳ್ ಬೇಗದಿಂ ತಾಂ ಕಳಿಪಿ ಮಗುಳೆ ಬಂದಂ ಪುರಕ್ಕಾನರೇಂದ್ರಂ ॥

ಅವಿನೀತೋರ್ವೀಶರಂ ಶಿಕ್ಷಿಸುತುಮತುಲಮಯರ್ದಾದೆಯಿಂದುರ್ವರಾಚ ।
ಕ್ರವನಾದಂ ರಕ್ಷಿಸುತ್ತುಂ ಸಕಲಸುಜನಸಂತರ್ಪಣಂಗೆಯ್ಯುತುಂ ಬೇ ॥
ಲ್ವಿವರ್ಗಂ ಬೇೞ್ಕೊಂದಸೀಯುತ್ತಮೆ ಚತುರಧಿಕಾಶೀತಿಲಕ್ಷಾಬ್ದಮಪ್ಪ ।
ನ್ನೆವರಂ ಸಾವಮ್ರಾಜ್ಯಭೋಗೋನ್ನತಿಯೊಳಸೆಯುತಿರ್ದಂತ್ರಿಪಿಷ್ಟಾನಸೀಶಂ॥

ವ| ಇಂತರಸುಗೆಯ್ಯುತ್ತಮಿರ್ದೊಂದು ದಿವಸದೊಳ್—

ವರಸೌಂದರ್ಯದಿನೀಸ್ವಯಂಪ್ರಭೆ ಕರಂ ಶೃಂಗಾರಸಂಪತ್ತಿವೆ ।
ತ್ತಿರೆ ತಾನೀಕ್ಷಿಸುತಾಗಳೀಸತಿಗೆ ಮುನ್ನಾಕಾಂಕ್ಷಗೆಯ್ದಿರ್ಪ್ಪಕಂ ॥
ಧರನಂ ಮನ್ಮನವಾಱಿ ಚಿತ್ರವಿಧದಿಂ ಕೊಂದಿಕ್ಕದೇನಿಂತು ಚೆ ।
ಚ್ಚರದಿಂ ಕೆಮ್ಮನೆ ಕೊಂದೆನೆಂದು ನೆನೆದಂ ಮುಂ ಪೋದುದಂ ಭೂವರಂ ॥೦೦॥

ಈವಧು ನೋಡೆ ನೋಡೆ ವಿವಿಧಾಸ್ತ್ರಬಧದಿಂ ತಱಿದೊಟ್ಟುತುಂ ಹಯ ।
ಗ್ರೀವನನಿಂತು ಕೂಲ್ಲದೆ ರಣೋರ್ವಿಯೊಳಾಗಳೆ ಕೊಂದೆನೆಂದು ಕೋ ॥
ಪಾವಹಜೆತ್ತನಾದ ವಿಭುಚಕ್ರಿಗೆ ತೊಟ್ಟನೆ ಕಟ್ಟ ಸಪ್ತಮ ।
ಕ್ಷ್ಮಾವಧಿಯಾಯ್ತು ಮಾದುದೆನೆ ಕೋಪದಿನಗ್ಗಳಮುಂಟೆ ಪಾವಕಂ ॥೦೧॥

ದುರಘುಕುಳಮೆಸಿಪ ನಿರಯಮು ।
ನಿರದೆಯ್ದಿಪ ನಿರಯದೂತಿ ನಿದ್ರಾಮಿಷದಿಂ ॥
ದಿರದುಯ್ವಂತಿರೆ ನಿದ್ರಾ ।
ಭರದಿಂದಂತ್ಯಯಮನೆಯ್ದಿದಂ ಚಕ್ರಧರಂ ॥೦೨॥

ಶ್ವಸಿತಗತಿ ನಿಂದು ಕಡುತ ।
ಣ್ಣಸನೆಯ್ದಿದ ಗಾತ್ರಮಂ ಸ್ವಯಂಪ್ರಭೆ ತಾನೀ ॥

ಕ್ಷಿಸಿ ಪತಿಯಿರವಂ ನೆಱಿ ಭಾ ।
ವಿಸಿದಳ್ ಕರತಲಮನೊಡ್ಡಿನಾಸಾಗ್ರಮದೊಳ್ ॥೨೩॥
ಸ್ವರಮಿಡುಕುದಾಣದಾಪರಿ ।
ಕರಣದೊಳುಱಿ ಕೂಡಿ ನೋಡಿ ಜೀವಾನಿಳಸಂ ॥
ಚರಣವನೆ ಕಾಣದಾಸುಂ ।
ದರಿ ಭೂಪತಿ ಪೋದನೆಂದು ತಳವೆಳಗಾದಳ್ ॥೨೪॥
ಎಲೆ ಚಕ್ರಾಯುಧ ವಿಕ್ರಮೋನ್ಮದವದಶ್ವಗ್ರೀವದೋರ್ದಂಡಮುಂ ।
ಡಲಕಾಂತಾರಕುಠಾರ ನೀನಱಿವುಗೆಟ್ಟೀತಂದ್ರಿಯಿಂದೊಂದಿ ಸಾ ॥
ಯಲಿದೇಂ ತಕ್ಕುದೆಯೆಂದು ಭೂಪಸತಿ ಕೋಕಂಗೆಯ್ವ ಹಾಹಾರವಂ ।
ಬಲದೇವಾದ್ಯನುರರ್ಕಳೊಳ್ ಸಿಡಿಲವೋಲ್ ಪೋದತ್ತದಾಧಾತ್ರಿಯೊಳ್ ॥
ಎನ್ನನುಜಂಗಿದೇಂ ಘಟಿಸಿತೋ ದಿಟದಿಂ ವಿಪರೀತವೃತ್ತಿ ಕೋ ।
ಕನ್ನಿಮಿರ್ದಾರ್ಸ್ಯಯಂಪ್ರಭೆ ಹತಪ್ರಭೆಯಾಗಿ ಕರಂ ಪ್ರಳಾಪನಾ ॥
ದನ್ನೆಲೆವೆರ್ಚಿ ತಾನಟುತುಮಿರ್ದಪಳೆಂದು ಕುಮಾರಕರ್ ಸಮೀ ।
ತನ್ನಡಗುತ್ತುಮಿಂತು ಪರಿತಂದನುದಗ್ರಭುಜಾಬಲಂ ಬಲಂ ॥೨೬॥
ಅನುಜನನಿವಾರ್ಯಕಾಲನ ।
ನನಗತನಾದುದನೆ ತಾನೆ ಕಟ್ಟಿದಿರೊಳ್ ತೊ ॥
ಟ್ಟನೆ ಕಂಡು ಬಲಂ ಬಲಹೀ ।
ನನಾಗಿ ಬಾಯಬಿಡುತ ಬಿೞ್ದನವನೀತಲದೊಳ್ ॥೨೭॥
ಬಳಿಕದ್ರನನುಜಶೋಕಾ ।
ನಳಸಿಂದಂ ವಿಕಳನಾದನೆಂದೊಡೆ ಮನುಜ ॥
ರ್ಕಳೊಳಿೞ್ಕಿ ಱುವರದಾರ್ ಸಂ ।
ಗಳಸಿದ ಸಂಸಾರಶೋಕಶಿಖಿಮುಖಪತಿಯೊಳ್ ॥೨೮॥
ಸಿಡಿಲನಡುತ್ತು ಸೀೞ್ವ ಕಾಳಶೈಳವನುನೋವದೆ ಕೀೞ್ವ ಸಿಂಹಮುಂ ।
ಪೊಡೆದು ಪೊರಟ್ಟಿ ಕೊಲ್ವ ಕಡಲಂತೆ ತುಱುಂಕುವ ಕಾಳಕೂಟಮುಂ ॥
ಕುಡಿವ ವಿಷಾಹಿಯಂ ಪಿಡಿದು ಪಲ್ಗಳೆವುದ್ಧತನಪ್ಪ ನಿನ್ನನೀ ।
ಯೆಡೆಯೊಳಗೆಂತು ಮೆಯ್ಮಱಸಿಯುಯ್ದನೊ ತಮ್ಮನೆ ಪೇೞ್ ಖಳಾಂತಕಂ ॥
ಘನಬಾಹಾಬಲಗರ್ವಮುರ್ವಿದ ಜಗಲ್ಲುಂಠಾಕನಪ್ಪೞ್ವಕಂ ।
ಠನ ಶೀರ್ಷಾಂಬುಜಮುಂ ಸವುಂತವನ ಚಕ್ರಂಗೂಡಿ ಮುಂ ಕೊಂಡೆ ದೇ॥

ವನಿಕಾಯಂ ನೆಲೆವೆರ್ಚಿ ಮೆರ್ಚಿ ಜಯಮುಂ ಕೈಕೊಂಡೆ ನೀಂ ತಮ್ಮ ತೊ।
ಟ್ಟನೆ ಪೇೞಿಂತು ಖಳಾಂತಕಂಗೆ ಸವಿಯಲ್ ತುತ್ತಾದೆ ನೀಂ ತಕ್ಕುದೇ ॥೩೦॥

ಎನ್ನಳನಾಜ್ಞಾಲವಮುಂ ।
ನಿನ್ನೆವರಂ ವಿಾಱಿ ಮತ್ತಗಳ್ ಪೋಗುತ್ತೆ ॥
ಮ್ಮನ್ನುಡಿಸದೆ ಪೋದ್ಯೆ ಪೇೞ್ ।
ನಿನ್ನ ಗುಣಕ್ಕಿದುವೆ ತಕ್ಕುದೇ ಚಕ್ರಧರಾ ॥೩೧॥

ವ॥ ಇಂತು ವಿಪ್ಲವಸುತಿಪರ್ಯಾಸಮಯದೊಳ್—

ಜ್ಞಾನವಿಹೀನನಂತಱಿವುಗೆಟ್ಟೆಲೆ ತಾಳಪತಾಕ ಕೋಕದೊಳ್ ।
ನೀನಿರಲಪ್ಪುದೇ ಬಗೆವೊಡೀತನು ನಿತ್ಯಮೆ ಜೀವಯೋಗಚಿಂ ॥
ತಾವಧು ನಿತ್ಯಮುಲ್ಲದೊಡೆ ಸೌಖ್ಯಮಿದೆಂದಱಿದಿರ್ದುಮಿಂತಿದ ।
ರ್ಕೇನಿನಿತೊಂದು ವಿಸ್ಮೃತಿಯನೆಯ್ದುವುದುಂ ಲಲಿತಕ್ಕೆ ತಕ್ಕನ್ಯೆ ॥೩೨॥

ತನುವಿದೆ ಬಯಲ ಸೊಡರ್ ಮುಂ ।
ಜಿನ ಪುಂಜಿಕೆ ಸಲಿಲಬುದ್ಬುದಂ ಸುರಚಾಪಂ ॥
ಘನಮಾಲೆ ತಟಿಲ್ಲತೆಯೆಂ ।
ದೆನಿಪುದು ನಿಜಮುಲ್ಲೆ ದೇವ ನೀನಱಿಯದುದೇ ॥೩೩॥

ವ॥ ಎಂದಿಂತು ವಿನ್ನವಿಪ ಮಂತ್ರಿಮುಖ್ಯರ ಸಮ್ಯಗ್ವಚನಕ್ಕೆ ಸೀರ
ಪಾಣಿ ಸುಪ್ರಬೋಧಸ್ವಾಂತನಾಗಿ,

ಅನುಜಾಂಗನೆಯುಮನಸುಜನ ।
ತನಯರುಮಂ ವಿಗತಶೋಕರಂ ಮಾಡಿ ಬಲಿ ॥
ಕ್ಕನುಜನ ತನುವಂ ಸಂಸ್ಕಾ ।
ರಣಾತಿವಿಧಿವೆರಸು ಮಾಡಿದಂ ಮುಸಲಧರಂ ॥೩೪॥

ವ॥ ತದನಂತರದೊಳ್—

ಅನುಜಂ ನುಜ್ಜನ್ಮಮುಂ ಮುಕ್ತ್ಯಾನುಮನುಜಿದು ಪೋದಂ ಕ್ರಮಂದಪ್ಪಿಪಿಂದಿ।
ರ್ದೆನೆ ರಾಜ್ಯಂ ತಾನಿದಾನೊಲ್ಲದೆ ಬಿಸುಟುದುಮಂ ಸ್ವೀಕೃತಂಗೆ ॥
ಯ್ವೆನೆ ದುರ್ವಾರಾಘವಾರ್ಗಂಬಿಡಿಯದಿರೆನುತುಂ ಸಾರುತಿರ್ದಪ್ಪಳೀಗಳ್ ।
ಜಿನದೀಕ್ಷಾಕಾಂತೆಯೆಂವಿಂತಿದನೆ ಬಗೆದನಳ್ಪಾಣಿದಿಂ ತಾಳಲಕ್ಷ್ಮಂ ॥೩೫॥

ಶ್ರೀವಿಜಯನನೂರ್ಜಿತರಾ ।
ಜ್ಯಾವಹನಂ ಮಾಡಿ ವಿಜಯಭದ್ರನನತಿಸೌ ॥
ಖ್ಯಾವಿಳಯಯೌವರಾಜ್ಯವ ।
ಧೂವರನಂ ಮಾಡಿದಂ ಹಲಾಯುಧನಾಗಳ್ ॥೩೬॥

ನಿರವಿಸಿ ರಾಜ್ಯಮುಂ ತನಯುರೊಳ್ ವಿಜಯಮುಂ ದ್ವಿಸಹಸ್ರಭೂವರ ।
ವೆರಸು ಸುವರ್ಣಕುಂಭಮುನಿಪಾಂಘ್ರಿಗಳಲ್ಲಿಯೆ ದೀಕ್ಷೆಗೊಂಡು ದು ॥
ರ್ಧರತಪದಿಂ ವ್ಯಪೇತಪಟುಘಾತಿಚತುಷ್ಟಯನಾಗಿ ತನ್ಮನೀ ।
ಶ್ವರನನಗಾರಕೇವಳಮಹತ್ವಮನೆಯ್ದಿದನೇಂ ಮಹಾತ್ಮನೋ ॥೩೭॥

ಹರಿಗಿರದೆಯ್ದಿದ ವಿಸ್ಮೃತಿ ।
ಮರಣಮನಾಹರಿವಿಯೋಗದಿಂ ಹರಿಗಾಗಳ್ ॥
ಪಿರಿದಾಗಿ ಪುದಿದ ಭೇದದ ।
ಪರಿಯುಂ ಕೇಳ್ದರ್ಕಕೀರ್ತಿ ನೆಱೆ ಬೆಱಗಾದಂ ॥೩೮॥

ತನು ಬೇಱಲ್ಲದೆ ಜೀವವೊಂದೆನಿಪನೂನಸ್ನೇಹಸಂಪತ್ತಿ ನೆ ।
ಟ್ಟನೆ ತನ್ನೊಳ್ ನಿಜಮೆಂದೆನಿಪ್ಪ ವಿಜಯುಂಗಂ ಚಕ್ರಿಗಂ ಭೇದವಾ ॥
ಯ್ತು ನಿತಾಂತಂ ವಿಪರೀತಮಪ್ಪ ಮರಣಂ ತಾನೊರ್ವನೊಳ್ ವೋಕ್ತಸಾ।
ಧನಮುಂತೊರ್ವನೊಳಾಯ್ತೆನಲ್ಕೆ ಕವಿಸೂತ್ರಂ ಚಿತ್ರಮೇನಲ್ಲವೆ ॥೩೯॥

ಧೃತಶುಷ್ಕಾನಳವಾಳಿಯಾದ ಸತಿ ಜ್ಯೋತಿರ್ಮಾಳಿಯಂ ಶೋಕವ ।
ಹ್ನಿ ತಗುಳ್ದಾಕ್ಷಣದಿಂ ಹತಪ್ರಭೆಯೆ ತಾನಾಗಿರ್ದಳಂ ಚಕ್ರಭೃ ॥
ತ್ಸುತೆ ಜ್ಯೋತಿಃಪ್ರಭೆಯುಂ ಪ್ರಭೋಧಿಸುತುಮಿಾಸಂಸಾರಮಾಯಾತುಳ ।
ಸ್ಥಿತಿಯುಂ ಪೇೞುತುಮರ್ಕಕೀರ್ತಿಖಚರಂ ತಾನಿಂತು ನಿಂತೈಸಿದಂ ॥೪೦॥

ಆನುಜವಿಯೋಗದೆ ವಿಕಳಾ ।
ತ್ಮನಾದನಾಗಿರ್ಮು ಮೂರ್ಚ್ಛೆ ಮರುಳಾಗದ ಬೋ ॥
ಧನಿಧಾನದನಿರ್ವ್ಯತಿ ।
ಯನೆ ಪಡೆದಂ ವಿಜಯನಂತು ನೋಂತರುವೊಳರೇ ॥೪೧॥

ಎಂದದುವೆ ತನಗೆ ವೈರಾ ।
ಗ್ಯಂ ದೊರೆವೆತ್ತರ್ಕಕೀರ್ತಿಖೇಚರನರನಾ ॥

ನಂದದೆ ಸಮಸ್ತರಾಜ್ಯದ ।
ದಂದುಗಮುಂ ತಡೆಯುದಮಿತತೇಜಂಗಿತ್ತಂ ॥೪೦॥

ವಿಪುಳಮತಿ ಚಾರಣರ ವಿನು ।
ಳಪದಾಂಬುಜಪಾರ್ಶ್ವದಲ್ಲಿ ದೀಕ್ಷಾವಿಭವಾ ॥
ಧಿಪನಾದನರ್ಕಕೀರ್ತಿ ।
ಕ್ಷಪಿತಾಘಂ ಕೆಲಬರರಸುಗಳ್ವೆರಸಾಗಳ್ ॥೪೧॥

ಅನುಪಮತಪಶ್ಶ್ರೀತಂಗಳೊ ।
ಳನುಗತನಾದರ್ಕಕೀರ್ತಿಮುನಿಪತಿ ಪೆಸರ್ವೆ* ॥
ತ್ತನುಪಮನಗಾರಕೇವಳಿ ।
ಯೆನಿಸಿರ್ದಾರ್ಹಂತ್ಯಪದವಿಗಧಿಪತಿಯೂವಂ ॥೪೪॥

ಅವಿಜಯಮಾರ್ಹಾಚಳಲ ।
ಕ್ಷ್ಮಾವಿಭುವಪ್ಪಮಿತತೇಜನುಂ ಪುರನೃಪತಿ ॥
ಶ್ರೀವಿಜಯನುಂ ಸಮಪ್ರಿಯ ।
ಜೀವನರೆನೆ ಸುಖದಿನಗಸುಗೆಯ್ಯುತಿರ್ದರ್ ॥೪೫॥

ಇರಲಿತ್ತಲೊಂದು ದೆವಸಂ ।
ವರಪೌದನಪುರಿಯೊಳನುಜಯುತನತಿಹರ್ಷೋರ್ ॥
ತ್ಕರದಿಂ ಶ್ರೀವಿಜಯಮಹೀ ।
ವರನೊಡ್ಡೋಲಗದೊಳೊಪ್ಪುತಿರ್ಪಾಪದದೊಳ್ ॥೪೬॥

ಪದೆಪಿಂ ಬರ್ಪನೆ ದಲ್ ಬೃಹಸ್ಪತಿಯೆನುತ್ತುಂ ಕಲ್ಪಿಸುತ್ತುಂ ಸಭಾ ।
ಸದರಾಗಳ್ ಪದೆದೀಕ್ಷಿಸಲ್ಕೆ ನಡೆತಂದಾಸ್ಥಾನಮಂ ಪೊಕ್ಕ ಸ ॥
ಮ್ಮದದಿಂ ಶ್ರೀವಿಜಯಾವನೀಪತಿಗೆ ಪೇಟ್ದಾಮಂತ್ರಮಂತಾರ್ಥಯು ।
ಕ್ತದಿನಿಂತಕ್ಷತೆಗೊಟ್ಟು ತಾಂ ಪರಸಿದಂ ಪ್ರಖ್ಯಾತನೈಮಿತ್ತಿಕಂ ॥೪೭॥

ಜನಪತಿ ಬಿನ್ನಪವಿಾಪೌ ।
ದನೆ ಪುರಪತಿಯಪ್ಪ ನೃಪನ ಮಸ್ತಕದೊಳ್ ತೊ ॥
ಟ್ಟನೆ ಬಿಟ್ಟಿಪುದಿಂದಿಂಗೇ ।
ಟನೆ ದಿನಸದೊಳಶನಿಪಾತಮಿದುವೆ ನಿಮಿತ್ತಂ ॥೪೮॥

ಎನೆ ಮುನಿದಾಗಳಾವಿಜಯಸೇನನೆಲೇ ಬಡಪಾರ್ವ ಪೞು ತೊ ।
ಟ್ಟನೆ ಸಿಡಿಲಂತು ನಿನ್ನ ತಲೆಯೊಳ್ ಸಲೆ ಪೋಲ್ಗು ಮೆನಲ್ಕೆ ತಪ್ಪದಾ ॥
ದಿನದೊಳೆ ಮುಂಗಳಾಭಿಪವಮೆನ್ನಯ ಮೌಳಿಯೊಳಪ್ಪುದೆಂದು ಭೋಂ ।
ಕೆನೆ ಜಿತಶಂಕನಾಗಿ ನುಡಿದಂ ಪದೆಪಿಂ ನಗುತುಂ ನಿಮಿತ್ತಕಂ ॥೪೯॥

ಇದು ಜಿತ್ರಂ ಬಿಸಗೊಂಬಮೆಂದನುಜನಂ ಲೀಲಾಕಟಾಕ್ಷಾವಲೋ ।
ಕದೆ ಸೈತಿಟ್ಟು ಬಟ್ಕ್ಕವಾದ್ವಿಜನನೌಜಿತ್ಯಾಸನಾಸೀನಸಂ ॥
ಪದನಂ ವಾಡಿಯೆ ಪೆಜ್ಮೆಂದು ಬಿಸಗೊಂಡಂ ತನ್ನಿಮಿತ್ತಾರ್ಥಮುಂ ।
ಪದೆಪಿಂ ಶ್ರೀವಿಜಯಾವನೀಶನವನಿಂದಂ ಸ್ಥೈರ್ಯನಿನ್ನಾವನೋ ॥೫೦॥

ನೀನಾರ್ಗೆ ನಿನ್ನ ಪೆಸರೆಂ ।
ತೇನಿಲ್ಲಿಗೆ ಬಂದೆ ಮುತ್ತೆ ಸಿನಗೆ ನಿಮಿತ್ತ ॥
ಜ್ಞಾನಮಿದೆಂತಾದತ್ತೆನೆ ।
ಭೂನಾಥ ಸವುಂತು ಕೇಳದಂ ನೆಱಿ ಪೇೞ್ವಿಂ ॥೫೧॥

ಧರೆಗೆಸೆವ ಕುಂಡಳೀಪುರಿ ।
ವರಸಿಂಪರಥನ ಪುರೋಹಿತಂ ಸುರಗುರುವಾ ॥
ಗುರುಸುತವಿಶಾರದಂ ಮು ।
ದ್ಗುರುವಪ್ಪನವೋಘಚಿಹ್ನನೆನ್ನಯ ನಾಮುಂ ॥೫೨॥

ನನ್ನಿಯಿನಾಶ್ರೀವಿಜಯನ ।
ಬೆನ್ನನೆ ಬಟ್ಕಸಂದು ಪೋಗಿ ದೀಕ್ಷಿತನಾಗಿ ॥
ದುರ್ವನ್ನತತಪಮುಂ ನೆಗಟು ।
ತ್ತುನ್ನೆಟ್ಟನೆ ಶಾಸ್ತ್ರತತಿಯನಭ್ಯಸಿಸಿದೆಂ ॥೫೩॥

ನೆಱಿಯಱಿದೆನಂತರಿಕ್ಷ ।
ಸ್ವರಭೌಮವ್ಯಾಜನಾಂಗಜೆಹ್ನಸ್ವಪ್ನೋ ॥
ದ್ಧುರಲಕ್ಷಣಮೆಂದೇ ಬಿ ।
ತ್ತರಿಪಪ್ಪಾಂಗದ ನಿಮಿತ್ತಶಾಸ್ತ್ರಾವಳಿಯಂ ॥೫೪॥

ಹಸಿವು ವೊದಲಾಗೆ ಪರಿದುಂ ।
ಪೆಸರ್ವಡೆದಿರ್ಪತ್ತಿರಡು ಪರೀಷಹಮುಂ ಸ್ಪೃ ॥

ರಿಸಲಾಱದೆ ಗಾರ್ಹಸ್ಥ್ಯದ ।
ವಿಷಮಸುಖಕ್ಕೆಳಸಿ ಪರಮತಪಮುಂ ಬಿಟ್ಟಿಂ ॥೫೫॥

ವಿನುತಂ ಪದ್ಮನಿಖೇಟಮೆಂಬ ಪುರಿಗಾಂ ಪೋಗಿರ್ಪುದುಂ ಸೋಮಶ ।
ರ್ಮನುಮಾಕಾಂತೆ ಹಿರಣ್ಯಲೋಮೆಯುಮೆನಿಪ್ಪಾಯಿರ್ವರಾತ್ಮೀಯನಂ ॥
ದನೆ ಚಂದ್ರಾನನೆಯೆಂಬಳಂ ಕುಡೆಯುಮಾಸ್ಥಾನೀಯುಕ್ತದಿಂದತ್ತೆವಾ ।
ವನ ಸಾಮೀಪ್ಯದೊಳರ್ದನುತ್ತಮನಿಮಿತ್ತಾಭ್ಯಾಸಮುಂ ಮಾಡುತುಂ ॥೫೬॥

ಬಂದು ದಿನಂ ಮದೀಯಸತಿಯಾನುಣಲೆಯ್ತರೆ ಕಂಡು ಬೀಯಮೇ ।
ನುಂ ದಿಟಮಿಲ್ಲ ಮಜ್ಜನಕನಿತ್ತಧನಂ ನೆಱಿ ತೀರ್ದು ಪೋಯ್ತು ನೀ ॥
ಮಿಂದುವರಂ ಕರಂ ಪಡೆದ ವಸ್ತು ನಿಮಿತ್ತಕಪರ್ದಿಕೌಘುಮಿ ।
ನ್ನಿಂದಿವನುಂ ಬೆಂದು ಸುರಿದಳ್ ಸಲೆ ಭೂಜನದೊಳ್ ಸರೋಷದಿಂ ॥೫೭॥

ಅವಱಿಂಗೊಳ್ ವೃತ್ತಿಯನುಳ್ಳದೊಂದು ಪಳಿಕಂ ವರ್ತಂದು ರುಗ್ಮಾಳೆಸಂ।
ಕ್ರಮಿಸಲ್ ಕಂಡು ನೃಪಂಗೆ ಬೀಳ್ವ ಸಿಡಿಲಂ ನಿಶ್ಚೈಸಿ ಕೈಗೆಯ್ದಲೆಂ ॥
ದು ಮದೀಯಾಂಗನೆ ತಂದು ತಾನೆಱಿವ ತದ್ವಾರ್ಧಾರೆಯಿಂದೆನ್ನ ಲಾ ।
ಭವನಾಂ ನಿಟ್ಟಸಿ ಬಂದೆನಲ್ಲದೊಡೆ ಪೇೞಲ್ಬಪ್ಪುದೇ ಭೂಪತೀ ॥೫೮॥

ಬೇಗದೊಳದಕ್ಕೆ ಪರಿಹಾ ।
ರಾಗವುಮುಂ ನೆಗೞ್ದಿ ದೇವ ಲೇಸಪ್ಪುದೆನು ॥
ತ್ತಾಗಳ್ ಬಿನ್ನವಿಸಿದನನು ।
ರಾಗದೆ ನೈಮಿತ್ತಿಕಂ ನಿಮಿತ್ತಕಳಾಢ್ಯಂ ॥೫೯॥

ಕಡೆವರವುವೋಘುಜಿಹ್ವನ ।
ನುಡಿಯುಂ ನೆಱಿ ಕೇಳ್ದು ಕಳಪಿ ಭೂನಾಥನವಂ ॥
ತಡೆಯದೆ ಪರಿಹಾರಂಗೆಯು ।
ಲೊಡರಿಪ ಬುದ್ಧಿಯೊಳೆ ಬರಿಸಿದಂ ಮಂತ್ರಿಗಳಂ ॥೬೦॥

ಸಮನಿಸಿತಾನಿರ್ಪುಪಸ ।
ರ್ಗಮನಿದನಪಹರಿಪ ಬುದ್ಧಿಯಾವುದೆನುತ್ತುಂ ॥
ಸುಮತಿ ಮೊದಲಾದ ಸಚಿವೋ ।
ತ್ತಮರಂ ಶ್ರೀವಿಜಯಭೂವರಂ ಬೆಸಗೊಂಡಂ ॥೬೧॥

ಗಿರಿಸಾರದ ಮುಂಜೂಷಾಂ ।
ತರದೊಳ್ ನೀಮಿರ್ದು ದೇವ ಶರನಿಧಿಯೊಳಡಂ ॥
ಗಿರೆ ಬಂದಪಾಯಮದು ಪರಿ ।
ಹರಿಸುವುದೆಂದಿಂತು ಸುಮತಿ ಸಚಿವಂ ನುಡಿದಂ ॥೬೦॥

ಗಿರಿಗಳ ಝಷಾಕರಂ ಭೀ ।
ಕರಮುರ್ಣವಮೇಕದಿರ್ಕೆ ವಿಜಯಾರ್ಥವಮೀ ॥
ಧರಗುಹೆಯೊಳಿರಸನಂ ಬೈ ।
ತಿರಿಸುವಮೆಂದಂಶುಬುದ್ಧಿಯೆಂಬಾಸಚಿವಂ ॥೬೧॥

ಎನೆ ಕೇಳ್ದದರ್ಕೆ ತಾನೊ ।
ಯ್ಯನೆ ನಗುತುಂ ಬುದ್ಧಿಸಾಗರಂ ಗುಹೆಯೊಳ್ ಮು ॥
ನ್ನೆನಸುಂ ಬೈತಿರಿಸಲ್ಕಿ ।
ರ್ದನ ಕ್ರೂಡಿನ ಕತೆಯನದನೆ ಪೇಟಲ್ ಬಗೆದಂ ॥೬೪॥

ಘನಶೋಭಾವಹಮಪ್ಪ ಸಿಂಹಪುರದೊಳ್ ಸೋಮಾಯಣಂ ತಾಪಸಂ
ಜನದಾಸಾಹ್ವಯನೊಳ್ ವಿವಾದಿಸಿ ಕರಂ ಸೋಲಲ್ಲಿ ತದ್ಭಂಗಚೆ ।
ತ್ತನವಂ ಮಟ್ಟಿ ಲುಲಾಯಮಾಗಿ ಜನಿಸಿದೋರ್ವರಿಂದದಿಂದುಪ್ರವೇ ।
ರನೆ ಪೊತ್ತಿಂತಡುಕುತ್ತುಮಿರ್ದುದೆನೆ ಪೇಟ್ ದುರ್ಭಾವಮೇಗೆಯ್ದುದೋ ॥
ಕಡುಬಡವಾಗಿ ಮೆಯ್ಯಬಸಿಱಿಂಗುಣಲಿಲ್ಲದೆ ಪೇಱುತಿರ್ಪ ತ ।
ನ್ನೊಡಲನೆ ಕಂಡವರ್ಗಳ್ ತದಿಯಪುರೀಜನವೈರಭಾರದಿಂ ॥
ಮುಡಿದು ಪರೀತಮೆಂಬ ವಸದೊಳ್ ಮುಹಿಷಾಹ್ವಯರಾಕ್ಷಸತ್ವಮುಂ ।
ಪಡೆದುದೆನಲ್ಕೆ ರೋಷಮದು ತಾರದೆ ರೌದ್ರಭವಭ್ರಮುಂಗಳಂ ॥೬೬॥

ವ॥ ಆಸಿಂಹಪುರದರಸಂ ಕುಬೇರನೆಂಬನಾತನ ಬಾಣಸಿಂಗೆ ಹೊಲ
ನ ಮೃಗಮೆಲ್ಲಂ ಬಲಿಕೆಯುಂದು ಪೋಗೆ—

ದೊರೆಯದೆ ಮೃಗವಾಂಸಂ ತ ।
ತ್ಪುರಪತಿ ಕುಂಭಂಗೆ ತಂದು ವ್ಯಾತಸರಶಿಖುವೊಂ ॥
ದಿರಲದಱ ಮಾಂಸಮುಂ ರುಚಿ ।
ಕರಮೆನೆ ತಾಂ ಮಾಡಿ ಪಲಲಮುಂ ಭೀಮಾಖ್ಯಂ ॥೬೭॥

ಅದಱಿಂ ಕುಂಭಂ ನರವಮಾಂ ।
ಸದ ಸವಿಯಿಂ ಮನುಜರೆಲ್ಲರಂ ಗುಪ್ತದೆ ಕೊ ॥
ಲ್ವುದನಱಿದಾಪುರಜನವೋ ।
ವದೆ ರಕ್ಕಸನೆಂದು ತಗುಳ್ವುದುಂ ತತ್‌ಕ್ಷಣದಿಂ ॥೬೪॥

ನರವಮಾಂಸಂ ಬಲಿಕೆಂವದೆ ।
ಪಿರಿದುಂ ನೀಮುರದೆ ನಾಡೆ ಬಾಣಸಿಗನ ಗೊ ।
ಣ್ಮಿರಿನೊಳ್ಪಿ ಕೊಂದು ತಿಂದಾ ।
ದುರಾತ್ಮನಾದಿನಮನಿಂತು ಕಟ್ಟಿದಂ ಕುಂಭಂ ॥೬೫॥

ವ। ಅಂತಿರ್ದ ಕುಂಭಂ ತದೀಯಪುರಬಹಿರ್ಭಾಗದ ಪಿತೃವನದೊ
ಳಿರ್ದ ಲುಲಾಯಾಭ್ಯಂತರನಿವಾಸಕ್ಕೆ ವಂದು—

ನರವಮಾಂಸಂ ಪ್ರಿಯಮಕುಂಭನರ್ಜಿಸೆ ಲುಲಾಯಾಭ್ಯಂತರಂ ಬಿರ್ಚಿ ಚೆ ।
ಚ್ಚರದಿಂದೀಸಗರೀಜನಂಗಳನೆ ನುಂಗುತ್ತಿರ್ದುದೆಂದಿತ್ತನಾ ॥
ದರದಿಂ ರಾಕ್ಷಸವಿದ್ಯೆಯುಂ ಬಿಡದೆ ಬದ್ಧದ್ವೇಷದಿಂ ತಾನೆಸಲ್ ।
ಒರೆಯಿಪ್ಪಾತನನೊಂದು ದುರ್ಗತಿಗಳಂ ಲೆಕ್ಕಂಗೊಳಲ್ ತಕ್ಕರಾರ್ ॥೬೦॥

ವರನಂ ಪಡೆದಂ ಕುಂಭಂ ।
ಪರಿಗೆತ್ತಂ ಮತ್ಸರಂ ಕೊಲುತ್ತಿರೆ ಭವ...ದಿಂ ।
ದಿರಲಮ್ಮದೆ ಜನಮಸಿತುಂ ।
ನೆರೆದಾಕಾರಕಟಪುರಿಗೆ ಪ್ರೋದತ್ತಾಗಳ್ ॥೬೧॥

ಬಲಿಯನೆ ಬಂದು ತಮ್ಮಯ ಪುರೀಜನಮಂ ತಿನೆ ಕಂಡು ಕುಂಭನಂ ।
ಕಟಿಯೊಳೆ ಬಾರದೆಂದಱಿದು ತಾಮನಿಬರ್ ನೆರೆದಿಂತು ಮಾಡಿದರ್ ॥
ಘಟಿಲೆನೆ ಬಂಡಿದೀವಿದಶನಂ ನರನೊರ್ವನವಂಗೆ ಬಾಱಿಯೆಂ ।
ದಳವಡ ಸಿಕ್ಕ ಮುಯ್ದು ಕುಡುವಂತಿರೆ ಸಂಪ್ರತಿಯಿಂ ಪುರೀಜನಂ ॥೬೨॥

ನೆರೆದು ನಿಜನಗರಿಗೇಟ್ಟಿಂ ।
ದಿರುತುಂ ಕುಂಭಂಗೆ ಬಾಱಿಯಂ ಜನಮನಿತುಂ ॥
ಪರಿವಿಡಿಯಿಂ ಕುಡುತಿರಲಾ ।
ಪುರಿಗಾದುದು ಕುಂಭಕಾರಕಟಮುಂ ಪೆಸರಿಂ ॥೬೩॥

ಸತಿ ವೋಮಶ್ರೀಯಂ ದ್ವಿಜ ।
ತತಿಮುಂಡನ ಚಂಡಕೌಶಿಕನುಮಾಭೂತ ॥
ಪ್ರತತಿಯನೆ ಪರೆಸಿ ಪಡೆದರ್ ।
ಸುತವರವಂ ಮುಂಡಕೌಶಿಕನನಾಪುರದೊಳ್ ॥೩೪॥

ತನಯಂಗಂದಿನ ಬಾಳ್ ತಾನಪರಿಹಾರಂ ಬಂದಿರಲ್ ಬಾಯ್ವಿಡು ।
ತ್ತೆನಸುಂ ಸ್ತ್ರೀಯತ ಚಂಡಕೌಶಿಕನಿರಲ್ ಕೊಂಡುಯ್ದರಾಬಾಳ್‌ಯಾ ॥
ತನನಾಭೂತಸವೋಜವುಯ್ದು ಗುಹೆಯೊಳ್ ಬೈತಿಟ್ಟು ಕುಂಭಂಗಿದಿ ।
ರ್ಚಿನಿಲಲ್ಕಾಕ್ಷಣದಿಂದವೊಂದಜಗರಂ ನುಂಗಿತ್ತು ತತ್ಪುತ್ರನಂ ॥೩೫॥

ಅದುಕಾರಣದಿಂ ವಿಜಯಾ ।
ರ್ಧದ ಗುಹೆಯೊಳಗುಯ್ದು ಭೂಪನಂ ಬೈತಿರಿಸಿ ॥
ರ್ದುದು ತಾನನುಜೆತಮೆಂದಿಂ ।
ತುದಾತ್ತನುತಿ ಬುದ್ಧಿಸಾಗರಂ ನೆಱಿ ನುಡಿದಂ ॥೩೬॥

ವ॥ ಕುಶಾಗ್ರೀಯಮತಿಯಪ್ಪ ಮತಿಸಾಗರನಿಂತೆಂದಂ :—

ನುಡಿದಂ ನೈಮಿತ್ತಿಕಂ ಪೌದನಪುರಪತಿಶೀರ್ಷಾಗ್ರದೊಳ್ ಬಂದು ಬೀೞ್ಗಂ।
ಸಿಡಿಲೆಂದಂತಲ್ಲದೀಶ್ರೀವಿಜಯನ ಪೆಸರ್ಗೊಳ್ಳಂ ದಿಟಂ ಹೊಂಬೆಸಕ್ಕಂ ॥
ಬಡೆಯಲ್ ಯಕ್ಷೇಶನಂ ನಿರ್ಮಿಸಿ ನಿರುಪಮಸಾಮ್ರಾಜ್ಯಪಟ್ಟಾರ್ಹನಂಮಾ
ಡಿಡೆ ಸಿಂಹಾಸಂಧಿಯೊಳ್ ಪಡ್ಡಿವಸಮಿರಲದರ್ಕಪ್ಪುದಾವಜ್ರಪಾತಂ ॥೩೭॥

ಇಂತೆನೆ ಮತಿಸಾಗರನೆಂ ।
ದಂತಿರೆ ಮಂತ್ರಿಗಳುಮರಸನುಂ ಬಗೆಗೊಂಡಾ ॥
ದಂ ತಡೆಯದೆ ಮಾಡಿಸಿದರ್ ।
ಸಂತಸದಿಂ ಕನಕಮಯದ ಯಕ್ಷಾಕೃತಿಯಂ ॥೩೮॥

ಎನಿತಾನುಂ ರತ್ನಭೂಷಾವಿಸರವಸನದಿಂ ರಮ್ಯನಂ ಮಾಡಿ ಸಿಂಹಾ ।
ಸನದೊಳ್ ಮುಂದಿಟ್ಟು ಸಾಮ್ರಾಜ್ಯದ ವಿಭವಮುದಕ್ಷೀಣದಿಂದೊಪ್ಪಿಯಕ್ಷೇ
ಶನನಿಂತೊತ್ತುತ್ತೆ ಬಾಹತ್ತರದ ಬಹುನಿಯೋಗವ್ರಜಂ ಬಂದು ಮೆಯ್ವೆ ।
ರ್ಚೆ ನಿತಾಂತಂ ಸುತ್ತಿ ಸಾರ್ದೋಲಗದೆಸಕದಿನಿರ್ದತ್ತು ವಿಭ್ರಾಜಿಸುತ್ತುಂ।

ಜಿನ ಚರಣಮೆ ಶರಣಂ ತಾ ।
ನೆನಗಿಂಬಂತೆ ಬೈತ್ಯನಿಳಯಕ್ಕಾಗಳ್ ॥

ಜನಪತಿತನಮುಂ ಸಲೆ..... ।

.....ಪತ್ತು ವಿಟ್ಟು ಪುರುಕುಲತಿಲಕಂ ॥೪೦॥

ಜಿನಪದಪದ್ಮಮುಂ ಪದೆದು ಪೂಜಿಸುತುಂ ಜಿನರಾಜಮೂರ್ತಿಕೀ ।
ರ್ತನಮನೆ ಮಾಡುತುಂ ಜಿನಕಥಾವಳಿಯಂ ನೆಲೆ[3] ಕೇಳುತುಂ ಜಿನೇಂ ॥
ದ್ರನ ರಮಣೀಯರೂಪಮನೆ ಭಾವಿಸುತುಂ ನೃಪನಿರ್ದನಿಂತು ನೆ ।
ಟ್ಟನೆ ವರಪಾತ್ರದಾನಯುತಶಾಂತಿಕಪೌಷ್ಟಿಕಮುಂ ನಿಮಿರ್ಚ್ಚಿದಂ ॥೪೧॥

ನೆಗೆದತ್ಯಭೀಳಮಾಗೇಜನೆಯುದಿನದೊಳ ಭಾಳಯುಭಾಗ್ರದೊಳ್ ಮಿಂ
ಚುಗಳೆತ್ತಂ ಮಿಂಚುತುಂ ನೀಳ್ದಿರೆ ಘುಡುಘುಡಾರಾವಮುಂ ಕಲ್ಕೆ ದಿಗ್ಭಾ॥
ತ್ರಿಗಳಂ ತಲ್ತುರ್ವಿ ನುರ್ಬಾವರಿಸಿ ನುಸಗಿ ಮೇಘೌಘಮಂ ಚೆಲ್ಲಿದಂತ ।
ಲ್ಲುಗೆ ಶಂಕಾತಂಕದಿಂ ತತ್ಪುರಜನನನುನಿತುಂ ಬಾಯ್ವಿಡುತ್ತಿರ್ದಾಗಳ್ ॥
ಕಡಲೆಲ್ಲಂ ತುಳ್ಕೆ ಬಳ್ಕುತ್ತವನಿ ನಡುಗೆ ದಿಕ್ಕುಂಭಿಗಳ್ ಕುಂಬುತುಂ ಘೀ ।
ಳಿಡೆ ತತ್ಪೌರವ್ರಜಂ ಬಾಯ್ವಿಡೆ ಕಡುಗಿ ಸಿಡಿಲ್ ಕಾಯ್ದುಪೊಯ್ಯಲ್ಕಿರೀಟಂ॥
ಸಿಡಿದಂಗಂ ನುಚ್ಚು ನೂರಾಗಿರೆ ಕೆದಱಿ ಮಣಿಶ್ರೇಣಿಗಳ್ ಮೂರ್ತಿಮಾತ್ರಂ।
ಗಿಡೆ ಯಕ್ಷಾಧೀಶಭಾಸ್ವತ್ಪ್ರತತಿ ಲಯಮನೆಯ್ದಿತ್ತು ವೈಚಿತ್ರ್ಯಮಾಗಳ್॥

ಪರಮುಸಿತೆ ಪಿಂಗೆ ಪರಿಜನ ।
ಪುರಜನ ಪುರುವಂಶಜನಮನದ ನಚ್ಚಿಡುತುಂ ॥
ಪರಮಜಿನೇಂದ್ರಮುಖೋದಿತ ।
ವರವಾಕ್ಯಮವೋಘಮೆಂದೆನುತ್ತಮನಿತ್ತಂ ॥೪೪॥

ಅರಸಂ ಪಾಜ್ಯಮೆನಿಪ್ಪ ರಾಜ್ಯದ ಘನಂ ಪಟ್ಟಾಭಿಷೇಕಪ್ರಭಾ ।
ಸುರಮಂ ತಾಳ್ದಿಯವೋಘಜಿಹ್ವನೆನಿಪಾನೈವಿತ್ತಿಕಂಗೊಲ್ದು ಸಾ ॥
ದರದಿಂ ಪದ್ಮನಿಭೇಟನುಂ ಬೆರಸು ನೂಱುಂ ಬಾಡವಂ ಕೊಟ್ಟು ಸು ।
ಸ್ಥಿರದಿಂ ಶ್ರೀವಿಜಯಂ ಸಮಂತರಸುಗೆಯ್ಯುತ್ತಿರ್ದನುತ್ಸಾಹದಿಂ ॥೪೫॥

ಬಲವೀದಂಬಿಕೆ ತನ್ನಯ ।
ಕುಲಾನುಗತಗಗನಗಾಮಿನೀವಿದ್ಯೆಯನೀ ॥
ಯಲೊಡಂ ಶ್ರೀವಿಜಯನೃಪಂ ।
ಸಲೆ ಪಡೆದಿಂತೆಸೆಯುತಿರ್ದನಿರ್ದೊಂದು ದಿನಂ ॥೪೬॥

ಪದೆಪಿಂ ಶ್ರೀವಿಜಯಾವನೀಶನೆನಿಸುಂ ಹೃದ್ಭೂತಿಶೀಲಾವಿಲಾ ।
ಸದಿನಾಗಳ್ ಪರಮಪ್ರಿಯಾಂಗನೆ ಸುತಾರಾದೇವಿಯುಂ ತಾನುಮು ॥
ಗ್ಗದ ಸಂಕ್ರಂದನನಂದನಪ್ರತಿಮುದಾಜ್ಯೋತಿರ್ವರ್ಣಕ್ಕಾದಮೆ ।
ಯ್ದಿದನಾರೂಢವಿಮಾನನಾಗಿ ಪಿರಿದಾನುಂ ಬೇಗದಿಂ ರಾಗದಿಂ ॥೪೭॥

ಮಣಿಘಂಟಾವಲಕೂಟಂ ಕೃತಿ ಗಳರುತಿ ವೀಣಾರವಸ್ಪರ್ಧಿ ಭದ್ರೋ।
ಲ್ಬಣಭಾಸ್ವತ್ಕಟಕೋಟಿಪ್ರಕಟಘಟಿತರತ್ನಪ್ರಭಾರಾಜಿ ರೋದೋಂ ॥
ಗಣರಾಜದ್ವರ್ಣಪೂರೋತ್ಕರಮೆನಿಸಿದನೂನಾತ್ಮವೈಮಾನದಿಂ ಧಾ ।
ರಿಣಿಗಿಂತಾಗಳ್ ಸುತಾರಾಂಗನೆವೆರಸಲಿಗೆ-ಟ್ಟಿಂದನಂತಾನರೇಂದ್ರಂ ॥೪೮॥

ಜಳಚಂಡಾನಿಳಘಾತದಿಂ ಪರಿದು ಬಿಲ್ದಿತ್ತುರ್ವಿಯೊಳ್ ಶಕ್ರಚಾ ।
ಪಳತಾಕೀರ್ಣತೆವೆತ್ತ ಕಾರ್ಮುಗಿಲ ವೊತ್ತಂ ತಾನೆನಲ್ ತಲ್ತು ಕ ॥
ತ್ತಲಿಸುತ್ತುಂ ಬಹುವರ್ಣಪರ್ಣಫಲಪುಷ್ಪೋಪೇತಭೂಜಾತಸಂ ।
ಕುಲಸಚ್ಛಾಯತೆಯಿಂ ವಿರಾಜಿಸುವ್ರದಾವಿಖ್ಯಾತ ಜ್ಯೋತಿರ್ವನಂ ॥೪೯॥

ಸರಸೀಸ್ವಚ್ಛಾಂಬುಶುಂಭತ್ಕಲವವಿಸರಸ್ಪರ್ಶನಾರ್ದ್ರಂ ನವೀನಾಂ ।
ಬುರುಹಶ್ರೇಣೀಪರಾಗೋಪಜನಿತರುಚಿರರೂಪಂ ರತಿಶ್ರಾಂತಕಾಂತಾ ॥
ಸುರಭಿಶ್ವಾಸಪ್ರಕಾಶಂ ಮದವದಳಿಪ್ತುಂತಿಕ್ಕರವಾಚಾಳನಿಂತ ।
ಚ್ಛರಿಯಿಂ ತೀಡಿತ್ತು ಜ್ಯೋತಿರ್ವನಜಸಿತಸವಾನೋದಸಾರಂ ಸವಿಸ್ತಾರಂ ॥

ಸ್ಫುರಿತಾಂಕೂರಪ್ರವಾಳಪ್ರಸರಫಲತರುಸ್ತೋಮಶೋಭಾಮಯಂ ತ ।
ತ್ತರುಮೂಲಂ ಲಾಲಿತೇಂದೂಪಲವಿಲುಳಿತವೇದೀಮಯಂ ವೇದಿಗಳ್ ಕಿ ॥
ನ್ನರಕಾಂತಾಕಾಂತಗೊಪ್ಪೀಮಯಮೆಸೆವ ಲಸದ್ಗೋಷ್ಠಿಗಳ್ ಕಾಕಳೀಪ್ರೋ
ದ್ಧುರಗೀತವ್ರಾತಸವ್ಮೋಹನಮಯಮೆಸಿಸಿತ್ತಾವನಾಂತಂ ನಿತಾಂತಂ ॥೫೦॥

ರತಿವೆರಸು ರತಿವರಂ ನವ ।
ರತಿಂಗಾಗದಿನಾಗಳಿಂತು ಪುಗುತಪ್ಪವೊಲಾ ॥
ಸತಿಯುಕ್ತಂ ಶ್ರೀವಿಜಯ ।
ಕ್ಷ್ಮಾಪತಿ ಪೊಕ್ಕಂ ವಿನೂತಜ್ಯೋತಿರ್ವನಮುಂ ॥೫೧॥

ವನಧಿಪರೀತಾವಸಿಗೀ ।
ತನೆ ಪತಿಯೆಂದವನಿಪತಿಗೆ ವನಲಕ್ಷ್ಮಿ ಕರಂ ॥

ನುನವೊಸೆದಿಕ್ಕುವ ಸೇಸೆಗ ।
ಳೆನಿಸಿದುವೆಲರಲೆಪದಿಂದಮುಲ್ಲಗುವಲರ್ಗಳ್* ॥೯೩॥

ವ॥ ಮತ್ತಮಾಜ್ಯೋತಿರ್ವನದೊಳ್ ತರುತತಿಯು ಸಂಭವನ್ನದಿಂ ದುರ್ವಿದ ಮುರ್ವು ರಾತ್ರಿಯೆಂಬ ಶಂಕೆಯಿಂದಾತಂಕವುಸಪ್ಪುಕೆಯ್ವ ಜಕ್ಕವ ಕ್ಕಿಗಳ ಚಿತ್ತಕ್ಕೆ ಪಗಲನಭಿನಯಿಸುವರುಣಮಣಿಶಿಲಾಮಯಸರೋಜಾಕರಂ ಗಳ ಕೆಂಬೆಳಗಂ ಪಗಲೆಂದು ಬೆಗಡುಗೊಳ್ವ ಚಕೋರಚಯಕ್ಕೆ ಚಂದ್ರಿಕೆ ಯನೊದವಿಸುವಿಂದುಕಾಂತಮಣಿಶಿಲಾಘಟಿತಕುಮುದಾಕರಂಗಳುಂ। ಅಕು ಮುದಾಕರಂಗಳ ಬೆಳ್ವೆಳಗಂ ಪಾಲ್ವೊನಲೆಗೆತ್ತು ಪೀರ್ವಾಸೆಯಿಂ ಪಠಿವ ತರುಣಕಳಹಂಸಂಗಳುಂ। ಆಕಳಹಂಸಂಗಳ್ ಮೇಯ್ದುಟ್ಟಿದ ಕರ್ನೆಯ್ದಿಲ ಕಾವುಗಳಂ ಬಾಳಕಾಳೋರಗಭ್ರಾಂತಿಯಿಂ ಕದ್ದುಂಕುವ ಕಿಶೋಡಕೇಕಿ ಗಳುಂ। ಕಿಶೋರಕೇಕಿಗಳ ಕಲಾಪಕಾಂತಿಯುಂ ದೂರ್ವಾಂಕುರಮೆಂದು ಬಲಿವಿಡಿದು ಬರ್ಪ ಮೃಗಶಾಬಂಗಳ ಮಧುರಾವಲೋಕನನುಂ ಕಲವೆಂದು ಕೆಳಗೊಂಡೊಡನೊಡನೆ ನಡೆಪಾಡುತಿರ್ಪ ಮುಗ್ಧಾಂಗನೆಯರುಂ। ಆಮು ಗ್ಧಾಂಗನೆಯರ ಬಾಯೆಂಜಲಿಗಳಂ ಬೀಡೆನ್ನೋದ ದಾಡಿನುದ ಪಣ್ಗಳೆಂದು ತಳರ ತೊಂಗಲೆಂದು ನಿಳ್ಕನೋಡುವ ಬಾಲಕೀರಂಗಳುಂ। ಆಬಾಲಕೀರಂಗಳ ಚಂಚುಸಂಚಯಮುಂ ಚೂತಕಲಿಕಾವಲಿಯೆಂದು ನೆಲಗರ್ಚಲವ್ವಳಿಪ ಕಲ ಕಂಠಕಿಶೋರಂಗಳುಂ। ಆಕಳಕಂಠಕಿಶೋರಂಗಳ ಕಳಕಳಕ್ಕೆ ಕೆಳದುಗೀಲಿ ಪಾಯ್ವ ಗೋಲಾಂಗೂಲಂಗಳುಂ। ಆ ಗೋಲಾಂಗೂಲಂಗಳ ಗತಿಘಾತಾಕಂಪನಕ್ಕೆ ಪಱಿದು ಬಿದ್ದೊಡೆದ ತಾಳವಣ್ಗಳ ತನಿರಸಪ್ರವಾಹನುಂ। ಆಪ್ರವಾಹಂಗಳಂ ನಿರೀಕ್ಷಿಸಿ ನೆಲಕ್ಕೆ ಪಾಯ್ದು ವೊಗವಿಟ್ಟಲಂಪಿನಿಂದೀಂಟುವ ಕಪಿಪೋತಂಗಳುಂ। ಆಕಪಿಪೋತಂಗಳ ಗಂಡೂಷದ ಪರಿಮಳಕ್ಕೆ ಪರಿ ಮಳಿಯಾಡುವ ಪರವೆವಳಿಗಳ ಜಣತ್ಕಾರಾಸಾರದಿಂ ಪೂರಿತವುಗಿರ್ದ ಆ ವನಚಿತ್ರಶೋಭೆಯುಂ ನೋಡುತ್ತುಂ ಪೋಗೆವೋಗೆ—

ಶರದಭ್ರಾದಭ್ರಕುಭ್ರದ್ಯುತಿಸಮಿತಿ ಪಯೋರೂಪವಾಯ್ತೀ ವಿಭಾಭಾ।
ಸುರಮುಕ್ತಾ ರತ್ನಜಾಳಂ ಮಗುಳೆ ಸಲಿಲವಾಯ್ತೀ ಮಹೇಶಾದ್ರಿ ಲಂಕೇ॥
ಶ್ವರಬಾಹಾಭೀತಿಯಿಂದಲ್ಲಿಯೆ ಕರಗಿ ರಸಂಬೆತ್ತುದೋ ತಾನೆನಲ್ ಬಿ ।
ತ್ತರಿಸುತ್ತೆ ಚ್ಚಾಂಬುವಿಂ ಕಣ್ಗೊಳಿಸದುದೆನಸುಂ ಪುಂಡರೀಕಾಬ್ಜಷಂಡಂ ॥

ಕಮುಲಾಭಿಶೋಭೆಯಿಂ ಚ ।
ಕ್ರಮಿಳತ್ಕಮನೀಯದಿಂದನಂತವಿಹಂಗೋ ॥
ತ್ತಮವಿಭ್ರಮದಿಂ ಹರಿಯಂ ।
ತೆ ಮನೋಹರವಾಯ್ತು ಪುಂಡ್ರಸಂಕಜಷಂಡಂ ॥೯೫॥

ವ॥ ಆಪುಂಡರೀಕಷಂಡಮುಂ ಕಂಡಲ್ಲಿ ತೃಷ್ಣೆಯಿಂ ಜಾಲಾಹಾರನಾಗಿ ಭೋಗುತ್ತುಮಿರ್ಪಾಗಳ್—

ಜಲಯಂತ್ರಂಗಳ ರತ್ನಪುತ್ರಿಕೆಗಳಿತ್ತಂ ತಟ್ಟಿ ತಾರಾಗೃಹಾ ।
ವಲಿಯಿಂ ಸೋರ್ವಮಲೇಂದುಕಾಂತಿಸಲಿಲೋದ್ಯತ್ಪೂರಕಾಸಾರಸಂ ॥
ಕುಲದಿಂ ಶಕ್ರಧನುಸ್ಸಮಾಜದಗೆಯೋ ತಾನೆಂಬಿನಂ ನೀಳ್ದ ನಿ ।
ರ್ಮಲನಾನಾಮಣಿರೋಜೆಯಿಂ ಕೃತಕಶೈಲಶ್ರೇಣಿ ಕಣ್ಗೊಪ್ಪುಗುಂ ॥೯೬॥

ವ॥ ಆಕೇಳೀಶೈಲೋಪಾಂತದೊಳ್—

ತಮಗೆನ್ನಂತೆ ನಿರಂತರಂ ನಿಜಭುಜಂಗಾಲಿಂಗನಕ್ರೀಡೆಯಿಂ ।
ದಮೆ ಸೈತಿರ್ಪ ವಿನೋದಮೆಲ್ಲಿಯದೆನುತ್ತುಂ ನಾಡೆಯುಂ ಖೇಚರ ॥
ಪ್ರಮದಾನೀಕಮನೋವದಿಂತು ನಗುತಿರ್ದತ್ತೆಂಬಿನಂ ನೀಳ್ದ ಪು ।
ಷ್ಪಮಯೂಖೋತ್ಕರದಿಂ ಕರಂ ಸೊಗಯಿಸಿತ್ತಾ ಕೇತಕೀವಿಭ್ರಮಂ ॥೯೭॥

ವ॥ ಇಂತು ಕಂಗೊಳಪ ಕೇತಕೀಮಂಡಪದೊಳ್ ಮಂಡಿತವಾದ ತಳರ್ವಸೆಯ ಮೇಲೆ ವಿಳರ್ವ ಕೋಪಶಿಖೆಯಿಂದೊಗೆವ ಬೆಮರ್ವನಿಯುಂ ನಖಮುಖದಿಂ ಸಿಡಿಯುತ್ತುಮಿರ್ದ ವಲ್ಲಭೆಯ ಮುಖಕ್ಕೆ ಬೇಗದಿಂ ಪೋಗಲಮ್ಮದೆ ಮೆಲ್ಲಮೆಲ್ಲಗೆ ಬಂದು—

ಇನಿಯಳ ಚಿತ್ತದೊಂದು ಮುನಿಸಂ ಕಳೆಯಲ್ಕೆ ಕೃತಾಪರಾಧಿ ಮೆ ।
ಲ್ಲನೆ ಚರಣಕ್ಕೆ ವಂದೆಱಗಿ ತದ್ವನಿತಾನಖಪಾತಮಿಲ್ಲದಾ ॥
ತನುವುಮನಕ್ಷತಾಧರಮುಮಂ ನೆಱಿದೀಕ್ಷಿಸಿ ಪಂಕಜಾಕ್ಷಿ ತೊ ।
ಟ್ಟನೆ ತೊಱಿದಳ್ ಮನಃಪ್ರಿಯನುಮಂ ನಿಜಕೋಪಮುಮಂ ಕ್ಷಣಾರ್ಧ [ದೊಳ್ ॥೯೮॥

ವ॥ ಅಂತೊಂಡೆಡೆಯೊಳ್ ಬಿತ್ತರಿಪ ಸಲ್ಲಲಿತಲತಾವುಂದಿರದೊಳ್—

ಕೃತದೋಷಂ ಪಿರಿದಾಗೆಯುಂ ಸಖಿಯರಂ ನುಂದಿಟ್ಟುಕೊಂಡಲ್ಲಿಯು ।
ದ್ಗತ ಶಂಕಾಕುಳನಿಂತು ಬಂದೆಱಗಿರಲ್ ಪಾದಾಗ್ರದೊಳ್ ವಲ್ಲಭಂ ॥

ಕ್ಷತಗಾತ್ರಾಧರನಾದುದಂ ಬಗೆಯದಂತಾಕಾಂತೆ ಬಾಷ್ಪಾಂಬುಬಿಂ ।
ದುತತಿಕ್ಷಾಲಿತಸಾರ್ದ್ರವೃತ್ತಕುಚದೊಳ್ ತಟ್ಟಿಪ್ಪಿದಳ್ ಕಾಂತನಂ ॥೯೯॥

ವ॥ ಆವನಿತೆಯರಿರ್ವರ ನಿಜವಿವೇಕಪ್ರಭಾವಕ್ಕಿದುವೆ ತಕ್ಕುದು ಬೀವುಂ ತಿಳಿವುಮೆಂದು ಮಹೀವಲ್ಲಭಂ ಮನದೊಳ್ ಮೆಚ್ಚುತ್ತುಂ ಪೋಗೆ ಮತೊಂದೆಡೆಯೊಳ್—

ನನೆ ಬಲ್ನನೆ ಮೊಗ್ಗೆಯಲರ್ ।
ಕನಗೊಂಯ್ ಕಾಯ್ ದೋರೆವಣ್ಣ ಪಣ್ ತನಿವಣ್ಣಿಂ ॥
ದೆನಸುಂ ತುಱುಗಿರ್ದುದು ನೂ ।
ತನಚೂತಂ ಶುಕಪಿಕಾಳಿಮೂಲಾದ್ಯೋತಂ ॥೧೦೦॥

ವ॥ ಇಂತೆನೆವ ಚೂತಭೂಜಾತನಮುಂ ಪೂತಡರ್ದ ಮಲ್ಲಿಕಾವಲ್ಲರೀ ವೇಲ್ಲಿತನಿಲಯದೊಳ್ ಮಿಸುಪ ತಳಿರ್ನರೆಯ ಮೇಲೆ ಲೀಲೆಯಿಂ ಕೆಳದಿಯ ರ್ವೆರಸು ಕುಳ್ಳಿರ್ದು ವಿದಗ್ಧವಿದ್ಯಾಧರೀಗಾಯಕಿಯೊರ್ವಳ್—

ಮುಕ್ಕುಳಿಸಿ ಮಿಂಚಸುಗುಳ್ದಪ ।
ಳಕ್ಕುಮೆನಲ್ ದಂತಕಾಂತಿ ಪೊಳೆನುಡೆ ಕಿವಿಯಿಂ ॥
ಜಕ್ಕುಲಿಪ ನುಣ್ಬರಂ ನೆಱಿ ।
ಮಿಕ್ಕೆಸೆಯಲ್ ಪೌಢೆಯುವತಿ ಪಾಡುತ್ತಿರ್ದಳ್ ॥೧೦೧॥

ವ॥ ಆಸುದತಿಯು ಸೀಯಸಪ್ಪ ಗೇಯರಸಾಮೃತ ರಸಪ್ರವಾಹಮುಂ ಕಿವಿಗುಡಿತೆಗಳಿಂದೀಂಟಿ ಕಂಟಕಿತಕಳೇವರನಾಗಿ ತಲೆದೂಗುತ್ತುಂ ಶ್ರೀವಿಜಯಮಹಾರಾಜಂ ಪೋಗೆವೋಗೆ ಮತೊಂದೆಡೆಯೊಳ್—

ಇದು ಮದನನ ಕೂರ್ವಾಳೊಳ್ ।
ಪೊದಳ್ದಿ ಕರ್ವೊಗರ ಬೀಜದಿಂ ನೆಟ್ಟನೆ ಪು ॥
ಟ್ಟಿದುದೆಂಬ ತೆಱದೆ ಕಟ್ಟಿಲಿ ।
ಪುದು ತಳರ ತುಱುಂಗಲಿಂ ತವೊಳವಮಹೀಜಂ ॥೧೦೨॥

ವ॥ ಇಂತು ಕಟ್ಟಿಲಿಪ ತನೂಲತರುವಿನ ತಳರ ಮೂರ್ಪೊಳಪಿನಿಂ ನಿರ್ಮಳವಾದ ಪಳಕಿನ ಪಟ್ಟಶಿಲೆಯೊಳಟ್ಟಳವಾಗಿ ಪರಪಿದ ಪಲ್ಲವಾಸ್ತರಣದೊಳ್—

ಉರದೊಳ್ ಪೆರ್ಮೊಲೆ ಸೊಕ್ಕಡಂಗಿದುವೆನಲ್ ತಟ್ಟಿಪ್ಪಿ ಬಾಯಲ್
[ಬಾಯೊಳೊಂ ।

ದಿರೆ ಸೀತ್ಕಾರಮದುನ್ಮೆ ಪೊನ್ಮೆ ಪುಳಕಂ ಬೆಂಡೆಟ್ಟು ಕಣ್ಗಳ್ ಮುಗು ॥
ಳ್ತರೆ ಪೂತಂಗೊಳೆ ನಾಣ್ವುದಂ ಮದನಸಂಯೋಗಕ್ಕೆ ಪಕ್ಕಾಗಿ ಬಿ ।
ಟ್ಟಿರೆ ಮೆಯ್ಯಿಟ್ಟನಿಯರ್ ಮನೋಭವನನುಳ್ಳಂತ್ಯಂ ದಲೆಂಬಂದದಿಂ ॥೧೦೩॥

ವ॥ ಇಂತು ಸವನಿಸಿದ ಸಂಮದಕೇಳೀವಿಳಾಸಸುಖಸುಪ್ತರಾದ ವಿದ್ಯಾಧರದಂಪತಿಗಳಂ ವಿವೇಕವಿದ್ಯಾಧರಂ ನೀಡುಂ ನೋಡಿ ಮೆಚ್ಚುತ್ತುಂ ಪೋಗೆಪ್ಪೋಗೆ ಮತ್ತೊಂದೆಡೆಯೊಳ್—

ತಳರ್ಗಳದೊಂದುಕೊಂಬು ನನೆವೂದುಱುಗಲ್ಗಳದೊಂದುಕೊಂಬು ಪೂ|
ಗಳನಮುದೊಂದುಕೊಂಬುಮಿಸುಪೊಳ್ಕಿಡಿದೊಂಗಲದೊಂದುಕೊಂಬುಕಾ ॥
ಯ್ವಳಗಮದೊಂದು ಕೊಂಬು ಹದದೋರೆರಗಳೋಳಿಯದೊಂದುಕೊಂಬು ಪ|
ಣ್ಗಳನೆನೆವೊಂದು ಕೊಂಬು ತಳೆದಿಂತು ಮನೋಹರವಾಯ್ತು ವಾವರಂ ॥

ವ॥ ಇಂತಗುರ್ವುವಡೆದು ಸಾರ್ವರ್ತುಕಮೆನಿಸಿ ಮನೋಜರಾಜನ ರಾಗದ್ವಾರವಾಗಿರ್ದ ಸಹಕಾರಮಹೀರುಹದೊಳ್—

ಮಳಯಸವಿರಣಾಹತಿಯಿನುರ್ವಿಗೆ ಬಿಂದುವಿಡುತ್ತುಮಿರ್ದ ಪ ।
ಣ್ಗಳ ರಸನುಂ ಪೊವಟ್ಟಿ ನಿಜಚಂಚುವಿನಿಂ ನೆಱೆ ತೀವಿ ತಂದು ನು ॥
ಳ್ದಳರ ತುಱುಂಗಲೊಳ್ ನಲಿಯುತುಂ ಬರವಾರುತುಮಿರ್ದ ತನ್ನ ಪೆ ।
ಣ್ಡಿಗೆಱೆಯುತ್ತುಮಿರ್ದುದೆನಸುಂ ಪದೆಪಿಂ ಸುರತೋತ್ಸುಕಂ ಶುಕಂ ॥೧೦೪॥

ವ॥ ಆರಾಜಶುಕನ ಸುರತೋತ್ಸುಕತೆಯುಂ ಭಾವಿಸಿ ದೇವಿ ನೋಡೆಂದು ಸುತಾರಾದೇವಿಗೆ ತೋಱಿ ವೊಗದೊಳ್ ಮುಗುಳ್ನಗೆಯುನಗೆಯಿತ್ತುತುಂ ರಾಜಂ ಮನೋಜರಾಜನ ಕೆಯ್ತದ ಕೌತುಕಂಗಳಂ ಕನ್ನಡಿಸುತ್ತುಮಿರ್ದುದುಂ ತನ್ನ ಕಣ್ಗಿವಂದ ವಾಕ್ಯಂದವುಹೀಜಾತದೊಳ್—

ತವಕದೆ ತಂದು ಪೆಣ್ಗಿಗೆ ಪಣ್ಗಳನಿತ್ತು ಕಡಂಗಿ ಹಿಂದನೆ ।
ತ್ತುವ ಹದನೀಯೊ ಹಱುತ್ರಿಸುತುಮಿರ್ದಱಿಯುಂ ಪಿಡಿದೇಱಿಕೊಳ್ವ ಕೂ ॥
ಡುವ ತಣಿವೆಯ್ದಿ ಸಾರ್ದದಱು ಯೋನಿಯು ಶುಕ್ರವುನೀಟ್ಟಿಕೊಂಡು ಹಿಂ ।
ಜವವೊಗೆಯೋಡಿ ವಾಸಿಸುವ ವಾನರನಂ ನೃಪನಲ್ಲಿ ನೋಡಿದಂ ॥೧೦೫॥

ವ॥ ಆಕಪಿಯ ಕುತ್ಸಿತವಪ್ಪ ಕಂತುವಿಕಾರಮಂ ಕಾಂತೆಯೆ ನೋ
ಡೆಂದು ತೋಱಿ ದ್ವಿಗುಣೀಭೂತಪ್ರಹಾಸಪರಿಕಳಿತವುಖಿಯಂ ಮಾಡಿ ಮು
ಹೀಕಾಂತನಲ್ಲಿಂ ತಳರ್ದು ಪೋಗೆ—

ಶ್ರೀರತಿನಾಥಭೂಪತಿಗೆ ಚೈತ್ರವತೀಸತಿ ಚಿತ್ರವಾಗೆ ವಿ ।
ಸ್ತಾರಿತಶೋಣರತ್ನರುಚಿಯುಂ ತಗದೇಱಿಸಿ ಮಾಡಿದೊಂದು ಗೂ ॥
ಡಾರಮಿದೆಂಬಿನಂ ಕಿಸುದಳರ್ ಪ್ರದಿದಿಂತೆಸೆದತ್ತ ಕೋಕಧಾ ।
ತ್ರೀರುಹವಾವನಾವಳಿಗೆ ಕೆಂಬೆಳಗಂ ಕೆದಱುತ್ತುಮಾವಗಂ ॥೧೦೩॥

ವ॥ ಆಸುದತಿಯ ಸಾತ್ವಿಕಭಾವವಮಂ ಸೂಚಿಸುವ ಸಂಭೋಗಜನಿತ
ಚಿಹ್ನಂಗಳ ವಿಭ್ರಮದ ಸೊಗಸಂ ಮಗುಳೆ ಮಗುಳೆ ನೋಡುತ್ತುಂ ಪೋಗೆ
ವೋಗೆ—

ಸತತಂ ಪುಷ್ಪವತೀಪ್ರಿಯಂ ಮಧುಪನೆಂದುಂ ಮತ್ತನುದ್ಯತ್ಪ್ರಮಾ ।
ನ್ವಿತನತ್ಯಂತಮಲೀಮಸಾಂಗನದಱಿಂದಸ್ಪೃಶ್ಯನೆಂದಾಮಧು ॥
ವ್ರತನಂ ಸೊರ್ದಿಸದಿರ್ಪೆನೆಂಬ ತೆಱದಿಂ ಭೃಂಗವ್ರಜಂ ಮುಟ್ಟದ ।
ಕ್ಷತಸೌರಭ್ಯದ ಪೆಂಪುವೆತ್ತ ಕುಸುಮಂ ತಾನೊಂದೆನಲ್ ಚಂಪಕಂ ॥೧೦೪॥

ವ॥ ಇಂತು ನಿರಸ್ತಮಾದ ನವೀನಾಮೋದಸಂಪತ್ತಿಯಿಂ ಪೆಂಪುವಡೆದ
ಚಂಪಕದ ಚಂಚುರತೆವೆತ್ತು ಬಿತ್ತರಿಪ ಚಾಂಪೇಯದೊಳ್—

ನೆಟ್ಟನೆ ಕಾಂತನೊಳ್ ತಿಳಿಯಲಿರ್ದಪೆ ಕೋವಮಳಿ ನಿನ್ನ ಜವ್ವನಂ ।
ನಿಟ್ಟಿಯೆ ಬರ್ಪನೇ ಮಗುಳೆ ಪೋದ ದಿನಂಗಳದೇಂ ಕೃಪಾತ್ಮನೇ ॥
ದುಟ್ಟ ಜಣಂಗಳತ್ತೊಲವು ನಿತ್ಯವೆ ನಾಳೆ ಬಸಂತಮುಂಟೆ ಬಾ ।
ಯ್ವಿಟ್ಟು ಪಲುಂಬಲಪ್ಪುದೆ ಪೆಱಿರ್ಗಿನಿಯುಂ ಬಸವಾಗಿ ಪೋಗೆಯುಂ ॥೧೦೫॥

ವ॥ ಇಂತು ಮುಟ್ಟ ನುಡಿದು ಕಟ್ಟಾಯದ ಕಡುಮುಳಿಸಿಂ ಕಳಲಿ ಕೋ
ಮಲೆಯುಂ ಬಸದಾಗಿಸಿ ಕಾಂತನೊಳ್ ಕೂಡಿದ ಸುದತಿಯ ಸುಪ್ರೌಢಿಯುಂ
ನಾಡೆಯುಂ ಮೆಚ್ಚುತ್ತುಂ ಪೋಗೆ ನುಂದೊಂದೆಡೆಯೊಳ್—

ಬಲ್ಮತ್ತಿನ ಬಳಗವುಣಂ ।
ಮೆಲ್ಮಗುಳಾದಂತೆ ಪೊಳೆವ ಬೆಳ್ಪಸೆವಲಗೊಂ ॥
ಜಲ್ಮಸುಕಿ ಪರಿಮಳದ ಗೊಂ ।
ಚಲ್ಮಸುಕಿದುದಲ್ತೆ ಮಾಧವಿಯ ಪಾದಪದೊಳ್ ॥೧೧೦॥

ವ॥ ಆವಾಧವೀಲತೆಯ ಬಾಟಿಂಪದೊಳ್‌—

ಪಾಸುದಳಿರ್‌ ಕರಿಂಕುವರಿದಂತಿರೆ ಕೊಟ್ಟಲರ್ವಚ್ಚ ವಾಕ್ಷಣಂ ।
ಕೇಸುರಿ ಕೊಂಡವೊಲ್‌ ವಿಗೆ ಮುರುಂಟೆ ಸಖೀಜನವೆಲ್ಲ ಪೊವೆರ್ದೊದಲ್‌॥
ಸೂಸುವ ಶೀತವಾಃಕಣಗಣಂ ನೆರೆ ಚುಯ್ಯೆನೆ ತಗ್ಗಿ ಪೋಗೆಯುಂ ॥
ಕಾಸಿದ ಕಾಮುಪುತ್ರಿಕೆವೊಲಿರ್ದಳವಳ್‌ ವಿರಹೋಗ್ರವಹ್ನಿಯಿಂ ॥೧೧೧॥

ವ॥ ಇಂತಳುಂಬವಾದ ವಿರಹಾನಳಾಡಂಬರಕ್ಕೆ ವಿಸ್ಮಯಂಬಡುತ್ತುಂ ಪೋಗೆವೋಗೆ—

ಪರಿಮಳಕೆ ಮೆಚ್ಚಿ ಮಧುವಾ ।
ದರದಿಂದೆತ್ತಿಸಿದ ಪೀಲಿಗೊಡೆಯೆನೆ ಮಧುಪೋ ॥
ತ್ಕರಮೆಱಗಿ ನೆಱೆ ತುಱುಂಗಿರೆ ।
ಪಿರಿದುಂ ಸುರಹೊನ್ನೆ ಚೆನ್ನವಾದುದು ಬನದೊಳ್‌ ॥೧೧೨॥

ವ॥ ಇಂತು ಚೆನ್ನವಡೆದಾಸುರಹೊನ್ನೆಯ ಪೊದಱಿೊಳ್‌ ಪ್ರದಿದ ಲತಾಸದನದೊಳ್‌—

ನಱುಸುಯ್ಯ ಕಂಪಿನಿಂಪಿಂ ।
ಗೆಱಗುವ ಮದಭೃಂಗವಮೂಲೆ ಬಿಟ್ಟಿರುತಿರೆ ಪೂ ॥
ತೆಱಗಿದ ಚಂಪಕಲತೆಯಂ ।
ನೆಱೆ ಪೋಲ್ತಳ್‌ ವಿರಹದಹನದಾಹಿನಿಯೂಗಳ್‌ ॥೧೧೩॥

ವ॥ ಅದಂ ಕಂಡೀಕೆಯು ವಿರಹಾತಿರೇಕಂ ಜೆತ್ರವೆಂದು ನೋಡುತ್ತುಂ ಪೋಗೆವೋಗೆ ಮುಂದೊಂದೆಡೆಯೊಳ್‌—

ಮುಡಿಗೆವರಲ್ಕೆ ಸೂಡಿದಲರಂ ಬಿಸುಟಳ್‌ ಕಿವಿಯತ್ತಲೆಯ್ದಿವಂ ।
ದೊಡವುವತಂಸವುಂ ಕಳೆದಳಾಭ್ರಮರಾವಳಿ ಸುಯ್ಯೆ ಸೌರಭ ॥
ಕ್ಕೆಡೆವಿಡದಿರ್ದೊಡಂತವನೆ ಸೋವಲೊಡಂ ಜವಗೆಟ್ಟು ನಾಡೆಯುಂ ।
ಸಿಡಿವಿಡಿಗೊಳ್ವ ಮುಗ್ಧೆ ನಗೆಯಂ ಪಡೆದಳ್‌ ಪತಿವಕ್ತ್ರಪದ್ಮದೊಳ್‌ ॥

ವ॥ ಆತರುಣಿಯ ಮುಗ್ಧಭಾವಕ್ಕೆ ಭೂವರಂ ತಾನುಂ ಮುಗುಳ್ನಗೆ ನಗುತ್ತುಂ ಪೋಗೆ ಮುಂದೊಂದು ವಾಕಂದವುಹೀಜದ ತುಱುಂಗಿದ ಶಾಖಾಗ್ರದೆ ಮೆಱೆವ ಹಿಂದೋಳದೊಳ್‌—

ತರಳಕಟಾಕ್ಷಮಾಲೆಯೊಡನಾಡೆ ಮನೋಭವನಾಲತಾಂಗಭಂ ।
ಗುರದೊಡನಾಡೆ ನಿರ್ಮಳವಿಳಾಸದಗುರ್ವು ಪೊದಳ್ದಿಗೇಯದಿಂ ॥
ಚರದೊಡನಾಡೆ ನೇವುರದ ಕಿಂಕಿಣಿಯೊಳ್ದನಿ ಕಂಪುವೆತ್ತ ಸು ।
ಯ್ಯೆರಲೊಡನಾಡೆ ಭೃಂಗಿಕುಳವುಂಗನೆ ಭಂಗಿಯಿನುಯ್ಯಲಾಡಿದಳ್ ॥೧೧೫॥

ವ॥ ಆಸೌಂದರಿ ಹಿಂದೋಳದೊಳಾಡುವ ಗಾಡಿಯನವಲೋಕಿಸು ತ್ತುಂ ಪೋಗೆ ಮುಂದೊಂದು ಬಳ್ಳವೂವಿನ ಕಾವಣದೊಳ್—

ಮುಳದಿಳದಾತ್ಮಕಾಂತನಿರದೆಟಿಕ್ಕಿಡೆ ತಾನೊಡನೆಟ್ಟು ಮುಂದೆ ನಿಂ ।
ದೆಳೆಯನೆ ನೋಡುತುಂ ನಡುಗುತುಂ ನಱುಸುಯ್ ನಿಮಿರುತ್ತುಮಾಸಕೋ॥
ಮುಳತನು ನಾಡೆಯುಂ ಬೆಮರುತುಂ ಬಗೆಗೆಟ್ಟುಗುವಶ್ರಬಿಂದುಸಂ ।
ಕುಳವದು ಕೋಪಕರ್ದಮವುನಾಕ್ಷಣದೊಳ್ ತೊಳೆದತ್ತಧೀಕನ ॥೧೧೬॥

ವ॥ ಆಮುಗ್ಧೆಯ ಸಾತ್ವಿಕಸ್ನೇಹಮನಱಿದು ಮುಳಸನುಱಿದಾತನ ಜಾಸ್ಥಿ ಮೆಚ್ಚುತ್ತುಂ ಪೋಗೆ ಮುಂದೊಂದೆಡೆಯೊಳ್—

ತನಗೆನಸುಂ ಮನಃಪ್ರಿಯವೆನಿಪ್ಪಲರ್ಚ್ಚಮನೆಯ್ದಿ ಮಾಡಿತಂ ।
ದನುನಯದಿಂದಲಂಕರಿಸಲೆಂದವತಂಸವನಿಕ್ಕುತುಂ ಕದಂ ॥
ಪನೆ ಪಿರಿದೊಂದಲಂಪು ವಿಗೆ ನೋಟ್ಪಿನಿಯುಂಗೆ ನಿಜೇಷ್ಟತುಷ್ಟಿಯುಂ ।
ವನರುಹನೇತ್ರೆ ಸಂಗಳಿಸಿದಳ್ ಕುಸುಮಾಸ್ತ್ರವಿತಾನಕೇಳಯಂ ॥೧೧೭॥

ವ॥ ಆವಧೂಟಿಯ ವಿವೇಕವೃತ್ತಿಯುಂ ಮೆಚ್ಚುತುಂ ಪೋಗೆ ಮತೊಂದು ತಾಣದೊಳ್—

ಇನಿಯನ ರೂಪವಿದ್ಧಮನದಂ ಬರೆದೀಕ್ಷಿಪ ಕಾಂಕ್ಷೆವೆತ್ತು ಭೋಂ ।
ಕೆನೆ ಬಳಪಕ್ಕೆ ನೀಡೆ ಕರಪಂಕರುಹಂ ನಡುಗಲ್ಕೆ ಗಾತ್ರಮುಂ ।
ಮನ ಬೆದಱಲ್ಕೆ ಬಯ್ದು ಬಿದಿಯುಂ ನಿಡುಸುಯ್ದಿರದಿಕ್ಕಿದಳ್ ಘನ ।
ಸ್ತನತಟದೊಳ್ ಲತಾಂಗಿ ನಯನಾಂಬುಕಣಂಗಳ ತೋರಹಾರವುಂ ॥೧೧೮॥

ವ॥ ಆಕೆಯ ಸಾತ್ವಿಕಚೇಷ್ಟೆಯುಂ ಮುಗ್ಧಭಾವಮುಂ ಭೂವರಂ ಭಾವಿಸುತ್ತುಂ ಪೋಗೆ ಮುಂದೊಂದು ಮುಂದಯಿಸಿ ಪೂತ ಮಾಲತೀಲತಾ ಮುಂದಿರದೊಳ್—

ಚರಿತಲತಾಂಗಭೂಷೆಯನೆ ಮಾಡಿ ಬಱಿಕ್ಕಮದೊಂದು ಕಂಠಿಕಾ ।
ಪರಿನೃತಿ ವಕ್ಷಕಾಗುತಿರೆ ನೋಡಿ ಕಟಾಕ್ಷದಿನಾಕೆ ಹಾರವ ॥

ಲ್ಲರಿಯನೆ ಮುಂ ನೆಲಕ್ಕೆಲ್ಲಿಪಿ ಸಾರ್ದು ಮನಃಪ್ರಿಯನಂ ಸ್ವಕೀಯಪೀ ।
ವರಕುಚಹಾರವುಂಗಿಸಿದಳಾಗಳೆ ತಾನವಳೇಂ ವಿದಗ್ಧೆಯೋ ॥೧೦೯॥

ವ॥ ಅವಿದ್ಯಾಧರವಧೂವರರಿರ್ವರ ಭಾವಜ್ಞತೆಗೆ ಭಾವಕಲಾವಿದಂ ಮನದೊಳ್ ಮೆಚ್ಚು ತುಂ ತಾನುಂ ಮಾನಿನಿಯುಂ ಪೋಪುತ್ತಮಿರೆ—

ಘನವಿಖ್ಯಾತೆ ಸುತಾರೆಯೆಂಬ ಪೆಸರಂ ತಾಳ್ದಿರ್ದಳಾಕಾಂತೆ ನೆ ।
ಟ್ಟನೆ ನಮ್ಮೀನಿಜನಾವುದಿಂ ಮಿಗಿಲೆನುತ್ತುಂ ನೋಡಲೆಂದಾವನಾ ॥
ವನಿಗೇಱ್ತಂದುವೊ ತಾರೆಗಳ್ ಕುಸುಮರೂಪವ್ಯಾಜದಿಂ ತಾಮೆನ ।
ಲ್ಕೈನಸುಂ ಪೂತೆಸೆದಿರ್ದುದಿಂತಸದಳಂ ಮಲ್ಲೀಲತಾಸಂಕುಳಂ ॥೧೧೦॥

ವಿರಹಿಗಳನಿಸುವ ಮದನನ ।
ಶರಮುಕ್ತೋದ್ಭೂತ ಝೇಂಕೃತಧ್ವನಿಯೆನೆ ಪ ॥
ಟ ರಣಕಾಲಕಲರವಂ ಪುದಿ ।
ದಿರಲೆಸೆದುದು ಮಲ್ಲಿಕಾಲತಾವನವಾಗಳ್ ॥೧೧೧॥

ವಿದಿತಾನೂನನವೀನ ಮೌಕ್ತಿಕನಿಜೋದ್ಯನ್ಮಲ್ಲಿಕಾಕುಟ್ಮಳಂ ।
ಪದಸಂದಂನತರಾಂಜಿತಪ್ರತಿಕೃತಿಪ್ರವ್ಯಕ್ತಿಯಿಂದಾಲತಾ ॥
ಸದನಾಂತರ್ಗಳಯೋಜ್ವಲನ್ಮಣಿಶಿಲಾಪಟ್ಟಂ ಕರಂ ಕಣ್ಗೆನಂ ।
ದುದು ತನ್ನೋಲ್ತಣಿಯೂಗೆ ತಾರಕಿತಸಂಧ್ಯಾಭ್ರಾವಳೀವಿಭ್ರಮಂ ॥೧೧೨॥

ಪ॥ ಅಂತುಮಲ್ಲದೆಯುಂ

ಕುಸುಮಶರನಸಮತೇಜ ।
ಪ್ರಸರಮನುಗುಱ್ದಿಪುದು* ತಾನಿದೇಂ ಬೆಳಗನೆನಲ್ ॥
ದೆಸೆದೆಸೆಗೆ ಪಸರಿಸುತುಮಿಂ ।
ತೆಸೆದುದು ಪೊಳೆವರುಣಮಣಿಶಿಲಾಪಟ್ಟತಲಂ ॥೧೧೩॥

ವ॥ ಇಂತು ಶೋಭಿಸುವ ಶೋಣಮಣಿಶಿಲಾತಳದೊಳ್ ಕೇಸಲರ್ಗಳೆನಿಸಿ ಭಾಸುರತೆವೆಡೆದ ಧವಳಕುವಳಯದ ನಿಟ್ಟಿಸಲ್ಗಳಿಂದಿಟ್ಟಳವಾಗಿ ಯೊಪ್ಪನೋಲಗಿಸುವೆಸಟಿ ತಲ್ಪತಳವನಲಂಕರಿಸಿ ತಾರಾದೇವಿಯುಂ ಭೂವರನುಮಿರೆಯುವಾಪದದೊಳ್—

ಬರೆ ಪುರುವಂಶವಲ್ಲಭನ ಮೇಲೆನಸುಂ ಘನಸಾರಸೂಕ್ಷ್ಮಭಾ ।
ಸುರ ಪಟವಾಸಚೂರ್ಣಚಯಮುಂ ವನಲಕ್ಷ್ಮಿಯೆ ಸೂಸುವಂತೆ ಪ ॥

ಟ್ಟಿರಣಗರುತ್ಸವಿಸಾರಹತಿಯಿಂದೊಗೆದುಜ್ವಳಮುಲ್ಲಿಕಾರಜೋ ।
ಭರಿತಮದಾಗಿ ಕಣ್ಗೆಸೆದುದಾಕಮನೀಯಲತಾನಿಕೇತನಂ ॥೧೨೪॥

ಸದಮುಳಮುಕ್ತಾವಳಿಯಿಂ ।
ಪೊದೆಯಿಸಿದನೊ ಚೈತ್ರನೆನೆ ತದೀಯಲತಾವಾ ॥
ಸದ ವಿಚಕಿಲಕುಟ್ಮಲವಿಸ ।
ರದ ಪದಪಂ ದೇವಿ ನಾಡೆ ನೋಡುತ್ತಿರ್ದಳ್ ॥೧೨೫॥

ದೇವಿ ನಿರೀಕ್ಷಿಪ ಚಿತ್ತದ ।
ಭಾವಮನಱಿದಾಗಳಂತೆ ವಿರಚಿಸಿದಂ ನಾ ॥

ನಾವಿಧದಲರ್ವಚ್ಚಂಗಳ ।
ನಾವಿಚಕಿಲಕುಟ್ಮಲಂಗಳಿಂದವನೀಶಂ ॥೧೨೬॥

ವ॥ ಇಂತೆಸೆಯೆ ಸಮೆದಲರ ಪಲತೆಱದ ತೊಡವುಗಳಿಂದಾಮುಹೀ ವರಂ ಸುತಾರಾದೇವಿಯ ಸೌಂದರ್ಯಶರಣಮೆನಿಪ ಚರಣಂಗಳ್ಗೆ ನನೆಯ ನೇವುರಮನಳವಡೆ ತುಡಿಸಿಯುಂ । ಲಾವಣ್ಯಲಕ್ಷ್ಮೀಪ್ರಸಾದಂಗಳ ಜಂಘೆಗಳೆನಿಪ ಚರಣಕಾಂಡಂಗಳ್ಗೆ ಬಿರಿಮುಗುಳ ಬಿಡಿಗಳಿಟ್ಟಳವಾದ ಪಾಯವಟ್ಟಂಗಳನಮರ್ಚಿಯುಂ । ಮದನವಾಹಿನಿಯ ನುಣ್ಬುಱಿನತಳಮೆನಿಸಿ ಮೋಹಿಸುವ ನಿತಂಬಂಗಳ್ಗೆ ವಿಚಕಿಲಕುಟ್ಮಲಾವಲೀಘಟಿತ ಕಟಿಸೂತ್ರಮುಂ ತೊಡರ್ಚಿಯುಂ। ಸಲೆ ನೆಲಸಿ ನಲಿವ ನನೆಯಂಬಿನಿರ್ಕೆವೆಟ್ಟುಗಳೆನಿಪ ಬಟ್ಟ ಬಲ್ಮೊಲೆಗಳ್ಗೆ ತೋರಮುಲ್ಲಿಗೆಯ ಹಾರವಲ್ಲರಿಯನವಲಂಬಿಸಿಯುಂ । ಪಂಚಶರನ ಪಾಶಂಗಳೆನಿಪ ನಳತೋಳ ನುಳ್ಬಳಗು ಜಗುಟ್ಟಿಱಿದು ಪರಿಗುಮೆಂದು ಸೇತುಗಟ್ಟುವಂತಲರ ಕರವಲಯಂಗಳಿಂ ಮೆಲ್ಲುಗುಳ ಪಿಂಡುಗಂಕಣಂಗಳನಲಂಕರಿಸಿಯುಂ । ಕಡೆಗಣಿಸಿ ನಿಮಿರ್ದ ಕಡೆಗಣ್ಗಳ ಕಡುವೆಳಗಿಂಗೆ ತಾಮೆ ಸೀಮೆಯಾಗಿರ್ದುದೆಂದು ಮುಚ್ಚುಗುಡುವಂತಲರನುಚ್ಚವತಂಸಂಗಳಿಂ ಶ್ರವಣಪಾಳಿಕೆಗಳನೋಲಗಿಸಿಯುಂ । ಲಲಾಟಮೆಂಬ ಲಲಿತಾರ್ಧಚಂದ್ರಮಂಡಲಕ್ಕೆ ಲಕ್ಷ್ಮಲಕ್ಷ್ಮಿಯುಂ ಪಡೆವಂತೆ ಮೃಗಮದತಿಲಕಮುಂ ತಿಲಕಿಸಿಯುಂ । ಮುಂಡಳಿಸಿದ ಮದನಕಾಳಾಹಿಯಂ ಬೆಳ್ದಿಂಗಳ ಬಿತ್ತುಗಳಿಂದರ್ಚಿಸುವಂತೆ ಧಮ್ಮಿಲ್ಲಮುಂ ಮುಲ್ಲಿಕಾಮುಕುಳಮಾಲಿಕಾನೀಕಶೇಖರಿತಮಾಗಿಸಿಯುಂ । ನಳತೋಳ ಮೊದಲೊಳಾದೀವಿ ನೆಗೆವ ನುಣ್ಬೊಗರ ಮಾಪ್ಪೊಳಪಂ

ಪ್ರಕಟೀಕರಿಸುವಂತೆ ಕಸ್ತೂರಿಕಾಕರ್ದಮದಿಂ ನೆಲೆವೊಲೆಗೆಲದೊಳ್ ಪತ್ರ
ಭಂಗಂಗಳನಲಂಕರಿಸಿಯುಂ। ಕಮನೀಯಕುಚಂಗಳೆಂಬವುಳ್ದಾವರೆಗಳಂ ಪ
ಡೆದ ರೋಮಾವಳೀವ್ಯಾಳವಾದಕ್ಕೆ ಕಂಟಕದಂಕೆಯು ಕಸ್ತೂರಿಯ ಪಂಕ
ದಿಂದಲಂಕರಿಸಿಯುಂ। ಶೃಂಗಾರರಸದ ಭಂಗಿ ಮೆಯ್ವೆರ್ಚೆ ವೊಗದೊಳ್
ವೊಗಂದೋಱಿ ತನ್ನೋಱಿಸುವಂತೆ ಮಿಱುಗುವ ಕಪೋಲಭಿತ್ತಿಗಳೊಳ್
ಮೃಗಮದನಿಷದ್ವರದಿಂ ವಿಜೆತ್ರವೂಗಿ ಚಿತ್ರಿಸಿಯುಂ। ಸಕಲಸೀಮಂತಿನೀಜ
ನಶಿರಸ್ಸೀಮಂತಭೂಷಣಲೇಖಾಲಕ್ಷ್ಮಿಯೇ ಕಾಂತೆಯೆಂದು ವನಲಕ್ಷ್ಮಿಗಱಿ
ಪುವಂತೆ ವನರುಹಪರಾಗಶ್ರೇಣಿಯಿಂ ಸೀಮಂತಮಂ ಭೂಷಿಸಿಯುಂ।

ಇಂತು ಪರಿತೋಷಮನೆಯ್ದಿದಾಗಳ್—

ಮದನನ ದರ್ಪವಲ್ಲರಿ ಕರಂ ನನೆವೊತ್ತುದೊ ಜೆತ್ತಜನ್ಮನ।
ಗ್ಗದ ನಿಜಮೋಹನಾಸ್ತ್ರಮದು ಕೂರ್ಮೊನೆವೊತ್ತುದೊ ಕಂತುಖಡ್ಗಪ॥
ಟ್ಟದ ಕಡಿ ತಿರ್ದಿ ತಾಂ ಮಸೆಯಿಸಿತೊ ರತೀಕನ ಕೀರ್ತಿ ಮೂರ್ತಿಗೊಂ।
ಡುದೊ ದಿಟವೆಂಬಿನಂ ಸತಿ ಲತಾಂತವಿಭೂಷದಿನಾದವೊಪ್ಪಿದಳ್ ॥೧೦೭॥

ವನಲಕ್ಷ್ಮಿಯ ನವಯೌವನ।
ಮನದಂ ಸಲೆ ಸಫಲವೂಗಿಸಲ್ ಬಂದ ವಸಂ ॥
ತನ್ಯಪಾಲನೆನೆ ಮಹೀಪಾ।
ಲನಲಂಪಿಂ ತಳ್ವತಳದ ಪೊಸೆಪಸದನಮುಂ ॥೧೦೮॥

ಎನಿತಾನುಂ ತಲೆಮಿಕ್ಕು ಮುಂಬರಿದು ತನ್ನಿಂ ಮುನ್ನವೂಳೋಕಿಪಂ।
ತೆ ನಿಜಾಂಗಾವಯವಂಗಳೊಳ್ ಪುಳಕಜಾಳಂ ಪೊಣ್ಮೆ ಹರ್ಷಾಶ್ರುಲೋ॥
ಚನಪಂಕೇಜದೊಳುಣ್ಮೆ ತೊಟ್ಟನೆ ವಿವರ್ಣಂ ವಕ್ತ್ರದೊಳ್ ಪೊಣ್ಮೆ ಕಂ।
ಪನವೂಳ್ಕಡಿಸೆ ನೋಡಿದಂ ಸತಿ ಸುತಾರಾದೇವಿಯುಂ ಭೂವರಂ ॥೧೦೯॥

ಕುಡಿಯುಲಗಂ ತಿಱಿಪಿದನೆಡೆ।
ಯುಡುಗದೆ ಕಡೆಗಣ್ಗೆ ಕಂತುವೆನೆ ಕುಡುವಿಂಚಂ ॥
ಬಿಡೆ ಕೆದಱುವ ಕಡೆಗಣ್ಣಿಂ।
ನಡೆನೋಡಿದಳರಸಿ ನೃಪನ ಸೊಂಪನಲಂಪಿಂ ॥೧೧೦॥

ಎನಸುಂ ಪರಸ್ಪರಾಲೋ।
ಕನಸುಖದಿಂ ಸಮನಿಸಿತ್ತು ಸಾತ್ವಿಕವೂಗಳ್ ॥

ಸುನಿತಾಂತವಮಾಸುತಾರಾಂ ।
ಗನೆಯೊಳ್ ಶ್ರೀವಿಜಯನೃಪನೊಳಂತಾಕ್ಷಣದಿಂ ॥೧೩೧॥

ತವಕಂ ಮಿಕ್ಕಮರ್ದಪ್ಪಿದೀತವಕಯುಗ್ಮಂ ತಾನಿದಂತಶ್ರಮಂ ।
ಭವನೇತ್ರಂ ನಸುಗೆಂಪನೆಯ್ದೆ ನವರೋಮಾಂಚೋತ್ಕರಂ ಕೂಡೆ ಪಾ ॥
ಯ್ವೊಲುರ್ಬಿಟ್ಟಿರೆ ಬಾಯ್ಗೆ ಸಿಲ್ಕಿತಧರಂ ಕೈಬಿರ್ದ ತಾಣಂ ಕಳಾ ।
ಭವನಂ ತಾನೆನಲಿಂತು ಸಂಭ್ರಮದೆ ಕಂತುಕ್ರೀಡೆಯಂ ಮಾಡಿದರ್ ॥೧೩೨॥

ತನುರೋಮೋದ್ಗಮಘರ್ಮದೊಳ್ ಪುದಿಯೆ ಬಾಯ್ ತೇರ್ಗೆಸೆ ನಾಣ್
[ಸೋಲೆ ಕಂ ।
ಪನವುಂ ಗದ್ಗದವುಂ ಪೊದಳಿಪ್ಪುದೆಯೆ ರಾಗಂ ಕಣ್ಗೆವಂದೇಟಿ ಭೋಂ ॥
ಕನೆ ಮೇಲ್ವಾಯ್ದುಮರ್ದಪ್ಪಿ ತಳ್ಪದೊಳಮುಳ್ಗಂತೆಂತು ಬಿಟ್ಟಿಂತೆ ಕಂ ।
ತುನವೀನಾತುಳಕೇಳಿಯಾಗೆ ನೆರೆದರ್ ಮಾದೇವಿಭೂವಲ್ಲಭರ್ ॥೧೩೩॥

ಸ್ಮರಮಂತ್ರಾವಳಿಯಿಂದೆನಲ್ಕೆ ಸದೃಶೋಕ್ತಿವ್ಯಾತಮುರ್ವೇಟಿ ಬಂ ।
ಧುರಗಂಧಶ್ವಸಿತಾನಿಳಂ ನಿಮಿರೆ ಸೀತತ್ಕಾರಸ್ವರಂ ನೀಳ್ವವೆ ॥
ತ್ತಿರೆ ಹರ್ಷಾಶ್ರುಕಣಾಳಿ ಬೀಟಿ ಪಸೆನಾಣಾನಂ ಪದಂ ಸೂಸಿ ಪಾ ॥
ಯ್ತರೆ ತಾಮಿಂತು ಸುಖಾಮೃತಾಬ್ಧಿನಳಿಯೊಳ್ ತೇಂಕಾಡಿದರ್ ನಾಡೆಯುಂ॥

ವ॥ ಇಂತು ಸಮನಿಸಿದ ಕಂತುಕ್ರೀಡಾನಂತರಂ ಸುತಾರಾದೇವಿಯುಂ ಭೂಪಂ ಭಾವಿಸಿ ನೀಡುಂ ನೋಡುವಾಗಳಾಸುರತಸುಖಪರಿತುಷ್ಟಮನಃ ಪ್ರಣಯದಿಂದಲಂಕೃತಿಶಾಸ್ತ್ರದಂತೆ ಕಾಂತಿಪ್ರಸಾದಮಯಮಾದ ವಿಧು ಮಂಡಳಮುಂ । ಕಂತುಕುಂತಾಪಮಾನ ದರ್ಶನಧವಳಪ್ರಭಾವಗಾಹದಿಂ ಪರಮಯೋಗಸಾರದಂತೆ ರಾಗಂ ಪಿಂಗಿ ಪೊಂಗಿದ ಬಿಂಬಾಧರಮುಂ। ಸಮ ಯೋಗಸುಖದ ಸೊರ್ಕಿಂ ಬಿಟ್ಟಿಕ ತಪಸಿಯ ಮನದಂತೆ ರಾಗಾವಿಳವಾದ ವಿಲೋಲಾಯತವಿಲೋಚನಂಗಳುಂ । ಶೋಭಾಲಕಾವಳೀಸ್ಥಳಸ್ವೇದಸಂಗ ದಿಂ ಸಜ್ಜನ ಮನೋವೃತ್ತಿಯಂತೆ ವಿರಹಿತವಾದಳಕವಲ್ಲಿಗಳುಂ । ಕುಸು ಮಾಸ್ತ್ರಕೇಳೀಸರಭಸದಿಂಕುಕವಿಕೃತಿಯಂತೆ ಶಿಥಿಲಬಂಧವಾದ ಪೃಥುಲಕ ಬರೀಭಾರಮುಂ । ಸುರತಶ್ರಮಸಂಭವಾತುಳಘರ್ಮದಿಂ ಶಿಶಿರಮುಖಹತಿ ವೆತ್ತ ವನಗಜದಂತೆ ವಿಗಳಿತಪತ್ರವಲ್ಲಿಯಾದ ಕಪೋಲಕುಚಮೂಲಂಗಳುಂ। ನಿರ್ದಯಾಲಿಂಗನದಿಂ ಕಳದದಾನಿಯಂತೆ ತೊಟ್ಟಡಂಗಿದ ಬಟ್ಟಮೊಲೆಗಳುಂ।

ಸಮೋ್ಹನರತಿಕಲಾಸ್ಖಲನದಿಂ ಶಶಿಕರಾಪಾವಸಿತೋಪಲಪ್ರತಿಕ್ರಿಯೆಯುಂತೆ
ಪಳಚ್ಚಿನಾಗಿ ಪೊಳೆವಮಳಮಯಕೋಮಳಾಂಗಯಷ್ಟಿಯುಂ—ಪುನರತಾಸ
ಕ್ತಿಯಂ ಪುಟ್ಟಿಸೆ ಪರಿತುಷ್ಟಸುರತಸೌಖ್ಯಾಯವೂನವೂನಸರಾಗಿ—

ಪರಿತುಷ್ಟಿವೆತ್ತು ಸುರತದ ।
ಪರಿಶ್ರಮಮನಾರಿಸಲ್ ತದೀಯಲತಾವುಂ ॥
ದಿರದಿಂ ಪೊಱಮಟ್ಟರ್ ಭೂ ।
ವರನುಂ ಸತಿಯುಂ ಸಮಾಂದ್ಯಮಯಮೃದುಗತಿಯಿಂ ॥೧೩೫॥

ಸ್ಫುರಿತೇಂದೂಪಳದೊಂದು ಪಟ್ಟಶಿಲೆ ಸಿಂಹಾಸಂಧಿಯೆಂಬಂತೆ ಬಿ ।
ತ್ತರವಾಗಿರ್ದುದನೊಲ್ದಲಂಕರಿಸಿ ಮುನ್ನಂ ತನ್ನ ವಾವಾಂಕವಿ ॥
ಪ್ಪರದೊಳ್ ಮೆಲ್ಲನೆ ಲಲ್ಲೆಯಿಂದುರುನಿತಂಬಾಗ್ರಕ್ಕೆ ಕೈನೀಡಿ ಹ ।
ರ್ಷರಸಂ ಕೈಮಿಗೆ ತಂದು ಕುಳ್ಳಿರಿಸಿದಂ ಭೂಕಾಂತನಾಕಾಂತೆಯಂ ॥೧೩೬॥

ರಯ್ಯಮೆನಿಸಿದ ಸುತಾರೆಯ ।
ಮೆಯ್ಯೊಳ್ ಕದಪುಗಳೊಳಿಸೆದ ಜೆವುರ್ವಸಿಗಳನಾ ॥
ಸುಯ್ಯೆಲರಿಂ ಭೂವಲ್ಲಭ ।
ನೊಯ್ಯನೆ ತಾನೂದಿಯುಱಿದಿಯೂಳಿಸುತಿರ್ದಂ ॥೧೩೭॥

ಕಱಿಯುತ್ತುಂ ಮೇಲೆ ಮುಲ್ಲೀಲತೆಯುಲರ್ವಟಿಯುಂ ಮೇಲುದಂ ತೂಗಿ
[ಮೆಲ್ಪಂ ।
ಮೆಱಿಯುತ್ತುಂ ಘರ್ಮಬಿಂದುವ್ರಜಮುನುರದೆ ಪೀಱುತ್ತು ವೋರಂದದಿಂದ॥
ಕ್ಕಱುಗಂಪಂ ನಾಸಿಕಕ್ಕೊಂದಿಸುತೆನಸುಂ ಮೆಯ್ಗೆ ಸೈಪಂ ಸವುಂತೆ ।
ಚ್ಚಱಿಸುತ್ತುಂ ತೀಡುತಿರ್ದತ್ತವರ್ಗನುಚರನಂತಾವನಾಂತಸ್ಸವಿಾರಂ॥೧೩೮

ವ॥ ಆತೆಂಬೆಲರ ತೀಟದಿಂ ಕೂಟದೊಳಾದ ಸುಖಶ್ರಮಸ್ವೇದವಾರಿ
ಪೂಱಿಮನಸುಂ ನಲವೇಱಿ ತಮ್ಮ ಕಣ್ಬೀಡಿನೊಳಾಡುತುಂ ಮೃಗಂಗಳ
ಚೆಲ್ಲಾದಲಲ್ಲಿಯಂ ನೋಡುತುಮಿರ್ಪಾಗಳ್—

ಧರೆಗೆಸೆವ ಚಮರಚಂಪಾ ।
ಪುರದಿಂದಾ್ರಕನಿವಿಯಚ್ಛರಂಗಂ ತತ್ಸಾಂ ॥
ದರಿ ಸೂರಿಗಮುದಯಿಸಿದಂ ।
ದುರಿತಾತ್ಮಕನಕನಿಘೋಷನೆಂಬತುಳಬಳಂ ॥೧೩೯॥

ಪರಿಕಳಿತಾಪಹಹೃದ್ಯಂ ।
ಪರಿಲಬ್ಧಭ್ರಮಣನಿಂದ್ಯನಾಗಿಂತು ವಿಯ ॥
ಚ್ಚ ರರಾಜನಶನಿಘೋಷಂ ।
ತ್ವರಿತದೆ ತಮ್ಮಯ ಪುರಕ್ಕೆ ಪೋಗುತ್ತಾಗಳ್ ॥೧೪೦॥

ಜನಪನ ವಾವೋತ್ಸಂಗಾ ।
ಸನದೊಳ್ ಕುಳ್ಳಿರ್ದು ಕಂಗೊಳಿಪ್ಪ ವ್ಯಗಲೋ ॥
ಚನೆಯಂ ಸುತಾರೆಯಂ ನೆ ।
ಟ್ಟನೆ ಶನಿ ಕಾಣಂತಿರಶನಿಘೋಷಂ ಕಂಡಂ ॥೧೪೧॥

ಇದು ಮೂಲೋಕದ ಕಾಮಿನೀತತಿಗೆ ಚೆಲ್ವಂ ಚೆಲ್ಲಿದಂತೀಯಲು ।
ಣ್ಮಿದ ಲಾವಣ್ಯನಿಧಾನವೋ ನವಲಸತ್ಸಮ್ಮೋಹನಾನೀಕಸಂ ॥
ಪದವೋ ಪೇಟಿನೆ ರೂಪು ರಾಜಿಸುವ ತಾರಾದೇವಿಯಂತಾವಿವಾ ।
ನದೊಳರ್ದಾದುರಿತಾತ್ಮನಪ್ಪಶನಿಘೋಷಂ ನೋಡಿದಂ ನಾಡೆಯುಂ ॥೧೪೨॥

ಕೀಲಿಸಿದಂದದೆ ನಿಂದುದು ।
ಮೇಲೆ ವಿವಾನಂ ಮನೋಜನಿಶಿತಶರಂಗಳ್ ॥
ಕೀಲಿಸಿದುವಶನಿಘೋಷನ ।
ಲಾಲಸತೆಯನಾಂತ ಮನಮನಂತಾಕ್ಷಣದಿಂ ॥೧೪೩॥

ಎಳಸಿದುವೆಯ್ದಿದುವಾಗಳೆ ।
ಬಳಸಿದೊಡವಯವಮನಟ್ಟ ನಲವನಲಂಪಂ ॥
ತಳೆದುಂ ಸುತಾರೆಯಂ ಕಂ ।
ಡಳಿಪಿದ ಖಚರೇಂದ್ರನಶನಿಘೋಷನ ಕಣ್ಗಳ್ ॥೧೪೪॥

ಕುರುಳೊಳ್ ನೇವರಿಪಂತೆ ಭಾಳಪುಟದೊಳ್ ಮುಂಡಾಡುವಂತಾನವಾ।
ಧರದೊಳ್ ಚುಂಬಿಸುವಂತೆಪೀನಕುಚದೊಳ್ ಪೋರ್ವಂತೆ ನೈತಂಬದೊಳ್॥
ನೆರೆವಂತಂಘ್ರಿಗಳೊಳ್ ಸಮಂತೆಱಗುವಂತಾಸಕ್ತಿ ಮೆಯ್ವೆರ್ಚೆ ಸಂ ।
ಚರಿಸುತ್ತಿರ್ದುವು ಕಣ್ಗಳಾಕ್ಷಣದೊಳಾವಿದ್ಯಾಧರಾಧೀಶನ ॥೧೪೫॥

ಎನಗೀಕಾಂತೆಯೆ ಕಾಂತೆಯಾಗೆ ಸಫಲಂ ನುತ್ಪ್ರಾಜ್ಯಸಾನುತ್ರಾಜ್ಯಮೀ।
ಘನಬಾಹಾಬಲಗರ್ವದುರ್ವಿ ನೆಗಟ್ವೀ ವಿರಾರಿದುರ್ವಾರಭಂ ॥

ಜನನುಪ್ಪಗ್ಗದ ವಿದ್ದೆಗಳ್ ದಿಟವೆ ತಾನೆಂದೀಱ್ದು ಕೊಂಡುಯ್ವುದ ।
ನ್ಯನದಂ ಪಾವಕಚಿತ್ತನಪ್ಪಕನಿಷ್ಠೋಷಂ ರಾಗವೇಗೆಯ್ಯದೋ ॥೧೪೬॥

ಪೆರವೆಣ್ಣಪ್ಪೆದಿದಾಗದೆಂಬ ತರೆ ಬರ್ಕುಂ ಬಾರದೆಂಬಾಱಿಸು ।
ತ್ತಿರೆಯುಂ ಸಾಧ್ಯಮುಸಾಧ್ಯಮೆಂಬ ಬಯಸಲ್ ಕಯ್ಗೂಡುಗುಂ ಕೂಡದೆಂ॥
ಬಿರದೇಱ್ಪ್ಪುದು ತಾರದೆಂಬುರುವಿಚಾರಜ್ಞಾನವೀನುಂ ನಿಜಾಂ ।
ತರದೊಳ್ ಪುಟ್ಟ್ಪದು ನಿಟ್ಟಸಲ್ ಕುಸುಮುಕೋದಂಡಗ್ರಹಗ್ರಸ್ತರೊಳ್ ॥

ಅರ ಚರಿತ್ರಮುಂ ಚರಿಸದಾರಱಿವಂ ತಱಿದಿಕ್ಕದಾರ ಗಂ ।
ಭೀರತೆಯಂ ಕಲಂಕದುರದಾರ ವಿವೇಕವನೀಱ್ದು ತೂಱ್ದಿದಾ ।
ರಾರನದಿರ್ದದಾರ ತಪಮುಂ ತವೆ ಭಂಜಿಸದಾರ ಧೈರ್ಯಥಾ ।
ತ್ರೀರುಹಮೂಲಮುಂ ನೆರೆಯೆ ಕೀೞ್ತಲೆದೊಟ್ಟ್ಪದು ರಾಗಮುತ್ಕಟಂ ॥೧೪೮॥

ಅಪವಾದಕ್ಕಳುಕದೆ ನರ ।
ಕಪದಂಬುಗುವಚ್ಚೆಗಕ್ಕೆ ಬೆರ್ಚ್ದೆ ಖಚರಾ ॥
ಧಿಪನಲ್ತೆ ವನಿತೆಗಳಪಿದ ।
ನುಪಾತ್ತಕುಸುಮೋಪಮವಿಹತನೇನಱಿದಪನೇ ॥೧೪೯॥

ಪರವನಿತಾಹರಣಮೆ ಇಹ ।
ಪರಲೀಲಾಹರಣಮೆಂದು ಸಾಱುವ ತೆಱದಿಂ ॥
ಕರಕಂಕಣಯುಗಮುಲಿಯುಂ ।
ತ್ತಿರೆ ಖೇಚರಪತಿ ವಿಮಾನದಿಂ ತಾನಿೞ್ದಂ ॥೧೫೦॥

ಪಡೆದಾಗಳ್ ಖೇಚರಪತಿ ।
ಬಿಡೆ ಮಾಯಾಮೃಗಮದೆಯ್ದೆ ತನ್ಮೃಗತತಿಗಂ ॥
ಪಡೆದುದು ನಲವಂ ಪಿರಿದುಂ ।
ಪಡೆದುದು ನೃಪಸತಿಯ ನಯನಕತಿಕೌತುಕಮುಂ ॥೧೫೧॥

ಮಿಸುನಿಯು ಕಾಂತಿಯಂ ಬಳದು ನುಣ್ಣಿಸದಂದದ ಸಣ್ಣ ತುಪ್ಪುೞಿಂ ।
ತಸಿಯು ಕೊರಲ್ ಚಳಲ್ಲುಳಿತಕರ್ಣಯುಗಂ ಮೃದುರಾವಲೋಕನಂ ॥
ಮಿಸುಗುವ ತೆಳ್ವಸಿಱ್ ಸರಳವಪ್ಪ ಲಸಚ್ಚರಣಂಗಳಿಂದೆ ವೋ ।
ಹಿಸಿದುದು ನಿಂದು ಕೃತ್ರಿಮಮೃಗಂ ನಡೆ ನೋಡುವ ಕಣ್ಗೆ ಕಾಂತೆಯು ॥

ಸರಳಿಸಿ ಪಾಯ್ವ ನಿಂದು ನಸು ನೋಡುವ ಮೆಲ್ಲನೆ ಪೋಪ ಚೆಲ್ಲವುಂ।
ನೆರೆದ ಮಿಗಂಗಳೊಳ್ ಮೆಱೆವ ಪಚ್ಚಗಱುಂಕೆಯನೀಱ್ದು ಕೊಳ್ವ ಚೆ ॥
ಚ್ಚರದಿನಿಱುಂಬಿನೊಳ್ ಪುಗುವ ಬಿರ್ದಿದವೊಲ್ ಪೆಱಸಾರ್ವ ಕೈತಕೋ ।
ದರಮೃಗವಾಗಳಂತೆ ಸೆಱಿಗೊಂಡುದು ಕಣ್ಮಲರಂ ಲತಾಂಗಿಯಾ ॥೧೫೩॥

ತನಗೆ ನಿಜಾಧಿನಾಥನ ಮುಖೇಂದುವನೀಕ್ಷಿಸುತಿರ್ಪುದಲ್ಲದೊ ।
ಯ್ಯನೆ ತಡವಾಗೆ ವಿಹ್ವಲತೆಯುಂ ಸಲೆ ತಾಳ್ದುವ ತತ್ಸುತಾರೆ ತೊ ॥
ಟ್ಟನೆ ನಡೆತಂದ ಕೈತವಮೃಗಾಕೃತಿಯುಂ ನಡೆನೋಡುತಿರ್ದಳೆಂ ।
ದೆನೆ ಪರಿಭಾವಿಸಲ್ ಬಿದಿಯು ಬೀಸಿದ ಮಾಯೆಯನಾರೊ ಮಾಱುವರ್ ॥

ಇನಿಯಳ ಕಣ್ಣಱಿದಾಮಿಗ ।
ವನೆ ತಡೆಯದೆ ಪಿಡಿದು ತಂದು ಕೊಟ್ಟಪೆನಾನೆಂ ॥
ದೆನುತೆಟ್ಟಿಂ ಶ್ರೀವಿಜಯಾ ।
ವನಿಪಂ ಸ್ತ್ರೀವಶದೊಳಱಿವು ಸಂಗಳಿಸುವುದೇ ॥೧೫೪॥

ಪಿಡಿತತಳಕ್ಕೆ ಸಿಲ್ಕ್ಕುವುದನುರ್ಚಿದೊಡಂ ನುಸುಳುತ್ತುಮೆಯ್ದೆ ಕಾ ।
ಲೆಡೆಗಳೊಳಾವಗಂ ಪೊಳೆಯುತುಂ ಮೃಗಶಾಬವದಾಗಳಂತು ಸಂ ॥
ಗಡಿಯೊಳೆ ಪೋಗೆವೋಗೆ ಬಟೆಯಂ ಬಿಡದೆಯ್ದುತುಮಿರ್ದನಟ್ತಿನೂ ।
ರ್ಮಡಿಸಿ ಸುತಾರೆಗಾಕ್ಷಣದೆ ತಂದು ಕುಡಲ್ ಬಗೆದಾನರೇಶ್ವರಂ ॥೧೫೫॥

ಎಂತೆಂತು ಪೋಗೆ ತನ್ಮೃಗ ।
ಮಂತಂತೆ ಮನಕ್ಕದೊಂದು ಪಿರಿದಾಗ್ರಹವೋ ॥
ರಂತೆ ನೆಲೆವೆಱ್ದುತಿರೆ ಬಟೆ ।
ಯಂ ತಱಿಸಂದೆಯ್ದುತಿರ್ದನಾನರನಾಥಂ ॥೧೫೬॥

ವನಿತೆ ಮೃಗಾವಲೋಕನಕುತೂಹಲಮುಂ ನೆರೆ ಮೂಡ್ಪ ಮುತ್ತಮೆ ।
ನ್ನಿನಿಯನದೇಕೆ ಬೆಂಬರಿಯುತಿರ್ದಪನೋ ಮಱಿಯಾದುದೀಗಳಾ ॥
ವನಲತಿಕಾನಿವಾಸಮೆನುತುಂ ಮನದೊಳ್ ಬೆಱಗಾಗಿ ನಿಂದು ನೆ ।
ಟ್ಟನೆ ನಡೆನೋಡೆ ಕಾಣದೆ ಕರಂ ವಿಕಳತ್ವಮನಾಗಳೆಯ್ದಿದಳ್ ॥೧೫೭॥

ಅನಿಮಿಷತೆಯ ನೋಟಮೆ ಜ ।
ನ್ಮನಮೆನಗಂ ತನಗಮಿಲ್ಲಿ ಮಱಿಸಿದೊಡಿಂತೀ ॥

ವನವ್ಯಗಮಿದು ವಿಧಿಕೃತಮೆಂ ।
ದೆನುತುಂ ಕಳವಳಿಸಿ ಕಾಂತೆ ವಿಹ್ವಲೆಯಾದಳ್ ‖೧೫೯‖

ಇನಿಯಂ ತನ್ನಯ ಕಣ್ಣೊಲಕ್ಕೆ ಪಿರಿದುಂ ಗೆಂಟಾಗೆ ಬೆಳ್ಕತ್ತೆ ಬೆ ।
ಚ್ಚನೆ ಸುಯ್ಯುತ್ತೆ ಮರುತ್ಪ್ರಪಾತಲತೆಯಂತಾಕಂಪಿಸುತ್ತಾಗಳು ‖
ಮ್ಮನೆ ಮೆಯ್ಯೊಳ್ ಬೆಮರುಣ್ಮಿ ಬಾಯ್ ಬಱಬಱಂ ಬತ್ತುತ್ತೆ ಕಂದರ್ಪಬಾ।
ಣನಿಕಾಯಕ್ಕೆಡೆಯಾಗಿ ಕಾಂತೆ ವಿರಹೋದ್ಗ್ರಾವಸ್ಥೆಯಂ ತಾಳ್ದಿದಳ್ ‖೧೬೦‖

ಇನಿಯನ ಬಟ್ಟೆಯೊಳ್ ಕಣ್ಣುಂ ।
ಮನವುಂ ಪರಿಯಲ್ಕೆ ಮೂರ್ಛೆವ್ರೋದ ಸುತಾರಾಂ ‖
ಗನೆಯಂ ಕಂಡೆನಗಿದು ಪೊ ।
ಲ್ತಿನುತುಂ ತಾನಶನಿಘೋಷನಿರದೆಯ್ತಂದಂ ‖೧೬೧‖

ಶ್ರೀವಿಜಯಾವನೀಪತಿಯ ರೂಪನೆ ತಾಳ್ದಿ ಬರುತ್ತಿರಲ್ಕೆ ಮಾ ।
ಯಾವಿಹವಿದ್ಯನಪ್ಪಶನಿಘೋಷನವಂ ಪತಿಯೆಂದು ಜೀವಶೋ ‖
ಭಾವಳೆಯಾಗಿ ಚೇತರಿಸಿ ನೋಡಿದಳಕ್ಕುವಿಮಿಶ್ರನೇತ್ರದಿಂ ।
ದೇವಿಯೆನಲ್ ಮನಃಪ್ರಿಯರ ದರ್ಶನದಿಂ ಸುಖಮಾಗದಿರ್ಕುಮೇ ‖೧೬೨‖

ವ‖ ಆಗಳಂತು ಬೇಗಂ ಬಂದಶನಿಘೋಷಂ ತನ್ನಯ ವೈತಾಳಿಯಂ
ಮಾಯಾಸುತಾರೆಯಾಗಿ ನಿರವಿಸಿ—

ತಡಮಾಯ್ತು ದೇವಿ ನೀಸಱ್ ।
ಪಡಲಿರ್ದುದು ನಮ್ಮ ಪುರಕೆ ಪೋಪಮೆನುತ್ತುಂ ‖
ಪಿಡಿದು ತೆಗೆದಶನಿಘೋಷಂ ।
ಮಡದಿಯನೇಱಿಸಿದನಾವಿಮಾನವನಾಗಳ್ ‖೧೬೩‖

ಅವರಿಸುವ ಘನದುರಿತ ।
ಕ್ಕೇವಯಿಸದೆ ದುರ್ಯಶಕ್ಕೆ ಸೆಡೆಯದೆ ಪಿಡಿದಂ ‖
ತಾವೇಗದಿಂ ಸುತಾರಾ ।
ದೇವಿಯನುಯ್ದಂ ದುರಾತ್ಮಕಂ ಖಚರೇಂದ್ರಂ ‖೧೬೪‖

ಖಳನಪ್ಪ ಖೇಚರನ ಕೆ ।
ಯ್ಯೊಳಗಾದ ಸುತಾರೆ ಘೋರತರತಿಮಿರಳುಳಂ ‖

ಮುಳಿದೆತ್ತಿ ಬಂದು ಮುತ್ತಿದ ।
ಬಳಸಿಂಗೊಳಗಾದ ಚಂದ್ರಕಳೆಯಂತಿರ್ದಳ್ ॥೧೬೫॥

ನೆಱೆ ವಿಕೃತಿಯನಾಚರಿಸುವ ।
ತೆಱದಿಂ ತೋಱಿದೊಡನೆಱೆಭಯಕಾಂತೆನಲೆಂದೆನುತ್ತುಂ (?) ॥
ಪೆಱತೊರ್ವ ಕಾಪಟಿಕನೆಂ ।
ದಱಿದು ಕರಂ ಕಾಂತೆ ಬೆದಱಿ ತಳವೆಳಗಾದಳ್ ॥೧೬೬॥

ವ॥ ಇಂತು ಕಾಂತೆ ಕಳವಳಿಸಿ ವಿಕಳಸತ್ವಾಂತೆಯಾಗಿರ್ದಾಗಳ್—

ಎನ್ನಯ ರೂಪಿಂದೊಲಿಸುವೆ ।
ನಿನ್ನೀಕಾಂತೆಯನೆನುತ್ತುಮಾಖಚರವರಂ ॥
ತನ್ನಾಕೃತಿಯಂ ತೋಱಿದೊ ।
ಡನ್ನೆರೆ ಭಯಮುತ್ತು ಕಾಂತೆ ವಿಹ್ವಲೆಯಾದಳ್ ॥೧೬೭॥

ವ॥ ಇಂತು ಕಿಱುದಾನುಂ ಪೊೞ್ತುವರಂ ವಿಹ್ವಲೆಯಾಗಿರ್ದು ಮೆಲ್ಲನೆೞ್ತು—

ಬಸಿಱುಂ ತೊಪ್ಪನೆ ಪೊಯ್ದು ಬಾಯುೞಿಯುತುಂ ಹಾ ನಾಥ ಹಾ ವಲ್ಲಭಾ।
ವಸುಧಾಧೀಶ್ವರ ಪೌರವಕ್ಷಿತಿಧರಾ ನೀನೆನ್ನನೀತಾಣದೊಳ್ ॥
ಬಿಸುಟಿಂತಿಂತಿರಲಾರ್ತೆಯೋ ಪತಿಯೆ ಕೊಂಡುಯ್ದುಂ ಗಡಾ ಪಾಪಿ ರಾ ।
ಕ್ಷಸನಂ ಬಾರಿಸು ದೇವದೇವ ಎನುತುಂ ಮೂರ್ಛೆವಿ ಪ್ರುಯ್ಯಲ್ದಳ್ ॥೧೬೮॥

ಹಾ ಪೌದನಕುಲತಿಲಕಾ ।
ಹಾ ಪೌದನಪುರವರಾಧಿಪಾ ಶ್ರೀವಿಜಯಾ ॥
ಪಾಪಿ ಖಳನೆನ್ನನುಯ್ದಪ ।
ನೀಪದದೊಳ್ ಪಿಂದೆ ನೀನದೇನಾದಪೆಯೋ ॥೧೬೯॥

ಗಿಳಿಗಳಿರಾ ಕಳಾಪಿಗಳಿರಾ ಮಧುಪಂಗಳಿರಾ ಮರಾಳಮುಂ ।
ಡಳಿಗಳಿರಾ ರಥಾಂಗಮಿಥುನಂಗಳಿರಾ ಕಳತಾವಕೋಕಿಲಾ ॥
ವಳಿಗಳಿರಾ ಚಕೋರಯುಗಳಂಗಳಿರಾ ಮುಳಿಸಿಂ ಸುತಾರೆಯುಂ ।
ಖಳನೆಱೆದುಯ್ವನೆಂಬಿದನೆ ವುತ್ಪತಿಗೀಗಳೆ ಪೋಗಿ ಪೇೞಿರೇ ॥೧೭೦॥

ಎಲೆ ವನದೇವತೆಗಳಿರಾ ।
ಜಲದೇವತೆಗಳಿರ ದೆಸೆಯ ದೇವತೆಗಳಿರಾ ॥

ಸಲೆ ದಿಕ್ಪಾಲಕರಿರ ರಿಪು ।
ಖಲನುಯ್ದಪನೆನ್ನನಿಂತಿದಂ ಬಾರಿಸಿರೇ ॥೧೭೧॥

ವೀರವಿಭಾಸಿಯಪ್ಪಮಿತತೇಜನ ತಂಗೆ ಸುತಾರೆಯೆಂಬಳಾ ।
ಪೌರವಭೂಪನಂಗನೆಯನೆನ್ನನಿವಂ ಪಿಡಿದುಯ್ದಪಂ ದುರಾ ॥
ಚಾರಿ ದುರಾತ್ಮಕಂ ತಡೆಯದಿಂತೆಡೆವೊಕ್ಕುಱದಿಕ್ಕೆ ಬೇಗದಿಂ ।
ಬಾರಿಪ ಶೌರ್ಯಸಂಪದರನೀಪದದೊಳ್ ಸೆಱಗೊಡ್ಡಿ ಬೇಡಿದೆಂ ॥೧೭೨॥

ವ॥ ಇಂತು ಪುಯ್ಯಲ್ಬವ ಪದದೊಳ್ ನಿಜಸ್ವಾಮಿಯಪ್ಪಮಿತತೇಜ
ಮಹಾರಾಜನೊಡನೆ ವಿನೋದವಿಹಾರಂಗೆಯ್ದು ಬೀೞ್ಕೊಂಡು ತಮ್ಮಯ
ಜ್ಯೋತಿಃಪ್ರಭಾಪುರಕ್ಕೆ ಪೋಗುತ್ತುಮಾಸಂಭಿನ್ನನುಂ ತತ್ಪುತ್ರನಪ್ಪ ದೀಪ
ಶಿಖನುಂ ನಮ್ಮಾೞ್ದನನುಜೆಯಪ್ಪ ಸುತಾರಾದೇವಿಯಂ(ಶ್ರೀವಿಜಯಾವನೀಶ)
ಕಾಂತೆಯಂ ಕಳ್ದುಯ್ದಪ್ಪನಾವನೆಂದು ಖಾತಿಯಿಂದಱ್ಬಂಬಂದು—

ಬಿಡು ಬಿಡು ಬೇಗದಿಂದಶನಿಘೋಷ ವಿಚಾರಿಸದಿಂತು ತರ್ಪರೇ ।
ಪೊಡವಿಗಧೀಶನಪ್ಪಮಿತತೇಜನ ತಂಗೆಯನೀಸುತಾರೆಯಂ ॥
ತಡೆಯದೆ ಬಿಟ್ಟೊಡಪ್ಪುದಸುವಿಂದೆಸೆದಿರ್ಪ್ಪುದದಲ್ಲದುಯ್ದೆಯಾ ।
ದೊಡೆ ಮದಧೀಶ್ವರಂ ಮುಳಿಯೆ ನಿನ್ನನದಾವನೊ ಕಾವನಾಜಿಯೊಳ್ ॥

ಎನಿತಾನುಂ ಕಷ್ಟಮನ್ಯಾಂಗನೆಗಳಪುವುದಾಕಷ್ಟದಿಂ ಕಷ್ಟಮಾತ್ಮೇ ।
ಶನಗಲ್ದಿರ್ದಲ್ಲಿ ತದೂಪಮನೆ ತಳೆದುಂನೀಂ ತರ್ಪುದೇ ತಪ್ಪನಸ್ಮ ॥
ಜ್ಜನನಾಥಂ ನೋಡನೀಕಾತೆಯನಂದಡವಿಯೊಳೇಕಾಕಿಯಾಗಿರ್ದಳಂತ ।
ದೆನೆನುತ್ತೀಯಲ್ಕೆ ಕಾವಂ ಕರುಣಿ ಚದುರ ಚಂಪಾಪುರೀನಾಥ ನಿನ್ನಂ॥೧೭೪॥

ವ॥ಎನೆ ಕನಲ್ದು ಕೆಂಗೋಲ್ ಮುಸಗಿದ ಸಿಂಗದಂತೆ ಗಜಱಿ ಗರ್ಜಿ
ಸಿ ಕೋಪಾಟೋಪಮುಂ ತಳೆದು ಅಶನಿಘೋಷನಿಂತೆಂದಂ:—

ಆನಱಿಯದಮಿತತೇಜನೆ ।
ನೀನೆನ್ನಿದಿರಲ್ಲಿ ಗಳಪದರ್ ನುತ್ತಿನ ಮಾ ॥
ತೇನವನನೆತ್ತಿ ಬರಿಸಿರ ।
ದೀನಿಪ್ಪಲವುಪ್ಪ ನುಡಿಯೊಳಪ್ಪುದಿದೇನೋ ॥೧೭೫॥

ನಿನಗಾಮೆ ಸಾಲ್ವವಸ್ಮ ।
ಜ್ಜನನಾಥಂ ಮುಟ್ಟಿ ಗಂಡ ನೀನೆಂದಿಂತೇ ॥

ನೆನುತುಂ ಕಿನಿಸಿದರನುವಾ ।
ಗೆನುತುಂ ಸಂಭಿನ್ನದೀಪಶಿಖರಿಂತಾಗಳ್ ॥೧೭೬॥

ಆ॥ ಆಗಳವರ್ ಕಾದಲನುಗೆಯ್ವ ಕಾಯ್ಪಂ ಕಂಡೆಲೆ ತಂದೆಗಳಿರ ನೀಮಿಂತನೊಳ್ ತಾಗಿ ತವಿಲಾಗಲ್ವೇಡಿಂ ಬೇಡಿಕೊಂಡೆನಾನೆನ್ನ ವೃತ್ತಾಂತಮುಂ ಜ್ಯೋತಿರ್ವನಕ್ಕೆ ಪೋಗಿ ಬೇಗದಿಂ ಶ್ರೀವಿಜಯಮಹಾರಾಜಂಗೆ ಪೇೞಲ್ವೇೞ್ಕುಮುಲ್ಲದೊಡಪಗತಜೀವನಪ್ಪನೆಂದು ಸುತಾರಾದೇವಿ ಸೆಱಗೊಡ್ಡಿ ವಿನತೆಯಾಗುತಿರಲಂತೆಗೆಯ್ವೆನೆಂದು ಯುದ್ಧಮುನಿರ್ವರುಂ ಮಾಣ್ದು—

ಮನಮೆಯ್ದುವ ಬೇಗದೆ ತೊಣೆ ।
ಯಿನಲಾಸಂಭಿನ್ನದೀಪಶಿಖರೆನಸುಂ ಭೋಂ ॥
ಕೆನೆ ಬಂದಾಗಳ್ ಜ್ಯೋತಿ ।
ರ್ವನಮುಂ ಸಾರ್ತಂದು ಪುಗುತುಮಿರ್ದಾಪದದೊಳ್ ॥೧೭೭॥

ಆಕಟಾ ಬಾಲೆಯನೆನ್ನನಿಲ್ಲಿರಿಸಿ ಪೋಗಲ್ ತಕ್ಕುದೇ ಕಾಂತ ಪಾ ।
ತಕರೂಪಂ ವನಕರ್ಕಶಾಹಿ ಪಿಡಿದತ್ತೀಪೋದೆನೀಪೋದೆ ನೋ ॥
ವ ಕೃಪಾತ್ಮಾ ಪರಿತಂದು ನಿನ್ನ ಮೊಗಮುಂ ತೋಱುಂದು ಮಾಯಾಸುತಾ ।
ರೆ ಕರಂ ಬಾಯ್ವಿಡೆ ತತ್ಪ್ರಲಾಪರವಮುಂ ಕೇಳ್ದಂ ಮಹೀವಲ್ಲಭಂ॥೧೭೮॥

ವನಿತಾಹಾರವಮುಂ ಕೇ ।
ಳ್ದ ನರೇಂದ್ರಂ ಮೃಗದ ಒಟಿಯನುಟಿದಾಗಳ್ ತಾ ॥
ನನಿದೇನಂ ನೆಗಟ್ಟಿದನೊ ತಾ ।
ನೆನುತುಂ ಪರಿತಂದನತಿಕುತೂಹಲಚಿತ್ತಂ ॥೧೭೯॥

ವಿಗತಾಸುವಾಗಿರಲ್ ಕಂ ।
ಡಗಿದಳ್ಳರ್ದೆ* ಬಿಱಿದು ಹಾ ಸುತಾರಾದೇವೀ ॥
ಮೃಗನೇತ್ರೇ ನಮಗೀವಿಧಿ ।
ತಗುಟ್ಟುದಾಯೆಂದು ನೃಪತಿ ಖೇದಿಸುತಿರ್ದಂ ॥೧೮೦॥

ಈವನನೆತ್ತ ನಮ್ಮ ಬರವೆತ್ತ ಮೃಗಂ ಸುಟಿಯಲ್ಕೆ ದೇವಿ ನೀಂ ।
ಭಾವಿಸಿ ನೋಱ್ಪುದೆತ್ತ ಬಗೆಗೆಟ್ಟುದನಾಂ ಪಿಡಿಯಲ್ಕೆ ಪಿಂದುಗೊಂ ॥
ಡೋವದೆ ಪೋಪುದೆತ್ತ ಪೆಱಗೊರ್ವಳೆ ನಿನ್ನಿರವೆತ್ತ ಸರ್ಪನಿಂ ।
ಸಾವಿನಿತಪ್ಪುದೆತ್ತ ನಿನಗೆಂದು ನೃಪಂ ಪರಿದಂ ಪಲುಂಬಿದಂ ॥೧೮೧॥

ಖೇದಾನಳನುರಿದೆರ್ದು ಮು ।
ನೋದಾರುವಸಳುಱಿ ಧೃತಿಯುಮುಱಿವುಂ ಬರೆಯಲ್ ॥
ಹಾ ದೇವೀ ಹಾ ದೇವೀ ।
ಹಾ ದೇವೀ ಎನುತುಮವನಿಪತಿ ಮೂರ್ಛಿಸಿದಂ ॥೧೪೬॥

ಪರಿಹೃತಧೈರ್ಯನಾಗದಿರೆಲೇ ನೃಪ ನಿನ್ನಿನಿಯಳ್ ಸುತಾರೆ ತಾಂ ।
ಮರಣಮನೆಯ್ದಳೆಂದು ನೆಱಿ ಪೇೞುತುಮಿರ್ದಪಳೆಂಬಿನಂ ರುಣ ॥
ತ್ಕರಿಸುತುಮುಂಗಸಾರಭಕೆ ಕವ್ವಱಿಗೊಳ್ವಳಮಾಳಕಾಗರು ।
ತ್ಪರಿಸರವಾತಪೋತದಿನಿಳಾವರನೆಬ್ಬಿ ಅನಾಗಳೆಯ್ದಿದಂ ॥೧೪೭॥

ಪೆಸಗೊಳೆ ವಿಷಹರಮುಂ ಮಾ ।
ಟಿಪ್ಪಿಸಕದ ಮಣಿಮುಂತ್ರತಂತ್ರತತಿಯಿಂ ತಾನೆ ॥
ಟಿ ಸಲಾಱದೆ ಭೂರಮಣಂ ।
ಬಸವಟಿದಾಸತಿಯ ಮೇಲೆ ಮೂರ್ಛಿಸಿ ಬಿೞ್ದಂ ॥೧೪೮॥

ಪಱಿವಱಿಯಾದುದು ಮನದೆ ।
ಟಿ ಱು ಕರಣಂಗಳ ಪೊಡಪ್ಪು ಕರಗಿ ನೃಪಂ ತಾ ॥
ನೊಱಗಿರ್ದನೆಂದೊಡಾರಂ ।
ಮುಱಿಯಿಸದು ಮನೋಜರಾಜಮೋಹಾವೇಗಂ ॥೧೪೯॥

ಇಂತು ಪರವಶತೆಗೆನಿತಾ ।
ನುಂ ತಱಿಸಂದಿರ್ದು ತನ್ನ ಜೆತ್ತದೊಳಱಿವೆಂ ॥
ತುಂ ತಲೆದೋಱಲ್ ಧರಣೀ ।
ಕಾಂತಂ ಕಣ್ದೆಱಿದು ಕಾಂತೆಯುಂ ವೀಕ್ಷಿಸಿದಂ ॥೧೫೦॥

ಹಾ ರಮಣೀ ವನಿತಾಜನ ।
ಹಾರಮಣೀಹಾರೆ ಹಾ ಪ್ರಗಲ್ಭಕಳಾವಿ ॥
ಸ್ತಾರೆ ತರುಣೀ ಸುತಾರೇ ।
ಮಾರಣವಿಧಿಖೇದವಾದುದೇಕಿದು ನಮ್ಮೊಳ್ ॥೧೫೧॥

ವ॥ ಎಂದಿಂತು ಪಲತೆಱದಿಂ ಪಲುಂಬಿ ಪಂಬಲಿಸಿ ಪ್ರಳಾಪಿಸುತ್ತುಂ ಭೂಪಂ ಮನದೊಳಿಂತೆಂದು ನೆನೆದಂ:—

ಇನಿಯುಳೊಳೊಂದಿ ಪೋಪವನೆ ತಾನಿನಿಯುಳ್ ಪೆಱಗಿರ್ದು ಜೀವಿಪಾ ।
ತನ ಬರ್ದುಕೇವುದಲ್ತೆ ಪರಿಭಾವಿಸೆ ಭಾವಜನೆಂಬ ನಿಷ್ಕೃಪಾ ॥
ತ್ಮನ ನನೆಯುಂಬುಗಿಚ್ಚು ಸುಡೆ ನಿಚ್ಚ ಮುಮಚ್ಚೆಗದಿಂದೆ ಬಾಲ್ವಿ ಜೀ ।
ವನಮಿನಿತೇವುದೆಂದೊಡನೆ ಸಾವ್ವುದನೆಂತನುಗೆಯ್ದು ನಾನೃಪಂ ॥೧೪೪॥

ವ॥ ಇಂತು ಮನದೊಳನುಗೆಯ್ದಿನಕಿರಣಪಾತಪರಿಭೂತರವಿಶಿಲಾಜಾತವೇದಜ್ವಾಲಿಕಾಜಾಲಪರಿದಗ್ಧಶೇಷಶುಷ್ಕಮಲಯಜಸಮಿತ್ಸಮೂಹನುಂ ನೆರಪಿ ತಂದೊಟ್ಟಿ ನಿಟ್ಟಿಸಿ ಮಾಯಾಸತಿಯುಂ ತೆಗೆದು ನೃಪನೇಱಿಸಿ ಕೊಳುತಿರ್ಪಾಗಳ್—

ಇಱಿದಾಗಳಂತೆ ಗಗನ ।
ಸ್ಥಳದಿಂ ಸಂಛಿನ್ನದೀಪಶಿಖರಾನೂಯಾ ॥
ಲಲನೆಯನೆ ತೆಗೆದು ಮಿಗೆ ವಿ ।
ಹ್ವಲಿಸುವ ಪೌದನಪುರಾಧಿಪತಿಯುಂ ಕಂಡರ್ ॥೧೪೫॥

ವ॥ ಆಸಂಛಿನ್ನದೀಪಶಿಖರ್ ಪರವಿದ್ಯಾಚ್ಛೇದಿನಿಯುಂ ನೆನೆದಾಹ್ವಾನಿಸೆ ವೈತಾಳೀವಿದ್ಯೆಯು ಸುತಾರೆ ತೊಟ್ಟನೆ ಮಾಯಮಾಗಿ ಪೋಗಲದಂ ಕಂಡು ಮಹೀಕಾಂತಂ ವಿಸ್ಮಯಸ್ವಾಂತನಾಗಿ ಮುಂದೆ ನಿಂದಿರ್ದ ಖೇಚರರಂ ಕಂಡು ನೀವಾರಿಲ್ಲಿಗೇಕೆ ಬಂದಿರೆಂದು ಬೆಸಗೊಂಡಾಗಳ್—

ಆವಿದ್ಯಾಧರರೆನಸುಂ ।
ತಾವಿರದೇಱ್ಱಿಂದ ತತ್ಪ್ರಪಂಚಮನನಿತಂ ॥
ಭಾವಿಸಿ ಪೇಱಿಕ್ಕಿಡೆ ಕೇಳ್ದಾ ।
ಶ್ರೀವಿಜಯಮಹೀಧರಂ (ಕರಂ) ಬೆಱಗಾದಂ ॥೧೪೬॥

ಏವಮುಮುಂ ಕೋಪಮುಮುಂ ।
ಶ್ರೀವಿಜಯಂ ತಳೆದು ಘುಡುಘುಡಿಸಿ ವೈರಿಯನಿ ॥
ನ್ನೋವದೆ ಕೊಂದುಂ ಫಲವೇ ।
ನಾವರಿಸಿದ ಮತ್ಪರಾಭವಂ ಪೋದಪುದೇ ॥೧೪೭॥

ವ॥ ಆನುಡಿಯುಂ ಕೇಳ್ದು ಸಂಛಿನ್ನನಿಂತೆಂದಂ:—

ಪಟಿಯುಂ ಪಾತಕಮುಂ ಪೊದಲ್ದಶನಿಘೋಷಂಗಪ್ಪುದೇಕೆಂದೊಡಿಂ ।
ದಳಿಸಿಂ ವಂಚಿಸಿ ಮಾಯೆಯಿಂ ಪತಿಯ ಪಿಂದುಯ್ದುಂ ಪರಸ್ತ್ರೀಯನೆಂ ॥

ದಿಳೆಯೆಲ್ಲಂ ನೆರೆ ಬಯ್ವ ಕಾರಣದಿನೀಗಳ್ ದೇವ ನಿಮ್ಮೇವನುಂ ।
ತಳೆಯಲ್ವೇಡೆನುತುಂ ಪ್ರಬೋಧಿಸಿದನಾಸಂಭಿನ್ನನುರ್ವೀಶನಂ ॥೧೯೦॥

ವ॥ ಇಂತು ಸಂಬೋಧಿಸಿದ ಸಂಭಿನ್ನನ ವಚನಕ್ಕೆ ಲಜ್ಜಾವನಮ್ರ ವದನಾಳಯನಾಗಿ ಶ್ರೀವಿಜಯಮಹಾರಾಯಂ ಮೆಲ್ಲನಿಂತೆಂದಂ:—

ಈವೃತ್ತಾಂತಮನುಯ್ದಿಂ ।
ತೀವ್ರವೇಗದಿನಸ್ಮದಂಬಿಕೆಗಮನುಜಂಗಂ ॥
ನೀವೊರ್ವರ್ ಪೇೞಿಮೆನಲ್ ।
ಭೂವರ ನೆನೆದಂತೆ ಖೇಚರರ್ ಬಗೆಗೊಂಡರ್ ॥೧೯೧॥

ವ॥ ಆಗಳ್ ಪೌದನಪುರಿಯೊಳ್ ಪುಟ್ಟಿದುತ್ಪಾತಂಗಳ್ಗೆ ಸಂಕೆಗೊಂಡು ಸ್ವಯಂಪ್ರಭಾದೇವಿಯುಂ ವಿಜಯಭದ್ರನುಂ ಪದ್ಮಿನೀಖೇಟನೋಘಜಿಹ್ವನುಂ ಜಯಗುಪ್ತನುಮೆಂಬ ನಿಮಿತ್ತಕನಂ ಬರಿಸಿ ತದೀಯೋಪಪ್ಲವಂಗಳ ಫಲಮುಂ ಬೆಸಗೊಳ್ವುದುಮವರ್ ಜ್ಯೋತಿರ್ವನದೊಳ್ ಶ್ರೀವಿಜಯಮಹಾರಾಜಂಗಾವ ಬಾಧೆಯುಮಿಲ್ಲ ಮನೋನಿರೋಧನಮಾದಪ್ಪುದರಿನೀಗಳೊರ್ವ ಚರನಿಂ ಕೇಳ್ದಪಿರೆಂದು ಪೇೞ್ದಪದಳೊಳ್ ದೀಪಶಿಖಂ ಪೋಗಿ ಪೊಡೆವಟ್ಟು ನಿಂದರ್—

ಶ್ರೀವಿಜಯಭೂಪತಿಗೆ ಮಾ ।
ಯಾವಿಯೆನಿಪ್ಪಶನಿಘೋಷನಿಂದಾದ ದುರಂ ॥
ತಾವಸೆ ಯ ತೆಱನಿನಿತುಮು ।
ನಾವೇಗದಿನಱಿಯೆ ಪೇೞ್ದನಾದೀಪಶಿಖಂ ॥೧೯೨॥

ಘನಘೋರಧ್ವನಿಗೇೞ್ದ ಹಂಸಸತಿವೋಲ್ ಶಂಕಾತುಳಾತಂಕವೊಂ ।
ದಿ ನಿಜಸ್ವಾಂತದೊಳಾಸ್ವಯಂಪ್ರಭೆ ಕರಂ ಚಾರೋಚ್ಚಳನ್ನೀತ್ರ ಭೋಂ ॥
ಕೆನೆ ಜ್ಯೋತಿರ್ವನಕಾಕ್ಷಣಂ ವಿಜಯಭದ್ರೋಪೇತೆ ತಾಂ ಬಂದಳೆಂ ।
ದೆನಲೇಂ ಪುತ್ರನಿರೋಧನಮಾತ್ರಮನದಂ ಕೇಳ್ದಾರೊ ಪೇೞ್ ಸೈರಿಪರ್ ॥

ವ॥ ಅಂತು ಬಂದ ಅಂಬಿಕೆಯು ಚರಣಾಂಬುಜಕ್ಕೆಱಗಿ ಸದೃಷ್ಟಾತ್ತಜೆತ್ತನಪ್ಪ ಶ್ರೀವಿಜಯಂ ತನಗೆಱಗಿದನುಜನಂ ಪರಸಿ ಪರಿಮಿಳತಖೇದಾಶ್ರುನಯನರೋರೊರ್ವರಂ ನೀಡುಂ ನೋಡುತ್ತುಮಿರ್ದು ಸಮುಪಾತ್ತಪರಾಭವಹರಣಕಾರಣಮನಾಳೋಚಿಸಿ ಪೌದನಪುರಕ್ಕೆ ವಿಜಯಭದ್ರನಂ ಕಳುಪಿ

ಸ್ವಯಂಪ್ರಭಾದೇವಿ ಶ್ರೀವಿಜಯರ್ ಸಂಭಿನ್ನದೀಪಶಿಖರ್ವೆರಸು ವಿಮಾನಾ
ರೂಢರಾಗಿ ರಥನೂಪುರಚಕ್ರವಾಳಪುರವನೆಯ್ದಿದಾಗಳ್

ಆವುದು ಕಾರ್ಯಮಾಗಿಯನುರಾಗವುದಿಲ್ಲದೆಯುಂ ಸ್ವಯಂಪ್ರಭಾ ।
ದೇವಿ ತನೂಭವರ್ವೆರಸು ಬಂದಳಿದೇನೆನುತುಂ ಕುತೂಹಳ ॥
ವ್ಯಾವೃತವೃತ್ತಿವೆತ್ತಮಿತತೇಜವಿಯಚ್ಚರರಾಜನಿಂತು ಸಂ ।
ಭಾವಿಸುತುಂ ನಿಜಾಸನದಿನೆೞ್ದಿರ್ವಂದನವರ್ಗೆ ವೇಗದಿಂ ॥೧೯೬॥

ಜನಕಾನುಜೆಯುಂ ತನ್ನಂ ।
ಗನೆಯಂಬಿಕೆಯಂ ಸ್ವಯಂಪ್ರಭಾದೇವಿಯನಿಂ ॥
ತೆನಸುಂ ವನ್ನಿಸಿ ವಿನಯದೆ ।
ವಿನಮಿತಕೋಟೀರನಾದನಾಖಚರೇಂದ್ರಂ ॥೧೯೭॥

ನಿಮಿರ್ದ ನಿಡುದೋಳ್ಗಳಿಂ ಸಂ ।
ಭ್ರಮದಿರ್ವಂದಮಿತತೇಜಖೇಚರರಾಜಂ ॥
ಪ್ರಮದದಿನಿಂತು ಸುತಾರಾ ।
ರಮಣಸನಮರ್ದಪ್ಪಿ ವಿಜಯಮಂ ನೆರೆ ಮೆಱೆದಂ ॥೧೯೮॥

ವ॥ ಆಗಳಮಿತತೇಜಮಹಾರಾಜಂ ವಿಜಯಸೇನಮಹಾರಾಜಂಬೆರ
ಸೇಕಾಸನಾಸೀನನಾಗಿ ಮೊಗಮಂ ನೋಡುವುದುಮಾತೆಱನನಱಿದು ಸಂಭಿ
ನ್ನದೀಪಶಿಖರ್ ಭೂಪನ ಮುಖದ ಮ್ಲಾನತೆಗೆ ಕಾರಣಮನಾದ್ಯಂತಂ ವ್ಯಕ್ತ
ಮಾಗಿ ಬಿನ್ನವಿಸುವುದುಂ—

ಕಿಸುಸೆಱಿ ಪುಟ್ಟಿ ಬಿಟ್ಟಿ ನಿಡುಗಣ್ ನಸುಕೆತ್ತುವ ವಿಾಸೆ ಕಾಯ್ಪುವೆ ।
ತ್ತು ಸಿರೊಗೆತರ್ಪ ಭೂಳದ ಬೆವರ್ವನಿ ಕಂಠದೊಳುೞ್ಕೆ ಗದ್ಗದೋ ॥
ಲ್ಲಸಿತರವೋತ್ಕಟಂ ಭ್ರುಕುಟಿಯುಗ್ಮವದುರ್ವಿಸೆ ಕೋಪಮುೞ್ಕೆಕಂ ।
ಪಿಸುತಿರಲಿರ್ದನಂದಮಿತತೇಜವಿಯಚ್ಚರನಂದು ಚಿತ್ತದೊಳ್ ॥೧೯೯॥

ಸೆಳೆದಂ ಸಿಂಗದ ಕೇಸರಂಗಳನಣಂ ದಾವಾಗ್ನಿಯಂ ಸೋಂಕಿದಂ ।
ಕುಳಿತೋಗ್ರಾಹಿಯ ದಾಡೆಯಂ ತುಡುಕಿದಂ ದುರ್ಮೃತ್ಯುವಂ ಕಾಯ್ಪಿನಿಂ ॥
ದೆಳೆದಿಂತುಯ್ದನದಲ್ಲದುಯ್ದನೆ ಸುತಾರಾದೇವಿಯಂ ಕೈತವಂ ।
ಗಳ ವಿದ್ಯಾಬಲಗರ್ವದಿಂದಶನಿಘೋಷಂ ಬಲ್ಲೆನಾನೆಲ್ಲಮಂ ॥೨೦೦॥

ಪೊಸಸಿಂ ಪೌರವೇಶ್ವರಾತ್ಮಜ ನೀಂ ನಡೆಯೆ ಪೇೞ್ದುದಾಸ್ಪದೆನೇ (೫)ನಿವ್ಮೊಳಾಂ।
ತು ನಿತಾಂತಂ ನಿಲಲಾರ್ಪೆನೇ ಸಮರದೊಳ್ ನಾವಾತನೇಸೆಂಬ ಮಾ ॥
ತನದಿಂ ಕೇಳ್ವೆವೆನುತ್ತು ಮಿಂತಕನಿಘೋಷಪಂಗಟ್ಟದಂ ವೇಗದಿಂ।
ದೆನಸುಂ ತನ್ನ ಮರೀಚಿಯೆಂಬ ಚರನಂ ವಿದ್ಯಾಧರಾಧೀಶ್ವರಂ ॥೦೦೧॥

ವ॥ ಆಗಳಾಮರೀಚಿಚರಂ ಚಮರಚಂಪಾಪುರಮನೆಯ್ದಿ ಪತಿವಿ
ಯೋಗವಿಕಳೆಯಾಗಿರ್ದ ಸುತಾರಾದೇವಿ ತನಗನುವಶೆಯಲ್ಲದೆ ಪುಲ್ಲಶರ
ಶರಾಸನಘನಸಮುದ್ಭವಾಶನಿಘೋಷಪಾತ ಚೇತಸನಾಗಿರ್ದಶನಿಘೋಷನಂ
ಕಂಡಿಂತೆಂದಂ :—

ನಿನಗೀಗಳ್ ಖೇಚರಾಧೀಶ್ವರನತಿದಯೆಯಿಂದಟ್ಟಿದಂ ನೀಂ ಸುತಾರಾಂ।
ಗನೆಯಂ ಕೊಟ್ಟಟ್ಟಿಯುಂ ನೆಟ್ಟನೆ ಪಟಿಯಟಿಗುಂ ಪಾತಕಂ ಪಿಂಗುಗುಂಪೋ॥
ವನಕೀರ್ತಿಶ್ರೀಯದಕ್ಕುಂ ಮುಱಿದುಱದಿರೆಯುಂ ನಿನ್ನ ಜೀವಾಹಿಯುಂ ಸೌ।
ಳನೆ ಸೀಱ್ಗುಂ ಪೌರವೋರ್ವಿಶನ ಭುಜಗರುಡಂ ಚಂಡತುಂಡಾಗ್ರದಿಂದಂ ॥

ವ॥ ಎಂದ ಮರೀಚಿಯು ಮಾತಿಂಗೆ ಕೋಪಪ್ರಹಸನನಾಗಿ ಚಮರ
ಚಂಪಾಪುರೀನಾಥನಿಂತೆಂದಂ:—

ಇನಿತು ಪೊಡಪ್ಪು ಪೌರವಪುರೀಪತಿಗುಳ್ಳೊಡೆ ಪೋಗಲೇಕೆ ಭಾ।
ಪುನ ಪೊರೆಗಾತನಂ ಪ್ರೊಗಟಿದಿರ್ ಸುಡು ದೂತರ ಬೂತೆ ಬಂದು ತ ॥
ನ್ನನುಜೆಯುನುಯ್ವ ಬಲ್ಪು ತನಗುಳ್ಳೊಡೆ ಬರ್ಕೆಮು ನಿನ್ನಧೀಶನೆಂ।
ದೆನುತವೆ ಖೇಚರಂ ಗಜಿಯೆ ಗರ್ಜಿಸಿದಂ ಮುಳಿಸಿಂ ಮರೀಚಿಯುಂ ॥೦೦೩॥

ವ॥ ಇಂತಭಿಭೂತನಾದ ಮರೀಚಿದೂತಂ ಪುರುಜ್ಜವದಿಂ ಬಂದು
ಸಕಲವಿದ್ಯಾಧರಸವಾಜದಿಂ ವಿಶಾಲಲೀಲೆವೆತ್ತೊಲಗದೊಳರ್ದಮಿತತೇಜ
ಮಹಾತಾಱಂಗೆ ಪೊಡೆನಟ್ಟು ತಡೆಯುದಶನಿಘೋಷಂ ನುಡಿದ ನುಡಿಯುಂ
ಕಡೆಪದಂ ಪೇೞಿ ಕೇಳ್ದಾಗಳ್—

ಬರವೇಟ್ಟಿಂತಿರೆ ಖರ್ಪಸಾನೆ ಪುದದಿಂ ಪುಂದಿಟ್ಟು ತನ್ನಂ ರಣಾ।
ಜಿರದೊಳ್ ಶ್ರೀವಿಜಯೋತ್ಕ್ರಾದಿಂದೆ ಕಡಿಕಂಡಂಗೆಯ್ದುವೆಂ ಕಂಡದು ॥
ತ್ಕರದಿಂ ಸೀಱಿ ಪಿಡುಗುಂಡನಾಡಿಸುವೆನೆಲ್ಲಾ ಭೂತಸಂಘಾತಮುಂ।
ಪಿರಿದುಂ ವೇಗದೊಳೆಂದು ತಾನಮಿತತೇಜಂ ತಾಳ್ದದಂ ಕೋಪಮುಂ ॥೦೦೪॥

ವ॥ ಇಂತು ಕೋಪಾರುಣಿತನೇತ್ರನಾಗಿ ಬೇಗದಿಂದಮಿತತೇಜಮು ಹಾರಾಜಂ ಪಡೆನಳರಿಂ ಸಾಱಿಸಿ ಸಮರಸನ್ನಾಹಭೇರಿಯುಂ ಪೊಯ್ಸಿ ವೀರವಿದ್ಯಾಧರನಾಯಕರಂ ಬರಿಸಿ ನಾಳೆ ಕಾಳೆಗಂ ಚಮರಚಂಪಾಪುರಿಗೆ ಪೊಱಮಡುವ ನೆಱವಂ ನಿಮಿರ್ಚುವುದೆಂದು ನೇಮಿಸಿ ವೀಳೆಯವನಿತ್ತೊಲಗವುಂ ವಿಸರ್ಜಿಸಿ—

ಮನದೊಳ್ ಪೂಣ್ದಿರ್ದ ಸಮ್ಮರ್ದನಮದವುದು ಕೊವ್ರ್ಗೆಟ್ಟಿ ಗಾತೊ್ರ
[ಲ್ಲಸಲ್ಲೇ।
ಪನಗಂಧದ್ರವ್ಯಸೌರಭ್ಯದ ಸಮಿತಿ ಪೊದಱ್ದ್ರೀಟ್ಟಿ ಸೇವಾದಿಸತ್ಯಾ ॥
ವನಿಪರ್ ತಾಮೇಟ್ಟಿ ಕರ್ಪೂರದ ಬಹಳರಜೋರಾಜೆ ತಟ್ಟಿತ್ತೀಟ್ಟಿ ಸಿಂಹಾ।
ಸನದಿಂ ತಾನೆಟ್ಟನುರ್ವೀಪತಿಯಮಿತಸುತೇಜಂ ಜಿತಾರಾತಿತೇಜಂ ॥

ಅಸುಹೃನ್ಮಾಯಾಪ್ರಪಂಚೋತ್ಕಟವಿಘಟನವಿದ್ಯಾಯುಗಶ್ರೀಗಳಂ ಸಾ।
ಧಿಸುವುದ್ಯೋಗಾನುರಾಗಂ ನೆಱಿ ನಿಮಿರ್ದುಂ* ತದೀಯಕ್ರಿಯಾಜೈತ್ಯವಸ್ತು ॥
ಪ್ರಸರಸ್ವೀಕಾರಮುಂ ಮಾಱಿಪ್ಪಿಸಕದಿನೆಸೆದಿರ್ದಂ ಸಮಸ್ತೋಪಸನ್ಮಂ ॥
ತ್ರಿಸವಾಜೋಪೇತವಿಭ್ರಾಜಿತನತುಳಬಳಂ ಸೂಕ್ತಿಸಂದರ್ಭಗರ್ಭಂ॥೦೬

— ಗದ್ಯ —

ಇದು ವಿನಮದಮರೇಂದ್ರಮೌಳಿಮಣಿಕಿರಣಮಾಳಾಪರಾಗಪರಿರಂಜಿತ ಚರಣ ಸರಸೀರುಹರಾಜಿತ ಪರಮಜಿನರಾಜಸಮಯ ಸಮುದಿತಸದಮಲಾಗಮಸುಧಾಶರಧಿ ಶರದಿಂದು ಶ್ರೀಮಾಘಣಂದಿಪಂಡಿತಮುನೀಶ್ವರ ಮನೋಜ್ಞನಿಶನಿರುಪಮದಯಾ ರಸಸರಸೀಸಂಭೂತಸಂಭವಾಮಳ ಸು ಕ ವಿ ಕ ಮ ಲ ಭ ವ ವಿರಚಿತಮಪ್ಪ

ಶಾಂತೀಶ್ವರ ಪುರಾಣದೊಳ್

ಸುತಾರಾಹರಣವರ್ಣನಂ,

ಪಂಚಮಾಶ್ವಾಸಂ ಸಂಪೂರ್ಣಂ.

ಕರ್ಣಾಟಕ ಕಾವ್ಯಕಲಾನಿಧಿ, ಕೋಶಸಂಖ್ಯೆ—೪೬

ಮಹಾಕವಿ ಕಮಲಭವ

ವಿರಚಿತಮಪ್ಪ

ಶಾಂತೀಶ್ವರ ಪುರಾಣಂ

ದ್ವಿತೀಯಸಂಪುಟಂ

(ಆಶ್ವಾಸಗಳು ೬ ರಿಂದ ೧೦ ರ ವರೆಗೆ)

ಮಂ. ಆ. ರಾಮಾನುಜಯ್ಯಂಗಾರ್

ಅಸಿಸ್ಟೆಂಟ್‌ಮಾಸ್ಟರ್ ಮಹಾರಾಣೀ ಕಾಲೇಜು, ಮೈಸೂರು—

ಇವರಿಂದ ಪರಿಷ್ಕರಿಸಲ್ಪಟ್ಟ

ಮೈಸೂರು

ಶ್ರೀನಿವಾಸಮುದ್ರಾಶಾಲೆಯಲ್ಲಿ ಮುದ್ರಿತವಾಯಿತು.

1915

ಕ್ರಯ ೧—೨—೦]

Registered according to Act XXV of 1867

ಶಾಂತೀಶ್ವರ ಪುರಾಣಂ

॥ಷಷ್ಠಾಶ್ವಾಸಂ॥

ಶ್ರೀವಿಜಯಂಗಹಿತಜಯ ।
ಶ್ರೀವಧುವರ ನೆರಸಲೆಂದು ಖೇಚರವಂಶ॥
ಶ್ರೀವರನಿರ್ದಂ ವರವಿ ।
ದ್ಯಾವಿಭು ಜಿನಪದಪಯೋಜರಾಜಮುರಾಳಂ ॥೧॥

ಪ್ರಣುತೋದಯಶಿಖರಿಶಿರೋ ।
ಮಣಿಯಾಗಲ್ ದ್ಯುಮಣಿಯಾಗಳಾಖಚರಶಿರೋ ॥
ಮಣಿ ಮೃಗಪತಿಪೀಠಶಿರೋ ।
ಮಣಿಯಾದಂ ಪುರುಕುಲಾಬ್ಜದಿನಮಣಿಸಹಿತಂ ॥೨॥

ಆಗಳ್ ಪೊಡೆಯಿಸಿ ಸಮರೋ ।
ದ್ಯೋಗದೆ ಸನ್ನಾಹಭೇರಿಯಂ ತಡೆಯದೆ ತ ॥
ದ್ವೇಗದೆ ನೆರೆದುದು ನಲನೆಡೆ ।
ಯಾಗದೆನಲ್ ಸಕಲಸೈನ್ಯವತಿಸರಭಸದಿಂ ॥೩॥

ವ॥ ಇಂತು ನೆರೆದ ನಿರುಪಮಸೈನ್ಯಸಹಿತನಾಗಿ ಬೇಗದಿಂ ಶ್ರೀವಿಜಯ ಮಹೀವರಂಗೆ ಯುದ್ಧನೀತ್ಯರ್ಥ ಬಲಸಹಿಚನ ಪ್ರಹರಣಾವರಣಮೆಂಬ ಮೂಱುಂ ವಿದ್ಯೆಗಳನಿತ್ತು ರಶ್ಮಿವೇಗ ಸುವೇಗರ್ ಮೊದಲಾದ ನೂರ್ವರ್ ಕುಮಾರರಂ ಪೇೞ್ದು ಚಮರಚಂಪಾಪುರಕ್ಕೆ ಕಳಿಪಿ ಗಱಿಲನೆಯಮಿತತೇಜ ಮಹಾರಾಜಂ ನಿಜತನೂಜನಪ್ಪ ಸಹಸ್ರರಶ್ಮಿವೆರಸು ಪಿಂಪುವಂತಮಹೀಧರದ ಸಂಜಯಂತಭಟ್ಟಾರಕರ ಪದಕಮಲೋಪಾಂತದೊಳ್ ಸರ್ವವಿದ್ಯಾಚ್ಛೇದಿನಿ ಮಹಾಜಾಳವೆಂಬ ಸುವಿದ್ಯೆಗಳಂ ಸಾಧಿಸಲ್ ಪೋಗೆ--

ಲಯಕಾಲಾಭ್ರಲಕಾಲಾಂತಕರ ನೆರವಿ ಸಂರಂಭದಿಂದೆತ್ತಿ ಬರ್ಪಂ ।
ತೆಯುಮಿಂತೇೞ್ತರ್ಪ ವಿದ್ಯಾಧರಬಲದ ಪೊಡರ್ಪಂ ಘನಾಟೋಪಕೋಪಾ ॥
ಗ್ನಿಯಕಾಯ್ಪುಂ ಕಂಡು ನಾನಾನಕಪಟಳಪಟುಧ್ವಾನಮುಂ ಕೇಳ್ದು ಚೇತೋ
ಭಯದಿಂದಾತಂಕಮುಂ ತಾಳ್ದಿದುದು ಚಮರಚಂಪಾಪುರಾಂತರ್ಜನೌಘಂ ॥೪॥

ವ॥ ಅದಂ ಕೇಳ್ದಶನಿಘೋಷಂ ತನ್ನ ಸುತರಪ್ಪ ಸುಘೋಷಸಹ ಸ್ಯಘೋಷ ಪ್ರಭೃತಿಗಳಂ ಪೇೞ್ವುದುಂ ಯುದ್ಧಸನ್ನದ್ಧರಾಗಿ ಬಂದೊಡ್ಡಿ ನಿಂದಾಗಳ್—

ಬಡಬಾಗ್ನಿಯ ಬಳಗದ ಬ ।
ಲ್ವಜೆಮೆನೆ ಕವಿತರ್ಪ ಪುರುನೃಪಾಲನ ಪಡೆಯೊಳ್ ॥
ಕಡಲಂತಿದಿರ್ದೆ ತಾಗಿದು ।
ದೆಡೆವಿಡದಿಂತಶನಿಘೋಷಸುತಬಹುಳಬಳಂ ॥೫॥

ಎರಡು ಬಲಂ ಕಡಂಗಿ ಕಡುಪಿಂದುಱುರ್ಕ ನಿಮಿರ್ದೆವೆತ್ತು ಚಿ ।
ಚ್ಚರದೊಳ ತಾಗುವಬ್ಬರದ ನಿಬ್ಬರವಪ್ಪ ರವಕ್ಕೆ ಬೆರ್ಚ ದಿ ॥
ಕ್ಕರತತಿ ಬೆಕ್ಕಸಂಬಡ ದಿಶಾಧಿಪರರ್ಕನ ವಾಜಿಗಳ್ ಪವಂ ।
ದಿರಿಯೆ ಕಡಲ್ ಕಲಂಕೆ ಧರೆ ಕಂಪಿಸಲದ್ಭುತಮಾದುದಾಹವಂ ॥೬॥

ಶರಮುಕ್ತಭೀಂಕೃತಿರವೊಂ ।
ತ್ಕರಮಯಮೆಣ್ದೆಸೆಗಳಿಸಲೊಡಂ ಪಾಱುವ ಭೀ ॥
ಕರಶತತತಿ ಶೀರ್ಷಮಯಂ ।
ಧರೆ ವ್ರಣಮಯಮಾಗೆ ತಾಗಿದತ್ತುಭಯಬಲಂ ॥೭॥

ಇಂತು ಕಂಡಂಗಿ ಕರಂ ಮಾ ।
ಱಾಂತು ಪಜಿಂಬುವ ವಿರೋಧಿಬಲಮುಂ ಕಂಡು ॥
ಗಾಂತಕಸಳುರ್ಕೆಯಂ ತಳ ।
ದಂ ತೊಟ್ಟನೆ ಪೌರವಾವಸೀವರನಾಗಳ್ ॥೮॥

ವ॥ ಆರಶ್ಮಿವೇಗಸುವೇಗಾದಿಗಳಪ್ಪ ಸೂರ್ವರಂ ಸುತ್ತಿ ಕೞ್ದು ವೃತ್ತವಳನಾಗಿ ಕೋಪಶಿಖಿ ದಳ್ಳಿಸೆ ಕಡೆಗಣ್ಣ ಕಿಡಿಗಳ್ ಕೆದಱೀಕ್ಷಿಸಿ ಕಡುಪಿಂ ಕೈವೀಸಿದಾಗಳ್—

ಕಱುಪಿದುದು ಬಿಲ್ವಡೆ ಸರಲ್ಗಳ ।
ಬಿಱುವಱಿಯಂ ಮಿಂಸುವಲಗುಗಳ ಮಿಂಚುಗಳ ॥
ಳ್ಳಿಱಿಯೆ ಗಱಿನೆಲೆಲ ತಿಮಿರಂ ।
ತುಱುಗಿರೆ ನೆನೆಯಿಸಿತು ವಿಳಯಜಳಧರಕುಳಮಂ ॥೯॥

ಕೋಲ್ವಿಡಿವ ತುಡುವ ಬೇಗದೆ
ಬಿಲ್ವಡೆ ಬಿಲ್ವಡೆಯನೆಚ್ಚು ನೆ[illegible] ಪಲಿದುದು ನೀ ॥
ಳ್ದಿಲ್ವಡಗಾಗಿ ಕಡಂಗಿ ಕ ।
ಡಲ್ವರಿಯೆ ನವಾಸ್ತ್ರವಾರಿ ನೃಪನಾರ್ವಿನೆಗಂ ॥೧೦॥

ಸರಭಸದಿಂದೋವದೆ ರಿಪು ।
ತುರಗಮನಾತುರಗದಿಂದಿಭಂಗಳನಿಭದಿಂ ॥
ದೆ ರಥಂಗಳಂ ರಥಂಗಳಿ ।
ನರೆದಂತಿರೆ ಕೊಂದರಮಿತತೇಜನ ತನುಜರ್ ॥೧೧॥

ಅರುಣಜಲಾಸವಂ ಒಸೆಯ ಕೋಳ್ಕೆಸಟ್ಟಿಗಳೊಟ್ಟಲೊಕ್ಕ ಬ ।
ಲ್ಲರುಳ ಬಣಂಬೆ ಕಾಳಿಜವ ಕುಪ್ಪಳಿ ಖಂಡದ ತಂಡದಿಂಡೆ ಬೊ ॥
ಬ್ಬಿರಿಯುತುರುಳ್ದ ಪಂದಲೆಯ ರಾಸಿಗಳಾಸುರಮಾಗೆ ಕಣ್ಗೆ ಕೊ ।
ಕ್ಕರಿಕೆ ಮನಕ್ಕೆ ಪೇಸು ಸಥನಾಯ್ತೆನಸುಂ ನೆಗಳ್ದಾರಣಾಂಗಣಂ ॥೧೨॥

ತಳರದೆ ನಿಜಸಂತಿಪಕ್ಷವ ।
ನುಜಿದ ಬಲಂ ಕಾವಲೊಂದು ಪಕ್ಷಂಬರವಾ ॥
ಗಳದಂ ಕಂಡಾಪುರಕುಲ ।
ತಿಳಕಂ ಕಟಿನುಳಿದು ಮನದೊಳಿರದಿಂತೆಂದಂ ॥೧೩॥

ಎನಗೀಯುದ್ಧಮನೇಕೆ ಕೊಂಡು ಕೊನೆಯಲ್ ಮತ್ಕೋಪದಾವಾಗ್ನಿನೆ
ಟ್ಟನೆ ತಾಂ ನಂದುವುದೊಂದಖಿಂದಕನಿಷ್ಠೋಪಾಸೃಜ್ಜಲಾಂಭೋಧಿಮ ॥
ಜ್ಜನಮಂ ಮಾಡಿಸಲೆಂದೆನುತ್ತ ನೃಪನಾಗಳ್ ಕೊಂಡು ಚಂಡಾಸ್ತ್ರಮೊಂ ।
ದನೆ ತೊಟ್ಟೆಚ್ಚಡಿರಾಂತಶೇಷಬಲಮಂ ನಿಶ್ಶೇಷಮಂ ಮಾಡಿದಂ ॥೧೪॥

ವ। ಅಗಳ್ ತನ್ನ ಬಲಮೋರೊರ್ವರಾದೊಡಂ ಬರ್ದುಂಕಿ ಬಂದ
ಮಾರ್ಬಲದ ಪೊಡಪರ್ಗಂ ಪೇೞ್ವರಿಲ್ಲದೆ ಲಯಮಾದುದೆಂಬುದಂ ಕರ್ಣಪರಂ
ಪರೆಯಿಂ ಕೇಳ್ದಶನಿಸ್ಫೋಷಂ ಲಯಕಾಲದಶನಿಸ್ಫೋಷದಂತೆ ಗಜಿಸಿ
ಗರ್ಜಿಸಿ ಯುದ್ಧಸನ್ನದ್ಧನಾಗಿ ಬಂದೊಡ್ಡಿ ನಿಂದು—

ಉಬ್ಬಿಯದೆ ಬಲಮೆಲ್ಲಂ ಸ ।
ತ್ತಬ್ಬಿಲುಂ ಸರವನಿತೆ ಮನನುನೀಯದ ವಿರಹಾ ॥

ನಳನಟಿಲುಂ ಮಿಗೆ ತಾಗಿದ ।
ನಳುರ್ಕೆಯಿಂದಶನಿಘೋಷನೆಯ್ತಂದಾಗಳ್ ॥೧೫॥

ವ॥ ಅದಂ ಕಂಡು ಕೋದಂಡಮಂ ಕೊಳ್ಳದೆ ಚಂಡಾಸಿಯುಂ ಕೊಂಡಿವನೊತಲಂ ಕಡಿಮ ದೆಸೆವಲಿಗೆಯ್ದೊಡಲ್ಲದೆನ್ನ ಮನದ ಮುನಿಸಿನ ಮಸಕಂ ಮುಗ್ಗದೆಂದು ನುಡಿಯುತ್ತುಂ ಕಡಂಗಿ ಶ್ರೀವಿಜಯಭೂಪಂ ಕೋಪಮಂ ಕೈಕೊಂಡು—

ನಿನಗಿಂತೀಕಾಯ್ದು ಮುನ್ನುಳ್ಕೊಡೆ ಮಾಡಿಸಿ ಮಾಯಾಮೃಗಂ [ದೊಳಲೇಂ ತೊ ।
ಟ್ಟನೆ ಮಾಯಾಕಾಂತೆಯಂ ಪ್ರಟ್ಟಿಸಿ ಪೆಱಗಿರಿಸಲ್ಕೀಕೆ ನಿನ್ನಂದಮಂ ವಂ ॥
ಚನೆಗೆಯ್ದೀಕುಯ್ದೆ ಮದ್ವಲ್ಲಭೆಯನೆಲವೊ ನೀನಿಲ್ಲಿ ಪೋಪಂದಮಂ ತೋ
ಱಿನುತಾಗಳ್ ಪೊಯ್ದುನಾಶ್ರೀವಿಜಯನಶನಿಘೋಷಾಂಗಮಿರ್ಪಾಗಮಾಗಲ್
ಎರಡು ಕಡಿಯಿರ್ವರಾಯಿ ।
ರ್ಬರುಮಂ ಕಡೆಗಣಿಸಿ ಪೊಯ್ದೆ ನಾಲ್ವರುಮಾನಾ ।
ಲ್ವರುಮೆಂಬ್ಬರುವಿಾರೆಂಬ್ಬರ್ ।
ಧುರಧರಣಿಯೊಳಶನಿಘೋಷರಾಗುತ್ತಿರ್ದರ್ ॥೧೬॥

ಕಡುಮುಳಿಸಿಂದೆ ಪೌರವಪುರೀಪತಿ ಕಣ್ಗಿಡಿ ಸೂಸೆ ಕಾಯ್ದು ಪೊ ।
ಯ್ದೊಡೆನಿಸಿ ಪೂತುರೆನೆರಲ್ಕಡಿಯಾಗಿರೆ ಬಿಟ್ಟಿದೆಯೆಂದ ಜೊ ॥
ಬ್ಬಿಡುತಿರದೆರ್ದುದಾಕ್ಷಣದಿನಿರ್ಮಡಿಯಾಗಿ ಕಡಂಗಿ ಕಾದುತುಂ ।
ಸಿಡಿಲವೊಲರ್ವಿಸುತ್ತಶನಿಘೋಷಮಯಂ ರಣಮಾದುದದ್ಭುತಂ ॥೧೯॥

ದೆಸೆಯೆಲ್ಲಮಶನಿಘೋಷರ ।
ಮಸಕಮದಾಭ್ರಮರಿವಿದ್ಯೆಯಿಂದಾಗಳಗು ॥
ರ್ವಿಸೆ ಕಾದೆ ಕಾದುತಿರ್ದಂ ।
ಮಸಗಿದ ಜವನಂತೆ ಪೌರವಕ್ಷಿತಿನಾಥಂ ॥೧೯॥

ವ॥ ಆಸಮಯದೊಳ್ ಸಿದ್ಧವಿದ್ಯನಾಗಿ ಬೇಗದಿಂ ಬಂದಮಿತತೇಜಂ ಮಹಾಜನವಿದ್ಯೆಯಿಂದಭಿನಯಂಗೊಳಿಸೆಯುಂ ಮತ್ತುಮಯ್ದುದಿನಂ ಕಾದಿ ನಿಜವಿದ್ಯಾಬಲಮಱಿದು ನಿತ್ತರಿಸಲಾಶನಿಘೋಷಂ ನಾಭೇಯನರನಿಕಟ ಗಜಧ್ವಜಶೈಲಸನ್ನಿಧಿಯೊಳಿರ್ದ ವಿಜಯಕೇವಳಿಗಳ ಸಭಾಸದನಮಂ ಶರಣ್ಬುಗಲೆಂದು ಪೋಪಾಗಳ್—

ಗಱಿವಱಿಯ ಪಾವಿನಂತಿರೆ ।
ಬಱಿವಿಡಿದಟ್ಟುತ್ತುಮಶನಿಘೋಷನನಾಗಳ್ ॥
ವಿಳಯಾಂತಕರೆನಲೆಯ್ದಿದ ।
ರಿಳೀಶನುಂ ಖೇಚರೇಶನುಂ ತತ್ಕ್ಷಣದೊಳ್ ॥೬೦॥

ವ॥ ಇಂತೆಯ್ದಿ ಪೋಗಿ ತೊಟ್ಟನೆ ಕಟ್ಟಿದಿರೊಳ್ ವಿಜಯಕೇವಳಿಗಳ ಸಭಾಸ್ಥಾನಮುಖದ ಮಾನಸ್ತಂಭಮುಂ ಕಾಣ್ಬುದುಂ ಮಿಥ್ಯಾತ್ವಂ ತೊಲಗಿ ಪರಸ್ಪರವಿರೋಧಮಱಿದು ಮಳರಹಿತಮಾನಸರಾಗಿ ಮನೋನುರಾಗದಿಂ ಕೇವಳಿಗಳ ಶ್ರೀಮುಖನಿರೀಕ್ಷಣದಿಂ ವಾನಂವಾಶ್ರಮಿಶ್ರಿತನಯನೆಂದೀ ವರರುಂ ಜನಿತೋಜ್ವಳಪುಳಕನವಮುಕ್ತಾಳೀಕಂಚುಕಿತಚಕಂಚತ್ಕಳೇವ ರರುಮಾಗಿರ್ವರುಂ ನಿರ್ಭರಭಕ್ತಿಯಿಂ ಬಲವಂದು ದರ್ಶನಸ್ತುತಿಗೆಯ್ದು ವಿಧಿಪೂರ್ವಕಂ ಬಂದಿಸಿ ಕುಳ್ಳಿರ್ದಾಗಳ್—

ಈಸತಿಯಂ ಪತಿವ್ರತೆಯಶೋವತಿಯಂ ಮತಿಗೆಟ್ಟು ಪೊಕ್ಕಣಂ ।
ಪೇಸದೆ ತಂದೆ ನೀನಶನಿಘೋಷನಿದಂ ಬಗೆಗೊಳ್ಳದಿರ್ದರ ॥
ತ್ಯಾಸಿತಶೌರ್ಯ ನೀನೆನುತುಮಾನತೆಯಾಗಿಯೆ ಸೂರಿದೇವಿ ತಂ ।
ದಾಸಭೆಯೊಳ್ ವಿಯಚ್ಚರಶಿರೋಮಣಿಗೊಪ್ಪಿಸಿದಳ್ ಸುತಾರೆಯಂ ॥೬೧॥

ವ॥ ಆಗಳದರ್ಕೆ ಸಂತೋಷಂಬಟ್ಟು ಅಮಿತತೇಜಮಹಾರಾಜನು ಮಾಸೂರಿದೇವಿಯುಮಶನಿಘೋಷನುಮಂ ಸಂತಸಂಬಡಿಸಿ—

ಚರಣಾನತನಾಗಿ ವಿಯ ।
ಚ್ಚರರಾಜಂ ಬೆಸಗೊಳುತ್ತುಮಿರೆ ಕೇವಳಿಗಳ್ ॥
ನಿರವಿಸೆ ನಿರುಪಮಧರ್ಮ ।
ಸ್ವರೂಪಮಂ ಕೇಳ್ದು ತಾಳ್ದಿದಂ ಸಮ್ಯಕ್ತ್ವಮಂ ॥೬೨॥

ವ॥ ಇಂತು ಸಮ್ಯಕ್ತ್ವಸ್ವರೂಪಮನಣುಗುಣಶಿಕ್ಷಾವ್ರತಂಗಳುಮಂ ನೆಱಿಯಱಿದು ಶ್ರಾವಕಾಚಾರಸ್ವೀಕಾರಶಾಂತನಾಗಿ ಬಱಿಕಂ ಖೇಚರೇಂದ್ರಂ ಕುಟ್ಮಳೀಕೃತಕರಾರವಿಂದಂ ಕೇವಳಿಗಳನಿಂತೆಂದಂ:—

ಆರಯದೆನ್ನ ತನ್ನ ಪವಣಂ ವೊದಲೊಳ್ ಪೆರವೆಣ್ಗೆ ಕಾಂಕ್ಷೆಗೆ ।
ಯ್ದಾರೆಸಕಂಗಿಡರ್ ಜಗದೊಳಿಂದು ನಿರೀಕ್ಷಿಸದೀಸುತಾರೆಯಂ ॥

ದೂರದೆ ಕಂಡು ಕಾಯ್ದಶನಿಘೋಷನಿವಂ ಪಿಡಿಮಯ್ದನೋವದೇ ।
ಕಾರಣಮಿಂತಿವಂ ಬೆಸಸಿವೀಗಳೆಲೀ ವರಬೋಧಲೋಚನಾ ॥೨೩॥

ವ॥ ಎನೆ ಕೇಳ್ದ ಕೇವಳಿಗಳಾಸ್ಥಾನಮಂ ನೆಯ್ದಿಯಷ್ಟಾಪಲು ದ್ಯತರಾಗಿ—

ನೆಗಜ್ದ್ವೀಜಂಬೂದ್ವೀಪದ ।
ಸೊಗಯಿಪ ವರವಸ್ತು ಭರಿತ ಭರತಕ್ಷೇತ್ರ ।
ಕ್ಕಗಣಿತಲಾವಣ್ಯಂ ತೊ ।
ಟ್ಟಗೆ ತಾನನೆ ಮಗಧವಿಷಯಮೆಸೆವುದು ನಿಸದಂ ॥೨೪॥

ಬಗೆವೊಡೆ ಭೋಗವತೀನಗ ।
ರಿಗಮಳಕಾಪುರಿಗಮೆಸಕದಮರಾವತಿಗಂ ।
ಮಿಗಿಲೆಸಕಂ ಮೇಲನಿಪುದು ।
ಜಗದೊಳ್ ನವರತ್ನರಚಿತವಿಂ ರತ್ನಪುರಂ ॥೨೫॥

ಪರನೃಪರ ಪಿರಿಯ ಸಿರಿಯಂ ।
ತ್ವರಿತದೆ ತನ್ನಸಿಯ ಒಟ್ಟೆಯೊಳ್ ಬರಿಸುವ ಭೀ ।
ಕರಯೋಧಾಳಿವೈಭವ
ಭರಿತಂ ಶ್ರೀಷೇಣನೆಂಬನಾಸ್ಥಾನರಸಂ ॥೨೬॥

ಎನೆ ನೆಗಜ್ದ್ದಗಣಿತವಿಕ್ರಮ ।
ಧನಿಕಂ ತಾನೆನಿಸಿ ಕೀರ್ತಿವಡೆವಾ ಶ್ರೀಷೇ ॥
ಣನೃಪಂಗೆ ಸಿಂಹಸಂದಿತೆ ।
ಯನಿಂದಿತೆಯರೆಂಬರಿರ್ವರುಂ ಪ್ರಿಯಸತಿಯರ್ ॥೨೭॥

ನೃಪಸತಿಯರ್ಗುದಯಿಸಿದರ್ ।
ತಪನಸ್ಪತಿಮಪ್ರತಾಪರಭಿನವಘೂರ್ಣೀ ॥
ನಪತಾಕರಿಂದ್ರಸೇನನು ।
ಮುಪೇಂದ್ರಸೇನನುವೆನಿಪ್ಪ ಪೆಸರಿನೆವಿರ್ವರ್ ॥೨೮॥

ವ॥ ಇಂತಶೇಷಸಾಮ್ರಾಜ್ಯಸಂಪತ್ತಿಯೊಳ್ ನಲಿಯುತ್ತೆ ಶ್ರೀಷೇಣ ಮಹಾರಾಜನರಸುಗೆಯುತ್ತುಮಿರೆ—

ಕರಮೆಸೆವುದು ತದ್ವಿಷಯಾಂ ।
ತರದೊಳ್ ತಾನಬಳವೆಂಬ ಪೊಱಲಾಪೊಱಲೊಳ್ ॥
ಧರಣಿಜಟನೆಂಬ ಧರಣೀ ।
ಸುರನಿರ್ಜರಂ ಧರ್ಮಪತ್ನಿಯಗ್ನಿಲೆಯೆಂಬಳ್ ॥೬೯॥

ವ॥ ಅವರ್ಗಮಗ್ನಿಭೂತಿ ಚಂದ್ರಭೂತಿಯೆಂಬ ಸುತರುದಯಿಸಿ ಸಕಲವೇದಾದ್ಯನೇಕ ಶಾಸ್ತ್ರನೀಕಮನೋದುವಲ್ಲಿ ಆಧರಣಿಜಟನ ಮನೆಯಸೂಳೆಯ ಮಗನಪ್ಪ ಕಪಿಳನೆಂಬಂ ನಿಸ್ಸೀಮಮತಿಯುತನಪ್ಪುದರಿಂದಂ ಶ್ರವಣಾತ್ಮದಿಂ ಶ್ರುತಿಪ್ರಮುಖಸಕಲವಿದ್ಯಾವಿಕಾರಜನಾಗಿರ್ದೊಂದುದಿವಸಂ ತದೀಯ ಮಾಣವಕಗುರುಪಾಧ್ಯಾಯನಂತೆ ಮುಂದಂ ಪೇೞ್ವುದುಂ ಪೊಡಮಣಿಂ ಬರುತ್ತುಂ ಕೇಳ್ದು ಕೋಪಮಂ ತಾಳ್ದಿಯಾವಿಪ್ರವರಂ ಪೊಲ್ಲಕೆಯ್ದುವೆಂದು ಪೊಡೆದು ಪೊಱಮಡಿಸಿ ಕಳಿವುದುಮಾತಂ ದ್ವಿಜನ್ಮವೇಷದಿಂ ರತ್ನಪುರಿಗೆ ವಂದು–

ಕಪಿಳದ್ವಿಜನ್ಮನಾರ ।
ತ್ನಪುರೀಬುಧತತಿಗೆ ತನ್ನ ವೇದಾದಿಕಳಾ ॥
ವಿಪುಳಪ್ರಗಲ್ಭವೃತ್ತಿಯ ।
ನಪೂರ್ವಮೆನೆ ತೋರ್ಪ ಪಡೆಯುತಿರೆ ಕೌತುಕಮಂ ॥೭೦॥

ವ॥ ಆತನಿಂತತಿಖ್ಯಾತಿನೆತ್ತು ಪುರದೊಳಿರೆಯುಮುದಂ ಕರ್ಣಪರಂಪರೆಯಿಂ ಕೇಳ್ದರಮನೆಯಲ್ಲಿ ವಿದ್ವಾಂಸನತ್ಯಧಿಕನಪ್ಪ ಸತ್ಯಕನೆಂಬ ವಿಪ್ರೋತ್ತಮಂ ಬರಿಸಿ ನೋಡಿಪ್ಪೆನೆಂದಿರ್ದುದುಮಾಕಪಿಳನೊಂದುದಿವಸಂ ತಾನೆ ಮನೆಗೆ ಬರೆ ಕಂಡು ಸಮುಚಿತಾಸನಮನಿತ್ತು ಮನ್ನಿಸಿ ಕಿರಿದಪ್ಪುದುಂ ಪ್ರಸಂಗಾಂತರದೊಳಖಿಳವಿದ್ಯಾಧಿಕತ್ವದಿಂದದ್ವಿತೀಯನಂದು ಮೆಚ್ಚಿ ಧರ್ಮಪತ್ನಿಯಪ್ಪ ಜಂಬುವೆಂಬಳ್ಗಂ ತನಗಂ ಪುಟ್ಟಿದ ಸತ್ಯಭಾಮೆಯೆಂಬ ಕುಮಾರಿಯಂ ಸತ್ಯಕಂ ಕನ್ಯಾದಾನದಿಂ ಕುಡೆ ಕೈಕೊಂಡು ಸುಖದಿನಿರೆ–

ಅರಸರ ಮನಕಂ ಪರಿವೃತ ।
ಪರಿಜನಕಂ ಸಕಳವಿಬುಧಜನಕಂ ವಿಳಸ ॥
ತ್ಪುರಜನಕಂ ತಾನೆನಸುಂ ।
ಪರಮಪ್ರಿಯನಾಗಿ ವರ್ತಿಸುತ್ತುಂ ಕಪಿಳಂ ॥೭೧॥

ಅನವರತಮಿರ್ವರುಂ ಸುಖ ।
ದಿನಿರುತ್ತುಂ ಸತ್ಯಭಾಮೆ ಭಾವಿಸುತಿರ್ಪಳ್ ॥
ಮನದೊಳ್ ಕಪಿಳಂ ಕಪಟಾ ।
ತ್ಮನಿವಂ ನಿಜದಿಂ ದ್ವಿಜನ್ಮನಲ್ಲಿನಲೆನಲುಂ ॥೩೦॥

ವ॥ ಇಂತು ಕಲ್ಪಿಸುತ್ತುಮವಂ ತಾತನಪ್ಪ ಸತ್ಯಕಂಗೆ ಸೂಜಿಪೆನೆಂಬ ನ್ನೆಗವಾಜಟಿಲಧರಾಮರಂ ಧರಾಮರನಿವಾಸಂಗಳಂ ಪುಗುತ್ತುಂ ತನ್ನಯ ನಿಕೇತನಕ್ಕೆ ಬರೆ ಕಂಡಿವಿರೆಚ್ಚಿ ಭಿವಾದನಮುಖ್ಯಮಾತಿಥ್ಯಮಂ ಮಾಡೆ ನೋಡಿ ಕಪಿಳನೆಂದಱಿದು ವಿಸ್ಮಯಸ್ವಾಂತನಾಗಿ ಮತ್ತಮೇನುಮಂ ನುಡಿಯದೆ ಅಸಮೂರೋಪಿತಪ್ರೇಮದಿಂ ತಂದೆ ತಾನೆಂಬುದಂ ಪ್ರಕಟೀಕರಿಸುತಿರ್ದ ಮಾವನ ಭಾವಮಂ ಸತ್ಯಭಾಮೆ ಮನದೊಳಱಿದು—

ಏನಾನುವೊಂದು ತೆಱನಿದು ।
ತಾನಾಗಲ್ವೇಱುಕ್ಕುಮಿದನೆ ತಿಳಿದಪೆನೆಂದಾ ।
ಮಾನಾತುಳನಮ್ಮಮನ ।
ಕ್ಕಾನಂದಂ ಜನಿಸುವಂತೆ ಮನ್ನಿಸಿ ನಯದಿಂ ॥೩೩॥

ಧರಣಿಸುರಂ ಮನದೊಳ್ ಕೊ ।
ಕ್ಕರಿಸದೆ ಕಪಿಳನ ಸಪಙ್ಕ್ತಿಭೋಜನಮುಂ ಸ್ವೀ ॥
ಕರಿಸಿದನೆನೆ ಪೇೞಾರಂ ।
ಬರಿಸಮ ಹೀನತೆಗೆ ದೀನತೆಗೆ ದಾರಿದ್ರ್ಯಂ ॥೩೪॥

ವ॥ ಅಗಳನುರಾಗದಿಂ ಕಪಿಳಂ ಕರ್ಪೂರತಾಂಬೂಲಮುಂ ತಾತಂಗೆ ತಾನಿತ್ತರನುನೆಗೆ ಚೇತಂ ಶರೀರಮುಂ ಪತ್ತುವಿಡಲೊಡಂ ಸತ್ಯಭಾಮೆ ಸಂಗ ಡಿಗೊಳುತ್ತುಂ ಕಪಿಳನೊಳ್ ವರ್ತಿಸುತ್ತುಮಿರೆ—

ಧರಣಿಸುರಂ ದಾರಿದ್ರ್ಯಂ ।
ಪಿರಿದಾಗಿಯುಮತುಳದೈನ್ಯಭಾವಂ ತನಗಾ ॥
ವರಿಸೆ ಸಲೆ ದೇಶದೇಶಾಂ ।
ತರದೊಳ್ ಬರುತಿಂತು ರತ್ನಪುರಿಗೈತಂದಂ ॥೩೫॥

ವ॥ ಇಂತು ಪುರಮಂ ಪೊಕ್ಕು ಭಿಕ್ಷಾರ್ಥಿಯಾಗಿ ಜಟಿಲಧರಾಮರಂ ಪೋಗಿ ಪೆಱಗೆ ತೆಱಪಿನೊಳ್ ಸತ್ಯಭಾಮೆ ಸಮಸ್ತವಸ್ತುವಂ ಕೊಟ್ಟು

ಮಾವನಂ ತುಷ್ಟನಂ ಮಾಡಿ ಕಟ್ಟೀಕಾಂತದೊಳ್ ಕಪಿಳನ ಪೂರ್ವವೃತ್ತಾಂ
ತಮುಂ ಬೆಸಗೊಳ್ವುದುಂ ನೆಱೆಯಱಿಪಿ ಜಟಿಲಧರಾಮರನಾಕ್ಷಣಂ ಪೋ೪
ಮಟ್ಟು ಪೋಗೆ ತಾನೆನಸುಂ ಬೆಕ್ಕಸಂಬಟ್ಟು—

ಮುನ್ನಮೆ ಮನ್ಮನಂ ಕಪಿಳನುತ್ತಮವಂಶಜನಲ್ಲೆನುತ್ತುಮಿ ।
ರ್ದನ್ನೆಗಮಿಂತು ಚೇಟಿಯ ತನೂಭವನೆಂಬುದು ತಥ್ಯಮಾಯ್ತು ಪೋ ॥
ಯ್ತಿನ್ನೆಗಮೇನುಮೆಂದಱಿಯದಿಂದಱಿದೆಂ ತೊಱೆದೆಂ ದಲೆಂದು ಸ ।
ತ್ಯೋನ್ನತೆ ಸತ್ಯಭಾಮೆ ನುಡಿದಳ್ ಮನದೊಳ್ ಪಿರಿದುಂ ಪ್ರತಿಜ್ಞೆಯಂ ॥

ಬಿಡೆ ತನ್ನಂ ಸತಿ ತಾನುಂ ।
ಬಿಡಲಾಱದೆ ಕಪಿಳನಾಗ್ರಹಂಗೆಯ್ಯಲೊಡಂ ॥
ಸೆಡೆದೊಳಱಿ ಪೋಗೆ ಪೊಕ್ಕಳ್ ।
ತಡೆಯಿಲ್ಲದೆ ಸತ್ಯಭಾಮೆ ನೃಪನರಮನೆಯಂ ॥೩೩॥

ಪೊಳೆವಿಂದುಕಳೆಯ ಬೞಿಯಂ ।
ಮಳೀಮಸಂ ರಾಹು ಬರ್ಪವೋಲರಮನೆಗಾ ॥
ಗಳೆ ಬಿಡದೆ ಸತ್ಯಭಾಮೆಯ ।
ಬೞಿಯನೆ ಕಪಿಳಂ ಕಡಂಗಿ ತಾನೆಯ್ತಂದಂ ॥೩೪॥

ವ॥ ಇಂತು ಬಿಡದೆ ಬಂದ ಪತಿಯಂದಕ್ಕೆ ಚಕಿತಜಡೆತ್ತೆಯಾಗಿ ಸತ್ಯ
ಭಾಮೆ ಶ್ರೀಷೇಣಮಹಾರಾಜನ ಪದಪಯೋಜಮೂಲದೊಳ್ ಬಾಯಬೀದು
ಬಿೞ್ದು ಪೊರಬುತ್ತುಮವನಿನ್ನೆವರಂ ವಂಶವಂಚನೆಯಿಂ ವರ್ತಿಸಿದ ವೃತ್ತಾಂ
ತಮನಱಿಯೆ ಬಿನ್ನವಿಸೆ ಕೇೞ್ದರಸಂ ಕಡುಮುಳಿದು ಕಪಿಳನಂ ಪಿಡಿದು
ಪೊಡೆಯಿಸಿ ಶಾಸ್ತಿಗೆಯ್ದೆ ಕರುಣಿಸಿ ನಾಡ ಗಡಿಯಿಂ ಪೊಱಮಡಿಸಿ ಕಳೆಯೆ-

ಎನಗಿನ್ನಿದೆ ಶರಣೆಂಬುದ ।
ನೆನಸುಂ ನಿಶ್ಚಯಿಸಿ ಸತ್ಯಭಾಮೆ ತದೀಯಾ ॥
ವನಿಪನ ನೃಪಚರಣಮೆ ಶರ ।
ಣೆನುತುಂ ನೃಪಸತಿಯರಂಘ್ರಿಸೇವೆಯೊಳಿರ್ದಳ್ ॥೩೫॥

ವ॥ ಆರತ್ನಪುರೀವಲ್ಲಭಂ ಶ್ರೀಷೇಣನೊಂದುದಿನಂ ಚರ್ಯಾಮಾ
ರ್ಗದಿಂದಾದಿತ್ಯಗತಿಗಳುಮರಿಂಜಯರುಮೆಂಬ ಚಾರಣಮುನೀಶ್ವರರಿರ್ವರುಂ
ಬರುತಿರ್ಪುದಂ ಕಂಡು—

ಬರುತಿರ್ಪಾಚಾರಣಮುನಿ ।
ವರರಂ ಕಂಡಂತೆ ತನಗೆ ಭುವನತ್ರಯಭಾ ॥
ಸುರಸಾಮ್ರಾಜ್ಯಂ ಬಂದಂ ।
ತಿರೆ ಪರಮೋತ್ಸವಮನೆಯ್ದಿದಂ ಶ್ರೀಷೇಣಂ ॥೪೦॥

ಅನುಪಮಬಾಹ್ಯಾಭ್ಯಂತರ ।
ಮೆನಿಪೆರಡುಂ ತೆಱದ ವರತಪೋನಿಧಿಗಳ್ ಬೋ ।
ಧನಿದಾಸಂ ಪದೆಪಿಂ ತಾ ।
ಮೆನಗೀಗಳ್ ಸಂದರೆಂದು ನೃಪನತಿ ನಲಿದಂ ॥೪೧॥

ಜಿನಧರ್ಮಶ್ರೀನಿಧಿಯೆರ ।
ಡೆನಗಿಂದನಿಮಿತ್ತದಿಂದೆ ಬಂದುದೆನುತ್ತುಂ ॥
ಮನದೊಳ್ ಶ್ರೀಷೇಣಂ ಪಿರಿ ।
ದನುರಾಗಮನೆಯ್ದುತಾಗಳಂದಿದಿರೆಜ್ದಂ ॥೪೨॥

ಎನ್ನಯ ಪೂರ್ವಾರ್ಜಿತಪು ।
ಣ್ಯೋನ್ನತಿ ಪಿರಿದಪ್ಪುದಲ್ಲದೊಡೆ ಬರ್ಪರೆ ಸಂ ॥
ಭಿನ್ನನಿಧಿಗಳ್ ಸುಚಾರಣ ।
ರೆನ್ನುತ್ತುಂ ಮೋದದಿಂದಮಂದಿದಿರ್ವಂದಂ ॥೪೩॥

ಅವನೀವಿನುತಸ್ವರ್ಗಾ ।
ಪವರ್ಗಮೆರಡುಂ ಮುನೀಂದ್ರಮೂರ್ತಿಚ್ಛಲದಿಂ ॥
ದವೆ ಬಂದುವೆನಿಪ ಚಾರಣ ।
ಸುವಿಮಳಪದಕಮಳಯುಗಳಮಂ ಸಾರ್ತಂದಂ ॥೪೪॥

ವ॥ ಇಂತು ಬಂದು ಮಹೀಕಾಂತಂ ನಿಜಸ್ವಾಂತಜನಿತನಿರ್ಭರಭಕ್ತಿಯಿಂ ತ್ರಿಪ್ರದಕ್ಷಿಣಂಗೆಯ್ದು ಚಾರಣಮುನೀಂದ್ರಚರಣಕಮಲಂಗಳಂ ದಿವ್ಯಕುಸುಮಾಕ್ಷತಫಲಂಗಳಿಂದರ್ಚಿಸಿ ಪದನಖಮಯೂಖಮೂಳಾಮಂ ಜರೀರಂಜಿತೋತ್ತಂಸನಾಗಿ ನಿಲಲ್ವೇೞ್ಕುಮೆಂದು ನಿಲಿಸಿ—

ಚಾರಣರಂ ಮನಸಿಜ ಮದ ।
ಮಾರಣರಂ ಸಕಳಜೀವಹಿತಕೃತಿವಿಳಸ ॥
ತ್ಕಾರಣರಂ ನಿಲಿಸಿದನಂ ।
ತಾರತ್ನಪುರೀಶನಂತು ನೋಂತರುವೊಳಗೆ ॥೪೫॥

ಶುಚಿಯುವಿಭಾಗಮಣಿಗಣ ।
ರಚಿತಾಸನದಲ್ಲಿ ತಂದು ಕುಳ್ಳಿರಿಸಿ ನೃಪಂ ॥
ರುಚಿರಾಂಬುವಿನಿಂ ತಾನಿಂ ।
ತು ಚಾರಣರ ಚರಣಕಮಲಮಂ ಕ್ಷಾಲಿಸಿದಂ ॥೪೬॥

ಪಿರಿದುಂ ತ್ರಿಕರಣಶುದ್ಧಿಯಿ ।
ನರಸಂ ಕೊಂಡಾಡಿ ಮುದಮನೆಯ್ದಿದನೆನಲ ॥
ಚ್ಚರಿಯೆನುತುತ್ತಮಪಾತ್ರಂ ।
ದೊರೆಯಲ್ ಪರಮಾನುರಾಗವಾಗದುದುಂಟೆ ॥೪೭॥

ಎಱಕಂ ಕ್ಷಮೆ ದಯೆ ಪ್ರದಿದಿ ।
ರ್ಪಱಮಱಿತ್ತಿ ನೆಗಱಿತ್ತಿ ಶಕ್ತ್ಯುದಾರಮೆನಿಪ್ಪೀ ॥
ಯಱಿಕೆಯವೇಱಲುಂ ಗುಣಮಂ ।
ನೆಱಿ ಮೆಱಿದಂ ವಿನಯವೃತ್ತಿಯಿಂ ಶ್ರೀಷೇಣಂ ॥೪೮॥

ತದನಂತರದೊಳ್—

ಕ್ರಮದಿಂದಾನೃಪನಾಗಳುತ್ಸವಮಣಂ ಮೆಯ್ವೆರ್ಚೆ ಪುಣ್ಯೋದಮು ।
ತ್ತಮಗಂಧಂ ವಿಮಲಾಕ್ಷತಂ ಸುರಭಿಪುಷ್ಪಂ ದಿವ್ಯಧೂಪಂ ಸುದೀ ॥
ಪಮುದಂಚಚ್ಚರಸತ್ಫಲಾವಳಿಯೆನಿಪ್ಪಷ್ಟಾರ್ಚನಾನೀಕದಿಂ ।
ದಮೆ ತಾನರ್ಚಿಸಿ ಸನ್ಮುನೀಶ್ವರರ ಭಾಸ್ವತ್ಪಾದಪದ್ಮಂಗಳಂ ॥೪೯॥

ಪರಿಪಕ್ವಮಭಿನವಂ ಸುರು ।
ಚಿರಮಧುರಾವಹಮಭಿನ್ನರಸಮೆನಿಸಿಪರ್ಮಾ ॥
ನಿರವದ್ಯಾನ್ನಮನತ್ಯಾ ।
ದರದಿಂ ತನ್ಮುನಿವರರ್ಗ್ ನೃಪವರನಿತ್ತಂ ॥೫೦॥

ಜ್ಞಾನನಿಧಾನಚರಿತ್ರರ್ ।
ಶ್ರೀನಾಥರ್ ತಾಮೆನಿಪ್ಪ ತನ್ಮುನಿಪರನು ॥
ತ್ತಾನಕರಕಮಲರಾಗಿಸಿ ।
ತಾನಭಿಮತಫಲಮನಾನೃಪಂ ನೆಱಿ ಪಡೆದಂ ॥೫೧॥

ಹತದೋಷಸಮೂಹರ್ ನಿ ।
ರ್ಜಿತೇಂದ್ರಿಯರ್ ಮುಕ್ತಿಕಾರಣರ್ ಜೀವದಯಾ ॥

ನ್ವಿತರಪ್ಪ ಮುನಿವರರ್ ವಲ ।
ಮತಿಮುದದಿಂದಿತ್ತ ಭವ್ಯನಾತನೆ ಸೇವ್ಯಂ ॥೪೯॥

ಸಮಿತಿವಿರಾಜಿತರ್ ವ್ರತಗುಣಾರ್ಜಿತರಸ್ತವಿಷಾದಕೋಪರ ।
ಪ್ರಮಿತದಯಾಪರರ್ ಪರಮತತ್ವವಿನಿಶ್ಚಯಜೆತ್ತರುದ್ಧ್ಯಸಂ ॥
ಯಮನಿಧಿಗಳ್ ಸುಶೀಳಪರಿಪಾಳನರಪ್ಪ ಮಹಾಮುನೀಶ್ವರರ್ ।
ಸಮನಿಸಲಪ್ಪುದೆಂಬುದು ಪುರಾತನಪುಣ್ಯದಿನಲ್ಲದಕ್ಕುಮೇ ॥೪೮॥

ವರಹೇಮೋತ್ಕಟವೃಷ್ಟಿ ಪೂವಟಿ ಸುರಾತೋದ್ಯಸ್ವನಂ ಗಂಧಬಂ ।
ಧುರಶೀತಾಲಸಚಾರುಮಾರುತನಹೋ ಯೋಗೀಂದ್ರ ಭಾಪುರ್ವರೇ ॥
ಶ್ವರಸದ್ಧ್ವನಮೆ ಭಾಷೆನುತ್ತುಲಿವ ಗೀರ್ವಾಣಸ್ವರಂ ತಟ್ಟು ಬಿ ।
ತ್ತರಿಸಲ್ ಸಂಗಳಿಸಿತ್ತು ಕಣ್ಗೊಳಿಸಿ ಪಂಚಾಶ್ಚರ್ಯಮಾವೇಗದಿಂ ॥೪೪॥

ಉತ್ತಮಪಾತ್ರದಾನಫಲದಿಂ ಸಲೆ ಪುಟ್ಟುವರಲ್ತೆ ಕೂಡಿವೆ ।
ತ್ತುತ್ತಮಭೋಗಭೂಮಿಯೊಳಮಾ ಕುರುಭೂಮಿಯ ಭೋಗದಿಂದಮ ॥
ತ್ಯುತ್ತಮಮಪ್ಪ ದೇವಗತಿ ಮತ್ಸಪವರ್ಗಮದಪ್ಪುದೆಂದೊಡಿ ।
ನ್ನುತ್ತಮಪಾತ್ರದಾನಫಲಮಂ ಪರಿಕಲ್ಪಿಸಲೇನಡಪ್ಪುದೇ ॥೪೫॥

ಅನುಪಮಸುಪಾತ್ರದಾನಮ ।
ನನೂನಮೆನೆ ಮಾಡಿದಧಿಕದಾನಫಲಂ ನೆ ॥
ಟ್ಟನೆ ಕುಡುಲುತ್ತರಕುರುಭೂ ।
ಜನಿತಾಯುರ್ವರ್ಧನಾದನಾಶ್ರೀಷೇಣಂ ॥೪೬॥

ಅನುಪಮವೋದನಫಲದಿಂನೃಪ ।
ವನಿತೆಯರುಂ ಸತ್ಯಭಾವೆಯುಂ ಕುರುಧರಣೀ ॥
ಜನಿತಾಯುರ್ವರ್ಧಂಬಡೆ ।
ದನವರತಂ ಪರಮಹರ್ಷದಿಂ ಪುದಿದಿರ್ದರ್ ॥೪೭॥

ವ॥ ಇಂತು ಸುಖದಿನಿರುತ್ತುಮಾಶ್ರೀಷೇಣಮಹಾರಾಜಂ ತನ್ನ ಪಿರಿಯ ಕುಮಾರನಪ್ಪಿಂದ್ರಸೇನಂಗೆ ಕೌಶಾಂಬೀಪುರಮನಾಳ್ವ ಮಹಾಬಳನರೇಂದ್ರಂಗಂ ಶ್ರೀಮತಿಮಹಾದೇವಿಗಂ ಪುಟ್ಟಿದ ಶ್ರೀಮಂತೆಯೆಂಬ ಕುಮಾರಿಯಂ ಮೆದುವೆಯಂ ಮಾಡಲಾಕುಮಾರಿಯೊಡನನಂತಮತಿಯೆಂಬ ವಿಲಾ

ಸಿನಿಯಂ ಬಟ್ಟುವಟ್ಟುಯಂ ಕುಡೆ ಕೊಂಡು ಬಂದಿರಲಾಕೆಯ ಲಾವಣ್ಯಾತಿ
ಶಯಕ್ಕೆ ನೃಪನಂದನರಿರ್ವರುಂ ಸೋಲ್ತು ಪಿರಿದುಮಾಸಕ್ತರಾಗಿ—

ಅನುಜಾಗ್ರಜಭಾವಂ ನೆ ।
ಟ್ಟಗೆ ಬಿಟ್ಟುದು ಧೃತಿಯೆ ಪೋಯ್ತು ಮತಿ ಸಾವಂ ತೊ ॥
ಟ್ಟನೆ ತೋರ್ದುದು ತಮ್ಮಿರ್ವರ ।
ನನಂತಮತಿಗೆಳಸೆ ಬಳಸೆ ಕಣ್ಣಂ ಮನಮುಂ ॥೫೪॥

ಅನುಜಂ ವಾಂಛಿಸಿದಾವಧು ।
ತನಗನುಚಿತಮೆನ್ನದಳಿಪಿದಂ ಪಿರಿಯಂ ತಾ ॥
ನೆನೆ ಮನಸಿಜಗ್ರಹಂ ಮನ ।
ಮನಣಂ ಸೋಂಕಲ್ಕೆ ಪಿರಿಯತನಮೆತ್ತಣದೋ ॥೫೫॥

ಸಮುದಿತಮದನಾಸವಮ ।
ತ್ತಮನಸ್ಕರದೆಂತುಮಱಿವರೇ ಕಾರ್ಯಾಕಾ ॥
ರ್ಯಮುಮಂ ನೆಗಟ್ಟ್ದಜಿತಾನುಚಿ ।
ತಮುಮಂ ಸಮನಿಪ ಹಿತಾಹಿತಮುಮಂ ತಮ್ಮೊಳ್ ॥೬೦॥

ಅನುವಶರಾಗೆ ನೃಪಾತ್ಮಜ ।
ರನಂತಮತಿಕಾಂತೆಯೊರ್ವಳಿರ್ವರ ಹೃದಯಾ ॥
ಭ್ಜನಿವಾಸೆಯಾಗೆ ಮೋಹಿಪ ।
ಳೆನೆ ಮದನನ ಕೆಯ್ತಮಿಂತಿದೇನಚ್ಚರಿಯೋ ॥೬೧॥

ನನೆಯ ಸರಂಗೆ ಚಿತ್ತದೆಡೆಯಂ ಕುಡದಿರ್ದನ ಪೆಂಪು ಜಾಣ್ ಜಸಂ ।
ವಿನುತಮಹತ್ವಮಾರ್ಪಱಿವು ಕೂರ್ಪು ಪೊಡರ್ಪೆಸೆದಿರ್ಪುದಲ್ಲದೊ ॥
ಯ್ಯನೆ ತೆಱಂ ಕುಡುತ್ತಿರೆ ಬಟ್ಟಿಕ್ಕಮದೆಲ್ಲಿಯ ಪೆಂಪು ಜಾಣ್ ಜಸಂ ।
ವಿನುತಮಹತ್ವಮಾರ್ಪಱಿವು ಕೂರ್ಪು ಪೊಡರ್ಪಿನಿತುಂ ವಿಚಾರಿಸಲ್ ॥೬೨॥

ವ॥ ಆವಿಲಾಸಿನಿಯಪ್ಪನಂತಮತಿಕಾಂತೆಯನುಪೇಂದ್ರಸೇನಂ ಕೂಡಲನುಗೆಯ್ದಿರ್ಪುದಂ ಕಂಡು ಪಿರಿಯತನಂ ಕೆಟ್ಟೆಂದ್ರಸೇನಂ ತಾನುಂ ಕೂಡಲೆಂದುಜ್ಜಗಿಸೆಯುಂ ಕಲುಷಮಿರ್ವರೊಳಂ ನೆಲೆವೆರ್ಚಿ—

ಕೂಟಂ ದೊರಕದ ವಿರಹದ ।
ಕೋಟಲೆ ಪಿರಿದಾಗಲಾಗಳೀರ್ವರೊಳಂ ಕೋ ॥

ಪಾಟೋಪವೊದವೆ ಕಾದ ।
ಲ್ಕೊಟಿಸಿದರ್ ನೃಪತನೂಜರಂತಾಕ್ಷಣದೊಳ್ ॥೬೫॥

ವ॥ ಅದಂ ಕೇಳ್ದಾ ಶ್ರೀಷೇಣಮಹಾರಾಜಂ ಮಂತ್ರಿಗಳ್ವೀರಸು ತ್ವರಿತದಿಂ ತನೂಭವರಲ್ಲಿಗೆ ಪೋಗಿ—

ಸುತರಿರ್ವರ್ ನೆಗಟ್ದಿನುಚಿತ ।
ರತರಮರಾಗ್ರಹದುದಗ್ರತೆಯನೆನಿಸಾನುಂ ॥
ಕ್ಷಿತಿಪತಿ ಮಾಣಿಸಲಾಱದೆ ।
ಹತಪ್ರಭಂ ದೂಯಮಾನಮಾನಸನಾದಂ ॥೬೪॥

ಮನಸಿಜಪಾಟಲವೃತಲೋ ।
ಚನರೆಂತುಂ ಕಾಣ್ಬರೇ ಸುಹೃಜ್ಜನಮಂ ಸ ॥
ಜ್ಜನಮಂ ಗುರುಜನಮಂ ಬಂ ।
ಧುನಿಚಯಮುಮನಾಪ್ತಜನಮನಸುಹೃಜ್ಜನಮಂ ॥೬೫॥

ವ॥ ಮತ್ತಮಾಶ್ರೀಷೇಣಮಹಾರಾಜಂ ತನೂಜರ್ ತನ್ನ ವಚನಮನ ವಜ್ಞೆಯಂ ಮಾಡಿದುದರ್ಕೆ ನಾಡೆಯುಂ ಭಂಗಿತಾಂತರಂಗನಾಗಿ—

ಅತಿವಿಷಮಗರಳರಸವಾ ।
ಸಿತನೀಳೋತ್ಪಳದ ಕಂಪನಿರ್ಕುಳಿಗೊಂಡಂ ॥
ಕ್ಷಿತಿವರನಾರ್ಗಂ ಪೇೞ್ದೆ ।
ಧೃತಾಭಿಮಾನಿಗಳದೇನೊ ಬಗೆವರೆ ತನುವಂ ॥೬೬॥

ವ॥ ಇಂತು ವಿಷಾಸಿತೋತ್ಪಲಮನಾಘ್ರಾಣಿಸಿ ಪರವಶನಾಗುತಿರ್ಪ ಪತಿಯಂ ಕಂಡು ಸಿಂಹನಂದಿತೆಯುಮನಿಂದಿತೆಯುಮೆಮಗೆ ನಿನ್ನ ಗತಿಯೆ ಗ್ಗತಿಯೆಂದು ಪ್ರಧೃತಪ್ರತಿಜ್ಞೆಯರಪ್ಪಾಗಳಾಸತ್ಯಭಾಮೆಯುಂ ತಾನುಮುಂ ತೆಗೆಯ್ವೆನೆಂದು ತದೀಯಹಸ್ತಪ್ರಫ್ಫಸೌರಭಮಂ ವಾಸಿಸಿಯರಸಂ ಬೆರಸು ನಾಲ್ವರುಂ ಪಂಚತೆಯನೆಯ್ದುತಿರ್ಪುದುಮತ್ತಲ್—

ಮುಸಗಿ ಕಡುಮುಳಿದು ಬಿಡದಿಂ ।
ದ್ರಸೇನನುಮುಪೇಂದ್ರಸೇನನುಂ ಕಾದುತಿರಲ್ ॥
ದೆಸೆಯನಪಕೀರ್ತಿಪಟಹ ।
ಪ್ರಸರಪಟುಧ್ವನಮುರ್ವಿ ಪರ್ವುತ್ತಿರೆಯುಂ ॥೬೭॥

ವ॥ ಆಸಮಯದೊಳೊರ್ವ ವಿದ್ಯಾಧರಂ ಜಲಧರಮಾರ್ಗದೊಳ್ ನಿಂದು ನೀಮಿರ್ವರುಂ ಕಾವಲಾಗದನಂತಮತಿಯೆಂಬ ಕಾಂತೆ ನಿಮ್ಮ ಸಹೋದರಿಯೆಂದು ಮುಡಿಯೆ ಕೇಳ್ದು ಮುನಿಸನುೞಿದು ನೋಡಿ ನೀನಾವನೀವೃತ್ತಕಮನೆತ್ತಬಲ್ಲೆ ನೀನಿಲ್ಲಿಗೆ ಬಂದ ಕಾರಣಮಾವುದು ಪೇೞೆನಲಾಂ ಧಾತಕೀಷಂಡದ್ವೀಪದ ಪೂರ್ವಮಂದರದ ಪೂರ್ವವಿದೇಹದ ಸೀತಾತರಂಗಿಣಿಯ ಬಡಗಣ ತಡಿಯ ಪುಷ್ಕಳಾವತೀವಿಷಯದ ವಿಜಯಾರ್ಧಪರ್ವತದ ದಕ್ಷಿಣ ಶ್ರೇಣಿಯೊಳಿರ್ದಾದಿತ್ಯಾಭನೆಂಬ ಪೊೞಲನಾಳ್ವ ಸುಕಾಂಡಲನೆಂಬ ವಿದ್ಯಾಧರಂಗಂ ಸೇನಾದೇವಿಗಂ ಪುಟ್ಟಿದೆನೆನ್ನ ಪೆಸರ್ ಮಣಿಕುಂಡಲನಾನೊಂದು ದಿವಸಮಸ್ಮದ್ವಿಷಯದ ಪುಂಡರೀಕಿಣೀಪುರದ ಬಹಿರುದ್ಯಾನದೊಳಿರ್ದ ಮಿತ್ರಪ್ರಭತೀರ್ಥಕರರಂ ಬಂದಿಸಿ ಧರ್ಮಶ್ರವಣಾನಂತರಮೆನ್ನ ಪೂರ್ವಭವಮಂ ಬೆಸಗೊಂಡೊಡವರಿಂತೆಂದರ್ :-

ಪುದಿದೆಸೆವ ಪುಷ್ಕರದ್ವೀ ।
ಪದ ಪಡುವಣ ಮಂದರಾದ್ರಿವರದಪರವಿದೇ ॥
ಹದ ಸೀತೋದಾನದಿಯ ।
ಗ್ಗದ ತೆಂಕಣ ತಡಿಯೊಳಿರ್ಪ್ಪದು ಸರದ್ವಿಷಯಂ ॥೬೪॥

ಪೆಸರ್ವೆತ್ತ ಸರದ್ವಿಷಯದೊ ।
ಳೆಸೆವುದು ತಾಂ ವೀತಶೋಕಮೆಂಬ ಪುರಂ ಶೋ ॥
ಭಿಸುವಾಪುರದರಸಂ ರಾ ।
ಜಿಸುವಂ ಚಕ್ರಧ್ವಜಾಭಿಧಾನನರೇಂದ್ರಂ ॥೬೫॥

ವ॥ ಆಚಕ್ರಧ್ವಜನರೇಂದ್ರಗಂ ಕನಕಮಾಳಾದೇವಿಗನಂ ಕನಕಲತೆ ಪದ್ಮಲತೆಯೆಂಬ ಮಗಳ್ದಿರಾದರ್. ಆನೃಪನ ಕಿರಿಯರಸಿ ವಿದ್ಯುನ್ಮಾಳಿಗಂ ಪದ್ಮಾವತಿಯೆಂಬ ಮಗಳಾವಳ್. ಇಂತು ಸುಖದಿನಿರುತ್ತುಂ ಒಂದು ದಿವಸಂ ಪಿರಿಯರಸಿಯರಪ್ಪ ಕನಕಮಾಲಾದೇವಿ ಕನಕಲತೆ ಪದ್ಮಲತೆ ಪದ್ಮಾವತಿಸಹಿತಂ ಅಮಿತಸೇನರೆಂಬಾಚಾರ್ಯರ ಪಾರ್ಶ್ವದೊಳ್ ಧರ್ಮಮಂ ಕೇಳ್ದು ವ್ರತಂಗಳಂ ಕೈಕೊಂಡು ನೆಗೞುತ್ತುಂ ಜೀವಿತಾಂತದೊಳ್ ಕನಕಮಾಲಾದೇವಿಯ ಮಗಳ್ದಿರಪ್ಪ ಕನಕಲತೆಯುಂ ಪದ್ಮಲತೆಯುಂ ಬೆರಸು ಸೌಧರ್ಮಕಲ್ಪದೊಳ್ ಮೂವರುಂ ದೇವಿಯರಾಗಿ ಪುಟ್ಟಿ ಕಿರಿಯರಸಿಯ ಮಗಳಪ್ಪ ಪದ್ಮಾ

ವತಿಯೊರ್ವ ಸೂಳೆಯ ನಿರ್ಭರ್ಗಂಧರ್ವರ್ಗೆ ಕೈಗೆಯ್ಸುವುದಂ ಕಂಡಂರ್ತಿ
ಯಾಗಿ ನಿದಾನಂಗೆಯ್ದು ಜೀವಿತಾಂತದೊಳ್ ಸೌಧರ್ಮಕಲ್ಪದೊಳ್ ಸುರಗಣಿಕೆ
ಯರಾಗಿ ಪುಟ್ಟಿದರ್. ಇಂತು ನಾಲ್ವರುಮಲ್ಲಿಂ ಬಂದು ಆಕನಕಮಾಲಾಜಿರನಪ್ಪ
ಜೀವಂ ಮಣಿಕುಂಡಳ ನೀನಾದೆ; ನಿನ್ನ ಮಗಳ್ದಿರಪ್ಪ ಕನಕಲತೆಯುಂ ಪದ್ಮಲ
ತೆಯುಂ ರತ್ನಪುರಮನಾಳ್ವ ಶ್ರೀಷೇಣಂಗಿಂದ್ರಸೇನನುಮುಪೇಂದ್ರಸೇನನು
ಮೆಂಬಮಕ್ಕಳಾದಿರ್;ಆಪದ್ಮಾವತಿಯುಮನಂತಮತಿಯೆಂಬ ಸೂಳೆಯಾದಳ್.
ಈಗಳಾಕೆಗೀಮತ್ತಮಾಯಿರ್ವರುಂ ಕಾಡುತ್ತುಮಿರ್ಪರೆಂದು ಪೇೞಿ ಕೇೞ್ದು
ನಿಮ್ಮಯ ಮುನ್ನಿನ ಜನ್ಮದ ಜನನಿಯ ಕಾರಣದಿಂ ಪ್ರಬೋಧಿಸಲ್ಬಂದೆಂ—
ಎಂದಾವಿದ್ಯಾಧರಂ ಪೇೞ್ದು ಪೋಪುದುಂ—ತತ್ಪ್ರಪಂಚಮಂ ನೆಱಿಯಱಿದ್ದ
ತಮ್ಮಿರ್ವರುಂ ಜೆಱುಗಾಗಿ—

ಗಳಲೆನೆ ಮುಳಿಸುಱಿದೆಲೆ ಸಂ ।
ಗಳಿಸಿದುದೀಪಾಪನಿಂತು ನಮ್ಮೊಳಿನುತ್ತುಂ ॥
ತಿಳಿದು ಕುಮಾರಕರಾಗಳ್ ।
ಮಳರಹಿತರ್ ಶಾಂತರಾಗಿ ತಾಮಿಂತೆಂದರ್ ॥೬೦॥

ಮೊಱೆಗಿಡಿಸಿ ಕೂಡುವುದು ಕುಲ ।
ದಱ್ತಮನೆಟ್ಟಿಪ್ಪ ನೆರಪುವುದು ಗುರುಜನಮಂ ॥
ಮಱೆಯಿಸುವುದು ಸೋದರರಂ ।
ಪಱ್ಪಡೆ ಕಾದಿಸುವುದಲ್ತೆ ಕಾಮನ ಕೆಯ್ತಂ ॥೬೧॥

ಅಱಿವೆಂಬ ದೀಪಕಳಿಕೆಗೆ ।
ಬಿಱುಗಾಳಿ ಗುತೊದ ? ಬಣಬೆಗೆ ಕಿಡಿ ಪೆ ॥
ರ್ಮಱವೆಯ ಮೆಯ್ಸಿರಿ ಪಾತಕ ।
ದೊಱದಿಟ್ಟ ಪಯಸದ ಬೆಟ್ಟು ಕಾಮನ ಕೆಯ್ತಂ ॥೬೨॥

ಮಱೆಯಿಸುವುದು ಬಾಂಧವರಂ ।
ತೋಱೆಯಿಸುವುದು ಜನನಿಜನಕಸೋದರತತಿಯಂ ॥
ಮಿಱುಪ ಯಶೋಲತೆಯಂ ಪಱಿ ।
ಪಱಿಯಂ ನೆಱಿ ಮಾಱ್ಪುದಸ್ತಸೀಮಂ ಕಾಮಂ ॥೬೩॥

ಜಿನಮಾರ್ಗದ ಸದ್ಬೋಧಾಂ ।
ಜನರಂಜಿತದೃಷ್ಟಿಯಿಲ್ಲದವನೆಂತುಂ ಬಾ ॥

ಚ್ವನಿತುಂ ಚೆತ್ರಮೆ ನಿರವಧಿ ।
ಯೆನೆ ಬಿತ್ತರಿಸಿರ್ದ ನಿರಯಕೂಪಾಂತರದೊಳ್ ॥೬೪॥

ವ॥ ಎಂದಿಂತು ಪಲತೆಱದಿಂ ಪಂಚಬಾಣನ ವಿಡಂಬಮಂ ಬಲ್ಕೆಯ್ದಿ ಪರಮಪ್ರೀತಿಯಿಂ ತಮ್ಮಿರ್ವರುಂ ಪುರಮಂ ಪೊಕ್ಕು ಅರಮನೆಗೆ ಬರುತಿರ್ಪಾಗಳಂತಃಪುರಕಾಂತಾಜನಂ ಕುಲವೃದ್ಧಜನಂ ಹಾಹಾಕ್ರಂದನಸ್ವರದಿಂ ಬಾಯ್ವಿಡುತ್ತಿರೆ ಕೇಳ್ದ ಕುಮಾರರಿದೇನೆಂಬುದುಂ ತದೀಯಖೈತ್ತಾಂ ತಾದ್ಯಂತಮಂ ಮಂತ್ರಿಮುಖ್ಯರಿಂತೆಂದು ಪೇೞ್ದಿ—

ತನಯರ್ಗಾದಪವಾದನಾದಮನಿದಂ ಕೇಳುತ್ತುಮೆಂತಿರ್ದನಾ ।
ನೆನುತುಂ ನಿಮ್ಮಯ ತಾಯ್ವಿರುಂ ಸಹಿತಮಿಂತೀಲಜ್ಜೆಯಿಂ ಬಾೞ್ವ ಜೀ ॥
ವನಮೇಕೆಂದು ವಿಷಾಸಿತಾಂಬುಜದ ಕಂಪಂ ಕೊಂಡು ಪಂಚತ್ವಭಾ ।
ಜನನಾದಂ ನೃಪನೆಂದೆನಲ್ ನೃಪಸುತರ್ ಕೇಳ್ದೆಯ್ದಿದರ್ ಖೇದಮಂ॥೬೫॥

ಜನನಾಥನ ಜನನಿಯರಿ ।
ವಿನಿತುಂ ನಮ್ಮಿರ್ವರಿಂದೆ ಸಂಗಳಿಸಿದುದೋ ॥
ಎನುತುಂ ಖೇದಿಸಿದರ್ ತಾ ।
ವೆನಸುಂ ಹಾಹಾರವಂ ದಿಶಾಂತಮನೆಯ್ದಲ್ ॥೬೬॥

ವ॥ ಇಂತು ಬಹುಪ್ರಕಾರದಿಂ ಪ್ರಲಾಪಿಸುತುಂ ನೆಲದೊಳ್ ಪೊರಟುತ್ತುಂ ದುಃಖಾಶ್ರುವಾರಿಪೂರದೊಳ್ ಮುೞುಗುತ್ತುಂ ಮೆಯ್ ಬಸವೞಿದು ಮೂರ್ಛಿಸುತ್ತುಂ ಕುಮಾರರ್ ಪಿರಿವಾನುಂ ಪೊೞ್ತುವರಮಿರ್ದು ಮಂತ್ರಿಕುಳಕುಲಾನುವೃದ್ಧ ಜನಪ್ರತಿಬೋಧವಚನನಿಚಯದಿಂದೆತ್ತಾನುಮೆೞ್ದಿತ್ತು ಬೞಿಯಂ ಪಿತ್ರಾದಿಗಳ್ಗೆ ಮಳಯಜಸಮಿತ್ಸಮಾಜದಿಂ ಕರ್ಪೂರಕಾಳಾಗರುಸಮನ್ವಿತಂ ಶರೀರಸಂಸ್ಕಾರಂಗೆಯ್ದು ಸ್ವಕೀಯಸ್ವಾಂತದೊಳ್ ಪರಿವೃತ್ತ ಸಂಸಾರಸಂಬಂಧರಾಗಿ:—

ನಿರುಪಮನೀರದೋತ್ಕರಮಭೀಕ್ಷ್ಣಪ ಮೇಚಕದರ್ಪಣಂಜೊಲ ।
ಚ್ಚರಿವಡೆದೊಪ್ಪುಗುಂ ಸಮತಲೋರ್ವರೆ ಕಂತುಮಣಿಪ್ರಭಾಮಯಂ ॥
ಸರಸಿಸರೋಮಯಂ ರುಚಿರನಂದನರಾಜಿಮಯಂ ದಲಿರ್ಪುದು ।
ತ್ತರಕುರುನಾಮಧೇಯಮಭಿರಾಜಿಸುವಗ್ಗದ ಭೋಗಭೂತಲಂ ॥೬೭॥

ಪ್ರದಿದಾಕುರುಧರೆ ಶಾಂಭವ ।
ಸದನಂ ಶ್ರೀಷೇಣಭೂವರಾದ್ಯರ್ಗಾಯ್ತೊಂ ॥
ಮೆ ದಿಟಂ ಮಾಡಿದ ಸತ್ಪಾ ।
ತ್ರದಾನದುತ್ಕೃಷ್ಟಫಲದೆ ನವವೋದನದಿಂ ॥೭೪॥

ಅಂತು ಪೆಸರ್ವೆತ್ತ ತದೀಯೋತ್ತಮ ಭೋಗಭೂಮಿಯ ಸೌಭಾಗ್ಯ ವಿಭವಮಂ ಬಣ್ಣಿಪೊಡೆ—

ಪೊಱತೇನೀಕುರುಭೂಮಿ ಸೌಖ್ಯಜನಕಂ ತಾನೆಂಬ ವಿಖ್ಯಾತಿ ಕ ।
ಣ್ಡೆಱಿದಾನಾಳಲ?ದೊರ್ಮೆಯುಂ ಮೆಱವ ಶುಭಾಂಭೋಜಪಂಡಂಗಳಿಂ॥
ದೊಱವಿಂದೂಪಲವಾರಿಪೂರಚಯದಿಂ ಮಾಧುರ್ಯಸಾರೋಪಮಂ ।
ಕಱವುವ್ಯತ್ಫಲಜಾತಚೂತವಿಚಿತೋದ್ಯಾನಂಗಳಿಂ ಮಂಗಳಂ ॥೭೯॥

ಇದು ಮೂಲೋಕದ ಚೆಲ್ವನಂಬುಜಭವಂ ಬೈತಿಟ್ಟ ಬಂಡಾರಮಿಂ ।
ತಿದು ಚೇತೋಭವಭೂಮಿಗೀನವಲಸದ್ಭೂಪಾನಿವಾಸಂ ದಲಿಂ ॥
ತಿದು ವಿಭ್ರಾಜಿತಕಂತುರಾಜನ ಸಮಸ್ತೈಶ್ವರ್ಯಸದ್ಭೋಗಭೂ ।
ಮಿ ದಿಟಂ ತಾನೆನೆ ಭೋಗಭೂಮಿಯನಿದಂ ಪೇೞಾವನೇವರ್ಣಿಪಂ ॥೮೦॥

ಸಿತಪುಂಡ್ರಾಂಭೋಜಪಂಡೋನ್ಮಿಷಿತಕುಮುದಕಾಸಾರವಾರಪ್ರಸೂನಾಂ ।
ಚಿತ ಜಾತೀವ್ರಾತವಲ್ಲೀನವ ವಕುಳಕುಳಾಶೋಕ ಜಂಬೀರ ಜಂಬೂ॥
ತತಿ ಸತ್ಪುನ್ನಾಗಪೂಗಾ ಮಳಮಳಯಜಮಂದಾರಮಾಕಂದ ಖರ್ಜೂ ।
ರತಮಾಲೋತ್ತಾಲತಾಳದ್ರುಮಸಮಿತಿಮಯೋದ್ಯಾನಶೋಭಾಯಮಾನಂ॥

ಪ್ರಗದಲ್ಲಿ ಮಾಗೆ ಮೞಿ ಬೇ ।
ಸಗೆ ರಾತ್ರಿದಿವಂಗಳಿಲ್ಲ ರೋಗಾದಿಗಳೇಂ ॥
ಪ್ರಗದುಪಸರ್ಗಂ ಪೊರ್ದದು ।
ಬಗೆವೊಡೆ ಪಡಿಯಲ್ತು ಭೋಗಭೂಮಿಗೆ ನಾಕಂ ॥೮೨॥

ಆಳರಸಿಲ್ಲದಱಿಂ ಕೞ್ ಕೇಳ್ ।
ಕೇಳೆಂಬುದದೆಂತುಮಿಲ್ಲ ಸಿರಿ ಬಡತನಮೆಂ ॥
ಬಾಳಾಪಮಿಲ್ಲೆನಲ್ ಸುಖ ।
ದಾಳಯಮೆನ್ನದರದಾರೊ ಪೇೞ್ ಕುರುಧರೆಯಂ ॥೮೩॥

ಗರುಡೋದ್ಗಾರಮಣಿದ್ಯುತಿ ।
ಪರಿಕರಮಪವಿತ್ರಮೆಂದು ಪಸುರ್ವೆಳಗಿಂ ಮೂಂ ॥
ಕರಿಸುವ ನಾಲ್ವೆರಲುದ್ದದ ।
ಸರಸ ತೃಣಪ್ರಸರಮೆಸೆವುದಸದಳಮದಱಿೞ್ ॥ ೮೨ ॥

ಸರಸಿರುಹ ಕುವಳಯಂಗಳ ।
ಪರಿಮಳಪರಿಕಳಿತಮಾಗಿ ಚಾರುಪರಾಗಂ ॥
ಜೊರೆದು ಸಲೆ ಸೊಗಸು ಮಿಗೆ ಕುರು ।
ಧರೆಯೊಳ್ ತೀಡುವುದು ಮಂದಗಂಧಸಮೀರಂ ॥ ೮೩ ॥

ಸರಸಾನ್ನಪಾನ ಮಾಲ್ಯಾ ।
ಭರಣ ಜ್ಯೋತಿರ್ನಿವಾಸ ದೀಪಾತೋದ್ಯಾಂ ॥
ಬರಮತುಳಪಾತ್ರಮೀವುವು ।
ನಿರಂತರಂ ದಶವಿಧಂಗಳಮರಕುಜಂಗಳ್ ॥ ೮೪ ॥

ಪರಮಾನ್ನಮೋಗರಂ ಸುರು ।
ಚಿರನಾನಾಭಕ್ಷ್ಯಮುಖ್ಯಭೋಜನವಸ್ತೂ ॥
ತ್ವರಮುಂ ಕುಡುವುದು ತಡೆಯದೆ ।
ಕರಮುಂ ನೀಡಿದೊಡೆ ಭೋಜನಾಂಗಮಹೀಜಂ ॥ ೮೫ ॥

ಮನಮಭಿವಾಂಛಿಸಿ ಕಲ್ಪಿಸಿ ।
ದನಿತುಂ ಸ್ವಾದುಪ್ರಭೇದಪಾನಂಗಳನಿಂ ॥
ತೆನಿತಾನುಂ ಪದೆಪಿಂ ತಾ ।
ನನೂನಪಾನಾಂಗಭೂರುಹಂ ಕುಡುತಿರ್ಕುಂ ॥ ೮೬ ॥

ಪರಮಪರಿಮಳದ ಸಿರಿ ಬಿ ।
ತ್ತರಿಸುವ ವರಪಾರಿಜಾತಪಂಚಕಮಲ್ಲೀ ॥
ವರಜಾತ್ಯಾದಿಪ್ರಸವೋ ।
ತ್ಕರಮಾಲೆಯನೀವುದಲ್ತೆ ಮಾಲ್ಯಾಂಗಕುಜಂ ॥ ೮೭ ॥

ವಿಳಸನ್ಮಧ್ಯಕೆ ಮಣಿಕುಂ ।
ಡಳವುಂಗದಮಕುಟಕಟಕಕಟಿಸೂತ್ರಸಮು ॥

ಜ್ಜ್ವಳಹಾರಾಲಂಕಾರಾ ।
ವಳಯಂ ಘೂಪಾಂಗಭೂಜವಿಾವುದು ಸತತಂ ॥೯೦॥

ತರಣೀಂದುಗಳಸ್ತಪಾ ।
ಪ್ತರದೆಂದು ಪ್ರಬಳರೆಂದು ನಗುತುಂ ಕುಸುವೋ ॥
ತ್ಕರಕಾಂತಿಚ್ಛಲದಿಂ ಜ್ಯೋ ।
ತಿರಂಗತರು ಕುಡುವುದಲ್ತೆ ಬೇಡಿದ ಬೆಳಗಂ ॥೯೧॥

ಮನಕೆ ಮನೋಭವರಾಗಮ ।
ನೆಸಸುಂ ಸಮನಿಪ್ಪ ರಮ್ಯಹರ್ಮ್ಯಪಾ್ರಸಾ ॥
ದನಿಕಾಯಮನಾಕ್ಷಣದಿಂ ।
ನೆನೆಯಲೊಡಂ ಕುಡುವುದಲ್ತೆ ಗೇಹೋರ್ವೀಜಂ ॥೯೨॥

ದೀಪಂಗಳನಿಲಹತಿಯಿಂ ।
ಲೋಪಮನೆಯ್ದುಗುಮೆನುತ್ತೆ ನಗುವಂತೆ ಲಸ ॥
ದ್ಭಾಪಲಘುಚ್ಛತನವಮಣಿ ।
ದೀಪಂಗಳನೀವುದಲ್ತೆ ದೀಪಕ್ಷಿತಿಜಂ ॥೯೩॥

ಕಿವಿಗೆ ಮೃದುಮಧುರನಿನದಮ ।
ನವಟಯಿಸುವ ವಿವಿಧ ಹೃದ್ಯವಾದ್ಯಂಗಳನಿಂ ॥
ತಿವಲಂಪಿಂ ಬೇಡಿದೊಡನಿ ।
ತುವನಾತೋದ್ಯಾಂಗವೃಕ್ಷವಿಾವುದು ಸತತಂ ॥೯೪॥

ಕಮನೀಯದುಕೂಲಂ ಜೇ ।
ನಮಹಾಜೇನಂಗಳಾದಿಯಾದ ವಿಜಿತೊ್ರ ॥
ತ್ತಮವಸನಂಗಳನೀವುದು ।
ಸಮಂತು ವಸ್ತ್ರಾಂಗಪಾದಪಂ ಪದೆಪಿಂದಂ ॥೯೫॥

ರಾಜಿಸುವ ರತ್ನಕಾಂಚನ ।
ರಾಜಿತರಜಿತಂಗಳಪ್ಪ ವಿವಿಧವಿಭಾಸ್ವ ॥
ದ್ಭಾಜನತತಿಯಂ ಕುಡುವುದು ।
ಭೂಜನಧಾತ್ರೀಜಮಲ್ಲಿ ಕೈ ನೀಡಲೊಡಂ ॥೯೬॥

ಅನುನಯದಿಂ ಬೇಡಿದೊಡಿಂ ।
ತು ನಿರಂತರವಿಾಯುತಿರ್ಪ ದಶವಿಧದಿವಿಜಾ ॥
ವನಿಜಂಗಳ ಜನ್ಮಾವನಿ ।
ಯೆನಿಸಿದ ಕುರುಧರೆಯ ಸಿರಿಯನೇವಣ್ಣಿಸುವೆಂ ॥೯೩॥

ಮನದೊಲವಿಂದಿತ್ತನುಪಮ ।
ವೆನಿಪುತ್ತಮಪಾತ್ರದಾನಫಲದಿಂದನುವೋ ॥
ದನಫಲದಿಂ ಪುಟ್ಟುವರಿಂ ।
ತೆನೆ ಪೆಸರಂ ಪೆತ್ತ ಭೋಗಭೂಮಿಂಡಲದೊಳ್ ॥೯೪॥

ಸ್ತ್ರೀಪುರುಷಯೋಗದಿಂದಂ ।
ಸ್ತ್ರೀಪುರುಷದ್ವಿತಯಮುದರದೊಳ್ ಜನಿಸುವುದಾ ॥
ಸ್ತ್ರೀಪುರುಷರ ಕಾಲಾವಧಿ ।
ಯಾಪದದೊಳ್ ಪುಟ್ಟುಗುಂ ಸ್ವಭಾವದೆ ಯುಗಳಂ ॥೯೫॥

ವ॥ ಆಗರ್ಭದರ್ಭಕಯುಗಳಕ್ಕೆ ನವಮಾಸಂ ತೀವಲೋಡಂ ತದೀಯಮಾತಾಪಿತೃಗಳ ದೃಷ್ಟಪಾತರಾಗಿಸಿಂತುಮಾಗಿಸಿಯುಂ (?) ಮೂರಿತಿಟ್ಟು ಕಾಲಮನೆಯ್ದಿ ಪುಣ್ಯಜೀವಿಗಳುಂ ಋಜುಪ್ರಕೃತಿಗಳುಮಪ್ಪ ಕಾರಣದಿಂದ ದಿವಿಜಭವನ ಪ್ರಾಪ್ತವರಶರೀರಂಗಳಿಲ್ಲಿಯ ಮಾನಸಂಗಳ್ಗಗೋಚರಂಗಳಾಗಿ ಪೋಗೆ—

ಉದಯಿಸಿದ ಶಿಶುಯುಗಕ್ಕ ।
ಗ್ಗದ ಸುರಭಿಸ್ತನವೆ ತಮ್ಮ ಜ್ಯೇಷ್ಠಾಂಗುಳಿಯಾ ॥
ಗದ ವಿ (?) ಪರಿವರ್ಧನತೆವಡೆ ।
ವುದು ಪಿರಿದುಂ ಭೋಗಭೂಮಿಭವಯುಗಳಂಗಳ್ ॥೯೯॥

ಬಿತ್ತರಿಪುದೇಕವಿಂಶ ।
ತ್ಯುತ್ತಮದಿನಮಾಗಳಾಯುಗಳದ ತ ॥
ಜ್ಜೆತ್ತದೊಳಖಿಳಕಳಾಸಂ ।
ಪತ್ತಿಯ ಸುಪ್ರೌಢಿ ನಾಡೆಯುಂ ರೂಢಿಸುಗುಂ ॥೧೦೦॥

ವ॥ ಮತ್ತಮಲ್ಲಿ ಉತ್ತಮದಾನಪಾತ್ರಫಲದಿಂ ಪುಟ್ಟುವ ತಿರ್ಯಗ್ಮಾತಿಗಳೆಲ್ಲಂ ಯಮಳಂಗಳಾಗಿ ಜನಿಸಿ ಜಾತವೈರಂಗಳೆಲ್ಲದೆಯುಂ ಅರ್ಜ

ವಂಗಳುಂ ನಿರಾಮಯಂಗಳುಮಾಗಿ ಸುಖದಿನಿರ್ಪುವಾಶ್ರೀಷೇಣನುಂ ಸಿಂಹ
ನಂದಿತೆಯುಂ ಮಿಥುನಂಗಳಾಗಿ ಪುಟ್ಟಿ ಸತ್ಪಾತ್ರದಾನಫಲದಿಂದನುರಾಗವೊ
ದವಿ ಸುಖದಿನಿರ್ದರ್.

ಸಮಹರೆಯಂ ಸುರೂಪವಿಭವಂ ನವಯೌವನದೆಳ್ತಿರಂ ಮನ ।
ಕ್ಕಮದವಮಾನಮಪ್ಪ ಕುಸುಮಾಯುಧಕೇಳಿ ಮನೋಭಿವಾಂಛಿತೋ ॥
ತ್ತಮನವವಸ್ತುಭೋಗಮಿದು ಸಾಜಮೆನಲ್ ನಲಿಯುತ್ತುಮಿರ್ದರ ।
ಶ್ರಮದಿನಗುರ್ವುವೆತ್ತಭಿನವಂಗಳಿನಾಗಳುಮಲ್ಲಿ ನಾಲ್ವರುಂ ॥೧೦೬॥

ಅನವರತಂ ರತೀಶ್ವರನ ಕೇಳಿ ರಮಾಸುತನಾಜ್ಞೆ ಕಂತುರಾ ।
ಜನ ಕಥೆ ಪುಷ್ಪಚಾಪನ ಗುಣಸ್ತುತಿ ಕಾಮನ ಗೀತವಂಗಜ ॥
ನ್ಮನ ವಿಜಯಪ್ರಸಂಗಮರಲಂಬಿನ ಪೂಜೆ ಮನೋಭವಪ್ರಭಾ ।
ವನೆ ನಿಜವಾಗಿ ರಾಗವೊದವಿರ್ಪುದು ತತ್ಕುರುಭೂಮಿಜವ್ರಜಂ ॥೧೦೭॥

ಅನುದಿನಮಂಗಸಂಗಸುಖಮಲ್ಲದಗಲ್ಕೆಯ ವಾರ್ತೆಯಿಲ್ಲ ವಂ ।
ಚನೆ ಪುರುಡಿಲ್ಲ ಪಾಣ್ಬತನಮಿಲ್ಲ ವಿಷಾದಮದಿಲ್ಲ ವೈರಮಿ ॥
ಲ್ಲನುದಿನದಾಸೆಯುಂ ಪಡೆಯಲಾರ್ದುದಿಲ್ಲ ನಿರೋಧಮಾತ್ರಮಿ ।
ಲ್ಲೆನೆ ಕುರುಭೂಮಿಜರ್ಕಳ ಸುಖಂ ಸುರರ್ಗಿಲ್ಲದು ನಾಕಲೋಕದೊಳ್॥

ಹರಿ ಕರಿ ಜಿತ್ರಕಾಯ ಹಸು ಹಂಸೆ ನವಿಲ್ ಫಣಿಫೇರು ಗೃಧ್ರ ವಾ ।
ನರ ಖರ ಕೀರ ಕೋಕ ಸುಚಕೋರ ಹಯಾಳಿ ಕೋಕ ಸೂ ॥ ?
ಕರ ಮೃಗ ಋಷ್ಯ ಋಕ್ಷ ಕೃಕವಾಕು ಬಕೋಟ ನಿಸಾಳಿ ಕೋಕ ಕು ।
ಕ್ಕುರ ಬಟಕಾದಿಗಳ್ ಯಮಳವಾಗಿಯೆ ಪುಟ್ಟುಗುಮಲ್ಲಿ ಸಂತತಂ॥೧೦೪॥

ಬನದ ಕೊಳಂಗಳೆಯ್ದೆ ಘೃತದುಗ್ಧ ನವೇಕ್ಷುರಸಸ್ವರೂಪಮ ।
ಪ್ಪನುಪಮವಾರಿ ತೀವಿ ಪರಿಯುತ್ತಣಮೊಪ್ಪುವುವಾಜಳಂಗಳಂ ॥
ಮನವೊಸೆದೀಂಟಿ ನುಣ್ಬಸಲೆಯೊಳ್ ನಲಿದಾಡುತುಮಿರ್ಪುವಿಂತು ಚಂ ।
ದನವನದಲ್ಲಿ ದಂಪತಿಮೃಗಂಗಳನಂಗಸುಖೋದಯಂಗಳಿಂ ॥೧೦೮॥

ವ॥ ಇಂತು ಪೆಸರ್ವೆತ್ತು ಬಿತ್ತರಿಸುತ್ತುಮಾಭೋಗಭೂಮಿಯೊಳ್
ಸಮಚತುರಸ್ರಸಂಸ್ಥಾನರುತ್ತಮಸಂಹನನರನಘವರ್ತ್ಯಾಪರಮಾಯುಷ್ಯರು
ಮಾಗಿ ಶ್ರೀಷೇಣಚರಾರ್ಯಾದಿಗಳ್ ಪುರಾತನಭವೋಪಾರ್ಜಿತಪುಣ್ಯಫಲ

ಭೋಗವನನುಭವಿಸುತ್ತುಮಿರ್ದು ಪಲ್ಯತ್ರಯ ಪ್ರಮಾಣಾಯುರವಸಾನದೊಳ್

ಕುರುಧರೆಯ ದಿವಿಜಭವನದ ।
ವರಸೌಖ್ಯಾಂತರಮನೆಱಿಯಲೆಯ್ದುವವೊಲ್ ಚೆ ॥
ಚ್ಚರದಿಂ ಶ್ರೀಷೇಣಾರ್ಯ ।
ದ್ಯರುಮಾಸೌಧರ್ಮಕಲ್ಪಕಭಿಮುಖರಾದರ್ ॥೧೦೩॥

ಮರುತಂ ಸೋಂಕಿದ ಸದಮಲ ।
ಶರದಭ್ರಾವಳಿಯ ತೆಱದೆ ತನು ತರತರದಿಂ ॥
ಕರಗುತ್ತಿರೆ ಸೌಧರ್ಮ ।
ನಿರದೆಯ್ದಿದನಾಗಳಂತೆ ತತ್ಕುರುಧರೆಯಿಂ ॥೧೦೪॥

ವ॥ ಆ ಸೌಧರ್ಮಕಲ್ಪದೊಳನಲ್ಪ ಶೋಭಾತಿಶಯಶ್ರೀನಿಲಯಮೆನಿಸಿದ ಶ್ರೀನಿಲಯವಿಮಾನದೊಳಭಿರಾಜಿಸುವುಪಪಾದಭವನದೊಳ್ ತದೀಯ ಸಂಸ್ಥ್ಯಾಲಯ ಲಕ್ಷ್ಮೀಮನೋಜನಿತಾನುರಾಗಶ್ರೀಶೀತಳ್ಪಮಾದಂತೆ ತೋರ್ಪ ಶೋಣರುಚಿನುಯ ಮೃದುತಲ್ಪತಲದ ಪೊರೆಯೊಳ್ ತರುಣತರಣಿಯಂ ವೊಂಕರಿಸತನುಕಿರಣವೊಱಿ ಮುಂಬರಿಯೆ ಸಂಭವಿಸಿದಾಗಳ್;—

ಉದಯಿಪ ಮುಹೂರ್ತದೊಳ್ ಸುರ ।
ಸದನದ ಕದಹುಗಳವೆಯ್ದೆ ತೆಱದಿವು ನಿಮಿರ್ದೊ ॥
ಪ್ಪಿದುವು ಗುಡಿಗಳ್ ಮನೋಮುದ ।
ದೊದವಿಂ ನರ್ತಿಸಿದುವಮರವನಿತಾನಿವಹಂ ॥೧೦೫॥

ಪುದಿದುದಮರಾನಕಂ ಸುರಿ ।
ದುದು ಕುಸುಮಾಪೂರಮೆಸೆವ ಸುರಭಿಸಮೀರಂ ॥
ಪದೆಱಿಂ ತೀಡಿದುದಿರದು ।
ಣ್ಮಿದುದಾಗಳ್ ದಿವಿಜನಿವಹ ಜಯಜಯನಿನದಂ ॥೧೦೬॥

ನಲಿನಲಿದಾಡುತಿರ್ಪ ದಿವಿಜಾಂಗನೆಯರ್ಕಳನಲ್ಲಿ ಕೂಡೆ ಪೂ ।
ವಲಿಗೆವಱುತ್ತುಮಿರ್ಪಮರಕಾಂತೆಯರಂ ನವರತ್ನರೇಣುವಿಂ ॥
ಸುಲಲಿತವರ್ಣಪೂರತತಿಯಂ ನೆಱಿ ಬಿತ್ತರಿಸುತ್ತುಮಿರ್ಪ ಕೋ ।
ಮಲಸುರಕನ್ಯಕಾಜನಮನೊಯ್ಯನೆ ವೀಕ್ಷಿಸಿದಂ ಸುರೋತ್ತಮಂ ॥೧೦೭॥

ವ॥ ಇಂತು ನಿರೀಕ್ಷಿಸುತ್ತುಂ ತದೀಯಾಂತರ್ಮುಹೂರ್ತದೊಳಖಿ ಳಪರ್ಯಾಪ್ತಿಪ್ರಜ್ಞಾನುಂ। ಷೋಡಶವಯೋವಿರಾಜಿತನುಂ। ಸಹೋತ್ಪನ್ನ ಸಮಸ್ತಾಭರಣಕಿರಣಭಾಸುರನುಂ। ಪರಿಹೃತಪರಿಮ್ಲಾನ ಮಂದಾರಮಾಲಿಕಾ ಶೇಖರನುಂ। ತತ್ಕಾಲೋತ್ಪನ್ನ ವಿಜ್ಞಾನಾತಿಶಯನುಮಾಗಿ—

ಪ್ರದಿದಿಪ್ಪೆರ್ವಿಭವಂ ಸಮಂತೆಮಗೆ ಮುಂ ಮಾಡಿರ್ದ ಸತ್ಪಾತ್ರದಾ ।
ನದಿನಾಯ್ತೆಲ್ಲಖಿದಬ್ಜಷಂಡಸಲಿಲಸ್ನಾನಕ್ರಿಯಾನಂತರಂ ॥
ಮುದದಿಂ ಶ್ರೀಜಿನನಾಥನಂ ನವಲಸನ್ಮಂದಾರಚಾರುಪ್ರಸೂ ।
ನದಿನಾಗಳ್ ಮನವೊಳಿ ಪೂಜಿಸಿ ಪೊದಜ್ದಾನಂದಮಂ ತಾಳ್ದಿದಂ ॥೧೧೬॥

ಜಿನಸವನಸಲಿಲಸಂಸಿ ।
ಕ್ತನಿಜೋನ್ನತಶೀರ್ಷನಾದ ಪದದೊಳ್ ಪದೆಪಂ ।
ದನಿಮಿಷಮಹತ್ತರೀಜನ ।
ಮನಿತುಂ ಸುರವರನ ಸಾರ್ಗೆವಂದತ್ತಾಗಳ್ ॥೧೧೩॥

ಜಯಜಯನಿನದಂ ಸುರಮುಖ ।
ಚಯದೊಳ್ ಪೊಣ್ಮಲ್ ಸುರೋತ್ತಮನ ಮಣಿಮಯಯವೌ ॥
ಳಯೊಳೆಸೆಮ ಪರಸುತುಂ ಸೇ ।
ಸೆಯನಿಕ್ಕಿದರಾಗಳನಿಮಿಷಮಹತ್ಸತಿಯರ್ ॥೧೧೪॥

ತಾನೆಸೆವೀಶ್ರೀನಿಲಯವಿ ।
ಮಾನಾದಿದೇವನೆಂ ಶ್ರೀಪ್ರಭನೆಂ ॥
ದಾನಂದದೆ ಪೆಸರಿಟ್ಟನಿ ।
ತಾನುಂ ಕೊಂಡಾಡಿದತ್ತು ದೇವನಿಕಾಯಂ ॥೧೧೫॥

ವ। ಅನ್ನೆಗಮಾಸಿಂಹನಂದಿತಾರ್ಯೆ ತದೀಯ ಶ್ರೀನಿಲಯವಿಮಾನ ದೊಳ್ ಶ್ರೀಷೇಣಚರನ ಮನೋವಲ್ಲಭೆ ವಿದ್ಯುತ್ಪ್ರಭೆಯೆಂಬಳಾದಳಾಕ ಲ್ಪದ ವಿಮಳಪ್ರಭವಿಮಾನದೊಳನಿಂದಿತೆ ಚರಿಯಪ್ಪ ಕುರುಭೂಮಿಜೆ ನಿಜ ಸ್ತ್ರೀತ್ವಮಂ ಪತ್ತುವಿಟ್ಟು ವಿಮಲಪ್ರಭನೆಂಬ ದೇವನಾದನಾಸತ್ಯಭಾಮಾಚ ರಿಯಪ್ಪ ಭೋಗಭೂಮಿಜೆಯಾವಿಮಳಪ್ರಭದೇವಂಗೆ ಸುಪ್ರಭೆಯೆಂಬ ಸತಿಯಾಗಿ ಸುಖದಿನಿರುತ್ತುಮಿರೆ;—

ಅತಿಮುದದಿಂದದೊರ್ಮೆ ಮುನಿಪೋತ್ತಮರ್ಗ*ನ್ನಮನಿತ್ತು ಸತ್ಕಲೋ।
ನ್ನತಿ ಕುರುಭೂಮಿಭೋಗದೊಳವಂ ಪದೆದಿತ್ತುದು ಮತ್ತಮುಯ್ದು ಸಂ ॥
ಯತನುತರಪ್ಪ ದೇವಭವನಾಧಿಪತಿತ್ವಮನೆಯ್ದಿಸಿತ್ತೆನ ।
ಲ್ಕತಿಶಯಪಾತ್ರದಾನದ ಮಹತ್ವಮತರ್ಕ್ಯಮದೇನನೆಂದಪೆಂ ॥೧೧೬॥

ಇದನಱಿದುಂ ಶ್ರೀಜಿನಮಾ ।
ರ್ಗದೊಳೀನುಂ ದಾನಮಾತ್ರಮುಂ ತನಗುಳ್ಳಂ ॥
ದದೆ ಮಾಡದೆಯುಂ ಲೋಭಾ ।
ಸ್ಪದದೊಳ್ ಮೆಯ್ಮಱೆದು ಬಯಸೆ ಬರ್ಪುದೆ ಸೌಖ್ಯಂ ॥೧೧೭॥

ಪಿರಿದುಂ ಲೋಭದಿನಪ್ಪುದೇ ಸಿರಿ ದರಿದ್ರಂ ದಾನದಿಂ ಬರ್ಪುದೇ ।
ದೊರೆಕೊಳ್ಗುಂ ಸಿರಿಯುಂ ದರಿದ್ರಮುಮಿವೆಂತುಂ ಪೂರ್ವಕರ್ಮಂಗಳಿಂ ॥
ಪರಮಾರ್ಥಂ ಪುರುಧರ್ಮದಾನಫಲದಿಂ ಸ್ವರ್ಗಾಪವರ್ಗಕ್ಕಮೀ ।
ಶ್ವರನಪ್ಪಂ ವರಪಾತ್ರಸಂತತಿಗೆ ದಾನಂಗೆಯ್ವುದಾನಂದದಿಂ ॥೧೧೮॥

ವ್ಯಯನಪ್ಪ ಧನಮನೇ ಸ ।
ದ್ವ್ಯಯಮಂ ಸತ್ಪಾತ್ರದಾನದಿಂದೊಳ್ಳಿತೆ ದಲ್ ॥
ವ್ಯಯಸುಖಮುಂ ಪಡೆಯದವಂ ।
ವ್ಯಯಮುಂ ತಾನೆಯ್ದಿ ಪೋಪುದೇನಚ್ಚರಿಯೆ ॥೧೧೯॥

ಪಿಂದಣ ಜನ್ಮದೊಳ್ ನೆಗಳ್ದ* ದಾನಮಹತ್ವಮನುದ್ಗಲೋಭಮಂ ।
ಬಂದಿಹದೊಳ್ ಪೊದಳ್ದಪ್ರತಿಪರ್ವಣಂ ಸಿರಿಯುಂ ದರಿದ್ರಮುಂ ॥
ಸಂದಿಸಿ ತವ್ಮೊಳೀ.....ತೆಱನಂ ನೆರೆ ಕಂಡು ಮತ್ತಮಾ ।
ನಂದದಿನೇಕೆ ಮಾಡರೊ ಮರುಳ್ ನರರುತ್ತಮಪಾತ್ರದಾನಮಂ ॥೧೨೦

ದಾನಂ ದಾರಿದ್ರ್ಯಹರಂ ।
ತಾನೆಂಬಿನಿತಲ್ತು ನೋಱಿಪ್ಪೊಡಕ್ಷಯವೋಕ್ಷ ॥
ಸ್ಥಾನನನೆಯ್ದಿಸುವುದು ಪೆಱ ।
ತೇನುತ್ತಮಪಾತ್ರದಾನದಿಂ ಪೆಱತುಂಟೆ ॥೧೨೧॥

ವ॥ ಎಂದಿಂತುತ್ತಮಪಾತ್ರದಾನಪ್ರಭಾವಮಸಭಿವರ್ಣಿಸಿ ಶ್ರೀಷೇ
ಣಾಸ್ರಭದೇವಂ ಸುಖದಿನಿರುತ್ತುಮಿರೆ:—

ನೆನೆದಾಗಳ್ ನೆನೆದಲ್ಲಿಗಾಮನದ ಬೇಗಕ್ಕಂ ದಿಟಂ ಬೇಗಮೆಂ ।
ದೆನೆ ತದ್ಯಾನವಿಮಾನಕೋಟಿಗಳೊಳಾಗಳ್ ಪೊತ್ತುಕೊಂಡಿಂತು ವಾ ॥
ಹನದೇವವ್ರಜಮೆಯ್ದಿ ಸುತ್ತುತಿರಲತ್ಯಾಶ್ಚರ್ಯಸೌಂದರ್ಯನಂ ।
ದನವ್ಯಂದಂಗಳನೊಲ್ದು ನೋಡಿ ಮುದಮಂ ತಾನೆಯ್ದುವಂ ಶ್ರೀಪ್ರಭಂ ॥

ಜಿನಭವನಂಗಳಾವೆಡೆಯೊಳಿರ್ದೊಡಮಾವಗಮಲ್ಲಿಗೆಯ್ದುತುಂ ।
ಮನದನುರಾಗಮುಣ್ಮೆ ಜಿನರಾಜಪದಾಂಬುಜಮಂ ವಿಚಿತ್ರಮ ।
ಪ್ಪಿನವೊಸೆದರ್ಚಿಸುತ್ತುಮೆನಸುಂ ಸ್ತವನತ್ರಿತಯಂಗಳಿಂ ಜಿನೇಂ ।
ದ್ರನನಭಿವರ್ಣಿಪೀ ಬಿನದದಿಂದಭಿರಾಜಿಸುವರ್ ಸುರೋತ್ತಮರ್ ॥೧೦೩॥

ನೀಡಿ ನಿರಂತರಂ ಚಮರಮಿಕ್ಕುವ ದೇವಕುಮಾರಿಯರ್ಕಳೊ ।
ಲ್ಲಾಡುವಮರ್ತ್ಯನರ್ತಕಿಯರಿಂ ಪವಣಂ ಕಿವಿಗೆಯ್ಯಲಿಚ್ಛೆಯಿಂ ॥
ಪಾಡುನ ರೂಢಿವೆತ್ತ ಮರಗಾಯಕಿಯರ್ ಸಲೆ ಸುತ್ತಿ ಶೋಭಿಸಲ್ ।
ಕ್ರೀಡಿಸುತಿರ್ಪರಿಂತು ಸುರಲೋಕಮಹತ್ಸುಖದೊಳ್ ಸುರೋತ್ತಮರ್ ॥

ವ॥ ಇಂತಖಿಳಸೌಖ್ಯಸಂಪತ್ತಿಯನನುಭವಿಸುತಿರ್ದು ಪಂಚಪಲ್ಯೋಪಮಾಯುರವಸಾನದೊಳಲ್ಲಿಂ ಬಂದು ಶ್ರೀಪ್ರಭಾಮರನರ್ಕಕೀರ್ತಿಗಂ ಜ್ಯೋತಿರ್ಮಾಳಾದೇವಿಗಂ ನೀಂ ತನೂಜನಮಿತತೇಜನಾದೆಯಾವಿದ್ಯುತ್ಪ್ರಭಾದೇವಿ ಬಂದು ನಿನ್ನಮನಃಪ್ರಿಯೆಯಪ್ಪ ಜ್ಯೋತಿಃಪ್ರಭಾದೇವಿಯಾದಳಾವಿಮಳಪ್ರಭಾಮರಂ ಬಂದು ನಿನ್ನಯ ಮೆಯ್ದುನಂ ಶ್ರೀವಿಜಯನಾದನಾ ಸುಪ್ರಭಾದೇವಿ ಬಂದು ನಿನ್ನಯ ಸಹೋದರಿಯಪ್ಪ ಸುತಾರಾದೇವಿಯಾದಳಾವಾಯಾದ್ವಿಜನ್ಮನಪ್ಪ ಕಪಿಳಚರನೈರಾವತೀನದೀತೀರದ ಭೂತರಮಣಕಾಂತಾರದ ತಾಪಸವಟಿಯ ತಾಪಸನಪ್ಪ ಕೌಶಿಕಂಗಂ ಚಪಳವೇಗೆಗಂ ಮೃಗಶೃಂಗನೆಂಬ ಮಗನಾದನಾತಂ ತಾಪಸಾನುಷ್ಠಾನನಿಷ್ಠನಾಗಿರ್ದೊಂದು ದಿವಸಂ ಪೋಗುತಿರ್ದ ಚಪಳವೇಗವಿದ್ಯಾಧರನ ವಿಭವಮಂ ನಿಂದು ನೋಡಿ ವಿಧಾನಂಗೆಯ್ದು ನಿಜಾಯುರವಸಾನದೊಳಶನಿಘೋಷನಾದನೀತಂ ಪಿಂತಣ ಜನ್ಮದೊಳಾರ್ತಸ್ನೇಹದಿಂ ಕಾಣ್ಬುದಂ ನಿತ್ತಳಸಲಾರದೆ ನಿನ್ನನುಜೆಯಪ್ಪ ಸುತಾರಾದೇವಿಯನೀಬ್ದು ಕೊಂಡುಯ್ದನೆಲೆ ಅಮಿತತೇಜಮಹಾರಾಜ ನೀನೀ ಭವಕ್ಕೊಂಬತ್ತನೆಯ ಜನ್ಮದೊಳ್ ಈ ಭರತಕ್ಷೇತ್ರದೊಳೆ ಪದಿನಾಲನೆಯ

ತೀರ್ಥಂಕರನಪ್ಪೆಯೆಂದು ವಿಜಯಕೇವಳಿಗಳಿನೆ-ಕೇಳ್ದು ವಿದ್ಯಾಧರೇಂದ್ರಂ
ಸಂತೋಷವಂತನೆಯ್ದಿ—

ಪೆಱಗಣ ಭವಮಂ ಮುಂದಿ ।
ನ್ನಱಿಕೆಯ ಜಿನನಪ್ಪ ತನ್ನ ಪುಣ್ಯದ ಪಾಂಗಂ ॥
ನೆಹೆ ವಿಜಯಕೇವಳಿಗಳಿಂ ।
ದಱಿದೆಯ್ದಿದನಮಿತತೇಜನತ್ಯುತ್ಸವಮಂ ॥೧೫೫॥

ಎನಗೆ ಪರಾಭವಂ ದ್ವಿಗುಣಿಸಿತ್ತು ವಿಚಾರಿಸೆ ಮುನ್ನವೀಪರಾಂ ।
ಗನೆಗಳಪಾದುದೊಂದು ಬಱಿಕಂ ರಣರಂಗದೊಳೊಡ್ಡಿ ಒಂದುದೊಂ ॥
ದಿನಿತಪಕೀರ್ತಿ ಪಿಂಗದಿಳೆಯುಳ್ಳನಮಿನ್ನೆನಗೇವುದೆಂದು ತೊ ।
ಟ್ಟನೆ ಬರ್ದುಕಿಪ್ಪುದೆಂದಶನಿಘೋಷನವಂ ಬಗೆದಂ ನಿವೃತ್ತಿಯಂ ॥೧೫೬॥

ಇನಿತೊಂದು ಪರಾಭವಭಂ ।
ಜನಮಪ್ಪೊಡೆ ತಪದಿನಪ್ಪುದೆಂದಱಿದೆನಸುಂ ॥
ನೆನೆದಂ ದೀಕ್ಷೆಗೊಳಲ್ ನೆ ।
ಟ್ಟನೆ ತಾನಿಂತಶನಿಘೋಷನಂತಾಕ್ಷಣದಿಂ ॥೧೫೭॥

ತನಯಂ ತಪಕ್ಕೆ ತಱಸ ।
ಲ್ವಿನಿತರ್ಕನ್ನಯ ಮನಕ್ಕೆ ಪುಟ್ಟಸೆಯುಂ ತೊ ॥
ಟ್ಟನೆ ವೈರಾಗ್ಯಮನಾಗಳ್ ।
ನೆನೆದಳದಂ ಸೂರಿದೇವಿ ತಾನುಂ ತಪಮಂ ॥೧೫೮॥

ಮದಧೀಶನ ಬಱಿಯಂ ಪೋ ।
ಗದೆ ಪೆಱಗಿನಿತೊಂದು ಕಾಲಮಿರ್ದವಳೆನೆ ಸಾ ॥
ಲದೆ ಎನುತುಮಾಸ್ವಯಂಪ್ರಭೆ ।
ಪದೆಪಿಂ ನಿಶ್ಚೈಸಿದಳ್ ತಪಸ್ಸಂಗತಿಯಂ ॥೧೫೯॥

ಘನದುರಿತಾತ್ಮನಪ್ಪಶನಿಘೋಷನ ದುಷ್ಕರದೊಂದು ಸೋಂಕಿನಿಂ ।
ಜನಿಸಿದ ಪಾಪಮುಂ ಪಱಿಯುಮಿಂತೆರಡುಂ ತಪದಿಂದಮಲ್ಲದಿ ॥
ನ್ನೆನಗೆ ಸಮಂತು ಪಿಂಗದೆನುತುಂ ಲಲಿತಾಂಗಿ ಸುತಾರೆ ಜೆತ್ತದೊಳ್ ।
ನೆನೆದಳುದಗ್ರಸಂಭ್ರಮಸಮೇಗ್ರತೆಯಂ ಪೊಗಟಿಲ್ ಜಗಜ್ಜನಂ ॥೧೬೦॥

ವ॥ ಆಗಳಶನಿಘೋಷನುಂ ಸೂರಿದೇವಿಯುಂ ಸ್ವಯಂಪ್ರಭೆಯುಂ ತಾರಾದೇವಿಯುಂ ವಿಜಯಕೇವಳಿಗಳ ವಿಮಲಪದಕಮಲಮೂಲದೊಳ್ ಸಂಸೃತಿಲತಾನಿರ್ಮೂಲನಮಪ್ಪ ನಿರ್ಮಳತಪೋವೈಭವಮನಪ್ಪುಕೆಯ್ದಿ ಪೋಗೆ:—

ಕೇವಳಿಗಳ್ಗೆನಸುಂ ವಿನ ।
ಯಾವನತಕಿರೀಟನಾಗಿ ತಾಂ ಬೀೞ್ಕೊಂಡಂ ॥
ಶ್ರೀವಿಜಯಕ್ಷಿತಿಪತಿಯುತ ।
ನಾವೇಗದಿನಮಿತತೇಜಖೇಚರರಾಜಂ ॥೧೩೧॥

ವಿನಯನಿಧಿ ಖೇಚರೇಂದ್ರಂ ।
ವಿನಯವಚಃಪ್ರಚಯದಿಂದೆ ಪುರುನೃಪನ ಮನ ॥
ಕ್ಕನುರಾಗಮನಾಗಿಸಿ ಭೋಂ ।
ಕೆನೆ ಕಳುಪಿದನೆಸೆವ ಪೌದನಪುರಕ್ಕಾಗಳ್ ॥೧೩೨॥

ಪೃಥುಲಯಶನಮಿತತೇಜಂ ।
ಪೃಥಿವೀಪತಿನತಕಿರೀಟಮಣಿಗಣಕಿರಣ ॥
ಗ್ರಥಿತಪದಪೀಠನಾಗಳ್ ।
ರಥನೂಪುರಚಕ್ರವಾಳ ಪುರಮಂ ಪೊಕ್ಕಂ ॥೧೩೩॥

ವಿಜಿಗೀಷುತ್ವಂಮಹತ್ವಂ ತನಗೆ ನಿಜಮೆನಲ್ ಪೆರ್ಮೆಯಂ ತಾಳ್ದಿನಿಚ್ಚಂ ವಿಜಯಾರ್ಧಕ್ಷ್ಮಾಧರೇಂದ್ರೋಭಯತಟದೆಸೆವಾ ನೂಱುಪತ್ತುಂ ಪೋೞ್ಲ್ಗಂ ನಿಜನಾಥಂ ತಾನೆನಿಪ್ಪೀ ವಿಭವಮಭಿನವಾಶ್ಚರ್ಯಮಾಗಿರ್ದನೋರಂ ।
ತೆ ಜಯಶ್ರೀಕಾಮಿನೀಕೋಮಳಮುಖಮುಕುರಂಸೂಕ್ತಿಸಂದರ್ಭಗರ್ಭಂ

ಗದ್ಯ॥ ಇದು ವಿನಮದಮರೇಂದ್ರಮೌಳಿಮಣಿಕಿರಣಮಾಳಾಪರಾಗಪರಿರಂಜಿತ ಚರಣಸರಸೀರುಹರಾಜಿತ ಪರಮಜಿನರಾಜಸಮಯ ಸಮುದಿತಸದಪುಲಾಗಮಸುಧಾ ಶರಧಿಶರದಿಂದು ಶ್ರೀ ಮಾ ಘ ಣ ಂ ದಿ ಪ ಂ ಡಿ ತ ಮುನೀಶ್ವರ ಮನೋಜನಿತನಿರುಪ ಮದಯೂರಸಸರಸೀಸಂಭೂತಸಂಭವಾಮಳ ಸುಕವಿಕಮಲಭವ ವಿರಚಿತಮಪ್ಪ

ಶಾಂತೀಶ್ವರ ಪುರಾಣದೊಳ್

ಅಶನಿಘೋಷವಿಜಯವರ್ಣನಂ ಕೇವಳಿದರ್ಶನೋತ್ಸಾರಿತವಿಷಾದತಿಮಿರವರ್ಣನಂ,

ಷಷ್ಠಾಶ್ವಾಸಂ ಸಂಪೂರ್ಣಂ,

ನವಮಾಶ್ವಾಸಂ

ಶ್ರೀಕಾಂತನಹಿತವಿಜಯ ।
ಶ್ರೀಕಾಂತನೆನುತ್ತುಮವನಿ ಕೀರ್ತಿಸೆ ಕೀರ್ತಿ ॥
ಶ್ರೀಕಾಂತನಿರ್ದನೆಸೆದು ಕೃ ।
ಪಾಕೃತಿ ಜಿನಸದಪಯೋಜರಾಜನುರಾಳಂ ॥೧॥

ವ॥ ಇಂತು ನಿಜರಾಜಧಾನಿಯೊಳ್ ನಿರಂತರಂ ರಾಜ್ಯಂಗೆಯುತ್ತುಮಮಿತತೇಜಹಾರಾಜಂ ಪ್ರಜ್ಞಪ್ತಿ, ಕಾಮರೂಪಿಣಿ,ಅಗ್ನಿಸ್ತಂಭಿನಿ,ವಿಶ್ವಪ್ರಭೆ, ಶಿನಿಪ್ರತಿಘಾತಗಾಮಿನಿ, ಆಕಾಶಗಾಮಿನಿ, ಉತ್ಪಾದಿನಿ, ವಸಂತಕಾರಿಣಿ, ಆವೇಶಿನಿ, ಪ್ರಸ್ಥಾಪಿನಿ,ಪ್ರಹರಿಣಿ, ಪ್ರಮೋಹಿನಿ, ಸಂಕ್ರಾಮಣಿ, ಅವರ್ತಿನಿ,ಸಂಗ್ರಹಿಣಿ, ಭಂಜಿನಿ, ಘಟ್ಟನಿ, ಪ್ರಹಾಪನಿ, ಪ್ರಭಾತಿನಿ, ಸ್ರವರ್ತಿನಿ, ವಿಪ್ರರೋದಿನಿ, ಪ್ರಲಾಪಿನಿ, ವಿಕ್ಷೇಪಣಿ, ಶಬರಿ, ಚಾಂಡಾಳಿ, ಮಾತಂಗಿ, ಗೌರಿ, ಖಟ್ವಾಂಗಿ, ಮುದ್ದಿನಿ, ಶತಶಂಕಿನಿ, ಕುಶಾಂಡಿ, ವಿರಳವೇಗೆ, ಮಹಾವೇಗೆ, ಮನೋವೇಗೆ, ಚಪಲವೇಗೆ, ಪರ್ಣಲಘು, ಲಘುರಶ್ಮಿಣಿ, ಪ್ರಭಾತಿನಿ, ಪ್ರಭಂಕರಿ, ವೇಗಾವತಿ, ವೈತಾಳಿ, ಸರ್ವವಿದ್ಯಾಚ್ಛೇದಿನಿ, ಮಹಾಜ್ವಾಳಿನಿ, ಯುದ್ಧವೀರ್ಯೆ, ಬದ್ಧವೋಜೆನಿ, ಪ್ರಹರಣಾವರಣಿ, ಭ್ರಮರಿ, ಅಭೋಗಿನಿ-ಮೊದಲಾಗೆ ಸಮಸ್ತವಿದ್ಯಂಗಳಂ ಸಾಧಿಸಿ ಸಿದ್ಧವಿದ್ಯನಾಗಿ ಉತ್ತರಶ್ರೇಣಿಯ*ವತ್ತು ಪೊಲ್ಲಂ ದಕ್ಷಿಣಶ್ರೇಣಿಯಯ್ವತ್ತು ಪೊಲ್ಲಂ ಅಧಿಪತಿಯಾಗಿರ್ದು—

ನೆಗಟ್ದಿರ್ದ ಬಹುವಿದ್ಯೆಗಳ್ ನೆನೆದ ತಾಣಕ್ಕಯ್ಯೆ ಪೋಗುತ್ತುಮಾ ।
ವಗಮುಂತಾವಿಜಯಾರ್ಧಶೈಲದುಭಯಶ್ರೇಣೀತಪೋದ್ಯಾನರಾ ।
ಜಿಗಳೊಳ್ ಸಂಚರಿಸುತ್ತುಮಾತ್ಮಯುವತೀಯುಕ್ತಂ ಸದಾ ಕಂತುಕೇ ।
ಳಿಗಳಂ ಖೇಚರರಾಜನಿಂತು ಪಡೆವಂ ರಮ್ಯಪ್ರದೇಶಂಗಳೊಳ್ ॥೨॥

ಮನವೊನಂದಮನಾದಮೆಯ್ದುವಿನಮಂತಾಖೇಚರೇಂದ್ರಂಗೆ ಸಾಂ।
ದ್ರನಿಭಚ್ಛಾಯೆಯಿನುಲ್ಲಸತ್ಕುಸುಮದಿಂ ಪರ್ಣಾಘಸೌಂದರ್ಯವ ॥

ರ್ಧನದಿಂ ಪಕ್ವಫಲಂಗಳಿಂ ಶುಕಪಿಕಾಳೀವ್ರಾತಮಾಧುರ್ಯನಿ ।
ಸ್ವನದಿಂದೋವುತಮೀವುದಾವನಚಯಂ ಪಂಚೇಂದ್ರಿಯಪ್ರೀತಿಯಂ ॥೩॥

ವಿಜಯಾರ್ಧಾಚಲಮೌಳಿ(ಚೈತ್ಯ)ಭವನವ್ರಾತಕ್ಕೆ ತಾನೆಯ್ದಿವಂ ।
ದು ಜಿನೇಂದ್ರಂಗೆ ವಿಚಿತ್ರಪೂಜೆಗಳನೆಂದುಂ ತನ್ನ ಕೆಯ್ಯಾಂತು ಮಾ ।
ಟ್ಪಿ ಜಿತಾನಂಗಸುರನ್ಯರೂಪನುನಣಂ ಕರ್ಣ್ಣಾಲಿ ನೋಟ್ಪುತ್ಸವಂ ।
ನಿಜನೂಗಿರ್ಪಿನನುಶ್ರವಿಂತಮಿತತೇಜಂ ಸಿದ್ಧವಿದ್ಯಾವ್ರಜಂ ॥೪॥

ನತನಾನಾವನಿಪಾಲಮೌಳಿಮಣಿಮಾಲಾಸಂಘಸಂಘಟ್ಟನೋ ।
ದ್ಧತರೇಣುವ್ರಜವರ್ಣಪೂರರಹಿತಂ ರಾಜಾಲಯಪ್ರಾಂಗಣ ॥
ಕ್ಷಿತಿಯಾಗುತ್ತಿರೆ ನಿಚ್ಚಮಿಂತರನುಗೆಯ್ಯುತ್ತಿರ್ಪನುದ್ವೃತ್ತದ ।
ರ್ಪತಮಿಸ್ರಂ ತ್ರಿಜಗಜ್ಜಯೋಜ್ವಳಯಶಂ ತತ್ಪ್ರೀಚರಾಧೀಶ್ವರಂ ॥೫॥

ವ॥ ಇಂತನೂನವಿನೂತ್ನ ಶೋಭಾಭಿರಾಮನಿಜಪಾಜ್ಯಸಾಮ್ರಾಜ್ಯ ಸೌಖ್ಯಾಸೀನನಾಗಿ ರಾಗದಿಂ ವಿಯಚ್ಚರೇಂದ್ರಂ ಉತ್ತಮಪಾತ್ರದಾನವಿನೋದಂ ಸಲುತ್ತುಮಿರಲೊಂದು ದಿನಂ ದಮವರರೆಂಬ ಚಾರಣಮುನೀಶ್ವರರ್ ಚರ್ಯಾಮಾರ್ಗದಿಂ ತನ್ನ ಮನೆಗೆ ಬರೆ ಕಂಡು—

ಮನದನುರಾಗದೆ ಹರ್ಷಾ ।
ಶ್ರುನಿಕಾಯಂ ಪ್ರಲಕನಿಕರವೊಡನೇಜಲ್ ಭೋಂ ॥
ಕೆನೆ ತಾನಿದಿರೆಳ್ದಿಂ ವಿನ ।
ಯನಿಧಾನಂ ಖೇಚರೇಂದ್ರನಂತಾಪದದೊಳ್ ॥೬॥

ಬಲವಂದು ಭಕ್ತಿಯಿಂ ಪದ ।
ನಳಿನಕ್ಕಾನಮ್ರನಾಗಿ ತನ್ಮನಿಪತಿಯಂ ॥
ನಿಲಿಸಿ ವಿಧಿಪೂರ್ವಕಂ ನಿ ।
ರ್ಮಳಿನಾನ್ನಮನಿತ್ತನರ್ಥಿಯಿಂ ಖಚರೇಂದ್ರಂ ॥೭॥

ಮುನಿಪತಿ ಪರಿತುಷ್ಟಸ್ವಾಂ ।
ತನಾಗಿ ಪರಸುತ್ತೆ ಪೋಗೆ ನರನಾಥನಿಕೇ ॥
ತನದೊಳ್ ಪಂಚಾಶ್ಚರ್ಯಮು ।
ದ್ಭವಿಸುಂ ತಾನಾಯ್ತು ನಿಖಿಳಜನತಾಶ್ಚರ್ಯಂ ॥೮॥

ನಿರುಪಮಪಂಚಾಶ್ವಯೋರ್ ।
ತ್ಕರಪರಿಲಬ್ಧಪ್ರಭಾವದಿಂದನುರಾಗಂ ॥
ಪಿರಿದಾಗಿ ಕೆಲವು ದಿನಮಿಂ ।
ತಿರುತಿರ್ದಂ ಖಚರವಲ್ಲಭಂ ಪೊಗಟಿಂ ಜಗಂ ॥೯॥

ವ॥ ಇಂತು ವಿರಾಜಿಸುತ್ತಿರ್ದಮಿತತೇಜಮಹಾರಾಜಂ ಶ್ರೀವಿಜಯ ಮಹೀವರಂಬೆರಸು ಲೀಲಾವಿಹಾರನಿರತನಾಗಿ ಪೋಗುತ್ತುವೊಂದು ರಮ್ಯ ಪ್ರದೇಶದೊಳ್—

ಅಮರಗುರು ದೇವಗುರುವೆಂ ।
ಬ ಮುನೀಂದ್ರರನಲ್ಲಿ ಕಂಡು ಮೌಕ್ತಿಕಮುಕ್ಕುಟಾ ॥
ಚ್ಛಮಯೂಖಸಲಿಲದಿಂ ತ ।
ತ್ಕ್ರಮಯುಮಳಕ್ಕರ್ಘ್ಯಪಾದ್ಯಮುಂ ತಾಮಿತ್ತರ್ ॥೧೦॥

ವರಧರ್ಮಶ್ರವಣಾನಂ ।
ತರನೆನ್ನಯ ತಂದೆಯಾದಿಕೇಶವನ ಭವೋ ॥
ತ್ಕರಮುಂ ಪೇೞಿಮೆನುತ್ತುಂ ।
ಪ್ಪರುನೃಪನಂತಾಮುನೀಂದ್ರರಂ ಬೆಸಗೊಂಡಂ ॥೧೧॥

ಪರಿಕಿಸೆ ಕರಾಳರೇಖಾ ।
ಸ್ವರೂಪಮಿಂತಖಿಳವಸ್ತು ತಮ್ಮಯ ಬೋಧೋ ॥
ತ್ಕರದಿನೆನಿಸಿರ್ಪ ತನ್ಮನಿ ।
ವರರೊಲವಿಂ ಪೇೞಲಾಗಳುದ್ಯುತರಾದರ್ ॥೧೨॥

ವ॥ ಅದೆಂತೆಂದೊಡೆ:—

ಪೊಂಬೆಟ್ಟಂ ನಡುವೆಸೆವೀ ।
ಜಂಬೂದ್ವೀಪದ ಪೊದೞ್ದಿ ಭರತೋರ್ವಿಯೊಳೊ ॥
ಪ್ಪಂಬೆತ್ತ ಭರತವಿಷಯಮು ।
ಖಾಂಬುಜಮೆನೆ ರಾಜಗೃಹಪುರಂ ಕಣ್ಗೊಳಿಕುಂ ॥೧೩॥

ಪುರದರಸಂ ವಿಶ್ವಮಹೀ ।
ವರನೆನಿಸಿದ ವಿಶ್ವಭೂತಿಯಾಭೂಪನ ಸೊಂ ॥

ದರಿ ಜೈಮಿನಿದೇವಿಯರಿ ।
ವರ ತನಯಂ ವಿಶ್ವನಂದಿಯೆಂಬ ಕುಮಾರಂ ॥೧೪॥
ಆವಿಶ್ವಭೂತಿಯನುಜಂ ।
ಭೂವಿನುತವಿಶಾಖಭೂತಿಯಾತನ ಸತಿ ಕೋ* ॥
ಭಾವತಿ ಲಕ್ಷ್ಮಣೆಯವರ್ಗಂ ।
ಭಾವಜಸವೃಶಂ ವಿಶಾಖನಂದಂ ಕಂದಂ ॥೧೫॥
ಶರನಿಧಿಯೊಳ್ ಹಿಮಕರನಂ ।
ತಿರೆ ಧರೆಯಂ ಲೀಲೆಯಿಂದೆ ಪಾಲಿಸುತುಂ ಶಂ ॥
ಕರನೆನಿಸುತರಸುತನದಿಂ ।
ಕರಮೆಸೆವಂ ವಿಶ್ವಭೂತಿನೃಪನನವರತಂ ॥೧೬॥
ಪರಿವಿಷ್ಟಾಖಿಲರಾಜಲೋಕದ ಕಿರೀಟಾನಘ್ರ್ಯಮಾಣಿಕ್ಯವಿ ।
ಸ್ಫುರಿತಾನೂನನವೀನದೀಧಿತಿಪರೀತಾನೀಕವಾರಾಂಗನಾ ॥
ತರಳಾಪಾಂಗಮರೀಚಿಮಾಲೆ ಬಿಸಿಲಂ ಬೆಳ್ದಿಂಗಳಂ ಬೀಱುತ ।
ಚ್ಚರಿವೆತ್ತೊಪ್ಪಿರೆ ವಿಶ್ವಭೂತಿನೃಪನಿಃತೊಡ್ಡೋಲಗಂಗೊಟ್ಟರಲ್ ॥೧೭॥
ವ॥ ಇಂತು ವಿಶ್ವಭೂತಿನರೇಂದ್ರಂ ನಿಜಾನುಜನಪ್ಪ ವಿಶಾಖಭೂತಿ ವೆರಸೋಲಗದೊಳ್ ಲೀಲೆಯಿಂದಿರ್ದಲ್ಲಿ—
ಶರದಭ್ರಂ ಬೆಳ್ದಿಂಗಳ ।
ಸಿರಿ ಪುಂಜಂಗೊಂಡು ರಂಜಿಸಿತ್ತೆನೆ ಪಿರಿದುಂ ॥
ನೆರೆದಿರ್ದಿರೆಯಿರೆ ಕರಗು ।
ತ್ತಿರಲಾಗಳ್ ವಿಶ್ವಭೂತಿನೃಪನೀಕ್ಷಿಸಿದಂ ॥೧೮॥
ವ॥ ಆಗಳದುವೆ ಮುಹೂರ್ತಮಾಗೆ ಬೇಗದಿಂ ನಿಜಾನುಜನಪ್ಪ ವಿಶ್ವಭೂತಿಯಂ ಪಾರ್ಶ್ವರಾಜ್ಯವಿಭೂತಿಗಧೀಶ್ವರನಂ ಮಾಡಿ ತನ್ನ ತನಯ ವಿಶ್ವನಂದಿಗೆ ಯುವರಾಜಪದವಿಯನಿತ್ತಾ ಶ್ರೀಧರಮುನೀಶ್ವರ ಚರಣಸರಸಿರುಹಸನ್ನಿಧಿಯೊಳ್ ನೂರ್ವರರಸುಮಕ್ಕಳ್ವೆರಸು ಅಕ್ಷಣಂ ದೀಕ್ಷೆಯಂ ಕೈಕೊಂಡು ಪೋಗೆ—
ಆವಿಶ್ವನಂದಿ ವರವನಿ ।
ತಾವಳಿಸಹಿತಂ ಮನೋಹರೋದ್ಯಾನದೊಳಂ ।

ತಾವಗಮಿರ್ದ ವಿನೋದಸು ।
ಖಾವಹಮನದಂ ವಿಶಾಖನಂದಂ ಕಂಡಂ ॥೧೯॥

ಬವವಿದ ಮನೋಹರೋದ್ಯಾ ।
ನದ ವಿಪ್ರಳಮನೋಹರಕ್ಕೆ ಮನಮೆಳಸಿ ಬಲೀ ॥
ಕ್ಕದನೆರೆಯಲೆಂದು ತಂದೆಯು ।
ಪದಸನ್ನಿಧಿಗಾವಿಶಾಖನಂದಂ ಬಂದಂ ॥೨೦॥

ಎನಗೆ ಕುಡು ದೇವ ತಡೆಯದೆ ।
ಮನೋಹರೋದ್ಯಾನಮಂ ದಿಟಂ ಕುಡದೊಡೆ ಪೋ ॥
ಪೆನದೆಂತುಂ ದೇಶಾಂತರ ।
ಮನೆನಲ್ ಕೇಳ್ದಿರದೆ ನೃಪತಿ ಸಿಡಿಮಿಡಿಗೊಂಡಂ ॥೨೧॥

ಬನವಾತನದಾತಂ ಪಿರಿ ।
ಯನ ಮಗನೀತಂಗೆ ಕೊಟ್ಟೊಡಾತಂ ಮುನಿಗುಂ ॥
ಜನಮೆನ್ನಂ ಪಳಿದಪುದೆನು ।
ತೆನಸುಂ ನೃಪನಿಂತು ಚಿತ್ತದೊಳ್ ಜೆಂತಿಸಿದಂ ॥೨೨॥

ತನುಜಸ್ನೇಹದಿನಾವಿ ।
ಶ್ವನಂದಿಯಂ ಪೊಗುವಾಪ್ಪ ಬಗೆಯಂ ಬಗೆವಂ ॥
ಜನಪತಿ ತಾನೆಂದೆನೆ ಸಂ ।
ದನಮೋಹವಶಕ್ಕೆ ಸಲ್ಲದಿರ್ದಪನಾವಂ ॥೨೩॥

ವ। ಇಂತು ಬಗೆದಂದು ಕಪಟಚಿತ್ತನಪ್ಪ ವಿಶಾಖಭೂತಿಭೂಪಂ ವಿಶ್ವನಂದಿಯಂ ಕರೆದು ಪಿಂದೆ ನೀನಿರು ಪರನೃಪರಂ ನಿವಾರಿಸಿ ಬಂದಪೆನೆಂದೊಡದಂ ಕೇಳ್ದು ದೇವನಿವಕ್ಕೇವುದದಕಾನೆ ಸಾಲ್ವೆನೆಂದು ನಿಷ್ಕಪಟಚಿತ್ತನಪ್ಪುದಱಂ ಕುವಾರಂ ಸಕಳಸೈನ್ಯಂಬೆರಸು ಪೋಗೆಯುಂ ಪೆಱಗೆ ತನ್ನ ಮಗನಪ್ಪ ವಿಶಾಖನಂದಂಗಾವನೋಹರೋದ್ಯಾನಮಂ ಕುಡಲಾತನದಂ ಕೊಂಡು ಸುಖದಿನಿರುತ್ತುಮಿರೆ—

ಪರನೃಪರಂ ಸಾಧಿಸಿ ಚೆ ।
ಚ್ಚರದಿಂದಂ ವಿಶ್ವನಂದಿ ಬಂದಾಬನಮಂ ॥

ನರಪತಿ ವಿಶಾಖನಂದಂ ।
ಗಿರದೊಲವಿಂದಿತ್ತ ತೆಱನುಮಂ ನೆರೆ ಕೇಳ್ದಂ ॥೨೪॥

ವ॥ ಆಗಳ್ ವಿಶ್ವನಂದಿ ಬಂದನೆಂದು ವನಪಾಲಕಂ ಪೋಗಿ ಪೇೞ್ದು ಕೇಳ್ದು ವಿಶಾಖನಂದನಾಬನದೊಳಿರ್ದು ಅತನಂ ಪುಗಲೀಯದೆ ಕಾದುವೆನೆಂದು ಪೂಣ್ದಿರೆ—

ಕಡುಮುನಿದು ಕೋಪದಿಂ ಕಿಡಿ ।
ಕಿಡಿನೋಗುತ್ತೆೞ್ದು ವಿಶ್ವನಂದಿಕುಮಾರಂ ॥
ಘುಡಿಘುಡಿಸುತ್ತೆಯ್ದಿದನಾ ।
ವೆಡೆಯೆನುತೆ ವಿಶಾಖನಂವಸಿರ್ದೆಡೆಗಾಗಳ್ ॥೨೫॥

ಬರುತಿರ್ಪ ವಿಶ್ವನಂದಿಯ ।
ಸರಭಸದುರವಣೆಗೆ ಸೆಡೆದು ನಡನಡುಗುತ್ತುಂ ॥
ತ್ವರಿತವೆ ವಿಶಾಖನಂದಂ ।
ಪರಿದು ಕಪಿತ್ಥಾವನೀಜಮಂ ಮುಱಿಗೊಂಡಂ ॥೨೬॥

ವ॥ ಅದಂ ಕಂಡು,

ಮುರಸಂ ನೀಂ ಮುಱಿಗೊಂಡೊಡಾಮುರಸದಿನ್ನೀಂ ಕಾವುದೇ ನಿನ್ನನೋ।
ಸರಿಸಲ್ವೇಡಿದಿರಾಗಿದಿರ್ದು ಬನಮಂ ಕೊಂಡಂತೆ ಕೊಳ್ ಕೈದುವಂ ॥
ಸರಿಸಂ ನಿಲ್ಲೆನುತೆಯ್ದಿ ಕಾಯ್ದುಱದೆ ಬೀೞ್ ಬೀೞ್ದಿಂಬಿನಂ ಬೇಗರ್ಗಳು ।
ವರ್ರೆ ಬಾಯಂ ಬಿಡೆ ವಿಶ್ವನಂದಿ ಕಡುಪಿಂ ಕೆೞ್ತಂ ಕಪಿತ್ಥದ್ರುವಂ ॥೨೭॥

ವ। ಇಂತು ಕೆೞ್ತಾ ಕಪಿತ್ಥಾವನೀಜಮಂ ವಿಶ್ವನಂದಿ ತಿಱನೆ ತಿಱುಪಿ ತದೀಯಸಮವನಪಾತದಿಂ ವನತರುಗಳೆಲ್ಲಂ ಬಿಗುರ್ದು ಬೀೞ್ವುದಂ ಕಂಡು ಕೆಬೆ್ಟ್ಟೇಡಿ ವಿಶಾಖನಂದಿ ನೊಂದು ಮಹಾಶಿಲಾಸ್ತಂಭಮಂ ಮುಱಿಗೊಂಡಿರೆ—

ಗಳಿಲನೆ ಬಿಟ್ಟಾತರುವಂ ।
ಘುಳುಘುಳಿಸುತ್ತೆಯ್ದಿ ವಿಶ್ವನಂದಿ ನಿಜೋದ್ಯ ॥
ತ್ಕುಳಿಕನಿಭ ತಳದಿನಿರವ ।
ಪ್ಪಳಿಸಲ್ ಶತಚೂರ್ಣಮಾದುದಾಕಲ್ಕಂಬಂ ॥೨೮॥

ಅಳವೞಿದು ಬಾಯ್ವಿಡುತ್ತಾ ।
ಗಳೆ ಬಿೞ್ದ ವಿಶಾಖನಂದನಂ ಕಂಡು ಮನಂ ॥

ಪೆಳಱಿ ಕರುಣಾರಸಂ ಸಂ ।
ಗಳಿಸಿಮುದಾವಿಶ್ವನಂದಿಗಂತಾಕ್ಷಣದಿಂ ॥೮೯॥
ಅನುಜಂಗುಸಹಪತಿಯಪ್ಪೀ ।
ಮನನೆಯೇಕೆಂದಾವಿಶಾಖನಂದಂಗಾಗಳ್ ॥
ವನಮಂ ಕೊಟ್ಟು ತಪಂಗೆ ।
ಯ್ದಿನಿತನಱಿ ವಿಶ್ವನಂದಿ ಮನದೊಳ್ ನೆನೆದಂ ॥೩೦॥

ವ॥ ಅವಂ ಕೇಳ್ದು ವಿಶಾಖಭೂತಿಭೂಪನಾಂ ಪೆಱಗಿರೆ ದುರಪವಾದಂ ಪೆಱಪಿಂಗದೆಂನಱಿದು ವಿಶಾಖನಂದಂಗೆ ರಾಜ್ಯಮಂ ಕೊಟ್ಟು ವಿಶ್ವನಂದಿಕು ಮಾರನಲ್ಲಿಗೆ ಪಂದಿರೆ ನಂದನನಿನ್ನಾದುದನಪ್ಪೆನೆಂದು ಪರಿಚ್ಛೇದಿಸಿ ವಿಶ್ವ ಭೂತಿ ಗುರುಗಳ ಸದಸಮುಕ್ಷದೊಳ್ ದೀಕ್ಷೆಯಂ ಕೈಕೊಂಡು ಪನ್ನೀರ್ತೆಱದ ತಸಮುನ್ನತಕ್ಕೆ ನೆರೆದಿರ್ಪತ್ತಿರಡು ಪರೀಷಹಂಗಳ ದರ್ಪಮಂ ತೂಱಿ ಕಳೆದಖಂಡಿತವ್ರತಗುಣಮಣಿಮಂಡನರಾಗುತ್ತಿರೆ—

ಕಾಯಕ್ಲೇಶವಿಶೇಷದಿ ।
ನಾಯತತಿಪಂ ವಿಶ್ವನಂದಿ ಬಡವಾಗಿ ತನು ॥
ಚ್ಛಾಯೆ ತರೆ ಮಿಕ್ಕ ಸುತಪ ।
ಶ್ರೀಯುನ್ನತಿಯಂ ಕರಂ ವಿರಾಜಿಸುತಿರ್ಪಂ ॥೩೧॥

ವ॥ ಇಂತು ಕಡುಬಡವಾಗಿ ವಿಶ್ವನಂದಿಯೋಗೀಂದ್ರನೊಂದು ದಿವಸಂ ಮಾಸೋಪವಾಸದ ಪಾರಣೆಗೆ ಮಧುರಾಪುರಮೆಂಬ ಪೊೞಲಂ ಪುಗುತಂದು—

ಅಡಿಯಿಡುವ ಪೊಡರ್ಪಿಲ್ಲದೆ ।
ದಡದಡಿಸುತ್ತಾಗ ವಿಶ್ವನಂದಿಮುನೀಂದ್ರಂ ॥
ಗಿಡಿಗಿಡಿಜಂತ್ರದ ತೆಱದಿಂ ।
ನಡುಬೀದಿಯೊಳಿಂತು ಮೆಲ್ಲಮೆಲ್ಲನೆ ಬರೆಯುಂ ॥೩೨॥
ಬರುತಿರ್ಪಾಮುನಿಪನ ಕೃಶ ।
ಶರೀರನುಂ ಕಂಡು ಬೆಜ್ಜಿ ಪಯನಾಟಕರಂ ॥
ಪರಿತಂದು ಪಾಯೆ ಬಿದ್ದುದು ।
ಸ್ಫರಜನ್ಮಕಟಕಟಿನಲ್ಕೆ ಬೀದಿಯೊಳಾಗಳ್ ॥೩೩॥

ವ॥ ಅಂತಾಸಮಯದೊಳ್—

ಪರಭೂಪರ್ ಕೆದಱಟ್ಟಿ ಕೆಟ್ಟು ನಿಜರಾಜ್ಯಭ್ರಷ್ಟನಾಗಿಂತು ತ ।
ತ್ಪುರಿಯೊಳ್ ನೆಟ್ಟನೆ ಪತ್ರವಾಹಕನೆನಿಪ್ಪೀಕಪ್ಪಜೀವಿತ್ವದಿಂ ॥
ಚರಿಸುತ್ತಿರ್ದ ವಿಶಾಖನಂದನದನಾಗಳ್ ಕಂಡು ವೇಶ್ಯಾಗೃಹಾಂ ।
ತರದಿಂ ಬಂದನಣಂ ನಗುತ್ತೆ ಮುನಿ ಬಿಟ್ಟಿರ್ದಲ್ಲಿಗ.ನಂದದಿಂ ॥೩೪॥

ಗಿಡುವೆಂಬಂತಾಕಪಿತ್ಥ ವನಿಜಮನುರದಾವೇಗದಿಂ ಕೆಟ್ಟು ಕಾಯ್ಪಿಂ ।
ಸಿಡಿಲೆಂಬೀಹಕ್ಕದಿಂ ನೀನಡಸಿ ಪೊಡೆದು ಕಲ್ಕಂಬಮಂ ಪಿಟ್ಟುಗೆಯ್ದಾ ॥
ಕಡುಬಲ್ಪೀನೆತ್ತ ಪೊಯ್ತೀ ಬಡಪಸು ನಸುಸೋಂಕಲ್ಕಣಂ ವಿಶ್ವನಂದೀ ।
ಕೆಡೆದೈ ಚಾವಟ್ಟದಿಂ ಬೆಂಬುಡಿಕೆಯೊಳೆನುತುಂ ನಾಡೆಯುಂ ನೋಡಿ ನಕ್ಕಂ

ತನ್ನಯ ರಾಜ್ಯಭ್ರಷ್ಟತೆ ।
ಯನ್ನೋಡದೆಯುಂ ವಿಶಾಖನಂದಂ ಪಜಿಯು ॥
ತ್ತುನ್ನುಡಿದ ನುಡಿಗೆ ಕಡುಮುಳಿ ।
ದನ್ನೆಱೆಯುರಿವಗ್ನಿ ವಿಶ್ವನಂದಿಮುನೀಂದ್ರಂ ॥೩೬॥

ಎನಿತಾನುಂ ಮುನಿಯಿಸೆಯುಂ ।
ಮುನಿಯಲ್ಕಣವಾಗದೆಂಬ ಮುನಿಪತಿ ತಳೆದಂ ॥
ಮುನಿಸಂ ಮನದೊಳ್ ತಾನೆಂ ।
ದೆನೆ ಕರ್ಮವಿಪಾಕಮೆನ್ನರಂ ಮಱೆಯಿಸದೇ ॥೩೭॥

ವ॥ ಇಂತು ವಿಶ್ವನಂದಿಮುನೀಂದ್ರಂ ಮುನಿದು ವಿಶಾಖನಂದನಂ ನೀಡುಂ ನೋಡಿ ಸಿನ್ನನೆನ್ನ ಮೂಜನೆಯ ಭವದೊಳ್ ವಧಂಗೆಯ್ವೆನೆಂದು ನಿಧಾನಂಗೆಯ್ದು ಜೀವಿತಾವಸಾನದೊಳ್ ವರ್ಧನತೆವೆತ್ತ ದುರ್ಧರತಪಃಫಲ ವಿಶೇಷದಿಂ ಶುಕ್ರಕಲ್ಪದೊಳ್ ಪುಟ್ಟಿದನಾವಿಶಾಖಭೂತಿಮುನೀಶ್ವರಂ ಕೆಲ ವಾನುಂ ದಿವಸದಿಂ ಸಮಾಧಿಯಿಂ ಮುಡಿಪಿ ತತ್ಕಲ್ಪದೊಳ್ ಪುಟ್ಟರೆ—

ಎಸೆವೀರೆಂಟು ಪಯೋನಿಧಾನದುಪಮಾಯುಷ್ಯಂಬರಂ ದೇವಲೋ ।
ಕಸುಖಾನೀಕಮನೊಲ್ದು ಭೋಗಿಸುತುಮತ್ಯುತ್ಸಾಹಸಂಪತ್ತಿಯಿಂ ॥
ದೆ ಸನುಂಬೆತ್ತಿರೆ ಶುಕ್ರಕಲ್ಪದೊಳಿರುತ್ತುಂ ಮತ್ತಮಾಕಲ್ಪಸಾ ।
ಖ್ಯಸಮಗ್ರಾವಧಿಯಾಗಲಿತ್ತಭಿಮುಖರ್ ತಾವಾದರಂತಿರ್ದರುಂ ॥೩೮॥

ವ॥ ಅಂತಲ್ಲಿಂ ಬಂದಿರ್ವರುಮೀಜಂಬೂದ್ವೀಪದ ಭರತಕ್ಷೇತ್ರದ

ಸುರಮ್ಯವಿಷಯದ ಪೌದನಪುರೀವರ ಪ್ರಜಾಪತಿಮಹಾರಾಜನರಸಿಯರಪ್ಪ
ವಿಜಯಾವತೀದೇವಿಗೆ ವಿಶಾಖಭೂತಿಚರದೇವಂ ವಿಜಯನಾಗಿ ಪುಟ್ಟಿದನಾ
ಮೃಗಯಾವತೀದೇವಿಗೆ ವಿಶ್ವನಂದಿಚರದೇವಂ ತ್ರಿಪಿಷ್ಟನಾಗಿ ಪುಟ್ಟಿದನಾವಿ
ಶಾಖನಂದನಂ ನಾನಾಭವಂಗಳೊಳ್ ತೊಟಲುತ್ತುಂ ಎತ್ತಾನುಂ ಪುಣ್ಯಫ
ಲದಿಂ ವಿದ್ಯಾಧರಪದವಿಯೊಳಶ್ವಗ್ರೀವನಾಗಿ ಪುಟ್ಟಿಯರ್ಧಚಕ್ರವರ್ತಿ ಪ್ರತಿ
ವಾಸುದೇವನಾವನಾತನಂ ರಣಾಂಗಣದೊಳ್ ತೊಟ್ಟಿ ವಿಜಯತ್ರಿಪಿಷ್ಟರ್
ಬಲನಾಸುದೇವರಾಗಿರ್ದರೆಂದಾಗಳ್ ಪೇೞ್ದ ಕೇಳ್ದ್ದು—

ಜನಕನ ಬಲಮುಂ ನೆರೆ ಕೇ ।
ೞ್ದನುರಾಗಮನಾಗಳೆಯ್ದಿ ಬಯಸಿದನೆನಸುಂ ॥
ಮನದೊಳ್ ಶ್ರೀವಿಜಯಂಗಾ ।
ನನುಪಮನುಪ್ಪಾದಿಕೇಶವನ ವೈಭವಮುಂ ॥೩೯॥

ಯತಿವರನಂ ಬೀೞ್ಕೊಂಡಿಂ ।
ತತಿನುದದಿಂದಮಿತತೇಜನುಂ ಶ್ರೀವಿಜಯ ।
ಕ್ಷ್ಮಿಪತಿಯುಂ ನಿಜರಾಜ್ಯ ।
ಸ್ಥಿತಿಯೊಳ್ ನಲಿಯುತ್ತುಮರಸುಗೆಯ್ಯುತ್ತಿರ್ದರ್ ॥೪೦॥

ತಮಗಹಮಿಂದ್ರವಿಭೂತಿಯೆ ।
ಸಮನಿಸಿ ತೋರ್ದಂತೆ ಪಲವು ಕಾಲಂ ಖಚರೋ ॥
ತ್ತಮನುಂ ಶ್ರೀವಿಜಯನುಮನು ।
ಪಮಸುಖಸಂಪತ್ತಿವೆತ್ತು ಸಂತತಮಿರ್ದರ್ ॥೪೧॥

ವ॥ ಇಂತು ಕೆಲವುಕಾಲಮರಸುಗೆಯ್ಯುತ್ತುಮಿರ್ದಮಿತತೇಜಮಹಾ
ರಾಜನುಂ ಶ್ರೀವಿಜಯಮಹೀವರನುಂ ವಿನೋದವಿಹಾರದಿಂ ಬರುತ್ತುಂ
ವಿನುಳಮತಿವಿಪುಳಮತಿಗಳೆಂಬ ಚಾರಣಮುನೀಂದ್ರರಂ ಕಂಡು—

ಅಮುನಿವೃಂದಾರಕರ ಸ ।
ಕೋಮಲಪದಪಲ್ಲವಪ್ರಭಾಸಂತತಿಯಂ ॥
ತಾಮೆನಸುಂ ಕೊರ್ವಿಸಿದರ್ ।
ಪ್ರೇಮದೆ ನಿಜಮಕುಟನುಣಿಗಣಾರುಣರುಚಿಯಿಂ ॥೪೨॥

ಧರ್ಮಶ್ರವಣಾನಂತರ ।
ವೊನೆರ್ದಯೆ ತಮ್ಮಿರ್ವರಾಯುರವಸಾನಮನಾ ॥
ಕರ್ಮವ್ಯಪಹೃತರಂ ಭವ ।
ನಿರ್ಮೂಳನರಪ್ಪ ಮುನಿಗಳಂ ಬೆಸಗೊಂಡರ್ ॥೪೩॥

ವ॥ ಅದರ್ಕೆ ಮುಗುಳ್ನಗೆಸಗುತ್ತುಮಾಮುನೀಂದ್ರರಿಂತೆಂದರ್—

ತವಿಸಲ್ಕರಿದೆನಿಸುವ ದಿವಿ ।
ಜನಿತಾನದಪಾರಸಾಗರೋಪಮದಾಯುಂ ॥
ತವಿಲಪ್ಪುದೆಂದೊಡೀಮಾ ।
ನವರಾಯುಂ ತವಿವ್ವುದರಿದೆ ಸಹಜದಿನಚರಂ ॥೪೪॥

ಸಮಸತ್ಪ್ರೇಮಂ ನಿವ್ಮೊಳ್ ।
ಸಮನಿಸಿದಂತಾಯು ತವದೆ ಸಮನಾಯ್ತು ದಿಟಂ ॥
ನಿಮಗಿನ್ನುಳ್ಳುದು ತಾವೊಂ ।
ದೆ ಮಾಸದಾಯುಷ್ಯಮೆಂದು ಮುನಿವರರೆಂದರ್ ॥೪೫॥

ಪೆಱಗೆಲ್ಲಂ ಮದನಾನುರಾಗವಶದಿಂದಂ ಪೋಯ್ತು ಕಾಲಂ ದಿಟಂ ।
ಮುಱಿದಿನ್ನಂತಿರೆಯುಂ ಕೃತಾಂತವಿಷಮವ್ಯಾಳಾಸ್ಯದೊಳ್ ಸಲ್ವಿರೆ ॥
ಬ್ಬಱಿನೀಗಳ್ ಪದೆದಪ್ಪುಕಯ್ದು ನಿಮಗುಳ್ಳೀಮಾಸದಾಯುಷ್ಯದೊಳ್ ।
ನೆಱಿ ಸದ್ಧರ್ಮದ ಸೆರ್ಮೆಯಂ ನೆಗೞ್ದಿರೀ ನೀಮಿರ್ವರುಂ ಪ್ರೇಮದಿಂ ॥
ಎಂದಿಂತು ಚಾರಣರ್ ದಯೆ ।
ಯಿಂದಂ ಪೇೞ್ದಲ್ಕೆ ಕೇಳ್ದು ಬೀೞ್ಕೊಂಡತ್ಯಾ ॥
ನಂದದೆ ನಿಜಪುರಿಗವರೈ ।
ತಂದರ್ ಖಚರೇಂದ್ರನುಂ ನರೇಂದ್ರಸುಮಾಗಳ್ ॥೪೬॥

ಚಿತ್ತಜನಿಜರೂಪಶ್ರೀ ।
ದತ್ತಕುಮಾರಂಗೆ ನಿಖಿಳರಾಜ್ಯಮಹತ್ಸಂ ॥
ಪತ್ತಿಯನಂತಾಕ್ಷಣದಿಂ ।
ದಿತ್ತಂ ಪದೆದಮಿತತೇಜಖೇಚರರಾಜಂ ॥೪೭॥

ಘನಬಾಹಾಬಲಧಿಂ ಪಿರಿ ।
ಯನೆನಿಪ್ಪ ಸುತೇಜನೆಂಬ ಪಿರಿಯ ಕುಮಾರಂ ॥

ಗನುನಯದಿಂ ಶ್ರೀವಿಜಯಾ ।
ವನಿಪತಿ ತಾಸಿತ್ತನಖಿಲರಾಜ್ಯಶ್ರೀಯಂ ॥೪೯॥
ಮನಮೂಲಿ ಸಕಲದಾನಮ ।
ನನೂನಮೆನೆ ಮಾಡಿ ತಡೆಯದರ್ಹತ್ಪರನೆೀ ॥
ಶನ ಪದಪಯೋೀಜದೊಳ್ ನೆ ।
ಟ್ಟನೆ ನೆಗಳ್ದಿಷ್ಟಾಹ್ನಿಕದ ಮಹಾಮಹಿಮೆಗಳಂ ॥೫೦॥
ವ॥ ತದನಂತರದೊಳ್
ಚಂದನನಂದನದೊಳ್ ಪದ ।
ಪಿಂದೆನಸುಂ ಪರಮಯೋೀಗದೊಳ್ ಪುದಿದಿರ್ದಾ ॥
ನಂದನಮುನಿಪದಪಾರ್ಶ್ವಮ ।
ನಂದೆಯ್ದಿದರಿರ್ವರುಂ ಮನೋೀಮುದದಿಂದಂ ॥೫೧॥
ವ॥ ಅಪರಮಿತಶ್ರೀಯಂ ತಾಳ್ದಿ ಸಾನಂದನಾಗಿರ್ದ ನಂದನಮು
ನೀಂದ್ರಪಾದಾರವಿಂದಸನ್ನಿಧಿಯೊಳ್ ತಮ್ಮಿರ್ವರುಂ ನಿಂದು—
ಅಂಬರಭೂಷೆಯನುೞಿದು ದಿ ।
ಗಂಬರಭೂಷೆಯನೆ ತಳೆದು ಸಂಸಾರದ ಬೇ ॥
ರಂ ಬೇಗದೆ ಕೀೞ್ವಂತೆನ ।
ಸುಂ ಬಗೆಯದೆ ಕಿೞ್ತರಲ್ತೆ ಕೇಶೋತ್ಕರಮಂ ॥೫೨॥
ಅನಿಮಿಷರಾಜರಾಜ್ಯವರಭೋೀಗಕೆ ಪಾಸಟಿಯಪ್ಪ ರಾಜ್ಯದೊಂ ।
ದನುಪಮಸೌಖ್ಯಮುಂ ನೆನೆಯದಿಂ ವ್ರವಧೂಟಿಯರೆಂದೆನಿಪ್ಪ ಕಾ ॥
ಮಿನಿಯರ ಕೂಟಮಂ ನೆನೆಯದಸ್ಖಲಿತರಾ ನೆನೆದರ್ ಜಿನೇಂದ್ರಪಾ ।
ವನಪದಪಂಕಜದ್ವಯಮನಾವಗಮಂತವರೇಂ ಮಹಾತ್ಮರೋ ॥೫೩॥
ತಪದ ಪೊಡರ್ಪು ಕೈ ಮಿಗೆ ಪರೀಷಹಮಂ ಸಲೆ ಗೆಲ್ದು ಚಿತ್ತದೊಳ್ ।
ವಿಪುಳತೆನೆತ್ತ ಸಂಸರಣವಧ್ರುವಭಾವಮನಪ್ಪುಕೆಯ್ದು ನಿ ॥
ಷ್ಕಪಟತೆವೆತ್ತ ಸುವ್ರತಗುಣಂಗಳ ಸಂತತಿ ಸಾಜಮಾಗಿ ರಾ ।
ಜಿಪರೆನಲಾತಪಸ್ವಿಗಳುದಾತ್ತಮನಸ್ವಿಗಳೇಂ ಮಹಾತ್ಮರೋ ॥೫೪॥
ಇಂತೊಗೆದಿರ್ಪತ್ತೆರಡು ದಿ ।
ನಂ ತಾಮಿರ್ಪತ್ತೆರಡುಂ ಪರಿಷಹಮಂ ಗೆ ॥

ಲ್ದುಂ ತಪದ ತೇಜದಧಿಕತೆ ।
ಯಂ ತಳೆದರ್ ಖಚರಪತಿಯುಮವನೀಪತಿಯುಂ ॥೫೫॥

ಪಿರಿದುಂ ಬಾಹ್ಯಾಭ್ಯಂತರ ।
ಪರಿಗ್ರಹತ್ಯಾಗರಾಗಿಯನಶನವಿಧಿ ವಿ ॥
ಸ್ತರಿಸಲ್ ಜಿನಭಾವನೆಯಿಂ ।
ಶರೀರಮುಂ ಪತತೆವಿಟ್ಟರಿರ್ವರ್ ಮುಮಾಗಳ್ ॥೫೬॥

ವ॥ ಮತ್ತಮನಲ್ಪಶೋಭೆವೆತ್ತಾ ನತಕಲ್ಪದೊಳ್ ಸಂತತಸ್ವಕೀಯಾ ಮೃಗದಾಮಸೋಮಶ್ಯಾಮಲೀಕೃತಸಮಸ್ತವಸ್ತುವೆನಿಸಿ ಬಿತ್ತರಿಪ ಹರಿನೀಲ ಮಣಿಶಿಲಾಘಟಿತಮಹೀತಲಮಂಡಿತಮುಂ। ಅಪರಿನೀಲಮಣಿಶಿಲಾಮಂಡಳಕ್ಕೆ ಸಂಧ್ಯಾಮರೀಚಿಮಾಲಾನಿಚಿತರುಚಿರಾಂಬರ ವಿಲಾಸಾಡಂಬರಮನೋಲಗಿಪ ಸಾಲಮಣಿಸ್ತಂಭನಿಕುರುಂಬ ವಿಭ್ರಾಜಿತಮುಂ । ಆಮಣಿಸ್ತಂಭನಿಕುರುಂಬ ರುಚಿರಾಂಶುಜಾಲಬಾಲಾತಪಕ್ಕೆ ನಿಜಕಾಂತಿಯಿಂ ಚಂದ್ರಾತಪಕೇಳಿಯಂ ಸಂಗಳಿಸುವ ಗಗನಸ್ಫಟಿಕಘಟಿತಭಿತ್ತಿಸಂತಾನಮುಂ । ಆಗಗನಸ್ಫಟಿಕಘಟಿತ ಭಿತ್ತಿಸಂತಾನಕ್ಕೆ ವಿಚಿತ್ರವರ್ಣಾಚರ್ಚಾವಳಿಯನವಟಯಿಸುವ ಬಹುವಿಧ ರತ್ನರೇಣುಶ್ರೇಣೀವಿರಚಿತವರ್ಣಪೂರವಿಸ್ತಾರರಾಜಿತಮುಂ। ಆವರ್ಣಪೂರಶ ಬಳರುಚಿವಾಳೆಯೊಳ್ ಕೇಳಿಸಿ ಕಣ್ಗೆ ಕೌತುಕಮನೀವ ವಿವಿಧಮಣಿಗಣ ವಿರಚಿತವಿತಾನಶೋಭಾಯಮಾನಮುಂ। ಆವಿತಾನಲಕ್ಷ್ಮೀವಿಲಾಸಮಣಿಮೌ ಳಿಯೆನಿಪ ವಿವಿಧಕೂಟಕೋಟಿಗಳ ನಾನಾರತ್ನಕಾಂತಿಸಂತಾನಪಿಹಿತದಿಗ್ದೇಶ ಮುಮಾಗಿರ್ಪ ಸ್ವಸ್ತಿಕವಿಮಾನದೊಳ್ ಸಕಲಸುರಸುಮನಸ್ಸಮಾಜೋಪ ಹಾರಪರಿಮಳಮಿಳಿತಕಾಳಾಗರುಧೂಪ ಧೂಮಶ್ಯಾಮಳೀಕೃತ ಶೋಭಾ ಯಮಾನೋಪಪಾತಭವನಾಸನ್ನ ಮೃದುತರತಲ್ಪತಲಮನೂನಜನನಸ್ಥಾನ ಮಾಗೆ—

ತನುರುಜೆ ನೀಳ್ದ ಮುಂಬರಿಯೆ ಮೆಯ್ಯನುಲೇಪನದಿವ್ಯಗಂಧದಿಂ ।
ಪಿನ ತನಿಗಂಪು ತಟ್ಟಿಹ್ಮಗೆಯೆ ಸೂಡಿದ ಮಾಳೆಯ ಪಾರಿಜಾತನೂ ॥
ತನ ಕುಸುಮೋಲ್ಲಸತ್ಪರಿಮಳಂ ಪ್ರದಿದೇಟಿಸುವಸ್ತ್ರರತ್ನಮುಂ ।
ಡನತತಿ ಶೋಭಿಸುತ್ತುಮೊಡವುಟ್ಟೆ ಸುರೋತ್ತಮನಲ್ಲಿ ಪುಟ್ಟಿದಂ ॥೫೭॥

ವ॥ ಇಂತುದಯಿಸಿದಾಮಹಾನುಭಾವನ ಪುಣ್ಯಪ್ರಭಾವಕುಂಜಕೆ ಯಂ ತೆಱದಂತೆ ಕೆತ್ತ ಪಡಿಗಳೆತ್ತಂ ತೆಱದು ನರ್ತಿಸುವ ವಿಟನರ್ತಕೀ

ಸಿವಪಚರಣಾರಣಿತನುಂಜೀರಮುಂಜುಳಾರವದಿಂ ಬಲಿಕುಸುಮವಿಸರಪರಮ
ಪರಿಮಳಭ್ರಮದ್ಭ್ರಮರವಾಳಾಝಣತ್ಕಾರದಿಂದನಾಹತಜನಿತವಿನಾನೇಕದಿ
ವಿಜಮುಂಗಳಪಟಹಪಟಳ ಪಟುಧ್ವನಿಸಂತಾನದಿಂ ಮುದನೊದವೆ
ಪದೆಪಿಂದಭಿವರ್ಷಿಪ ವೃಂದಾರಕವಂದಿವೃಂದದ ಜಯಜೀಯಾನಂದರವನಿವ
ಪದಿಂ ಗಗನತಲವನುನಗಲೆ ನೂಂಕುವಂತೆ ನೆಗೆದು ಸೊಗಯಿಸುವ ರತ್ನ
ಕವಳೀಕಾಂತನುಂಡಳಂಗಳಿಂ ನವ್ಯದಿವ್ಯಸೌಭ್ಯಸಾರಸಮುಡಯೋದ್ಗಾರಿ
ಸುಮನೋವರ್ಷವಿಭ್ರಮಾಸಾರದಿಂ ಶಕ್ರಚಾಪವಲ್ಲೀವೇಲ್ಲಿತವೆಸಿಸಿ ವಿ
ಸುಸ ವಂದನಮಾಲಾಸಂದೋಹದಿಂ ಸೌಂದರ್ಯಮಾಗಿರ್ದ ದಿವಿಜಮಂದಿರ
ದೊಳ್

ಅರತಿಯೆತ್ತುನ್ನೊಪ್ಪಿ ನಲಿದಾಡುವ ಚಾಮರಮಿಕ್ಕುನೆತ್ತಿ ಕ ।
ಪೂರ್ದಪ ಪಾಂಸುನಂ ದೆಸೆಗೆ ಸೂಸುವ ಕನ್ನಡಿದೋಳುವಚ್ಚಮಂ ॥
ದಾರಲತಾಂತಮಂ ತಳಿವ ಸೇಸೆಯನಿಕ್ಕುವ ನೇರ್ಪುನೆತ್ತ ವೃಂ ।
ದಾರಕವಾರನಾರಿಯರನೊಯ್ಯನೆ ವೀಕ್ಷಿಸಿದಂ ಸುರೋತ್ತಮಂ ॥೪೪॥

ಇವರೀಕಾಂತೆಯರಾಗೆ ಬಂದುದಯಿಸಿಪರ್ದಾನಾರ್ಗೆಯಾತೋರ್ಪಮಾ।
ನವಿನೇನೀಗುಡಿತೋರಣಾವಳಿ[ಗಳೀ]ನೀಮುಂಗಳಾತೋದ್ಯವೃಂ ।
ನನಿನೇನೀದಿವಿಜರ್ಕಳೊಲಗಿಸುತಿಪೀರ್ಯಂದನೇನೆಂದು ತಾ ॥
ನವಧಿಜ್ಞಾನದಿನಾಗಳಾದನುಳಿದಂ ತತ್ಸಂಪದಾದ್ಯಂತಮಂ ॥೪೫॥

ಇದು ತಾನಾನತಕಲ್ಪಮಪ್ಪುದು ಮದೀಯಾಧೀನದೀಚಿಲ್ವವೆ ।
ತ್ತುದಣಂ ಸ್ವಸ್ತಿಕನಾಮದಿಂತಿದು ವಿಮಾನಂ ಮತ್ಪುಖಾವಾಸವ ॥
ರ್ಗದ ವೃಂದಾರಕಸಂಚಯಂ ಪರಿಜನಂ ತಾನಾಮದೀಸೌಖ್ಯಸಂ ।
ಪದಮರ್ಹತ್ಪದಪೂಜೆಗೆಯ್ದ ಫಳಮೆಂದಾನಂದಮಂ ತಾಳ್ದಿದಂ ॥೪೬॥

ಸಮಸಿಸಿದವಧಿಜ್ಞಾನದಿ ।
ನಮರ್ತ್ಯಪದವೀಶನಾದ ತೆಱನೆಱಿದರ್ ॥
ತ್ಕ್ರಮಕಮಳಮನರ್ಚಿಸಿ ಸುರ ।
ಸುಮನಃಕಲದಿಂದೆ ಸುಮನನಾದಂ ಸುಮನಂ ॥೪೭॥

ಪ್ರಮದಂ ಮಿಕ್ಕು ಮಹತ್ತರಾಮರಿಯರಿಂತಾದಿತ್ಯಚೂಡಾಭಿಧಾ !
ನನುರುದ್ವಲ್ಲಭನೆಂದು ಪೂಣ್ದು ಪರಸುತ್ತಾದೇವವಂದಿಪ್ರತಾ ॥

ನಮನೂನಸ್ತವಕೋಟಿಯಿಂ ಸುತ್ತಿಸುತುಂ ವೃಂದಾರಕಶ್ರೇಣಿ ಸು ।
ತ್ತಿ ಮನೋರಾಗದಿನಿರ್ದುದೋಲಗಿಸುತುಂ ದೇವೇಜನವ್ಯಾವೃತಂ ॥೬೦॥
ಶ್ರೀವಿಜಯನುಮಲ್ಲಿಯ ನಂ ।
ದ್ಯಾವರ್ತವಿಮಾನದೊಳಗೆ ಮಣಿಚೂಳವೆನಿ ॥
ಪ್ಪೀವಿಲಸನ್ನಾಮದಿನೆಸೆ ।
ದಾವಗಮಿಂತಮರಪದವಿಯೊಳ್ ಪುದಿದಿರ್ದಂ ॥೬೧॥

ಪೆಸರ್ವೆತ್ತಿರ್ದತ್ತುಮಾಸಾಂತರದೊಳಸುರಭಿಶ್ವಾಸಮುಣ್ಮುತ್ತುಮಿರ್ಪ ।
ತ್ತು ಸಹಸ್ರಾಬ್ದಪ್ರಮಾಣಂ ಸಮನಿಸೆ ಮನಸಃಹಾರಿಂ ತೃಪ್ತಿಯಂ ತಾ ॥
ಳ್ದ ಸುರಸ್ತ್ರೀಭೋಗಮಂಭೋಗಿಸುತುಮಮರನಾರೀಲಸದ್ಗೀಯಮೀಯೂ
ಷಸಮುತ್ಕೀರ್ಣಾತ್ಮಕರ್ಣದ್ವಿತಯಕುಹರರಾಗಿರ್ಪರಾನಂದದಿಂದಂ ॥೬೨॥
ಸ್ಮಿತಪುಂಡಾಯಂಭೋಜಷಂಡಪ್ರಚಯಪರಿಚಿತೋದ್ಯಾನಸಂತಾನದೊಳ್ತಾ
ರುತರಪ್ರಖ್ಯಾತರಮ್ಯಸ್ಥಳತತಿಯೊಳನೇಕಾಬ್ಧಿತೀರಂಗಳೊಳ್ ಲಾ ॥
ಲಿತ ಕುತ್ಕ್ರೀಲೋತ್ಕರಾಧಿತ್ಯಕಸಮುದಯದೊಳ್ ಕೂಡಿ ಸಂಚಾರಿಸುತ್ತುಂ
ಸತತಂ ನಾನಾವಿನೋದಾವಳಿಯೊಳೆ ಕಳವರ್ ಪೊಲ್ತನುತ್ಸಾಹದಿಂದಂ ॥೬೩॥
ವರನಂದೀಶ್ವರ ಕುಂಡಳಾದ್ರಿರುಚಕಕ್ಷ್ವೇಣೀಧ್ರರೂಪ್ಯಾದ್ರಿಮಂ ।
ದರಧಾತ್ರೀಧರ ಮಾನುಷೋತ್ತರ ಮಹಾನಾನಾದ್ರಿಚೈತ್ಯಾಲಯೋ ॥
ತ್ಕರಮಂ ಬೇಗದಿನೆಯ್ದುತುಂ ಜಿನಪತಿಶ್ರೀಪಾದಪದ್ಮಂಗಳಂ ।
ಭರದಿಂದರ್ಚನೆಗೆಯ್ಯುತುಂ ನುತಿಸುತುಂ ತಾಮಿರ್ಪರಾನಂದದಿಂ ॥೬೪॥
ಮನುಜಾಕೃತಿಯೊಳ್ ಪುಟ್ಟಿದ ।
ಮನಃಪ್ರಿಯಂ ಬೞಿಯನುೞಿಯನೆನೆ ಚೇಚರಭೂ ॥
ಪನುಮಾಶ್ರೀವಿಜಯನುಮಮ ।
ರನಿವಾಸದೊಳಿರ್ದರಂತು ಸಮಸತ್ಪ್ರಿಯದಿಂ ॥೬೫॥

ವ॥ ಇಂತಿವರ್ವರುಂ ವಿಂಶತಿಸಾಗರೋಪಮಾಯುರಂತಂಬರಂ ಸಮು
ತ್ಪ್ರೇಮಂ ಪುದಿದಾನತಕಲ್ಪದ ಸ್ವಸ್ತಿಕನಂದ್ಯಾವರ್ತವಿಮಾನದೊಳ್ ಆನೂ
ನವಾಗಿ ಸಕಲಸುಖಮನನುಭವಿಸುತ್ತುಮಿರ್ಪ—

ಇನ್ನೈದುದಿಂಗಳ್ಗಾಯು ।
ಮ್ಮನ್ನೆಗಮಿದಪುದೆಂಬ ಕಾಲಮವರಿರ್ಪರೊಳಾ ॥

ದನ್ನೆಟ್ಟನೆ ಸಮನಾಯ್ತುದ ।
ಱನ್ನೊೞಡುನ್ನೊಡುಂಟೆ ನಾಡೆಯುಂ ಚಿತ್ರತರಂ ॥೬೪॥

ವದನಾಂಭೋಜದೊಳುಣ್ಮಿತಾಗುಳಿಕೆ ಭೂಷಾನೀಕರತ್ನಾಂಶು ಕುಂ।
ದಿದುದಂಗಪ್ರಭೆಯುಂ ಮಸುಳ್ದುದು ಸಿಜೋತ್ತಂಸಪ್ರಸೂನಾದಿ ಬಾ ॥
ಡಿಮದುತ್ಪಾದದೊಳಾಯ್ತು ಕಾಯ್ಪಿನೆಸಕಂ ಷಣ್ಮಾಸವಾಯುಷ್ಯವೆಂ ।
ಬುದನಾವಂ ನೆಱೆ ಪೇೞಲಾವವರೊಳಾದಪ್ಪಷ್ಟದುಶ್ಚೇಷ್ಟೆಗಳ್ ॥೬೫॥
ಅದನಱಿದಿತ್ತು ತಮ್ಮಯ ಮನಂ ಸುರಲೋಕದ ಭೋಗಕಾಂಕ್ಷೆಯೊಳ್।
ಪುದಿಯೆದೆ ದೇವಕಾಂತೆಯರ ಭಾವಸುಖಪ್ರಕರಕ್ಕಮಾಸೆಗೆ ॥
ಯ್ಯದೆ ಪಿರಿದುಂ ಜರತ್ತೃಣದೆ ಕಪ್ಪಮದಾಗಿರೆ ಬಿಟ್ಟು ಪೂಂದ್ದರ ।
ಗ್ಗದ ಜಿನರಾಜಪೂಜೆಯನೆ ಸಮ್ಮದದಿಂದಱುದಿಂಗಳಿಪ್ಪಿನಂ ॥೬೦॥

ವ॥ ಇಂತು ಷಣ್ಮಾಸಾವಸಾನಂ ಬರಂ ಅರ್ಹತ್ಪದಪೂಜಾವಿಧಾನ ಮಾನಸರಪ್ಪವರಿರ್ವರುಂ ಸಿಜಾಯುರಂತರದೊಳ್ ಮಾನವಾಧಿಪತ್ಯಂ ಚಿತ್ತ ನೂನಪವನೂನಮುಭಘನಾಘನೋಪಮಾನಾಪಘನರಾಗಿ—

ಸಿರುಪನುಜಂಬೂದ್ವೀಪೋ ।
ದರ ಪೂರ್ವವಿದೇಹದಲ್ಲಿ ಸೀತಾನದಿ ಬಿ ॥
ತ್ತರಿಸಿರ್ಪುದದಱ ತೆಂಕಣ ।
ಧರೆಗೊಪ್ಪುವ ವತ್ಸಕಾವತೀಜನಪದದೊಳ್ ॥೬೧॥

ಅಸಿತಾಜೆಸುವುದು ಸಿಸವು ।
ಪ್ರಭಂಕರೀನಾಮನಗರಿಯಾನಗರೀವ ॥
ಲ್ಲಭನೆಸೆವಂ ಮಸುಮಾರ್ಗ ।
ಪ್ರಭಾವದಿಂ ಸ್ತಿಮಿತಸಾಗರಂ ಧರಣೀಶಂ ॥೬೨॥

ವ॥ ಅಸ್ತಿಮಿತಸಾಗರಧರಾವಲ್ಲಭೆಯರಪ್ಪ ವಸುಂಧರಾದೇವಿಗಮನುಮತೀದೇವಿಗಂ ಅಮಿತತೇಜಚರನಪ್ಪಾದಿತ್ಯಚೂಳಂ ಅಪರಾಜಿತನೆಂಬ ಕುಮಾರನಾದಂ; ಶ್ರೀವಿಜಯಚರನಪ್ಪ ಮಣಿಚೂಳನನಂತವೀರ್ಯಕು ಮಾರನಾದನಂತರ್ವರುಂ ನವಯೌವನಾರೂಢರಾಗಿ

ಬಡವಟ್ಟಂಗೆ ಮಹಾನಿಧಿದ್ವಯವೆಂ ಕೈಸಾರ್ದಂತೆ ಜೇೞ್ಪಿರ್ದಿಗಿ ।
ಕ್ಕಡೆಯೊಳ್ ಕಲ್ಪಕುಜಾಚಯಂ ಸಮನೆ[ಕೈ ಸಾರ್ದಂತೆಯಂ]ಧೞಗೆರ ॥

ಟ್ಟಿಡುಗಣ್ಗಳ್ ಪದೆಪಿಂದೆ ಸಂಗಳಿಸಿದಂತಶ್ರಾಂತಮುತ್ಸಾಹಮಿ ।
ರ್ಮಡಿಸುತ್ತಿರ್ಪಿನಮಿರ್ಪನೀಕ್ಷಿಸುತುಮಾಭೂಪೋತ್ತಮಂ ಪುತ್ರರಂ ॥ ೩೩

ವಿಜಯಶ್ರೀಯುತಮಪ್ಪ ಚಂಡಭುಜದಂಡದ್ವಂದ್ವವಾದಂತೆ ತ ।
ದ್ಭುಜದಂಡದ್ವಿತಯಕ್ಕೆ ತಿಗ್ಮತರವಾರಿವ್ವಂದ್ವವಾದಂತಣಂ ॥
ನಿಜರಾಜ್ಯಾರ್ಣವಪೂರದಿರ್ತಡಿಗೆ ಸೇತುವ್ವಂದ್ವವಾದಂತೆ ಭೂ ।
ಭುಜನಾನಂದಮನೆಯ್ದುವಂ ಸುತರ ಲೀಲಾಸ್ಯಾಂಬುಜಾಲೋಕದಿಂ ॥ ೩೪

ಸಕಲೇಂದುದ್ವಯಮಂ ನಿರೀಕ್ಷಿಸಿದ ಪಾರಾವಾರದಂತಾಕುಮಾ ।
ರಕರಂ ಕಣ್ಮಲರಾಶೆ ನೋಡಿ ನಲಿವಂ ಮೆಯ್ವೆರ್ಚುತುಂ ಹರ್ಷವಾ ॥
ರಿಕಣಾಲಂಬಕನಾಗಲಂಬಕಯುಗಂ ನೋಡಲ್ಕೆ ತಾಂ ವಾಸವಾ ।
ಧಿಕಸಂಪತ್ತಿ ಪೊದಟ್ಟು ಸಾರ್ವ ತೆಱದಿಂ ತಾನಿರ್ಪನಂತಾನೃಪಂ ॥ ೩೫

ಸಲೆ ಮಾತಂಗಸಮಾಜಸಂಗತಿಗೆ ಪೇಸುತ್ತಿರ್ಪುದಂ ದುರ್ವಿಪಾ ।
ವಿಲಕೇಷೋಗ್ರಫಣಾಗ್ರದೊಳ್ ನೆಸ ಭಯಂಬೆತ್ತಿರ್ಪುದಂ ಕಂಡಜಂ ।
ವಿಲಸದ್ಬ್ರಹ್ಮಸತಿ ಸೈತಿರಲ್ ಸಮೆದ ಸದ್ಮಂ ತಾನಿಱಿಂದಾನೃಪಂ ।
ನಲಿವಂ ನೋಡಿ ನಿಜಾತ್ಮಜಾತರ ಸಮುತ್ತುಂಗೋಗ್ರಬಾಹಾಗ್ರಮಂ ॥ ೩೬

ಇನ್ನರ್ತಾಮಾರುಮೆನ್ನನ್ವಯದೊಳಂದಯಿಸಿರ್ದರ್ವರಾಶೀರ್ಪರೆಂತುಂ ।
ಮುನ್ನಿಲ್ಲೀವಿಶ್ವವಿಶ್ವಂಭರೆಯನಪಿಡತಂ ತಮ್ಮ ಲೀಲಾತಪತ್ರ ॥
ಚ್ಛನ್ನಚ್ಛಾಯಾವಶಂ ಮಾಪ್ತಪ್ರತಿಬಲರುದಯಂಗೆಯ್ದರಾದನ್ಯನೆಂದಾ ।
ದನ್ನೋಲ್ಪಿಂ ಭೂವರಂ ಪುತ್ರರನತುಲಜಯಾಮಾತ್ರರಂ ಹರ್ಷನೇತ್ರಂ ॥ ೩೭

ಇನಿತೊಂದೊಪ್ಪುವ ರೂಪಮುಂ ವಿನಯಮುಂ ಸಾಮರ್ಥ್ಯಮುಂಸತ್ವಮುಂ ।
ಮನಮುಂ ಧೈರ್ಯಮುಮಾರ್ಯವೃತ್ತಿಯುಮನೂನಜ್ಞಾನಮುಂ
[ಮಾನಮುಂ ॥

ಮನುಜರ್ಗೆಲ್ಲಿಯದೆಂದು ನಂದನರ ವಕ್ತ್ರಾಬ್ಜಂಗಳಂ ನೋಡಿ ನೋ ।
ಡಿ ನಿತಾಂತಂ ತಳೆವಂ ನರೇಂದ್ರತಿಲಕಂ ಸಂತೋಷಮಂ ಸ್ವಾಂತದೊಳ್ ॥

ಎನಗೀದುರ್ವಹಮಪ್ಪ ರಾಜ್ಯಭರಮಂ ತಾಳ್ದಿರ್ಪುದೇಂ ಸಾಲ್ವುದೀ ।
ತನೆ ತಾಳಲ್ಕಪರಾಜಿತಂ ನೆಱೆವನೆಂದಾನಂದಮಂ ತಾಳ್ದಿ ಸಂ ॥
ದನಭಾಳಸ್ಥಲಮಂ ವಿಶಾಲವಿಲಸತ್ಪಟ್ಟೋನ್ನತಶ್ರೀಗೆ ನೆ ।
ಟ್ಟನೆ ಸತ್ಯಾಸ್ಪದಮಾಗಿಸಲ್ ಒಗೆದನಾಭೂಪೋತ್ತಮಂ ಜೆತ್ತದೊಳ್ ॥ ೩೮

ಎನಗೆಂತುಂ ದುರ್ವಹಮು ।
ಪುನೂನಸಾಮ್ರಾಜ್ಯಭರಮನಿದನವಚಹುಮೆಂ ॥
ದಿನಿತಾಗಿರೆ ತಳವತಿಬಳ ।
ರನುಪಮಿತರ್ ಪುತ್ರರಾದರಾಪವಜೈತ್ರರ್ ॥೮೦॥
ಸುತರತುಳಜಯಶ್ರೀಗಧಿ ।
ಪತಿಗಳ್ ತಾಮಾಗರಲ್ಕೆ ಸಾಮ್ರಾಜ್ಯಸುಖೋ ।
ನ್ನತಿಯೊಳ್ ತೊಹದರ್ಾಸಿರೆಯುಂ ।
ಕ್ಷಿತಿಸಿರೊಳಸ್ಮಿಂದೆ ಬಿಸುಟು ಕಪ್ಪರುವೊಳರೆ ॥೮೧॥
ಇನ್ನರ್ ಸುತರಾಗಿಯುಮಾ ।
ಸಿನ್ನೆವರಂ ರಾಜ್ಯಭೋಗದಳಿಪಿಂದದಿರ್ದ ।
ಬನ್ನಮು ಸಾಲದೆ ಭೂಗಿಸು ।
ವೆನ್ನಿರ್ವ್ರತಿಸುಖಮನೆಂದು ಬಗೆದಂ ಭೂಪಂ ॥೮೨॥
ತನಯರ್ ತಿಗ್ಮಕರಸ್ಪತಾಸಹಿಭಃ ತಾಮಿರ್ದರಿರ್ದಂತೆಯುಂ ।
ತನಗೀರಾಜ್ಯದ ಭೋಗಕಾಂಕ್ಷೆ ಬಿಡಮಿಲ್ಲಂ ಮುನ್ನಮಾರುಂಟು ನೋ ॥
ಡೆ ನರೇಂದ್ರರ್ಕಳೊಳಾಂದು ಕೂಡಿ ಪಡೆಗೆಯ್ದುಂ ಲೋಕಮಿನ್ನೆನ್ನನೆಂ ।
ದೆನುತುಂ ಸ್ವಾಂತದೊಳಾಂತನತ್ಯತುಳಲಚ್ಛಾಭಾರಮಂ ಭೂವರಂ ॥೮೩॥
ಅಣುಮಿಂ ತಾನಣುವಲ್ತೆ ರಾಜ್ಯಸುಖಮಾಸೌಖ್ಯಂ ಮಹಾದೋಷಕಾ ।
ರಣಮಾದೋಷವೆ ದುರ್ಗತಿಭ್ರಮಣಮೆಂದುಂ ಪಿಂಗದೆಂದಿಂತು ಧಾ ।
ರಿಣಿಯೊಳ್ ಸಾಹುವುದಲ್ತೆ ಜೈನವಚನಂ ತಾನೆಂದು ಭೂಪಂ ಜರ ।
ತ್ತ್ರಣದಿಂ ಕಪ್ಪಮದಾಗೆ ಕಲ್ಪಿಸಿದನಾಗಳ್ ಸಾಮ್ರಾಜ್ಯಸಾಮ್ರಾಜ್ಯಮಂ ॥೮೪॥
ಅತುಳತರರಾಜ್ಯದುರುಸುಖ ।
ಲತೆಯಂ ವೈರಾಗ್ಯಪವಿಶಲಾಕಾಹತಿಯೆಂ ॥
ದತಿಸಿರ್ಮೂಲಿಸಿದಂ ಕ್ಷಿತಿ ।
ಪತಿಯೆನೆ ನಿರ್ವೃತಿಸುಖೇಚ್ಛೆ ಯೀಸಚ್ಚರಿಯೋ ॥೮೫॥

ವ॥ ಇಂತು ನಿರತಮೊಂದಿರ್ದ ರಾಜ್ಯಭೋಗಾನುರಾಗಮಂ ಪತ್ತುವಿಡುವುದುಂ ತಥ್ಯಮಾಗಿ ಚಿತ್ತದೊಳ್ ಪರಿಕಲ್ಪಿಸುತಿರ್ಪಾಗಳ್ ಸುಖಪಿನಿವೇದಕಂ ಬಂದು_ದೇವ ವಿನ್ನಪಂ ; ಇಂದು ನಮ್ಮ ಪುರೋಪವನಕ್ಕೆ ವಿಜಯಂ

ಗೆಯ್ದಿರ್ದರ್ ಸ್ವಯಂಪ್ರಭನುನೀಂದ್ರರೆಂದು ಬಿನ್ನಯಿಸುವುದುಂ—ಮನೋ
ಭಿವಾಂಛಿತಫಲಂ ಪ್ರತ್ಯಕ್ಷಮಾದುದೆಂದು ಸ್ಮಿತಸಾಗರನರೇಂದ್ರಂ ನಿರುಪ
ಮಾನಂದಂಬೆರಸು ತಡೆಯದೆ ತದೀಯೋದ್ಯಾನಮನೆಯ್ದಿ—

ಜಿತರತಿಪತಿ ಸ್ವಯಂಪ್ರಭ ।
ಯತಿಪತಿಪದಕಮಲಯುಗಳವಿನ್ಯಾಸಮುಖ ॥
ಕ್ಷಿತಿಗನುರಾಗಮಸಿತ್ತಂ ।
ಕ್ಷಿತಿಪತಿ ನಿಜನುಕುಟಮಣಿಗಣಾರುಣಕೃಷ್ಣಿಯಿಂ ॥೪೬॥

ವ॥ ಇಂತು ವಿನಯವಿನಮಿತನಾಗಿರ್ದ ವಸುಧಾವಲ್ಲಭಂಗುಭಯ
ಭವನಹಿತಮುಸ್ಪ ಧನೋರ್ಜಪದೇಶಮಂ ಸ್ವಯಂಪ್ರಭಮುನೀಶ್ವರಂ ಪೇೞ್ದಿ
ಕೇಳ್ದು ತದೀಯವಚನರುಚಿನಿಚಿತಸ್ವಾಂತನಾಗಿ—

ಅಸುರಾಜಿತಂಗೆ ರಾಜ್ಯ ।
ಧಿಸಪದವಿಯಸಿತ್ತ ಸಂತವೀರ್ಯಂಗಾಗಳ್ ॥
ವಿಪುಳತರಯಶೋಪರಾಜ್ಯ ।
ಧಿಸಪನವಿಯನಿತ್ತನಜ್ಜಿಯಿಂ ನರನಾಥಂ ॥೪೭॥

ಸನ್ಮಹಿತಮುಹಮರೆಸಿಸಿ ।
ತನ್ಮನಿಸನ ಪಾರ್ಶ್ವದಲ್ಲಿ ಜಿನದೀಕ್ಷೆಯನು ॥
ದ್ಯನ್ಮದದಿಂ ತಳೆದಂ ಮುಂ
ಭೃನ್ಮಕುರಂ ಸ್ಮಿತಸಾಗರಕ್ಷಿತಿನಾಥಂ ॥೪೮॥

ನೆಹೆ ಮಾಣ್ದ ರಾಜ್ಯಮೋಹಮ ।
ನಹಿಂವಂ ಮಿಗೆ ತಾಳ್ದಿ ನಿರತಿಶಯದುರುತಪದೊಳ್ ॥
ತಹಿಸಂದಿರ್ಪತ್ತೆರಡುಂ ।
ತೆಹುದುಗ್ರಪರೀಷಹಂಗಳಂ ಸಲೆ ಗೆಲ್ದಂ ॥೪೯॥

ವ॥ ಅಂತಾನರೇಂದ್ರನುಗ್ರೋಗ್ರತಪದಿಂ ಪಲಕಾಲಮುಂ ಕಟಿಯು
ತೊಂದು ದಿವಸಂ ಗಗನಮಾರ್ಗದೊಳ್ ಪೋಗುತಿರ್ದ ಧರಣೀಂದ್ರವಿಭವವುಂ
ಕಂಡೀತಪದಿನೀಪದವಿಯಕ್ಕಂದು ಮನದೊಳ್ ನಿಧಾನಿಸಿ—

ಅಣುವೆನಿಪ ಫಣಿಪಪದವಿಗೆ ।
ಗಣಿಯಿಸಲರಿದೆನಿಪ ತಪಮನಿತ್ತಂ ಚಿಂತಾ ॥

ಮಣಿಯನಡೆಗಿತ್ತು ಗಾರ್ಜನ ।
ಮಣಗೊಂಡ ಮರುಳ್ಗೆ ಮುನಿವರಂ ದೊರೆಯಾದಂ ॥೯೦॥

ಚಿರತಪದೊಳಾಸ್ತಿಮಿತಸಾ ।
ಗರಧರಣೀಶಂ ನಿಜಾಯುರವಸಾನಂ ಸಾ ॥
ತ್ರ್ಯರೆ ಪತ್ತುವಿಟ್ಟು ತನುವಂ ।
ಧರಣೀಂದ್ರನ ಪದವಿಗಾತನಧಿಪತಿಯಾದಂ ॥೯೧॥

ವ॥ ಅನ್ನೆಗಮಿತ್ತಲ್---

ಮೂಜಗದೊಳ್ ತಮ್ಮಯ ಘನ ।
ತೇಜಂ ಪುದಿಯಲ್ಕೆ ರಾಜ್ಯವೈಭವದೊಳ್ ವಿ ॥
ಭ್ರಾಜಿಸಿತುಮಿರ್ದರಂತಪ ।
ರಾಜತನುವಾನತೀರ್ಯನುಂ ಸುಸ್ಥಿರದಿಂ ॥೯೨॥

ದಿವಿಜೇಂದ್ರವೈಭವದ ರುಂ ।
ದ್ರವಿಳಾಸಂ ಪುದಿದದೊಂದು ದಿನಮನುಪಮಿತೋ ॥
ತ್ಸವದಿನಪರಾಜಿತಾನಂ ।
ತವೀರ್ಯರುಂ ಲೀಲೆಯಿಂದಮಿರಲೋಲಗದೊಳ್ ॥೯೩॥

ವ॥ ಆಗಳ್ ಸಮಯಮಾಳ್ದು ಭಾರತಿಕರ್ ಕೇಳಿಸಲೆಂದು ಸಂಪ್ರದಾಯಮುಂ ಮೇಳವಿಸುವುದುಮಲ್ಲಿ ಮುದ್ಧುರರತಿಕಳಕಂಠನೆಂಬಾಗಾಯಕನಾಯಕಂ ಕವಿಮನಮಾಳ್ದು ಖಣ್ಕಾರವಮುಣ್ಮೆ ತಾಳಮುಂ ಪೊಯ್ದುಂ ಸಮನಾರಯ್ದು ಕೊಟ್ಟ ಶ್ರುತಿಯ ಹವಣಂ ತೊಟ್ಟು ಕೈಕೊಂಡೆಡಬಲನ ಬೇಹಣಗಾಣರ್ ಮಿನುಕೆಸೆವ ಮಿಸುನಿಯಂ ಸರಿಗೆದೆಗೆದಂತೆ ಮಳ್ದುಂಬಿಗಳ ನುಣ್ಬರಮಂ ಸೂಳಿಗೊಂಡಂತೆ ತಾರವಿಸುತಿರೆಯುಂ ರಾಗಸಾಗರನೆಂಬ ವಾಸುಕಾರಂ ಭಾಸುರತೆವಡೆದ ಬಾರಹೆಯೆಂಬ ವಾಸಮಂ ಕಳೆದುಕೊಂಡು ಪೊಳೆವದಱ ರಸಂಗಳಿಂ ಪುಟ್ಟುವ ನಾದಲಕ್ಷ್ಮಿಯ ಮಾರ್ಗವೇದಿಕೆಯೆನಿಸಿ ಕಣ್ಗೊಳಿಸಿ ಕಳೆಯ ಮಯಣಮಂ ನುಣ್ಪಾಗೆ ತಿದ್ದಿ ಪುಂಖಿಸಿ ಹೊಲ್ಲಣೆಯ ಶುದ್ಧಮಾಗಿ ಮುಹಚಾಳೆಯಮುಮಾಡಿ ರಾಗಸಮಾಜದ ಬೀಜಮೆನಿಪಾದಿಗ್ರಾಮರಾಗಿ ಚ್ಛಾಯೆಸುಚ್ಛವಿಯಿಂ ಪುದಿದು ತೋಱಿ ತದಂಗಸಂಭವಮಪ್ಪ ಸಮಯೋಚಿತರಾಗಮಂ ಸುವ್ಯಕ್ತಿವೆತ್ತು ನಿಡೆ ತೋರ್ಕೆಗೊಳಿಸುವುದುಂ ।

ಆಮುಖರಿಗಾಣಂ ಗದುರ್ಗದಾಜ್ಯಕ್ತಭಿನ್ನಭೀತ ಜರ್ಝರಶಿರೋದ್ಗತ ಮುಕು
ಳಿತ ಸ್ಥಾನಚ್ಯುತ ಕಂಪಿತವುದಂಘ್ರಿಪ್ಪಂಗಳಂಬ ದೋಷಂಗಳಂ ಪೊದ ದೆ
ತ್ರಿಸ್ಥಾನಶುದ್ಧಿಯೊಳಂ ಸಪ್ತಸ್ವರವ್ಯಾಪ್ತಿಯೊಳಂ ರಾಜಿಸುವ ರೀತಿಕ್ರಮ
ದೊಳಂ ವಿವಿಧತಾಳಂಗಳ ಪೆರ್ಮಣಿಯೊಳಂ ಸುಪ್ರವೀಣನೆನಿಸಿ ತಾಣಮುವ
ತಾಣಮೆನ್ನದೆತ್ತಿದ ಶ್ರುತಿಯನೊರ್ಮೆರಿಸಲೀಯದೆ ಮಾರ್ಗಮುಜ್ವಲಿಸಿ
ಮಂದ್ರಮಧ್ಯತಾರವೊಸೆಯೆ ಓಜೆ ರಾಜಿಸೆ ಠಾಯೆ ಠವಣೆಯೆ ರಾಗಂ
ರಂಜಿಸೆ ರಸಂ ತುಟುಂಕಾಣೆ ಪಾಡುತ್ತಿರೆಯುಂ । ಆನಿಚಿತ್ರವಾದನವಿದ್ಯಾ
ವಿಚಾರದನೆಂಬ ರೂಢಿಯಾವುದಿಗಂ ಕಣ್ಗೊಳಿಸ ಕಾಂತಿಯ ಸೊಂಪಿನಿಂ
ಶೋಭನವಡೆದಾವುದಮನಳವಳಿಸಿಕೊಂಡು ಪರಿಯುಕ್ತ ಕಳಂಕವೇಕಸ್ಥಿತಿ
ವಿರಹಿತನೆಂದು ಚಂದ್ರಮಂಡಳಮಂ ಪಟ್ಟಿವಂತೆ ಪೊಳೆವ ತೆಳುಪಿನುದ್ಧತೆಯ
ನೇಪ್ಪುವಡೆಯೆ ತೀಡಿ ತಂತ್ರಿಯಂ ಸುತಂತ್ರಿಯಂ ಮಾಡಿ ವಾಹಕರ ಪಾಣಿ
ಪಲ್ಲವದಿಂ ನೇತ್ರವಟ್ಟಿಯ ನೇಣನೊಯ್ಯನಿಪ್ಪೆ ತೆಗೆದು ಝಂಕಾರದ ಸುಸಿರಿ
ಕೆಯುಂ ನೋಡಿ ಸಂಚದೊಳ್ ಸುಸಂಚನೆನಿಸಿ ಕರಂಗಳ ಬಹುರೇಖೆಯ
ಚಾರಣೆಯ ಧಿಕ್ಕಣೆಯ ನೇವಣೆ ಬೊಲ್ಲಣೆಯ ಬೆಡಂಗು ಬಿತ್ತರಿಕೆಯಂ
ಬೀಱಿ ಬಾಜಿಸುತ್ತಿರೆಯುಂ ಅಗಂಭೀರಶಬ್ದದ ಪಿಭ್ರಮಾಡಂಬರದಿಂದ
ಚೋದನಾದನೆಂಬ ಮದ್ದಳಿಗಂ ಚಿತ್ರಸಮಯದ ಚೂತವನದಂತೆ ಪಲ್ಲವದ
ಪಾಂಗಿನೆವ ವಿಲಾಸಶೃಂಗಾರದಂತೆ ಕಣ್ಣಿಂ ವಿರಾಜಿಸುವಪಸವಿನಿಸಕದಿಭ
ವಂತೆ ಕಮಳಮುಖದಿಂ ಪರಿರಂಜಿಸುವ ಮದ್ದಳೆಯಂ ತೊಡೆಗೆ ತೊಡವಾನಿ
ಸಿಕೊಂಡು ಜಾತಿರಾಜನಂತೆ ಬಾಣಮುಂ ಕೊಂಡು ಕಣ್ಗಿಱಿದು ಪತ್ತಿಸಿ
ಯತಿಯಂತೆ ಗತಿಯಱಿದು ವ್ಯಾಕರಣದಂತೆ ಶಬ್ದಮಾರ್ಗಸಂಬಂಧಮ
ಱಿದು ಜಾತಿ ಜೋಕು ತುಡುಕು ವಪಣಿ ರಿಗ್ಗಣೆ ಮಲೆಪು ವಿಪ್ರಣೆ
ಕೌತುಕಳಿಕೊಳ್ತರಂಗಳಿಂ ಕೌತುಕದ ಬಾಜನೆಯೊಳಸಗಿದುವೆನಿಸಿ ಬಾಜಿ
ಸುತ್ತಿರೆಯುಂ । ಅಭಾರತಿ ಸಾತ್ವಿಕೆ ಕೈಶಿಕೆಯಾರಭಟಿಕೆಯೆನಿಸಿದ ಚತುರ್ವಿ
ಧ ನೃತ್ಯವಿದ್ಯಾವಿಚಾರದೆಯರಪ್ಪ ಬರ್ವರ ಜೆಳಂತಿಕೆಯರ್ ಪಂಚರತ್ನದಿಂದಂ
ಜಿತವಾದ ಕಂಚುಕಿಯರ್ ಸಕಲರತ್ನರಚನೆಯಿಂ ಸಲ್ಲಲಿತವಾದ ಚೆಲ್ಲಣದ
ಚಿತ್ರಿಸಿದ ಪತಾಕಾಂಚಲದಂತೆ ಪಲ್ಲವದ ಶೋಭೆಯುಂ ಪಳಚ್ಚನೆ ಮೆಱೆವ
ಬಾಲಗಚ್ಚೆಯ ಬೆಳ್ದಿಂಗಳಂ ಬೀದಿವರಿಯಿಸುವ ಪೊಸಮುತ್ತುಗಳ

ಮೊತ್ತದಿಂ ದೇಸೆವಡೆಯೆ ವಿರಜಿಸಿದ ಹಾರದ ಕೇಯೂರದ ಕರ್ಣಪೂರದ
ಕರವಲಯದ ಕರ್ಣಪತ್ರದ ಪಂಚಸರದ ಪಾಯವಟ್ಟದ ಮುಂಜೇರದ
ಮುದ್ರಿಕೆಯ ಮೂಕುತಿಯ ಮುಡಿಗಟ್ಟಿನ ದಂಡೆಯು ಮಂಡಿತವಾದ ಮಂಡ
ನದ ತಂಡದಿಂ ವಸಂತನೆಂಬೆಸೆದ ಕಮ್ಮಱಂ ಶಶಿಬಿಂಬ ಶಾಣದೊಳ್ ಮಸೆದು
ತಳಪೆತ್ತಿಸಿದ ಕುಸುಮಶರನ ಕೂರಸಿಯಿಂ ತೇರ್ಪೆಸಿದ ಮುತ್ತಿನ ಮುಗ್ಧೆ
ಯರುಂ ಮಲ್ಲಿಗೆಯ ಮಾನಿನಿಯರುಂ ಕರ್ಪೂರದ ಪುರಂಧ್ರಿಯರುಮೆನಿಸಿ
ನಿಂದಿರ್ದು ವಾದ್ಯದ ಗಡಾವಣೆಯ ಶಬ್ದಸಂಗತಿಗೆ ಸಮಯಗತಿಗಳಂ ಮೆಱಿ
ದು ಮಣಿವಿಡಿದ ಮಣಿಮಯ ತಾಂಡಪಟ್ಟವೋಸರಿಸೆಯಾಶಕ್ತಿಯಿಂ ಬಿಡದ
ಡರೆ ನೋಡುವ ರಾಜಲೋಕದ ಮನಮಲೆಸಲೆಂದು ಮನಸಿಜಂ ವಿಜಯ
ವೋಹನಶರಕ್ಕೆ ಕೆಯ್ಯನಿಕ್ಕೆ ಪ್ರಪಾಂಜಳಿಯನಿಕ್ಕಿ ನಿಂದ ನಿಲವಿನ ಸುರೇಖೆ
ನೃಪನ ಸಭೆಯ ಕಣ್ಗಳೊಳೆ ತೀವಿ ತೂಗಾಡಿಸುತ್ತಿರೆಯುಂ—

ಕರಣಂ ನೂಱಿಂಟು ನೂಱಿಂಟೆಸೆವ ನಿಲವು ಮೂವತ್ತೆರಲ್ಟಿರಿಮೂವ।
ತ್ತೆರಡೊಪ್ಪಿರ್ಪಂಗಹಾರಂ ಪೆಸರ್ವಡೆದ ಚತುಃಷಷ್ಟಿಹಸ್ತಪ್ರಸಿದ್ಧಾ ॥
ಸ್ತರಸಂ ಚತ್ತೀಸಭೇದಾಂಬುಕತತಿ ಪದಿವೂಱುಂ ಶಿರೋಭೇದಮಾಚಾ ।
ಮರಸಾಟಂ ರೂಢಿಯಿಂ ರಂಜಿಸೆ ಸೆಱಿಮೆಱಿದರ್ ನೃತ್ಯದೊಳ್ ಜೆತ್ರಮಾ
[ಗಲ್ ॥೯೪॥

ವ॥ ಇಂತು ಸಂಗಳಿಸಿದ ಸಂಗೀತಪ್ರಸಂಗಮಾಗಿರ್ದಾಪದದೊಳ್—

ಕರದ ಕಮಂಡಲಂ ಕಿಱಿಯ ಚಂಡಿಕೆ ಮಿಂಚುವ ಬೋೞಮಂಡೆ ಭೂತಾ।
ಸುರಮಣಿಕುಂಡಲಂ ಕೊರಲ ಜನ್ನಿವರಂ ಕೊಡೆ ದಂಡು ಕೋವಣಂ ॥
ಕರಮೆಸೆಯುತ್ತಿರಲ್ಕೆ ಗಗನಾಂಗಣದಿಂದಿಳಿತಂದನಿಂತು ಚೆ ।
ಚ್ಚರದೆ ನಿಜಾಂಗಕಾಂತಿ ಜಿತಶಾರದನೀರದನಪ್ಪ ನಾರದಂ ॥೯೫॥

ಉಗುತರ್ಪ ಮೆಯ್ವೆಳಗು ಕೆ ।
ಯ್ಮಿಗುತಿರೆ ಕಣ್ಗೊಳಿಸುತುಂ ಮಹೀವಲ್ಲಭನೋ ॥
ಲಗಮಂ ಲೀಲೆಯೊಳಾಗಳ್ ।
ಪ್ರಗುತಂದಂ ಬಂದು ನಾರದಂ ಸಭೆದಿಂದಂ ॥೯೬॥

ವ॥ ಆಗಳಿಂತೋಲಗದೊಳ್ ಬಂದು ನಿಂದಿರ್ದ ನಾರದನಂ ಬರ್ಬರ
ಚೆಲುವಾತಕಿಯರಿರ್ವರುಮವರಾನೃತ್ಯರಸವಿಶೇಷಾವಲೋಕಸಾಸಕ್ತಿಯಿಂ ದತ್ತ

ಚೆತ್ತರಾಗಿರ್ದಪರಾಜಿತಾನಂತವೀರ್ಯರ್ ತನ್ನಂ ಮನ್ನಿಸದಿರೆಯುಂ ವಿಷಾ
ದೋತ್ಪನ್ನಮಾನಸನಾಗಿ ಬೇಗದಿಂ ಪೊಱಮಟ್ಟುವಿಷಯಮಧ್ಯವರ್ತಿಯಪ್ಪ
ವಿಜಯಾರ್ಧಾಚಲಾಪತ್ಯಕದೊಳಿರ್ಪ ಸೀಮಂಧರಪುರಮನೆಯ್ದಿ—

ಪೊಳೆವೆಳಜೊಂಪದಂತೆಸೆವ ಮೆಯ್ವೆಳಗುಜ್ಜ್ವಲದಂತಕಾಂತಿ ಪ ।
ಜ್ಜಳಿಸುವ ಮಿಂಚನೇಱಿಪ ಕಮಂಡಲುವೊಪ್ಪುವ ದಂಡು ರತ್ನಕುಂ ॥
ಡಳಮುಪವೀತಸೂತ್ರತತಿ ಚಂಡಿಕೆ ನುಣ್ಗೊಡೆ ಕೋವಣಂ ಮನಂ ।
ಗೊಳೆ ಬರುತಿರ್ಪ ನಾರದನನೀಕ್ಷಿಸಿದಂ ದಮಿತಾರಿಖೇಚರಂ ॥೯೩॥

ಬರೆ ಕಂಡಿದಿರೆದ್ದಿತ್ಯಾ ।
ದರದಿಚ್ಛಾಕಾರಪೂರ್ವಕಂ ಸಮುಚಿತವಿ ॥
ಷ್ಟರದೊಳ್ ನಾರದನಂ ಕು ।
ಳ್ಳಿರಿಸಿದನತಿವಿನಯನಿಧಿ ವಿಯಚ್ಚರರಾಜಂ ॥೯೪॥

ದಮಿತಾರಿಶಕ್ತಿಯೆಸಗಿದ ।
ಸಮುಚಿತಮೆನಿಸಿರ್ದ ಮನ್ನಣೆಗೆ ನಾರದನಿಂ ॥
ತು ಮುದಂಬೆತ್ತನೆಸಲ್ ವಿನ ।
ಯಮೆ ಸಜ್ಜನತತಿಗೆ ಹರ್ಷಕಾರಣಮಲ್ತೇ ॥೯೫॥

ಇನ್ನೆಗಮೆಲ್ಲಿ ವಿಹಾರಿಸು ।
ತುನ್ನೀಮಿರ್ದಿರ್ ವಿನೋದದಿಂದೀಗಳಿದೇ ॥
ನೆನ್ನಲ್ಲಿಗೆ ಬಂದಿರೆನು ।
ತ್ತುನ್ನಾರದನಂ ವಿಯಚ್ಚರಂ ಪೆಸಗೊಂಡಂ ॥೯೬॥

ಹೃದಯದೊಳೊದವಿದ ಮುದಮದು ।
ಪ್ರದಿದೆನಸುಂ ಪೊಣ್ಮುತಿರ್ದುದೆನೆ ದಂತಮಯೂ ॥
ಖದ ಮಾಲೆ ನಿಮಿರುತಿರೆ ನಾ ।
ರದಮುನಿಪಂ ಖಚರಪತಿಗೆ ತಾನಿಂತೆಂದಂ ॥೯೭॥

ಪದೆಪಿಂ ಪೌರುಷದಿಂ ಪ್ರಚಂಡಬಲದಿಂ ನಿನ್ನನ್ನರಿನ್ನಾರುಮಿ ।
ಲ್ಲದರಿಂ ಭೂಮಿಯ ಭೂಪರೊಳ್ ಬಗೆವೊಡಂತಾಕಾರಣಂ ಬಂದೆವಿಂ ॥
ದು ದಿಟಂ ಕೇಳ್ ದಮಿತಾರಿ ನಿನ್ನಯ ಸಮೀಪಕ್ಕೀಗಳಾಶ್ಚರ್ಯಮ ।
ಪ್ಪುದನೊಂದಂ ನೆಱೆ ಕಂಡುದಂ ನಿನಗೆ ಪೇೞ್ವೆಂದು ಸಾನಂದದಿಂ ॥೯೮॥

ಅಧಮರೊಳಿರ್ದೊಡಂ ಮೆಱೆಯವಲ್ತೆ ಸುವಸ್ತುಗಳಾಸುವಸ್ತುಗ ।
ಳ್ಗಧಿಕರಧೀಶ್ವರರ್ ಬಗೆವೊಡಗ್ಗದ ಖೇಚರಭೂಚರರ್ಗಮಿ ॥
ನ್ನಧಿಕರದಾರ್ ನಿರೀಕ್ಷಿಪೊಡೆ ನೀನೆ ವೊಲಂ ದಮಿತಾರಿ ನಿನ್ನ ಸ ।
ನ್ನಿಧಿಯೊಳಿರಲ್ಕೆವೇಱ್ಪುದು ಜಗತ್ತ್ರಯದೊಳ್ ಪೆಸರ್ವೆತ್ತ ವಸ್ತುಗಳ್॥೧೦೩

ವ॥ ಅದೇನೆಂದೊಡಖಂಡಮಪ್ಪಯರ್ಮಾಖಂಡದ ವತ್ಸಕಾವತೀವಿಷ
ಯದ ಪ್ರಭಂಕರೀಪುರಿಯೊಳ್ ರಾಜನಾಮಧಾರಕರಪ್ಪಪರಾಜಿತಾನಂತವೀ
ರ್ಯರಿರ್ವರವರಲ್ಲಿ ನೃತ್ಯಭಾವದಿಂ ಜಂಭಾರಿಯ ರಂಭೆಗೆ ನೂರ್ಮಡಿ
ಮೇಲಪ್ಪ ಮಾಧುರ್ಯಗೇಯದಿಂ ತುಂಬುರಂಗೆ ಸಾಸಿರ್ಮಡಿ ಮಿಗಿಲಪ್ಪ
ಬರ್ಬರಚಿಲಾತಕೆಯರೆಂಬಿರ್ವರ್ ನರ್ತಕಿಯರಿರ್ದರವರ್ ನಿನ್ನರಮನೆಗೆ
ತಕ್ಕರವರಿರಲ್ಕ ರಾಜ್ಯಪೂಜ್ಯಮಿಲ್ಲದೊಡಪೂಜ್ಯಮೆಂದು ನಾರದಂ ಪೇೞೆ
ದಮಿತಾರಿ ಕೇೞ್ದು ಮನದೆಗೊಂಡು—

ತರಿಸುವೆನಾನರ್ತಕಿಯರ ।
ನಿರದೀಗಳೆನುತ್ತುಮಿಂತು ದಮಿತಾರಿ ಸಿಜಾಂ ॥
ತರದೊಳ್ ನೆನೆದಂ ಕಾಯರ್ಮಾ ।
ತುರನಱಿಗುಮೆ ಹಾನಿವೃದ್ಧಿಗಳ ಭಂಗಿಗಳಂ ॥೧೦೪॥

ತರವೇೞ್ದಿಟ್ಟದನಲ್ತೆ ನರ್ತಕಿಯರಂ ವಿದ್ಯಾಧರಂ ತತ್ಪ್ರಭಂ ।
ಕರಿಗಾಹಿತ್ಯವಚೋವಿದಂ ವಿನಯಶೀಲಂ ಸ್ವಾಮಿಕಾರ್ಯಕ್ರಿಯಾ ॥
ತುರನವ್ಯಗ್ರಮನಸ್ಕಿ ಸತ್ಯನಿಧಿ ನಾನಾದೇಶಭಾಷಾವಿದಂ ।
ವರವಂಶೋದ್ಭವನೆಂದೆನಿಪ್ಪಮಿತನಾಮಖ್ಯಾತನಂ ದೂತನಂ ॥೧೦೫॥

ರಯದಿಂದುಯ್ದಿರೆ ದಮಿತಾ ।
ರಿಯೆ ಚೇತೋಜನಿತೆಯೆನಿಸಿದತ್ಯಗ್ರಹದೂ ॥
ತಿಯೆನಲ್ಕಮಿತಚರಂ ಱುಡಿ ।
ತಿಯೊಳೆಯ್ದಿದನಾಪ್ರಭಂಕರೀಪುರಮನದಂ ॥೧೦೬॥

ವ॥ ಆಗಳಿಂತು ಪುರಮಂ ಪೊಕ್ಕು ನೃಪಾಗಾರದ್ವಾರದೊಳ್ ನಿಱು
ಮಿತದೂತಂಗೆ ಮದೀಯಾಗಮನಮಂ ತ್ವದೀಯಭೂವರಂಗಱಿಪೆಂದು
ಪೇೞಿ ದೌವಾರಿಕಂ ಕೇೞ್ದು—

ಸಾರೆವರುತ್ತೆ ಕೆಯ್ಯನಿಡು ಕಕ್ಷನಿವೇಶಿತವೇತ್ರನಾದ ದೌ ।
ವಾರಿಕನೊಯ್ಯನೋಸರಿಸಿ ಸಾರ್ದಪರಾಜಿತರಾಜವೃಂದವೈ ॥
ದಾರಕ ನಿಮ್ಮ ಸಾಗ್ರು ದಮಿತಾರಿವಿಯಚ್ಚರನಟ್ಟಿದಾಚರಂ ।
ದ್ವಾರದೊಳರ್ದನೆಂದಱಪೆ ಬಿನ್ನವಿಸುತ್ತಿರೆ ತತ್ಪ್ರಪಂಚಮುಂ ॥೧೦೬॥

ವ॥ ಅದಂ ಕೇಳ್ದಾಗಳ್—

ಅಮಿತಾಹ್ವಯದೂತಂ ಬರೆ ।
ಸಮುಜಿತವಿಪ್ಪರಮನೀಯೆ ಕುಳ್ಳಿರ್ದವನಾ ॥
ದಮಿತಾರಿಶಕ್ತಿ ಪಚರೋ ।
ತ್ತಮನಟ್ಟಿದ ತೆಱನನಱಪಲುದ್ಯತನಾದಂ ॥೧೦೮॥

ವಿನತಾನೇಕನೃಪಾಲಜಾಲಮಕುಟಾಗ್ರವ್ಯಕ್ತಮುಕ್ತಾಂಶುಚಂ ।
ದನಚರ್ಚಾಂಚಿತಪಾದಪೀಠನತುಳಾಜ್ಞಾವಲ್ಲರೀವೇಲ್ಲಿತಾ ॥
ವನಿಚಕ್ರಂ ಘನಗರ್ವಿತಾರಿನರನಾಥೋಚ್ಚಂಡದೋರ್ದಂಡಪಂ ।
ಡನಶೌಂಡಂ ದಮಿತಾರಿಖೇಚರವರಂ ಮತ್ಸ್ವಾಮಿ ವಿಭ್ರಾಜಿಪಂ ॥೧೦೯॥

ಮದಧೀಶಂ ದಮಿತಾರಿಖೇಚರವರಂ ತಾನಟ್ಟಿದಂ ನಿಮ್ಮ ಸಾ ।
ರೆ ದಿಟಂ ಕೋಕಿಲನಾದಸಂಪದೆಯರುದ್ಯನ್ನೃತ್ಯವಿದ್ಯಾವಿಶಾ ॥
ರದೆಯರ್ ಬರ್ಬರೆಯುಂ ಜೆಲಾತೆಯುಮೆನಿಪ್ಪೀಯಿರ್ವರುಂಟೆಂದು ನಾ ।
ರದನೆಯ್ತಂದಱಪಲ್ಕೆ ಕೇಳ್ದವರನೀಗಳ್ ಬೇಡಿ ಸಂಪ್ರೀತಿಯಿಂ ॥೧೧೦॥

ಪ್ರಿಯದಿಂ ಬೇಡಿದುದಂ ನಿ ।
ಮ್ಮಯ ಜನಕಂ ಸ್ತಿಮಿತಸಾಗರಂ ಕೊಟ್ಟು ಸುಖೋ ॥
ದಯದಿಂದಿರ್ದಂ ದಮಿತಾ ।
ರಿಯ ಕೂರ್ಮೆಯ ಪೆರ್ಮೆ ನಡೆದು ರಾಜ್ಯಸ್ಥಿತಿಯೊಳ್ ॥೧೧೧॥

ಅದಱಿಂ ನಿಮ್ಮಯ ತಾತನಂತಿರೆ ದಿಟಂ ನೀಮುಂ ಮಧೀಶಂಗೆ ಬೇ ।
ಡಿದುದಂ ಕೊಟ್ಟನುಬಂಧಮಂ ನೆಗಟ್ಟು ಯುಷ್ಮದ್ರಾಜ್ಯಲಕ್ಷ್ಮೀವಿಲಾ ॥
ಸದ ಪೆರ್ಚಂ ಪರಿಯಿಪ್ಪುದಲ್ತೆ ದಮಿತಾರಿ ಸ್ವಾಂತದೊಳ್ ಕೂರ್ತೊಡ ।
ಭ್ಯುದಯಂ ಕೋಪಮನಾಂತೊಡೆಲ್ಲಿಯದು ತಾನೈಶ್ವರ್ಯಮುಂ

[ಸ್ಥೈರ್ಯಮುಂ ॥೧೧೨॥

ಅವನೀಚಕ್ರದೊಳುಳ್ಳ ಭೂರಮಣಚಕ್ರಂ ಬಿಂಕಮಂ ಬಿಟ್ಟುವಿ ।
ಟ್ಟ ವೆಸಂಗೆಯ್ವುದು ಪುಟ್ಟ ಜೀವಿಸುವುದಿಚ್ಛಾಮಾತ್ರಪೂಗಿರ್ಪುದಿತ ॥
ವ ವಿಜಿತ್ರಂ ಪೆಸರ್ಗೊಂಡ ವಸ್ತುತತಿಯಂ ಕೊಟ್ಟಟ್ಟುವರ್ ದಿಕ್ಪರು ।
ತ್ಸವದಿಂದಂ ದಮಿತಾರಿಗೆಂದೊಡೆ ಪೊಡರ್ಪಿಂ ದರ್ಪದಿಂದಿರ್ಪರಾರ್ ॥೧೧೩॥

ವ॥ ಇಂತು ನುಡಿದಮಿತದೂತನ ಚೇತೋಜ್ಜ್ವಜಾತನೂತ್ನನುತಿ ಪ್ರ
ಕಟಪಟುರವೋತ್ಕಟಪಾತದಿಂದಸಂತವೀರ್ಯಯುವರಾಜನಪ್ಪ ಮೇರುವಿನ
ಹೃದ್ಗುಹಾಂತರಾಳಪ್ರಸುಪ್ತಕೋಪಕಂಠೀರವಂ ಚೆಚ್ಚರದಿನೆಚ್ಚತ್ತಾಗಳ್

ತ್ರಪತಾಕಂ ನಿಟಿಲಾಗ್ರದೊಳ್ ನೆಗೆಯೆ ಕಣ್ಗಂ ಪುರ್ವೆ ಕೊವ್ವೇಟಿಪ
ಕ್ಷ್ಮಪುಟಂ ಬಿರ್ಚೆ ಬೆಮರ್ವೊಗಕ್ಕೊಗೆಯೆ ನಾಸಾಗ್ರಂ ಸಮುಜ್ಜೃಂಭಮಾ
ಗೆ ಪೊದಟ್ಟುದ್ದಷ್ಣತೆ ಸುಯ್ಯೊಳಪ್ಪೆ ಕೊರಲೊಳ್ ಕಂಠಸ್ವರಂ ಪೊಣ್ಮಲಿಂ ।
ತು ಪಯೋಜಾಕ್ಷನನಂತವೀರ್ಯನುರುಕೋಪಾಟೋಪಮಂ ತಾಳ್ದಿದಂ ॥

ಇನಿತನಿದೇಕೆ ನೀಂ ಗಳಪ್ರತಿರ್ದಪೆ ಪಿತ್ತನ ವಾಸವಾತಿಮು ।
ತ್ತನ ತೆಱದಿಂದೆ ನಿನ್ನೊಡೆಯನಗ್ಗದ ಬಲ್ಪನದಿರ್ಕೆ ಪೋಗು ಸು ॥
ಮ್ಮನೆ ನಡೆತರ್ಪೆವೀಕ್ಷಣದೊಳಾದಮಿತಾರಿಕಬಂಧದೊಂದು ನ ।
ರ್ತನನುನೆ ನೋಡಿ ನರ್ತಕಿಯರಂ ಪದೆದಿತ್ತ ಪೆವಾಜಿರಂಗದೊಳ್ ॥೧೧೪॥

ಪೆಱತೇನಾವೇಱ್ಪಿಂದಪೆ ।
ವಱಿಕೆಯ ನಿನ್ನೊಡೆಯನಿರ್ಪ ಶಿವಮಂದಿರಮಂ ॥
ನೆಱಿ ಶಿವಮಂದಿರಮಾಯ್ತೆನೆ ।
ಕಱುತ್ತು ಸಲೆ ಮಾಱಿಪ್ಪಿವೀಜಗಂ ಪೊಗಟ್ಪಿನೆಗಂ ॥೧೧೫॥

ಅವಿಜಯಾರ್ಧಪರ್ವತದಪತ್ಯಕದೊಳ್ ಮೃಗದೆಂತೆ ಸೈತು ತಾ ।
ನಾವಗಮಿರ್ದೊಡಿರ್ಕೆ ದಮಿತಾರಿಯದಲ್ಲದೆ ಸೊಕ್ಕುಮಿಕ್ಕು ಮ ॥
ತ್ತಾವುದಿರಲ್ಕೆ ತತ್ಕುವರಮೆಂ ಹುಡಿಗುಟ್ಟುವೆನುಯ್ದು ತನ್ನ ಗೋ ।
ತ್ರಾವಳಿಯುಕ್ತಮಾಗಿ ನೆಱಿ ತೂಂತುವೆನಂತೆಕನಾಸ್ಯರಂಧ್ರದೊಳ್ ॥೧೧೬॥

ವ॥ ಇಂತು ನುಡಿದು ಕಡುಮುಳಿಸಂ ತಳೆದು ತಾನಮಿತದೂತನಂ
ಗಜಱಿ ಗರ್ಜಿಸಿ ಗದ್ದುಗೆವೊಯ್ದನಂತವೀರ್ಯಯುವರಾಜನನಪರಾಜಿತ
ಸುಪ್ತಾರಾಜಂ ನಿಜಭೂಪಲ್ಲವಾದೇಶದಿಂ ವ್ಯಪೆಗತಕೋಪನಂ ಮಾಡಿ—

ಅಗ್ರಜನಾಜ್ಞೆಮಾತ್ರದೊ ।
ಳುಗ್ರತೆಯುಂ ಬಿಸುಟನಂತವೀರ್ಯಂ ಶಾಂತೋ ॥
ದಗ್ರಮನನಾದನೆನೆ ವಿನ ।
ಯಾಗ್ರಣಿ ವನಜಾಕ್ಷನಂತದನ್ಯನದಾವಂ ॥೧೧೪॥

ಅನತಾರಾತಿಯ ಮೂಲವರ್ಗಮನೆ ಭೇದಂ ಮಾಟ್ಪು ವಕ್ರೋಕ್ತಿಯಿಂ।
ದೆನಸುಂ ವಿಕ್ರಮದುರ್ಕನೇಱಪ ನಿಜಸ್ವಾಮಿಪ್ರತಾಪಪ್ರಭಾ ॥
ವನೆಯಂ ಮಾಟ್ಪನಿತುಂ ವಿಚಾರಿಪೊಡೆ ಮಾತಂ ನೀತಿಗೌಚಿತ್ಯಮಾ ।
ತನ ವಾಗ್ವೃತ್ತಿಗನಂತವೀರ್ಯ ಪಿರಿದುಂ ನೀಂ ಕ್ರೋಧಮಂ ಮಾಱ್ಪುದೇ॥

ವ॥ ಎಂದಿಂತು ದೂತಲಕ್ಷಣಮಂ ಪೇೞ್ದು ನಿಜಾನುಜನಪ್ಪನಂತವೀರ್ಯನ ಮನಮಂ ಸಂತವಿಟ್ಟು ಸ್ವಭಾವದಿಂ ಗಂಭೀರಪ್ರಭಾವನಪ್ಪುದಱಿಂದಪರಾಜಿತಮಹಾರಾಜನಮಿತಚರನ ಮೊಗಮಂ ನೋಡಿ—

ಅಪರಾಜಿತನೃಪತಿ ಗಭೀ ।
ರಪಯೋನಿಧಿ ರಾಜನೀತಿನಿಪುಣಂ ವಿನಯೋ ॥
ಕ್ತಿಪರಂ ತಡೆಯದೆ ತಾಂಬೂ ।
ಲಪ್ರರಸ್ಸರಮಮಿತದೂತನಂ ಮನ್ನಿಸಿದಂ ॥೧೧೦॥

ವ॥ ಆಗಳಿಂತು ಮನ್ನಿಸಿ ಬೇಗದಿಂದಮಿತದೂತನಂ ಬೀಡಾರಕ್ಕೆ ಬೀೞ್ಕೊಟ್ಟು ರೂಢಿವೆತ್ತ ನಿಜಾನ್ವಯಾಗತಪರಮಪ್ರಧಾನರ್ವೆರಸು ವಿಕ್ರಾಂತನಿವಾಸಮಂ ಪೊಕ್ಕು ಲೋಚನಮನೊಡರ್ಚಿ ನರನಾಥನಿಂತೆಂದಂ:—

ಅನಾದರದಿಂದಾಯ್ತನಿ ।
ತಾನುಂ ನರ್ತಕಿಯರೆತ್ತ ದಮಿತಾರಿಗೆ ಮ ॥
ತ್ತೀನೆಂಬೆವಿದರ್ಕೆಂದು ಮ ।
ಹೀನಾಥಂ ಸಚಿವನಿಚಯಮಂ ಬೆಸಗೊಂಡಂ ॥೧೧೧॥

ವ॥ ಇಂತು ಬೆಸಗೊಳ್ವುದುಮವರ್ ವಿನ್ನಪಮೆಂದರ್:—

ದೇವರವಧರಿಸುವುದು ಪರಿ ।
ಭಾವಿಸೆ ದಮಿತಾರಿಖೇಚರೇಂದ್ರನ ಕಾಯ್ಪಿಂ ॥
ಗಾವನುಮಿದಿರಪ್ಪವನ ।
ಲ್ಲೀವಸುಧೆಯೊಳಾದೊಡೇನವಂ ನಿಮಗೆಣೆಯೆ ॥೧೧೨॥

ಮತ್ತಂ ದೇವರಿದಂ ಸಲೆ ।
ಚಿತ್ತೈಸುವುದೀಗಳಾತನೈಸಿರಿಯಿಂದು ।
ನ್ಮತ್ತಂ ದೋರ್ವಲದಿಂದು ।
ದ್ವೃತ್ತಂ ದಮಿತಾರಿ ನೋಡೆ ದಮಿತಾರಿಬಲಂ ॥೧೦೩॥

ಪೂನಿನೊಳಾದೊಡಂ ಮಱೆದು ಕ್ರೋಕ್ರುಳಿಗೆಯ್ವುದು ಬುದ್ಧಿಯಲ್ತು ಶಾ ।
ರ್ದೂವಿಲನಪ್ಪನುಂ ಹಗೆಯನೊಳ್ವಗೆಯಿಂ ಸಲೆ ಗೆಲ್ವುದುತ್ತಮಂ ॥
ದೇವ ಮಹೋಗ್ರವೈರಿಯನೆ ಭೇದಿಸಿ ಕೊಲ್ವುದು ಕಾರ್ಯಮಂತಱಿಂ
ನಾವಿರವಟ್ಟ ನರ್ತಕಿಯಿರಿಂದೊಳಗಂ ತಿಳಿವಂ ವಿರೋಧಿಯಾ ॥೧೦೪॥

ನಿರುಪಮವಿವೇಕಮಿಲ್ಲದ ।
ಪುರುಷಂ ಕೇಸರಿಯ ತೆಱದಿನಱಿಗುಂ ಪೆಸರ್ತೇಂ ।
ಪಿರಿದುಂ ನೃಪನೀತಿಗಳೊಳ್ ।
ಪರಿಣತನಾಗಲ್ಕೆವೇಱ್ಕುಮೆಂತುಮಿಳೀಶರ್ ॥೧೦೫॥

ಪದೆಪಿಂ ನೆಗಱ್ವುದು ಭೂವರ ।
ನುದಗ್ರಸಾಮರ್ಥ್ಯಮುಳ್ಳೊಡಂ ಸಾಮಮನ ॥
ಗ್ಗದ ಭೇದಮನೇಕದುಪ ।
ಪ್ರದಾನಮಂ ಬಱಿಕೆ ದಂಡಮಂ ರಿಪುನೃಪರೊಳ್ ॥೧೦೬॥

ಅನುವಶನಾಗಿಯೆ ಕೊಲ್ವುದು ।
ಘನದೋರ್ವಳಮಾಂತ ವೈರಿಭೂಮಿಶನನೆಂ ॥
ತ್ತನೆ ಗಾಳವಾಮಿಷಂಬೆರ ।
ಸನುನಯದಿಂ ಪೊಕ್ಕು ಕೊಲ್ಲದೇ ಪೆರ್ಮಾನಂ ॥೧೦೭॥

ಆದಮಿತಾರಿ ಮಹಾಬಲ ।
ನಾದೊಡಮೇನಾತನಾತ್ಮಬಲದ ಪೊಡರ್ಪಂ ॥
ಭೇದಿಸಿ ಗೆಲ್ವುದೆ ಮಂತ್ರಂ ।
ಕಾದಿ ಜಯಂಬಡೆವೆನೆಂಬುದದು ದುರ್ಮಂತ್ರಂ ॥೧೦೮॥

ಪ್ರಿಯದೊದವಿಂದಮಾತನಭಿವಾಂಛಿಸಿ ಬೇಡಿದ ವಸ್ತು ನರ್ತಕೀ ।
ದ್ವಯವೆಂ ವೊಲಂ ತದೀಯಯುಗಮುಂ ಕಳಪುತ್ತಿರೆ ಮಂತ್ರಭಾಗೆಯೊಳ್ ॥

ನಯಮಿದು ನೋಟಿಪ್ಪುಡಲ್ಲದೀಟಿಕೆಯ್ದಿರೆಯುಂ ದಮಿತಾರಿ ನೋಡೆ ದು ।
ರ್ಜಯನವನಾರ್ಗವಿವಾಜಗದ ಮಾನವಚೇಚರದಾನವರ್ಕಳೊಳ್ ॥೧೮॥

ಬಳವಂತನಾದೊಡಂ ತಾ ।
ನೀಟಿಕೆಯ್ಯಲ್ವೇಡ ರಿಪುವನಾತನಭೀಷ್ಟಂ ॥
ಗಳನೀವ್ರುಮ ನಯಮುಂ ನೆಱಿ ।
ಬಳೆಯಿಸುವುದು ಬಗೆಯೊಳಿಂತು ಗೆಲ್ವುದು ಪಗೆಯಂ ॥೧೯॥

ವ॥ ಮಂತ್ರಮದುಕಾರಣಂ ಸಮುಪಾತ್ತಸಕಲವಿದ್ಯಾಬಳನುಂ ಸಮು
ಗ್ರತರಷಡಂಗಬಲನುಂ ಸಮುದಗ್ರದೈವಬಲನುಮಪ್ಪ ದಮಿತಾರಿಯನನುವ
ಶವೃತ್ತಿಯಿಂ ಗೆಲ್ವುದು ಮಂತ್ರಮೆಂದು ಬಿನ್ನಯಿಸಿದ ಸಚಿವನಿಚಯವಚನ
ಮನಪರಾಜಿತಾನಂತವೀರ್ಯರನಿಷ್ಟಾಕರ್ಣನಕರ್ಣದ್ವಂದ್ವರಾಗಿ—

ಆದಮಿತಾರಿಯಂ ಜಯಿಸುವಂತುಟೆ ನಿಮ್ಮಯ ವಾಕ್ಪ್ರಗಲ್ಭಮಂ ।
ತಾದೊಡಮೇನವಂಗಗಿದು ನರ್ತಕಿಯರ್ಕಳನಿತ್ತರೆಂದೆಸಲ್ ॥
ಪೋದಭಿಮಾನಮಿಂ ಮಗುಳೆ ಬರ್ಪ್ರದೆ ಸಾಲ್ವುದು ಮಾನಹಾನಿಯಿಂ ।
ದಾದ ಬರ್ದುಂಕದೇವುದೆನುತುಂ ಸಲೆ ಸಂಕಡಿಗೊಂಡರಾನೃಪರ್ ॥

ವ॥ ಇಂತು ನುಡಿದ ನಿಜಾಧಿನಾಥರ ವಚನಕ್ಕೆ ಸಚಿವರಿಂತೆಂದರ್:—

ಕಳಪುವುದಾನರ್ತಕಿಯರ ।
ಬೞಿಯೊಳ್ ಪ್ರತಿಧಿಗಳನವರ ಮುಖದಿಂದೊಳಗಂ ॥
ತಿಳಿವುದು ತಿಳಿದು ಬೞಿಕ್ಕಂ ।
ಗೞಿಲೆನೆ ನೆಗೞ್ವುದು ವಿರೋಧಿಜಯದುರ್ಜಯಮುಂ ॥೨೦॥

ವ॥ ಅಮಂತ್ರಿಗಳಿಂತು ನುಡಿದ ವಚನಮನದಕ್ಕೇಱಿಸದಾಗಳವರ್ಗೆ
ಬೀಟಿಕ್ಕೊಟ್ಟು ದುರಂತಚಿಂತಾವಿಷಣ್ಣಮಾನಸರಾಗಿರೆಯುಮಾಪದದೊಳ್ ತ
ನ್ನ ಮುನ್ನಿನ ಜನ್ಮೋಪಾರ್ಜಿತವಿದ್ಯೆಗಳುಮಪ್ಪ ವಿದ್ಯಾದೇವತೆಗಳನಿತುಂ
ಮುಂದೆ ನಿಂದು ಬೆಸಸು ಬೆಸಸೆನುತ್ತಿರೆ ಕಂಡು—

ನೀವಾರ್ಗೆ ಪೇೞಿಮೆನೆ ನೃಪ ।
ನಾವಿನಿತುಂ ದೇವ ನಿಮ್ಮುಪಾರ್ಜಿತವಿದ್ಯಾ ॥
ದೇವತೆಗಳಮಿತತೇಜಮ ।
ಹೀಪರನಾದಪಮಿನವರ್ಗಳೆದೆಸಲಾಗಳ್ ॥೨೧॥

ಅನಿತಂ ಕೇಳ್ದಪರಾಜಿತ ।
ಜನನಾಥಂ ತನ್ನ ಸನ್ನುತಾಗಣ್ಯಪುರಾ ॥
ತನಪುಣ್ಯಫಲದ ಪೆಂಪಿಂ ।
ಗೆನಿತಾನುಂ ಮುದಮನೆಯ್ದಿದಂ ತತ್ಪದದೊಳ್ ॥೧೩೪॥

ಆವ ಬೆಸನಾದೊಡಂ ಕುಡು ।
ದೇವ ದಿಟಂ ಮಾಟ್ಪಿವೀಗಳೆನುತಿರೆ ವಿದ್ಯಾ ॥
ದೇವತೆಗಳವರ ಕಳಕಳ ।
ರಾವಂ ಮೆಚ್ಚಲ್ಕೆ ಪೆರ್ಚಿದಂ ನರನಾಥಂ ॥೧೩೫॥

ವ॥ ಆಗಳಾಸಕಲವಿದ್ಯಾದೇವತಾವಳೀನಿಜಾಧಿನಾಥತ್ವಮನವನೀನಾಥನಪ್ಪುಕೆಯ್ದು

ಪರಿಲಬ್ಧೋತ್ಸವಚಿತ್ತರಾಗಿ ಪಿರಿದುಂ ಪೂರ್ವಾರ್ಜಿತಾಗಣ್ಯಪು ।
ಣ್ಯರವೂದೂತಿಯೆ ದುರ್ಧರಂ ಸಮನಿಸಿರ್ದಿಪ್ಪೋಲ್ತಱಿಲೊಳ್ ತಂದಳ್ ॥
ಚ್ಚರಿವೆತ್ತಗ್ಗದ ಸರ್ವವಿದ್ಯೆಗಳನಿಂತೀವೇಗದಿಂ ಪೋಗಿ ಸಂ ।
ಗರದೊಳ್ ತೂಟ್ಪುವೆನಾವಿರೋಧಿಯನೆನುತ್ತುರ್ವೀಶನಂತುರ್ವಿದಂ॥೧೩೬॥

ವ॥ ಆಗಳ್ ದಮಿತಾರಿಗೆ ಮಾರಿಯಪ್ಪ ಸಕಲವಿದ್ಯೆಗಳೆಯ್ತಂದುದರ್ಕೆ ಆನಂದಕಂದಳಿತಚಿತ್ತಾರವಿಂದರಾಗಿ ರಾಗದೊಳಪರಾಜಿತಾನಂತವೀರ್ಯರೇಕಾಂತಮಂದಿರಮುಂ ಪೊಸಮಟ್ಟು ನಿಜಸೈನಿವಾಸವಾಸಿಗಳಾಗಿ—

ದಮಿತಾರಿಶ್ರೀವಧೂಟೀಹರಣಕರಣವಿದ್ಯಾವಳೀಹೃದ್ಯಲಬ್ಧ ।
ಪ್ರಮುದಂ ಪುಣ್ಯಪ್ರಬೋಧೋದಯನಪಗತದೋಷಂ ಜಯಶ್ರೀಸಮಾಕೀ ॥
ರ್ಣಮಹಾದೋರ್ದಂಡಕಾಂಡಂ ಶ್ರಿಭುವನಭವನವ್ಯಾಹೃತೋದ್ಯದ್ಯಶಶ್ರೀ ।
ರಮಣಂ ತಾನಿರ್ದನಿಂತಪ್ರತಿಹತಮಹಿಮಂ ಸೂಕ್ತಿಸಂದರ್ಭಗರ್ಭಂ ॥

ಗದ್ಯ ॥ ಇದು ವಿನಮದಮರೇಂದ್ರಮೌಳಿಮಣಿಕಿರಣಮಾಳಾಪರಾಗಪರಿರಂಜಿತ ಚರಣಸರಸೀರುಹರಾಜಿತಪರಮಜಿನರಾಜಸಮಯ ಸಮುದಿತಸದಮಲಾಗಮಸುಧಾಶರಧಿಶರದಿಂದು ಶ್ರೀಮಾಘಣಂದಿಪಂಡಿತಮುನೀಶ್ವರ ಮನೋಜನಿತನಿರುಪಮದಯಾರಸಸರಸೀಸಂಭೂತಸಂಭವಾಮಳ ಸುಕವಿಕಮಲಭವವಿರಚಿತಮಪ್ಪ

ಶಾಂತೀಶ್ವರ ಪುರಾಣದೊಳ್

ಅಪರಾಜಿತಾನಂತವೀರ್ಯಪ್ರಾಜ್ಯರಾಜ್ಯಲಕ್ಷ್ಮೀವಿಲಾಸವರ್ಣನಂ

ಸಪ್ತಮಾಶ್ವಾಸಂ ಸಂಪೂರ್ಣಂ.

— ಅಷ್ಟ್ಯವಮಾಶ್ವಾಸಂ —

ಶ್ರೀಸೇವ್ಯನಹಿತಜಯವಿ ।
ದ್ಯಾಸಮುದಯಲಬ್ಧಲೀಲನಾಗಿ ಯಕೋಭಾ ॥
ಭಾಸುರನಿರ್ದಂ ವಿನಮುನಿ ।
ವಾಸಂ ಜಿನಪದಪಯೋಜರಾಜಮುರಾಳಂ ॥೧॥

ವ॥ ಇಂತು ಸಂತಸದಿನಿರ್ದು ನಾ[illegible]ಳಂ ಬರಿಸಿ ತದೀಯವಿದ್ಯಾವ
ಳೀಸಮಾಗಮಮನಱಿಪಿ ನರ್ತಕಿಯ ರೂಪಚ್ಛಲದಿನಾವೆ ಪೋಗಿ ನೋಱ್ಪು
ಮೆಂದನಂತಸೇನನಂ ಸಚಿವರಂ ಪುರದ ಕಾಪಿಂಗೆ ಪಂತಿರಿಸಿ ಭೂವಲ್ಲಭನಿಂ
ತೆಂದಂ:—

ಪರಿಚಯಮಾದೊಡಲ್ಲದವರಾಡುವ ಪಾಡುವರಲ್ಲ ಸೇವೆಯೊಳ್ ।
ಚರಿಯಿಪರಲ್ಲ ನರ್ತಕಿಯರೆಮ್ಮ ನೃಪಾನ್ವಯದಿಂದೆ ಬಂದವರ್ ॥
ಪರನೃಪವರ್ಗಮಂ ಮಹೆದು ಕಂಡಱಿಯರ್ ನತರಾಗರೆಂದು ತ ।
ಚ್ಚರನಮಿತಂಗದಂ ನೆಹೆಯೆ ಸೂಚಿಸಿದಂ ಪದೆಪಿಂ ಧರಾಧಿಪಂ ॥೨॥

ವ॥ ಇಂತು ಪೇೞ್ದುದಂ ಕೇೞ್ದಮಿತದೂತನಂತೆಗೆಯ್ವನೆಂಬುದುಮಾ
ನೃಪರಿರ್ವರುಂ ನರ್ತಕಿಯರ ಮೂರ್ತಿಯಂ ತಳೆದು ತದೀಯಚರಂಬೆರಸು
ವಿಮಾನಮನೇಱಿಯುತ್ತರಾಭಿಮುಖರಾಗಿ ಪೋಗಿ—

ನೆಗೆದು ಪರಿದತ್ತು ತಾನಿವ ।
ರ್ಗ್ಗಗಣಿತಜಯಮೆಂದು ಸಾಱುವಂದದೆ ಮಣಿಘಂ ॥
ಟೆಗಳ ಖಣಖಣರವಂ ಕೈ ।
ಮಿಗುತಿರೆ ಕೋಭಾಯವಾನಮಪ್ಪು ವಿಮಾನಂ ॥೩॥

ಗಗನಾಂತರ್ಭಾಗಮಂ ಬಾಸಣಿಸೆ ಮಣಿಗಣಾಂಶುವ್ರಜಂ ನೀಳ್ದು ತಾರಾ।
ಳಿಗಳಂ ಕೇತೂತ್ಕರಾಗ್ರಂ ಕೆದಪೆ ಮೃದುರುವದ್ಧ್ವಂಟಿಕಾಟಂಕೃತಧ್ವಾ ॥
ನಗಣಂ ದಿಕ್ಪಾಪಕರ್ಣಕ್ಕಿನಿದನೆಸಗೆ ಭಿನ್ನಾಂಬುದತ್ಯಕ್ತಮುಕ್ತಾ ।
ಳಿಗಳಂಭೋಬಿಂದುಗಳ್ ಬಿೞ್ತಿರೆ ಪರಿದುದು ವಿಭಾಜಮಾನಂ ವಿಮಾನಂ॥೪॥

ಪವನಾಘೂತಭಯಂ ಪೊದೞ್ದು ಶರದಭ್ರಶ್ರೇಣಿ ರುಚ್ಯಾವತಾ ।
ರವನಾಂತಿರ್ದುದೊ ರಾಹುಭೀತಿಗೆನಿತಾನುಂ ಬೆರ್ಚಿ ಬೆಳ್ದಿಂಗಳಿಂ ॥
ತವಿನಿದಾ ಕೃತಿಯಾಯ್ತೊ ಪೇೞಿನೆ ಕರಂ ಶುಭ್ರಪ್ರಭೋದಭ್ರವೈ ।
ಭವದಿಂದಾವಿಜಯಾರ್ಧಶೈಲಮಿದಿರೊಳ್ ಕಣ್ಗಿತ್ತುದಾಶ್ಚರ್ಯಮಂ ॥೫॥

ನೆಲೆವೆರ್ಚಿ ಕರಂ ನಿಜನಿ ।
ರ್ಮಲರುಚಿ ಪೊಲಿಪೊಣ್ಮುತಿರ್ದುದೆಂಬಿನೆಗಂ ಕ ॥
ಣ್ಗೊಳಿಸಿರ್ದುದು ವಿಜಯಾರ್ಧಾ ।
ಚಲಮುಜ್ಜ್ವಲನಿರ್ಝರಪ್ರವಾಹೋತ್ಕರದಿಂ ॥೬॥

ಜಗತೀಮಂಡನದಿಂ ಮೃಗಾವಳಿಗಳಿಂ ನಾನಾಲಸತ್ಕೂಟಕೋ ।
ಟಿಗಳಿಂ ಸಾಂದ್ರತೆವೆತ್ತ ಪತ್ರಚಯವಲ್ಲೀವ್ರಾತದಿಂ ಭದ್ರಜಾ ।
ತಿಗಳಿಂ ಚಿತ್ರವಿಲಾಸದಿಂದದು ಮಹಾಪ್ರಾಸಾದದಿಂದಿರ್ದುದಾ ।
ವಗಮಾಶ್ಚರ್ಯಮನಪ್ಪುಕೆಯ್ದು ವಿಜಯಾರ್ಧಖ್ಯಾತಧಾತ್ರೀಧರಂ ॥೭॥

ಸಮದೋಗ್ರೇಭನಿಘೃಷ್ಟಲಿಪ್ತಘನದಾನಾಮೋದಲುಬ್ಧಭ್ರಮ ।
ದ್ಭ್ರಮರವ್ರಾತರುಣತ್ಕೃತಿಸ್ವರಸಮುತ್ಕೀರ್ಣಪ್ರಭಾಸ್ಪತ್ಪ್ರಕಾಂ ॥
ಡಮಯೋದ್ಯನ್ನಲಯಾದ್ರಿಜಾದಿ ನರವೈಕ್ಲೀಪೇತ ವಿಖ್ಯಾತಿವೆ ।
ತ್ತ ಮಹೋಪತ್ಯಕಮಿತ್ತುದಾನೃಪವರಂಗುತ್ಕರ್ಷಮಂ ಹರ್ಷಮಂ ॥೮॥

ಮಲಯಕ್ಷ್ಮಾಜವದ ತಣ್ಪನಾದವೊಳಕೊಂಡುತ್ಫುಲ್ಲಪೂರೋತ್ಕರಾ ।
ಕುಲಸೌರಭ್ಯಸಮಾಜಸಾರದೊದವಿಂ ಮೆಯ್ಗೊಂಡು ವಿದ್ಯಾಧರೀ ॥
ಜಲಜಾಸ್ಯಶ್ವಸಿತಾನಿಲಪ್ರಸರಮಂ ಕೈಕೊಂಡು ತೀಡಿತ್ತು ಸ ।
ಲ್ಲಲಿತೋಪತ್ಯಕಸಂಚರಂ ಕುಸುಮಲಿಟ್ಟಾವಾರುತಂ ಮಾರುತಂ ॥೯॥

ಪರಿವೃತನಗರೋದ್ಯಾನದ ।
ಪರಿಕರದಿನಭಂಗಕರಧಿಯೆನಿಸಿದ ಪರಿಖಾ ॥
ಪರಿವೃತದಿನಿನೆಸೆವ ಶಿವಮಂ ।
ದಿರಪುರಮದು ಕಣ್ಗೆ ವಂದುದಾನೃಪವರರಾ ॥೧೦॥

ವ॥ ಮತ್ತಮದು ಪುರಂದರೋದ್ಯಾನಂ ಪುಣ್ಯಜನಪ್ರತಾನಮಲ್ತೆಂದು ಪಟಿಕೆಯ್ವ ಬಹೂದ್ಯಾನವಲಯಿತಮುಂ । ಶತ್ರುಸೇನಾಲಂಘ್ಯಮಲ್ತೆಂದುದ

ಧಿಯನಧಃಕರಿಪ ಪರಿಖಾಪರೀತಮುಂ । ದುಷ್ಪ್ರವೇಶಸಹಿತಮಲ್ತೆಂದು ಸುರ
ನಗರೀಸಾಲಮನೇಱಿಸುವ ಕೋಟಾಚಕ್ರಮುಂ । ವಾಸರಪ್ರವೇಶಮಲ್ತೆಂದು
ಕೌಮುದಿಯಂ ಕೀಱಿಕ್ಕಿಯ್ವ ಸೌಧಮರ್ಮಹರ್ಮ್ಯಾವಳೀಭರಿತಮುಂ ।
ವಿಭಾವರೀಭಾಸಿಯಲ್ತೆಂದು ಬಾಲಾರ್ಕಬಿಂಬಮಂ ಭಂಗಿಸುವರುಣಮಣಿಕ
ಲಶಂಗಳುಂ । ಪಂಕಜಾಕ್ಷಪುರಂ ಗೋಪುರಪ್ರಕರಮಲ್ತೆಂದು ಮಾಂಕರಿಪ
ಮಣಿಮಯಗೋಪುರಪರಿಯುತಮಪ್ಪ ಶಿವಮಂದಿರಪುರಮುಂ ದಮಿತಾರಿಮಾ
ರಣಕಾರಣಮಾಗಿ ಮೂರ್ತಿಗೊಂಡ ಮೃತ್ಯುದೇವತೆಯುರಂತೆ ಕಪಟನರ್ತಕಿ
ಯರೆನಿಸಿದಪರಾಜಿತಾನಂತವೀರ್ಯರ್ ಪುಗುತಪ್ಪುದುಮಾಗಳಮಿತದೂತಂ
ಪೋಗಿ ನಿಜಸ್ವಾಮಿಗೆ ಬರ್ಬರಜೆಲಾತಿಕೆಯರಂ ತಂದೆನೆಂದು ಬಿನ್ನವಿಪುದುಂ
ಸಂತಸಮನಾಂತು ವಿಯಚ್ಚರೇಂದ್ರನವರಂ ಕನಕಶ್ರೀಕನ್ಯಾಂತಃಪುರದೊಳ
ಗಿರಿಸೆಂದು ನಿಯಮಿಸಿದಾಗಳ್—

ಘನವಿಖ್ಯಾತಿಯ ಗೀತನೃತ್ಯವತಿಯರ್ ತಾಮಿಂತಿವರ್ ಪೌಢಭಾ ।
ಮಿನಿಯರ್ ಬರ್ಬರೆಯುಂ ಜೆಲಾತೆಯುಮೆನಿಪ್ಪೀಯಿರ್ವರಂ ದೇವಿನೆ ॥
ಟ್ಟನೆ ತಾನಟ್ಟಿದನೊಲ್ದು ನಿಮ್ಮ ಬಿನದಕ್ಕುರ್ವೀಶನೆಂದಿಂತು ತ ।
ತ್ಕನಕಶ್ರೀಗವರಂ ಸಮರ್ಪಿಸಿದನಾದೂತಂ ಮನಃಪ್ರೀತಿಯಿಂ ॥೧೧॥

ವಿನಯಮನೊಡರ್ಚಿ ತನ್ನಯ ।
ಮನಮನವರ್ಗಿಂಬುಗೊಟ್ಟು ಪರಿಚಯದೆಸಕಂ ॥
ಜನಿಯಿಸೆ ಮನ್ನಿಸುತಿರ್ದಳ್ ।
ಕನಕಶ್ರೀದೇವಿ ನರ್ತಕಿಯರಂ ಪ್ರಿಯದಿಂ ॥೧೨॥

ಇದು ಸೌಂದರ್ಯದ ಸಾರಸಸ್ಯಮಿದು ಕಂತುಪ್ರಾಜ್ಯಸಾಮ್ರಾಜ್ಯಮಿಂ ।
ತಿದು ಸಮ್ಮೋಹನಮಂತ್ರದೈವವಿದು ಮೂರ್ಯದ್ಭಾವಜಾತಾಸ್ತ್ರಮಿಂ ॥
ತಿಮ ಕಂದರ್ಪನ ವಶ್ಯಪುತ್ರಿಕೆಯೆನಿಪ್ಪೀ ರೂಪಸೌಭಾಗ್ಯ ಸಂ ।
ಪದಮೊಂದಿರ್ದಪುದೀಕೆಗೆಂದು ಕನಕಶ್ರೀದೇವಿಯಂ ನೋಡುವರ್ ॥೧೩॥

ಆಕೆಯನಂಗಜವಿಜಯಪ ।
ತಾಕೆಯನತನುವ ಕಲಾಶಲಾಕೆಯನೆಸೆದಿ ॥
ರ್ದಾಕನಕಶ್ರೀಯ ವಿಚಿ ।
ತ್ರಾಕೃತಿಯಂ ಕಪಟನರ್ತಕಿಯರೀಕ್ಷಿಸಿದರ್ ॥೧೪॥

ವ॥ ಇಂತಖಿಳಭುವನಾಶ್ಚರ್ಯಮಪ್ಪ ಸೌಂದರ್ಯದಿಂ ಪೊಗಟ್ಟಿವಡೆದು ಸೊಗಯಿಸುವ ಕನಕಶ್ರೀಕನ್ಯೆಯ ಸಕಲಕಲಾಸಂಪನ್ನೆಯು ರೂಪಾವಲೋಕನವಿನೋದಪ್ರಮೋದರಾಗಿ ಕಪಟನರ್ತಕಿಯರ್ ಪ್ರವರ್ತಿಸುತುಮಿರಲೊಂದು ದಿನದೊಳ್

ಮೃದುಮಯಗೇಯದೊಳ್ ನಿಮಗೆ ಮೂಜಗದೊಳ್ ಪಡಿಯಿಲ್ಲಮೆಂದು ನಾ।
ರದನುಸಿರಲ್ಕೆ ಕೇಳ್ದಿವಳಂ ನೆಱಿ ನಿಮ್ಮನೆ ಕಾಣ್ಬುದಿಂದು ದೈ ॥
ವದೆ ಘಟಿಸಿತ್ತು ನೀಮೆನಗೆ ಸತ್ಪ್ರಿಯವಂತೆಯರಾದಿರಾಂ ಸುಗೀ ।
ತದ ಸುಖದಿಚ್ಛೆಯುಳ್ಳಳೆನೆ ತತ್ಪ್ರಚರೇಂದ್ರತನೂಜೆ ನಲ್ಮೆಯಿಂ ॥೧೫॥

ವ॥ ಆಕುಮಾರಿಯ ಮನೋವೃತ್ತಿಯನಱಿದು ತಾಳಮಂಕೊಂಡೆಡ ಒಲನಱಿದು ಪಿಡಿದು ಪೊಯ್ದುಕಣ್ಣಾರವಂ ನೋಡಿ ರೂಢಿವಡೆದಾದಿರಾಗಮು ನಾಳಾಪಿಸಿ ಮೂರ್ತಿಗೊಳಿಸಿದಾಗಳ್—

ಕಲರುತಿ ಕೋಕಿಲಪ್ರಚಯಪಂಚಮರಾಗದ ಸಂಚಮಾಗಿ ಸಂ ।
ಚಲಿಸೆ ಸುಧಾತು ರೀತಿ ಗಮಕಂ ಗತಿ ಭಂಗಿ ಬೆಡಂಗು ಕಾಪ್ಪು ಕಾ ॥
ಕಲಿ ವಳಿ ರಂಗರಕ್ತಿಯಣುಕಿಂಪು ಬಜಾವಣೆ ಲಾಗು ಬಾಗು ಕೋ ।
ಮಲಮೆನೆ ಕೂರ್ತು ನರ್ತಕಿಯರೋಜೆ ವಿರಾಜಿಸೆ ಪಾಡುತಿರ್ದಪರ್॥೧೬॥

ಶ್ರವಣರಸಾಯನಮುಮರ್ದಿನ ।
ತ್ತವನಿಧಿ ಸೊಗಸಿನ ಕಡಾರಮಿಂಪಿನ ಕಣಿಯೆಂ ॥
ಬವೊಲಾಗಲೆಂತು ರಾಗದ ।
ಸವಿ ಸಮನಿಸೆ ರೂಢಿವೆತ್ತು ಪಾಡುತ್ತಿರ್ದರ್ ॥೧೭॥

ವ॥ ಆಗಳಂತು ಗೇಯಸುಧಾರಸತರಂಗಿಣಿಯೊಳ್ ತೇಂಕಾಡುತಿರ್ದು ಕನಕಶ್ರೀದೇವಿ ನರ್ತಕಿಯರಂ ಮನ್ನಿಸಿ ತನ್ನನ್ನರಂ ಮಾಡಿ ರೂಢಿವಡೆದಿರುತ್ತುಮಿರೆ.—

ಪದೆಪಿಂದಾದಮನಂತವೀರ್ಯನ ಸುರೂಪಾಶ್ಚರ್ಯಮಂ ಶೌರ್ಯಸಂ ।
ಪದಮಂ ಸನ್ನುತಿವೆತ್ತನೇಕಬಿರುದಪ್ರಖ್ಯಾತಿಯಂ ಸತ್ಕಲಾ ॥
ವಿದಿತಪ್ರಜ್ಞೆಯ ಪೆರ್ಮೆಯಂ ರತಿಕಲಾಚಾತುರ್ಯಮಂ ಸದ್ಬುಧಾ ।
ಸ್ಪದಮುಪ್ಪುದ್ಗುಣಹತ್ವಮಂ ಸ್ತುತಿಸುತುಂ ಪಾಡುತ್ತಿರಲ್ ನಾಡೆಯುಂ ॥

ಅನುದಿನಮನಂತವೀರ್ಯನ ।
ನನುನಯದಿಂ ಪೊಗಟಿಸಿ ರೂಪದೆಂತುಟು ತಾನೆಂ ॥
ದೆನೆ ನೃಪಸುತೆಗಾಗಳ್ ನೆ ।
ಟ್ಟನೆ ತದ್ವಿದ್ಧಮನೆ ಬರೆದು ವಿಲಿಯರ್ ತೋರಿಲ್ ॥೧೯॥

ಕಿವಿವೇಟಂವೊದಲೊಳ್ ಪೊದಟ್ಟುದು ಗುಣಸ್ತೋತ್ರಂಗಳಿಂಮೂರ್ತಿವಿ।
ದ್ಧವನಾಗಳ್ ನಡೆ ನೋಡಿ ಸೋಲ್ತು ಸಲೆ ಕಣ್ಪೇಟಂ ಕರಂ ನಾಂಟೆ ಹೈ ॥
ದ್ಭವಬಾಣಾಭಿಹತಕ್ಕೆ ಚಿತ್ತಮೆನಸುಂ ಪಕ್ಕಾಗೆಯುಂ ತಕ್ಕುಮಾ ।
ರಿ ವಿವೇಕಾತ್ಮನನಂತವೀರ್ಯನ ಸುರೂಪಂ ಸ್ವಾಂತದೊಳ್ ತಾಳ್ದಿದಳ್ ॥

ಖ್ಯಾತನನಂತವೀರ್ಯನ ಸುರೂಪಸಭೀಕ್ಷಿಪ ಕಾಂಕ್ಷೆ ಕೂಡುವ ।
ತ್ಯಾತುರವೃತ್ತಿ ಕಣ್ಮಲರ್ಗಳೊಳ್ ಮನದೊಳ್ ನೆಲೆವೆರ್ದಿದೀಪ್ತಳಂ ॥
ಬಾತುಳಮಪ್ಪವಸ್ಥೆ ನೆಲೆಗೊಂಡು ಕುಮಾರಿ ಸದೀನನೇತ್ರೆ ನಿ ।
ಶ್ಚೇತನೆಯಾಗಿ ನರ್ತಕಿಯರಾಸ್ಯಪಯೋಜಮನಿಂತು ನೋಡಿದಳ್ ॥೨೧॥

ಎನಗೆಂತು ಸಮನಿಸುಗುಮಾ ।
ತನ ಕೂಟಂ ನೀಮೆ ಮಾಱ್ಪುದುಯ್ದಾದೊಡಮೆ ॥
ನ್ನನೆನುತ್ತೆಯಶ್ರುಕಣಮಂ ।
ಕೊನೆವೆರಲಿಂ ಮಿಡಿಯುತಬಲೆ ಮೆಲ್ಲನೆ ನುಡಿದಳ್ ॥೨೨॥

ವ॥ ಇಂತು ಮನದ ಸೋಲಮಂ ತೆಱಸಿದು ನುಡಿದ ಕನಕಶ್ರೀಯ ಚಿತ್ತಮಱಿದು ಕಪಟನರ್ತಕಿಯರಿಂತೆಂದರ್:---

ಆನೃಪನ ಸಾರ್ಗೆ ಪೋಪ್ಪದ ।
ದೇನುಂ ಘಟಿಯಿಸದು ದೇವಿ ನಿಮಗಿಂತು ಮನಂ ॥
ತಾನಿರ್ದೊಡರಸನಂ ನಿ ।
ನ್ನೀನಿಳಯಕೆ ತಂದು ಕೂಡಲಾಮೆ ಸಮರ್ಥರ್ ॥೨೩॥

ಎಂದಿಂತು ನುಡಿದು ಖೇಚರ
ನಂದನೆಯ ಮನೋಜತಾಪಮಂ ನಂದಿಸಿ ಚೆ ॥
ಲ್ವೊಂದಿದ ನಿಜಮೂರ್ತಿಗಳಿಂ ।
ನಿಂದಿರ್ದರ್ ನೃಪರತೀವ ಕೌತುಕಮಾಗಲ್ ॥೨೪॥

ಆಗಳ್ ಕನಕಶ್ರೀಗನು ।
ರಾಗಂ ಸಲೆವೆರ್ಚಿ ನಡುಗುತುಂ ಮೇಲ್ವಾಯ್ದಾ ॥
ವೇಗದೊಳಸಂತವೀರ್ಯನ ।
ಯೋಗಸುಖಂಬಡೆದು ಬಿಡದೆ ನಲಿಯುತ್ತಿರ್ದಳ್ ॥೬೫॥

ವ॥ ಆಕಂತುಕ್ರೀಡಾಪರವಶದಿಂ ಪಿರಿಯಾನುಂ ಪೋಪ್ಪುರ್ದು ಮೆಲ್ಲನೆ ಚ್ಚತ್ತು ಕನಕಶ್ರೀದೇವಿ ಮನದೊಳ್ ಭಾವಿಸಿ

ಇನ್ನಿರಬಾರದು ನೀಮಣ ।
ಮೆನ್ನಂ ಕೊಂಡುಯ್ವುದೀಗಳೆಂದೆನೆ ಖಚರೇಂ ॥
ದ್ರನ್ನಿಮಗೆ ಮುನಿಯೆ ಮಾಣಿಸು ।
ವನ್ನನದಾರ್ ವಿಲಯಕಾಲಕಾಲನ ಕಾಯ್ವುಂ ॥೬೬॥

ವ॥ ಆನುಡಿಗೆ ಮಂದಸ್ಮಿತಮುಖಾರವಿಂದರಾಗಿ ನರೇಂದ್ರರಂತೆಗೆಯ್ವೆವೆಂದು ಕುಮಾರಿವೆರಸು ವಿಮಾನಾರೂಢರಾಗಿ ಶಿವಮಂದಿರಪುರಮಂ ಪೊಱಮಟ್ಟು ದಕ್ಷಿಣಾಭಿಮುಖರಾಗಿ ತಾವನತಿದೂರಧರೆಯೊಳ್ ನಿಂದು ನೋಡುತಿರ್ಪಾಗಳ್—

ಪಿರಿದಾಗಳ್ ಕನ್ಯಾಂತಃ ।
ಪುರಮಂ ಕಾದಿರ್ಪ ಕಂಚುಕಿಗಳಾಖಚರೇ ॥
ಶ್ವರನಲ್ಲಿಗೆಯ್ದಿ ನರ್ತಕಿ ।
ಯರ ಕೆಯ್ತದ ವೈಪರೀತ್ಯಮಂ ನೆಱಿ ಪೇೞ್ದರ್ ॥೬೭॥

ವ॥ ಆಕಂಚುಕಿಸಂಚಯಮಿಂತುಟಿ ಪೇೞ್ದುದಂ ನೆಱಿ ಕೇಳ್ದು ದಮಿತಾರಿ ತಾನಿದಸಂಭಾವ್ಯಮೆಂದು ನಂಬದೆ ನಾಲ್ದೆಸೆಗಂ ಜಂಘಾಲರಂ ಕಳುಪುವುದುಮವರೊಳೊರ್ವಂ ದಕ್ಷಿಣಾಭಿಮುಖನಾದ ದೂತಂ ಅತಿದೂರದೊಳಿರ್ದಪರಾಜಿತಾನಂತವೀರ್ಯರಂ ಕಂಡು—

ಮಾರಿಯ ಮೂಲೆಯೆನಿಪ ದಮಿ ।
ತಾರಿಯ ವಿಲಸತ್ಕುಮಾರಿಯಂ ತಂದಿರ್ ಪೆ ॥
ರ್ಮಾರಿಯನೀಗಳ್ ಪುಯ್ಯಲ್ ।
ಭಾರದ ಮುನ್ನಿರಿಸಿ ಪೋಗಿಮಿಂತೀಕ್ಷಣದಿಂ ॥೬೮॥

ವೊದಲೊಳ್ ನೀಮೆಂತುಂ ನುಡಿ ।
ವುದತಥ್ಯಂ ಖಚರಪತಿಯ ನಂದನೆಯಂ ತಂ ॥
ದುದಱಂ ನಿನ್ನೊಡೆಯರನ ।
ಱ್ದಿದಿರೈ ದಮಿತಾರಿಖಡ್ಗಧಾರಾಜಲದೊಳ್' ॥೬೯॥

ಪರಚಕ್ರಕ್ಷಯಕಾರಿಯಂ ಪರಪುರೀವಾರಾರಿಯಂ ದಿಕ್ಕುಳೋ ।
ತ್ಕರಸಂಹಾರಿಯನುಗ್ರವಾರಿಯನರಾತಿಕ್ರೂರತಾರಾರಿಯುಂ ॥
ಧುರಧೀರಾರಿವಿದಾರಿಯುಂ ಭುಜಬಲಾಹಂಕಾರಿಯುಂ ಶೌರ್ಯಕೇ ।
ಸರಿಯುಂ ಶ್ರೀದಮಿತಾರಿಯುಂ ಸಮರದೊಳ್' ನಿನ್ಮ್ಮಾಳ್ದರೇನಾರ್ಪರೇ ॥೭೦॥

ನಿನಗಸುವೆರಸಿರ್ಪುದು ಸಲೆ ।
ನನುನಿಸುಗುಂ ತಂದು ಕನ್ನೆಯಂ ಕೊಟ್ಟೀಗಳ್' ॥
ದಮಿತಾರಿಯ ಚರಣಸರೋ ।
ಜನೆ ಶರಣಿನೆ ಮರಣಮಾಗದೆಂತುಮವೋಘಂ ॥ ॥೭೧॥

ವ॥ ಅಂತು ನುಡಿದ ದೂತನ ಮಾತಿಂಗೆ ಮನದೊಳ್' ಮುಳಿಸಂ ತಳೆ
ಯದೆ ಮುಗುಳ್ನಗೆಯಂ ನಗುತ್ತುಮಪರಾಜಿತಾನಂತವೀರ್ಯರಾಗಳ್'—

ಬರವೇೞ್ ನಿನ್ನಧಿನಾಥನಂ ತಡೆಯದೀಗಳ್' ತನ್ನ ಜೀವಾನಿಲಂ ।
ಬೆರಸೀಕನ್ನೆಯನುಯ್ವಿನಲ್ಲದೊಡೆಯಿಲ್ಲಿಂ ಪೋಪ್ರದಿಲ್ಲೆಂದು ಪೂ ॥
ರ್ಣೆದ್ದಿರದೀಕಾಲದೊಳಾಂ ಬಲಾಚ್ಯುತರೆನಿಪ್ಪಾಯಿರ್ವರಾಮುಲ್ತೆ ಸಂ ।
ಗರಕೇಳೀಪರಿತೃಪ್ತಿವೆತ್ತು ಪುರಮಂ ಪೊಕ್ಕಪೆ-ವುತ್ಸಾಹದಿಂ ॥೭೨॥

ಇನಿತಂ ಕೇೞ್ದಾಗಳೆ ದೂ ।
ತನವಂ ಪರಿದೆಯ್ದಿ ನೆಱೆಯೆ ದಮಿತಾರಿಗೆ ನೆ ॥
ಟ್ಟನೆ ಪುಟ್ಟೆ ವಿಸ್ಮಯಂ ಭೋಂ ।
ಕೆನೆ ಬಿನ್ನವಿಸಿದನಿದಂ ಯಥಾಕ್ರಮದಿಂದಂ ॥೭೩॥

ಮರವಟ್ಟರೆ ಮನದೊಳ್' ಖೇ ।
ಚರಪತಿ ಪರಿವೃತಸಭಾಸದರ್ಕಳೆ ಪಿರಿದ ॥
ಚ್ಚರಿವೆತ್ತು ನುಡಿದರೋರೊ ।
ರ್ವರೊಳಕ್ರುತಪೂರ್ವಮಿಂತಿದೆನ್ನುತುಮುವರ್ಗಳ್' ॥೭೪॥

ವ॥ ‡ಇಂತು ಸಭಾಜನಂ ನುಡಿಯುತ್ತುಮಿರೆಯುಮರಸನಿಂತೆಂದಂ--

ನರರಿರ್ವರ್ ನೃಪನಾಮಧಾರಿಗಳವಂದಿರ್ ವೈರಿಗಳ್ ತಾಂ ಗಡ ।
ಚ್ಚರಿಯಿಂದಲ್ಲದೆಯುಂ ಮದೀಯಸುತೆಯಂ ಕೊಂಡೀಗಳುಯ್ಯುತ್ತುಮಿ ॥
‡ ... ...
ರಥ ಸಮರಥ ಮಹಾರಥ ಶತಭಟ ಸಹಸ್ರಭಟ ಲಕ್ಷಭಟ ಕೋಟಿಭಟ
ಮಹಾಭಟ ಕಟಕಂಬೆರಸು ಸಮರೋದ್ಯೋಗಾನುರಾಗಮನಪ್ಪುಕೆಯ್ದು
ಕುಳ್ಳರ್ದಪರಾಜಿತಾನಂತವೀರ್ಯರಂ ಕಂಡು ದಮಿತಾರಿಯಟ್ಟಿದ ದೂತನಿಂ
ತೆಂದಂ--

ಅಟ್ಟಿದನಸ್ಮದಧೀಶಂ ।
ನೆಟ್ಟನೆ ನಿಮ್ಮಲ್ಲಿಗೆನ್ನನತಿಕೃಪೆ ಮನದೊಳ್ ॥
ಪುಟ್ಟೆ ದಮಿತಾರಿಯಲ್ಲದೊ ।
ಡಟ್ಟುವನೆ ವಿರೋಧಿವಂಶವನದವದಹನಂ ॥೩೬॥

ಮನದೊಳ್ ಶಂಕಿಸವೇಡ ಮಾಡಿದಪರಾಧಕ್ಕೀಗಳೀ ವೇಗದಿಂ ।
ಕನಕಶ್ರೀಯನೆ ತಂದುಕೊಟ್ಟು ಶರಣೆಂಬೀಮಾತು ನಿಮ್ಮಲ್ಲಿ ನೆ ॥
ಟ್ಟನೆ ಪುಟ್ಟಿರ್ದೊಡೆ ಸಾಲ್ವುದಲ್ತೆ ಮುನಿಸಂ ತಾರಂ ವೊಗಕ್ಕುಗ್ರನೆ ॥
ಲ್ತು ನಿತಾಂತಂ ದಮಿತಾರಿಯಂತೆ ಪೆಱರಾರ್ ಕಾರುಣ್ಯಲೀಲಾತ್ಮಕರ್ ॥೩೭॥

ಅನುಬಂಧಂಗೆಯಲೆಂದು ಬಂದ ನರನಾಥಾಪತ್ಯರಂ ಕೊಂದನೆಂ ।
ದಿನಿತುಂ ದುರ್ಯಶಮಕ್ಕುಮೆಂದು ತಡೆದಿರ್ದಂ ಚಕ್ರಿ ತಾನಲ್ಲದಿ ॥
ರ್ದನೆ ಪೇೞ್ ವಂಚನೆಯಿಂದೆ ನಂದನೆಯನುಯ್ದಿರ್ದಿನಿಮ್ಮನೆಂತುಂ ರಣಾ ।
ವನಿಯೊಳ್ ಲೆಕ್ಕಿಪನೇ ಪ್ರಚಂಡಬಲಬಾಹಾದಂಡ ದಂಡಾಯುಧಂ ॥೩೮॥

ಶರಣೆಂದೆನ್ನದೆ ಸಂಗರಕ್ಕೆ ನಿಲಲೆಂತುಂ ಬಾರದಾರಯ್ವೊಡಾರ್ ।
ದೊರೆಯರ್ ನೀವೆನೆ ತಕ್ಕರಲ್ತು ದಮಿತಾರಿ ಕ್ರೋಧಮಂ ತಾಳ್ದಿಯುಂ ॥
ಸುರಪಂ ವಹ್ನಿ ಯಮಂ ಸುರಾರಿ ಶರಧೀಶಂ ವಾಯು ವಿತ್ತೇಶನೀ ।
ಶ್ವರನೊರ್ಮಿಂಗಿದಿರಾಗರೆಂದೆನೆ ನರರ್ ಕೆಯ್ವೊಯ್ದು ನಿಲ್ವನ್ನರಾರ್ ॥೩೯॥

ವ॥ ಎಂದಿಂತು ಪಲವಂದದಿಂ ಕರ್ಣಕಠೋರಮಾಗಿ ನುಡಿದ ದೂತನ

---

‡ಈ ಪದ್ಯಗಳಲ್ಲಿ ಗ್ರಂಥ ಪಾತವಾಗಿದೆ.

ಮಾತಿಂಗೆ ಮಾತಂಗಬೃಂಹಿತಮಂ ಕೇಳ್ದ ಕೇಸರಿಯಂತೆ ಕಡುಮುಳಿದು
ಮಸಗಿ ಕಿಡಿಕಿಡಿವೋಗಿ ಕಂಜನಾಭನವನ ಮೊಗಮಂ ನೋಡಿ—

ಕನಕಶ್ರೀಯ ಮನಕ್ಕೆ ಸಂಗಳಿಸುಗುಂ ಸಂಕ್ಲೇಶಮೆಂದಣ್ಣನಿಂ ।
ತೆಸಲಾಂ ಮೀಱದೆ ಬಂದೆನಲ್ಲದೊಡೆ ಕೇಳ್ ನಿನ್ನಾಳ್ದನಂ ಮತ್ತಮಿಂ ॥
ತಿನಿತಂ ಗರ್ಜಿಸಲೀಯೆನಿಲ್ಲಿವರೆಗೆಂತನ್ನಂ ಬರಲ್ಕೀಯೆನಾ ।
ತನನಾಪೌರಜನಾಳಿ ಬಾಯ್ವಿಡುತಿರಲ್ ನಾನಂದೆ ಕೊಂದಿಕ್ಕುವೆಂ ॥೪೦॥

ದಿಗಧೀಶರ್ ನಲಿದಾಡೆ ನಾರದನ ಜೆತ್ತಕ್ಕುತ್ಸವಂ ಪುಟ್ಟಿ ದೇ ।
ವಗಣಕ್ಕಚ್ಚರಿಯಾಗೆಯೀರ್ವಲದ ವೀರರ್ ಭೂಪನೆಲ್ ನಾಳೆ ಕಾ ॥
ಳಿಗದೊಳ್ ಕೂರಸಿಯಿಂದುರುಳ್ದಿ ತಱಗುಂ ನಿನ್ನಾಳ್ದನಂಗಾಸ್ತ್ರವಾ ।
ರಿಗಳಿಂ ಸಿಂಪಿಣಿಯಾಡಿಪೆಂ ತಣಿವಿನಂ ಭೇತಾಳಭೂತಂಗಳಂ ॥೪೧॥

ವ॥ ಇಂತು ಕಡುಮುಳಿದು ನುಡಿದ ನಿಜಾನುಜನ ಮೊಗಮಂ ನೋಡಿ ದೂತಂಗಿನಿತು ಮಾತನಾಡಲೇಕ ನಾಳೆ ಕಾಳೆಗದೊಳ್ ತಾನೆ ಕಂಡಪನೆಂದು ಗಂಭೀರೋದಾರಚಿತ್ತನಪ್ಪಪರಾಜಿತಮಹಾರಾಜನುಚಿತೋಕ್ತಿಯಿಂತರ್ಜಿಸಿ ಯವನಂ ವಿಸರ್ಜಿಸಿ—

ಪಡೆಗೆಲ್ಲಂ ಸಾಱಿಸಿದಂ ।
ಪಡೆವಳರಿಂ ನಾಳೆ ಕಾಳೆಗಂ ವೀರಭಟರ್ ॥
ಕಡುಕೆಯ್ದಿರ್ಪುದೆನುತ್ತುಂ ।
ಪೊಡೆಯಿಸಿ ಗಂಭೀರಭೇರಿಯಂ ಭೂನಾಥಂ ॥೪೨॥

ವ॥ ಮತ್ತಮಾಗಳ್—

ಬಗೆಯದನಂತವೀರ್ಯನೃಪನುದ್ಧತಕೋಪದಿನೆಂದ ನಿಷ್ಠುರೋ ।
ಕ್ತಿಗಳನೆ ತಂದು ದೂತನವನಂಜದೆ ಬಿನ್ನವಿಸಲ್ಕೆ ಕೇಳ್ದು ನೆ ॥
ಟ್ಟಗೆ ದಮಿತಾರಿಯಾಕ್ಷಣದೆ ಮಾರಿಯ ಮೂಱಿಯೆನಿಪ್ಪ ಕಾಯ್ಪು ಕೈ ।
ಮಿಗೆ ಕಡುಪಂ ಕಡಂಗಿ ತಳೆದಂ ಕಡೆಗಣ್ ಕಿಡಿಸೂಸೆ ರೋಷದಿಂ ॥೪೩॥

ಎನಗಾಗಳ್ ಪಗೆಯಾಗಿ ತಾಂ ನುಡಿದನೆನ್ನಂ ತನ್ನಭೀಷ್ಟಕ್ಕೆವಂ ।
ನಿತಂ ಚೋದ್ಯಮನಂತವೀರ್ಯನವನಂ ಮಚ್ಚಕ್ರಧಾರಾನಲಂ ॥
ಗೆ ನವಾಗ್ರಾಹುತಿಮಾಡಿ ಮುನ್ನಮೆ ಬಱಿಕ್ಕಂ ತೂಳ್ದುವೆಂ ತನ್ಮಹೀ ।
ಧನನುಗ್ರಾಜಿಯೊಳೆಂದು ಕಾಯ್ದು ದಮಿತಾರಿ ಕ್ರೋಧಮಂ ತಾಳ್ದಿದಂ ॥

ವ|| ಇಂತು ಕೋಪಾಟೋಪದಿಂ ಗದ್ಗದೀಭೂತನಾದೋತ್ಕಟಕಂಠನಾಗಿ ಬೇಗದಿಂ ದಮಿತಾರಿಶ್ರೀಚರೇಂದ್ರಂ ಪ್ರತ್ಯುದಯಸಮಯಸಮರೋದ್ಯೋಗಮುಂ ಬೀಡಿನೊಳ್ ಕೂಡೆ ಸಾಱಿಸುತ್ತುಮಿರ್ಪುದುಮತ್ತಲಿತ್ತಲ್—

ಸಮರೋಜಿತಪ್ರಸಂಗ ।
ಪ್ರಮೋದದಿಂದಿರ್ದನಂತರಂ ನಿಜನಿಲಯ ॥
ಕ್ಕಮಲಯಶೋಧಿಪರೆಲ್ಲರ್ ।
ಸಮಂತು ನೃಪರಿವರ್ಗರುಂ ಜಿತಾಹಿತಗರ್ಭರ್ ॥೪೫॥

ವ|| ಅಂತಾಸಮಯದೊಳ್ ದಮಿತಾರಿಯ ತೇಜೋಸ್ತಮಯಮಿಂತಪ್ಪುದೆಂದಱಿಪುವಂತೆ ಗಭಸ್ತಿಹಸ್ತನಸ್ತಾದ್ರಿಯನೆಯ್ದೆ ಪೋಗೆ–

ಜನನಾಥಂ ಜಿನರಾಜಪೂಜೆಯನೊಡರ್ಚಲ್ ಭಕ್ತಿಮೆಯ್ವೆರ್ಚಿ ಭೋಂ।
ಕೆನೆ ಶಂಖಾದಿಸಮಸ್ತವಾದ್ಯನಿನದಂ ಪೊಣ್ಮುತ್ತಿರಲ್ ಕೂಡೆ ಬೀ ॥
ಡಿನೊಳೆತ್ತಂ ನೆಗಲ್ದಿತ್ತು ಮತ್ತಗಜವಾಜಿಸ್ಯಂದನೋದ್ಗಾಸ್ತ್ರ ಶ ।
ಸ್ತ್ರನಿಕಾಯಂಗಳನರ್ದಿಪುಗ್ರಭಟಸಂರಂಭಕ್ರಿಯಾಡಂಬರಂ ॥೪೬॥

ವೀರಾನುರಾಗಮದು ಪುದಿ ।
ದಾರಾತ್ರಿಯ ಪಗಲ ಸಿರಿಯನೆಯ್ದಿದ ತೆಱದಿಂ ॥
ದೋರಂತಿರ್ದರ್ ಶಸ್ತ್ರಸ ।
ಮೂರಾಧನೆಗೆಯ್ವುತುಭಯಬಲದ ಭಟರ್ಕಳ್ ॥೪೭॥

ಬಲವಂತಂ ದಮಿತಾರಿಯಾತನ ಭುಜಾವಷ್ಟಂಭವಿಕ್ರಾಂತಮಂ ।
ಸಲೆ ತೂಳ್ದಲ್ಕೆನೆ ವಾಸುದೇವರುದಯಂಗೆಯ್ದರ್ ಮಹಾಯುದ್ಧಮಾ ॥
ಗಲೆ ವೇೞ್ದಿರ್ದುದು ನೋೞ್ಪಿನೀಗಳದನಾನೆಂದಿಂತು ಬಂದಂತೆವೋಲ್ ।
ಜಲಜಾತಪ್ರಿಯಮಿತ್ರನೇಱಿದನುದಗ್ರೈಂದ್ರೀನಗೇಂದ್ರಾಗ್ರಮಂ ॥೪೮॥

ವ|| ಆಗಳ್ ನಿಜಾಭ್ಯುದಯಮನಱಿಪುವಂತೆ ಉಗ್ರಕರನುದಯಾದ್ರಿಶಿಖರಶಿಖಂಡಮಂಡನನಪ್ಪುದುಮಪರಾಜಿತಾನಂತವೀರ್ಯರಿರ್ವರುಂ ನಿರ್ವರ್ತಿತನಿಖಿಳಪ್ರಭಾತಕ್ರಿಯರುಂ ಜಿನೇಂದ್ರಪದಪಯೋಜಪೂಜೋತ್ಸವಹೃದಯರುಂ ಶಿರಶ್ಚೇಖರಿತಸಿದ್ಧಶೇಷಾಕ್ಷತ ಪ್ರಚಯರುಮಾಗಿ ಮನೋಸುರಾಗದಿಂ ಜೈತ್ರಭವನಮಂ ಪೊಱಮಟ್ಟಾಗಳ್:—

ಇದು ಮೂರ್ಕೈಯಾನೆ ತಾನೆಂದೆನೆ ಕರಟಗಳದ್ದಾನಧಾರಾಯುಗಂ ನೀ
ಳ್ದೊದವಲ್ ಮೆಯ್ಯೊಡ್ಡಿ ನೀಲಾಚಲಮನಿಟಿಸೆ ಬದ್ಧೋದರಂ ವೃತ್ತ
[ಕುಂಭಂ ॥

ವಿದಿತಂ ಕ್ರೋಡಾಪರಂ ಲಂಬಿತಕರನರುಣಾಕ್ಷಿದ್ವಯೋದ್ಭಾಸಿ ರೌದ್ರಾ ।
ಸ್ಪದರೂಪಂ ಪಣ್ಣಿ ಬಂದಿರ್ದುದು ಪೊಳೆವ ಚತುರ್ದಂತರುದ್ರಂ ಗಜೇಂದ್ರಂ॥

ಮದದುರ್ಕಿಂ ಮೆಯ್ಯೊಡ್ಡಿಂ ।
ಪುದಿದಾಯತಹಸ್ತದಿಂ ಸಮುನ್ನತತನುವಿಂ ॥
ದದಱುಕೊಳ್ ತೊಣೆ ತಾನೆನೆ ಪಾ ।
ರ್ವ್ವದೊಳಿರ್ದುದು ಪಣ್ಣಿ ಬಂದು ಮತ್ತಗಜೇಂದ್ರಂ ॥೫೦॥

ವ॥ ಇಂತು ಪಣ್ಣಿ ಬಂದಿರ್ದುಭಯಗಜೇಂದ್ರಾರೂಢರಾಗಿ ರಾಗದಿಂ ದಪರಾಸಿತಾನಂತವೀರ್ಯರ್ ಸಿಜಶಿಬಿರಮುಖದೊಳ್ ಬಂದು ನಿಂದಿರ್ದಾ ಗಳ್—

ರಣಯಾತ್ರಾಸುಕೃಯಾಸೂಚಕ ಒಹುಕಹಳಾರಾವ ಕೋಳಾಹಳಂ ವಾ।
ರಣವಾಜಿವ್ರಾತಸಜ್ಜೀಕರಣಕಳಕಳಂ ಸ್ಯಂದನಾಕಲ್ಪಸಂಧಾ ॥
ರಣಕಾಯೋರ್ವ್ಯದ್ಯೋಗಕೃತೂಹಲಮುಚಿತತನುತ್ರಾಕರಾಂಗೀಕೃತಾಭೀ ।
ಕ್ಷಣವೀರಕ್ರೋಭಮೋರಂತುಭಯಬಲದೊಳಂ ತೊಟ್ಟನುರ್ವಿತ್ತಗುರ್ವಿಂ

ವ॥ ಇಂತುಭಯಬಲದೊಳೂಗೆದ ಕಳಕಳಮುಂ ಕೇಳ್ದು ಸುಭಟ ಪೇಟಕಂ ಮಾಮಸಕಂ ಮಸಗಿ—

ಕಾದಿದ ಕಲಿಯೆಲ್ಲಿಂಬಪ ।
ವಾದಮನಪಹರಿಪ್ಪೆವೆಂದು ಸಂಗ್ರಾಮರಸಾ ॥
ಹ್ಲಾದಿಗಳರೆಬರ್ ಕವಚಮ ।
ನಾದರಿಸದೆ ಖರಕೃಪಾಣಪಾಣಿಗಳಾದರ್ ॥೫೧॥

ಪರಶಸ್ತ್ರಪಾತಮಂ ಪರಿ ।
ಹರಿಸಲ್ ಬಲ್ಲಂಗಮಱಿಯದಂಗಂ ಕವಚೋ ॥
ತ್ಕರಮೇವುದೆಂದು ನಡೆದರ್ ।
ಸರಭಸದಿಂ ಸಮರಲಂಪಟರ್ ಭಟರರೆಬರ್ ॥೫೨॥

ನೆಱಸಿ ಕೊಲ್ವುದು ಬರನಾರಂ ।
ಬಱನಂ ಪೊಗಲ್ವರೆ ಪೊಗಟಿತ್ತಿವಡೆಯದೆ ಕೊಲ್ವಂ ॥
ಬಱನನ್ನನೆಂದು ಪಟಿಯು ।
ತ್ತಱಿಕೆಯ ಭಟರೀವ್ರತಿರ್ದರೆಱಿವರ್ಗಾಗಳ್ ॥೫೪॥
ದೊರಕಿದುದೆತ್ತಾನುಂ ಸಂ ।
ಗರಮಿದು ನಮಗೆಂದು ಮುದದೆ ಮೆಯ್ವೆರ್ಚಲ್ ಮುಂ ॥
ಪಿರಿದಪ್ಪುದು ಕಿಱಿದಾಗು ।
ತ್ತಿರೆ ಕವಚಮನುಱಿದು ಸುಭಟರರೆಬರ್ ನಡೆದರ್ ॥೫೫॥
ಈಯದೆಯುಂ ಕರಣೊಂದರ ।
ಕಾಯದೆಯುಂ ಕೊಲ್ವುದಾವ ಬಲ್ಪೆನುತುಂ ಕ ॥
ಟ್ಟಾಯತೆವಟ್ಟರ್ ವಂದಿನಿ ।
ತಾಯುಕ್ಕಭಿನುತನುನೀಯುತಾಗಳ್ ನಡೆದರ್ ॥೫೬॥
ಅಗಲ್ದುರದ ದೊಣೆಗಳೀರ್ಗಳಿ ।
ನೊಗೆದೊಪ್ಪುವ ಮೊಗದ ಕಲೆಗಳಿಂ ಸುಭಟರ್ಕಳ್ ॥
ಪಗೆವರನಾಜಿಯೊಳಂಜಿಪ
ಪಗೆಯಂ ತುಡರಲ್ಕೆ ಜೋಡುಮಂ ನೀಸಕಮಂ ॥೫೭॥
ಮುಱಿಯಿಲ್ಲದ ಜೀವಿತಮುಂ ।
ನೆಱಸಿ ಕೊಂಡುಂ ಸಮರಸಮಯದೊಳ್ ತನುವನಿದಂ ॥
ಮಱೆಗೊಳಿಪುಮ ಮಮತೆಯೆನು ।
ತ್ತುಱದೆ ತನುತ್ರಮನೆ ಬಿಟ್ಟು ನಡೆದರ್ ಕೆಲಬರ್ ॥೫೮॥
ಮಿನುಕುಗಲೆ ಭೂಷಣಂ ಸುಭ ।
ಟನಿಕಾಯದ ಕಾಯತತಿಗೆ ಮತ್ತಂ ಬೇಱಿ ॥
ರ್ಗಿನಿತುಂ ಭಾಷೆಯನೀವು ।
ತ್ತೆನಸುಂ ನಡೆದತ್ತು ವೀರರಾಹವಶೂರರ್ ॥೫೯॥

ಪ॥ ಆಗಳಿಂತಪರಾಜಿತಾನಂತವೀರ್ಯರ್ ಸಕಲಸೇನಾಸಮನ್ವಿತರ್ ಸಮರಾವನಿಗೆ ತಡೆಯದೆ ಕಡಂಗಿ ನಡೆವ ಪೆರ್ಮಡೆಯ ಬಹಳಕೋಳ್ಳಾಹಳದೊಳ್—

ಘನಮತ್ತೇಭಾವಳೀಬೃಂಹಿತರುತಿ ಹಯಸಂತಾನಹೇಷಾರವಂ ಸ್ಯಂ ।
ದನಜೇತ್ಕಾರಪ್ರಣಾದಂ ಪಟುಭಟಭಳಕಾಳೀಝಣತ್ಕಾರ ಘೋರ ॥
ಸ್ವನಮುಚ್ಚಂಡೋಲ್ಲಸಡ್ಡಿಂಡಿಮಪಟಹಕಟುಧ್ವಾನವೂಕಾಹಳಾಳೀ ।
ಳನಿನಾದಂ ನೀಳ್ದು ಶಬ್ದಾತ್ಮಕಮೆನಿಸಿದುದುರ್ವೀಶಸೇನಾಸಮುದ್ರಂ ॥

ವ॥ ಇಂತಪರಾಜಿತಾನಂತವೀರ್ಯರ್ ಸಮರಸನ್ನದ್ಧರಾಗಿ ಬಂದೊಡ್ಡಿ ನಿಂದುದಂ ಕಂಡವಂ ನೆಲೆವೆರ್ಚಿ ಚೆಚ್ಚರದಿಂ ದಮಿತಾರಿ ಸಮಗ್ರಸೇನಾ ಸಮನ್ವಿತನಾಗಿ ತಾನೊಡ್ಡಿ ನಿಂದಾಗಳ್—

ಎರಡುಂ ಸೇನಾಭಟರ್ ಪೊಯ್ಸಿದ ಪಟುತರಭೇರೀರವಂ ನೀಳ್ದಕರ್ಣಾಂ
ತರಮುಂ ತಟಿಸ್ಫೋಯ್ಯೆ ಕಣ್ಮುಚ್ಚಿದನಗಿದು ಕರಂ ಕಾಯ್ಪುಗೆಟ್ಟಂ ಮುರಳ್ದ ॥
ಚ್ಚರಿವಟ್ಟಂ ಕೋಣೆವೊಕ್ಕಂ ಸೆಡೆದನಡಗಿದಂ ಸಂಕಗೊಂಡಂ ಸುರುಳ್ದಂ ।
ಸುರಪಂ ಸಪ್ತಾರ್ಚಿ ಕಾಲಂ ನಿರುತಿ ಶರಧಿಪಂ ವಾಯು ವಿತ್ತೇಶನೀಶಂ ॥

ವ॥ ಆಗಳ್ ಕಂಡುಭಯಬಲಮನಪರಾಜಿತಮಹೀಪತಿಯುಂ ದಮಿತಾರಿಖೇಚರಪತಿಯುಂ ಕೋಪಾಟೋಪದಂ ಕೈವೀಸಿದಾಗಳ್—

ಪಿರಿದುಂ ಪೂರ್ವಾಪರಾಂಭೋಧಿಗಳೆ ಕವಿದು ಕಲ್ಪಾಂತದೊಳ್ ತಾಗು
[ವಂತಾ ।
ಗಿರೆ ಕಾಯ್ವಿಂದುವಿನ್ ಬೊಬ್ಬಿಕ್ಕುವ ಭಟರ ಪಟೂಚ್ಚ ಸ್ವರಂ ಪೊಯ್ವನಿಸ್ಸಾ
ಳರವಂ ನಾನಾನಕಾನೀಕದ ಕಟುರಟನಂ ಕಾಹಳಾನಿಸ್ವನಂ ನಿ ;
ರ್ಭರದಿಂದುರ್ವ್ರತ್ತಿರಲ್ ತಾಗಿದುದುಭಯಬಲಂ ಕೋಪದಾಟೋಪದಿಂದಂ॥
ಭುವನಂ ತಾನಾದಿಭೂತಾತ್ಮಕಮಿದೆನೆ ಸಮಸ್ತಾರ್ಣವಂ ಭೂಮಯಂ ಮೇ
ರುವಣಂ ಮಣ್ಗುಪ್ಪೆ ತಾರಾಪಥಮುಪರಿಮಹೀಮಂಡಳಂ ಚಂಡರುಗ್ಬಿಂ ॥
ಬವಿಳಾನಿಕ್ಷೇಪಿತೋದ್ಯನ್ಮಣಿಮುಕುರವನಾಲೋಕಿತೋದ್ಯದ್ದಿಶಾನೀ ।
ಕವೆನಲ್ ತೀವಿತ್ತು ಸೈನ್ಯದ್ವಯಪದನಿಹತೋತ್ಥಾನಧೂಳೀವಿತಾನಂ ॥

ನುತಗತ್ಯಶ್ವಾವಳೀದುಷ್ಕೃತಪಟುಪವನಂ ಸಿಂಧುರವ್ರಾತಸಿಂಧೂ ।
ದ್ಧತಫೂತ್ಕಾರಾನಿಲಂ ಚಂಚಲಿತ ಕದಳಿಕಾಂಚತ್ಪಟೂರೋಚ್ಚಲನ್ಮಾ ॥
ರುತನುಚ್ಚಂಡಪ್ರಚಂಡೋದ್ಭಟಬಿರುದಚಲಚ್ಚಾಮರೋದ್ಯನ್ಮರುತ್ಸಂ ।
ತತಿ ಸೋಂಕಲ್ ಭೋಂಕನಾಗಳ್ ಪರೆದುದಿರದಣಂ ತತ್ಕ್ಷಣಂ ರೇಣು
[ಜಾಲಂ ॥೬೪॥

ವ|| ಆಗಳಿಂತು ಧೂಳೀಜಾಲವೋಸರಿಸಲ್ ಇರ್ಬಲದ ವೀರಭಟ ರೋರೊರ್ವರಂ ಕಂಡು ಕೋಪಮುರ್ವಿ ಕಾಯ್ದು ಮಿಕ್ಕು—

ಘನಚಾಪಜ್ಯಾರವಾಟಂಕೃತಿಕಟುನಿನದಂ ಬಾಣಮುಕ್ಕೋರುಭೀಂಕಾ
ರನಿನಾದಂ ಮಿಕ್ಕು ದಿಕ್ಕಂ ಕಿವುಡುವಡಿಸೆಯುಂ ಪಾಯ್ವ ಪುಂಖಾನುಪುಂಖಾ॥
ಸ್ತನಿಕಾಯೋತ್ಕೃಷ್ಟದಿಂ ಕತ್ತಲಿಸೆ ಭುವನಗರ್ಭಂ ವಿಗುರ್ವಾಗಿ ತಾಗಿ ।
ತ್ತೆನಸುಂ ಸಂಧಾನಮುಕ್ತಧ್ವನಿ ಝಡಿತಿ ಬೆಡಂಗಪ್ಪಿನಂ ಧನ್ವಿಸೈನ್ಯಂ ॥೬೫॥

ಸರಭಸದಿಂದೆರಟ್ಟಿಲದ ಬಿಲ್ವಡೆಯೊಳ್ ಸಲೆ ಬಿಲ್ಲ ಬಿಜ್ಜಿಗರ್ ।
ಸುರರನಡುರ್ಪುಕೊಳ್ವ ಗೊಣೆಗೊಯ್ವ ತೊಡಬರ್ಪುವ ತೂವಿತೊಟ್ಟುಮುಂ
ಬರಿವ ಬಿಡಂಗಿನಿಂ ಬಿಡುವ ಬೇಗಮದೆಂತುಟೊ ದಿಗ್ಮಹೀನಭಂ ।
ಶರಮಯಮಾಯ್ತೆನುತ್ತಿರೆ ಮರುಚ್ಚಯಮಚ್ಚರಿವಟ್ಟ ಬಿಚ್ಚತಂ ॥೬೬॥

ಬಿಡದೆ ಕಡಂಗಿ ಬಿಲ್ವಡೆ ಪೊದಟ್ಟಿದೆ ಕಾಯ್ದು ನೊಸಲ್ ಮುಸುಂಬು ಪೆ
ದ್ದೊಡೆ ಕಟಿ ಜಾನು ಜಂಘೆ ಪರಡಿರ್ದ ತೊಳುರಮಂಘ್ರಿ ಕೆಟ್ಟಿಸಿಲ್ ॥
ನಡುವೊಲೆ ಪ್ರೊಕ್ರುಜ್ಜಿರ್ಕದಪು ಪುರ್ವು ಪೆಗಲ್ ತಲೆ ಕೈಕೊರಲ್ ಬೆರಲ್
ಮುಡುಹು ಮಡಂಗಳೆಂಬೆಡೆಗಳಂ ನೆಲಕಿ ನಟ್ಟುವು ಬಾಣಕೋಟಿಗಳ್ ॥

ತನು ಮೂಡಿಗೆಯಾದುದು ಬಾ ।
ಣನಿಕಾಯಕ್ಕೆನೆ ತುಱುಂಗಿ ನಡೆ ಕಣೆಗಳ್ ನೆ ॥
ಟ್ಟನೆ ದಿವಮನೆಯ್ದಲೆಕೆಗ ।
ಳನೆ ನೆರೆ ಪಡೆದಂತಿರೊಱುಗಿದರ್ ಧುರಧರೆಯೊಳ್ ॥೬೮॥

ತಿರು ಪಱುದೊಡೆ ಬಿಲ್ಗೊಂಡಾ ।
ತುರದಿಂ ಪೊಯ್ದಾಡೆ ಮುಱುಯೆ ಬಿಲ್ ಭೋಂಕೆನೆ ಕೂ ॥
ರ್ಪುರಗಿಗಳಂ ತೊಟ್ಟನೆ ಕಿ ।
ಟ್ಟುರವಣೆಯಿಂದಿಱಿದು ರಣದೊಳೊಱುಗಿದರರೆಬರ್ ॥೬೯॥

ಸರಲೆಚ್ಚು ಸವೆಯೆ ತೊಟ್ಟನೆ ।
ಸುರಗಿರಿದುದು ಮುಱುಯೆ ಸುರಗಿಗಳ್ ತೆರಳದೆ ಪಾ ॥
ಯ್ದುರವಣಿಸಿ ಕಾವಜಿಕಸಂ ।
ಗರಮುಂ ಬಿಲ್ಲಡೆ ಕಡಂಗಿ ತೊಡರ್ದುದು ಕಡುಪಿಂ ॥೭೦॥

ವ|| ಇಂತು ಬಿಲ್ವಡೆ ಕಡಂಗಿ ಕಾದಿ ತವಿಲೆಯ್ದಿದ ತದನಂತರ ದೊಳ್--

ಎರಡುಂ ಸೈನ್ಯಶರೋಧಿಯಿಂ ಕವಿತರುತ್ತಿರ್ದತ್ತು ನಾನಾಂಶುವಿ ।
ಸ್ತರ ಕೂರ್ಮಾವಳಿಯೆಂಬಿನಂ ಶರಭಶಾರ್ದೂಲೀಭಭೇರುಂಡಕೇ ॥
ಸರಿರುಂಡಾದಿ ಬಹುಪ್ರಕಾರಬಿರುದಾಂಕಾನೇಕವರ್ಣಪ್ರಭಾ ।
ಸುರಮುಪ್ಪಡ್ಡಣದಡ್ಡಣಾಯುತಬಲಂ ಬಂದೊಡ್ಡಿತುಗ್ರಾಜಿಯೊಳ್ ॥೭೧॥

ಉಲ್ಲಾದು ಭಟಚ್ಛಟಚ್ಛಟನೆ ತಾಡನೆಗೆಯ್ವ ರವಕ್ಕೆ ದಿಗ್ಗಜಾ ।
ವಳಿ ಪೆಳರಲ್ಕೆ ಖಡ್ಗಚಳಚ್ಚಾರಣಚಕೂರಣಜೆತ್ರದಿಂ ತಟಿ ॥
ತ್ಕುಲವೆಂ ಕಡಂಗಿ ಸೂಸುತಿರೆ ನೂಂಕುವ ಬಿಂಕದಗುರ್ವೆ ಭೈರವಂ ।
ಗಲಗಿಡುವಂತೆ ತಾಗಿದರುದಗ್ರದಿನಡ್ಡಣದಡ್ಡಣಾಯುಧರ್ ॥೭೦॥

ಪೊಡೆದೊಡೆ ಗಾಯದಿಂ ತಲೆ ಸಿಡಿಲ್ದು ನಭಕ್ಕೊಗೆದತ್ತು ಪಾಯೆ ಕಾ ।
ಯ್ವಡರ್ದು ಕಡಂಗಿ ಮುಂಬರಿದು ಪೊಯ್ವುತಿರಲ್ ನೆಗೆದಾಗಳಟ್ಟಿಯಿಂ ॥
ಕುಡಿಯಿಡುತುಂ ಝಲಮ್ಮೆನರಿಚಟ್ಟುವ ನೆತ್ತರ ಧಾರೆ ತಟ್ಟು ಕೆಂ ।
ಗೊಡೆವಿಡಿದಳ್ ಜಯಪ್ರಮದೆಯೆಂದೆನಲದ್ಭುತವಾದುದಾಹವಂ ॥೭೧॥

ತೆಱಪಳಿದೆತ್ತಿ ಕುತ್ತಿದ ಬಿಸುರ್ಕಳ ಗಾಯದ ಬಾಯ್ಗಳಿಂದಣಂ ।
ಪೊಱಮಡುತಿರ್ಪ ಪೆರ್ಗರುಳ್ಮಾಲೆಗಳಂ ಪೆಗಲೊಳ್ ತಗುಳ್ಚಿ ಬೊ ॥
ಬ್ಬಿಱಿದು ಪಟಂಚುವುಗ್ರಭಟರಾಜಯಲಕ್ಷ್ಮೀಜಪಾಪ್ರಸೂನದಿಂ ।
ತುಱುಗಿದ ಮಾಲೆಯಿರ್ಕೆದಳಿದಂತೆಸೆದರ್ ನಿಸದಂ ರಣೋರ್ವಿಯೊಳ್ ॥೭೨॥

ತಲೆ ಬೆಲೆಯಾಯ್ತು ಜೋಳವ ರಿಣಕ್ಕೆಮಗಾಳ್ದನ ಹಂಗು ನಾಡೆಯುಂ
ತೊಲಗಿದುದೀಮಹೋಗ್ರರಣರಂಗದಿನಿಂದೆಮಗೆಂಬ ರಾಗಮ ॥
ಗ್ಗಲಿಸಿದವೊಲ್ ನಭಕ್ಕೊಗೆವ ನೆತ್ತರ ಧಾರೆಗಳಿಂ ವಿಜೃಂಭಿಸು ।
ತ್ತೊಲಿದು ಕಡಂಗಿ ನರ್ತಿಸಿದುವಟ್ಟಿಗಳಟ್ಟಿಗಳಮಾಗಿ ಯುದ್ಧದೊಳ್ ॥೭೩॥

ವ ॥ ಅಂತಗುರ್ವಡೆದಡ್ಡಣಾಯತರೊಡ್ಡಣದ ಯುದ್ಧಾನಂತರದೊಳ್-

ಆರಣವಾರ್ಧಿಯೊಳ್ ನಡೆವ ಭೈತ್ರದ ವೊತ್ತಮೆನಲ್ಕೆ ಚಕ್ರಜೇ ।
ತ್ಕಾರರವಂ ಚಲತ್ಕದಳಿಕಾಗ್ರಚಯಗ್ರಥಿತತಪ್ರಚಂಡ ಘಂ ॥
ಟಾರವಮುತ್ಪುರವ್ರಜದ ಟತ್ಕೃತಿ ವಿಭ್ರಮವಾಹನೋಗ್ರಹೇ ।
ಷಾರವಮುಗ್ರ ಭೋಗ್ರರಥಯುಕ್ತಹರಿದ್ಧ್ವನಿ ರಥೋತ್ಸಧಂ ಶರಂ ॥೭೪॥

ಅವಿರತವೊಂದೆ ಬಟ್ಟೆವಿಡಿದುಯ್ದನಿತಲ್ಲದೆ ಬೇಱೆ ಜೋಡಿಸಲ್ ।
ರವಿರಥಸೂತನೆತ್ತಱಿವನೆಂದಿರದೇಡಿಸುತುಂ ವಿಚಿತ್ರಮ ॥
ಪ್ಪವೊಲಪಸವ್ಯಸವ್ಯಖಜುವಕ್ರಗಮಂ ಗಮಕಂ ಬೆಡಂಗು ಸಂ ।
ಭವಿಸುತಿರಲ್ಕೆ ತಾಮೆಸಗಿದರ್ ಸಲೆ ಸಾರಥಿಗಳ್ ರಥಂಗಳಂ ॥೭೫॥

ಪರಿಯಿಸೆ ಕೀಱಿ ಪಾಯ್ವ ರಥಯೂಥರಥಾಂಗದ ನೇಮಿಘಾತದಿಂ ।
ಧರಣಿ ಸುರುಳ್ದು ಕಂಪಿಸೆ ಪಟಂಚೆ ಹಯ ಧ್ವಜ ಸೂತ ಚಕ್ರ ಕೂ ।
ಬರ ಪವಿ ಕೀಲಜಾಲನೆನಸುಂ ಶತಖಂಡಮದಾಗಲೆಚ್ಚೊಡ ।
ಚ್ಚರಿ ನೆಲೆವೆರ್ಚಲಾರಥಿಗಳೊರ್ವರನೊರ್ವರನಾರಣಾಗ್ರದೊಳ್ ॥೭೪॥

ಕೆಡೆಯೆ ಹಯೋತ್ಕರಂ ಮಡಿಯೆ ಸಾರಥಿಗಳ್ ಕಡೆಕೀಲು ಕಟ್ಟಿ ಯ।
ಒಟ್ಟಡಿಯೆ ರಥಾಂಗಮುದ್ದಿಗೆ ನೊಗಂ ಶತಚೂರ್ಣವಿಶೀರ್ಣಮಾಗೆಯುಂ ॥
ಪಡೆಯದೆ ಕಾಯ್ವು ಕೈಮಿಗೆ ಖಡ್ಗಮಿಲ್ಲೆನೆ ಪೊಯ್ದು ನೆಲಕ್ಕೆ ಖಡ್ಗದಿಂ ।
ದಡಸಿ ಕತಂಗಿ ಪೊಯ್ದು ಕಡಿಖಂಡಮದಾಯ್ತೆನಸುಂ ರಥವ್ರಜಂ ॥೭೯॥

ವ॥ ಇಂತುಭಯಬಲದರ್ಧರಥ ಸಮರಥಮಹಾರಥರೇನುಂ ರಣಭೈ
ರವಾವಳೀಮನೋರಥಸಿದ್ಧಿಯಾಗೆ ಯುದ್ಧಂಗೆಯ್ದಾಗಳ್--

ಖುರಸಂಘಾತಪಟುಪ್ರಪಾತದೆ ನೆಲಂ ಜೇಱಿಲೀಚಿ ಸ್ಫೂತ್ಕಾರಘೋ ।
ರರವಂ ದಿಕ್ತಟಮಂ ಪಟಂಚಟೆಯೆ ಲಾಲಾಫೇನಜಾಳಂ ರಣೋ ॥
ರ್ವರೆಯಂ ಕೂಡೆ ಕಣಂ ಕೆಸರ್ಮಸಗಿಸಲ್ ಜೋ ಎಂದು ಘೋಜಾಯ್ಲರ।
ಬ್ಬರಮುರ್ಬುತ್ತುಮಿರಲ್ ತುರಂಗವುದಳಂ ತಾಗಿತ್ತು ತದ್ವೇಗದಿಂ ॥೮೦॥

ಜವದಿಂ ಪೊಯ್ದೊಡವೊಂದೆ ಗಾಯದೆ ಜವಂಗಂ ಮಾರಿಗಂ ಪರ್ಬುಗೊ।
ಟ್ಟವೊಲಿಂತಿರ್ಕಡಿಯಾಗಿ ಬೀೞಿ ಹಯಮುಂ ರಾವುತ್ತರುಂ ಭೋರನು ॥
ಳ್ಕುವ ನೆತ್ತರ್ ಕಡಲಾಗೆ ಸೋವ್ವ ಕರುಳ್ಗಳ್ ಜೆಟ್ಟಾಗೆ ಕಟ್ಟಾಯದಿಂ ।
ದವೆ ಕಾದಿತ್ತೆನಸುಂ ಕಡಂಗಿ ಕಡುಪಿಂದಶ್ವೀಯಸೇನಾಚಯಂ ॥೮೧॥

ಕಡುಪಿಂ ಪೊಯ್ಯೆ ಶಿರೋಜ ಮೆಯ್ಯ ಹಯಣಂದುಪ್ಪೋಡಿಯಾಗಲ್ ಜವಂ
ಗಿಡದಾವಾಘೆಯ ಗಾಢದಿಂ ಹಯಮನಂತಾನೀಕದಿಂ ಸುತ್ತಿ ತ ॥
ಮ್ಮೊಡಲಂ ಗಾಡಿಕೆಗೆಯ್ದು ಕಾಯ್ದು ಜಡಿಯುತ್ತುಂ ಖಡ್ಗಮಂ ನೂಂಕಿದರ್
ಪಡೆಗಾಶ್ವರ್ಯಮನಾಜಿಯೊಳ್ ಪಡೆಯುತುಂ ಘೋಜಾಯ್ಲರಾಭೀಳದಿಂ ॥

ವ॥ ಆಗಳಿಂತತ್ಯಾಸುರಮುಮತ್ಯದ್ಭುತಮುಮಾಗಿ ತಾಗಿ ತಪಿಲ್ಲ
ಳಾದ ಫೋಟಾಯ್ಲರ ಕಾಳೆಗಮಂ ಕಂಡು ಕಲ್ಪಾಂತಕೃತಾಂತರಂತೆ ಕಡು
ಮುಳಿದಾಧೋರಣರ್ ವಾರಣಂಗಳ ಮೊಗವಡಂಗಳಂ ಘಳಿಲೆನೆ ಕಳದು

ಸೃಣಿಯಿಂ ಪೊಯ್ದೊತ್ತಿ ಭೈಭೈಯೆನುತುಮಣೆದು ನೂಂಕಲ್ಕ ನಿಶ್ಯಂ
[ಕರಾಧೋ ।
ರಣರಾಗಳ್ ಕಾಯ್ದು ಕೆಂಗೋಲ್ ಮಸಗಿ ಮಿಗೆ ಚಳತ್ಕರ್ಣಪಾತಂಗಳಿಂ ಧಾ
ರಿಣಿಯೊಳ್ ಭೃಂಗಾಳಿ ಗಂಡಸ್ಥಲದಿನುರುಟಿಯುಂ ಕಾಯ್ದಕೆಂಬೆಟ್ಟನಂತಾ
ಕ್ಷಣಮಾಗಲ್ ಕೋಪತಾಪಂ ನೆಗಟಿ ಪರಿದುದಾಭೀಳವ ತ್ತೀಭಜಂಳಂ ॥

ವ॥ ಇಂತು ವಾರಣಾಕಾರಕೃತಾಂತಸಂತಾನದಂತೆ ಮೇಲೆ ಪರಿತಪ್ಪ
ದಮಿತಾರಿಭಚರಪತಿಯ ಮದವೂತಂಗಸಂಘಾತಮನಪರಾಜಿತಮಹಾರಾಜ
ಸೇನಾನಾಯಕರ್ ಕಂಡು ಘುಮುಘುಮಾಯಮಾನ ಮದಭೃಂಗಮಂಡಳೀ
ಮಂಡಿತಗಂಡಯುಗಂಗಳುಂ, ಶತಧಾರಾಸೂಜೀನಿಭೇರ್ದ್ಯ ಶರೀರತ್ರಾಣ
ಸನ್ನದ್ಧಬದ್ಧೋದರವ್ರಾಜಿತಂಗಳುಂ, ಪವಿನಿವಹನಿರ್ಮಿತವಿಶಾಲಶಾರಿ ಶ್ರೇಣಿ
ಕೋಣಗ್ರಥಿತಮಣಿಕಂಠಿಕಾಮಯ ಕನಕ ಕದಳಿಕಾದಂಡಕಾಂಡಕಮನೀ
ಯಂಗಳುಂ, ಕರಟತಟಗಳಿತ ದಾನಧಾರಾಯುಗಯುಕ್ತ ಕರತ್ರಿತಯಶಂ
ಕಾಯಮಾನಂಗಳುಂ, ನಿಜಚರಣನಖಾಗ್ರಪರಿಣಾತಿಕ್ರಮ ಕ್ರಮಣಾಯತ
ಕರಂಗಳುಂ, ಕೃತಾಂತಕುಂತಪ್ರತಿಮನಿಶಿತಾಗ್ರವಕ್ತ್ರದಕ್ಷಿಣದಂತಂಗಳುಂ,
ಏಕೋತ್ತರಾಶೀತಿವದಾನೀಕ ಪ್ರಸಿದ್ಧಂಗಳುಂ, ಪ್ರಚಂಡಾಗ್ರಡಿಂಡಿಮರ
ವಾಕೀರ್ಣರೋದೋರಂಗಂಗಳುಂ, ಗಜಶಿಕ್ಷಾಲಕ್ಷಣಕಲಾಪ್ರವೀಣಾಧೋ
ರಣಾಧಿಷ್ಠಿತಂಗಳುಮಪ್ಪ ಮದವಾರಣಂಗಳ ಮೊಗವಡಂಗಳಂ ಕಳದಣೆದು
ನೂಂಕಿದಾಗಳ್—

ಜನಿತೋದ್ಯದ್ಭಲ್ಲಹಿತಂಗಳ್ ವೊಲಗು ಪೊಳೆವ ಚಂಡಾಂಕಾಕಾರ್ಯೋತಿ
[ಸೌದಾ ।
ಮಿನಿಜಾಳಂ ತತ್ಕಪೋಳೋದ್ಗತಘನಮದಧಾರಾಳಿ ಧಾರಾಳಿ ಮೆಯ್ಯೊ ॥
ಡ್ಡ ನವೀನಾಭ್ರಾವಳೀವಿಭ್ರಮಮೆನೆ ವಿಲಯಾಂಭೋಧರಶ್ರೇಣಿಮೇಲ್ವಾ
ಯ್ದು ನಿತಾಂತಂ ಬಪರ್ವೊಲ್ ನೂಂಕಿದುದು ಗಜಘಟಾನೀಕಮಾಟೋಪ
[ದಿಂದಂ ॥೨೪॥

ಇರದೆಯ್ದಲ್ ಪಡೆಯಲ್ಲಿ ಬಿಚ್ಚಿ ಭಟರಂ ಚಂಡಾಂಘ್ರಿಸಮ್ಮರ್ದದಿಂ ।
ದರೆಯುತ್ತುಂ ಸೆಡೆದೋಡಿ ಪೋಪ ಭಟರಂ ಪೊಯ್ದೋಡುತುಂ ಕೊಂದುದಾ॥
ತುರದಿಂ ಕುತ್ತುತುರುಬ್ಬುತುಂ ರುಧಿರಮುಂ ಶುಂಡಾಗ್ರದಿಂ ಪೀರ್ದು ಘೂ ।
ತ್ಕರಿಸುತ್ತುಂ ಕರಿಸೇನೆ ನೂಂಕಿದುದು ರೌದ್ರಾಟೋಪದಿಂ ಕೋಪದಿಂ॥೪೫॥

ಇದಿರೊಳ್ ಕಾಯ್ದೋವದೆಯ್ತಂದುಭಯಬಲಗಜಶ್ರೇಣಿ ಕೈಯಿಕ್ಕಿ ಕ್ಕಿ [ಮಿಕ್ಕು] ।
ನ್ಮದದೋರಂತೊಂದನೊಂದೊತ್ತುವ ಪದಹತಿಯಿಂದುರ್ವಿ ಬಳ್ಕುತ್ತಿರಲ್ ಕುತ್ತಿದ ಕೋಡೇಳಂ ಝಲುಂಮೆಂದುಗುವ ರುಧಿರದಿಂದಾರುವಾರ್ನಿರ್ಝರ [ರೋತ್ಪ್ಲ] ।
ರದಗುರ್ವಂ ಪೆತ್ತ ನೀಲಾಚಲದ ಬಳಗದಂತಿರ್ದುದುಗ್ರೇಭಸೈನ್ಯಂ ॥೪೬॥

ವಾರಣಮುಂ ಸಮಂತಣೆದು ನೂಂಕಿ ನಿಶಾತಶರೈಕದಿಂದಮಾ ।
ಧೋರಣನಾರ್ದು ತನ್ನಿಸಲಾಸರಲಂ ಸೃಣಿಯಿಂದುರುಬ್ಬಿ ಯಾ ॥
ಧೋರಣಹಸ್ತಮುಂ ತದಿಭಹಸ್ತಮನೊರ್ವೊರ್ದಲಸ್ತ್ರವೊಂದಱಿಂ ।
ದಾರಣದೊಳ್ ನಿಪಾದಿಯಿಸೆ ಮೆಚ್ಚಿದನಚ್ಚರಿವಟ್ಟ ಭೂವರಂ ॥೪೭॥

ಉರಮಂ ನಾರಾಚದಿನಿಸೆ ।
ಸರಲದು ಪೇಚಕಮನುರ್ಚಿ ನೆಲನಂ ನೆಹೆ ನ ॥
ಟ್ಟರೆ ಕುಕ್ಕುಱಿಸಿರ್ದುದು ಮದ ।
ಕರಿ ಬೆನಕನ ಜೋಹದಂದದಿಂದಾಹವದೊಳ್ ॥೪೮॥

ಆರಣದೊಳ್ ನೂಂಕಿದ ಮದ ।
ವಾರಣಕರಮುಂ ನಿಪಾದಿಯಿಸೆ ತತ್ಕರಿ ಮುಂ ॥
ದಾರೆಣಿಕೆಯೆತ್ತಿದುಗ್ರ ।
ಕಾರವರಾಹಂ ಬೊಲಿರ್ದುದಂತಾಪದದೊಳ್ ॥೪೯॥

ಘನಸೇತ್ಕಾರರವಂ ಪೊದಱ್ದು ಪರಿತಂದುಗ್ರದ್ವಿಪಂಗಳ್ ಪಟಂ ।
ಚೆ ನಿಕೃಷ್ಟೋನ್ನತದಂತದಂತಹತಿಯಿಂದೋರಂತೆ ಪೋರುತ್ತಿರಲ್ ॥
ತನಿಗೆಂಡಂಗಳ ತಂದಲುರ್ವೆ ಪೊಗೆಯುತ್ತುಂ ಪೊತ್ತಿ ಕಾಯ್ಪೋಲಿ ತೊ ।
ಟ್ಟನೆ ಕಾಲಂ ಬಿದಿರುತ್ತೆ ಜಟ್ಟವೆರಡುಂ ತತ್ಕ್ರೋಧಮುಗ್ರಯುದ್ಧದೊಳ್॥

ಗಿರಿ ಗಿರಿಯೊಳ್ ಕಡಂಗಿ ಪೊಣರ್ವಂತಿರೆ ಪೋರ್ವೆಮಧೇಭದಂತೆ ನಿ ।
ಷ್ಠುರಹತಿಯಿಂದೆ ಸೆಕ್ಕೆಗಳ ತೆಕ್ಕೆ ನಭಕ್ಕೆ ಪೊದಳ್ದು ಪಾಳಿ ಕಾ ।
ಯ್ದುರವಣೆ ಕಾಯ್ದು ಕೋಡ ವೊನೆಯಿಂದಿರದೇಳುಗಳಿಂದಮುರ್ಕ್ಕೆ ।
ತ್ತರ ಕಡಲೆತ್ತಲುಂ ಪರಿಯೆ ತಾಗಿದುದದ್ಭುತವಾಗಿ ಯುದ್ಧದೊಳ್ ॥೯೧॥

ಉರದುಚ್ಚಂಡಶರಂಗಳಂ ಡೊಣೆಗಳಿಂದಾರ್ದುರ್ಚ್ಚಿ ಜೋದರ್ ಕರಂ।
ಕಡುಪಿಂ ಕಾಯ್ದಿಸೆ ಪೊಯ್ದು ವಜ್ರಮುಖನಾರಾಚೋಗ್ರಬಾಣೋತ್ಕರಂ।
ನೆಲಿ ಸರ್ವಾಂಗಮನುರ್ಚ್ಚಿ ತಟ್ಟುಗಿಯೆ ತಾಳಿಟ್ಟಯ್ದಿ ಬಾಯ್ವಿಲ್ಲವೊಲ್ ।
ಗಲಿಗೂಡಾಗಿರೆ ಬಿರ್ದುದಂತೆ ಕೆವೆಟ್ಟಂಬಂತೆ ದಂತಿವ್ರಜಂ ॥೯೨॥

ವ॥ ಆಗಳಿಂತಳವಟ್ಟಿದು ತವಿಲಾದ ತನ್ನ ಸೈನ್ಯದ ಗಜಸೇನಾಸಮೂಹಮೆಯ್ದಿ ವಿನಾಶಮೆಯ್ದಿದುದನಪರಾಜಿತನೃಪನ ಮದವದಿಭಘಟಾನೀಕಂ ವಿಜಯಪ್ರತಾಪಾಟೋಪಮನಪ್ಪುಕೆಯ್ದುದಂ ದಮಿತಾರಿ ಕಂಡು ಕೋಪಾರುಣಿತನೇತ್ರನಾಗಿ ಬೇಗದಿಂ ಸ್ವಕೀಯಮೂಲಬಲಮನೆರಡೊಡ್ಡುಗೆಯೊಂದ್ದಿ ರಥಾರೂಢನಾಗಿ ಚಂಡಕಂಡೂಯವಾನ ಮದಕರಿಕಟಕಪಟುರವಾಪಾತಹರಿ ಭಂಗನಿದ್ರನಾದ ಸಿಂಹದಂತೆ ಕಂಗನೆ ಕನಲ್ದು ಕೆಂಗೋಲ್ಗಸಗಿ ಮೇಲೆತ್ತಿ ನೂಂಕಲನುಗೆಯ್ದು ಬರಲಿತ್ತಲದಂ ಕಂಡಪರಾಜಿತಾನಂತವೀರ್ಯರ್ ತಮ್ಮ ಸೇನೆಯಂ ಸಮ್ಮುಖದೊಳಿರ್ಮಯ್ಯಾಗಿ ಮಾಡಿಸಿ ಪವನಂಜಯರಥಾಂ ಚಿತವಾಜಿಯೋಜಿತಂಗಳುಂ, ವೈಜಯಂತೀಪರಾಜಿತಂಗಳುಂ, ದಿವ್ಯಾಸ್ತ್ರ ಶಸ್ತ್ರಸಂಪೂರ್ಣಶೋಭಿತಂಗಳುಂ, ವಿಜಯಲಕ್ಷ್ಮೀಸಮಂಗಳಸಿಳಿಯಂಗಳುಂ, ನಿಜಮನೋರಥಂಗಳುಮೆನಿಸಿದ ವಜ್ರರಥ ಧೃಢರಥಮೆಂಬೆರಡುಂ ರಥಂಗಳ ನಿರ್ವರುಮಲಂಕರಿಸಿ—

ಯಮಬಲನಪ್ಪ ಬಲಂ ರಿಪು ।
ಸಮಗ್ರಬಲಜೀವಬಲಹತಂಗೆಯ್ದು ರಣೋ ॥
ದ್ಯಮನಾದಂ ಭುಜಬಲವ ।
ದ್ದಮಿತಾರಿಗೆ ವಾರಿಜಾಕ್ಷನಭಿಮುಖನಾದಂ ॥೯೩॥
ಸಮರೋತ್ಸಾಹಮಡುರ್ತು ತಮ್ಮ ಮನಮಂ ತಟ್ಟಿಳುಕಿ ದೋರ್ದಂಡಪೀ।
ಠಮನುದ್ಯಜ್ಜಯಲಕ್ಷ್ಮಿಯೇಳುಕಿ ಪರಸೈನ್ಯಸ್ವಾಂತಮಂ ಭೀತಿಯೇ ॥

ಱಿ ಮರುನ್ಮಾರ್ಗಮನಾಹವಾನಕರವಾನೀಕಂ ಪೊದಲ್ದಿಱಿ ಸಂ ।
ಭ್ರಮದಿಂದೇಱಿಸಿದರ್ ಬಲಾಚ್ಯುತರುದಗ್ರಾಟೋಪಮುಂ ಚಾಪಮುಂ ॥೪೪॥

ವ॥ ಆಗಳಿರ್ವರುಂ ಮಾವಂಲಂ ಭಯಂಬಡೆಯೆ ಜೇವ್ರೊಡೆದು ದಮಿತಾರಿಯ ಪಡೆಗೆ ಪರಿನ ಮಾರಿಯ ಮೂಲಗಳಂತೆರಡೊಡ್ಡುಮಂ ಕವಿದು ತಾಗಿದಾಗಳ್—

ಇಸೆ ತಾಳಧ್ವಜನೊಂದು ಬಾಣನುದು ಕೋಟಾಕೋಟಿ ಬಾಣಂಗಳಾ ।
ಗಿ ಸಮುಂತಿಟ್ಟು ಸಮಗ್ರಸೈನ್ಯಮನಣಂ ನಟ್ಟುರ್ಚಿ ಪ್ರಣ್ಣಟ್ಟು ಕೂ ॥
ರ್ಪಿಸಕಂಗೆಟ್ಟುರದೊಡ್ಡಿ ತನ್ನ ಮಱೆಗೆಯ್ತಂದಂದಮಂ ಸೀದು ನಿ ।
ಟ್ಟಿಸಿ ಕಟ್ಟಾಯದಿನೇವದಿಂದೆ ದಮಿತಾರಿ ಕ್ರೋಧಮಂ ತಾಳ್ದಿದಂ ॥೪೫॥

ಅಪರಾಜಿತನಿರ್ದೆಡೆಗೆಸ ।
ಗು ಪಜಿಂಚೆಸು ರಥನುನೆಂದು ಸಾರಥಿಗುಸಿರ್ದಾ* ।
ಕುಪಿತನುಖನಪ್ಪ ದಮಿತಾ
ರಿ ಪೊದಲ್ದುಚ್ಚಂಡಚಾಪಮುಂ ಕೈಕೊಂಡಂ ॥೪೬॥

ಅದಿರೆ ಧರೆ ಬಿದಿರೆ ಕುಲನಗ ।
ಮುದಧಿ ತುಱುಂಕಾಡುತಿರೆ ವರೂಥಮನಾವೇ ॥
ಗದಿ ಪರಿಯಿಸೆ ಸಾರಥಿ ನಿಲಿ
ಸಿವನದರಾಜಿತನ ಪೃಥುಲರಣಮುಖದೆಡೆಯೆಱಳ್ ॥೪೭॥

ಒದವಿದ ವಿಲಯಾಂತಕನಂ ।
ದದಿನಿರ್ದಪರಾಜಿತಾವನೀಪತಿಯಂ ಕ ॥
ಟ್ಟಿದಿರೊಳ್ ಕಂಡುದ್ಧತಕೋ ।
ಪದಿನಿರೆ ದಮಿತಾರಿ ಗಜಿಸಿ ಗರ್ಜಿಸಿ ನುಡಿದಂ ॥೪೮॥

ನಿನಗೇಕೀಗಂಡು ನಾಸ್ಗಿಟ್ಟವನೆ ನೆನೆವುದೇಂ ನರ್ತಕೀರೂಪದಿಂ ಱಂ ।
ದಿನಿತೊಂದುಂ ಲಜ್ಜೆಯಂ ಮತ್ತದನಱಿಯದೆಯುಂ ಮತ್ತನೂಜಾತೆಯುಂವಂ
ಚನೆಯಿಂ ಕಳ್ದುಯ್ದುದಂ ನಿನ್ನೆಸವ ವಿಷಮದೀಯಂದಮಂ ಬಿಟ್ಟು ಕಟ್ಟಾ ।
ಳ್ತನುಮಂಕೈಕೊಂಡೆಕೊಂಡಂತದಿರದಿರೆನುತುಂಕೋಪದಿಂ ಖೇಚರೇಂದ್ರಂ॥

ತುರಿಸಿದೆ ನೀವಿ ಜೀರ್ನೊಡೆದು ದಿವ್ಯಕರಾಸನಮುಂ ವಿಯಚ್ಚರೇ ।
ಶ್ವರನಿರಮಗ್ರಬಾಣನುನೆ ತೊಟ್ಟಸೆ ನೆಟ್ಟನೆ ಕೋಟಿರೂಪಮಾ ॥
ಗಿರೆ ಪಿರಿದುಂ ವಿಗುರ್ವಿಸುತುಮಚ್ಚರಿಯುಂ ಕವಿತಂದು ಕೂಡೆ ಚೆ ।
ಚ್ಚರದೊಳೆ ಸುತ್ತಿ ಮುತ್ತಿದುದು ತಾಳಪತಾಕನ ಸೈನ್ಯಜಾಲಮಂ ॥೧೦೦॥

ಬಟ್ಟೆಯೊಳೆ ತೊಟ್ಟನೆ ತೊಟ್ಟಸೆ ।
ಬಳಭದ್ರನರೌದ್ರಬಾಣಮದು ರಿಪುನರಸಂ ॥
ಕಾಳಮನಣಂ ತೊಲಗಿಸಿದುದು ।
ಘಳಿಲೆನೆ ಘನಕಾಲಮನಳರಿಪನಿಲನ ತೆಱದಿಂ ॥೧೦೧॥

ವ। ಅವಂ ಕಂಡು ಖಚರೇಂದ್ರಂ ತನ್ನಯ ಬಹುರೂಪಿಣೀವಿದ್ಯಾ ವಿಜೃಂಭಿತದಿಂದನಂತದಮಿತಾರಿರೂಪಮಂ ತಳೆದು ತಡೆಯದೆ ಪಗೆವಡೆಯೆಲ್ಲಮಂ ಪುಂಖಾನುಪುಂಖಮಿಸೆ ತದೀಯಬಾಣಶ್ರೇಣಿಗಳ ಸಿಂಧುರಘಟಾವಳಿಯಂ ಸಿಂಹರೂಪದಿಂ ಪಾಯ್ದು ಪೊಯ್ದಿಕ್ಕುತುಂ ತುರಂಗಮದಳಂಗಳಂ ಲಯಕಾಲಲುಲಾಯರೂಪದಿಂದೆಯ್ದೆ ಘ್ರಾತಿಸಿ ಗಾಯಂಗಳಿಂದುಗುವ ಕರುಳ ಮಾಲೆಗಳಂ ಕೋಡವೊನೆಯಿಂದಾಗಸಕ್ಕೀಡಾಡುತ್ತುಂ ವರೂಥಯೂಥಂಗಳಂ ವಜ್ರದಂಡಾಯಮಾನಮುದ್ಗರಾಘಾತದಿಂ ಪೊಯ್ದು ನುಚ್ಚು ನೂರುಮಾಡುತುಂ ಪದಾತಿವರ್ಗಮಂ ಪ್ರಲಯಕಾಲದ ಸಿಡಿಲಾಗಿ ಪೊಡೆದು ಪೊರಟ್ಟಿ ಕೆಡಪ್ರತ್ತುಂ ಲಯಕಾಲಾಭ್ರೇಳಭೈರವಾಕಾರದಿಂ ಪಡೆಯೆಲ್ಲಮಂ ಪಡಲ್ವಡಿಸುತುಂ ವೀರರಾಕ್ಷಸಾಕಾರದಿಂ ಬಲಮೆಲ್ಲಮಂ ಭಯಂಗೊಳಿಸುತ್ತುಮಿರೆಯುಮದರ್ಕೆ ಬಿಗುರ್ತು ಕಿಱ್ತಲೆ ಕೆಲಂದಲೆಯಪ್ಪ ತನ್ನಯ ಸೈನ್ಯಮನ ಪರಾಜಿತನರೇಂದ್ರಂ ಕಂಡು—

ಬಹಳಾರ್ಜರ್ಮರಯರೌದಾ ।
ವಹದ ಮಹಾಬಹಳವಿದ್ಯೆಯಂ ಬಲಭದ್ರಂ ॥
ಬಹುವಿಧದಿಂ ಬಾಧಿಸುವಾ ।
ಬಹುರೂಪಿಣಿವಿದ್ಯೆಯಂ ವಿದಾರಿಸಿ ಕಳೆದಂ ॥೧೦೨॥

ವ। ಅದಂ ಕಂಡು ಕೋಪಾಗ್ನಿಯಿಂದುರಿದು ದಮಿತಾರಿ ತೊಟ್ಟನು ತಿಯು ಬಾಣನಂ ಕೊಂಡಿವನಂ ಬಲಸಹಿತಮುರಿಪಿ ಕಳವೆನೆಂದಾಗಳ್—

ಬಗೆದ ನಿಜಕೋಪಶಿಖಿ ಕೈ ।
ಮಿಗುತಿರೆ ದಮಿತಾರಿಖಚರಪತಿ ಪಗೆವಡೆಯುಂ ॥
ಭುಗುಭುಗಿಲೆನೆ ದಳ್ಳುರಿಗಳ್ ।
ನೆಗೆಯುತ್ತಿರೆ ಪಾವಕಾಸ್ತ್ರಮಂ ತೊಟ್ಟಚ್ಚಂ ॥೧೦೩॥

ಉರಿಯುಂಬು ಸುತ್ತಿ ಸುಡುತಿರೆ ।
ಧುರಧರೆ ನೆಲಕೆ ಪೊತ್ತಿ ಕಾಯ್ದ ಕಾವಲಿಯವೊಲಾ ॥
ಗಿರೆ ಪಡೆ ಮಡಮಡಮಗ್ಗುವ ।
ಪರಿಯುಂ ಕಂಡಾಗಳಂತೆ ತಾಳಪತಾಕಂ ॥೧೦೪॥

ತಡೆಯದೆ ಜಲಧರಬಾಣಮು ।
ನೆಡೆಯುಡುಗದೆ ತೊಟ್ಟು ಭೂಪನಾರ್ದಿಸಲಾಗಳ್ ॥
ಪಡೆಯ ಪರಿತಾಪಮದು ಮೆ ।
ಯ್ಯುಡಗಿದುವಾಖೇಚರೇಂದ್ರನನಲಶರಂಗಳ್ ॥೧೦೫॥

ವ॥ ಆಗಳ್ ನಿಜಾನಲಾಸ್ತ್ರಸ್ವಕೀಯ ಪ್ರತಾಪಲಯಮನಱಿಪುವಂತೆ ಪನ್ನಗಾಸ್ತ್ರಮಸುಹೃತ್ಸೈನಾಹಿರೂಪಾಂತಕಂ ಪನ್ನಗಾಸ್ತ್ರದಿಂದಿಸುವುದುಂ ಪಡೆಯೆಲ್ಲಂ ಪಿಡಿವೆತ್ತ ಕಳ್ಳರಂತೆ ಕಟುಸಟುಪ್ರಬಲಸಾಹಸಿಕರಪ್ಪ ವೀರ ಭಟರೆಲ್ಲಂ ನಟ್ಟಂತೆ ಮಿಟ್ಟನೆ ಮಿಸುಕದಿರೆ ನೆಟ್ಟನೆ ಕಂಡು ಕಟ್ಟಾಸುರಂ ವ್ಯಸಗಿ ಮುಸಲಧರನಾಗಳ್—

ಘುಡಿಲೆನೆ ಗಾರುಡಾಸ್ತ್ರಮನದಂ ತುಡೆ ತಾಳಪತಾಕನಾಗಳಿಂ ।
ತಡೆದುದು ಜೀರ್ಣತಾರ್ಣಕೃತದಾಮದವೊಲ್ ಪರಿಪಟ್ಟುವೋಯ್ತುಮೂ ॥
ವಳಸಿದ ನಾಗಪಾಶಶರಸಂಕುಳಮೆಂದೆನೆ ಪ್ರೌಢೇಭಕ್ಷಿ ಸಂ ।
ಗಳಸಿದ ತನ್ಮಹಾತ್ಮಕರಭೀಕ್ಷಿಸೆ ನಿಲ್ವವೆ ಶಸ್ತ್ರಬಾಧೆಗಳ್ ॥೧೦೬॥

ವ॥ ಅದಕ್ಕೆ ಬೆಕ್ಕಸಂಬಟ್ಟು ಖಚರೇಂದ್ರಂ ಕಡುಮುಳಿದಾಗಳ್—

ದಮಿತಾರಿ ಕೋಪದಿಂ ತುಡೆ ।
ತಿಮಿರಾಸ್ತ್ರಮನೊಡನೆ ಗಡ ಬಲಂ ತಿಮಿರುದ್ಧಂ ॥
ಸಮನಿಪ್ಪ ತಿಗ್ಮಕರಬಾ ।
ಣಮನಾತ್ಮೀಯಪ್ರತಾಪರೂಪಮನಾಗಳ್ ॥೧೦೭॥

ವ॥ ಆ ಮಹಾಬಲನಪ್ಪ ಬಲಭದ್ರನ ರೌದ್ರಪ್ರತಾಪಶಿಖಿ ಶಿಖಾವಳಿಯಂತೆ ಮುಂಬರಿದು ರವಿಬಾಣದ ಬೆಳಗಿನ ಬಳಗಮುಂ ಕಂಡು ಉಲ್ಕಾಪಾತಮುಂ ಕಂಡ ಬಾಲಕನಂತೆ ಕಣ್ಣುಳ್ಕಿ ದಮಿತಾರಿ ನಿಜನಿಖಿಳವಿದ್ಯಾಬಲದ ಪೊಡರ್ಪಟ್ಟಿದುದಂ ವ್ಯವಮೃತಭಯಮಾದುದಂ ಸಮಸ್ತಮೂಲಬಲಮಸ್ತಮಾದುದಂ ಪ್ರಕೃತಿಪ್ರಭಾವೋದಯನಪಜಯಮೊಂದಿದುದಂ ಸಂದೆಗಮಿಲ್ಲದಿರ್ದೆ ವಂದಿತಪರಾಕ್ರಮಚಕ್ರಮನಸ್ಮದಾಚ್ಛಂಡಚಕ್ರದಿಂ ಖಂಡಿಸುವೆನೆಂದು ಕುಂಡಳಿತಕೋದಂಡಮನಿಟ್ಟಿಪಿ ವಿಲಯಪ್ರಚಂಡಭೈರವಾಡಂಬರಮುಂ ಕೈಕೊಂಡು ಪಾಱುಂಬಳೆಗೆ ವಿಸಿಱಿ ಕೆಯ್ಮಾಡಿವಾಗಳ್ ಯಕ್ಷಸಹಸ್ರಲಕ್ಷಿತ ಚಕ್ರರತ್ನಂ ಚಣ್ಡಾನಲಜ್ವಾಲಿಕಾಮಾಲೆಯಂ ಕೆದಱುತ್ತುಂ ಸರಭಸದಿಂ ಬರುತ್ತಿರೆ—

ಸೆಡೆವಾಕಾಧೀಶರೆಯ್ದಳ್ಕುಱೆ ರವಿ ಬಿಡೆ ಕಾಯ್ವುಂ ತದಶ್ವವ್ರಜಂ ಕ ।
ಣ್ಗಿಡೆ ಭೂಚಕ್ರಂ ಕರಂ ಕಂಪಿಸೆ ಕುಳನಗಮಳ್ಕಾಡೆ ತುಱ್ಕಾಡೆ ನೀಡುಂ ॥
ಕಡಲೆಲ್ಲಂ ನಾರದಂ ನೀರದದೊಳುಲಿಸೆ ಗೀರ್ವಾಣರಾಯೆಂದು ಚೋದ್ಯಂ
ಬಡೆ ಬಂದತ್ತೆತ್ತಲುಂ ದಳ್ಳುರಿಯನುಗುಱುತುಂ ಪೇಚರಾಧೀಶಚಕ್ರಂ ॥

ವ॥ ಅದಂ ಕಂಡರವಿಂದದಳಗತಜಲಬಿಂದುಸಂದೋಹದಂತಪರಾಜಿತನೃಪನ ಪಡೆಯೆಲ್ಲಂ ನಡನಡುಗಿ ನಿಜಾಧಿನಾಥರಕ್ಷಾರ್ಥಮಾಗಿ ತೀರ್ಥಕರ ಪರಮದೇವಾಭಿಷವಣಸತ್ಕ್ರಿಯಾನೀಕಮಂ ಗಣನೆಗೆಯ್ದು ಪರಸುತ್ತುಂ ಮೃತ್ಯುಂಜಯನಿಮಿತ್ತಂ ಅರ್ಹತ್ಪರಮೇಶ್ವರಪರಮಮಂತ್ರಸಂತಾನಮಂ ಜಪಿಸುತ್ತುಂ ಜಿನೇಶ್ವರಚರಣಮೆ ಶರಣಮೆನುತಿರ್ಪಾಗಳ್—

ಅತುಳಸ್ಥೈರ್ಯಗುಣವ್ರಜೋಪಹಸಿತಾಮತ್ಯುಚ್ಚಲೇಂದ್ರಂತೃಣೀ ।
ಕೃತವೀರಾದಿಬಲಂ ಸುಸತ್ವಮುಯಜೆತ್ತೋದಸ್ಕೃತಾಂಬೋಧಿ ನಿ ॥
ರ್ಜಿತಶಂಕಂ ಸಲೆ ಶಂಕೆಗೊಳ್ವ ಪಡೆಯಂ ಸೈತಿಟ್ಟು ಸತ್ಸಂಗರೋ ।
ದ್ಯತನಾವಂ ಬಗೆಗೊಳ್ವೊಡೇನಧಿಕನೋ ಪೀತಾಂಬರಂ ಭೂಪರೊಳ್ ॥

ವ॥ ಆಗಳತ್ತಲ್ ತನ್ನ ಮುಖದೊಳ್ ತೊಡರ್ದನ್ಯಸೈನ್ಯಮಂ ಕೀನಾಶನಿವಾಸಂಬುಗಿಸಿದನಸಂತವಿರ್ಯನಿದಂ ಕಂಡು ನಿಮಿಷಮಾತ್ರದಿಂ ನಿಜಾಗ್ರಜನಲ್ಲಿಗೆಯ್ತಂದು ದೇವ ನೀವಿನಾಯುದ್ಧಕ್ಕೆ ಸನ್ನದ್ಧರಾಗಲೇಕಾನೆ ಸಾಲ್ವೆನೆಂದು ಪ್ರಲಬ್ಧಾನುಜ್ಞನಾಗಿ ದಮಿತಾರಿಗಿದಿರ್ದಿನಿಂದು ನಿಜೋಚ್ಚಂಡಕೋದಂಡಮಂ ಕೊಂಡು—

ಕಡುಪಿಂ ಕಂಜೇಕ್ಷಣಂ ಜೀವೊಡೆಯೆ ಕಟುರವಕ್ಕಳ್ಕಿಯ್ಯೆ ರಾವತಂ ಕಾ।
ಯ್ದುಡುಗಿತ್ತಾ ಪುಂಡರೀಕಂ ಕೊರಗಿತು ಕುಮುದಂ ಕುಂದಿತಾವಾಮನೇಭಂ॥
ಕಡುಗಂದಿತ್ತಂಜನಂ ಕಂಪನವೊದವಿ ಪೊಡಪೋರ್ದಿತಾಪ್ತಪ್ಪದಂತಂ ।
ಸೆಡೆಯಿತ್ತಾ ಸಾರ್ವಭೌಮಂ ಸುಗಿದು ಮಿಗೆ ಭಯಂಬೆತ್ತು ದಾಸುಪ್ರತೀಕಂ ॥

ಸರಿಸಂ ನಿಲ್ ದಮಿತಾರಿ ಚಕ್ರಮನಿದಂ ನೀಂ ನಚ್ಚ ದಿರ್ ನೋಡೆ ಕೋ।
ವರ ಚಕ್ರಂ ದಿಟವೆನ್ನದೊಂದು ಶರದಿಂದೀಚಕ್ರಮಂ ನಿನ್ನುಮಂ ॥
ನೆರೆದೀನಿನ್ನಯ ಸೈನ್ಯಮಂ ನೊಣೆಯಲಿನ್ನೀಬಂದುದೆಂದಾರ್ದು ಚೆ ।
ಚ್ಚರದಿಂದುರ್ಚಿದನಚ್ಯುತಂ ದೊಣೆಯಿನತ್ಯಾಭೀಳಮಂ ಬಾಣಮಂ ॥೧೧೧॥

ಅನಾಗಳ್ ಕಂಡಿವನಂ ।
ವೊದಲೊಳ್ ಚಕ್ರಾಗ್ನಿಗೀವೆನಾಹುತಿಯನೆನು ॥
ತ್ತೊದವಿದ ಮುನಿಸಿಂ ಕೊಂಡಂ ।
ಸುದರ್ಶನಾಯುಧಮನಾವಿಯಚ್ಚರನಾಗಳ್ ॥೧೧೨॥

ನೆರೆದಾರುತ್ತಿರೆ ಖೇಚರಪ್ರಚಯಮುತ್ತಲ್ ಬಾಯ್ವಿಡುತ್ತಿತ್ತಲಿಂ ।
ತಿರೆ ಮೆಯ್ವಿಟ್ಟ ಸರಾಜಿತಾವನಿಪಸೈನ್ಯಶ್ರೇಣಿ ಮೇಘೌಘದೊಳ್ ॥
ಸುರರೆಲ್ಲಂ ಬೆಱಗಾಗಿ ನೋಡುತಿರೆ ಸೈತಾಗೆಂದೆನುತ್ತಂಬುಜೋ ।
ದರನಂ ತಾಂ ದಮಿತಾರಿ ಕೋಪದೊದವಿಂದಾರ್ದಿಟ್ಟನಾಚಕ್ರದಿಂ ॥೧೧೩॥

ಉರಿಯುಂ ಸೂಸುತ್ತುಮೆಂಟುಂ ದೆಸೆಗೆ ಭುಗುಭುಗುಧ್ವಾನಮಂಭೋದ
[ಮಾರ್ಗಾಂ ।
ತರನುಂ ಪವ್ರುತ್ತಿರಲ್ ಪಾಯ್ದುಗುವ ಕಿಡಿಗಳಿಂ ಧಾತ್ರಿ ಪೊತ್ತುತ್ತಿರಲ್ ಭಾ
ಸ್ಕರಬಿಂಬಂ ಮೇಲೆ ಖದ್ಯೋತದೊಲಿರಲರುಣಂ ಬೇಗದಿಂ ಬಂದು ಪದ್ಮೋ।
ದರದೋದ್ದಂಡಾಗ್ರದೊಳ್ ನಿಂದುದು ಸಲೆ ಬಲವಂದಾಗಳಾಚಕ್ರರತ್ನಂ ॥

ಅಂಬುರುಹಮಿತ್ರಬಿಂಬಾ ।
ಡಂಬರಮುಂ ಮಿಕ್ಕು ಚಕ್ರಮಿರೆ ಕೆಲಗೊಳ್ ಪೀ ॥
ತಾಂಬರನೀಕ್ಷಿಸಿದಂ ನೀ ।
ಲಾಂಬರನ ಮುಖಾರವಿಂದಮುಂ ಮುದದಿಂದಂ ॥ ॥೧೧೪॥

ವ॥ ಅಂತು ನೋಱ್ಪುದುಂ ಪೀತಾಂಬರಂಗೆ ನೀಳಾಂಬರನಿಂತೆಂದಂ:—

ಚಕ್ರಧರಂ ನೀಂ ನಿನ್ನದು ।

ಚಕ್ರಮಿದಿಡು ಪಗೆಯನೆಂದು ಬಲನೆನಲಂತಾ ॥
ಚಕ್ರಮನೆ ಕೊಂಡು ಹರಿಪಟು ।
ವಿಕ್ರಮದಮಿತಾರಿಶಿರಮನಾರ್ದ್ರಮದಿಟ್ಟಂ ॥೧೧೬॥

ಸುರರಾಯೆಂದುಲಿಯುತ್ತುಮತ್ತಿರೆ ಬಲವ್ಯೂಹಂ ಮಹೋತ್ಸಾಹದಿಂ ।
ಪಿರಿವಾರುತ್ತಿರೆ ತದ್ವಿಯಚ್ಚರರ ಕಣ್ಣೀರ್ ಭೋರನೋರಂತೆ ಬೀ ॥
ಟ್ಟಿರೆ ಭೂಸ್ವನ್ಮಕುಟೋಲ್ಲಸನ್ಮಣಿಗಣಂ ಝಲ್ಲೆಂದು ಸೂಸುತ್ತಿರಲ್ ।
ಧರೆಗಾಗಳ್ ದಮಿತಾರಿಶೇಚರಶಿರಂ ಬಿಜ್ಜತ್ತಗುರ್ವಪ್ಪಿನಂ ॥೧೧೭॥

*ಅಲರ್ವಟ್ಟಿ ಕಟ್ಟಿದುದು ಭೋರೆಂ ।
ದುಲಿದುದು ದೇವಾನಕಂಗಳಾಶಾಧೀಶರ್ ॥
ನಲಿದರ್ ದಮಿತಾರಿಯ ತಲೆ ।
ನೆಲಕ್ಕೆ ಬೀೞ್ಲೆ ಬಲದೊಳಾಯ್ತನುರಾಗಂ ॥೧೧೮॥

ವ॥ ಆಗಳನಂತಶೌರ್ಯನಪ್ಪನಂತವೀರ್ಯಂ ದಮಿತಾರಿಶಿರೋಜ್ಜ
ದಿಂವಪರಾಜಿತಪದಾಬ್ಜಮಂ ಪೂಜಿಸಿ-

ಅನುಜನ ಭುಜಪ್ರತಾಪ ।
ಕ್ಕನುರಾಗಮನೆಯ್ದಿ ತಡೆಯದನುರಾಗಮನಿ ॥
ತ್ತನುದಗ್ರಕಂಟಕಾಂಚಿತ ।
ಘನಭುಜದಿಂದೆಪ್ಪಿ ಭುಜಬಲಂ ಬಲದೇವಂ ॥೧೧೯॥

ವ॥ ಆಗಳಲ್ಲಿ ಪರಿವ ರುಧಿರಪ್ರವಾಹಮನಡ್ಡಂಬಾಯಲಾಱದೆ ಪೊನ
ಲೊಳಡ್ಡಂಬೀೞ್ವ ದೊಡ್ಡ ಮರುಳ್ಗಳಂ, ಕುಪ್ಪೆಗೊಂಡಂತೆ ಕರುಳ್ಗಳ ಬಳ್ಳಿ
ಯೊಳ್ ಸಿಲ್ಕಿದ ಕಾಲಂ ತೆಗೆಯಲಾಱದೆ ಸಿಡಿಮಿಡಿಗೊಂಡು ಬಲ್ಮರುಳ್ಗಳ
ವೊಗಮಂ ನೋಡುವ ಪುಲ್ಮರುಳ್ಗಳ ಲಾಲಾಜಲದೊಳ್ ಜಲಕೇಳಿಗೆ ಪೊ
ಕ್ಕು ತಲದೊಳ್ ತೆಕ್ಕೆಗೊಂಡ ನುಣ್ಮಿದುಳ ಲೊದಳೆಯಂ ಮೆಟ್ಟಿ ಜಗಟ್ಟಿದ
ನಿಲಲಱಯದೊರ್ವರೊರ್ವರಂ ಪಿಡಿದು ಬೀೞ್ದ ಡಾಕಿನಿಯರಂ, ತೆಱಪಿ
ಲ್ಲದೆ ಉರುಳ್ದ ಪಂದಲೆಗಳಂ ಪೊಡೆಸೆಂಡಾಡುವ ಕಟ್ಟಾಸುರಮಪ್ಪ ನಿಟ್ಟೊ
ಡಲ ಜೆಟ್ಟಿಗರ ನೊತ್ತಂಗಳಿಂ ಹೊಲ್ಲವಾದ ಹಲ್ಲ ಗಂಧಂಗಳನೆಡಗಯ್ಯೊಳೆ
ತೆಗೆದು ತೆಗದು ಸವಿಯುತ್ತುಮಸೃಗ್ಜಲಾಸವಮನೀಂಟಿ ಪೊಕ್ಕು ನೆಲೆವೆರ್ಚೆ
ಕಂಪಿಸುತ್ತುಂ ಝೋಪಿಸುವ ಡಾಕಿನಿಯರಂ, ನಿಟ್ಟಿಲ್ವಿನಿಂ ಪತ್ತಿದ ಹೊಟ್ಟೆ

ಹೊಂಗಿ ಹೊಱಹೊಯ್ವನ್ನೆಗಂ ಸಣ್ಣ ಕರುಳಂ ನುಣ್ಣನೆ ನುಂಗಿ ಶಿಣ್ಣವಾದ ತನುವಂ ತಳೆದು ನಿಂದು ನಡೆಯಲಾಱದೆ ನಿಂದು ನೇವಣಂಗಳೊಟ್ಟಲ ಪೋಲೆ ತಟ್ಟೆಗೆಡೆದು ಪಟ್ಟರ್ಪ ವೇತಾಳಂಗಳಂ, ನಮ್ಮ ಸಂತತಿಗೆಂದುಂ ತವಿಯದ ಬಾಯ ಬಯಕೆಯಂ ಬಲವಾಸುದೇವರಿತ್ತರೆಂದು ನರ್ತಿಸುವಟ್ಟಿಯಿಂ ನೆಲೆವೆರ್ಚಿನೊಳವರಂ ಸುತ್ತಿರ್ದ ನಿಖಿಳ ಭೂತವ್ರಜಂಗಳಂ ನೀಡುಂ ನೋಡುತ್ತುಮಿರ್ದಭಯಘೋಷಮಂ ಪೊಯ್ಸು ಬಂದು ಸರಣೆಂದ ದಮಿತಾರಿಬಲದ ಮುಂಡಳಿಕ ದಂಡನಾಥ ಮಂತ್ರಿ ಮಹಾಸಾಮಂತರ್ಗಭಯವನಿತ್ತು ರಣಮುಂ ಪೊಱಮಟ್ಟು ತಮ್ಮಿರ್ವರುಂ ವಿಜಯಗಜೇಂದ್ರಮನೇಱಿ ಬಂದು ಶಿಬಿರನಿವೇಶಿತರಾಗಿ—

ಮುದಿವಸಂ ಪ್ರಯಾಣಪಟುಭೇರಿಯ ಭೂರಿಗಭೀರನಿಸ್ವನಂ ।
ನೆಱೆದೆಸೆಯಲ್ ಪಟಂಚಲೆಯೆ ಪೊಯ್ಸು ಕುಮಾರಿಯುತಂ ಪ್ರವೋಡದಿಂ ॥
ಮಿಱುಗುವ ತಮ್ಮ ತಮ್ಮಯ ವಿಮಾನಮನೇಱಿ ಬಲಾಭಿಶೋಭೆ ಕ ।
ಣ್ಮೆಱೆದಿರೆ ದಕ್ಷಿಣಾಭಿಮುಖರಾದರುದಗ್ಬಲರ್ ಬಲಾಜ್ಯುತರ್ ॥೧೮೦॥

ಗಗನಂ ಚಾತುರ್ವರ್ಣವಾತದ ರಭಸಮಯಂ ವಿಷ್ಟಪಂ ಸೈನ್ಯಸಂಭೂ ।
ತಗಭೀರಾನಂತವಾದ್ಯಪ್ರತತಿರುತಿಮಯಂ ದಿಕ್ಕ್ಷಯಂ ವಾಹಿನೀವೀ ॥
ರಗಣೋಚ್ಚಂಡಾಯುಧಾಂಶುಪ್ರಚಯಮಯವೆನಲ್ ರತ್ನವೈಮಾನರುಗ್ರಾ*
ತಗೃಹೀತಂ ಭಾನುವಾಗಲ್ ತಳರ್ದರತುಲಶೌರ್ಯರ್ ಬಲಾನಂತವೀರ್ಯರ್॥

ವಿಗಳಿತಮದತಿಮಿರರ್ ವಿನ ।
ಯಗುಣಾಭರಣರ್ ಬಲಾಚ್ಯುತರ್ ಪದೆವಿ ತ ॥
ಮ್ಮಗಣಿತ ಬಲಯಾನಕ್ಕಾ ।
ಗಗನಂ ಪವಣಾಗೆ ಪೋಗುತಿರ್ಪಾಪದದೊಳ್ ॥೧೮೨॥

ಶಿವಮಂದಿರ ಪುರಲಕ್ಷ್ಮೀ ।
ಧವಕನಕಶ್ರೀಮುಖಾಂಬರೇಚರಪತಿಗಂ ॥
ಯುವತಿಜಯಾವತಿಗಂ ಸಂ ।
ಭವಿಸಿದನುರುಕೀರ್ತಿಧರವಿಯಚ್ಚರನಾಥಂ ॥೧೮೩॥

ತನ್ನಯ ಸುತ ದಮಿತಾರಿಗೆ ।
ಸನ್ನುತಸಾಮ್ರಾಜ್ಯಪದವಿಯಂ ಕೊಟ್ಟು ಪೊದ ॥

ಟ್ಟುನ್ನತಿವೆತ್ತಂ ಕೀರ್ತಿಧ ।
ರನ್ನೆಱೆ ವೈರಾಗ್ಯಪದವಿಯಂ ತಳೆದಾಗಳ್ ॥೧೮೪॥

ಶಾಂತಿಕರಗುರುಪದಾಬ್ಜೋ ।
ಪಾಂತಿಕದೊಳ್ ದೀಕ್ಷೆಗೊಂಡು ಕೀರ್ತಿಧರಂ ಸ ॥
ಜ್ಜೃಂತಂ ಪ್ರತಿಮಾಯೋಗದೊ ।
ಳಂ ತಾನೆಸೆದಿರ್ದನೊಂದು ಬರಿಸಂಬರೆಗಂ ॥೧೮೫॥

ವ॥ ಅಂತಿರ್ದುದುಮಾವರಣಮೋಹವ್ಯವಹೃತಮಾಗಿ ಕೇವಳಜ್ಞಾನಂ ತಾನೊಗೆದು ಮಾನಸ್ತಂಭಸಂಭೃತಚತುರ್ಗೋಪುರಾಂಚಿತ ಚತುರ್ವನೋದ್ದಾಮಹೇಮಪ್ರಕಾರವಿಭೂತಿಖ್ಯಾತಿಯಂ ತಾಳ್ದಿ ಕೀರ್ತಿಧರಕೇವಳಿಗಳಿರೆ ತದೀಯಸಮವಸರಣದ ಮೇಲೆ ತಮ್ಮ ವಿಮಾನಂಗಳ್ ಪೋಗದಿರೆ ಕಂಡಿದೇನಾನುಮೊಂದು ಕೌತುಕಮಾಗಲ್ವೇೞ್ಕುಮೆಂದು ಇೞಿದು ತತ್ಪ್ರಪಂಚಮಂ ತಿಳಿದು—

ಸಮವಸರಣಮನಭೀಕ್ಷ್ಣಿಸಿ ।
ಸಮುದಂಚಿತಚಿತ್ತರಪ್ಪ ಬಲಹರಿಗಳ್ ಸಂ ॥
ಭ್ರಮದಿಂದೆ ಬಂದು ಪೊಕ್ಕರ್ ।
ದಮಿತಾರಿಕುಮಾರಿವೆರಸು ತತ್ಕ್ಷಣದಿಂದಂ ॥೧೮೬॥

ಬಲವಂದು ಗಂಧಕುಟಿಯಂ ।
ಬಲಾಚ್ಯುತರ್ ಬೞಿಕಮೆಸೆದರೆನಿತಾನುಂ ಕೇ ॥
ವಲಿಗಳ ಪದನಿಧಿಗೆ ನಿಜೋ ।
ಜ್ವಲಮಣಿಕೋಟೀರದೀಪವರ್ತಿಗಳೆಯ್ದಲ್ ॥೧೮೭॥

ವ॥ ಇಂತು ವಿನಮಿತರಾದಿಂಬೞಿಯಂ—

ಜಯ ದುರಿತದೂರ ದುರಘ॥
ತ್ಯಯ ಸಂಸೃತಿಶರಧಿಮಧ್ಯದೊಳಗೀಗೆಮ್ಮಂ ॥
ದಯದಿಂದಾತಡಿಗೆಯ್ದಿಸು ।
ರಯದಿಂ ಭವಹರಸಮಗ್ರಬೋಧನಿಧಾನಾ ! ॥೧೮೮॥

ಜಯ ಸಕಲಜ್ಞಾನಗುಣೋ ।
ದಯ ಪುದಿದೆಮ್ಮಜ್ಞಾತಿಮಿರಮಂ ತೊಲಗಿಸು ನಿ ॥

ನ್ನಯ ಸದಮಲಬೋಧೇಂದೂ ।
ದಯದಿಂ ಭವಹರ ಸಮಗ್ರಬೋಧನಿದಾನಾ ॥೧೮೯॥

ವ॥ ಎಂದು ದರ್ಶನಸ್ತುತಿಗೆಯ್ದು ತಮ್ಮಿರ್ವರುಂ ಸಮುಜಿತಾಸನಾಸೀನರಾಗಿರ್ದುದುಮಾಗಳ್ ಕನಕಶ್ರೀಕಾಂತೆ ಬಾಪ್ಪುಜಲವಿಲುಳಿತನೇತ್ರೆ ಕೀರ್ತಿಧರಕೇವಲಿಗಳ್ಗೆ ವಿನತೆಯಾಗಿ ಎನಗಿನಿತು ಶೋಕೋದ್ರೇಕಮೇಕಾದುದೆಂದು ಬೆಸಸಿಮೆನಲವರಿಂತೆಂದರ್:—

ಲವಣಾರ್ಣವಪರಿವೃತವೊ ।
ಪ್ಪುವ ಜಂಬೂದ್ವೀಪದಲ್ಲಿ ಭರತಧರಿತ್ರೀ ॥
ಯುವತಿಯ ಮುಖಪಾರಿಜದಂ ।
ತೆ ವಿರಾಜಿಪುದಾಸು ಶಂಖಪುರಮೊಪುರಬೊಳ್ ॥೧೯೦॥

ವ್ಯವಹಾರಿ ದೇವಿಲಂ ದೈ ।
ಸೆವರಂ ತತ್ಪ್ರೇಮಪತ್ನಿ ಬಂಧುಶ್ರೀಯೆಂ ॥
ಬ ವಧೂತ್ತಮೆಯೆಸೆವಳ್ ನಿನ ।
ಗವಳ್ಗಂ ಶ್ರೀದೇವಿಯೆಂಬ ಮಗಳಾಗಿರೆಯುಂ ॥೧೯೧॥

ವ॥ ಅಂತಿರ್ದುದುಂ ನಿನ್ನ ತಂಗೆವಿರ್ ಕುಂಟಿಯುಂ ಕುರುಡಿಯುಂ ಕಿವುಡಿಯುಂ ಕುಬ್ಜೆಯುಂ ಕುಣಿಕೆಯುಂ ಪೆಜವಿಯುಮಿಂತಱುವರ್ಗಂ ನೀನೆ ಜನನಿಯಂತೆ ಸಲಹುತಿರ್ದೊಂದು ದಿವಸಂ ಶಂಖಶೈಲೋಪಾಂತದೊಳಿರ್ದ ಸರ್ವಯಶರೆಂಬ ದಿವ್ಯಮುನಿಗಳಂ ಕಂಡು ಬಂದಿಸಿಯೆನ್ನ ತಂಗೆವಿರಪ್ಪ ಱುವರ್, ಕನ್ನೆಯರುಂ ವಿಕಲಾಂಗಿಯರೇಕಾದರ್ ಕಾರಣಮನೆನಗೆ ಬೆಸಸಿಮೆನಲವರಿಂತೆಂದರ್:—

ಜೀವಂಗಳವಯವಂಗಳ ।
ನೋವದೆ ಘಾತಿಸಿದ ಕರ್ಮಫಲಸಂಗತಿಯಿಂ ॥
ದೀವಿಧಮಪ್ಪುದು ಜೀವಂ ।
ಗಾವುದು ಹಿತಮಿನ್ನಹಿಂಸೆಯಿಂ ಪೆಱತುಂಟೇ ॥೧೯೨॥

ವ॥ ಎಂದಿಂತು ತನ್ಮುನೀಶ್ವರಂ ಪೇೞ್ವುದುಂ ನಿನಗನುಕಂಪೆ ಜನಿಯಿಸಲಹಿಂಸಾವ್ರತಂದಳೆದು ಧರ್ಮಚಕ್ರಮೆಂಬ ನೋಪಿಯಂ ಕೈಕೊಂಡುಉನವಾಸಭೇದಮಂ ಕ್ರಮದಿಂ ನೆಗೞುತ್ತುಮಿರ್ದೊಂದು ದಿವಸಂ ಸುವ್ರತೆ

ಯರೆಂಬಾರಿಕೆಯರ್ಗಾಹಾರದಾನಮುಂ ಮಾಡಿದೊಡವರುಪವಾಸಶ್ರಮದಿಂ
ಛರ್ದಿಗೆಯ್ಯೆ ನೀನಲಬ್ಧಸಮ್ಯಗ್ದರ್ಶನೆಯರಪ್ಪುದಱಿಂ ಪೇಸಿಕೆಯಂ ತಾಳ್ದದೆ
ಜೀವಿತಾಂತ್ಯದೊಳಾವ್ರತಪ್ರಭಾವದಿಂ ಸೌಧರ್ಮಕಲ್ಪದೊಳ್ ಸಾಮಾನಿಕ
ದೇವಿಯಾಗಿರ್ದಲ್ಲಿಂ ಬಂದು ದಮಿತಾರಿಗಂ ಮುಂದರಮಾಲೆಗಂ ಕನಕಶ್ರೀ
ಯಾದೆ; ನೀನಿಂತು ಸಂಸಾರಭೋಗಮುಂ ಭೋಗಿಸಿದೆ;ತದೀಯ ವಿಚರತ್ಸೈಯ
ಪಾಪದ ಫಲದಿಂದಿನಿತು ಸೊಕಕ್ಕವಕಾಸೆಯಾದೆಯೆಂದು ಕೇವಳಿಗಳ್ ಪೇಱಿ
ಕೇಳ್ದು ನಿರ್ವೇಗಮನಪ್ಪುಕೆಯ್ದು ಕನಕಶ್ರೀವೆರಸು ಕೀರ್ತಿಧರಕೇವಲಿ
ಗಳಂ ಬೀೞ್ಕೊಂಡು ಬಲಾಚ್ಯುತರ್ ಚೆಚ್ಚರದಿಂ ಸ್ವಕೀಯಪ್ರಭಂಕರೀ
ಪುರಿಗೆ ಬರ್ಪಾಗಳತ್ತಲ್:—

ಕಮನೀಯವನಕ್ರೀಡಾ ।

ನಿಮಿತ್ತದಿಂ ಪೋಗಿ ತಡೆದು ಬಂದರ್ ನೆಗೞ್ದಾ ।
ಸಮರಂ ಕಡೆವೋದಾಗಳ್ ।
ದಮಿತಾರಿಸುತರ್ ಸುಘೋಷವಿದ್ಯುದ್ದಂಷ್ಟ್ರರ್ ॥೧೩೩॥

ಜನಕನನಾಜಿಯೊಳಿಕ್ಕಿದ ।
ರನುಜೆಯನುಯ್ದರ್ ಬಲಾಚ್ಯುತರ್ ಬಗೆಯದೆ ತಾ ॥
ಮೆನೆ ಕೇಳ್ದು ಖೇದಮಂ ಕಡು ।
ಮುನಿಸಂ ದಮಿತಾರಿತನಯರಾಗಳ್ ತಳೆದರ್ ॥೧೩೪॥

ಸೆಡೆದಡಗದಿದಿರ್ದಿರಾ ।
ದೊಡೆ ಬಲಕೃಷ್ಣರ್ ಪೊದೞ್ದಿ ಪೊಡೆಯೇೞ್ದಿಂದೀ ॥
ಗಡೆ ಜನಕನನಲ್ಲಿಂ ಪೊಱ ।
ಮಡಿಸುವೆವೆನುತುಂ ಕುಮಾರಕರ್ ಕಡುಮುಳಿದರ್ ॥೧೩೫॥

ಉೞಿದ ಚತುರಂಗಬಲಮುಂ ।
ಗೞಿಲನೆ ಸಮತಳಿಸಿಕೊಂಡು ದಮಿತಾರಿಸುತರ್ ॥
ಮುಳಿದೆತ್ತಿ ಬಂದು ಮುತ್ತಿದ ।
ರಳವಱಿಯದೆ ತತ್ಪ್ರಭಂಕರೀಪುರವರಮಂ ॥೧೩೬॥

ವ॥ ಆಗಳಿಂತು ಮೂವಳಸಂ ಮುತ್ತಿ ಸುಘೋಷವಿದ್ಯುದ್ದಂಷ್ಟ್ರ
ರನಂತಸೇನಕುಮಾರನೊಡನೆ ಕಾದುತ್ತಿರಲ್ ಬರುತ್ತಮೆ ಬಲ ನಾರಾಯಣ
ರ್ ಕಂಡು—

ಜನಕಂ ಸತ್ತಲಿಂ ಭೋಂ ।
ಕನೆ ಬಂದರಿವಂದಿರಳವನಳಾಯೆದೆ ಪೊಣರ ॥
ಲ್ಕೆನುತುಮಣಂ ದಮಿತಾರಿಯ ।
ತನಯರ ಕಡುಪಿಂಗೆ ಮೆಚ್ಚಿದರ್ ಬಲಕೃಷ್ಣರ್ ॥೧೩೫॥

ವ॥ ಇಂತು ಮೆಚ್ಚುತಖಿಳಸೈನ್ಯಸಮನ್ವಿತಂ ಬರ್ಪಪರಾಜಿತಾನಂತ ವೀರ್ಯರಂ ಕಂಡೆಲೆಲೆ ನಮ್ಮ ತಂದೆಯುಂ ಕೊಂದ ಪಗೆವರ್ ಒಂದಪರಿ ತ್ತಣಿಂ ಸಿಲ್ಕಿದರೆಂದುಲಿದು ಸುಘೋಷವಿದ್ಯುದ್ದಂಷ್ಟ್ರರುದ್ದಂಡಕೋದಂಡಂ ಗಳಂ ಕೊಂಡು ನೀವಿ ಜೀವೊಡೆದು ಸಂವೃಷ್ಟಿಯುಂ ಕಡಂಗಿ ಕಱೆದಾಗಳ್–

ಉಱಿಪಲ್ಕಾಗದು ಶತ್ರುಶೇಷಮನೆಸುತ್ತುಂ ಕೊಂಡು ಕೋದಂಡಮುಂ ।
ಮುಳಿಸಿಂದೋವದನಂತವೀರ್ಯನೃಪನೊಂದುಗ್ರಾಸ್ತ್ರಮಂ ತೊಟ್ಟನಾ ॥
ಗಳೆ ತೊಟ್ಟೆಚ್ಚು ಸುಘೋಷನಂ ಸುಭಟವಿದ್ಯುದ್ದಂಷ್ಟ್ರನಂ ತದ್ಬಲಾ ।
ವಳಿಯಂ ತೂಂತಿದನಂತಕಾಸ್ಯಕುಹರಾಂತರ್ಭಾಗದೊಳ್ ಬೇಗದಿಂ ॥

ವ॥ ಅದಂ ಕಂಡನಂತಸೇನಕುಮಾರಂ ಮುದಮನಪ್ಪುಕೆಯ್ದುತ್ತಾ ಪಭೇರಿಯಂ ಪೊಯ್ಸಿ ಪುರಮಂ ಕೈಗೆಯ್ಸಿ ಸನ್ಮಂತ್ರಿಮುಖ್ಯಪುರಜನಪರಿ ಜನಸಹಿತಮಿದಿರ್ವಂದು ವಂದಿಸಿ ಬಲಾಚ್ಯುತರ ಪರಮಾಶೀರ್ವಚನಪ್ರಪ ಚಯಪರಿಲಬ್ಧನಾಗಿ—

ಜನಿತಾನೇಕಾನಕಾನೀಕದ ಬಹುಳರವಂ ವ್ಯೋಮಮಂ ತಿಂಬಿ ಪೌರಾಂ ಗನೆಯರ್‌ತಂದಟ್ಟಿಯಿಂದೋವಳಿಸುವ ಮಣಿದೀಪಪ್ರಭಾಮಾಳೆ ಮೂರ್ತಂ॥
ಡನಗುರ್ವಂ ಮೀಱೆ ಪವ್ರುತ್ತಿರೆಯನುಜಯುತಂ ವಾರಣಾರೂಢನಾಗಿಂ ।
ತನುರಾಗಂ ಮಿಕ್ಕು ಪೊಕ್ಕಂ ಪುರಮನವನಿಪಂ ಸೂಕ್ತಿಸಂದರ್ಭಗರ್ಭಂ ॥

ಗದ್ಯ ॥ ಇದು ವಿನಮದಮರೇಂದ್ರಮೌಳಿಮಣಿಕಿರಣಮಾಳಾಪರಾಗಪರಿ ರಂಜಿತಪರಮ ಜಿನರಾಜಸಮಯಸಮುದಿತಸದಮಲಾಗಮಸುಧಾಶರಧಿಶರದಿಂದು ಶ್ರೀಮಾಗನಂದಿಪಂಡಿತಮುನೀಶ್ವರಮನೋಜನಿತನಿರುಪಮದಯಾಸರಸ್ಸರಸೀಸಂಭೂ ತಸಂಭವಾಮಲಸು ಕ ವಿ ಕ ಮ ಲ ಭ ವ ವಿರಚಿತಮಪ್ಪ

ಶಾಂತೀಶ್ವರಪುರಾಣದೊಳ್

ದಮಿತಾರಿವಿಜಯವರ್ಣನಂ

ಅಷ್ಟಮಾಶ್ವಾಸಂ ಸಂಪೂರ್ಣಂ

ನವಮಾಶ್ವಾಸಂ

ಶ್ರೀರಮಣಂ ವರವಿಜಯರ ।
ಮಾರಮಣಂ ಪ್ರಬಲದೋರ್ವಲಂ ಬಲದೇವೋ ॥
ವೀರಮಣಿನಿರ್ದನುದಧಿಗ ।
ಭೀರಂ ಜಿನಪವಪಯೋಜರಾಜಮರಾಳಂ ॥೧॥

ವ॥ ಇಂತಪರಾಜಿತಮಹಾರಾಜನನಂತವೀರ್ಯ ಯುವರಾಜಸಮನ್ವಿತವುನ್ನತೋನ್ನತವುವನವನಪ್ರಕೆಯ್ದಿದುಂ ನಿಜಾನುಜವಿಜಯಪ್ರಸಂಗ ಕಥಾಪ್ರಸಂಗವಾಕ್ಷಂಗತಿಯಿಂ ಸಕಲ ಸನ್ಮಂತ್ರಿಮಂಡಳಿಕದಂಡನಾಥವರ್ಗಕ್ಕೆ ಸವುದಗ್ರಕೌತುಕರಸಪ್ರವೋದಪರಿಕರವುನೊದವಿಸುತ್ತುಮಿರೆ—

ಎನ್ನಯ ದೂಸರಿನೞಿದಂ ।
ಮುನ್ನಂ ಜನಕಂ ಸಹೋದರರ್ ಒೞಿಕೞಿದರ್ ॥
ಬೆನ್ನನೆ ಬಂದೆಲ್ಲಿಯೆನು ।
ತ್ತುನ್ನೆಱೆ ದಮಿತಾರಿತನುಜೆ ವಿಹ್ವಲೆಯಾದಳ್ ॥೨॥

ತನ್ನಯ ರಾಗಮುತ್ಕಟನಿಮಿತ್ತದೆ ಪಾತಕಿ ಕತು ಪ್ರಹಸ್ತದಿಂ ।
ದನ್ನೆಱೆ ಯುದ್ಧದೊಳ್ ಕೊಲಿಸಿದಳ್ ನಿಜತಾತನುಮಂ ನಿಜಾನ್ವಯೋ ॥
ತ್ಪನ್ನರುವಂ ನಿಜಾಗ್ರಜರುಮಂ ಗಡವೆಂದಿಳೆ ನಿಂದೆಗೆಯ್ದುದೋ ।
ಯೆನ್ನನೆನುತ್ತೆ ಖೇದಿಸಿದಳಾದಮಿತಾರಿತಸೂಜೆ ನಾಡೆಯುಂ ॥೩॥

ಇನಿತೊಂದು ನಿಂದೆಯುಂ ಪಾ ।
ಪನಿಬಂಧನದಿಂ ಪೊದೞ್ದಿ ಜೀವಿನಮಿದು ಪಾ ॥
ವನವೆನಿಪುದೆ ತಾನೆನುತುಂ ।
ಕನಕಶ್ರೀ ತೊೞಿದಳಲ್ತೆ ನಿಜಸಂಸೃತಿಯಂ ॥೪॥

ವ॥ ಇಂತು ವಿರಕ್ತಸಂಸಾರೆಯಾಗಿ ನಿಜಮನೋಜನಿತ ನಿರ್ವೇಗಮುಂ ತೋೞ್ ಬಲಾಚ್ಯುತರನೊಡಂಬಡಿಸಿ ಸ್ವಯಂಪ್ರಭತೀರ್ಥಕೃತ್ಪಾದೋಪಾಂತಮನೆಯ್ದಿ ನಿರ್ಮಲಧರ್ಮೋಪದೇಶಮುಂ ಪಡೆದು ಪುಟ್ಟಿದ

ವೈರಾಗ್ಯದಿಂದಾಗಳೆ ಸುಪ್ರಭಾರಿಕೆಯರ ಪವಪಾರ್ಶ್ವದೊಳುದಕ್ಷೀಣದೀ
ಕ್ಷಾಲಂಕರಣೆಯಾಗಿ ತಪಶ್ಚರಣಮಂ ನಿಟ್ಟಿಯಿಂ ನೆಗಟ್ಟುತ್ತುಮಿರ್ದು ಜೀವಿ
ತಾವಸಾನದೊಳಮರನಾಗಿ ಪುಟ್ಟಿದಳಿತ್ತಲ್—

ಷೋಡಶಸಹಸ್ರಭೂಪರ್ ।
ಕೂಡಿ ಕರಂ ರಾಜ್ಯಮಂಗಳಾಭಿಷವಣಮುಂ ॥
ಮಾಡಿ ಬಲಂ ಹರಿಗಿತ್ತಂ ।
ನಾಡೆಯುಮೊಲವಿಂ ತ್ರಿಖಂಡದಧಿಪತಿಪದಮುಂ ॥೫॥

ಅಧಿರಾಜಪದವಿಯಂ ಮುಸ ।
ಳಧರಂ ಸಲೆ ತಳೆದು ಸಕಲರಾಜನ್ಯಕುಳಾಂ ॥
ಬುಧಿಯಂ ಕುವಲಯಮುಂ ನವ ।
ವಿಧುವೆನೆ ಲೀಲೆಯೊಳೆ ಪಾಲಿಸುತ್ತಿರೆದಿರ್ದಂ ॥೬॥

ಹರಿಗೇಱುಂ ರತ್ನಂಗಳ್ ।
ಸುರಯಕ್ಷಸುರಕ್ಷಿತಂಗಳಾದುವು ಶಂಖಂ ॥
ತರವಾರಿ ಶಕ್ತಿ ದಂಡಂ ।
ಶರಾಸನಂಗಳ್ ಸುದರ್ಶನಂ ತಾಮಿನಿತುಂ ॥೭॥

ವನಜಾಕ್ಷಿಯರಂತಃಪುರ ।
ವನಿತೆಯರಾದರ್ ಸುರೂಪಜಿತಖಚರಮರು ॥
ಧ್ವನಿತೆಯರೀರೆಣ್ಮಾಸಿರ ।
ಮನಂಗಕೇಳೀಕಳಾವಲೀಪರಿಣತೆಯರ್ ॥೮॥

ಬಲದೇವನ ರತ್ನಂಗಳ್ ।
ವಿಲಸದ್ಗದೆ ರತ್ನಮಾಲೆ ಮುಸಲಹಲಂಗಳ್ ॥
ಕುಲಕಾಂತೆಯರೆಣ್ಮಾಸಿರ ।
ಮಲರಂಬನ ರತಿಯನೀಪ ರೂಪಾನ್ವಿತೆಯರ್ ॥೯॥

ಪೆಸರ್ವೆತ್ತ ವತ್ಸಕಾವತಿ ।
ಯ ಸಮುಲ್ಲಸಿತ ತ್ರಿಖಂಡಮಂಡಲಮಂ ಪಾ ॥
ಲಿಸುತುಂ ಬಲನಾರಾಯಣ ।
ರೆಸೆದಿರ್ದರ್ ಸಕಲರಾಜ್ಯಸೌಖ್ಯೋನ್ನತಿಯಿಂ ॥೧೦॥

ವ॥ ಇಂತು ಸುಖದಿನರಸುಗೆಯುತ್ತುಮಿರ್ದೊಂದು ದಿವಸಂ ಅಪ
ರಾಜಿತಮಹಾರಾಜಂ ತನಗಂ ವಿಜಯಾವತೀಮಹಾದೇವಿಗಂ ಜನಿಸಿದ
ಸುರೂಪವತಿಯೆಂಬ ಕುಮಾರಿ ದಮವರಮುನೀಶ್ವರರ ಚರ್ಯಾಮಾ
ರ್ಗದಿಂ ಬರೆ ಕಂಡು ಭಕ್ತಿಯಿಂ ನಿಲಿಸಿ ಯಥಾವಿಧಿಯಿಂ ನಿರವದ್ಯಮಪ್ಪಾ
ಹಾರದಾನಂಗೆಯ್ದು ಪಂಚಾಶ್ಚರ್ಯಮುಂ ಪಡೆದುದಂ ಕೇಳ್ದು ಮಗಳ
ಧರ್ಮಾನುರಾಗಕ್ಕೆ ಸಂತಸದಂತನೆಯ್ದಿ—

ಸುತೆಯನತಿಶಯಸುರೂಪೋ ।
ನ್ನತಿಯಂ ಬರವೇೞ್ದು ಬರಿಸಿ ವಾಮಾಂಕದೊಳಿ ॥
ಟ್ಟತಿವಿುದದೆ ನೋಡಿಯಪರಾ ।
ಜಿತನೃಪನೀಕ್ಷಿಸಿದನನುಜನಾಸ್ಯಂಬುಜಮಂ ॥೧೧॥

ವ॥ ಅದನಱಿದನಂತವೀರ್ಯನಿಂತೆಂದಂ—

ದೇವ ದಿಟಂ ನನ್ಮಯ ಸುತೆ ।
ಗಾವನುವಿಲ್ಲಂ ಸುರೂಪಸಮನಪ್ಪಂ ಸಂ ॥
ಭಾವಿಪೊಡೆ ಕುಮಾರಿಗೆ ಪೆಸ ।
ತೇವುದು ಮಾೞ್ಪುದು ಸೊಯಂಬರಮನತಿಶಯದಿಂ ॥೧೨॥

ವ॥ ಇಂತೆನಲನಂತವೀರ್ಯನ ಮನಮುಂ ತನ್ನ ಮನದೊಳ್ ನೆನೆ
ದುದುವೇಕರೂಪವಾದೊಡದನೆ ಪೂಣ್ದು ಅಪರಾಜಿತಮಹಾರಾಜಂ ಸ್ವ
ಸಮಯಂವರನಿವಾ ವಿರಚಿಸಿ ನಿಖಿಲನೃಪವರರಂ ಒರಿಸಿ ಸಮುಚಿತಾಸ
ನಂಗಳ ನಿವೇದಿಕಾಧಿಷ್ಠಿತರಾಗಿ ತಮ್ಮುತಿರ್ವರುಂ ಮುಹೂರ್ತಿಕನಿವೇ
ದಿತಮುಹೂರ್ತದೊಳ್ ಕುಮಾರಿಯಂ ಬರವೇೞ್ದಾಗಳ್—

ಅಮೃತಮಯೂಖಪ್ರತಿಕೃತಿಯೊ ತಾನೆನೆ ಚಂದನಗಂಧಲೇಪನಂ ।
ವಿಮಲಮಕೂಲಚೇಲಮತುಲಾಮಲವಸ್ತ್ರಕಭೂಷೆ ಪುಷ್ಪವಿ ॥
ಭ್ರಮಿಮಳವಟ್ಟಣಂ ರಥಮನೇಱಿ ನಿಜಾಂಗದ ಭಂಗಿ ವಿಾಱಿ ತ ।
ತ್ಸುಮತಿ ಕುಮಾರಿ ಕಣ್ಗೊಳಿಸುತುಂ ಒರುತಿರ್ದಳತೀವಲೀಲೆಯಿಂ ॥೧೩॥

ವ॥ ಇಂತು ಸ್ವಯಂವರಮಂಟಪಕ್ಕೆ ಮಂಡನಾಧಿದೇವತೆಯಂತೆ
ಒರುತಿರ್ದಾಗಳೊರ್ವ ದಿವಿಜಕಾಂತೆ ಮೇಘಮಾರ್ಗದೊಳ್ ಮಾಣದು

ಯದಿಂ ಜ್ಯೋತಿರ್ಮಯಮೆನೆ ಸೊಗಯಿಸುವ ರತ್ನವಿಮಾನಾರೂಢೆಯಾಗಿರ್ದು—

ಎಲೆ ಸುಮತಿ ನೀನೆ ನೆನೆ ಮು ।
ನ್ನೆಲದೊಳ್ ಪುಟ್ಟದರನೆಯ್ದಿ ಬೋಧಿಪವೆಂದಿಂ ॥
ತೊಲವಿಂ ನಾವಿರ್ವರ್ ದೇ ।
ವಲೋಕದೊಳ್ ಪುಣ್ಯದುದಿಯ ಪುಣ್ಯೋದಯ ತೆಱನಂ ॥೧೪॥

ಪೆಱಗಾದ ಪುಣ್ಯೋದಯಂ ನಿನ ।
ಗಱಿಪಲ್ಕಾಂ ಬಂದೆನೀಗಳಿಲೆ ಸುಮತೀ ನೀ ॥
ನಱಿವುದು ಪಾಲಿಪುದಿದನಿಂ ।
ಪೆಱತೇನಾವಿರ್ವರುಂ ಸಹೋದರರಲ್ತೆ ॥೧೫॥

ವ॥ ಪುಷ್ಕರವರದ್ವೀಪದೈಂದ್ರೀಮಂದಿರದ ಭರತಶ್ರೇತ್ರದೊಳಂತಿ ಚಿತ್ತನಂದನಪುರಮನಾಳ್ವಮಿತವಿಕ್ರಮನರೇಂದ್ರಂಗಮನಂತಮತಿಮಹಾದೇವಿಗಂ ಅನಂತಶ್ರೀಯುಂ ಧನಶ್ರೀಯುಮೆಂಬ ಮಗಳ್ದಿರಾಗಿರ್ದೊಂದು ದಿವಸಂ ನಾಮಿರ್ವರುಂ ಸಿದ್ಧಗಿರೀಂದ್ರದೊಳಿರ್ದ ನಂದನಮುನೀಂದ್ರನ ಪಾದಾರವಿಂದಸನ್ನಿಧಿಯೊಳ್ ವ್ರತೋಪವಾಸಂಗಳಂ ಕೈಕೊಂಡು ನಡಪುತ್ತುಂ ಸುಖದಿನಿರುತ್ತೊಂದು ಮನೋಹರೋದ್ಯಾನದೊಳನೂನವಿನೋದದಿಂ ವಿಹರಿಸುತಿರ್ಪನಂ, ತ್ರಿಪುರಪತಿಯಪ್ಪ ವಜ್ರಾಂಗದ ವಿದ್ಯಾಧರಂ ವಜ್ರಮಾಲಿನಿವೆರಸು ಯಾನವಿಮಾನಾರೂಢನಾಗಿ ಪೋಗುತ್ತುಂ ನಮ್ಮ ರೂಪಂ ಕಂಡಳಿಪಿ ನಿಜಪುರಕ್ಕೆ ಪೋಗಿ ಸತಿಯಂ ವಂಚಿಸಿ ಬಂದು ನಮ್ಮಿರ್ವರುಮಂ ಕೊಂಡುಯ್ಯುತ್ತುಮಿರೆ, ಪತಿಯ ಕೈತವಮನಱಿದು ವಜ್ರಮಾಲಿನಿ ಬೆಂದಗಳ್ದು ಬರೆ ಕಂಡಳ್ಕೆ—

ಆವಜ್ರಾಂಗದ ಖೇಚರ ।
ನೋವದೆ ನಮ್ಮಿರ್ವರುಮನಗುರ್ಮಿಸುವತಿರೌ ॥
ದಾವಹಮೆನಿಸಿದ ವೇಣುವ ।
ಯೊಳ್ನಾವನಿ ಬಿಸುಟು ಪೋದನಪಗತಬೋಧಂ ॥೧೬॥

ದುಷ್ಕೃತನಾಖಚರೇಂದ್ರಂ ।
ನಿಷ್ಕಪಟಿಯುಂ ಬಿಸುಟು ಪೋಗೆಯುಂ ವೇಣುವನಾಂ ॥

ತಪೋಕ್ಷೀಣೆಯೊಳಗೆ ಬಿಟ್ಟಿ ।
ವಿಪ್ಲವ ತಭಯರಾಗಿ ಪಿರಿದುಮಿರ್ದು ಬಟ್ಟಿಕ್ಕಂ ॥೧೩॥

ಅದು ಮನುಜಪ್ರಚಾರಮಣಮಲ್ಲದುದಂ ನೆರೆ ಕಂಡು ನಾಮೆ ಪೋ ।
ಪುದು ದೊರೆಕೊಳ್ಳದಾವನದೊಳರ್ದೆವನಾಥೆಯರಾಗಿ ಬೇಗದಿಂ ॥
ಪದುಳಿಸಿ ಜೆತ್ತಮಂ ಮಹೆಯದೊರ್ವರನೊರ್ವರೆ ಬೋಧೆಗೆಯ್ದು ತಾ ।
ಳ್ದಿದೆವತಿನಿಶ್ಚಲತ್ವದೊಳೆ ಸನ್ಯಸನ ಕ್ರಮಮಂ ಪ್ರಮೋದದಿಂ ॥೧೪॥

ವ॥ ಅಂತು ನಾವಿರ್ವರುಂ ವಿಗತಾಸುಗಳಾಗಿ ಸೌಧರ್ಮಕಲ್ಪದೊಳ್ ಕುಬೇರಲೋಕಪಾಲಂಗೆ ನಿರವತಿಯೆಂಬ ದೇವಿಯಾದೆಯಾಂ ಸೌಧರ್ಮೇಂದ್ರಂಗೆ ನವಮಿಕೆಯೆಂಬ ದೇವಿಯಾದೆನಲ್ಲಿ ಸುಖದಿನಿರ್ದೊಂದು ದಿನದೊಳ್-

ಆನುಮಧೀಶನ ಬಟ್ಟಿಯೊಳ್ ।
ನೀನುಂ ನಿಜನಾಥನೊಡನೆ ನಂದೀಶ್ವರಪೂ ॥
ಜಾನೈಮಿತ್ತದೆ ಬಂದೆನಿ ।
ತಾನುಂ ನಾಮಜ್ಞದೆವಲ್ತೆ ಪಿಂತಣ ಭವಮಂ ॥೧೫॥

ಪಿಂದಣ ಭವದೊಡವುಟ್ಟಿದ ।
ಱಂದಱಯಲ್ಕಾಗಳಂತೆ ಪರಮಸ್ನೇಹಂ ॥
ಸಂದಿಸಿ ನಿನ್ನೊಳಮೆನ್ನೊಳ ।
ಮುಂದಾದುದು ವಿಪುಳಹರ್ಷಮಂತಾಪದದೊಳ್ ॥೧೬॥

ವ॥ ಅಂತಿದ್ದು ಮತ್ತವೊರ್ಮೆ ನಾವಿರ್ವರುಂ ಮಂದರಾದ್ರಿಯ ಪಾಂಡುಕವನದೊಳರ್ದ ಧೃತಿಕ್ಷೀಣರೆಂಬ ಚಾರಣರವಧಿಜ್ಞಾನಿಗಳಿರೆ ಕಂಡು ಬಂದಿಸಿ ಬಟ್ಟಿಕ್ಕೆಮಗೆ ಕರ್ಮಕ್ಷಯವೆಂದಪ್ಪುದದಂ ಬೆಸಸಿಮೆನಲವರಾ ನಿಮಗೆ ನಾಲ್ಕನೆಯ ಭವಕ್ಕಕ್ಕುಮೆನೆ ಸಂತಸಮನೆಯ್ದಿ ನಾವುಂ ಮುನ್ನ ಮನುಷ್ಯಗತಿಗೆ ಬಂದವರಂ ದೇವಗತಿಯೊಳಿರ್ದವರ್ ಪ್ರತಿಬೋಧಿಸುವುದೆಂದು ಕೃತಪ್ರತಿಜ್ಞರಾದೆವದು ಕಾರಣದಿಂ ನಿನಗಱಪಲ್ ಬಂದೆನೆಂದ ದೇವಕಾಂತೆ ಪೇೞ್ ಪೋಗಲಾಗಳ್—

ಸಮನಿಸಿದುದಱವು ತೊಟ್ಟನೆ ।
ಸುಮತಿಕುಮಾರಿಗೆ ಸಮಂತು ದಿವಿಜಾಂಗನೆ ತ ॥

ತ್ಕ್ರಮದಿನಪ್ಪಲ್ಕೆ ವೈರಾ ।
ಗ್ಯಮಣಿಂ ಸಂಗಳಿಸಿದತ್ತು ಚಿತ್ತದೊಳಾಗಳ್ ॥೨೧॥
ತನಗೆ ಸಮನಿಸಿದ ಸಂಸಾ ।
ರನಿವೃತ್ತಿಯ ತೆಱನನಱಿದು ಬಲಚಕ್ರಿಗಳಾ ।
ಮನಮುನೊಡಂಬಡಿಸಿದಳಾ ।
ಯೆನೆ ಜನಮತಿ[ಮುದದೆ] ಸುಮತಿಕನ್ಯಾರತ್ನಂ ॥೨೨॥
ಭರದಿಂ ಸ್ವಯಂವರಕ್ಕೆ ।
ತರುತಿರ್ದಪರಾಜಿತಾವನೀಶನ ಸುತೆ ಸಂ ॥
ಸರಣಮನೆ ತೊಱೆದು ತಪಮೇ ।
ಶರಣೆಂದಳಿದೇಂ ವಿಚಿತ್ರಮೋ ವೈರಾಗ್ಯಂ ॥೨೩॥
ತನ್ನೆಣೆಯೆನಿಪೆಲ್ಲೂರ್ವರ್ ।
ಕನ್ನಿಕೆಯರ್ ಬೆರಸು ಸುವ್ರತಾರಿಕೆಯರ್ ಪ ॥
ತ್ಸನ್ನಿಧಿಯೊಳ್ ತಳೆದಳ್ ತಪ ।
ದುನ್ನತಿಯಂ ಸುಮತಿಕನ್ಯೆ ಬೇಗದೊಳಾಗಳ್ ॥೨೪॥

ವ॥ ಇಂತು ಸುಮತಿಕುಮಾರಿ ಮಹೋಗ್ರತಪಮಂ ನೆಗೞ್ತು ಪಿರ್ದು ತನುವಂ ಪತ್ತುವಿಟ್ಟನತಕಲ್ಪದೊಳ್ ಅನುದ್ದಿಸಮೆಂಬ ವಿಮಾನದೊಳ್ ದೇವನಾಗಿ ಪುಟ್ಟಿದಳಿತ್ತಲ್—

ತಲವಾಗದೆ ಬಲಗರ್ವದೆ ।
ಮಲೆವರಿನೃಪರಾರುಮಿಲ್ಲದಪ್ರತಿಮಭುಜಾ ॥
ಬಲದಿಂ ವಿಭ್ರಾಜಿಸುತುಂ ।
ಬಲಾಚ್ಯುತರ್ ಸಕಲರಾಜ್ಯಸುಖದಿಂದಿರ್ದರ್ ॥೨೫॥
ಬೇಡುವ ವಾರ್ತೆ ವಂದಿಗಳೊಳಿಲ್ಲರಿಭೂಪರ ಭೀತಿಯೆಂದು ಮಾ ।
ತಾಡುವರಿಲ್ಲ ತೀವ್ರತರಬಾಧೆಯು ಸುದ್ದಿಯದೆಂತುಮಿಲ್ಲಿಸಲ್ ॥
ಕೂಡೆ ಜಿನೇಂದ್ರಧರ್ಮಮಯಮಾಗಿರೆ ನಿರ್ಮಲರಾಜ್ಯಸೌಖ್ಯದೊಳ್ ।
ಕ್ರೀಡಿಸುತಿರ್ಪರಿಂತು ಸತತಂ ಜಿತದೋರ್ವಲರಾಬಲರಾಚ್ಯುತರ್ ॥೨೬॥
ಸಲೆ ತಮ್ಮಾಚ್ಛಾತುಲಶ್ರೀವಧು ಸಕಲಧರಾಧಿಶಕೋಟೀರಘೃಷ್ಟ
ಸ್ಥಲದೊಳ್ ನಿಷ್ಕಂಪದಿಂ ಪೆಂಪೆಸೆಯೆ ವಿಸುಕದೊಪ್ಪಿರ್ಪಿನಂ ದರ್ಪದಿಂದು ॥

ಜ್ವಲಕೀರ್ತಿಶ್ರೀನಿತಾಂತಂಚರಿಯಿಸುತಿರೆಮೂಲೋಕದೊಳ್‌ಲೀಲೆಯಿಂದಾ
ಬಲಕೃಷ್ಣರ್‌ವಪ್ಪುಕ್ಕೆಮಿಕ್ಕರಸುತನಮನಾನಂದದಿಂವಾಡುತಿರ್ದರ್‌ ॥೨೩॥

ಗಣನಾತೀತಾಬ್ದಗಣಂ ।
ಕ್ಷಣಮಾತ್ರಮಿದೆನಿಸಿ ತೋಱುಯುಂ ಬಲನಾರಾ ॥
ಯಣರಖಿಲರಾಜ್ಯಸುಖಮುಂ ।
ಪ್ರಣಯದಿನನುಭವಿಸುತುಂ ಸಮುಂತೆಸೆದಿರ್ದರ್‌ ॥೨೪॥

ವ॥ ಅಂತು ಪಲಕಾಲಂ ನಿಮಿಷಮಾಗಿ ಪೋಗಿ--

ಒಟ್ಟಜೆಯಿಂ ತೃಣೀಕೃತಜಗತ್ತ್ರಯನಾಗಿ ವಿರೋಧಿವರ್ಗಮಂ ।
ಪಟ್ಟದೆ ಪೋಪಿನಂ ತವಿಸಿ ಮಿಂಚೆನ ಮೆಯ್ಸಿರಿಯಪ್ಪ ಮೆಯರ್‌ ದಿಟಂ ॥
ನಿಟ್ಟೆಯೆ ಗೆತ್ತು ರಾಜ್ಯಸುಖಸಂಕುಲಮುಂ ಸಲೆ ಭೋಗಿಸುತ್ತಿರಲ್‌ ।
ತೊಟ್ಟನೆ ಮುಟ್ಟೆವಂದುಮ ಕೃತಾಂತಭುಜಂಗನನಂತವೀರ್ಯನಂ ॥೨೫॥

ಅರಿಗರಿದಪ್ಪ ಚಕ್ರಮಸುಹೃದ್ಬಲಭಂಜನಸೈನ್ಯಚಕ್ರಮು ।
ದ್ಧುರನಿಜದೋರ್ಬಲಂ ಪಿರಿಯನಪ್ಪ ಬಲಂ ಬಲಮಾಗಿರಲ್ಕೆ ಚೆ ॥
ಚ್ಚರದಿನನಂತವೀರ್ಯನೃಪಜೀವಸಮೀರಣನಂ ಕಡಂಗಿ ಭೀ ।
ಕರಯಮುಪನ್ನಗಂ ಪಿಡಿದು ಪೀರ್ದುದು ಮಿಕ್ಕವರಾವ ಲೆಕ್ಕವೋ ॥೨೬॥

ವ॥ ಆಗಳಿಂತನಂತವೀರ್ಯಂ ಕಾಲೋಗ್ರವ್ಯಾಘ್ರಗ್ರಸನವಾದ ಖೇದದಿಂದಂತಃಪುರಕಾಂತಾಜನಂಗಳ ಮುಖಜನಿತಹಾಹಾರವಂ ಕರತಲಪ ಟುಪ್ರಹಾರಸ್ಫುಟತೋರಸ್ಥಳೀಜಾತಸ್ಫುಟತರಕಟುನಿನಾದಂ ನೀಳ್ದು ನಿಜ ಕರ್ಣಾಭ್ಯರ್ಣವುಂ ಸೋಂಕೆ ಶಂಕಾಕುಲಿತಸ್ವಾಂತನಾಭೂಂಕೆನೆ ಬಂದು ವಿಗತಾಸುವಾಗಿರ್ದನುಜನಂ ಕಂಡು ವಿಹ್ವಲಿತಸ್ವಾಂತನಾಗಿ--

ಯಮನಂ ವಿಕ್ರಮದಿಂದಾ ।
ಕ್ರಮಿಸುವ ದಮಿತಾರಿಯುಂ ರಣಾಂಗಣದೊಳ್‌ ನೀಂ ॥
ಯಮನಾಗಿ ನೊಣ್ದೆ ನಿನ್ನಂ ।
ಯಮನಿಂತುಯ್ದಲ್ಲಿ ತಮ್ಮ ಸುಮ್ಮನೆ ಪೋದೈ ॥೨೭॥

ಪಿರಿಯನೆನಿಪ್ಪ ತೇಜಮೆನಗಿಂತಿನಿತಲ್ಲದೆ ನೀಂ ಪ್ರತಾಪದಿಂ ।
ಪಿರಿಯನುದಾರದಿಂ ಪಿರಿಯನಾಸತರಂ ಸಲೆ ಕಾವ ಮೈಮೆಯಿಂ ॥

ಪಿರಿಯನುದಗ್ರದರ್ಪಧರೆಯಂ ಪೊಣರ್ದಿಕ್ಕುವ ಮಿಕ್ಕ ತಕ್ಕಿನಿಂ ।
ಪಿರಿಯನೆ ತಂದು ನಿನ್ನನನಿಂತಿರದುಯ್ದನೆ ಪಾತಕಾಂತಕಂ ॥೩೦॥
ಎಂದುವಗಲ್ದಖೇಯದ ನೀ ।
ನಿಂದೀಗಳದೆಂತು ಬಿರ್ದೆ ಪೋಗಲ್ಕೆ ಮನಂ ॥
ದಂದೆಯೊ ತಮ್ಮನೆ ಬಗೆ ಪೆಱ ।
ತೊಂದಾದುದು ನಿನ್ನೊಳ್ಗೀಕೆ ವಿನಯನಿಧಾನಾ ॥೩೧॥
ಬರುತಿರೆ ಕಂಡೆನಗತ್ಯಾ ।
ದರದಿಂದಿವರ್ವಂದು ತಡೆಯದಡಿಗೆಱಗುವ ಚೆ ॥
ಚ್ಚರದಿಂ ಬೆಸನೇನೆಂಬುದು ।
ಪಿರಿಮಂ ಮಾಣಲ್ಕೆ ಸುಮ್ಮನಿರ್ದಪೆಯನುಜಾ ॥೩೪॥
ವಿನಯಾಂಭೋನಿಧಿಯೆತ್ತವೋದೆ ವಿಜಯಶ್ರೀನಾಥ ನೀನೆತ್ತವೋ ।
ದೆ ನಿಜೋದ್ಯದ್ಭವನಸತ್ವಶೌರ್ಯನಿಧಿಯೇ ನೀನೆತ್ತವೋಗಿರ್ದೆ ತ ॥
ಮ್ಮನೆ ನಮ್ಮಿರ್ವರ ಹೃತ್ಪ್ರಿಯಂ ಪರಿದುದೇ ವೋನಂ ಪೊಡಟ್ಟಿದ್ದೀಕೆ ಸು ।
ಮ್ಮನೆ ನೀನಿರ್ದಪೆಯೆಂದು ಬಾಯಱಿದು ಬಿಟ್ಟಿಂಮೇಲಿನೀಲಾಂಬರಂ ॥೩೫॥
ಪಲವುಂ ಪ್ರಕಾರದಿಂದಂ ।
ಪ್ರಲಾಪಿಸುತ್ತುಂ ಗುಣಂಗಳಂ ಗಣಿಯಿಸುತುಂ ॥
ಬಲನನುಜಸ್ನೇಹದೆ ವಿ ।
ಹ್ವಲತೆಯನೆಯ್ದಿರ್ದನವನಿಯೊಳ್ ಬಿೞ್ದಾಗಳ್ ॥೩೬॥
ಒಳನನುಜಸ್ನೇಹದೆ ಬಲ ।
ವೞಿದೆನಸುಂ ವಿಹ್ವಲಾತ್ಮನಾಗಿರೆ ಕೇಳ್ದಾ ॥
ಗಳೆ ಬೞಿವಂದರ್ ಪಿರಿಯರ್ ।
ಕುಳವೃದ್ಧರ್ ಮಂತ್ರಿಮುಖ್ಯರಂತಾಕ್ಷಣದಿಂ ॥೩೭॥
ವ॥ ಆಗಳನಿತುಂ ಹಳಾಯುಧನಂ ಪತ್ತೆ ಸಾರ್ದು
ಪರಿಕಿಪೊಡಸ್ಥಿರಮೀಸಂ ।
ಸರಣಸ್ಥಿತಿಯೆಂದು ದೇವ ನಿಮಗಾನುಱವಂ ॥
ತಿರೆ ಬಿನ್ನವಿಸುವುದಿದು ಭಾ ।
ಸ್ಕರಂಗೆ ಪಡಿಯಿಡುವ ಗಾಂಪ್ಪ ಪುಲ್ ಸೊಡವೆರ್ಗಳಿಂ ॥೩೮॥

ಪೆಱತೇಂ ದೇವರ್ ನೀಮಿಂ ।
ನೆ ೆ ನಿಮ್ಮಂ ತಿಳಿವುದೆಂದು ಬಿನ್ನವಿಸುವ ಪಾಂ ॥
ಗಱಿದಾಗಳೆ ಹಲಧರನೆ ।
ಜ್ಞಾನಾಂತಂ ಬೋಧನಿಧಿಗಿದೇನಚ್ಚರಿಯೇ ॥೩೯॥
ಎನೆವ ಶರತ್ಸಮಯಸರಿ ।
ತ್ಪ್ರಸರಂ ತಿಳಿವಂತೆ ತಾನೆ ತನ್ನಿಂದೆ ನಿರೀ ॥
ಕ್ಷಿಸಿ ತನ್ನಂ ತಿಳಿವಂ ಬಲ ।
ನಸುಹೃದ್ಬಲನಚಿರಸಂಸೃತಿಯ ದುಸ್ಸ್ಥಿತಿಯಂ ॥೪೦॥

ವ॥ ಆಗಳಿಂತು ಸುಬೋಧಹೃದಯನಾಗಿ ಬೇಗದಿಂ ಬಲದೇವಂ ನಿಜಾನುಜನ ಶರೀರಸಂಸ್ಕಾರಮಂ ಯಥಾಕ್ರಮಸಮನ್ವಿತಂ ನೆಗಟ್ಟು ತತ್ಕ್ರಿಯಾನಿರ್ವರ್ತನಾನಂತರದೊಳ್—

ಅಪಘನಮಪಘನಮಿದಱಿಂ ।
ದಪಾರಸಂಸಾರಸುಖಮನೆಯ್ದುವೆನೆಂಬಂ ॥
ಚಪಲಾಗ್ರಂಬಿಡದೀಪವ ।
ನಪಥಮನೆಯ್ದಲ್ಕೆ ಒಗೆವ ಮರುಳಂ ಪೋಲ್ಕುಂ ॥೪೧॥
ತನು ತಾನಲ್ಲೆನೆ ಬಾಹ್ಯರೂಪದ ಕಳತ್ರಂ ಪುತ್ರಗೋತ್ರೇಷ್ಟಮಿ ।
ತ್ರನಿಕಾಯಂ ಬಱಿವರ್ಗದಲ್ತು ಒಱಿವರ್ಕುಂ ಗೆಯ್ದ ಕರ್ಮದ್ವಯಂ ॥
ತನಗಂತಾಯುಗಕರ್ಮದೊಳ್ ಸುಕೃತಕರ್ಮಂ ತಾನೆ ಮೋಕ್ಷೈಕ ಸಾ ।
ಧನಮಕ್ಕುಂ ಸುಕೃತಂ ಶರೀರಿಗೆ ಶರಣ್ ಬೇಱುಂಟೆ ಸಂಭಾವಿಸಲ್ ॥೪೨॥
ಎನಿತಾನುಂ ಶುಚಿಯಪ್ಪ ನಿರ್ಮಲತರಾತ್ಮೋಪೇತಮಾಗಿರ್ದೊಡಂ ।
ತನುವಂ ಸೋಂಕಿದ ವಸ್ತುಗಳ್ ಬಗೆವೊಡಸ್ಪೃಶ್ಯಂಗಳಂತಾಗಲೆಂ ॥
ತೆನಲಂತುಂ ತನು ಸಾಜದಿಂದಕುಜೆ ಬೀಭತ್ಸಂ ತಟಿದ್ರೂಪಮೀ ।
ತನುವಂ ಮೋಕ್ಷಪಥಕ್ಕೆ ಸಲ್ವೆಸಕಮಂ ಕೈಕೊಳ್ವುದತ್ಯುತ್ತಮಂ ॥೪೩॥
ನೆರೆದ ಚತುರಂಗಸೇನಾ ।
ಪರಿಕರಮಿದು ತನ್ನನುಯ್ದು ನರಕಗುಹಾಭ್ಯಂ ॥
ತರದೊಳ್ ಕೆಡಪುವ ರಿಪುಪರಿ ।
ಕರಮೆಂದಪರಾಜಿತಾವನೀಕಂ ಬಗೆದಂ ॥೪೪॥

ಪರಿವೃತ ಒಹಳಪರಿಗ್ರಹ ।
ಪರಿಂಕ್ಷಾಕ್ರಿಯೆಯೊಳೆಯ್ದೆ ಮಗ್ನತೆವೆತ್ತಾ ॥
ನರನೆಯ್ದೆ ಮಗ್ನನಪ್ಪುದು ।
ನಿರುತಂ ನಿರಯದೊಳೆನುತ್ತೆ ನೆನೆದನಿಳೀಶಂ ॥೪೫॥

ವ॥ ಇಂತು ವೈರಾಗ್ಯಯೋಗ್ಯಮನಸ್ಕನಾಗಿ ಬೇಗದಿಂದಪರಾಜಿತ ಮಹಾರಾಜಂ ನಿಜರಾಜ್ಯರಾಜಿತಮಂತ್ರಿಮುಖ್ಯರಂ ಬರಿಸಿ ತಾನವರ್ಗನಂತ ಸೇನಕುಮಾರನಂ ಸಮರ್ಪಿಸಿ ಸಕಲಸಾಮ್ರಾಜ್ಯಪೂಜ್ಯಸಿಂಹಾಸನಾರೂಢನಂ ಮಾಡಿ—

ನಿರುಪಮವರಬೋಧಯಶೋ ।
ಧರನಪ್ಪ ಯಶೋಧರವ್ರತೀಶನ ಪೊರೆಯೊಳ್ ॥
ಪರಮತಪೋವರನಾದಂ ।
ತ್ವರಿತದಿನಪರಾಜಿತಾಹ್ವಯಂ ಬಲನೊಲವಿಂ ॥೪೬॥

ಅತಿಶಯಮಪ್ಪಾಧ್ಯಾತ್ಮಿಕ ।
ಸುತಪಃಪರಿವೃದ್ಧಿಕಾರಣಂ ನೆಪೆ ನೆಗಟ್ಟಿಂ ॥
ಯತಿಪತಿ ದುಸ್ತರಬಾಹ್ಯೋ ।
ಗ್ರತಪಂಗಳನುತ್ತರೋತ್ತರಕ್ರಮದಿಂದಂ ॥೪೭॥

ಎಸಕದ ಮೂಲೋತ್ತರಗುಣ ।
ವಿಸರಪ್ರತಿಪಾಲನಂ ಪೊದಟ್ಟಿರೆ ನಿರ್ಮೂ ॥
ಲಿಸಿದಂ ಮುಂ ಮಾಡಿದ ದುರ ।
ಘಸಮೂಹಮನಾತ್ಮತತ್ವನಿಯಮಿತಚಿತ್ತಂ ॥೪೮॥

ಯತಿನಾಥಂ ನೆಗಟ್ಟಿದತ್ತಮಕ್ಷಮೆ ಋಜುತ್ವಂ ಮಾರ್ದವಂ ಸಂಯಮಂ।
ಸುತಪಂ ತ್ಯಾಗಮಕಿಂಚನಂ ನವವಿಧೋದ್ಯದ್ಬ್ರಹ್ಮಚರ್ಯಂ ಸಮು ॥
ನ್ನತಸತ್ಯಂ ವರಶೌಚಮೆಂಬ ದಶಧರ್ಮವ್ರಾತಮಂ ತಾಳ್ದಿ ಸ ।
ಮ್ಮತಿನೆತ್ತಂ ಜಿನತತ್ವಜನ್ಮನಮಳಂ ಸದ್ಭಾವಸಂಪತ್ತಿಯಿಂ ॥೪೯॥

ಪಾವನತಪೋವಿಶೇಷಗು ।
ಣಾವಳಿಯಿಂದವಧಿಬೋಧಮುದಯಿಸಿ ಸಂಶು ॥

ದ್ಧಾವನಜಿತ್ತಂ ಸಮ್ಯ ।
ಗ್ಭಾವನೆಯೊಳ್ ಮುನಿವರಂ ವಿರಾಜಿಸುತಿರ್ದಂ ॥೫೦॥

ವ॥ ಇಂತನೇಕಸಂವತ್ಸರಂ ಪೋಗೆ ತಪಮಂ ತಾಳ್ದಿ ನೆಗಲ್ದುತ್ತು ಮಾಮುನೀಶ್ವರಂ ನಿಜಾಯುರವಸಾನವೊಂದು ಮಾಸಮಿರ್ದಾಗಳ್—

ಮನಮಿರ್ದತ್ತರಡುಂ ಪರೀಷಹಮನಾದಂ ಗೆಲ್ದು ಸುಸ್ಥೈರ್ಯವೃ ।
ತ್ತಿ ನಿಱಂಬೆತ್ತು ಸಮುಲ್ಲಸತ್ಸಮತೆಯಂ ಕೈಕೊಂಡು ಯೋಗೀಂದ್ರಮಂ॥
ಡನನಾಹಾರಶರೀರಮಂ ತೊಱೆದಿದು ಸಮ್ಯಗ್ಭಾವದೊಳ್ ನಿಂದು ತ ।
ತ್ತನುವಂ ಬಿಟ್ಟಿಸೆವಚ್ಯುತೇಂದ್ರಪದವೀವಿಸ್ತಾರಮಂ ತಾಳ್ದಿದಂ ॥೫೧॥

ಪದಿನಾಱನೆಯಚ್ಯುತಕ ।
ಲ್ಪದೊಳಿಸೆವಣಿಮಾದಿಗುಣಗಣೈಶ್ವರ್ಯಲಸ ॥
ತ್ಪದವೀಪತಿಯಾಗಿರ್ದಂ ।
ಪುದಿದೆಸಕದಿನಚ್ಯುತೇಂದ್ರನಪಗತತಂದ್ರಂ ॥೫೨॥

ವಿಮಲತರಸ್ಫಟಿಕಮರೀ ।
ಚಿಮಯಂ ಹಸ್ತತ್ರಯಪ್ರಮಾಣೋತ್ಸೇಧಂ ॥
ಸಮಚತುರಸ್ರದ ಸಂಸ್ಥಾ ।
ನಮನೋಹರಮೂರ್ತಿ ಸಹಜಮಣಿಗಣಭೂಷಂ ॥೫೩॥

ಅಸದಪರಿಮ್ಲಾನವರ ।
ಪ್ರಸವೋತ್ಕರಶೇಖರಂ ಸುವಸನಂ ವಿಮಳಾಂ ॥
ಗಸಮುದ್ಭವದಿವ್ಯಾಮೋ ।
ದಸಮಾಜಂ ರಾಜಿಸಿರ್ದನಚ್ಯುತಕಲ್ಪಂ ॥೫೪॥

ವ॥ ಮತ್ತಂ ವ್ರತೀಂದ್ರಂ ಸಾಮಾನಿಕತ್ರಯಸ್ತ್ರಿಂಶತ್ಪರೀಷಹಾ
ತ್ಮರಕ್ಷ ಲೋಕಪಾಲಕ ಪ್ರಕೀರ್ಣಕಾಭಿಯೋಗ್ಯಕಿಲ್ಬಿಷಕ ದಿವಿಜನಿವಹ
ಕೃತ ಸಮುಚಿತಪ್ರಾತಿಹಾರ್ಯವಿಸ್ತೀರ್ಣನುಂ, ಸುರೂಪಾತಿಶಯ ಪರಿಸ್ಫು
ಷ್ಟಾಷ್ಟಮಹಾಪ್ರಧಾನದೇವೀಪ್ರಭಾಸುರನುಂ, ತ್ರಿಷಷ್ಟಿಸಂಖ್ಯಾತಸಲ್ಲಲಿ
ತವಲ್ಲಭಾಸುರಾಗಸಂದೋಹಬಂಧುರನುಂ, ದ್ವಿಸಹಸ್ರದೇವೀಕಟಾಕ್ಷ
ಪ್ರಭಾಕಾಮುದೀವಿಳಾಸನುಂ, ನಿರವಧಿಮಹಿಮಾನಿವಾಸನುಂ, ನಾನಾವು
ನಿಪ್ರತಾನಪರಿರಚಿತರುಚಿನಿಚಿತವಿಭೂಷಾವಳೀವಿಭ್ರಾಜಿತನುಂ, ದ್ವಾವಿಂಶ

ತಿಸಮುದ್ರೋಪನಾಯುರ್ವಿರಾಜಿತನುಂ, ಏಕಾದಶಮಾಸಾವಸಾನ ಸುರ
ಭಿನಿಶ್ವಾಸವಿಸ್ತಾರನುಂ, ದ್ವಾವಿಂಶತ್ಸಹಸ್ರಾಬ್ದಸಂಖ್ಯಾವಸಾನಾದಿಕ್ಷಣಮಾ
ನಸಾಹಾರನುಂ, ದಿವಿಜವನಿತಾಲಲಿತದೋರ್ವಲ್ಲರೀದೋಳಾಯಮಾನಚಮ
ರೀಜಸಂಚಾರನುಂ, ಮನಃ ಪ್ರವೀಚಾರನುಮಾಗಿ—

ಜಿನಪಾದಾಂಭೋಜಪೂಜೋತ್ಸವಸಮುದಿತರೋಮಾಂಚಮುಕ್ತಾವಳೀಪಾ।
ವನಗಾತ್ರಂ ಮೂರ್ತಿವೀಕ್ಷಾತುಲಸುಖಜನಿತಾಶ್ರಮಿಶ್ರೋಲ್ಲಸನ್ಮೋ॥
ಹನನೇತ್ರಂ ತನ್ಮಹತ್ವಸ್ತುತಿಶತ.....ದ್ಭುತವಕ್ತ್ರಬ್ಜನಾಗಿಂ ।
ತು ನಿತಾಂತಂ ಶೋಭಿಸಿರ್ದಂಪರಿಣತಸುಮನೋವೃಂದದಿಂದಚ್ಯುತೇಂದ್ರಂ॥

ಜಿನರೂಪಾಲೋಕದಿಂ ಮನ್ಮಥವಿಜಯಜಿನಾಖ್ಯಾಂಕಗೀತವ್ರಜಾಕ ।
ರ್ಣನದಿಂ ಕೈವಲ್ಯಲಕ್ಷ್ಮೀಶ್ವರಚರಣಸಪರ್ಯಾಕ್ರಿಯೋತ್ಸಾಹದಿಂ ಪಾ ।
ವನವಜ್ಜ್ಞಾನಸ್ತವೋಚ್ಚಾರಣೆಯಿನಮಳಶೇಷೋತ್ತರಾಕಲ್ಪದಿಂ ತಾ ।
ನನಿಶಂಪ್ರಖ್ಯಾತಪಂಚೇಂದ್ರಿಯಸುಖಚಯದಿಂರುಂದ್ರನಿಂತಚ್ಯುತೇಂದ್ರಂ ॥

ಸುರಕಾಂತಾನೂನಗಾನಾಮೃತರಸವಿಸರೋತ್ಕೀರ್ಣಕರ್ಣಂ ನವೀನಾ ।
ಮರನಾರೀಜಾಳಲೋಲಾಯತನಯನಮಯೂಖಾವಳೀಚಂದ್ರಕಾಬಂ ॥
ಧುರಚಂದ್ರಂ ದೇವಯೋಷಿತ್ಕುಲಕುಚಕಲಶಂ ಪ್ರೋಲ್ಲಸತ್ತಾರಹಾರೋ।
ತ್ಕರನಾಗಿರ್ದಂ ನಿಳಿಂಪಾವೃತನವಿರತಮಾನಂದದಿಂದಚ್ಯುತೇಂದ್ರಂ ॥೫೭॥

ಅನವರತಂ ಸುರವನಿತಾ ।
ಜನಸಂಗದೊಳಚ್ಯುತೇಂದ್ರನಿರ್ದಂ ವನಿತಾ ॥
ಜನಸಂಗದೂರಜಿನಪದ ।
ವನರುಹನಾಭಾವಸಂಗಸುಖಪದನಿರ್ದಂ ॥೫೮॥

ವ॥ ಇಂತಚ್ಯುತಕಲ್ಪದೊಳಚ್ಯುತೇಂದ್ರನಚ್ಯುತಸುಖಸುಧಾಕರಧಿ
ಯೊಳ್ ಬಿಚ್ಚಿತಂ ನಲಿಯುತುಂ ಮೆಯ್ವೆರ್ಚಿ ನಿರಂತರಮಿರುತ್ತಿರೆಯುಮಿ
ತ್ತಲ್—

ಬಹುತರಸಂಸೃತಿಭೋಗ ।
ಸ್ಪೃಹೆಯಿಂದಮನಂತವೀರ್ಯನೃಪನಖಿಲಪರಿ॥
ಗ್ರಹಸಂದ್ರುಗನಾಗಲ್ ದು ।
ರ್ಮಹನರಕಾಯುಷ್ಯನಾಗಿ ಮೊದಲಿಳೆಗಿಟ್ಟಂ ॥೫೯॥

ಹರಿಗಾಯ್ತು ನಿರಯಗತಿ ಸಂ ।
ಸರಣಾತುಲಭೋಗವಾಂಛೆಯಿಂ ತಾನೆನೆ ಮಿ ॥
ಕ್ಕರನುಯ್ದ ಕೆಡಪದಿರ್ಕುಮೆ ।
ದುರಿತಂ ನರಕದೊಳವಾರ್ಯಸಂಸೃತಿಹತರಂ ॥೬೦॥

ವ ॥ ಆನರಕಂಗಳ್ ರತ್ನಪ್ರಭೆ ಶರ್ಕರಾಪ್ರಭೆ ವಾಲುಕಾಪ್ರಭೆ ಧೂಮಪ್ರಭೆ ತಮಪ್ರಭೆ ಮಹಾತಮಪ್ರಭೆಯೆಂದಕ್ಕುಂ.

ಮೊದಲಿಂದೆಯ್ದೆ ಮಹಾತಮಪ್ರಭೆ ವರಂ ತದ್ಭೂಮಿಬಾಹುಲ್ಯಮಂ ।
ತದು ತಾನೇೞಿಡೆಗಳ್ವರ್ಣನೆಗೞ್ದ ನೂಱಿಂಟುಂ ಮೂವತ್ತೆರಲ್ ।
ಪ್ರದಿದಪ್ಪೊತ್ತರಮಪ್ಪ ವಿಂಶತಿ ಬಲಿಕ್ಕರ್ತ್ತ ನಾಲ್ಕರ್ಯಿ ।
ನ್ಬದಿನಾಱಿಂಟುಂ ಸಹಪ್ರಯೋಜನಮವಕ್ಕಕ್ಕುಂ ಯಥಾಸಂಖ್ಯೆಯಿಂ ॥೬೧॥

ಆರತ್ನಪ್ರಭೆ ಮೊದಲಾ ।
ಗೋರಂತಿರೆ ಕಿಂಚಿದೂನರಜ್ವಂತರಿತಂ ॥
ನಾರಕಭೂವಿನ್ಯಾಸಮ ।
ದಾರಯೆ ನೆಗೞ್ದ ಮಹಾತಮಪ್ರಭೆವರೆಗಂ ॥೬೨॥

ಮೊದಲದು ರತ್ನಪ್ರಭೆಯೆಂ ।
ಬುದು ನರಕಂ ನೋೞ್ಕಿಱ್ಪೊಡದಱಿಳಾಪಟಲಂಗಳ್ ॥
ಪದಿಮೂಱಾಪಟಲಂಗಳೊ ।
ಳೊದವಿದ ಮೂವತ್ತುಲಕ್ಷಸಂಖ್ಯೆ ಬಿಲಂಗಳ್ ॥೬೩॥

ಎರಡನೆಯ ನರಕಮಾಕ ।
ರ್ಕರಾಪ್ರಭಾಖ್ಯಾನಮುದಱಿಳಂ ಪಟಲಂಗಳ್ ॥
ಪರಿಕಿಸೆ ಪನ್ನೊಂದದಱಿಳ್ ।
ನೆರೆದಿರ್ಪತ್ತೈಯ್ದು ಲಕ್ಷ ಸಂಖ್ಯೆ ಬಿಲಂಗಳ್ ॥೬೪॥

ಅವಿರಳಮಿರ್ಪುವ್ ಮೂಱನೆ ।
ಯ ವಾಲುಕಾಪ್ರಭೆಯೆನಿಪ್ಪ ನರಕಾವನಿಯೊಳ್ ॥
ನವಪಟಲಂಗಳ್ ಪ್ರದಿದಂ ।
ತಪ್ಪಱಿಳ್ ಪದಿನೆಂಟು ಲಕ್ಷಸಂಖ್ಯೆ ಬಿಲಂಗಳ್ ॥೬೫॥

ಪ್ರಕಟಾಭೀಳತರ ಬಿಲ ।
ಪ್ರಕರಂಗಳ್ ನೆಗಪ್ಪುವೇಟು ನರಕೋರ್ವಿಯೊಳಿಂ ॥
ದ್ರಕಮುಂ ಶ್ರೇಣೀಬದ್ಧ ।
ಪ್ರಕೀರ್ಣಕಮುಮೆಂದವಿಂತು ಮೂಱುತೆಱಂಗಳ್ ॥೬೬॥

ನೆಗಪ್ಪಿರ್ದಿಂದ್ರಕದೆಣ್ಮೆ ।
ಕ್ಕುಗಳೊಳ್ ತರತರದಿನಿಪ್ಪುವಾಶ್ರೇಣೀಬ ॥
ದ್ಧಗಳವಱಿಡೆಯಿಂದಂ ತೆಱ ।
ಪುಗಳೊಳ್ ತುಱುಗಿಪ್ಪುವಾಪ್ರಕೀರ್ಣಕತತಿಗಳ್ ॥೬೭॥

ನರಕಭವಾಯುಷ್ಯಾಸಾ ।
ಗರೋಪಮಂ ಮೊದಲೊಳೊಂದು ಮೂಱೀಱ್ ಪತ್ತುಂ ॥
ನಿರತಂ ಪದಿನೇೞರ್ಪ ।
ತ್ತೆರಡುಂ ಮೂವತ್ತಮೂಱದಕ್ಕುಂ ಕಡೆಯೊಳ್ ॥೬೮॥

ಕ್ರಮದಿಂದಾನರಕಂಗಳೂ ।
ಳಮನಸ್ಕಪ್ರತತಿ ಸರಿಸೃಪಶ್ರೇಣಿ ವಿಹಂ ॥
ಗಮತತಿ ಭುಜಂಗಸಿಂಹ ।
ಪ್ರಮದಾವಳಿ ಮತ್ಸ್ಯಮರ್ತ್ಯಕುಲಮುದಯಿಸುಗುಂ ॥೬೯॥

ಉದಯಿಸಿದ ನೊದಲ ನರಕೆಗ ।
ಳುದಯಮುದೇೞ್ ದ್ವಿತ್ರಿಹಸ್ತಮೂಱಂಗುಲಮುಂ ॥
ತದಱುತ್ತರೋತ್ತರ ದ್ವಿಗು ।
ಣದಿನೈನೂರ್ವಿಲ್ಲಿನಿತ್ತೆ ತದ್ಭವರುದಯಂ ॥೭೦॥

ಅತಿನಿಶಿತವಜ್ರಸೂಜೀ ।
ತತಿಯುಂ ನೆಱೆ ತುಱುಗಿ ನಟ್ಟ ತೆಱದಿಂ ನರಕ ॥
ಪ್ರತತಿಯ ನೆಲನೆಯ್ದೆ ಸಮು ।
ದ್ಗತ ನಿಸ್ಮರತರ ತೃಣಾಗ್ರ ಸೂಕ್ಷ್ಮಾಗ್ರಮಯಂ ॥೭೧॥

ಪಿರಿದುಂ ದುರಂತದುರಿತಾ ।
ಕರಂಗಳುಂ ಪರಿಕಿಸಲ್ಕೆ ತಾನುದಱುಂ ತ ॥

ಮ್ಮಿರವನಣಂ ತಿಳಿವಂತಿರೆ ।
ನಿರುಪಮತಿಮಿರಾತ್ಮಕಂಗಳಾನರಕಂಗಳ್ ॥೭೦॥

ತೆಱಪಿಲ್ಲದ ಕಡುಗಟ್ಟಿಲೆ ।
ತುಱುಗಿರ್ಪಾನರಕತತಿಯೊಳೊರ್ವರನೊರ್ವರ್ ॥
ನೆಱೆ ಕಾಣ್ಬರಲ್ತೆ ಗೂಗೆಯ ।
ತೆಱದಿಂ ತಱಿಸಂದು ನರಕಜೀವಿಗಳದಱೊಳ್ ॥೭೧॥

ಮಸೆದುರ್ಕಿನ ಡೊಂಕಿಯನೇ ।
ಱಿಸಿ ಕೂರ್ವೊನೆವೊತ್ತ ವಕ್ತ್ರಕಂಟಕಕುಳದಿಂ ॥
ದಸದಳವಾಗಿರ್ಪುವಗು ।
ರ್ವಿಸುತುಂ ನೆಱೆ ಕೂಟಶಾಲ್ಮಲೀದ್ರುಮತತಿಗಳ್ ॥೭೨॥

ವ॥ ಮತ್ತಮಾರತ್ನಪ್ರಭಾದಿ ಪಂಚಮಭೂಮಿತ್ರಿಚತುರ್ಥಭಾಗಾವಸಾನಬಿಲಂಗಳ ಲೋಹಮಯಮೇರುಮಾತ್ರಾಯಃಪಿಂಡಮನಿಱಿಪದಾಕ್ಷ್ಣಾದಿಂ ಕರಗಿಸಿ ರಸಂಬರಿಯಿಸುವತ್ಯುಗ್ರವಹ ವಹ್ನಿಜ್ವಾಲಾವಳೀಕಲಿತಂಗಳುಂ । ಪಂಚಮಭೂಚತುರ್ಥಭಾಗಪಪ್ಮಸಪ್ತಮಾವನಿಬಿಲಂಗಳ್ ಸಂತಪ್ತ ಮುಂಬರಮಹೀಧರಸಮಾಯೋಗೋಲಕಮನಿಱಿಪಿದಾಕ್ಷ್ಣಿದೊಳಾಲಿಗೂಡಿಸುವ ಮಹಾಹಿಮಮಯಂಗಳುಂ । ಹೃಜ್ಜನಿತಮಹಾತೃಷಾರ್ತಾತುರಪ್ರವೇಶಿತನಾರಕಾಂಗಸಂಘಾತ ಧಾತುನಿಷ್ಯಾದಿತ ಕೃತಕ್ಷಾರವಾರಿಪೂರಿತ ವೈತರಣೀಪ್ರವಾಹಪರಿಕಲಿತಂಗಳುಂ । ಅತಿನಿಶಿತಸಕಲಶಸ್ತ್ರಪತ್ರಪ್ರಕೀರ್ಣಮಯ ವಿಷಮವಿಷಚ್ಛಾಯಾಮಯ ದುಷ್ಪ್ರವೇಶಿತ ವನಪ್ರದೇಶಂಗಳುಂ, ವಿಪುಳವಿಜೆಕಿತ್ಸಕುತ್ಸಿತರುಜಾಕಳಿತ ಕಳೇವರವಿದಾರಣಗಳಿತಾಂತ್ರಜಾತಪೂತಿಗಂಧಿಹಾಳಾಹಳಕಟುಕಸ್ವಾದುಮೇದುರ ವಿಷಮೃತ್ತಿಕಾಮಯುಂಗಳುಂ । ದುಸ್ಪರ್ಶ ದುಷ್ಪ್ರವೇಶ ದುರ್ನಿರೀಕ್ಷ್ಯದುರಾಕರ್ಣನ ದುಸ್ಸ್ವರಾಕೀರ್ಣದುರಾಸ್ವಾದರಸ ದುರಾಘ್ರಾಣಗಂಧಾಕ್ಷ್ಣಿ ಭೀಷಣಂಗಳಪ್ಪ ನರಕಂಗಳೊಳ್:—

ನೆಗಟ್ದಪರ್ವಾನರಕಂಗಳೀಱಿ ಬಿಲವ್ರಾತಂಗಳಾವೇಲನ ।
ಟ್ಟುಗಳೊಳ್ ಸಿಂಹಸೃಗಾಲಸೂಕರಖರೋಷ್ಟ್ರವ್ಯಾಘ್ರಮಾರ್ಜಾರಜಾ ॥

ತಿಗಳಾಸ್ಯಾಕೃತಿಯಪ್ಪ ಯೋನಿಗಳಧೋವಕ್ತ್ರಂಗಳಾಗಿರ್ಕುಮಾ ।
ವಗಮತ್ಯಂತ ಜುಗುಪ್ಸೆಯಿಂ ಪಡುಕೆ ನಾಲ್ಕುತ್ತುಂ ಕ್ರಿಮಿಶ್ರೀಣಿಯಿಂ॥ ೭೫॥

ಅನರಕಯೋನಿಯೊಳ್ ಪಿರಿ ।
ದಾನುಂ ನಿರ್ಗಳಿತಪೂತಿಗಂಧವ್ಯಾತ ॥
ಸ್ಥಾನಂಗಳ್ ಕಲಲಪರಿ ।
ವ್ಯಾನಂಗಳ್ ಪೇಸುಪತತಸಂತಾನಂಗಳ್ ॥ ೭೬॥

ಅತಿಕಾಂಕ್ಷಾಕುಲಜೆತ್ತರನ್ಯವನಿತಾಲೋಲಾತ್ಮಕರ್ ಹಿಂಸಕರ್ ।
ವಿತದ್ಯೂತರತರ್ ಪರಾರ್ಥಹರಣರ್ ಪೀತಾಸವರ್ ಸಂತತಾ ॥
ನೃತವಾಗ್ವೃತ್ತಿಸಮನ್ವಿತರ್ ಸಹಜಬದ್ಧದ್ವೇಷಕರ್ ದುರ್ಮದೋ
ದ್ಧತರತ್ಯುಗ್ರಮನಸ್ಕರಾನರಕಯೋನಿಸ್ಥಾನದೊಳ್ ಪುಟ್ಟುವರ್ ॥ ೭೭॥

ಉಗ್ರರ್ ಬಹ್ವಾರಂಭಪ ।
ರಿಗ್ರಹವಿಹ್ವಳರನಂಗರಾಗೋದ್ರೇಕರ್ ॥
ವಿಗ್ರಹಲೋಲರ್ ಕುಮತಾ ।
ನುಗ್ರಹರಾನರಕಯೋನಿಯೊಳ್ ಸಂಭವಿಪರ್ ॥ ೭೮॥

ಪಿರಿಯುರ್ವಾನತರಾಗದಲ್ಪತರವಿಕ್ರಾಂತರ್ ಶ್ರುತಜ್ಞಾನಮ ।
ತ್ಸರಜಿತ್ತರ್ ಜಿನಧರ್ಮದೂಷಕರಧರ್ಮಂ ಧರ್ಮಮೆಂದೂಜ್ವಿ ದು ॥
ಶ್ಚರಿತರ್ ದುಷ್ಟವಿಕೃಷ್ಟರಸ್ತದಯರುದ್ಯದ್ವಾನಹೀನರ್ ವ್ರತಾ ।
ಚರಣಭ್ರಷ್ಟಮನಸ್ಕರಾನರಕದೊಳ್ ತಾಮಾಜ್ವರುಂ ಬೀಜ್ವರುಂ ॥ ೭೯॥

ಪೆಱರ ಸಿರಿ ಪೆಱರ ಪುಣ್ಯಂ ।
ಪೆಱರುನ್ನತಿ ಪೆಱರ ಪೆಂಪು ಪೆಱರ ಗುಣಂಗಳ್ ॥
ನೆಱೆದಿರೆ ಸೈರಿಸಲಾಱದೆ ।
ಮುಱುಗುವ ಮಚ್ಚರಿಗರೆಯುದ್ದರ್ ನಿರ್ಗತಿಯಂ ॥ ೮೦॥

ದುರ್ಮೋಹಮಹಾತಿಮಿರಗ ।
ತರ್ನಿರ್ಧ್ಯಾಚರಿತಭರಿತರಮಳತರಾರ್ಷ ॥
ದ್ಧರ್ಮದ್ವಿಷರುದ್ಧತಜೆ ।
ತ್ತರ್ನುತ್ತರ್ ಬಿಡದೆ ನರಕಗತಿಯಂ ಪಡೆವರ್ ॥ ೮೧॥

ಸ್ರವಿಸುವ ಕ್ಯಕಲಂ ಕೊಟ್ಟಿನಾ ।
ಱುವ ದುರ್ಗಂಧಂ ಪೊದಪ್ಪಿ ನರಕಂಗಳ ಯೋ ॥
ನಿವಿತಾನಂಗಳೊಳುದ್ಭವಿ ।
ಸುವರಾದಂ ಗೆಯ್ದ ಕರ್ಮದಿಂ ಜೀವಂಗಳ್ ॥೪೨॥

ಪುದಿದಿರೆ ಪೂತಿಗಂಧವೊಳಗಂ ಪೊಱಗಣ್ಗೆನಸುಂ ಮರ್ಗಳ್ಚಿದಾ
ಗದು ನಿನಗಾಯುವೊಲ್ದುಱುಗಿ ಕೂರ್ವೊನೆಗಳ್ಗಿನೆ ಪಾಯ್ದು ಭೀಕರಾ ॥
ಸ್ಪದಮೆನಿಸಿರ್ಪ ಪೇಸುಪತಮಪ್ಪ ಕುಯೋನಿವಿತಾನಗಳಲ್ಲಿ ತಮ್ಮ ಕ ।
ರ್ಮದ ಫಲಮುಯ್ದು ಸಂಕ್ರಮಿಸೆ ಸಂಭವಿಕುಂ ಸಲೆ ಜೀವರಾಶಿಗಳ್ ॥

ಪುದಿದಾಯೋನಿಗಳಲ್ಲಿ ಸಂಭವಿಸಿ ತಜ್ಜೀವಂಗಳಂ ತನ್ಮಹೂ ।
ರ್ತದೊಳಾಹಾರಶರೀರಮಿಂದ್ರಿಯಲಸತ್ಕ್ಯೋತ್ಸ್ವಾಗ್ವೃತ್ತಿ ಚೈ ॥
ತ್ತದ ಪರ್ಯಾಪ್ತಿಗಳೆಯ್ದಿ ವೃತ್ತಿಕಸೃತಂ ಕಾಯಮ್ದಜಂದಂತಾಗೆ ರೋ ।
ಮದೊಳೊಂದೊಂದಱೊಳಾದ ವೇದನೆಯದೆಂದುಂ ಪೀಡಿಕುಂ ನಾಡೆಯುಂ॥

ಉದಯಿಸಿ ತತ್ಪಾಪದ ಭಾ ।
ರದೆ ಬೀಜ್ವಂತಾಕುಯೋನಿಮುಖದಿಂ ಮೂಗೊಂ ॥
ಡೊದವಿದ ವಜ್ರಶಿಲಾಭಾ ।
ಗದೊಳಾಗಳ್ ಬೀಜ್ವರಲ್ತೆ ನಾರಕರನಿತುಂ ॥೪೩॥

ಘಳಿಲೆನೆ ಬಿಟ್ಟು ಪುಟಂನೆಗೆ ।
ದಳವಜ್ರಾವಜ್ರಶಿಲೆಯ ಮೊನೆಗಳ್ ಕೆಯ್ಯಂ ॥
ಬಳಸಿ ನಡೆ ನೊಂದು ನೆಱಕಿ ಬಾ ।
ಯಲ್ಬಾಯುತ್ತುಂ ನಿಂದು ದೆಸೆಗಳಂ ನೋಟ್ಟಾಗಳ್ ॥೪೪॥

ಸಿಡಿಲಂತೆಟ್ಟು ಪುರಾಣನಾರಕನಿಕಾಯಂ ಕೋಪದಿಂ ಕಾಯ್ದು ಕಣ್ ॥
ಕಿಡಿಸೂಸುತ್ತಿರೆ ಗರ್ಜಿಸುತ್ತೆ ಪರಿತಂದುಗ್ರಾಸ್ತ್ರಶಸ್ತ್ರಂಗಳಿಂ ॥
ಕಡಿ ಕೊಲ್ ಸೀಳ್ ತಱಿದೊಟ್ಟು ಕೊಯ್ದೆಱಕಿ ಕುರುಳ್ಚಿತ್ತಿರ್ಕು
[ಕುತ್ತಿರ್ಕು ಪೇ।
ಱಿತಲಂ ಪೊಯ್ದು ಬಗಿದುಱ್ಕು ಪೆಗರ್ರುಳನೆಂಬುಗ್ರಸ್ವರಂ ಪೊಣ್ಮುತುಂ॥

ಪರಿತಂವಾಗಳೆ ಗಂಟಲಂ ಮುಱಿವ ಮುಯ್ಯಂ ಪೊಯ್ವ ಮುಂಗೆಯ್ಗಳಿಂ
ಬಱಿಯುಂ ನುರ್ಗುವ ನೆತ್ತಿಯಂ ಕ್ರಕಚದಿಂ ಪೋಱಿಪ್ಪಿನಂ ಸೀಳ್ವ ವಿ ॥

ಸ್ಫುರಿತಾವಸ್ಥೆಯ ತವ್ಮೊಳಾಗಳೆ ವಿಭಂಗಜ್ಞಾನಮುದ್ಭೂತವಾ ।
ಗಿರೆ ದಾದೋಷಮನಪ್ಪುಕೆಯ್ದು ಪೊಣರ್ವರ್ ತಾವಾಗಳುದ್ರೇಕದಿಂ ॥
ಪರಿಗಿದಿರನೆಯ್ದಿವಂದೋ ।
ರ್ವರನೊರ್ವರ್ ಜಡಿದು ನುಡಿದು ಮೂದಲಿಸುತ್ತುಂ ॥
ನೆರಪಿದ ಪಿಂತಣ ದೋಷೋ ।
ತ್ಕರಮುಂ ಪೆಸರ್ಗೊಂಡು ಪೊಣರ್ವರಾನರಕಭವರ್ ॥೮೯॥
ನೆನೆದಂತಾಗಳೆ ಪೂರ್ವವೈರಮನದಂ ತಾವೊರ್ವರೊರ್ವರ್ಗೆ ಭೀಕರಂ ।
ಕೆನೆ ಕೋಪಾನಲನುರ್ಕಿಕಾಮುದ್ಧರಿವುತುಂ ಕ್ರೂರಾಸ್ತ್ರಶಸ್ತ್ರಂಗಳಿಂ ॥
ತನುವಂ ತಚ್ಚಿಜ್ಜಿದೆತ್ತಿಕ್ಕುತ್ತಿ ಕಡಿಖಂಡಂಗೆಯ್ದು ಪೊಯ್ದುರ್ಚಿ ತೊ ।
ಟ್ಟನೆ ನಿಟ್ಟಿಲ್ಗಳನೊಟ್ಟ ನುಚ್ಚುದಜೀವಿತ್ತುಂ ಚೆಂದದಿಂ ದಂಡಿಪರ್ ॥೯೦॥
ಜವನಂತಾಟೋಪಮಂ ಕೋಪಮನೆ ತಳೆದು ಪ್ರಜ್ಯಕ್ಕಳಾಪೂರ್ಣ[ರೊಳ್ ಜೀ ।
ವವಧಾತ್ಮರ್ ಜೀವಹಿಂಸಾತ್ಮಕರೊಳುರದೆ ಕಳ್ಳರ್ ಕರಂ ಕಳ್ಳ[ರೊಳ್ ದ್ಯೂ ॥
ತವಿದರ್ ದ್ಯೂತಕ್ರಕ್ಕಳೊಳ್ ಮದ್ಯಪಿಗಳತುಳಮದ್ಯಪ್ರಮತ್ತಕ್ರಕ್ಕಳೊಳ್ ಪೂ
ಜ್ಯಂ ವಿಭಂಗಜ್ಞಾನದಿಂತಾ ನುಜ್ಜಿದುಪೊಣರ್ವರೋರಂದದಿಂ ನಾರಕಕ್ರಕ್ಕಳ್ ॥
ಕಡುಕೊರ್ವಿಪ ಮೃಗದಿರ್ವರಿ ।
ಯೆಡೆಗಡು ಸವಿಯೆಂದು ಕೊರ್ವಿಸುವೆ ಕೊಳ್ಳಿದೆಯೆಂ ॥
ದಡಸುತೆ ಕೊಯ್ದಾತನ ಒರಿ
ಯಡಗುಗಳಂ ಬಾಯೊಳಡಸಿ ಗಿಡಿಯುತ್ತಿರ್ಪರ್ ॥೯೨॥
ಬಿಡದೆ ಕುಡಿಕುಡಿದು ಮದ್ಯನ ।
ಕಡುಸೊರ್ಕಿಂದಕ್ಕನಸುಜೆಯೆನ್ನದೆ ನೆರೆವೈ ॥
ಕುಡಿಯಿದೆ ಮದ್ಯಮೆನುತ್ತುಂ ।
ಕಡುಗಾಯ್ದಿದ ಲೋಹರಸಮನೆಱಿವರ್ ಬಾಯೊಳ್ ॥೯೩॥
ಮಱಿಯಿಸಿ ಪೆಱರ ಧನಂಗೊ ।
ಳ್ವೞಗುಲಿ ವಂಚನೆಗೆ ಕೊಳ್ಳನುತ್ತುಂ ಬಾಯಂ ॥

ತೆಱದಿಕ್ಕಿ ಕಾಯ್ದ ಲೋಹದ ।
ಕೆಱವೊಂಗಳನಡಸಿ ಪಿಡಿದು ಪೊಲಿವರ· ಬಾಯಂ ॥೯೪॥
ಕಡುಪುಸಿಯನೊರ್ಮೆಯುಂ ನುಡಿ ।
ದೊಡಲಂ ಪೊಱೆಯುತ್ತುಮಿರ್ದರಂ ಕಿಡೆವೊಯ್ದಾ ।
ಹೆಡತಲೆಯಿಂ ನಾಲಗೆಯಂ ।
ಪಿಡಿದುಱ್ರುವರಡಸಿ ಪುಸಿಯದಿರೆನುತ್ತಾಗಳ· ॥೯೫॥
ಪರವನಿತಾಂಗದಪ್ಪು ಸಡಿಲ್ದಿರ್ದೊಡಮಾಕ್ಷಣದಿಂ ನಿಜೋಕನಂ ।
ತಿರೆ ಮುಱುಗುತ್ತುಮಿರ್ಪೆಲವೊ ನೀನಮರ್ದಪ್ಪುವಳಿರ್ದಳೆಂದು ಚೆ ॥
ಚ್ಚರದೊಳೆ ತಂದುತಂದು ಪಿಡಿದಪ್ಪಿಸುವ ಕಡುಗಾಯ್ದ ಲೋಹಸೌಂ ।
ದರಿಯನದಕ್ಕೆ ಸೈರಿಸದೆ ಬಾಯ್ವಿಡೆ ಮೆಯ್ಯುಱ್ಱಿಂದು ಚುಯ್ಯೆನಲ್ ॥
ವೊಱಗೊಂಡು ನಡೆದು ಪತಿಯಂ ।
ಮುಱಿಯಿಸಿ ತತ್ಸತಿಯ ಸಂಗಸುಖಮಂ ಪಡೆವಾ ।
ಮುಱುಗುಲಿಗರನುಯ್ದುರ್ವ ।
ರಜ್ಜುಕೆಯ ವೈತರಣಿಯೊಳಗೆ ನೆಱೆ ಮುಱುಗುವಿನಂ ॥೯೩॥
ಕರನಖಮುಖದಿಂ ಪರಸತಿ ।
ಯರನುಗಿಬಗಿಮಾಡಿರೆ ಕಿರೀಟಂಗಳನಾ ॥
ತುರದಿಂದುಗಿಬಗಿವುವು ವೈ ।
ತರಣೀತಟವಿಷವನಂಗಳಸಿಪತ್ರಂಗಳ· ॥೯೪॥
ಮುನ್ನಮೆ ಪರವನಿತಾಸಂ ।
ಗನ್ನೆಱೆ ಪೊಲ್ಲೆಂದು ಸಾಱುವರ್ಹನ ಮತಮಂ ॥
ಮನ್ನಿಸಿದೆನಾದೊಡೀದುಃ ।
ಖಸ್ನಮಗೇಕಪ್ಪುದೆಂದು ನುಡಿವರ· ಕೆಲಬರ· ॥೯೫॥
ಆವಾವ ತೆಱದ ಪಾಪಮ ।
*ನೋವದೆ ನೆಱೆ ಮಾಡಿದವಗೆ ಮಾಡಿದ ತೆಱದಿಂ ॥
ದಾವಗಮದಱೊಳ· ದಂಡಿಪ ।
ರೆಳ್ಳವಯ್ಸದೆ ಪಿಡಿದು ನಾರಕರ· ನರಕಿಗಳಂ ॥೧೦೦॥

ಉರಿಗಡ್ಡಂಬಿಡದೊಡ್ಡಿ ಕಾಯ್ವುವರಣಂ ಕೆಂಡಂಗಳೊಳ್ ಪೊಟ್ಟು ಪೂ ।
ಟ್ಟಿರದುಯ್ದಿಕ್ಕುವರುಗ್ರಶಸ್ತ್ರಮುಖದೊಳ್ ಪುಣ್ಪಾಯ್ಗಳೊಳ್ ದೂವೆಯಂ
ಸುರಿವರ್ ಕೆಚ್ಚನೆ ಕಾಯ್ದ ಕರ್ಬುನದ ಬಟ್ಟಂ ಚುರ್ಚುವರ್ ಚುಯ್ಯೆನು ।
ತ್ತಿರೆ ಕಣ್ಣಂ ಸುಡುವರ್ ಕಡಂಗಿ ಬಿಡದಿಂತೋರಂದದಿಂ ನಾರಕರ್ ॥

ಬಡವುರಿವುತ್ತುಂ ಪಸುವಿನ ।
ಕಡುಗಿರ್ದಿಂ ತೃಷೆಯ ಮಸಕದಿಂ ಬಾಯ್ ಬತ್ತು ॥
ತ್ತೆಡೆವಿಡದೆ ಮಱುಗುತಿರ್ಪರ್ ।
ಕಡೆ[ವರ]ಮಿಂತನ್ನಪಾನಲವನುಂ ಪಡೆಯರ್ ॥೧೦೨॥

ಪಸಿವಟ್ಟಿ ತಗುಳುತಿರೆ ಸೈ ।
ರಿಸಲಾಱದೆ ಮೆಲ್ದು ಹಾಳಹಳಮೃತ್ತಿಕೆಯಂ ॥
ಬಸವಱಿದು ಬಿಟ್ಟು ಬಸಿಱಂ ।
ಪೊಸೆಯುತ್ತುಂ ಪೊರಱ್ವರಿಂತು ನರಕಿಗಳದಱೊಳ್ ॥೧೦೩॥

ಸೈರಿಸಲಾಱದೆ ಪಿರಿದುಂ ।
ನೀರಱಿಕ್ಕೆಗೆ ಪೊಕ್ಕ ವಿಷನದೀವಾರಿಗಳಂ ॥
ಭೋರೆನೆ ಪೀರ್ದುಂ ಕರುಳೊರೆ ।
ದಾರಂದದೆ ಮಱುಗಿ ನರಕಿಗಳ್ ಬಾಯ್ವಿಡುವರ್ ॥೧೦೪॥

ಕಿಱಿಕಿಱಿದು ಮಾಡಿ ತಸುವಂ ।
ತಱಿತಱಿದೆಣ್ದೆಸೆಗೆ ಬಿಸುಡೆಯುಂ ಬಿಡದಸಿತುಂ ॥
ನೆಱೆದಪ್ಪುದು ತಡೆಯದೊಡಲ್ ।
ಪಱಿಪಡವಂತಿರ್ಪ ರನಪವರ್ತ್ಯಾಯುಷ್ಯರ್ ॥೧೦೫॥

ಪರಿಗಳಿತಪೂತಿಗಂಧರ್ ।
ಖರಕಾಕ ಸೃಗಾಲ ಕರಭ ಕೌಶಿಕ ವೃಕ ವಾ ॥
ನರ ವಿಷದಂಷ್ಟ್ರೋತ್ಕರ ಕು ।
ರ್ಮಾರ ಕೀಟಕ ಭಲ್ಲನಿಕರ ನಿಷ್ಠುರನಿನದರ್ ॥೧೦೬॥

ಅಱಿಯದ ಬಾಲಂ ಬೀದಿಯ ।
ಹಱೆಮಣ್ಣಂ ಮಾಡಿದೊಂದು ಹಾಹೆಯ ತೆಱದಿಂ ॥

ತಜಬಜಿಕಂ ವಿಕಟಾಕೃತಿ ।
ನೆಲೆಸಿ ನಿಷ್ಠುರನಿವೃತಹುಂಡಸಂಸ್ಥಾನಂಗಳ್ ॥ ॥೧೦೩॥

ಸುರಿವಕ್ಕುಜ ಕ್ರಿಮಿಭಯಮನುದ್ಗತಮಹಾದುರ್ಗಂಧಕುಪ್ಪಂ ಭಗಂ ।
ಧರನಾಳೀವ್ರಣ ಕರ್ಣಮೂಲಪಿಟಕಾರ್ಧಶ್ವಾಸಕಾಸಪ್ಲಿಹೋ ॥
ದರ ಶೂಲಾರ್ಬುದಶೋಷ ಗುಲ್ಮ ಗುದಕೀಲಾಸಾತಿಸಾರಾದಿ ದು ।
ರ್ಧರ ಭೀಭತ್ಸರುಜಾಳಿಯಿಂ ನಮೆವರಿಂತಶಾಂತಮಾನಾರಕರ್ ॥ ೧೦೪॥

ಶಾರೀರಮಾನಸಮಹಾ ।
ಕ್ರೂರಾಸುರ ವಿಹಿತಭೂಮಿಜಸಿತಮುಮೆಂದಾ ॥
ನಾರಕನಿಕರಕ್ಕಕ್ಕುಮ ।
ದೋರಂತೆ ಚತುರ್ವಿಧಂಗಳಾದುಃಖಂಗಳ್ ॥ ॥೧೦೫॥

ನಿಮಿಷಾರ್ಧಂ ತೆಱಪಿಲ್ಲದೆ ।
ಸಮನಿಸಿದ ಸಮಗ್ರಮಪ್ಪ ದುಃಖೋತ್ಕಟದಿಂ ॥
ನಮೆಯುತ್ತಿರ್ಪರ್ ನರಕಾ ।
ಯುಮದುಳ್ಳಿನೆಗಂ ಸಮಂತು ನಾರಕರದಲ್ಲಾಳ್ ॥ ॥೧೦೬॥

ವ॥ ಮತ್ತನಾನಿರಯಸಿಕರದೊಳ್ ಕೂಟಶಾಲ್ಮಲೀವೃಕ್ಷವಕ್ತ್ರಕಂಟಕಾವಳಿಯೊಳಿದಿರುಂ ಬಲಿಯುಂ ಕೆಡಿವಿಡೆ ಕಾಯ್ದ ಕರ್ಬೊನ್ನ ಹಲಿಗಳಿಂದೇರ್ವರಿಯಸಮರ್ಚುವುದುಂ , ಉರಿಮಾಲ ಹಸರದೊಳ್ ಪೊರಟ್ಟುವುದುಂ , ತೈರದ ಕೆಚ್ಚ ಕೂಟಂಗಳೊಳ್ ಬಸಿದು ಬಾಯೊಳ್ ಬಿಟ್ಟುವುದುಂ। ವಜ್ರದೊನಕೆಯಿಂದೊರಳೊಳಿಕ್ಕಿ ಸಿಟ್ಟೆಲ್ವಂ ನುರ್ಗೆ ಪಿಟ್ಟುಗುಟ್ಟುವುದುಂ। ಕಠಿನಕುಠಾರಂಗಳಿಂ ಕಡಿಖಂಡಂ ಮಾಡಿ ಕುಟ್ಟುವುದುಂ , ತಜಿಯ ತಳ್ಳಿಗಳನೊಟ್ಟಿಸುಡುವುದುಂ।ಕೂರ್ವಲ್ಲ ಕರಗಸಂಗಳಿಂ ಪೊರಟ್ಟಿ ಕಟ್ಟುವುದುಂ। ವಜ್ರಮೂಷೆಯೊಳಿಕ್ಕಿ ಭಟ್ಟಿಗೆಯ್ವಂತೂದಿ ಕರಗಿಪುದುಂ , ಮಹಾವಿಷದಸಂಕಳೊಳಿಕ್ಕಿ ಕಾಯ್ಸಿ ತನುವಂ ಮಱುಗಿಸುವುದುಂ ; ಕಾಯ್ದ ಕರ್ಬುನದ ಕುಡುಹುಗಳಿಂ ಕಿವಿಮೂಗಿನೊಳ್ ಪರಿಯಿಸುವುದುಂ। ಕಡುಗಾಯ್ದ ಕಾವಲಿಯೊಳ್ ಕುಳ್ಳಿರಿಸುವುದುಂ , ತುಱುಗಿ ನಟ್ಟ ತೀವ್ರಾಯುಧಂಗಳ ಮೊನೆಯೊಳೆತ್ತಿ ತಂದಿಕ್ಕುವುದುಂ , ತಾವೆ ಕಾಯ್ಸಿದುಕ್ಕಿನ ಸೂಲಂಗಳೊಳ್ ಸೆಕ್ಕುವು

ದುಂ। ಮಡದಿಂ ಹೆಡತಲೆವರಂ ಬಾರೆತ್ತುವುದುಂ। ಕೂರಸಿಗಳಿಂದೆತ್ತಿ ಕುತ್ತುವುದುಂ ಪಿರಿಯ ಗಾಣಂಗಳೊಳಿಕ್ಕಿ ಹಿಟ್ಟುವುದುಂ। ಕ್ಷಾರಂಗಳಿಂ ಸೀಱಿದ ಕ್ಷಾರಂಗಳಂ ಪಿಟ್ಟುವುದುಂ। ಕಾಯ್ದ ಕಬ್ಬುನದ ಹುಳಿಗಾವಲಿಯೊಳಿಟ್ಟು ಹುಳಿವುದುಂ । ವಿಶಾಲವಜ್ರದಸುವೆಯೊಳಿಕ್ಕಿ ಸಣ್ಣನಾಗಳಿವುದುಂ । ಉಕ್ಕಿನ ಬಡಿಗೆಗಳಿಂ ಪೊಡೆಸೆಂಡನಾಡುವುದುಂ। ವೈತರಣೀಪ್ರವಾಹಂಗಳೊಳ್ ಹುಡುಕುನೀರದ್ದುವುದುಂ। ಸಂದಿಸಂದಿಗಳಂ ಪಿಡಿಪಿಡಿದರಿಯುತುಂ ಮೊದಲಾದನೇಕ ಶಾಸ್ತಿಗಳಿಂ ಸಂಸ್ಥಾಯಮಾಗಿರ್ಪ ನಿರಯಂಗಳ ಮುಖ್ಯಮಪ್ಪ ಪ್ರಥಮಪೃಥ್ವಿಯೊಳುದಯಿಸಿದನಂತವೀರ್ಯ ಮಹೀಕಾಂತನಾದುರ್ಗತಿಯ ದುಃಖಂಗಳನನಭವಿಸುತ್ತುಮಿರೆ: —

ನಿರಯದುರಂತಮ ಖದೊಳಣಂ ಬಟಲುತ್ತುನುನಂತವೀರ್ಯಭೂ ।
ವರನಿರೆ ಸಂತತಂ ಸ್ತಿಮಿತಸಾಗರನಪ್ಪ ಫಣೀಂದ್ರನಂತದಂ ॥
ವರನಿಜಬೋಧದಿಂದಱಿದು ಬೋಧಿಸಲಲ್ಲಿಗೆ ಬಂದನಲ್ತೆ ಚೆ ।
ಚ್ಚರದಿನೆನಲ್ಕೆ ಮತ್ತೆ ಮಿಗಿಲಾವುದೊ ಭಾವಿಸೆ ಪುತ್ರನೋಹದಿಂ ॥೧೧೦॥

ಅಂತು ಪ್ರಥಮಪೃಥ್ವಿಯೊಳಿರ್ದ ನಿಜಾತ್ಮಜನಪ್ಪನಂತವೀರ್ಯ ಜೀವನಂ ನೋಡಿ ಕಂಡಱಿವಾಗಳ್;—

ಅತಿಬಹಳ ಪರಿಗ್ರಹಸಂ ।
ಗತನಾಗಿ ಮಹಾಂತರಾದ್ರನಾವರಿಸೆ ಹಿತಾ ॥
ಹಿತಮಱಿಯದೆ ನೀನೆನಸುಂ ।
ಮತಿಮಱಿದೆಲೆ ಜೀವ ನರಕಗತಿಗೊಳಗಾದೈ ॥೧೧೬॥

ನೆರಪಿದೆ ವತ್ಸ ನೀನಖಿಳಪುತ್ರಕಳತ್ರಸುಮಿತ್ರಗೋತ್ರಜ ।
ರ್ವೆರಸುರುಸಂಸೃತಿಪ್ರಚುರಭೋಗದ ಕಾಂಕ್ಷೆಯನುದ್ಧುದೋಷಮಂ ॥
ನೆರಪಿ ತದೀಯದೋಷವಶದಿಂ ನರಕಂಬುಗುವಲ್ಲಿ ಪೋಜವರ' ।
ನೆರೆದೊಡವಂದರೇ ನಿನಗೆ ಪುತ್ರಕಳತ್ರಸುಮಿತ್ರಗೋತ್ರಜರ್ ॥೧೧೭॥

ಜಿನಮುನಿವಾಕ್ಪ್ರಸವಂ ನಂ ।
ದನ ನಿನ್ನಯ ಕರ್ಣಪೂರಮಾಯ್ತಿಲ್ಲಕಟಾ ॥
ನಿನಗಾರ್ತರೌದ್ರಭಾವಂ ।
ಜನಯಿಸಿಕದಱಂದಮಾದುದಿಂತೀನರಕಂ ॥೧೧೪॥

ಒದವಿದ ಧನಮುಂ ಸತ್ಪಾ ।
ತ್ರದಾನದೊಳ್ ಸಲಿಸದಿಂತು ಕಿಂಚಿತ್ಸುಖಲೋ ॥
ಭದಿನಿಂತೀಸಂಸೃತಿಭೋ ।
ಗದ ಬಿಯಮುಂಗೆಯ್ದರೆಯ್ದುವರ್ ದುರ್ಗತಿಯಂ ॥೧೧೫॥

ಪ್ರಮದಾಂಗಮೆ ಮಾನಭಂಗಮುಘಮಾಲಾವಲ್ಲರೀಜಾತಜೀ ।
ಜಮತೀವಾಲ್ಪಸುಖಂ ಮಹಾಸುಖಮೆಗೆತ್ತೋರಂದದಿಂ ಮಗ್ನನಾ ॥
ಗಿ ಮತಿಭ್ರಾಂತಿಯೊಳಂತಿರಲ್ಕೆ ನಿನಗಾಯ್ತಾದುರ್ಗತಿಕ್ಲೇಶಮ ।
ಶ್ರಮದಿಂ ಪಿಂಗುವೆ ಪುತ್ರನಿಂದಱಿಯಿಸೈ ಸಮ್ಯಕ್ತ್ವಸಂಪತ್ತಿಯಂ ॥೧೧೬॥

ವನಿತಾಲೋಲದಪಾಂಗಮಾಲೆಗೆ ಮುಖಸ್ಮೇರಾರವಿಂದಕ್ಕೆ ಪೀ ।
ನನಿತಂಬಕ್ಕೆ ಘನಸ್ತನಕ್ಕೆ ಕಲಹಂಸೀಮಂದಯಾನಕ್ಕೆ ವೋ ।
ಹನಮುಗ್ಧೈಕಮನೋಹರಾಂಗಜಲತಾಗಾತ್ರಕ್ಕಣಂ ಸೋಲ್ತು ಕಾ ।
ಮನ ಕೆಯ್ತುಕ್ಕೊಳಗಾಗಿ ಪುತ್ರ ಪಡೆದೈ ನೀಸೀಮಹದ್ದುಃಖಮಂ ॥೧೧೭॥

ರತಿಪತಿಯ ದೂಸಱಿಂ ದು ।
ರ್ಗತಿಯಂ ನೀಂ ಪಡೆಮು ಪಡೆದೆ ದುಃಖಂಗಳಿಂ ।
ಜಿತರತಿಪತಿನುತಿಯೀಸಂ ।
ಸೃತಿಮಾತ್ರವನೊದೆದು ಕಳಗುಮಿಂತಿದು ತಥ್ಯಂ ॥೧೧೮॥

ಮುಂ ನೆರಪಿರ್ದ ಕರ್ಮಮಿರದೆನ್ನರುಮಂ ನರಕಕ್ಕೆ ತಂದಜ ।
ಸ್ಯಂ ನೆರೆ ತಾನೆ ದಂಡಿಸುವುದಾಪಟುಕರ್ಮದಿಸಪ್ಪ ನೋವನಾ ।
ವಂ ನಿರಿಯಲ್ ಸಮರ್ಥನೆಲೆ ಜೀವನೆ ಕೇಳ್ ಜಿನಮಾರ್ಗವೊಂದೆನಲ್ ।
ನೀಂ ನೆನೆ ಕರ್ಮವೈರಿ ಭವವೈರಿ ಜಿನೇಂದ್ರಪದಾರವಿಂದಮಂ ॥೧೧೯॥

ಈನರಕದುಃಖವೇದನೆ ।
ಗೇನುಂ ಸೆಡೆಯದೆ ನಿತಾಂತಮಹದ್ಭಾವಾ ॥
ಧೀನಮನನಾಗೆ ನಂದನ ।
ನೀನೆಯ್ದುವೆ ಸೌಖ್ಯಪದವಿಯಂ ಪದೆಪಿಂದಂ ॥೧೨೦॥

ನಿನಗಾಂ ಪಿಂತಣ ಜನ್ಮದ ।
ಜನಕಂ ಪ್ರತಿಬೋಧಿಸಲ್ಕೆ ಬಂದಂ ಸುರ ನೀ ॥

ನನುಪಮಸಮ್ಯಕ್ತ್ವನೆಯಾ ।
ಗೆನುತುಂ ನೆಱಿ ಪೇೞ್ದ ಪೋದನಾಧರಣೀಂದ್ರಂ ॥೧೨೧॥

ನೆನೆದಾಗಳ್ ಕೃತದೋಷಕೋಟಿಯೆನಸುಂ ತಾಂ ಕಂಪಮಂ ತಾಳ್ದಿತೊ ।
ಟ್ಟನೆ ಬೋಧೋಜ್ವ್ವಲಿತಾತ್ಮನಾಗಿ ಜಿನಭಾವಂಬೆತ್ತು ಸಮ್ಯಕ್ತ್ವಭಾ ॥
ಜನನಾದಂ ಗಡನಂತವೀರ್ಯನೃಪನಂತಾನಾರಕಾಕಾರದಿಂ ।
ದೆನೆ ಪೇೞಲ್ಕೀನರಿವೇಭವಾಬ್ಧಿತರಣಂ ಸದ್ದೃಷ್ಟಿಗಂ ಭಾವಿಸಲ್ ॥೧೨೨॥

ವ। ಇಂತಾನಿಮಿಷದಿಂ ಸಮ್ಯಕ್ತ್ವಸ್ವೀಕೃತಸತ್ವಾಂತನಾಗಿರ್ದನಂತ ವೀರ್ಯಚರನಾನರಕಾಯುರವಸಾನದೊಳೀಜಂಬೂದ್ವೀಪದೆ ಭರತಕ್ಷೇತ್ರದ ವಿಜಯಾರ್ಧಶೈಲದುತ್ತರಶ್ರೇಣಿಯ ಗಗನವಲ್ಲಿಭಪ್ರರಾಧಿಪತಿಯಪ್ಪ ಮೇಘವಾಹನವಿದ್ಯಾಧರಂಗಂ ಮೇಘಮಾಲಿನೀದೇವಿಗಂ ಮೇಘನಿನಾದನೆಂಬ ಮಗನಾಗಿ ಪುಟ್ಟಿ—

ಸ್ಮರನಂ ರೂಪವಿಳಾಸಮೇೞಿಸೆಯುಮುದ್ಯತ್ಪ್ರೌಢಿ ಪಂಕೇಜಮಂ ।
ಪಿರನಂ ರೂಢಿಸೆಯುಂ ಸ್ವಕೀಯಮಹಿಮೌನ್ನತ್ಯಂ ನಿಳಿಂಪಾವನೀ ॥
ಧರಮುಂ ಕೈಮಿಗೆಯುಂ ಪರಾಕ್ರಮವರಾತಿಶ್ರೀಯನಾಕರ್ಷಿಸು ।
ತ್ತಿರೆಯುಂ ಮೇಘನಿನಾದನೆಂಬೆಸಕಸುಂ ಪೆತ್ತಿರ್ದನಾರೂಢಿಯಿಂ ॥೧೨೩॥

ದೊರೆವೆತ್ತನ್ವಯರಾಜ್ಯದ ।
ಸಿರಿಯುಂ ಸಲೆ ತಳೆದು ಪಿತೃಪರೋಕ್ಷ್ಮದೊಳೋರಂ ॥
ತಿರೆ ನೂಱುಪತ್ತು ಪುರಿಗಧಿ ।
ವರನಾದಂ ಖಚರಚಕ್ರಮೇಘನಿನಾದಂ ॥೧೨೪॥

ನರಕದಿನಗಲ್ದಿ ವಿದ್ಯಾ
ಧರಪದವಿಗನಂತವೀರ್ಯನಂ ತಂದುದು ಚೆ ॥
ಚ್ಚರದಿಂ ತಾನಿಂತೆನೆ ಸುರು ।
ಚೆರಸಮ್ಯಕ್ತ್ವದ ಮಹತ್ವಮೇನಪ್ಪುದಿಯೋ ॥೧೨೫॥

ನಂಬುವೊಡನಂತವೀರ್ಯಂ ।
ನಂಬಿದನೊಲ್ ಪರಮಜಿನನ ಚರಣಾಂಬುಜಮಂ ॥
ನಂಬುವುದು ನಂಬುತಿರೆಯುಂ ।
ಕಿಂ ಬಹುನಾ ತತ್ಪದಮೃತಸುಖನಿಧಿಯಕ್ಕುಂ ॥೧೨೬॥

ವರವಿದ್ಯಾಧರರಾಜರಾಜಿತಮುಹೈಶ್ವರ್ಯಾಧಿಪತ್ಯಂ ಪೊದ ।
ಟ್ಟಿದರೆ ವಿಖ್ಯಾತಿಯ ನೂಱಪತ್ತು ಪೋಲಲಂ ತಾನಾಳುತುಂ ಶೀಘ್ರದೀ ॥
ಶ್ವರನಾಮೇಘನಿನಾದನಿಂತರಸುಗೆಯ್ಯುತ್ತಿರ್ದನಾನಮ್ರಶೀ
ಚರಕೋಟೀರಮಣಿಪ್ರಭಾವಳಿ ಮಿಳತ್ಸಿಂಹಾಸನೋದ್ಭಾಸುರಂ ॥೮೭॥

ವ॥ ಇಂತರಸುಗೆಯ್ಯುತ್ತುಮಿರ್ದು ಮೇಘನಿನಾದವಿಯಚ್ಚರೇಂದ್ರ ನೊಂದುದಿವಸಂ ಮಂದರಗಿರಿಯ ನಂದನವನಕ್ಕೆ ಬಂದು ಪ್ರಜ್ಞಾಪ್ತಿವಿದ್ಯೆಯಂ ಸಾಧಿಸಿ ಸಿದ್ಧವಿದ್ಯನಾಗಿ ರಾಗದಿಂ ವೀತರಾಗಪೂಜಾಕ್ರಿಯೋದ್ಯೋಗದಿ ನಿರ್ವುದುವೂ ಚೈತ್ಯಮಂದಿರಕ್ಕೆ ವಂದನಾನಿಮಿತ್ತದಿಂ ಕತಿಪಯದಿವಿಜಪರಿ ಜನಪರಿವೃತನಚ್ಯುತೇಂದ್ರಂ ಬಂದು--

ವಿನಮಿತನಾಗಿ ಭಕ್ತಿಭರದಿಂ ಜಿನಪಾಂಘ್ರಿಗಳಂ ಬೞಿಕ್ಕೆ ಪಾ ।
ವನವಿವಿಧಾರ್ಚನಾವಳಿಯಿನರ್ಚಿಸಿ ವರ್ಣಿಸಿ ನರ್ತಿಸುತ್ತುಮಿಂ ॥
ತನುಪಮಲೀಲೆವೆತ್ತ ದಿವಿಜಾಗ್ರಣಿ ತೊಟ್ಟನೆ ಕಂಡನಲ್ಲಿ ನೆ ।
ಟ್ಟನೆ ಮನದೊಳ್ ಮುದಂ ಪುದಿಯೆ ಮೇಘನಿನಾದವಿಯಚ್ಚರೇಂದ್ರನಂ ॥

ವ॥ ಅಂತು ಮನದೊಳ್ ಮುದಂ ಪುದಿದಚ್ಯುತೇಂದ್ರಂ ನೋಡಿದಾಗಳ್:—

ಚರಣಾನತನಾಗಲ್ ಬರು ।
ತಿರೆ ಮೇಘನಿನಾದನಂ ನಿರೀಕ್ಷಿಸುತೆಲೆ ಶೀ ।
ಚರಪತಿ ನೀನೆನಗನುಜಂ ।
ನಿರತಮೆನುತ್ತಚ್ಯುತೇಂದ್ರನಪ್ಪಿದನಾಗಳ್ ॥೮೮॥

ವ॥ ಅದೆಂತೆಂದೊಡನಂತವೀರ್ಯಹರಿ ನೀಂ ನಿನ್ಮಣ್ಣನಪ್ಪಪರಾಜಿತ ಬಲದೇವನಾಂ ನೀಂ ವಿಗತಾಸುವಾಗೆ ನಿನ್ನ ವಿಯೋಗದುಃಖದಿಂ ಸಂಸಾರ ಪರಾಙ್ಮುಖನಾಗಿ ತಪಂಗೆಯ್ದಚ್ಯುತಕಲ್ಪದ ಪದವಿಯನೆಯ್ದಿದೆನಾಸಿತ್ತಲ್ ನೀನತ್ತ ನರಕಮನೆಯ್ದಿದೆ ತಮ್ಮ ತಂದೆಯಪ್ಪ ಸ್ತಿಮಿತಸಾಗರಚರಧರ ಣೀಂದ್ರಂ ಪುತ್ರವ್ಯೋಹದಿಂ ನಿನ್ನೆಡೆಗೆ ಬಂದು ಪ್ರತಿಬೋಧಿಸುವುದುಂ ನಿನಗೆ ಸಮ್ಯಕ್ತ್ವಂ ಜನಿಯಿಸಿ ತತ್ಫಲದಿಂ ವಿಯಚ್ಚರಪದವಿಗೆ ಬಂದೆ ತಮ್ಮ ಧರ್ಮಮಂ ಮಱೆಯದಿರೆನೆ ಮೇಘನಿನಾದನದಂ ಮನದೆ ಗೊಂಡುದಱ ನುಂದು ಮತ್ತಮಿಂತೆಂದಂ:—

ನರಕಾವಸ್ಥೆಯೊಳಿರ್ದುದಂ ನೆನೆ ಬಱಿಕ್ಕಂ ಧರ್ಮದಿಂದೀವಿಯ ।
ಚ್ಚರಸಂಪತ್ತಿಗೆ ಬಂದುದಂ ನೆನೆ ವೃಥಾ ದುರ್ಮೋಹದೊಳ್ ಬೀೞ್ದಿರ್॥
ಪರಮಶ್ರೀ ಜಿನಧರ್ಮಮಂ ನೆನೆಯೊ ನೀನಕ್ಷೂಣಕೈವಲ್ಯಭಾ ।
ಸುರಸಂಪದ್ವರನಪ್ಪೆ ತಮ್ಮನೆ ದಿಟಂ ಕೈಕೊಳ್ ತಪೋಮಾರ್ಗಮಂ ॥

ಸ್ಥಿರಮೇ ಪೇೞ್ ನಿನಗೀವಿಯಚ್ಚರವಿಭುಶ್ರೀಲೀಲೆ ಚಾತುರ್ಗತಿ-
ತ್ಕರಮೇವಾಪ್ತಿ ಸಮಸ್ತ ಬಂಧುಜನತಾಸಂಬಂಧದಿಂದಪ್ಪುದೇಂ ॥
ಪರಿಭಾವಿಪ್ಪೊಡೆ ನಿಷ್ಟೆಯೇ ತನುವಣಂ ದೂರ್ವಾರಸಂಸಾರಸಾ ।
ಗರದೊಳ್ ಬೀೞ್ದೆ ತಮ್ಮ ನೀಂ ತಳ್ ತಪಸ್ಸಾಮ್ರಾಜ್ಯಸಂಪೂಜ್ಯಮಂ ॥

ವ॥ ಎಂದಿಂತಾಗಳಚ್ಯುತೇಂದ್ರಂ ಸ್ವಕೀಯಸ್ನೇಹಸಂಬಂಧಬಂಧು
ರಾಳಾಪಂಗಳಿಂ ತಿಳಿಯೆ ಪೇೞ್ದು ಪೋಪ್ರದುಮದಂ ಮೇಘನಿನಾದಂ
ಮನದೆಗೊಂಡು:—

ಮುನ್ನೆನಗಾಯ್ತು ಪುಚ್ಚರಿತದಿಂ ಪಿರಿದುಂ ನರಕಪ್ರವೇಶಮ ।
ಲ್ಲಿನ್ನೆಯದಿಂದೆ ಬಪ್ಪ್ರದು ತಾತನ ದೂಸಱಿನಾಮದೀಗಳಿಂ ।
ದನ್ನೆಗಳ ಕೂರ್ಮೆಯಿಂ ತಿಳಿಯೆ ಪೇೞ್ದನಿದೇ ಪರಮಾರ್ಥಮೆಂದು ಬಿ ।
ಟ್ಟನ್ನಿಜರಾಜ್ಯಮೋಹಮನೆ ಮೇಘನಿನಾದವಿಯಚ್ಚರೇಶ್ವರಂ ॥೧೩೦॥

ತೃಣವಲ್ಲಘುವಾಗಲ್ ತತ್
ಕ್ಷಣದಿಂ ಖಚರೇಂದ್ರಪದವಿಯಂ ನೆಜತ ಬಿಟ್ಟಂ ॥
ಗಣಿಸಂಗೆಯ್ಯದೆ ಖಚರಾ ।
ಗ್ರಣಿಯೆನೆ ವೈರಾಗ್ಯವಿಭವದಿಂ ಪೆಜತುಂಟೀ ॥೧೩೧॥

ವ॥ ಮತ್ತಮಾಗಳ್:—

ಅಮರಗುರು ದೇವಗುರುಗಳ ।
ವಿನುಳಪದಾಂಬುರುಹಪಾರ್ಶ್ವದೊಳ್ ಪಿರಿದಾನುಂ ।
ಪ್ರಮದದೆ ಪರಮತಪಶ್ರೀ ।
ರಮಣೀವರನಾಗೆ ಬಗೆದನಾಖಚರೇಂದ್ರಂ ॥೧೩೨॥

ಉಱದೆ ರತೀಶಪಾಶಮನಣಂ ಪಱಿವಂತಿರೆ ಕೇಶಪಾಶಮಂ ।
ಪಱಿದು ಸಮಗ್ರಸಂಸರಣಶೃಂಖಲೆಯಂ ಬಿಡುವಂತೆ ಮೋಹದಿಂ ॥

ದುಱುವ ಕಳತ್ರಪುತ್ರಕುಲಮುಂ ಸಲೆ ಬಿಟ್ಟು ತಪೋವಧೂಟಿಯೊಳ್ ।
ನೆಱೆ ಮೆಱೆದಿರ್ದನಾಕ್ಷಣನೆ ಮೇಘಸಿನಾದನುಮುನಿ ಪ್ರವೋದದಿಂ ॥
ಮನವೂದಂ ಬೋಧಲಕ್ಷ್ಮೀಲಲಿತಮಣಿಗೃಹಂ ಸಚ್ಚರಿತೊದ್ಯ
[ಯಂ ದೋ ।
ಷನಿಕಾಯಂ ಧ್ವಾಂತವಿಧ್ವಂಸಸಮುಮಳತನುದ್ಭಾದಶೋದ್ಯತ್ತಪೋಮಂ ॥
ಡನವಾಗಿರ್ದಂ ಪೊದಱ್ದುಜ್ಜ್ವಲಿಸುವ ದಶಧರ್ಮಾಂಗಳಿಂದೊಪ್ಪುತುಂ ಮೇ
ಘಸಿನಾದಾಖ್ಯವ್ರತೀಶಂ ಜಿನಪತಿಪದಭಾವೈಕಲೀಲಾತ್ತಚಿತ್ತಂ ॥೧೫೬॥

ಪರಿಕಲಿತಸಕಲಗುಣಭೂ ।
ಸುರನುಜ್ಜ್ವಲಶೀಲಪಾಲಿತಂ ಪರಮತಪೋ
ಧರನಾಗಿ ನಾಡೆಯುಂ ಮುನಿ ।
ವರನಿಂತೋರಂತೆ ತಾಂ ವಿಹಾರಿಸುತಿರ್ದಂ ॥೧೫೭॥

ಒವವಿದ ತಪದೆ ವಿಹಾರಿಸು
ತುದಗ್ರಮುದದಿಂದೆ ನಂದನಾಚಲದುಪಕಂ ॥
ತವ ಶಿಲೆಯೊಳ್ ಪ್ರತಿಮಾಯೋ
ಗದೆ ಕೆಯ್ಯಿಕ್ಕಿರ್ದನಚಳಿತಂ ತನ್ಮನಿಪಂ ॥೧೫೮॥

ತನುವೋಹಂ ನಾಡೆ ತನ್ನಿಂ ತೊಲಗಿ ಬಾಹ್ಯೇಂದ್ರಿಯವ್ರಾತಮಾಲೋ
ಚನವಿನ್ಯಾಸಾಗ್ರನಾಸಾನುರ್ಮಳಮೆಸೆಯೆ ಶುದ್ಧೈಕಸದ್ಭಾವದೊಳ್ ನೆ॥
ಟ್ಟನೆ ಜೆತ್ತಂ ನಟ್ಟು ನಿಂದಾವರಿಸಿ ಪುದಿದ ನಿಷ್ಕಂಪಸಂಪತ್ತಿಯಿಂ ನಂ ।
ದನಶೈಲೋಪಾಂತಪಟ್ಟೋಪರಿತಲದೊಳ ಕೆಯ್ಯಿಕ್ಕಿ ಯೋಗೀಂದ್ರನಿರ್ದಂ,
ವಿಲಸದ್ಧ್ಯಾನ ಸಮುದ್ಭವಾಮಳಪರಂಜ್ಯೋತಿಷ್ಕಣಶ್ರೇಣಿವೋಲ್ ।
ಪುಲಕಂಗಳ್ ಪುದಿದುಣ್ಮೆ ಕೋಭಿಪ ಸುರಾಚರ್ಮಾಸಿ ಶೇಷಾಂಗಮು ॥
ಜ್ಜ್ವಲಿಸಲ್ ಮೇಘನಿನಾದಯೋಗಿವರನಿಂತಿರ್ದಂ ಲಸನ್ಮೌಕ್ತಿಕಾ।
ವಳಿಯಿಂ ನಿರ್ಮಿಸೆ ಪೆರ್ಮೆವೆತ್ತ ಜಿನಧರ್ಮಸ್ತಂಭಮೆಂಬಂದದಿಂ ॥೧೫೯॥

ವ। ಇಂತು ಕಾಯೋತ್ಸರ್ಗದೊಳ್ ನಿಸರ್ಗನೆನಿಪ ನಿಷ್ಕಂಪಶೈ
ರ್ಯನಾಗಿರ್ದ ಮೇಘನಿನಾದಯೋಗೀಂದ್ರನಿರೆ ಮುನ್ನನುಜ್ಝಿಗ್ರೀವನು
ಜನಪ್ಪ ಸುಕಂಠನಭಶ್ವರನಸೇಕಭವದೊಳ್ ತೊಟಿಲ್ದುಂ ಬಂದಸುರನಾಗಿ

ಪುಟ್ಟಿ ಲೀಲಾವಿಹಾರದಿಂ ವಿಯತ್ತಲದೊಳ್ ಪೋಗುತ್ತುಂ ಅಮುನಿಯ ಮೇಲೆ ವಿಮಾನಂ ಪೋಗದಿನೆ ಕಂಡು ನಿಜಾವಧಿಜ್ಞಾನಂ ಕೊಂದ ತ್ರಿಪಿಷ್ಟನ ತನಯನೆಂದಱಿದು ಪೂರ್ವಭವಬದ್ಧವೈರಮುಂ ನೆನೆದು ಮುನಿವರನಲ್ಲಿಗೆಯ್ತಂದು:—

ಇರದೀಗಳ್ ಪೋಗುಪೋಗಿನ್ನೆಲವೊ ಮುನಿಯೆ ಮಾಯಾವಿ ನೀನೀಧರಿತ್ರೀ।
ಧರಸಾನುಸ್ಥಾನದಿಂ ಪೋಗದೆ ಬೆಱತಿರೆ ನಿನ್ನಂ ಸಮಂತೆನ್ನ ಬಾಹಾ ॥
ಪರಿಘಾಘಾತಕ್ಕೆ ಪಕ್ಕಾಗಿಸಿ ತಡೆಯದೆ ಕೊಂಡುಯ್ದುಮುನ್ನೀರರಾದೊಲ್ಲೀ
ತ್ಕರರೂಪಾಂಭಶ್ಚರ ಶ್ರೇಣಿಯ ಜಠರಶಿಖಾಜ್ವಾಲಿಕಾಮಾಲೆಗೀವೆಂ ॥

ವ ॥ ಎಂದಿಂತು ಗಜಿಯಿ ಗರ್ಜಿಸುತ್ತುಮಸುರಂ ಕೆಸುಗಣ್ಗಳಿಂ ಕೇಸುರಿ ಸೂಸೆ ರೌದ್ರಾಟೋಪಮಂ ತಳೆದುಪಸರ್ಗಸಹಸ್ರಂಗಳನಗುರ್ವಿಸಿವಾಗಳ್:—

ಗರಳಾಗ್ನಿಜ್ವಾಲೆಗಳಂ ಜಿಹ್ವೆಗಳಿನೊಗೆಯೆ ಸ್ಫೂತ್ಕಾರಿಪುಚ್ಚಂಡದರ್ವೀ ।
ಕರಮುಂ ದಿಗ್ಮಂಡಲಂ ಮಾರ್ದನಿವಿಡೆ ಕಡುಪಿಂ ಗರ್ಜಿಪಾಭೀಳಸಿಂಹೋ ॥
ತ್ಕರಮಂ ಶಾರ್ದೂಲಮುಂ ಭೀಕರಶರಭಮನುನ್ಮತ್ತಮಾತಂಗಮುಂ ಚೆ ।
ಚ್ಚರದಿಂದುಗ್ರೋಪಸರ್ಗಾಳಿಯನೆಸಗಿದುವೇಳ್ಪಂದು ಸಂರಂಭದಿಂದಂ ॥

ಕನಸಿನೊಳಾದೊಡಂ ಮುನಿಮುಲಾಗದು ತಾಂ ಮುನಿವಂಗಮೇವುದಾ।
ಮುನಿಸು ದುರಂತಮಪ್ಪ ನರಕಸ್ಥಿತಿಕಾರಣಮೆಂದು ಪೇೞ್ದ ಪಾ ।
ವನ ಜಿನಮಾರ್ಗದೊಳ್ ನೆಗೞ್ದ ತನ್ಮನಿಪರಾ ಮುನಿಯಲ್ಕೆ ಬಲ್ಲರೇ ॥
ಮುನಿಸದು ಮಾೞ್ಪುದಲ್ತೆ ಮುನಿವಂಗೆಯಗುರ್ವಿಪ ಸಪ್ತಮೋರ್ವಿಯಂ ॥

ನರಕಸ್ಥಾನದೊಳಂದು ತಾನೆನಗೆ ಬಂದಾದುರ್ಧರಾವಸ್ಥೆಯಿಂ ।
ಪಿರಿದೇಂ ಮತ್ತಮಿದೆನ್ನ ಪೂರ್ವಕೃತಶೇಷಾಪಾಪ್ರಾಪ್ತಮಾಯ್ತೀ ಕಳೇ ॥
ವರದಿಂದೀಯುಪಸರ್ಗಮಂ ಕಳೆದು ಕೈವಲ್ಯಕ್ಕೆ ಪಕ್ಕಪ್ಪೆನೆಂ ।
ದುರುಧೈರ್ಯಾತ್ಮಕನಿರ್ದನಿಂತು ಮುನಿಪಂ ಕೆಯ್ಯಿಕ್ಕಿ ನಿಷ್ಕಂಪದಿಂ ॥೧೪೪॥

ತನುವಂ ಮುನ್ನಮೆ ಬೇರ್ಕೆ ।
ಯ್ದನುಪಮಸದ್ಭಾವನಾತ್ತಮನನಾದ ಮುನೀ ॥
ಶನದೆಂತಹುವನೆನಲ್ ದನು ।
ಹನ ಮಾೞ್ಪುಪಸರ್ಗತತಿಯನುೞಿದೆಸೆದಿರ್ದಂ ॥೧೪೫॥

ವ॥ ಇಂತು ಸಮನಿಸಿದ ಸಮಗೊ್ರೀಪಸರ್ಗಮಹೋಗ್ರತೆಗೆ ಸೆಡೆಯದೆ ನಿಷ್ಕಂಪನಾಗಿರ್ದ ಮುಮುಕ್ಷುಮುಖ್ಯನಿರವಂ ಕಂಡಸುರನಾಕಂಪನಪ್ಪುಗೆಯ್ದು ತನ್ನ ಗೆಯ್ದು ಪೊಲ್ಲಮೆಗೆ ತಾನೆ ಪೇಸಿ ಪಟುಪವನಪಾತದಿಂ ದೀಪಕಳಿಕೆ ನಂದುವಂತೆ ಮಣಿದೀಪಕಳಿಕೆ ನಂದುವುದೆ ಎಂದು ಸಂಸ್ತುತಿಗೆಯ್ದು ಮದನಜಿದು ಪದಕ್ಕೆಱಗಿ ಪೋಗೆ:-

ಅಸುರಂ ನೆಗಟ್ದುಪಸರ್ಗಂ ।
ನಿಸರ್ಗಸುತಪಃಪ್ರಭಾವದಿಂ ಪಿರಿಮಂ ತ ॥
ನ್ನೆಸಕಮಜಿದುಜಿದು ಪೋಗಲ್ ।
ನಿಸದಂ ಕೆಯ್ಯೆತ್ತಿಕೊಂಡನಾಮುನಿಮುಖ್ಯಂ ॥೧೪೬॥

ವ॥ ಇಂತುಪಸರ್ಗವಿಜಯನಾದ ಮೇಘನಾದಮುನೀಶ್ವರಂ ನಿರುಪಮತಪಸ್ಸಂಪತ್ತಿಯಿಂ ಪೆಸರ್ವೆತ್ತು ಪಲವುಕಾಲಮುಂ ಕಜಿದು ಜೀವಿತಾವಸಾನದೊಳ್ ಸನ್ಯಸನವಿಧಿಯಿಂ ಶರೀರಮಂ ಪತ್ತುವಿಟ್ಟಚ್ಯುತೇಂದ್ರಂಗೆ ತಾಂ ಪ್ರತೀಂದ್ರನಾಗಿ ಸಂಭಾವಿಸಿ:—

ಸಲೆ ಪೂರ್ವಸ್ನೇಹಮೋಹಂ ತೊಡನುದಯಿಸಿ ತಮ್ಮಿರ್ವರೊಳ್
[ಪೆರ್ಚೆ ಸಿಚ್ಚಂ ।
ನಲವಿಂದೊಂದಾಗಿ ನಾನಾವನವಿಹರಣನುಂ ಮಾಡುತುಂ ಶ್ರೀಜಿನೇಂದ್ರಾ ॥
ಮಲಪೂಜಾರಾಜಿಯುಂ ಭಕ್ತಿಯೊಳೆ ನೆಗಟುತುಂ ವಾರಜಿನೋ್ಮರ್ತಿಯಂ ಮಿಕೊ್ಕಲವಿಂದಂ ವರ್ಣಿಸುತ್ತುಂ ನಿಸದವಿಷದದಿಂದಚ್ಯುತೇಂದ್ರಪ್ರತೀಂದ್ರರ್ ॥
ಸತತಂ ನಾಮಿರ್ವರುಮ ।
ಚ್ಯುತಕಲ್ಪದೊಳಿಂತು ನಿರುಪಮಾಚ್ಯುತಸುಖಸಂ ॥
ಗತ ಜೆತ್ತರಚ್ಯುತೇಂದ್ರ ।
ಪ್ರತೀಂದ್ರರಿರ್ದರ್ ಪೊದಳ್ದ ಪರಮಪ್ರಿಯದಿಂ ॥೧೪೭॥

ವ॥ ಇಂತಿರ್ದನಂತರದೊಳಚ್ಯುತೇಂದ್ರನಾತ್ಮೀಯೋಪಾರ್ಜಿತದ್ವಾವಿಂಶತಿಸಾಗರೋಪಮಾಯುರವಸಾನದೊಳ್ ಪರಿಮ್ಲಾನಜಿನವಸಸಪ್ರಸವವಿಸರಮುಂ ವಿಗತಪ್ರಭಾಭರಣಸರಿಕರಮುಮಪ್ಪುದುಮದನಱಿದು ಷಣ್ಮಾಸಂಬರಂ ಜಿನಪೂಜಾನಿಕಾಯಕ್ರಿಯೆಗಳಂ ನೆಗಟ್ಟುತ್ತುಮಿರ್ದು ಸದ್ಭಾವೈಕ

ನಿಷ್ಠೆಯಿಂ ಪರಿಚ್ಯುತಾಚ್ಯುತಕಲ್ಪನಾಗಿ ಬಂದೀಜಂಬೂದ್ವೀಪದ ಪೂರ್ವ
ವಿದೇಹದ ಸಿತಾತರಂಗಿಣಿಯ ತೆಂಕಣ ತೀರದ ಮಂಗಳಾವತೀವಿಷಯದ
ರತ್ನಸಂಚಯದ ಪುರದ ಕ್ಷೇಮಂಕರಮಹಾರಾಜಂಗಂ ಕನಕಚಿತ್ರಮಹಾ
ದೇವಿಗಂ ಸಂಭವಿಸಿ—

ಈಯವನಿಯನೇಕಚ್ಛ ।
ತ್ರಾಯತ್ತಂ ಮಾಪ್ಪನುದಯಿಸಿದನೆಂದು ಜಗಂ ॥
ಜೀಯೆನುತಿರೆ ಪಿರಿದುಂ ವ ।
ಜ್ರಾಯುಧನಾಮದೆ ಸಮಂತು ಪೆಸರ್ವೆಡೆದರ್ದಂ ॥

ಸಹಜಾತಂ ರೂಪವೊಂದೆಂಬಿನಿತೆ ಬಗೆಗೊಡರ್ಹತ್ಪದಾಂಭೋಜಪೂಜಾ।
ಸ್ಪೃಹೆಯುಂ ಸಮ್ಯಕ್ತ್ವಸಂಪತ್ತಿಯುಮಖಿಲಗುಣಶ್ರೇಣಿಯುಂ ವಿಶ್ವವಿದ್ಯಾ
ವಿಹಿತಪ್ರಾಗಲ್ಭ್ಯಮುಂ ವಿಶ್ರುತವಿನಯಮುಮಕ್ಷೂಣವಿಕ್ರಾಂತಮುಂ ಭೂ.
ವಿಹಿತ ಪ್ರಖ್ಯಾತಿಯುಂ ನಿಚ್ಚಟೆ ನಿಜಮೆನೆ ವಜ್ರಾಯುಧಂ ರಾಜಿಸಿದರ್ದಂ ॥

ಅತಿಶಯರೂಪಕಲಾಸಂ ।
ಗತಿಯಿಂದಪ್ರತಿಮೆಯೆನಿಸಿದಗ್ಗದ ಲಕ್ಷ್ಮೀ ।
ಮತಿಯೆಂಬ ಮನಃಪ್ರಿಯೆ ಸತಿ ।
ಯುತದಿಂ ವಜ್ರಾಯುಧಂ ವಿರಾಜಿಸುತಿರ್ದಂ ॥೧೫೧॥

ಸತತಂ ಶ್ರೀಜಿನರಾಜಭಕ್ತಿಭರದಿಂ ವಿಭ್ರಾಜಿಪೈಶ್ವರ್ಯದಿಂ ।
ಕ್ಷಿತಿವಜ್ರಾಯುಧನೆಂಬ ಕೀರ್ತಿವಡೆದಾವಜ್ರಾಯುಧಂಗಂ ಮಹಾ ॥
ಸತಿ ಲಕ್ಷ್ಮೀಮತಿದೇವಿಗಂ ತನಯನಾದಂ ತತ್ಪ್ರತೀಂದ್ರಂ ತದ ।
ಚ್ಯುತಕಲ್ಪಚ್ಯುತನಾಗಿ ಬಂದು ಪೆಸರ್ವೆತ್ತಿರ್ದಂ ಸಹಸ್ರಾಯುಧಂ ॥

ಎನಿತಾರೂಪಶ್ರೀಯೆಂ ।
ದೆನಿಪಳ್ ಶ್ರೀಷೇಣೆಯೆಂಬಳಾತ್ಮಪ್ರೇಯಾಂ ॥
ಗನೆಯಾಗೆ ಸಹಸ್ರಾಯುಧ ।
ನನಂಗಕೇಳೀವಿಲಾಸದಿಂದೆಸೆದಿರ್ದಂ ॥೧೫೨॥

ಬುಧವಿಬುಧತರುಸಹಸ್ರಾ ।
ಯುಧಂಗನೂತನ ಮನಸ್ಸತಿ ಶ್ರೀಷೇಣಾ ॥

ವಧುಗಮುದ್ಭವಿಸಿ ಕುವಲಯ ।
ವಿಧುವೆನಿಸಿದನಲ್ತೆ ಕನಕಶಾಂತಿಕುಮಾರಂ ॥೧೫೪॥

ವ॥ ಇಂತು ನಿರಂತರಂ ಕ್ಷೀಮಂಕರಮಹಾರಾಜಂ ವಜ್ರಾಯುಧ ಮುಖ್ಯರಪ್ಪ ಪುತ್ರರಿಂ ಸಹಸ್ರಾಯುಧಾದಿಪೌತ್ರರಿಂ ಕನಕಶಾಂತಿಪ್ರಭೃತಿ ಪ್ರಪೌತ್ರರಿಂ ಪರಿವೃತನಾಗಿ ಪರಮಮಹರ್ದ್ಧಿಂದರಸುಗೆಯ್ಯುತ್ತುಮಿರ್ಪುದು ಮತ್ತಲ್:—

ಅನಿಮೇಷಾವೃತಲೀಲನೋಲಗದೊಳೀಶಾನೇಂದ್ರನಿರ್ದಲ್ಲಿ ಪೂ ।
ವನ ಸಮ್ಯಕ್ತ್ವಮನುಳ್ಳರಾರೆಮಗೆ ಪೇೞೆಂ ನೀಮೆನಲ್ಕಾಸಭಾ ॥
ಜನದಿಂದ್ರಂ ನುಡಿದಂ ಶ್ರುತಾಂಬುನಿಧಿ ಸಮ್ಯಜ್ಞಾನಚಾರಿತ್ರದ ।
ರ್ಪನವಜ್ರಾಯುಧನಲ್ಲದಿಲ್ಲ ಪೆಱನಿಂ ಭೂಚಕ್ರದೊಳ್ ಲೆಕ್ಕಿಸಲ್ ॥೧೫೫॥

ಅದನಿಂತು ಕೇೞ್ದು ಸೈರಿಸ ।
ದಿನನಾಂ ವಜ್ರಾಯುಧಾಂಕನೊಳ್ ಪರಿಕಿಸುವೆಂ ॥
ಪದೆದೆನುತುಂ ಮಾಯಾರೂ ।
ಪದಿನಾಗಳ್ ಜಿತ್ರಚೂಳಸುರನೆಯ್ತಂದಂ ॥೧೫೬॥

ವ॥ ಇಂತು ಜಿತ್ರಚೂಳಂ ಬಂದರವಾನೆಯುಂ ಪೊಕ್ಕಾಸ್ಥಾನದೊಳ್ ಕ್ಷೀಮಂಕರಮಹಾರಾಜಪುರೋವರ್ತಿಯಾಗಿರ್ದ ವಜ್ರಾಯುಧನಂ ಕಂಡಿಂತೆಂದಂ:—ಜೀವಾದಿ ತತ್ವಸ್ವರೂಪಂ ದ್ರವ್ಯಪರ್ಯಾಯಸ್ವರೂಪಮೆಂದು ಪೇೞ್ದುದುವುಂ ವಂಧ್ಯಾಸುತಸೌಂದರ್ಯಮಂ ವರ್ಣಿಸುವಂತೆ । ಅದೆಂತೆನೆ:—ದ್ರವ್ಯಮೆಂಬುದು ನಿತ್ಯಸ್ವರೂಪಂ । ಪರ್ಯಾಯಮೆಂಬುದನಿತ್ಯಸ್ವರೂಪಂ। ಆಯೆರಡರ್ಕಂ ಬಂದರ್ಕೊಂದು ಬೇಱಂಬೊಡೆ ಯೀದ್ರವ್ಯಕ್ಕಿದು ಪರ್ಯಾಯವಿಾಪರ್ಯಾಯಕ್ಕೀದ್ರವ್ಯಮೆಂಬ ಸಂಬಂಧಮಿಲ್ಲದೆ ಪೊಕ್ಕು ಹಿಮವದ್ವಿಂಧ್ಯಪರ್ವತಂಗಳಂತೆ ಇದು ದ್ರವ್ಯಮಿದು ಪರ್ಯಾಯಮೆಂದು ನಿಯಮಿಸುವುದಿಲ್ಲಪುದಱಿಂ ದ್ರವ್ಯಂ ಪರ್ಯಾಯಮಾಗಿ ಪರ್ಯಾಯಂ ದ್ರವ್ಯಮಾಗಿ ಪೋಕುಂ।ಅದುಕಾರಣದಿಂ ದ್ರವ್ಯಪರ್ಯಾಯಂಗಳ್ ತಮ್ಮೊಳ್ ಭಿನ್ನಮೆಂಬ ಪಕ್ಷದೊಳ್ ತತ್ವಸಿದ್ಧಿಯಿಲ್ಲ । ಆದ್ರವ್ಯಪರ್ಯಾಯಂಗಳ್ ಪರಸ್ಪರ ಭಿನ್ನಂಗಳೆಂಬ ಪಕ್ಷದಲ್ಲಿಯುಂ ನಿತ್ಯಮುಮೇಕತ್ವಮುಮಪ್ಪ ದ್ರವ್ಯದತ್ತ

ಣಿಂದೆ ಭಿನ್ನಮಪ್ಪ ಪರ್ಯಾಯಕ್ಕೆ ಅನೇಕತ್ವಾನಿತ್ಯತ್ವಹಾನಿಯಕ್ಕುಂ ಅಗ್ನಿಯೊಳೊಂದಿದ ಕರ್ಬೊನ್ನ ಗುಂಡಿನಂತಗ್ನಿಸ್ವರೂಪಮನೆಯ್ದುವ್ರದು । ಅನೇಕಮುಮನಿತ್ಯಮುಮಪ್ಪ ಪರ್ಯಾಯದತ್ತಣಿಂ ಭಿನ್ನಮಪ್ಪ ದ್ರವ್ಯಕ್ಕೆ ನಿತ್ಯತ್ವ ನಿತ್ಯತ್ವಹಾನಿಯಕ್ಕುಂ । ಕೈಪೆಸೋಜಿಕೆಯೊಳಿರ್ದ ಪಾಲಿಂತು ಕೈಪೆಯಪ್ಪುದದುಕಾರಣದಿಂ ದ್ರವ್ಯಪರ್ಯಾಯಂಗಳ್ ವಿಚಾರಿಪೊಡೆ ಸೈರಿಸೆ ಪಡೆವಾ। ಅದಱಿಂ ನೀವು ಪೇೞ್ದಿ ತತ್ವಂ ಶೂನ್ಯಮಾದುದು । ಮತ್ತಮದಲ್ಲದೆಯುಂ ದ್ರವ್ಯಂ ನಿತ್ಯಮುಮೇಕರೂಪಮುಮಪ್ಪ ಕಾರಣದಿಂ ಜೀವಕ್ಕೆ ಬಂದ ತತ್ಫಲಂ ದೊರೆಕೊಳ್ಳದೆ ಪೋಕುಂ । ಅದೆಂತೆನೆ:-ಬದ್ಧಮಪ್ಪಜೀವದ್ರವ್ಯಂ ಮುಕ್ತಾವಸ್ಥೆಯನೆಯ್ದುವುದಲ್ಲದಪ್ಪುದಱಿನದಿಲ್ಲದಿರ್ದೊಡಮೇಕರೂಪಹಾನಿತ್ವಮಕ್ಕುಂ ಅದಱಿಂ ಮೋಕ್ಷಾರ್ಥಮಪ್ಪನುಷ್ಠಾನಂ ವ್ಯರ್ಥಮೆಂದು ತನ್ನ ದುರಾಗ್ರಹದಿಂ ಅನೇಕಾಂತಮಂ ನಿಷೇಧಮಂ ಮಾಡಿ ಕ್ಷಣಂಪ್ರತಿ ಕ್ಷಣಂ ಪ್ರತಿ ಕೆಡುವುವುಂ । ಕಾರ್ಯಕಾರಣಂ ವರ್ತಿಸುತ್ತಿರ್ದುವಂತಪ್ಪ ಕೂಡಿ ಪರಮಾಣುಗಳೇ ತತ್ವವೆಂದು ಬೌದ್ಧಮತದ ತತ್ವಮಂ ಪ್ರತಿಷ್ಠಿಸಿದ ಸತ್ಯಾಂತಿಕಮತಾನುಸಾರಿಯಪ್ಪ ಚೆತ್ರಜಾೞಿನ ನಿರರ್ಥಕವಚನಾಡಂಬರಮನವಧಾರಿಸಿ ವಜ್ರಾಯುಧಕುಮಾರಂ ನಿಜಯುಕ್ತಿನಿಷ್ಠುರವಾಗ್ವಜ್ರಾಯುಧದಿಂದೇಕಾಂತವಾದಿಕಲ್ಪಿತ ತತ್ವಶೈಲಶಿಖರಂಗಳಂ ಸುಚ್ಚೂರ್ಣಮಾಡುತ್ತುಂ ಸಭಾಜನವಚನರಚನಾತಿಶಯಮಂ ಮೆಱೆದಿಂತೆಂದು ನುಡಿದಂ:— ಸಿನ್ನ ಮುನ್ನ ನುಡಿದ ಭೇದೈಕಾಂತಪಕ್ಷದಲ್ಲಿಯುಮಭೇದೈಕಾಂತಪಕ್ಷದಲ್ಲಿಯುಂ ಬಾಧೆಯಂ ಮಾೞ್ಪುದು ಕಥಂಚಿತ್ ಭೇದಾಭೇದಪಕ್ಷಂ ಜಾತ್ಯಂತರಮಪ್ಪುದಱಿಂದಾದೂಷಣಮಲ್ಲಿ ದೊರೆಕೊಳ್ಳದು । ಅದೆಂತೆನೆ:-ದ್ರವ್ಯಪರ್ಯಾಯಂಗಳನೊಂದೊಂದಂ ಬೇರ್ಕೆಯ್ಯ ಬಾರದಪ್ಪುದಱಿಂ ಪೂರ್ವಸ್ವರೂಪಮಂ ಬಿಟ್ಟುತ್ತರಸ್ವರೂಪಮಂ ಕೈಕೊಳುತ್ತುಮಿರ್ಪುದು ಕಾರಣಮಾಗಿಯುಂ ಇದು ದ್ರವ್ಯಮಿದು ಪರ್ಯಾಯಮನಿತ್ಯಸ್ವರೂಪಮೆಂಬ ನಿಜಸ್ವರೂಪಭೇದದಿಂ ದ್ರವ್ಯಮನೆ ಕಾರ್ಯಮಂ ಮಾೞ್ಪುದು ಪರ್ಯಾಯಂ ಪರಿಮಿತಕಾರ್ಯಮಂ ಮಾೞ್ಪುದೆಂಬ ಭೇದದಿಂದವು ಕಥಂಚಿದ್ಭೇದಂ ಸಿದ್ಧಂ । ಅದುಕಾರಣದಿಂ ಕಥಂಚಿದ್ಭಿನ್ನಾಭಿನ್ನದ್ರವ್ಯಪರ್ಯಾಯಸ್ವರೂಪಂ ಜೀವಾಧಿತತ್ವ

ಮೆಂಬ ಸ್ಯಾದ್ವಾದಮತಮನವದ್ಯಮೇಕಾಂತದಿಂ ಕ್ಷಣಿಕಮಣುರೂಪಂ ತತ್ವ
ಮೆಂಬುದು, ಮತ್ತಂ ಸರ್ವಥಾನಿತ್ಯದಂತೆ ಘಟಿಸದು ; ಆದೆಂತೆನೆ:- ಪ್ರತಿಕ್ಷಣ
ದಿಂ ಕೆಡುವುದದು ತಾಂ ಕೆಡದ ಸ್ವರೂಪಮಂ ಬಿಡದಿರ್ಪುದು ; ಕಟಕಕುಂಡಲ
ಕೇಯೂರಂ ಮೊದಲಾದ ಕೆಡುವ ಸ್ವರೂಪಂ ಕೆಡದ ಸ್ವರೂಪಮುಳ್ಳ ಭಂಗಾ
ರಮಂ ಬಿಡದಿರ್ಪಂತೆ ಸಮುದ್ರದ ತೆರೆಗಳ್ ಮೇಣ್ ಕೆಡುವ ಸ್ವರೂಪ
ಮನುಳ್ಳುವು ಕೆಡಿಸದ ಸ್ವರೂಪಮನುಳ್ಳ ತಜ್ಜಲಮಂ ಬಿಡದಿರ್ಪಂತೆ ಮತ್ತ
ಮದಲ್ಲದೆಯುಂ ನಿತ್ಯಸ್ವರೂಪಮನೊಡಂಬಡದೆ ಕ್ಷಣದೊಳ್ ಕೆಡುವ
ಸರ್ವಥಾನಿತ್ಯಸ್ವರೂಪಮೆ ತತ್ವಮೆಂಬೊಡೆ ಪಲವು ದೂಷಣಂಗಳ್ ಒರ್ಪ
ವು ; ಅದೆಂತೆನೆ:- ತಾಯುಂ ಮಗನುಂ ಸ್ತ್ರೀಪುಮಾನರುಂ ಜಾತಿಕುಲಮುಂ ಗು
ರುಶಿಷ್ಯನುಂ ದತ್ತಗ್ರಹಣಮುಂ ಶಾಸ್ತ್ರಸ್ಮರಣಮುಂ ಬಂಧಮೋಕ್ಷಮುಂ
ಪುಣ್ಯಪಾಪಫಲಮುಮೆಂಬಿವು ಮೊದಲಾದ ಸಕಲಲೋಕವ್ಯವಹಾರಂ ನಾಶ
ಮಕ್ಕುಂ ಅದರಿಂ ಸರ್ವಥಾಕ್ಷಣಿಕಮತಂ ಒಹುದೋಷದೂಷಿತಂ ; ಸರ್ವ
ಥಾ ಅಣುರೂಪಂ ತತ್ವಮೆಂಬುದು ಪ್ರಸಿ ; ಆದೆಂತೆನೆ:- ಸರ್ವಪದಾರ್ಥಂಗಳ್
ಸಂದ ರೂಪದಿಂ ಪರಿಣಮಿಸುತ್ತುಮವು ಪ್ರಸಿದ್ಧಂಗಳಪ್ಪುದರಿಂ ರೂಪಾದಿಗು
ಣಂಗಳೆ ತತ್ವಮೆಂಬುದದುಮಸತ್ಯಂ ಆದೆಂತೆನೆ:- ರೂಪಾದಿಗುಣಂಗಳ್ ಗುಣಿ
ಯಿಂ ಬಿಡದೆ ಪ್ರಮಾಣಸಿದ್ಧಂಗಳಪ್ಪುದರಿಂ ; ಆದುಕಾರಣದಿಂ ಕಥಂಚಿನ್ನಿ
ತ್ಯಾನಿತ್ಯರೂಪಮುಂ ಕಥಂಚಿತ್ ಪದಸದೃಪಮುಂದ್ರವ್ಯಪರ್ಯಾಯಮುಂ
ಜೀವಾದಿತತ್ವಮೆಂದು ನಿರವದ್ಯಮನೇಕಾಂತಮತಂ ; ಮತ್ತಂ ದ್ರವ್ಯಂ
ನಿತ್ಯಮೇಕರೂಪಮುಮಾದೊಡೆ ಬಂಧಮೋಕ್ಷಾದಿ ನಾಶಮಕ್ಕುಮೆಂಬ
ದೂಷಣಮುಂ ಸರ್ವೈಕಾಂತಮತದಲ್ಲಿ ಬಾಧೆಯಂ ಮಾಡ್ಪುದು ; ಕಥಂ
ಚಿತ್ ನಿತ್ಯಾನಿತ್ಯಪಕ್ಷದಲ್ಲಿಯದು ಘಟಿಸದದುಕಾರಣದಿಂದೇಕಾಂತದುರಾ
ಗ್ರಹಗ್ರಹಮಂ ತೊಱೆದು ಸ್ಯಾದ್ವಾದಸಮ್ಯಗ್ಮಂತ್ರಮನನುಷ್ಠಿಸಿ ಸ್ವಾಸ್ಥ್ಯ
ಮಂ ಪಡೆದಿರ್ಕ ಎಂದೊಡಂಬಡಿಸೆ- ಜೆತ್ರಜೂಳಸುತ್ವಜಿತ್ತನಾಗಿ ವಜ್ರಾ
ಯುಧನಂ ಪೂಜಿಸಿ ನಿಜಾಗಮನದ ವೃತ್ತಾಂತಮನಱಿಪಿ ದಿಙ್ಮಿಜಸಿವಾಸಕ್ಕೆ
ಪೋಪುದುವಾವಜಾಯುಧಕಾಮಾರಂ ತದೀಯಸಭಾಜನದೊಳನೇಕರು
ಮಂ ಸಮ್ಯಗ್ದೃಷ್ಟಿಗಳಂ ಮಾಡಿ--

ವಿನುತಸ್ಯಾದ್ವಾದವಿದ್ಯಾವನನಿಧಿ ಕುಮತೋರ್ವೀರುಹೋತ್ಪಾಟನೀಯಾ।
ಶನಿಕುದ್ದಾಲೋಕ್ತಿಜಾಲಂ ಜಿನಮುಖಭವತತ್ವಾ್ವ...ಸ್ವಾದಸಂತು ॥
ಪ್ಪನಿಹಸ್ವಾಂತಂ ಸುರೇಂದ್ರೊದ್ಯಮರ ಸಮುದಯಸ್ತುತ್ಯಸಮ್ಯಕ್ತ್ವಸನ್ನಾ।
ದ್ಧನೆಯಾಗಿರ್ದಂ ಬುಧಾನಂದಿತಗುಣನಿಳಯಂ ಸೂಕ್ತಿಸಂದರ್ಭಗರ್ಭಂ ॥

॥ ಗದ್ಯ ॥

ಇದು ವಿನಮದಮರೇಂದ್ರವೌಳಿಮಣಿಕಿರಣಮಾಳಾಪರಾಗಪರಿರಂಜಿತಚರಣ ಸರೀರುಹರಾಜಿತ ಪರಮಜಿನರಾಜಸಮಯಸಮುದಿತ ಸದಮಲಾಗಮಸುಧಾ ಶರಧಿಶರದಿಂದು ಶ್ರೀಮದ್ಘಣಂದಿಸಂಡಿತಮುನೀಶ್ವರಮನೋಜನಿತಸಿರುಪಮ ದಯಾರಸಸರಸೀಸಂಭೂತಸಂಭವಾಮಳ ಸುಕವಿಕಮಲಭವವಿರಚಿತಮಪ್ಪ

ಶಾಂತೀಶ್ವರಪರಮಪುರಾಣದೊಳ್
ಅನೇಕಾಂತಾರ್ಥಸಮರ್ಥನೈಕವರ್ಣನಂ
ನವಮಾಶ್ವಾಸಂ ಸಂಪೂರ್ಣಂ

ದಶಮಾಶ್ವಾಸಂ

ಶ್ರೀಮದಸುಪಮಿತಸಮ್ಯ ।
ಕ್ತ್ವಾವಳಿಮಣಿಭೂಷಿರ್ದಂತೆಸದು ಯಶೋ ॥
ಭಾವೋದಿತಗತಭುವನ ।
ಸ್ತೋಮಂ ಜಿನಪದಪಯೋಜರಾಜಮರಾಳಂ ॥೧॥

ಅಧಿಗಮಸಮ್ಯಗ್ದರ್ಶನ ।
ನಧರೀಕೃತಕುಮತವಾದಿವಾಕ್ಕ್ಷಯನಾಗಿಂ ॥
ತು ಧರಿತ್ರಿಗೆಸೆದು ವಜ್ರಾ ।
ಯುಧಯುವರಾಜಂ ಪ್ರಭಾವದಿಂ ಪುದಿದಿರ್ದಂ ॥೨॥

ವ। ಇಂತು ವಿರಾಜಿಸುವ ವಜ್ರಾಯುಧಕುಮಾರನಂ ನೋಡಿ ನೋಡಿ ನಾಡೆಯುಂ ಪ್ರಮೋದಮನೆಯ್ದುತ್ತುಮಂತಾಕ್ಷೇಮಂಕರಮಹಾರಾಜಂ ಪಲಕಾಲಮರಸುಗೆಯ್ಯುತಿರ್ದು ಸಂಸಾರಶರೀರಭೋಗನಿರ್ವೇಗಪರಾಯಣನಾಗಿ—

ಎನಗಿಂತಪ್ಪ ಕುಮಾರನುದ್ಭವಿಸಿದಂ ರತ್ನತ್ರಯಶ್ರೀಗೆ ಜ ।
ನ್ಮನಿವಾಸಂ ಮನಮೂದ ಬೋಧಮಹಿಮಂ ತಾನೆಂದು ವಜ್ರಾಯುಧಾ ॥
ನನಮುಂ ವೀಕ್ಷಿಸಿ ನಲ್ಮೆ ನೂರ್ಮಡಿಸೆಯುಂ ಕ್ಷೇಮಂಕರಕ್ಷ್ಮಾಪಂ ।
ನೆನೆದಂ ನೆಟ್ಟನೆ ಪುತ್ರಭಾಳಪುಟದೊಳ್ ಕಟ್ಟಲ್ಕಣಂ ಪಟ್ಟಮಂ ॥೩॥

ಬರೆ ಲೋಕಾಂತಿಕದೇವರಾಸಮಯದೊಳ್ ತನ್ನಂ ಮನಃಪ್ರೇಮದಿಂ ।
ಪಿರಿದಾನುಂ ಪ್ರತಿಬೋಧಿಪೊಂದು ಬಗೆಯಿಂ ತಾನಂತದಂ ಕಂಡಿದ ॥
ಚ್ಚರಿ ಮಚ್ಚಿತ್ತದೊಳರ್ದ ಪೂರ್ವ್ವ ನಿರತಂ ಕೈಗೂಡಿತೆಂದಿಂತು ಹ ।
ರ್ಷರಸೋತ್ಪೂರಿತಚಿತ್ತನಾದನೆನಸುಂ ಕ್ಷೇಮಂಕರಕ್ಷ್ಮಾಧರಂ ॥೪॥

ವ॥ ಅಂತು ಬಂದ ಲೋಕಾಂತಿಕದೇವರಿಂ ಕ್ಷೇಮಂಕರಭೂವರಂ ಪ್ರತಿಬೋಧಿತಸ್ವಾಂತನಾಗಿ ತದನಂತರದೊಳ್—

ತನಯಂ ನೀನೆಂಬಹಂಕಾರದೊಳೆ ನಿನಗೆ ಪೇೞ್ದಪ್ಪೆನಾನಿಂತಿದಂ ನಂ ।
ದನ ಕೇೞಿನ್ನಾರುಮೆನ್ನಂ ನೆ[illegible]ವಿನೆಗಂ ಲೀಲೆಗಂ ಪಾಲಿಸೈ ಪೂ ॥
ಣ್ದೆನುತುಂ ಕ್ಷೇಮಂಕರಕ್ಷ್ಮಾಪತಿ ಬುಧನಿಧಿವಜ್ರಾಯುಧಂಗೊಲ್ದುತಪ್ಪಿ।
ದನರಾಜ್ಯಶ್ರೀಯನಿತ್ತಂ ಪ್ರದಿಯೆ ದೆಸೆಗಳಂ ಮಂಗಳಾತೋದ್ಯನಾದಂ ॥೫॥

ವ ಇಂತು ನಿಜಪಾಜ್ಯಸಾಮ್ರಾಜ್ಯಪದವಿಯೊಳ್ ವಜ್ರಾಯುಧನಂ ನಿಲಿಸಿ ನೆಱಸಾರ್ತಂದ ವೈರಾಗ್ಯಲಕ್ಷ್ಮೀಕಾಂತೆಯ ಕೆಯ್ವೀಡಿಯಲರ್ದಿಗನಾಗಿ ಕ್ಷೇಮಂಕರಮಹಾರಾಜಂ ಪಟನಿಷ್ಕ್ರಮಣಕಲ್ಯಾಣ ಪೂಜಾಪೂರ್ವಕಂ ದೀಕ್ಷೆಯಂ ತಾಳ್ದಿ ನಿರಂತರಂ ನಿಖಿಲದೇಶಂಗಳೊಳ್ ವಿಹರಿಸುತ್ತುಂ ಶುಭ ಧ್ಯಾನಾಶುಶುಕ್ಷಣಿಶಿತಾದಗ್ಧಘಾತಿಕರ್ಮವ್ರಾತೇಂಧನನನಂತಜ್ಞಾನಾದಿಗಳಿಂ ಪರಿಪೂರ್ಣಪ್ರಾತಿಹಾರ್ಯಾತಿಶಯನನಾರತಪರಿವೃತದ್ವಾದಶಗಣನಗಣಿತಸಮ ವರಣ ಸಂಪತ್ತಿವೆತ್ತಿರೆಯುಮತ್ತಲ್:—

ವಿನುತಾಜ್ಞಾಗೋಮಿನೀವಿಪ್ಪರಮಖಿಳದಿಶಾಕುಂಭಿಕುಂಭಾಘಮಾಗಿ ।
ರ್ಪಿನಮುರ್ವೀನಾಥಯೂಥಂ ನೆನೆದು ಚರಣಸೇವಾಭಟವ್ರಾತಮಾಗಿ ॥
. . . . . .
ರ್ಪಿನಮಾವಜ್ರಾಯುಧೋರ್ವೀಪತಿಯತಿಶಯಸಾಮ್ರಾಜ್ಯದಿಂದೊಪ್ಪು

[ತಿರ್ಪಂ ॥೬॥

ಜಿನಮಾರ್ಗಂ ಮಾರ್ಗಮರ್ಹನ್ಮತಮೆಸೆವ ಮತಂ ಜೈನಧರ್ಮಂ
[ಸುಧರ್ಮಂ ।

ಜಿನತತ್ವಂ ತತ್ವಮುದ್ಯಜ್ಜಿನಕಥೆ ಕಥೆ ಜೈನಸ್ತವಂ ಸುಸ್ತವಂ ಶ್ರೀ ॥
ಜಿನದೇವಂ ದೇವನೆಂಬೀಜನಮೆ ಪರಿಜನಾನೀಕಮಾಗಿಂತು ಸಮ್ಯ ।
ಕ್ತ್ವನಿಧಾನಂ ತಾನೆನಿಪ್ಪೀಮಹಿಮೆವಡೆದ ವಜ್ರಾಯುಧಂ ರಂಜಿಸಿರ್ಪಂ ॥

ತನ್ನ ಕೊಡೆನೆಲೆ ನೆಲನಿ ।
ಶನ್ನೆಲವೆಣ್ಗಾನೆಗಜ್ಜಿ ವಿಕ್ರಮಮೆದು ತಾ ॥
ನುನ್ನತಿಕೆವಡೆದು ರಾಜ್ಯದೊ ।
ಳನ್ನೆಜಕಿ ವಜ್ರಾಯುಧಂ ವಿರಾಜಿಸುತಿರ್ದಂ ॥೪॥

ಉರಯ್ಯೆ ತೀವ್ರ ಕರಪೀ ।
ಡಾರಹಿತಂ ಪ್ರಜೆ ಸಮಂತು ವಜ್ರಾಯುಧಧಾ ॥
ತ್ರೀರಮಣನ ರಾಜ್ಯದೊಳಂ ।
ತಾರಜನಿಯ ಕಮನಕುಮುದನನಸಮಿತಿಯೊಲ್ ॥೫॥

ವ ॥ ಮತ್ತಮಾವಜ್ರಾಯುಧಮಹಾರಾಜನೀಕಚ್ಛತ್ರೀಕೃತಧರಾತಲನುಂ ದ್ವಿರದರಿಪುವಿಕ್ರಮಾವೃತವಿಜಯಭುಜಬಲನುಂ ತ್ರಿಲೋಕಸ್ತವನೀಯನಿರ್ಮಲಗುಣೋನ್ನತನುಂ ಚತುರಜನಚಿತ್ತಾಶ್ಚರ್ಯಕೃತಚಾತುರ್ಯಕಲ್ಪಾಸ್ವಿತನುಂ ಪಂಚಾಂಗಮಂತ್ರೋದಂಚಿತಮಂತ್ರಿಸಂತತಿಸಮಾವೃತನುಂ ಷಡ್ಗುಣಾಗಣ್ಯಪುಣ್ಯಪ್ರಭಾವೋಪೇತನುಂ ಸಪ್ತಾಂಗಸಾಮ್ರಾಜ್ಯರಾಜಿತನುಂ ಅಷ್ಟಮದಮಹಾತಮೋವರ್ಜಿತನುಂ ನವಯುವತೀಜನಮನೋಮೋಹನಮನೋಭವನುಂ ದಶಾವೃತಸಮಸ್ತಭುವನನನುಮೆಂಬ ಮಹಿಮೆಗಳುಂಬುವಾಗಿ ರಾಜಿಸುತ್ತುಂ ರಾಜ್ಯಂಗೆಯುತ್ತುಮಿರ್ದೊಂದು ದಿವಸದೊಳ್—

ಸರಸೀಜಾತೋದ್ಭವಂ ಕಂಡರಿಸಿ ಕಡೆದು ತಂದಿಟ್ಟನೋ ರೋಹಣೋರ್ವೀ
ಧರಮಂ ತಾನೆಂಬಿನಂ ಕೀಲಿತವಿವಿಧಮಣಿವ್ರಾತಕಾಂತಿಚ್ಛಟಾವಿ ॥
ಸ್ಫುರಿತಂಬೆತ್ತಾ ಸಭಾಸದ್ಮಮನಮಲಯಶೋಭಾಸಿವಜ್ರಾಯುಧೋರ್ವೀ ।
ವರನಾಗಳ್ ಬಂದು ಪೊಕ್ಕಂ ಪ್ರಮದದೆ ಪರಿವಿಷ್ಟಾವನೀನಾಥಯಾಥಂ ॥

ಚತುರಂಭೋನಿಧಿವೇಷ್ಟಿತಾವನಿಗೆ ತಾನಿಂತೊರ್ವನುರ್ವೀಶನೆಂ
ದು ತದಾಸ್ಥಾನದ ರತ್ನಭಿತ್ತಿತತಿಯೊಳ್ ತೋರ್ಪಾಯತಾತ್ಮಾಕೃತಿ ॥
ಪ್ರತಿಬಿಂಬಾವಳಿ ಸೂಜೆಪಂತೆಸೆಯೆ ಲೀಲಾಯಾನದಿಂ ಬಂದಳಂ ।
ಕೃತಕಂಠೀರವಪೀಠನಾದನಮದಂ ವಜ್ರಾಯುಧೋರ್ವೀವರಂ ॥೧೧॥

ನಳಿತೋಳ್ ತೂಗಾಡೆ ಹಾರಂ ತೊನೆಯೆ ವಲಯಝಂಕಾರಚಾರು
[ಪ್ರಣಾದಾ ।
ವಳಿ ತಪ್ಪುರ್ವೇರ್ಪಟ್ಟ ಬೆಳ್ದಿಂಗಳನುಗುಟ್ಟಿ ಚಳಾಪಾಂಗಮೂಭಂಗುರಾಂಗೋ॥
ಜ್ಜ್ವಳಲಾವಣ್ಯಾಮೃತಂ ಸಾಲ್ವರಿಯೆ ನಗೆಮೊಗಂ ಮಂದಹಾಸಾಂಶುವಂ ಕ ।
ಣ್ಗೊಳೆ ಬೀಱುಲ್ ನೀಱಿಯರ್ ಚಾಮರಮನವನಿಪಾಲಂಗೆ ಸಾರ್ದಿಕ್ಕು
[ತಿರ್ದರ್ ।೧೨॥

ದರಹಾಸಶ್ರೀವಿಲಾಸೋದಯವದನವಧೂಜಾಲಲೋಲಾಯತಾಪಾಂ ।
ಗರುಜೆವ್ಯಾಕೀರ್ಣದಿಂ ಸೂಸುವ ಸುರುಜೆರಕಪ್ರೋದ್ಗಮಾಸೂನ್ಮಜಾಂಶೂ॥
ತ್ಕರದಿಂ ನಾವಾನುಮೇಯಂ ಸುಜನವ ಪರಿಮಳಾಸಕ್ತಮತ್ತಾಳಿಯೆಂಬ ।
ಚ್ಚರಿಯಂ ಬೀಱುತ್ತೆ ಶುಭ್ರದ್ಯುತಿಭರಿತಹರಿವ್ಯೂಹಮಾಸ್ಥಾನಗೇಹಂ॥

ಪರಿವೇಷ್ಟಿತನೃಪಸಂಕುಲ ।
ಕಿರೀಟಮಣಿಗಣಸ್ಫುರಣಚ್ಛಟಾಂಜಿತಹರಿವಿ ।
ಷ್ಟರನಾವಜ್ರಾಯುಧಭೂ ।
ವರನಿಂತೋಲಗದೊಳಿರ್ದನಿರ್ದಾಪದದೊಳ್ ॥೧೪॥

ಕತಿಪಯಸುಧರ್ಮಬಿಂದುನಿಚಲಂ ತನುಸಂವೃತಕಂಚುಕಂ ಕಟೀ ।
ವೃತಲಸಿತೋತ್ತರೀಯವಸನಂ ಪಥಪಾಂಸುನವೀನಪಿಂಜರ ॥
ದ್ಯುತಿಪರಿರಂಜಿತಾಂಘ್ರಿಯುಗಳಂ ನವಚೂತಫಲಾಚ್ಛಗುಚ್ಛ ರಾ ।
ಜಿತಕರನೋರ್ವನೋಲಗಕೆ ಬಂದನವಂ ವನಪಾಲಕಾಹ್ವಯಂ ॥೧೫॥

ಮರಕತರತ್ನಮಂಜರಿಯಿನಲ್ಲಿಗೆ ರಂಜಿಸುತುಂ ಪಸುರ್ಪ ಬಿ ।
ತ್ತರಿಸುತುಮಿರ್ಪ ಮಾಮಿಡಿಯ ಗೊಂಚಲ ಕಾಣ್ಕೆಯನಿತ್ತು ಭೂವರೇ ॥
ಶ್ವರನ ಪದಕ್ಕೆ ತತ್ಪ್ರಮುಖನುರ್ವಿಯೊಳಾನತನಾಗಿ ಸಾರ್ದು ನಿಂ ।
ದಿರೆ ವನಪಾಲಕಂ ಕಾಸಿನಭೀಕ್ಷ್ಣಸುಖಂ ವದನಾರವಿಂದಮಂ ॥೧೬॥

ವ॥ ಆಚೂತನೂತನಫಲಮುಂಜರಿಯಂ ವಜ್ರಾಯುಧನರೇಂದ್ರಂ ನೀಡುಂ ನೋಡುವೆಸಕದಿಂ ಪ್ರಸನ್ನಭಾವಮನಾಂದು ವನಪಾಲಕಂ ನಿಜಾನುಚರ ಶಿರದೊಳಿರ್ದ ಪುಷ್ಪದ ಪರ್ಣಪುಟಿಕೆಯುಂ ತಂದು ಮುಂದಿಟ್ಟುಂ ಜೆತ್ತಜನ ಕೀರ್ತಿಯ ಬಿತ್ತುಗಳಂತೆ ಬಿತ್ತರಿಪ ಮಲ್ಲಿಕಾಕುಟ್ಮಲಂಗಳುಮುಂ। ತ್ರಿಭುವನವಿಜಯನಪ್ಪ ದರ್ಪಕನ ರಾಜಿಸುವ ತೇಜೋಂಕುರಂಗಳಂತೆ ಕೆಂಪೆಸೆವ ತನಿಗಂಪಿನ ಸೊಂಪಿನ ಸಂಪಗೆಯ ಬಿರಿಮುಗುಳ ಬಳಗಂಗಳುಮುಂ। ವನಲಕ್ಷ್ಮಿಯ ತಲೆದೊಡವಿನ ತೋರ ಮುತ್ತುಗಳಂತೆ ಮನಂಗೊಳಿಸುವದಿರ್ಮೊತ್ತೆಯ ಬಟ್ಟಮುಗುಳ್ಗಳುಮುಂ। ತಲೆವಾಗದ ವಿರಹಿಯನಲೆವ ಕಲುಷಮುಂ ತಳೆದ ಕಂತುವಿನ ಕಣ್ಗಳಂತೆ ಪಾಟಲಿತಮಾದ ಪಾಟಲೀಸುಮಪಟಲಂಗಳುಮುಂ ; ಅಂಗಭವನ ಪೊಂಗೊಡಂಗಳಂತೆ ಕಂಗೊಳಿಸುವ ಕರ್ಣಿಕಾರ ಕುಸುಮದಂತೆಗಳುಮುಂ ; ಕಂತುದಂತಿಕುಂತಾನುಕಾರಿಯಪ್ಪಿರುವಂತಿಯು ನೀಳ್ಪುವೆತ್ತ ನನೆಯ ತುಱುಂಗಲುಮುಂ ; ಕುಸುಮಾಯುಧನ ಕೆಯ್ಯ ಚೆನ್ನ ಪೊನ್ನಲಗಿನಂತೆ ಕಂಗೊಳಿಪ ಕನಕಕೇತಕೀಕುಸುಮದೆಸಱ ಪಸರಂಗಳುಮುಂ ; ರತಿರಮಣಿಯಧರಮಣಿಯಂತೆ ರಮಣೀಯಮಾದ ಬಂದುಗೆಯ ಬಲ್ಮುಗುಳ್ಗಳುಮುಂ ; ವಿರಹಿಗಳ ಬಾಯಂ ಬಿರಿಯಿಸುತುಂ ಬಿರಿವ ಸುರಗಿಯ ಬಿರಿಮುಗುಳ್ಗಳುಮುಂ ; ವಸಂತಸಂಗದಿಂ ವನಲಕ್ಷ್ಮಿಗೊಗೆದ ಪುಲಕಾಂಕುರಾವಳಿಯೆನಿಸಿದ ಚೂತಕಲಿಕಾವಲಿಗಳುಮುಂ ; ಪಲ್ಲವಿಕರ ಹೃದಯೋತ್ಸವರಾಗಮುಂ ಪಲ್ಲವಿಪ ಕಂಕೆಲ್ಲೀಪಲ್ಲವಂಗಳುಮುಂ ; ಕಾಮನ ಕಾರಲಗೆ ಕೂರಲಗುಗಳಾದುವೆನಿಪ ತಮಾಲದ ತಳಿರ ತೆಕ್ಕೆಗಳುಮುಂ ತೆಗೆ ತೆಗೆದು ಬೀಱುವೀಱುತ ಪೆಸಗೊಂಡ ವಸಂತಸಮಯಾಗಮನಮನಱಿಪುವಂತೆ ನೀಡಿ ಮುದಂಬೆತ್ತು ಮತ್ತಮಿಂತೆಂದಂ:—

ದೇವರ್ ನೇಮಿಸಿದಂದದಿ ;
ನಾವಗವುಂದೇವರಮಣವನಮಂ ಸಲೆ ಸಂ ॥
ಭಾವಿಸೆ ಪೊಱವುತ್ತಿರ್ದೆನ ;
ದೇವೇಱ್ದಿಪೆನಾವನಾತಿಶಯಸಂಪದಮುಂ ॥೧೩॥

ಅದು ದಲ್ ಪುಣ್ಯಜನಸಂಚಾರರಹಿತಂ ಪಂಚದ್ರುಮೋದಂಚಿತಂ।

ತ್ರಿದಿವಪ್ರಾಪ್ತಮನೋಹರಂ ತ್ರಿದಶರಿಂ ಮಿಕ್ಕಗೆ ಪಕ್ಕಾಗದೇ ॥
ವುದಣಂ ನಂದನವೆಂದು ದೇವರಮಣೋದ್ಯಾನಂ ದಿಟಂ ತಾನದೋ ।
ವದೆ ಧಿಕ್ಕಾರಿಪುದಿಂತು ಕೀರಕಲಕಂಠಧ್ವಾನಸಂತಾನದಿಂ ॥೧೪॥

ಪರಿವೃತವಿದ್ರುಮಂ ವನಧಿಯಂತೆ, ಸಮಾವೃತಕೇಸರಂ ಪ್ರಭಾ ।
ಸುರಮಿಭವೈರಿಯಂತೆ, ವಿಲಸತ್ತಿಲಕಂ ವನಿತಾಸ್ಯದಂತೆ, ಬಂ ॥
ಧುರುಕದಳೀಕಳಾಪಕಳಿತಂ ಬಲದಂತೆ, ಕಪಿತ್ಥತಾಳವಿ
ಸ್ತರವನಿತಂ ಲಸದ್ಭರತದಂತೆ ಪಿಕಾಳಿಶುಕಾವನಂ ವನಂ ॥೧೫॥

ಸುರಸದನದಂತೆ ಬಹಳಾ ।
ಪ್ಸರೋಮಯಂ ವಿಬುಧವಿನುತಮುಂದಾರಮಯಂ ॥
ಸುರುಚಿರಶಕ್ರಮಯಂ ಬಿ ।
ತ್ತರಿಪಿಂದ್ರಾಣೀಮಯಂ ದಲಾವನವೆಂದುಂ ॥೧೦॥

ವ॥ ಮತ್ತಮಾದೇವರಮಣೋದ್ಯಾನವನಂ ಕಂಠೀರವದಂತೆ ಕೀಸ
ರೋದ್ಭಾಸುರಮುಂ । ದಕ್ಷಿಣದಶೆಯಂತೆ ಕುಟಜವಿಭ್ರಾಜಿತಮುಂ । ಪ್ರಬಂ
ಧಾದಿಸೂಳುಕ್ರಮದಂತೆ ಬಹುತಾಳನಿಹಿತಮುಂ । ವಾಣೀಪಾಣಿಪಲ್ಲವದಂ
ತಕ್ಷಮಾಲಾಮನೋಹರಮುಂ । ಪಾಂಡವವರೂಥಿನಿಯಂತರ್ಜುನೋರ್ಜಿ
ತಮುಂ । ಪಿಶಾಚಪ್ರಚಯದಂತೆ ಪಲಾಶಭಾಸುರಮುಂ । ರತಿರಮಣ
ಯಂತೆ ಮದನೋಪಯುಕ್ತಮುಂ । ಜಂಭಾರಿನಿಲಯದಂತೆ ರಂಭಾಸಮ
ನ್ವಿತಮುಂ । ವಾರವೃಂದದಂತೆ ಮಂದಾರಬಂಧುರಮುಂ । ಮತ್ತಮದು
ಪರಿಯುಕ್ತಹರಿಯಪ್ಪುದಱಿಂ ವನಮಾಲಾವಿಭೂಷಿತಮುಂ ಸುಪರ್ಣೋ
ಪೇತಮುಂ । ಪ್ರಸನ್ನಪುಷ್ಕರಮಪ್ಪುದಱಿಂ ವಿಶಾಖಾಸಮನ್ವಿತಮುಂ
ವಿಜಿತ್ರಮೃಗಕುಜವಿರಾಜಿತಮುಂ । ವಿಭ್ರಾಜಿತಬಾಭ್ರವಪ್ಪುದಱಿಂ ಪದ್ಮಾ
ವಸೋದ್ಭಾಸುರಮುಂ ಸುರುಚಿರಚಕ್ರಸೌಂದರಮುಂ । ಕುಶಾಕರಮಪ್ಪು
ದಱಿಂ ಶಿಖಿಸಮೇತಮುಂ ಸುಪ್ರವಾಳಪರಿಚೇತಮುಂ । ವಿಲಸತ್ಕುಲೀನ
ವಪ್ಪುದಱಿಂ ವರವಂಶಭೂರಾಮವಂ ಪಶ್ರುತೋದ್ದಾಮಮುಂ, ಸಾಶ್ಚರ್ಯ
ಶೋಭಾರಸಾವನಮಪ್ಪುದಱಿಂ ಶುಕಸೇವ್ಯವಿಭವಮುಂ ಸಮುತ್ಪಾಲಿತ
ಭೂಪಣಮಾಗಿರ್ದುದು. ಅಂತುಮಲ್ಲದೆಯುಂ:-

ಕಲಿತಪ್ರೋಲ್ಲಲಿತಪ್ರವಾಳದೆ ವಿಪಂಜೇವಾದ್ಯಮುಂ ಭಾಸುರೋ ।
ತ್ಕಲಿಕಾಕೀರ್ಣತೆಯಿಂ ವಿಯೋಗಿಯನುರುಚ್ಚಾ ಯಾಯತಶ್ಯಾಮದಿಂ ॥
ಸಲೆ ವೈವಸ್ವತನಂ ಸಮಗ್ರಸುಮನಸ್ಸಂಶೋಭೆಯಿಂ ಶಕ್ರನಂ ।
ಗೆಲಿವಂದಿಪ್ಪುದದಲ್ತೆ ದೇವರಮಣೋದ್ಯಾನಂ ಧರಾಧೀಶ್ವರಾ ॥೨೧॥

ರತಿರಾಗೋದ್ಭವಭೂಮಿ ಕಂತುನೃಪಕೇಳೀಮಂದಿರಂ ಮಂದಮೂ ।
ರುತಸಂಚಾರಗೃಹಂ ವಸಂತಸದನಂ ಭೃಂಗಾಳಿಗೇಯಂ ಸುಸ್ಥ ॥
ಗತಸದ್ಮಂ ಶುಕಚಾಟುಪಾಠಸಿಲಯುಂ ಮಾದ್ಯತ್ಪಿಕಧ್ವಾನಮೂ ।
ನಿತಗೇಹಂ ಮದನಾಸ್ತ್ರಶಸ್ತ್ರಚಯಚಂಚತ್ಸ್ಯಂದನಂ ನಂದನಂ ॥೨೨॥

ವಿಲಸನ್ಮತ್ತಮರಾಳಜಾಳಕಲಕೇಳೀಯಾನಲೀಲೋದಯ ।
ಸ್ಥಲಮುದ್ದಂಡಶಿಖಂಡಿಮಂಡಲಮಹೋದ್ಯತ್ತಾಂಡವಾಡಂಬರಾ ॥
ತುಲಜನ್ಮಸ್ಥಲಿ ಕಿನ್ನರೋತ್ಕರಮಿಳನ್ಮಾಧುರ್ಯಗೇಯೋಲ್ಲಸ ।
ನ್ನಿಲಯಂ ತಾನೆನಿಸಿರ್ಪ್ಪ ನಮ್ಮವು ವನಂ ವಜ್ರಾಯುಧೋರ್ವೀವರಾ ॥

ವ। ಅಂತುಮಲ್ಲದೆಯುಂ:—

ಕಳಕಂಠಾಭೀಳಭೇರೀನಿನದವೊದವೆ ಕೀರಾಳ ಪೂಣ್ದಿಂಕಮೂಲಾ ।
ವಳಿಯುಂ ಮುಂತೊರೆದುತಾದಂ ಬರೆ ಕಿಸಲಯಶಾಖಾಸಮುತ್ಕೀತುದಂಡಂ ॥
ಮಿಳಿರಲ್ ಮೇಲಾದ ಚೈತೊನ್ನತರಥಮನವಂ ರಾಗದಿಂದೇಱಿ ಭೃಂಗೀ।
ಲುಳಿತಜ್ಯಾವಲ್ಲಿಯಿಂ ಜೇವೊಡೆದಲರ್ಗಣೆಯಂ ತೂಗುತುಂ ಕಂತು ಬಂದಂ॥

ಕಳಕೀರೋತ್ಕೋಕಿಲಾನಿಕ್ವಣನಕುಹರಣಂ ಪೊಣ್ಮೆ ಭೃಂಗೋಲ್ಲಸತ್ಕುಂ ।
ತಳಜಾಳಂ ಸೂಸೆ ನವ್ಯಾಂಕುರಪುಳಕಚಯಂ ಪುಟ್ಟೆ ಚಂಚತ್ಪ್ರವಾಳೋ॥
ಜ್ವಳರಾಗಂ ಪೆರ್ಚೆ ಪುಷ್ಪೋದ್ಭವಮಧುಮದನಾಂಬುಪ್ಲವಂ ಪಾಯೆ ಚೆಲ್ವ।
ಪ್ಪಲರ್ಗಣ್ ಬೆಂಡೇಱಿ ತಾಂ ಕೂಡಿದನೊಸೆದು ವನಶ್ರೀಯೊಳಂತಾವಸಂತಂ॥

ಪಿಕದೂತಂ ತದ್ವಸಂತಾಗಮಮನಱಪಿಯುಂ ಮಾಧವೀಕುಟ್ಮಲವ್ರಾ ।
ತಕನದ್ಗೃವೇಂಟಕಂ ರಾಜಿಸೆ ಕಿಸಲಯಸಂವ್ಯಾನಮೀಬಾಗೆ ಚೂತ ॥
ಪ್ರಕರೋತ್ಫುಲ್ಲೋತ್ಪಲೀಯಂ ಮಿಸುಗೆ ನವಪರಾಗಾಂಗರಾಗಂ ಪೊದಳ್ತಿರ್ದ
ಪ್ಪೆ ಕರಂ ಕೈಗೆಯ್ದುಳೀಗಳ್ ವಸವನಿತೆ ವಿನೂತಾತುಳಪ್ರೀತಿಯಿಂದಂ ॥

ವಿಲುಲಿತಸಲ್ಲತಾಂಗಿ ಪುಳಿನಸ್ಥಳಪೀನನಿತಂಬೆ...ಶಿಖಾ ।
ಸುಲಲಿತಯಾನೆ ಚಾರುಕಲಕಂಠಸಿನಾದೆ ಪಯೋಜವಕ್ತ್ರಮಂ ॥

ಡಲೆ ಪುಲಯೂನಿಲಶ್ವಸಿತೆ ಕೋಕಕುಚದ್ವಯೆ ಮತ್ತಭೃಂಗಕುಂ ।
ತಲೆ ಕುಸುಮಾಂಶುಕೋಲ್ಲಲಿತೆ ನಂದನಲಕ್ಷ್ಮಿಕರಂ ವಿರಾಜಿಪಳ್ ॥

ಮಲಯಕ್ಷ್ಮಾಭೃಲ್ಲಸಚ್ಚಂದನವೃತ ಫಣಿಪೀತಾವಶೇಷಾನಿಳಂ ಕೇ ।
ರಳಕಾಂತಾಸ್ಯಾರವಿಂದಶ್ವಸಿತಪವನನಾವಾವನೇಭೋಗ್ರಹಸ್ತ್ರಾ ॥
ತುಳಭೂತ್ಕಾರೋದ್ಭವಾಂಭಃಕಣವೃತಮರುತಂ ತಾನೆನಲ್ ಮೂಡ್ಗುಸಾರ ।
ಭ್ಯಳಸಚ್ಛೈತ್ಯಂ ಪೊದಟ್ಟಿದಂತೆಸಗಿತೆಸೆದವಾಜೇಪ್ರಚಾರಂ ಸಮಿಹಾರಂ ॥

ಅನುನಯದಿಂ ಪೊದಟ್ಟಿಸೆವ ಬಂದ ವಸಂತನೃಪಾಲಕಂಗೆ ಭೋಂ ।
ಕೆನೆ ವನಲಕ್ಷ್ಮಿಲೀಲೆಯೊಳ ಸೇಸೆಯನಿಕ್ಕಲೊತರ್ಜೆ ಶಾಖಿಪೆಂ ॥
ಬನುಪಮಹಸ್ತದೊಳ್ ತಳಿವ ಕೋಮಲಶುಕ್ತಿರುಹಾಕ್ಷತಂಗಳಿಂ ।
ದೆನಲದಿರ್ಮುತ್ತೆ* ಸಂದಿಸಿ ಮುಗುಳ್ತು ಮನೋಹರಮಾಯ್ತುದೆತ್ತಲುಂ ॥

ಸೆಳೆಗೊಂಬೆಂಬ ಪತಾಕೆಯಂ ನೆಗಪಿ ಚಂಚತ್ಪಲ್ಲವೋದ್ಯತ್ಪಟಾಂ ।
ಚಲಮಂ ನಾಡೆ ನಿಮಿರ್ದ ನವ್ಯಕುಸುಮಾಸ್ತ್ರನೀಕಮಂ ತೀವಿ ಕೋ ॥
ಕಿಳಕೀರಾನಕನಾದಮುಣ್ಮತಿರೆ ಚೈತ್ರಂ ಪಣ್ಣಿ ತಂದಿರ್ಪಿಂ ।
ಗೆಳೆಯೊಳ್ ಸಾರ್ದ್ದ ಸದ್ವರೂಥಮೆನೆ ಚೆಲ್ವಾದತ್ತು ಚೂತೋತ್ಕರಂ ॥

ಪುದಿದರುಣಾಂಶುಕಂ ಕಿಸುದಳಿರ್ ಮಿಸುಪೊಳ್ಪಲರಕ್ಷತಂಗಳು ।
ನ್ಮೆದ ಕುಸುವೋಲ್ಲಸನ್ಮಧುಘೃತಾಹುತಿ ಭೃಂಗರವಾಳಿಮಂತ್ರಮಿಂ ॥
ತೊದವಿರೆಯುಂ ವಿಯೋಗಿಜನವಾರಣಯಜ್ಞಮನೊಲ್ದೊಡರ್ಜಿದಾ ।
ಮದನನ ವಿಪ್ರನಂತೆಸೆದುದಿಂತು ಬಸಂತದೆ ಬಂದ ಮಾಮರಂ ॥೩೧॥

ಕ್ಷಣದೊಳೆ ವಿರಹಿಗಳ ಮನ ।
ಸ್ತೃಣಕುಟಿಯಂ ನೊಣೆಯಲೊಗೆದುದಾಸುಮನೋಮಾ ।
ರ್ಗಣದಾವಪಾವಕಶಿಖಾ ।
ಗಣಮೆನೆ ಕಿಸಲಯದಿನಸುಗೆಯಸದಳಮೆಸೆಗುಂ ॥೩೨॥

ಅಂಗಜನೃಪಾಲಕನ ಬರ ।
ವಿಂಗೆಸಸುಂ ನಲಿದು ಚೈತ್ರನೆತ್ತಿದ ಪಲವುಂ ॥
ಪೊಂಗೊಡೆಗಳನಿಸಿ ಪೂತು ಮ ।
ನಂಗೊಳಿಸಿದುವೆಸೆವ ಕರ್ಣಿಕಾರಕುಜಂಗಳ್ ॥೩೩॥

ಅನುನಯದಿಂದೊಂದೆ ವಸಂ ।
ತನ ಸಂಗದ ಸುಖದಿನೊಗೆದ ಪುಳಕಾವಳಿಯಿಂ ॥
ದೆನಿ ಕುಸುಮಕುಟ್ಮಲಂಗಳ ।
ನೆನಸುಂ ತಳದೆಸೆದುವಲ್ತೆ ಲತೆಗಳ ಒಳಗಂ ॥೪೪॥

ಲಲನೆಯರಿಂದೊದೆವಡೆದಾ ।
ನಲವಂ ತಳೆದಸುಕೆ ಮಿಸುಪ ತಳಿರಂ ಬೞಿಕಂ ॥
ತಲೆಯೊಳ್ ತಳೆದುದೆನುತ್ತುಂ ।
ಸಲೆ ನಗುವಂತಲರ್ದುವೆಸೆವ ಪೊಸಮಲ್ಲಿಗೆಗಳ್ ॥೪೫॥

ವರಕಲಿಕಾರಸಪ್ರಕರಸೇವೆಯ ಸನ್ಮದದಿಂ ಪಿಕಾಳಿಗಿಂ ।
ಚರವೆಡೆಗೊಂಡುದೊಳ್ಳರಲ ಕಂಪುಣಿಸಿಂದಳಿಗಳ್ಗೆ ಝುಂಕೃತಿ ॥
ಸ್ಫರದೊದವಾಯ್ತು ತತ್ಫಲಸವಾಹದ ಖಾದನದಿಂ ಶುಕಾಳಿಗ ।
ಳ್ಗುರುತರಚಾಪಲೋಕ್ತಿ ನೆಱಿ ಬಿತ್ತರಿಸಿತ್ತೆನಸುಂ ಬಸಂತದೊಳ್ ॥೪೬॥

ನೀರಜಮೆನಿಸಿರ್ದುಂ ಸಲೆ ।
ನೀರಜನಸಮುದಯಂ ರಜೋಮಯನಾಯ್ತಾ ॥
ನೀರಜಗರ್ಭನ ಚೇತೋ ।
ನೀರಜದಿಂ ತಿಳಿ.....ವಸಂತದ ಪದೆಪಿಂ ॥ ॥೪೭॥

ರಾಗಮಸೀವ ನುಣ್ಮುಡಿಗಳಿಂದೆನಸುಂ ವನಪಾಲಕಂ ವಸಂ ।
ತಾಗಮಮಂ ಸಮಂತು ನೆಱಿ ಬಿನ್ನವಿಸುತ್ತಿರೆ ವಶ್ಯಜಿತ್ತನಿಂ ॥
ತಾಗಳಿನಿನ್ನೆಗಂ ನೆಱಿಯೆ ಕೇಳುತುಮಿರ್ಪುದುವೋಲಗಕ್ಕೆ ಹಂ ।
ಸೀಗತಿ ಬಂದಳಗ್ಗದ ಸುದರ್ಶನೆಯೆಂಬಳತೀವಹರ್ಷದಿಂ ॥೪೮॥

ಶರನಿಧಿಯುಂ ಸುಧಾಂಶುಕಳೆ ತಾಂ ಪುಗುತರ್ಪವೊಲಾಗಳಾಮಹೀ ।
ವರಸಭೆಯುಂ ಸುದರ್ಶನೆ ಸುರೂಪವಿಲಾಸದೆ ಮೋಹಿಸುತ್ತು ಮ ॥
ಚ್ಚರಿ ನೆಲೆವೆರ್ಚೆ ತನ್ನೃಪತಿ ನಾಡೆಯುಮೀಕ್ಷಿಸುತಿರ್ಪ ಕಣ್ಗೆ ಕ ।
ಪ್ಪುರದ ಶಲಾಕೆಯಂತೆ ಪುಗುತಂದಳನಂಗಲತಾಂಗಭಂಗಿಯಿಂ ॥೪೯॥

ಫಲಭರದಿಂದೆಱಗುವ ಕ ।
ಲ್ಪಲತಾಕೃತಿಯಂತೆ ಕುಚಭರಂ ಬಳ್ಕಿಸೆ ಕೋ ॥

ಮುಲತಸುಲತಿಕೆಯನಾಕೋ ।
ಮುಲೆ ವಜ್ರಾಯುಧನೃಪಂಗೆ ವಿನಮಿತೆಯಾದಳ್ ॥ ॥೪೦॥

ವ॥ ಇಂತು ವಿನಮಿತೆಯಾಗಿ ಸುವರ್ಚನೆ-ದೇವ ದೇವಿಯರ್ ವನ
ಕೇಳಿವಾರಿಕೇಳಿವಾಂಛೆಯಾಯ್ತೆಂದು ನಿಮ್ಮಡಿಗೆ ಬಿನ್ನವಿಸಲೆಂದೆನ್ನಟ್ಟಿದ
ರೆನೆ ಕೇಳ್ದು ವಜ್ರಾಯುಧನರೇಂದ್ರಂ ತನ್ನ ಮನದೊಳ್ ನೆನೆದಂತೆ ಸಮ
ನಿಸಿತ್ತೆಂದು ಮುದಮನಪ್ಪುಕೆಯ್ದಾಗಳ್:--

ಪದೆಪಿನೊಳೀಗಳಂತು ಸಮೆ ನೀಂ ವನಕೇಳಿಗೆ ವಾರಿಕೇಳಿಗಾ ।
ವುದು ರಚನಾದಿಜೆತ್ರತರಮಾವುದು ತತ್ಸಮಯೋಪಯೋಗ್ಯಮಾ ॥
ವುದು ವರಶೋಭೆಯಪ್ಪ ತೆಱದಿಂದೆನುತುಂ ವನಪಾಲಕಂಗೆ ಬೇ ।
ಗದೆ ಬೆಸವೇೞ್ದು ತಾಂ ಕಳುಪಿದಂ ವನಕಾಕ್ಷಣದಿಂ ಕ್ಷಿತೀಶ್ವರಂ ॥೪೧॥

ಮನದೊಳ್ ಮುನ್ನೆನಸುಂ ಪೊದಱಿಕ್ಕಿದ ಪಪೋರ್ತ್ಕರ್ಷಮುರ್ವೀ
[ೞಿತಿ ನೂ ।
ತನ ಭೂಪಾಕುಲಜಾತಝುಂಕೃತಿರವಂ ತಱ್ತಿಱಿತಿ ತನ್ನೊಳಮಂ ॥
ಡನಮಾಲ್ಯಾಳಿಕುಳಂ ಝಣತ್ಕರಿಸುತುಂ ಮೇಲೇೞಿತಿ ಕರ್ಪೂರಪಾಂ ।
ಶುನಿಕಾಯಂ ಕೆದಱಿೞಿತಿ ವಿಪ್ಪರದಿನಿಂತೆೞ್ದಂ ಧರಾಧೀಶ್ವರಂ ॥೪೨॥

ಬೞಿಯೊಳ್ ತಾನೆೞ್ದುದಾನಂದದಿನಖಿಳಮಹೀಪಾಲಜಾಳಂ ಚಳತ್ಕುಂ।
ಡಳಭಾಭಾಸ್ವತ್ಕಪೋಳಂ ಭುಜನಲಯಝಣತ್ಕಾರಮಾಳಂ ಪ್ರಕಂಪಾಂ ॥
ಚಳ ಚಂಚಚ್ಚೊಳಚೇಳಂ ನಖರುಚಿರಚಿತೈಳಂ ಕಿರೀಟಪ್ರಭಾಸ ।
ವ್ಯಾಳಿತಾಶಾಚಕ್ರವಾಳಂ ಪರಿವೃತಸುಭಟೋತ್ಕೃಷ್ಟತಖಡ್ಗಾಂಶುಜಾಳಂ ॥

ವಿಳದುದ್ಯನ್ಮೌಳಿಳಾಕೆಂಕಿಣಿರಣಿತನಿತಂಬಂ ಝಣತ್ಕಾರಜಾಳಂ ।
ಕುಳಮಂಜೀರಾವಳಂಬಂ ಕುಚಭರಚಳಸಂವ್ಯಾನಶೋಭಾವಿಡಂಬಂ ॥
ಚಳಮದ್ವೇಣೀವಿತಾನೋಪರಿಮೃದುರುತಿರೋಲಂಬಮಬ್ಜಾಸ್ಯಬಿಂಬಂ ।
ವಿಳಸತ್ಕಾಂತಾಕದಂಬಂ ಬೆರಸು ತಳರ್ದ್ದಾನಾಸ್ಥಾನದಿಂದಾನರೇಂದ್ರಂ ॥

ಪರಿಚಾರಕಿವೆರಸರಸಂ ।
ಪರಿಮಿತಪರಿಜನಪರೀತನಾಗಳ್ ನಿಜಸುಂ ॥
ದರಿ ಲಕ್ಷ್ಮೀಮತಿದೇವಿಯ
ಸುರುಚಿರಸದನಕ್ಕೆ ಪದೆಟನಿಂ ನಡೆತಂದಂ ॥೪೩॥

ವ॥ ತತ್ಸಮಯದೊಳ್ ಲಕ್ಷ್ಮೀಮತಿಮಹಾದೇವಿ ಸಕಲಾಂತಃಪ್ರರ ಪುರಂಧ್ರೀಪರಿವೃತೆಯುಂ, ಸಮಸ್ತಕಲಾಪರಿಣತವಾರವಿಳಾಸಿನೀಪರಿವೃತೆಯುಮಾಗಿರ್ದು--

ಜನನಾಥಂ ಬರುತಿರೆ ತೊ ।
ಟ್ಟನೆ ಕಟ್ಟದಿರಲ್ಲಿ ಕಾಣ್ಬುದುಂ ತತ್ಕ್ಷಣದೊಳ್ ॥
ಜನಿಯಿಸಿದುದು ಲಕ್ಷ್ಮೀಮತಿ ।
ಗನೂನಮೆನೆ ಸಾತ್ವಿಕಾಪ್ಯಚೇಷ್ಟೆಗಳನಿತುಂ ॥೪೬॥

ನೀವಿಯನೆಡಗೆಯ್ಯಿಂದಂ ।
ಸಾವಗಿಸುತ್ತಮಲಸಾಧ್ವಸಂಬೆರಸೆಲ್ಲಾ ॥
ದೇವಿಯನಿರಿಮಿರಿವೆನುತುಂ ।
ಭೂವರನೆಯ್ತಂದು ಪೊರ್ದಿ ತಾಂ ಕುಳ್ಳರ್ದಂ ॥೪೭॥

ಪಡೆದನಪೂರ್ವಮಾಗಿ ಕುಡುಮಿಂಚಿನ ಪುತ್ರಿಕೆಯಂ ಪಯೋಜಜಂ ।
ಗಡಮೆನಿಸಿರ್ದ ತತ್ಸತಿಯ ಮೆಯ್ವೆಳಗುಜ್ಜ್ವಲಪುಪ್ಪ ಮುತ್ತಿನೊ ॥
ಳ್ಕೊಡವು ದುಕೂಲಚೇಲಮಮಳದ್ವಿಜದೀಧಿತಿ ನೀಳ್ದ ರಾಗಮುಂ ।
ಕುಡಿಯಿಡುತಿರ್ದುದಚ್ಚರಿ ಕುಳೃಚ್ಚಯನಾಥನ ಚಿತ್ತವೃತ್ತಿಯೊಳ್ ॥೪೮॥

ಪ್ರಿಯಸತಿ ಲಕ್ಷ್ಮೀಮತಿ ದೇ ।
ವಿಯ ರೂಪಾಶ್ಚರ್ಯಲಕ್ಷ್ಮಿಗವನೀಪತಿ ಕಾ ॥
ಶ್ಯೆಯನೀವಂತಿರೆ ತಾಮನು ।
ನಯದಿಂ ಕೊಟ್ಟಂ ತದಾಮ್ರಫಲಮಂಜರಿಯಂ ॥೪೯॥

ವಿನಯನಿಧಿ ಲಕ್ಷ್ಮೀಮತಿಕ್ಷ್ಮಾ ।
ಮಿನಿ ಭೋಂಕೆನೆ ಕೆಯ್ಯನೊಡ್ಡಿ ತಳೆದಳ್ ಚೇತೋ ॥
ಜನಿತಾಭಿಮತದ ಫಲಮಾ ।
ಯ್ತೆನೆ ಮಿಗೆ ಸೊಗಯಿಸುವ ಚೂತಫಲಮಂಜರಿಯಂ ॥೫೦॥

ಕರತಲಕಾಂತಿಯಿಂದರುಣಮಾಗಿರೆ ಭೋಂಕೆನೆ ತಾಂ ನಿರೀಕ್ಷಿಸು ।
ತ್ತಿರೆ ನಯನಾಂಶುವಿಂ ಧವಳಮಾಗಿರೆ ನೆಟ್ಟನೆ ನೀಳ್ದ ನಿಟ್ಟಸು ॥

ತ್ತಿರೆ ಹರಿನೀಳದಂತಿರೆ ನವಾಮ್ರಫಲಸ್ತಬಕಕ್ಕೆ ದೇವಿಯ ।
ಚ್ಛರಿವಡುತಿರ್ಪ ಮುಗ್ಧತೆ ಮುಗುಳ್ನಗೆಯಂ ಪಡೆದತ್ತ ಧೀಶನೊಳ್ ॥೫೧॥

ವ॥ ಆದೇವಿಯ ಮುಗ್ಧಭಾವಕ್ಕೆ ಭೂವರಂ ಮುಗುಳ್ನಗೆನಗುತ್ತುಂ ಮತ್ತಮಿಂತೆಂದಂ:—

ವನಪಾಲಕ ನಮಗೀಮಾ ।
ವಿನ ಫಲಮಂ ಕಾಣ್ಕೆಗೊಟ್ಟು ಬಿನ್ನವಿಸಿದನಿಂ ॥
ತನುನಯದೆ ದೇವರಮಣನ ।
ವನರಮೆಗೆ ವಸಂತಸಂಗಮಾಯ್ತೆಂದು ಸಖೀ ॥೫೨॥

ಎಸೆವೀಕೇಸಡಿಗಳ ವಿ ।
ನ್ಯಸನದಿನೆಲೆ ದೇವಿ ನಮ್ಮ ವನರಮಿ ಪಡೆದಾ ॥
ವಸುಮತಿಗೆ ರಾಗಮಂ ಪು ।
ಟ್ಟಿಸಿ ಪುಟ್ಟಿಸು ಮನ್ಮನಕ್ಕೆ ರಾಗೋದಯಮಂ ॥೫೩॥

ವೀಚಿಲೆ ಲಸಲ್ಲತಾಂಗಿ ವರಚಂದನಗಂಧಿ ಸರೋಜವಕ್ತ್ರೆ ನಿ
ರ್ಮಳನವಪಲ್ಲವಾಧರೆ ರಥಾಂಗಪಯೋಧರೆ ಹಂಸಯಾನೆ ಕೋ ॥
ಕಿಳಕಳನಾದೆ ಚೂತಕಳಿಕಾನಖಿ ನೀಂ ನಡೆತಂದು ನೋಟ್ಪುದಿಂ
ತೊಲವಿನೊಳಾವನಪ್ರಮದೆ ನಿನ್ನನೆ ಪೋಲ್ವಳೆ ಪೋಲಳೆಂಬುದಂ ॥೫೪॥

ಎಲೆ ನಿನ್ನಯ ವದನೋಜ್ಜ್ವಲ ।
ಜಲರುಹದಿಂ ಜನಿತಮಪ್ಪ ನವನಿಶ್ವಸಿತಾ ।
ನಿಲನಿಂ ಮಲಯಾನಿಲನಂ
ಸಲೆ ಕಂಪೇಱಿಸು ಬನಕ್ಕೆ ಬಂದೊಲವಿಂದಂ ॥೫೫॥

ವನಕೇಳಿಗೆ ಬಂದಾಬನ ।
ಮನದಂ ನಡೆನೋಟ್ಪ ನೆವದೆ ನೀನೆಲೆ ಮೃಗಲೋ ॥
ಚನೆ ನಿನ್ನಯ ಮಧುರಾಲೋ ।
ಕನಮಂ ಮೃಗಶಾಬತತಿಗೆ ಕಲಿಸೊಲವಿಂದಂ ॥೫೬॥

ಮಾನಿನಿ ನಿನ್ನಯ ಲೀಲಾ ।
ಯಾನವಿಲಾಸಮನೆ ದೇವರಮಣವನದ ಹಂ ॥
ಸೀನಿಕರಕ್ಕಾಪದೇಶಿಸು ।
ನೀನೊಲವಿಂ ಪಶೆಯದಿಂತು ಬಂದಿಂದುಮುಖೀ ॥೫೭

ಪ್ರೀಯದೆ ಒಂದು ನಿನ್ನ ಮನಮೊಲ್ದಲರೋಳಗಳಂ ವಿಚಿತ್ರಶೋ ।
ಭಾಯುತ ಭೂಷಣಪ್ರಸರಮಂ ಸಮೆದೀಭವದೀಯಸೌಕುಮಾ ॥
ರ್ಯಾಯತಗಾತ್ರಮಂ ಪದೆಪಿನಿಂದಮಲಂಕೃತಿಗೆಯ್ದು ತದ್ವನ ।
ಶ್ರೀಯ ವಿಲಾಸಮಂ ಸಫಲಮಾಗಿಸು ನೀಂ ಕಲಹಂಸಗಾಮಿನೀ ॥೪೪॥

ಸರಸಮೆನಿಪ್ಪ ತನ್ನಯ ನಯೋಚಿತವಾಗ್ನಿಚಯಂಗಳಿಂ ನಿಜೇ ।
ಶ್ವರಿಯ ಮನೋಭಿವಾಂಛೆಯನೆ ತಾನಱಿದಾಕ್ಷಣದಿಂದೆ ತತ್ಕ್ರಿಯಾ ॥
ತುರತೆಯಿನಪ್ಪುಕೆಯ್ದು ಪೊಱಮಟ್ಟನುರಾಗದಿನಾನರೇಶ್ವರಂ ।
ತ್ವರಿತದೆ ಪೊಯ್ಸದಂ ವನವಿಹಾರನಿಮಿತ್ತದ ಹೃದ್ಯವಾದ್ಯಮಂ ॥೪೫॥

ಆವನಕೇಳೀಯೋಗ್ಯಜ ।
ನಾವಳಿಯಿಂ ಬೆರಸು ನೃಪತಿ ಪೊಱಮಟ್ಟಂ ವಸಾ ॥
ದೇವಿಯುಶ್ರೀ ನೆನೆಯಿಸುತುಂ ।
ಪಾವನನಂದನಕೆ ನಡೆವ ಸಂಕ್ರಂದನನಂ ॥ ॥೬೦॥

ಸಾಂದ್ರಮೆನಲ್ಕೆ ಸಂಕುವಿಡೆ ತದ್ರಜೆ ರಾಜಿಸೆ ವ್ಯಕ್ತಿಕಾವಳೀ ।
ರುಂದ್ರವರತ್ರೆ ಬಿತ್ತರಿಸೆ ಜಕಿಂಚಿಯಿನಂಜಿತಮಾಗೆ ಪಟ್ಟದಂ ॥
ತೀಂದ್ರನುಮಿಂತು ಪಣ್ಣಿ ಮಿಗೆ ಕಂಗೊಳಿಸುತ್ತಮೆ ಬಂದುದಾಶರ ।
ಚ್ಛಂದ್ರನ ಚಂದ್ರಿಕಾನಿವೃತಜಂಗಮನೀಳನಗೇಂದ್ರಮೆಂಬಿನಂ ॥೬೧॥

ಉಣ್ಮಿದುವಾನಕಧ್ವನಿ ದಿಶಾವಳಿಯಂ ನಿಮಿದೇರ್ದಜಿತ ಜೆತ್ತದೊಳ್ ।
ಪೊಣ್ಮಿದ ರಾಗವಲ್ಲಿ ಕುಡಿಯೇಱಿತ ಕಡಂಗಿ ಮುದಶ್ರವಾಕಣಂ ॥
ಕಣ್ಮಲರೊಳ್ ಪೊದಟ್ಟಿ ಪೊಳಪೇಱಿತ ಸತೀಯುತಮಾಗಿ ಲೀಲೆ ಕೈ ।
ಗಣ್ಮಲರಾಗಳೇಱಿದನಿಭೇಂದ್ರಮನಾಮನುಜೇಂದ್ರಚಂದ್ರಮಂ ॥೬೨॥

ಕೆಸುಸಂಜೆಮುಗಿಲ ಬಳಸಿಂ ।
ಮಿಸುಗುವ ನವಚಂದ್ರಲೇಖೆಯಂ ನೆನೆಯಿಸುತುಂ ॥
ನಿಶಿತೋಜ್ವಲವಜ್ರಾಂಕುಶ ।
ನೆಸೆದುದು ವಸುಧಾಧಿಪತಿಯ ಕರಪಲ್ಲವದೊಳ್ ॥೬೩॥

ಸೊಗಯಿಪ ವೃತ್ತಶೋಭೆ ತನಗೊಂದು ವಿನಂ ಮಳನಾಂಕವೃತ್ತಿ ನೆ ।
ಟ್ಟಗೆ ನಿಜನಸ್ತಸಂಪದಮಹೀಗ್ರಸನಾತ್ತ ಕಳೇವರಂ ಕೃಶಾ ॥

ಧಿಗತಕಳೌಘಮಾಗಿಯುಮಣಂ ಕಮಲಾಹಿತನೆಂದು ಚಂದ್ರನಂ ।
ನಗುವುದು ಭೂಪಶೇಖರನ ಬೆಳ್ಗೊಡೆ ಲಂಬನವಕ್ತ್ರೋಕ್ತಿ ಕಾಂಕುವಿಂ ॥೬೪॥

ಬಿರ್ದಿಡಿನಡುವಿನ ಚಮರಿಯ ।
ರಿರ್ದಿಡಿಗಳನೇಱಿ ಕೆಲಬರೆಸೆದರ್ ಕೆಲದೊಳ್ ॥
ನೇರ್ಪಡೆ ತಣ್ಗದಿರ್ದುಱುಗಲ್ ।
ಮಾರ್ಪಡಿಯೆನೆ ಪೊಳೆವ ಧವಳಚಮರರುಹಂಗಳ್ ॥೬೫॥

ಪಿಡಿದಿರೆ ತತ್ತಿ ಬೆಳ್ಗೊಡೆಗಳಿಂ ಗಗನಂ ಪರಿಪೂರ್ಣಚಂದ್ರರಿಂ ।
ದೆಡೆವಿಡದಂತೆ ಕಣ್ಗೊಳಿಸೆ ಕಣ್ಗಳ ಬೆಳ್ವೆಳಗುರ್ವಿ ಪರ್ವಿ ನೂ॥
ರ್ಮಡಿವಡೆದಚ್ಚ ಜೊನ್ನದೆಸಕಂಬಡೆಯುತ್ತಿರೆ ಪೆರ್ಮೆವೆತ್ತು ಪೆ ।
ರ್ವಿಡಿಗಳನೇಱಿ ಬಂದುದೊಲವಿಂದವರೋಧವಧೂಕದಂಬಕಂ ॥೬೬॥

ಮೃಡನ ಪೊಡರ್ಪನಿನ್ನುಡುಗಿಪೆಂ ನೆಹೆ ಪೆಣ್ಣನೆ ಮಾಡಿ ರೂಢಿಯಿಂ ।
ಪಡೆದಪೆನೆಂದು ಕಂತು ಪಡೆದಗ್ಗದ ಮೋಹನಶಕ್ತಿಸಂಕುಳಂ ॥
ಗಡಮೆನೆ ಚೆಲ್ಲಿನೇಱಿ ನಡೆ ನೋಲ್ಪರ ಕಣ್ಗಳನೆಯ್ದೆ ಮಂಚಲಂ ।
ಬಿಡಿವ ವಿಳಾಸಿನೀನಿವಹಮೇಱಿದುದಿಂತು ಕರೇಣುಜಾಳಮಂ ॥೬೭॥

ಕಡುಚೆಲ್ವತನಕ್ಕಡಕಿ ।
ಲ್ಗೊಡೆ ವಿಡಿದಂತಳಿಗಳೋಳಿ ಮುಡಿಯಲರ್ಗಂಪಿಂ ॥
ಗೆಡೆವಿಡದೆ ಮೇಲೆ ತುಱುಗಿರೆ ।
ಮಡದಿಯರೆಯ್ತಂದರೇಱಿ ಪಿಡಿಗಳನಾಗಳ್ ॥೬೮॥

ಧರಣೀಶರ ದಂಡಾಧೀ ।
ಶರ ಮಂಡಳಿಕರ ಸಮಸ್ತಸಚಿವರ ಸಾಮಂ ॥
ತರ ತಂಡವೇಱಿದುದು ಮದ ।
ಕರಿಹರಿವೆಸರ ವರೂಥಯೂಥಮನಾಗಳ್ ॥೬೯॥

ಗಗನಮನಾಂಕೆಗೊಂಡಪ್ಪುದು ಮಂಡಳವೆತ್ತ ನಿಮಿರ್ಕೆಯೆಂಬಿನಂ ।
ನೆಗಪಿದ ಮೇಘಡಂಬರದ ತಿಂತಿಣಿಯಿಂ ಬಹುವರ್ಣಶೋಭೆಯಿಂ ॥
ಸೊಗಯಿಸುತಿರ್ಪ ಸತ್ತಿಗೆಯ ಸಂದಣಿಯಿಂ ಮಸುಜೀಂದ್ರನಿಂತು ನೆ ।
ಟ್ಟಗೆ ನಡೆದಂ ವಿಳಾಸದೆ ವನಕ್ಕೆ ವನಂ ನಡೆಗೊಂಡ ಭಂಗಿಯಿಂ ॥೭೦॥

ಆತಪವಾರಣಾವಳಿಯ ತಟ್ಟಿ ನೆಲ್ಲ ಜಲದಾಳಿ ವಾರನಾ ।
ರೀತರಳೀಕ್ಷಣಪ್ರಭೆ ತಟಿತ್ಪ್ರಸರಂ ಬಹುರತ್ನಭೂಷಣ ॥
ವ್ರಾತಮರೀಜೆಮಾಲೆ ಸುರಚಾಪಕಳಾಪಮದಾಗೆ ಮೇಘಸಂ ।
ಘಾತದೆ ನಂದನಕ್ಕೆ ನಡೆವಿಂದ್ರನವೋಲ್ ಮನುಜೇಂದ್ರಚಂದ್ರಮಂ ॥೭೧॥

ಕತ್ತಲೆಯುಂ ಪೊದಳ್ದಿಸೆವ ಚಂದ್ರಿಕೆಯುಂ ಮಿಗೆ ಪೋರ್ವ ರೀತಿಯಿಂ
ದೆತ್ತಿಸಿದಾತಪತ್ರಕುಲದೊತ್ತರದುದ್ಧತಮಸ್ಸಮಾಜಮು ॥
ನ್ಮತ್ತಮರಾಳಯಾನೆಯರ ಲೋಲವಿಲೋಚನಕಾಂತಿಮಾಲೆ ಪೋ ।
ರುತ್ತಿರೆಯುಂ ಬನಕ್ಕೆ ನಡೆದಂ ಮನುಜೇಂದ್ರನಪೂರ್ವಶೋಭೆಯಿಂ ॥೭೨॥

ಶಂಬರಸೂದನಾಂಗನೆಯನೇಱಿಪ ವಾರವಿಳಾಸಿನೀಜನಾ ।
ಸ್ಯಾಂಬುಜಸಂಭವಶ್ವಸಿತ ಸೌರಭಕಂ ಗಜಗಂಡದಾನಧಾ ॥
ರಾಂಬುವ ಸೌರಭಕ್ಕೆಯೆನಸುಂ ಬಿಡದುನ್ಮದಭೃಂಗಮಾಳಿ ತಾ ।
ಱುಂ ಬೞಿಯುಂ ಬರುತ್ತಿರೆಯುಮಾಬನಮಂ ಮನುಜೇಂದ್ರನೆಯ್ದಿದಂ ॥

ಸುರವರ ಲೀಲೆವೆತ್ತು ನಡೆತಂದು ತದೀಯವನೋಪಕಂಠಬಂ ।
ಧುರಧರೆಯಲ್ಲಿ ಭೂವರಶಿಖಾಮಣಿ ನೆಟ್ಟನೆ ಪಟ್ಟವರ್ಧನ ॥
ದ್ವಿರದನಿಯಿಂದೆ ವಂದಿಱಿದು ತದ್ವನಕೇಳಿಗೆ ಯೋಗ್ಯಮಪ್ಪರಿಂ ।
ಪರಿವೃತನಾಗಿ ಭೂಂಕೆನೆ ವನಾಂತರಮಂ ಪುಗುತಂದನರ್ತಿಯಿಂ ॥೭೩॥

ಮುದದೊದವಿಂ ತದೀಯವನಲಕ್ಷ್ಮಿ ವಸಂತನೃಪಾಲಕಂಗೆ ತಾಂ ।
ಪದೆಪಿನೊಳಿಕ್ಕುತಿರ್ಪ ಕುಸುಮಸ್ತಬಕೋನ್ನತಚೂಮರಾಳಿಲೋ ॥
ಲದಿನೊಗೆತರ್ಪ ವಾಯುವೆನೆ ಕಂಪಿನ ಸೊಂಪೆನೆ ತಾಳ್ದಿನಾಡೆ ತೀ ।
ಡಿದುದಿದಿರ್ಗೊಂಬವೊಲ್ ವನಸಮೀರಣನಂಗಜರಾಜಕಾರಣಂ ॥೭೪॥

ವಿಲುಲಿತಪಲ್ಲವಾಗ್ರಕರಪಲ್ಲವದಿಂದಲರರ್ಘ್ಯಪಾದ್ಯಮಂ ।
ನಲವಿನೊಳಿತ್ತು ನಮ್ರ ಫಲಶಾಖೆಗಳಿಂ ಪೊಡೆವಟ್ಟು ಕೀರಕೋ ॥
ಕಿಲಕಲರಾವದಿಂ ವಿನಯಮಂ ನುಡಿದಾವಸುಧಾಧಿನಾಥನಂ ।
ಸಲೆ ವನಲಕ್ಷ್ಮಿ ಮನ್ನಿಸಿದಳೇನುಜೆತಾರ್ಥಕೃತಪ್ರವೀಣೆಯೋ ॥೭೫॥

ಸ್ಮರನಂ ಮಿಕ್ಕವಿಲಾಸದೊಂದೆಸಕದಿಂದಾಳಂ ಬರುತ್ತಿರ್ಪ ಭೂ ।
ವರವಜ್ರಾಯುಧನೊಪ್ಪುವಾಕೃತಿಯನಾಗಳ್ ಕಂಡು ತಾಂ ಮೆಚ್ಚಿ ಯ ॥

ಚ್ಛರಿವಟ್ಟಾವನಲಕ್ಷ್ಮಿ ನಾಡೆ ತಲೆದೂಗುತ್ತಿರ್ಪಳೆಂಬಂತೆ ಭಾ ।
ಸುರಮಾದತ್ತು ಮರುಚ್ಚಲತ್ಕಿಸಲಯವ್ಯಾಕೀರ್ಣಶಾಖಾಲಯಂ ॥೩೬॥
ಯಮನಂತವಿಭಿನ್ನಚ್ಛಾ ;
ಯಮಿಳಾಧರನಂತೆ ಸಲೆ ಸುಪರ್ಣಶ್ರೀಯು ॥
ಕ್ತಮನೋಹರಮಾಗಿರ್ಪುದು ।
ಕಮನೀಯಂಬೆತ್ತು ದೇವರಮಣೋದ್ಯಾನಂ ॥೩೭॥
ಪರಿಕಿಪೊಡಪಗತಭಾಸ್ಕರ ।
ಕರನಿಕರಂ ರಜನಿಯಂತೆ ಪರಿವೃತಶಿಶಿರಂ ॥
ಪಿರಿದುಂ ತಪಸ್ಯದಂತೆನೆ ।
ಕರಮೆಸೆದುದು ದೇವರಮಣವನಮಿಂತನಿಶಂ ॥೩೮॥

ವ। ಇಂತೆಸೆದು ತಣ್ಪಿನ ತಾಯ್ವನೆಯುಂ। ತಣ್ಣೆಲ್ಲೆಲ ತಾಣಮುಂ। ಕಂಪಿನ ಕಡಾರಮುಂ।ಪ್ರಳಿನದ ನಿಲಯಮುಂ।ಕೀರಂಗಳ ಜೀವಣಶಾಲೆಯುಂ ಕೇಕಿಗಳ ಕೌತುಕಶಾಲೆಯುಂ।ಪರಭೃತಂಗಳ ಪುಣ್ಯಾಗಾರಮುಂ । ಮಧು ಪಂಗಳ ಮಂದಿರಮುಂ । ಜಕ್ಕವಕ್ಕಿಗಳ ಜನ್ಮಾವಸಥಮುಂ। ಮುರಾಳಂಗಳ ಮಂಗಳಸದನಮುಂ। ನಿಖಿಳವಿಪ್ಕರಂಗಳ ನಿಕೇತನಮುಂ।ಸರಸಿಗಳ ಸುಕೃತಶರಣಮುಂ ವಸಂತನ ವಿಚಿತ್ರಸದ್ಮಮುಂ । ಮನಸಿಜನ ಮನೋಹರಭವನಮುಂ।ಮಲಯಾನಿಲನ ಮೋಹನಗೇಹಮುಂ।ಸಹಕಾರದ ಸಂದಣಿಯುಂ। ತೆಂಗಿನ ತಿಂತಿಣಿಯುಂ । ಕದಳಿಯ ಕಂಟಿಯುಂ । ದಾಡಿಮದೊತ್ತರಮುಂ। ಈಳೆಯಿಟ್ಟೆಡೆಯುಂ। ತಿಲಕದ ತೆರಳ್ಕೆಯುಂ ಅಸುಗೆಯ ಕುತ್ತುಱುಂ। ಕರ್ಮುಕದ ಸಮೃದ್ಧಿಯುಂ । ಫಣಿವಲ್ಲಿಯ ಪೇಳಿಗೆಯುಮೆನಿಸಿದ—ದೇವರಮಣೋದ್ಯಾನಮಂ ಸಾನಂದದಿಂ ವಜ್ರಾಯುಧಮಹಾರಾಜಂ ಪುಗುತ ಪೊಗಳ್—

ಬಲ್ಲಿಯೊಳ್ ಬರ್ಪಂಗನಾಲೋಚನರುಚಿ ಕಾಡಿಯಿಟ್ಟಾವನಾಂತ
ಸ್ಥಮಸ್ಸಂ।
ಕುಳಮಂ ಪೂಣ್ದಿಟ್ಟುತುಂ ಮುಂಬರಿದು ಪುಗೆ ತದೀಯಾಂಘ್ರಿಮಂಜೀರ
[ಜಾತಾ ॥
ತುಳಱುಂಕಾತಪ್ರಣಾದಂ ಬಲ್ವುಗೆ ವನಮಂ ಪೊಕ್ಕನಕ್ಲೃಣಸೌಖ್ಯಾ ।
ಕಳಿತಂ ವಜ್ರಾಯುಧೋರ್ವೀಪತಿ ನಿಜವನಿತಾವಕ್ತ್ರವೀಕ್ಷಾಕಟಾಕ್ಷಂ ॥

ತರುಪರ್ಣಚ್ಛಾಯೆಯಿಂದಂ ತನುಗಳಿರವದಿಂ ಕರ್ಣರಂಧ್ರಕ್ಕೆ ಪುಷ್ಪೋ
ತ್ಕರನವ್ಯಾಮೋದದಿಂ ನಾಸಿಕೆಗೆ ಫಲರಸಸ್ವಾದುವಿಂ ಜಿಹ್ವೆಗುದ್ಯಾ ॥
ಸುರಗುಚ್ಛಾಚ್ಛ ಪ್ರವಾಳಂಗಳ ಬಹುರುಚಿಯಿಂ ಕಣ್ಗಳಂಪಂ ಬನಂಬಿ ।
ತ್ತರದಿಂದೀಯಲ್ಕೆ ಪಂಚೇಂದ್ರಿಯ ಸುಖದೊದವಂ ತಾಳ್ದಿದಂ ತಾಂ
[ನೃಪೇಂದ್ರಂ ॥೪೦॥

ನಲವಿಂ ವಜ್ರಾಯುಧೋರ್ವೀಪತಿ ಬರೆ ವನಲಕ್ಷ್ಮೀವಧು ಪ್ರೇಮ
[ದಿಂದು ।
ಜ್ಜ್ವಲಮುಕ್ತಾಜಾಲದಿಂದಿಕ್ಕಿದ ಕಡೆಗಳೊ ತದ್ಭೂರುಹೋದಗ್ರಶಾಖಾ ॥
ಕುಲದಗ್ರಂ ಸೋಂಕೆ ಸೋರ್ದಂಬರವ ಭಗಣಸಂತಾನಮೆಂದೆನಲ್ ತೀಡು
[ವಾತಂ ;
ಬೆಲರಿಂದಲ್ಲೊಕ್ಕ ಪುಷ್ಪಾವಳಿ ವನಮಹಿಯೊಳ್ ರಯ್ಯಮಾದತ್ತದೆತ್ತಂ ॥

ಎನಸುಂ ವಜ್ರಾಯುಧಭೂ ।
ಪನ ಬರವಿಂಗಾವನೋರ್ವಿಗನುಪಮರಾಗಂ ॥
ಜನಿಯಿಸಿತೆನೆ ಕುಸುಮಪರಾ ।
ಗನಿಕಾಯದಿ ನೆಸೆದುವತುಲಪುಲಿನತಲಂಗಳ್ ॥೪೧॥

ವ। ಇಂತೆಸೆವ ದೇವರಮಣೋದ್ಯಾನಮಂ ಕಂಡು ವಜ್ರಾಯುಧ ನರೇಂದ್ರನೀವನಂ ಸಮುನ್ನತವಿಶಾಖವಮಾಗಿಯುಂ ಕ್ರಾಂಚಾರಿಯಲ್ತು ; ಸುಪರ್ಣಾತ್ತವಾಗಿಯುಂ ಮಧುವಿರೋಧಿಯಲ್ತು ; ಕಮನೀಯಕಾಲಕಂಠ ವಾಗಿಯುಂ ದಕ್ಷವೈರಿಯಲ್ತು ; ಸಮುನ್ನತ ಬಾಣಾಸನವಾಗಿಯುಂ ಶಿಖ ಮುಖಿಯಲ್ತು ; ಶೋಭಾಯೆವಾಸಸುಖವಾಗಿಯುಂ ದೃಷ್ಟದಿಗಂಬರತ್ವ ವಲ್ತು ; ಮಯೂರೋಪವಾಸಿತವಾಗಿಯುಂ ನಿರೀಕ್ಷಿತಪ್ರಭಾಕರೋರುರೂಪ ವಲ್ತು ; ವಿದ್ರುಮಲತಾಕಾರವಾಗಿಯುಂ ಸಂಪಾಸ್ತಕಪಿಸಂಗವಲ್ತು ; ಪ ರಿಯುಕ್ತಾಗಣ್ಯಪುಣ್ಯಜನವಾಗಿಯುಂ ತ್ಯಕ್ತಸುಮಸಸ್ಸಪಾಹವಲ್ತೆಂದು ಮೆಚ್ಚುತ್ತುಂ ಪೋಗೆವ್ಪೋಗೆ:—

ವನಿತಾಪಾದಪ್ರಘಾತಂಬಡೆದು ತಳರ್ವ ಶೋಕಂ ವಧೂಟೀಕುಚಾಲಿಂ।
ಗನಲೀಲಾಸಾರದಿಂದುಳ್ಳಲರ್ವ ಕುರವಕಂ ಕಾಮಿನೀಕೇಕರಾಳೋ ॥
ಕನವಿಂ ಮೆಯ್ವೆಚ್ಚುತಿರ್ಪ್ಪತ್ಕಳಕೆಯ ತಿಳಕಂ ಸ್ತ್ರೀಮುಖಾಬ್ಜಾಸವಾಸೇ।
ಚನದಿಂದೆತ್ತಂ ಮುಗುಳ್ವೊತ್ತೆಸೆವ ಬಕುಳವೊಪ್ಪಿದುರ್ವಿಪಲ್ಲಿಗೆಲ್ಲಂ ॥

ಕುಲದೊಳ್ ವಿಚಾರಿಪೊಡೆ ನಿ ।
ಶ್ಚಲಭೋಗದ ಭೋಗಭೂಮಿಜರ್ಕಳ ತೆಱದಿಂ ॥೯೩॥

ಇಂತೆಂದು ನುಡಿಯುತ್ತುಂ ಪೊಡವೀಶನಲ್ಲಿಂ ತಳರ್ದು:—

ಪಿರಿದುಂ ವಂಧ್ಯಾಂಗನೆಯಂ ।
ತಿರೆ ತಾನಪ್ರಸವಮ್ಮಾಗಿಯುಂ ಮೂಲಾಗ್ರಂ ॥
ಬರಮೆಯ್ದಿ ಕಾತು ಮಿಗೆ ಬಿ ।
ತ್ತರಿಸಿರ್ದುದು ಪನಸಕುಜಮದೇನಚ್ಚರಿಯೋ ॥೯೪॥

ಅದಂ ನೋಡುತ್ತುಮಲ್ಲಿಂ ತಳರ್ದು:—

ಅನತಿವಿಯೋಗಿಜನಾಚಳ ।
ಘನಧೃತಿಶಿಖರಮನೆ ಬಿಡದೆ ಪೊಡೆವತನುಸುರೇಂ ॥
ದ್ರನ ಕುಲಿಕಾಯುಧಕುಲಮೆನಿ ।
ಪನಂತಪೃಥುಫಲದಿನೆಸೆದುದೆನಸುಂ ಪನಸಂ ॥೯೫॥

ವ॥ ಇಂತು ರೂಪಾಲಂಕೃತಿಯನುತ್ಪಾದಿಸಿ ಚಾಪಳೆಯಪ್ಪಡಪವಳ್ತ
ನುಡಿದ ನುಡಿಗೆ ಪೊಡವೀಶಂ ಮೆಚ್ಚುತ್ತುಮಲ್ಲಿಂ ತಳರ್ದು:—

ಧರೆ ಕುದ್ದಾಲಹತಕ್ಕೆ ಸೈರಿಸಿ ಕರಂ ತಾಂಪೆತ್ತಳಿಂತೆನ್ನನೆಂ ।
ದುರುಶಾಖಾಕರದಿಂ ತದೀಯಜಠರಾಗ್ನಿಸ್ಥಾನಮಂ ನಾಡೆ ನೇ ।
ವರಿಸುತ್ತಿರ್ದುದಿದೆಂಬಿನಂ ಫಲದ ಬಿಟ್ಟಿಂ ಕೊಂಬುಗಳ್ ಜೋಲ್ದಿಳಾಂ ।
ತರಮಂ ತಳ್ತು ವಿರಾಜಿಸಿತ್ತಭಿನವೋದ್ಯನ್ಮಾತುಲುಂಗದ್ರುಮಂ ॥೯೬॥

ಜೆತ್ತಜಸೈಪಂಗೆ ಜೈತ್ರಂ ।
ಮುತ್ತಿದ ಮಂಡವಿಗೆಯಂ ವಿಜೆತ್ರದೆ ಸಮೆದಂ ।
ತೆತ್ತಿದನೆನೆ ಮಿಗೆ ತಳ್ತದಿ ।
ರ್ಮೊತ್ತೆ ಮುಗುಳ್ತೆಸೆಯುತಿರ್ದುದತ್ತೊಂದೆಣೆಯೊಳ್ ॥೯೭॥

ಪಿತಿಕಂಠನಂತಪರ್ಣಾ ।
ನ್ವಿತಮಿದು ತಾನೆನಿಸಿ ತಳ್ತು ತನಿಪಣ್ಗಳ ಸಂ ।
ಗತಿಯಿಂ ತುಱುಂಗಿ ನೆಱಿ ಕ ।
ಣ್ಗತಿಶಯಮಾಗಿರ್ದುದಲ್ಲಿ ನಾರಂಗಫಲಂ ॥೯೮॥

ವ॥ ಅದಂ ನೋಡುತ್ತುಂ ಪೋಗೆ ಪುಂದೊಂದೆಡೆಯೊಳ್:—

ತವೆ ಪೀಗರ್ಗಂ ರಾಹುಮತ್ಕಾಮುದಿಯನೆನುತುವಾಭೀತಿಯಿಂ ಬೀಜವಾಗಿಂ
ದುವೆತಾಂ ಬೈತಿಟ್ಟ ಬೆಳ್ದಿಂಗಳೊ ನೆಗಳ್ದ ವನೋರ್ವೀರಮಾಸ್ಯಪ್ರಭಾಸಾಂ
ಶುವೊ ತಾನೆಂಬಂತಿರುದ್ಯಾನದ ತಿಮಿರವನೆಚ್ಚಿಟ್ಟುತಿರ್ದತ್ತು ಚಂದಾ ॥
ಶ್ಮವಿಭಾಸ್ವತ್ಸರ್ವಸೋಪಾನದ ತನಿವೆಳಗಿಂದೊಂದು ಪುಂಡಾಬ್ಜಷಂಡಂ ॥

ಪೆತ್ತುದು ಪೂರ್ಣಶಶಾಂಕರ ।
ವೊತ್ತಮನೆನೆ ಮಧುಪಮಿಳಿತಸಿತಸರಸಿಜದೊಂ ॥
ದೊತ್ತಂಬದಿಂದಮೆನಸುಂ ।
ಬಿತ್ತರಿಸುತ್ತಿರ್ದುದಾಸರೋರುಹಷಂಡಂ ॥೧೦೦॥

ವರದುಗ್ಧಾರ್ಣವಮುಂ ನಿರೀಕ್ಷಿಪ ವಿನೋದೋದ್ಭೂತ ಚೇತೋಮುಹಾ।
ತುರದಿಂ ಜೊನ್ನದ ಜೊಂಪದೊಳ್ ನಡೆತರುತ್ತಿರ್ಪಿಂದುವೆಂಬಂತೆ ತ ॥
ತ್ತರುಣೀಸಂಚಯಲೋಲಲೋಚನವಿಭಾಶ್ಚಂದ್ರಾತಪವ್ರಾತದೊಳ್ ।
ಬರುತಿರ್ದಂ ಮುದದಿಂದೆ ತತ್ಸರಸಿಗಾವಜಾಯುಧೋರ್ವೀವರಂ ॥೧೦೧॥

ವ। ಇಂತು ಬಂದಾಸರಸಿಯನರಸಂ ನೋಡುತಿರ್ಪಾಗಳ್—

ಪರಿವೃತತನಿತಾಲೋಚನ ।
ಮುರೀಜಚಂದ್ರಿಕೆಯ ಸೋಂಕಿನಿಂ ಸೋಪಾನ ॥
ಸ್ಫುರಿತೇಂದುಕಾಂತವೊಸರಲ್ ।
ಸರಸಿ ಕರಂ ತೀವಿ ಕೋಡಿನರಿದುದು ಬನದೊಳ್ ॥೧೦೨॥

ಬಹುಹಂಸೀಯುತರಾಜಹಂಸನವೊಲಾಗಳ್ ರಾಜಹಂಸಂ ಕಲಾ ।
ವಹನುತ್ಯಾಕೃತಿಚಂದ್ರನಾಸರಸಿಯುಂ ತದ್ವಾರನಾರೀಜನಂ ॥
ಸಹಿತಂ ಭೊಂಕೆನೆ ಪೊಕ್ಕು ಪಾದವದನಪ್ರಕ್ಷಾಲನಂಗೆಯ್ದು ತೀ ।
ರಹಿಮಾಂಶೂಪಲದೊಂದು ಪಟ್ಟಶಿಲೆಯೊಳ್ ನಿಂದಿರ್ದನಾನಂದದಿಂ ॥೧೦೩॥

ಸರಸೀಲಕ್ಷ್ಮ್ಯಂಗೆ ಪುಂಡರೀಕವಿಭವಂ ತಾನೇವುದಿನ್ನಸ್ಮದೀ ।
ಶ್ವರನಿರ್ದಂತೆನುತೀಯ್ದುಕೊಳ್ವ ತೆಱದಿಂ ಪುಂಡಾಬ್ಜಮುಂ ನಾಳಭಾ ॥
ಸುರಮುಂ ತದ್ವನಪಾಲಕಂ ತೆಗೆದು ತಂದಾನಂದದಿಂ ನೀಡಿದಂ ।
ಧರಣೀಕಾಂತನ ಕೆಯ್ಗೆ ಬೆಂಬಿಡದ ಭೃಂಗಶ್ರೇಣಿಯಂ ಸೋವುತುಂ ॥

ವ॥ ಆಪುಂಡರೀಕದ ಪಾಂಡುರಚ್ಛವಿಯಂ ಚಿತ್ತೈಯಿಸಿ ನೋಡುತ್ತು
ಮುರಸನಾಸರಸಿಯಿಂ ತಳರ್ದಾಗಳ್—

ಸುಮನೋವಾಗರ್ಗಣಿನಿಲ್ಲಿ ನಿರ್ಮಿಸಿದ ಭೃಂಗೀಜ್ಯಾಲಸತ್ಪುಷ್ಪಚಾ ।
ಪಮಿದೆಂಬಂತುಚಿತ ನೀಳ್ದ ಸತ್ಕುಸುಮಮಲ್ಲೀವಲ್ಲಿ ಪರ್ಬಿರ್ಪ ಪೆ ॥
ಭ್ರಮದಿಂದಾಮ್ರವಮಹೀರುಹಂ ಲತಿಕೆಯೆಂಬಾಕಾಂತೆಯೊಳ್ ಕೂಡಿದಂ ।
ದನುನಾಂತಿರ್ದುದು ತಾಂ ಲತಾವೃತಕಮೆಂಬಾಲಿಂಗನಪ್ರೌಢಿಯಿಂ ॥೧೦೫॥

ವ॥ ಆಚೂತಭೂಜಾತದ ವಿಚಕಿಲಲತೆಯ ಸಂಗಮಮುಂ ಕಂಡು ಕಾಮುಶಾಸ್ತ್ರದೊಳಿಸನಾಲಿಂಗನದ ಭೇದಮನಭಿನಯಿಸುವಂತಿರ್ದುದನಭೀಕ್ಷ್ಣಿ ಸುತ್ತುಂ ಪೋಗೆ ಮುಂದೊಂದೆಡೆಯೊಳ್—

ಜಗನುಂ ಗೆಲ್ವೆಡೆಯೊಳ್ ಕಂ ।
ತುಗೆ ತಾಂ ಸಹಕಾರಮೆಂದು ನೆನೆದೀಚೂತ ॥
ದ್ರುಗೆ ಸಹಕಾರಾಖ್ಯೆಯನಾ ।
ವಗಮಿತ್ತನದೇಂ ಪ್ರಗಲ್ಭನೋ ಕಮಲಭವಂ ॥೧೦೬॥

ವ॥ ಇಂತು ನುಡಿಯುತುಂ ಪೋಗೆ ಮುಂದೊಂದೆಡೆಯೊಳ್—

ಪೊದಲೊಳ್ ಚೈತ್ರಂ ವಿಜೆತಾಸ್ಪದಮೆನೆ ಮುದದಿಂ ಮಾಡಿಯುಂ [ತದ್ವಸಂತಂ ।
ಪದೆಪಿಂದಂ ಬಣ್ಣವಿಟ್ಟಂಗಜನೃಪತಿಯ ಗೂಡಾರಮೋ ತಾನಿದೆಂಬಂ ॥
ದದೆ ನಾನಾವರ್ಣಪರ್ಣಪ್ರಚಯರುಚಿಗಳಿಂ ಪೂಗಳಿಂ ಕಾಯ್ಗಳಿಂದೊ ।
ಪ್ಪಿದುದತ್ಯಾಕೀರ್ಣಮಾದ್ಯತ್ಪಿಕಶುಕಮಧುಪವ್ರಾಜಮಾಮ್ರಾವನೀಜಂ ॥

ಇರದೋ ಬೀಜ್ಗುಮಣಂ ನಿರಾಶ್ರಯದೊಳಿರ್ಪ್ಯೋಮಮೆಂದಂಜಿತ
ದ್ಧರಣೀಭಾಮಿನಿ ತನ್ನ ತೋಳ್ದುಜಗಲಂ ನೀಡಿರ್ದಳೆಂಬಂತಿರಂ ॥
ಬರಮುಂ ಚುಂಬಿಪ ತುಂಗಶಾಖೆಗಳ ಶೋಭಾಕೀರ್ಣದಿಂ ತೋರ್ಪ ಮಾ ।
ವಿರನಂ ನೋಡಿದನಾಗಳುನ್ಮದತೆಯಿಂ ವಜ್ರಾಯುಧೋರ್ವೀಶ್ವರಂ ॥

ವ॥ ಇಂತು ನೋಡುತ್ತುಮಿರಲತ್ತಲೊಂದೆಡೆಯೊಳ್—

ತೊಳಗುನ ಕೊಸರ್ಗಳ ಕೆಂದಳಿ ।
ರ್ಗಳ ಸುಸುದ್ದಿಳಿಗಳ ಪೊದಳ್ದು..... ॥
ನನೆಗಳ ಪೊಸಪೂಗಳ ಕಾ ।
ಯ್ಗಳ ಪುನುವಿಂದೆಸೆದುದಾವಿನೂತಂ ಚೂತಂ ॥೧೦೯॥

ಬಗೆದಂತರ್ವಿರಹಜ್ವರಾನಲನ ತಾಪೋದ್ರೇಕಮುಂ ತೋಜ್ಜುವು ।
ಜ್ಜುಗದಿಂ ಭೋಂಕೆನೆ ಬಂದು ಮದ್ವಿಟಪಮುಂ ಸಾರ್ದಿರ್ಪರಿರ್ಪಾವಿಯೋ।
ಗಿಗಳಂ ಪಾರ್ದಿಸು ಪುಷ್ಪಬಾಣತತಿಯಿಂ ನೀನೆಂದು ತಾನಿಂತು ಕಂ ।
ತುಗೆ ಕೆಯ್ಗೊಟ್ಟವೊಲಿರ್ದುದಿಟ್ಟಳದೆ ಕೈಬಂದೊಂದು ಚೂತದ್ರುಮಂ ॥

ವ॥ ಇಂತು ಕೈಬಂದ ಮಾಕಂದದ ಕೆಯ್ತುದಂದಮುಂ ಕಂದರ್ಪಂಗೆ ಕೆಯ್ಗೊಟ್ಟಂದಮೆಂದು ನೋಡುತ್ತುಂ ಅಲ್ಲಿಂ ತಳರ್ದು—

ಕಳಕೆಗಳಂ ಪಿಕಾಳಿ ನಲವಿಂ ನಲಿಗರ್ಚುತುಮುನ್ಮದಾಳಿಸಂ ।
ಕುಳಮಲಗೊಂಬಲಂ ತುಡುಕುತುಂ ತನಿವಣ್ಗಳನಿಂತರೆಮುಚ್ಚಿ ಪೀಱುತುಂ
... ... |
ವಿಳಸಿತ ಚುಂಬನಾಭಿನಯಮುಂ ನೆಱಿ ತೋಱುವುದಾಮ್ರಚೂತದೊಳ್ ॥

ವ॥ ಆಗಳವರಂದಮುಂ ಕಂಡು ಸುದರ್ಶನೆಯೆಂಬ ಪರಿಚಾರಕಿ ಲಕ್ಷ್ಮೀಮತಿಮಹಾದೇವಿಗೆ ತೋಱಿ ನೋಡಿ ನಗುತ್ತುಮಲ್ಲಿಂ ತಳರ್ದು—

ವರಶುಕಶೋಭೆಯಿಂ ಮುನಿವರೇಣ್ಯಮಹಾಸಭೆಯಂತೆ ಸಂತತಂ ।
ಪರಿವೃತಕಾಲಕಂಠಕಮನೀಯದಿನದ್ರಿತನೂಜೆಯಂತೆ ಭಾ ॥
ಸುರಹರಿಯುಕ್ತದಿಂ ಕಮಳೆಯಂತೆ ಶಿಲೀಮುಖಸಂಗದಿಂದೆ ಸಂ ।
ಭರಿತನಿಷಂಗದಂತೆಸೆವುದಾವಗಮಾಸಹಕಾರಭೂರುಹಂ ॥೧೧೩॥

ವ॥ ಇಂತುತ್ಪ್ರೇಕ್ಷಿಸಿ ನುಡಿದ ವನಪಾಲಂಗೆ ಮೆಚ್ಚುತ್ತುಂ ಪೊಗೞ್ದು—

ಸ್ಮರಸಮ್ಮೋಹನದೇವತಾವಸಥಮಂಗೋದ್ಭೂತಭೂನಾಥರಾ ।
ಜ್ಯರಮಾವಾಸನುನಂಗಮಂಗಳಗೃಹಂ ಪಂಚೇಷುಕೇಳೀಕಳಾ ॥
ಕರಣಂ ಮನ್ಮಥನಂತ್ರಶಾಲೆ ಮದನಾಸ್ತ್ರಾಗಾರಮಾಗಿರ್ಪ ಮಾ ।
ಮರಸಂ ಭೂವರನಾಗಳೀಕ್ಷಿಸಿದನಾವಜ್ರಾಯುಧೋರ್ವೀವರಂ ॥೧೧೪॥

ಜಗಮುಂ ಗೆಲ್ವೆನವೋಘುವೆಂಬ ಸರಲಂ ತೂಗಾಡುತುಂ ಕೂರ್ಪಕ್ಕೆ।
ಮಿಗೆ ಮಾಕಂದರಥಕ್ಕೆ ವರ್ಪ ವಿಲಸತ್ಕಂದರ್ಪನೆಂಬಂತಿರಾ ॥
ವಗಮಾಶುಭ್ರಸರೋಜಮಂ ತಿರಿಪುತುಂ ತಾಂ ಬಂದನಾಜೂತಶಾ ।
ಖೆಗೆ ವಜ್ರಾಯುಧಭೂಪನಿಂತೆಸೆಯುತುಂ ಸಾಶ್ಚರ್ಯಸೌಂದರ್ಯದಿಂ ॥

ಸನ್ನದ್ಧತುರಂಗದ ತೆಱ ।
ದಿನ್ನೆಱಿ ಮಿಱುಗುವ ಖಲೀನಶಾಖಾಮುಖದಿಂ ॥

ಮುನ್ನೀರಂವೊಲ್ ಪ್ರವಾಳಸ ।
ಮನ್ವಿತದಿಂ ಶೋಭಿಸಿತ್ತು ಚೂತಕುಜಾತಂ ॥೧೧೫॥

ಪಸುರ್ದಳಿರೋಳಿಯೋ ಶುಕನಿಕಾಯುದೆಱಂಕೆಯು ಮಾದೆಯೋ ಸಮು।
ಲ್ಲಸಿತನವಾಂಕುರವ್ರಜವೊ ಚಂಚುಸನೂಜವೊ ಸೋಂಕಿನುತ್ತುಮಾ ॥
ಕ್ಷಿಸುವ ಧರಾಧಿನಾಥನ ಮನಕ್ಕಭಿಶಂಕೆಯನುಂಟುಮಾಡಿ ರಂ ।
ಜಿಸಿದುದು ಕೀರಸಂತತಿಯು ತಿಂತಿಣಿಯಿಂ ಸಹಕಾರಭೂರುಹಂ ॥೧೧೬॥

ವ॥ ಇಂತೆಸೆವ ಸಹಕಾರಭೂರುಹೋಪಾಂತದೊಳ್—

ವನಲಕ್ಷ್ಮೀಕಾಂತೆ ವಸಂ ।
ತನೊಳೆನಸುಂ ನೆರೆವಲಂಪಿನಿಂದಿಕ್ಕಿದ ನೂ ॥
ತನಹಂಸತೂಲತಲ್ಪಮಿ ।
ದೆನೆ ಸೊಗಯಿಸುತಿರ್ದುದಲ್ಲಿ ನುಣ್ಬಳಿನತಳಂ ॥೧೧೭॥

ವ॥ ಇಂತೆಸೆವ ನುಣ್ಬಳಿನತಳದೊಳ್ ಹೊಂಬಾಳೆಯ ಕಂಬುಂಗಳಿಂ ಪಚ್ಚೆಯ ಪಲಗೆಗಳಿಂ ಬಕುಳದ ಬೋದಿಗೆಗಳಿಂ ಬಂಧೂಕದ ಭಾರವಟ್ಟಗೆಗಳಿಂ ಕೇತಕಿಯ ಕಂಠವಲಗೆಗಳಿಂ ಕುರವಕದ ಕಿಳುವದುವಂಗಳಿಂ, ಮುಂದಾರದ ಮೊಳೆಸಾಲ್ಗಳಿಂ ಕಂಕೆಲ್ಲಿಯ ಕೋಲುವಟ್ಟುಗಳಿಂ ಮುಲ್ಲಿಗೆಯ ಮೇಲ್ಗಟ್ಟುಗಳಿಂ ನಂದ್ಯಾವರ್ತದ ನವಪದಂಗಳಿಂ ಚಂಪಕದ ಚುಂಚುಲೋವೆಗಳಿಂ ಉತ್ಪಲದುಪಗೃಹಂಗಳಿಂ ವಾಸಂತಿಕೆಯ ವೇದಿಕೆಗಳಿಂ ತಿಲಕದ ತಲೆಗಿಂಬಿನಿಂ ಸುರಹೊನ್ನೆಯ ಹಸೆಗಳಿಂ ದಾಡಿಮದ ಪ್ವಾರಂಗಳಿಂ ಕದಳೀದಳದ ಕದಹುಗಳಿಂ ಚೂತದ ಚಂದ್ರಶಾಲೆಗಳಿಂ ಸುರಯಿಯ ಸಾಲಭಂಜಿಕೆಗಳಿಂ ಸಿರಿಸದ ಸೂಸಕಂಗಳಿಂ ಮುಚುಕುಂದದ ಮೂಲ್ಯಂಗಳಿಂ ಪೊಂದಾವರೆಯ ಪಲಗೆಗಳಿಂ ಮುತ್ತದ ಮುತ್ತವಾರಣಂಗಳಿಂ ಪಾಟಲದ ಪತ್ರಂಗಳಿಂ, ಲುಂಗದ ಲಂಬಣಂಗಳಿಂ ಚಂದನದ ಚಂದನಮಾಲೆಗಳಿಂ ಮಾಂದಳಿರ ಮುಕರತೋರಣದಿಂ ದವನದ ಭುವನಿಕೆಗಳಿಂ ಗೊಜ್ಜಗೆಯ ಗುಡಿಗಳಿಂ ಪನ್ನೀರ ನೀರ್ದಳಿಪದಿಂ ಕತ್ತುರಿಯ ಕಾಲ್ವಟ್ಟಿಗಳಿಂ ಕಪ್ಪುರವಳುಕಿನ ಕಡೆಗಳಿಂ, ಕಮಲದಳದ ಕರಕಂಗಳಿಂ ಬಾಳದ ಬಿಜ್ಜಣಿಗೆಗಳಿಂ ಬಿತ್ತರಿಸಿ ಚೆಲ್ವಿನ ನೆಲೆಯುಂ ಕಂಪಿನ ಕಣಿಯುಂ ತಂಪಿನ ತಾಯ್ವನೆಯುಮೆನಿಪ ಲತಾಮಂಟಪಮುಂ ಕಂಡು—

ಬಗೆದಬಲಾಂಘ್ರಿನೂಪುರದ ಝಂಕೃತಿ ಮಾರ್ದನಿಯಿಟ್ಟು ನಾಡೆಯುಂ ।
ಪುಗೆ ಕುಜಕೋಟರಂಗಳನನೂನಖಿಕಧ್ವನಿ ಕರ್ಣರಂಧ್ರಮುಂ ॥
ಪುಗೆ ನೃಪಕಾಮಿನೀಹೃದಯಮುಂ ವನಕೇಳಿಯೊಳುನ್ಮದುತ್ಸವಂ ।
ಪುಗೆ ಪುಗುತಂದನಾಗಳರಸಂ ಸವಿಲಾಸಲತಾನಿವಾಸಮುಂ ॥೧೧೯॥

ವ॥ ಅಲತಾಮಂಡಪದೊಳ್ ಮಂಡಿತವಾಗೆಸೆದ ಪಸೆಯ ತೂಗು ಮಂಚದೊಳ್ ರಾಗದಿಂ ಲಕ್ಷ್ಮೀಮತಿಮಹಾದೇವಿವೆರಸು ವಜ್ರಾಯುಧನರೇಂದ್ರಂ ಕುಳ್ಳಿರ್ದು ವಿಳಾಸಿನೀಜನದ ಮನವಱಿದು ಪುಷ್ಪಾಪಚಯಕ್ಕೆ ಕಳಿಪಿದಾಗಳ್:—

ಸ್ತನಕಲಶಂ ಕದಕ್ಕದಿಸೆ ಸೋರ್ಮುಡಿ ಪೂವಲಿಗೆಯ್ಯೆ ಕಾಂಚಿ ನು ।
ಣ್ಣಿನಿವಿಡೆ ನೂಪುರಂ ಪೊಡರೆ ನೀವಿ ಜಗುಳ್ತರೆ ನೀಳ್ದ ಕಣ್ಮಲರ್ ॥
ತನಿವೆಳಗಂ ಕರಂ ಕೆದಱಿ ಮೆಲ್ಲಡಿ ಪಲ್ಲವಶೋಭೆಯಂ ವನಾ ।
ವನಿಗೆನಸುಂ ಪುದುಂಗೊಳಿಸೆಯುಂ ತಳರ್ದತ್ತು ವಿಲಾಸಿನೀಜನಂ ॥೧೧೯॥

ವ॥ ಅನ್ನೆಗಮಿತ್ತಲ್—

ಪ್ರಿಯದಿಂ ತನ್ನಯ ಮಾದೇ ।
ವಿಯು ಕಣ್ಣಱಿದಾಗಳಾಲತಾಮಂಡಪಶೋ ॥
ಭೆಯನಾಂ ತೋಱುವೆನೆಂದಮ ।
ಳಯಶಂ ನೃಪಚಕ್ರಿ ತಡೆಯದಲ್ಲಿಂ ತಳರ್ದಂ ॥೧೨೦॥

ಇವು ನವನಾಥವೀಕಸುಮಮಂಜರಿರಂಜಿತವೇದಿಕಾಳಿಯಿಂ ।
ತಿವು ಕಮನೀಯಗೋಸ್ತನಿಯ ವಿಶ್ರುತಗೋಷ್ಠಿನಿಕೇತನಂಗಳಿಂ ॥
ತಿವು ಸುರಕರ್ಣಿಕಾಪ್ರಸರಗರ್ಭಸುಗೇಹಸಮಾಜಮೆಂದು ತೋ ।
ಱುವ ನಿವದಿಂ ನೃಪಂ ಪಡೆದನಂಗಜಕೇಳಿಯನಾತ್ಮಕಾಂತೆಯೊಳ್ ॥೧೨೧॥

ವ॥ ಇಂತು ಕ್ರೀಡೆಯೊಳಿರ್ದುದುಮತ್ತಲ್:—

ಪತಿ ವನದಲ್ಲಿ ಮೆಯ್ಗುಱಿದನೀಕ್ಷಿಪೆನೆಂದು ಪುಗುತ್ತುಮಿರ್ದಳೋ ।
ರತಿ ರತಿರಾಗದಿಂದೆ ಪಲವಾಕೃತಿಯಂ ತಳೆದೀಗಳೆಂಬಿನಂ ॥
ಲತೆ ಲತೆಯೊಳ್ ಮಹೀರುಹ ಮಹೀರುಹದೊಳ್ ಪುಗುತಿರ್ದುದಂಗನಾ ।
ತತಿ ನಲವಿಂದಮಿಂತು ಬನದೊಳ್ ಕುಸುಮಾಪಚಯೋತ್ಸವೆಂಗಳಿಂ॥೧೨೨॥

ಇನಿಯರಗಲ್ಕೆಯೊಳ್ ಕಡುಪಿನಿಂ ಕೊರಚಾಡಿದನೆಮ್ಮ ಕಂತುವಂ ।
ತನಗೆನುತೆಯ್ದಿ ಮೂದಲಿಸಿ ಬಗ್ಗಿಸಲಿಂತು ಪ್ರಗುತ್ತಮಿರ್ದೆಂ ॥
ಬಿನವನುರಾಗದಿಂ ಲತೆಯ ಜೊಂಪದೊಳಾಮ್ರದೊಳಿಂಬುವೆತ್ತ ಚಂ ।
ದನದೊಳಶೋಕೆಯೊಳ್ ವಕುಳದೊಳ್ ಪುದಿದಿರ್ದುದು ಕಾಮಿನೀಜನಂ ॥

ಕಳಿಕಾವಮಾತ್ರಮಸಿಲ್ಲಿ ಮುಟ್ಟದಿರಿದಂಗೋದ್ಭೂತನಾವಾಸವೆಂ ।
ದೊಳರುತ್ತುಂ ಪರಿತಪ್ಪ ಕಾಮಿನ ಭಟರ್ ತಾನೆಂಬಿನಂ ಸುಯ್ಯೆಲ ॥
ರ್ಗಳಿಗಳ್ ಝಂಕರಿಸುತ್ತುಮೆಯ್ದಿ ಮುಸುಱಲ್ ತನ್ವಂಗಿ ತತ್ಕ್ಕೋರಕಾ।
ವಳಿಯಂ ಭೋಂಕೆನೆ ಬಿಟ್ಟುಬಿಟ್ಟು ಪೆಱಸಾರ್ದಳ್ ಚೂತಮಂ ಭೀತಿಯಿಂ॥

ವ॥ ಮತ್ತಮೊರ್ವಳ್ ಮತ್ತೊಂದೆಡೆಯೊಳ್—

ಪೊಳೆವಧರರಾಗಮುಂ ಮುಖ ।
ಗಿಳಿ ದಾಡಿಮಮೆಂದು ಕರ್ದುಕಲವ್ವಳಿಸೆ ಕರಂ ॥
ಪೆಳರ್ತ ಪೆಱಸಾರ್ದಳೀಕುಜ ।
ಕಳಿಕೆಗಳಿವು ಚೇತನಂಗಳೆನುತುಮದೊರ್ವಳ್ ॥೧೨೫॥

ವ॥ ಅದಲ್ಲದೆಯುಂ ಮತ್ತಮೊಂದೆಡೆಯೊಳ್:—

ತಳನಿವು ತಳಿರಿವು ಬೆರಲಿವು ।
ಕಳಿಕೆಗಳಿವು ನಖಮಿವಲರಿವೆಂದಱಿಯದೆ ಕೋ ॥
ಮುಳಿ ಪೂಗೊಯ್ವೊಡೆಯೊಳ್ ಪಳ ।
ಪಳಿಸಿದಳತಿಮುಗ್ಧೆ ಮಾವಿನೊಳ್ ಮತ್ತೊರ್ವಳ್ ॥೧೨೬॥

ವ॥ ಪೆಱತೊರ್ವಳ್ ಮತ್ತೊಂದೆಡೆಯೊಳ್—

ದೂರದೆ ಕಂಡು ಚಂಪಕದ ಕುಟ್ಮಲಮಂ ಕೊಳಲರ್ಥಿವಟ್ಟವಳ್ ।
ಸಾರೆವರುತ್ತುಮಾಕ್ಷಿಸೆ ವಿಲೋಚನಚಂದ್ರಿಕೆಯಿಂದೆ ಬೆಳ್ಪು ಫಿ ॥
ಸ್ತಾರಿಸೆ ಕಂಡು ಮಾಯದ ಮರಂ ದಿಟಮಿಂದಿದೆನುತ್ತೆ ವಿಸ್ಮಯ ।
ಸ್ಮೇರಮನೋಜ್ಞೆಯಾಗಿ ಧವಳೇಕ್ಷಣೆ ಪಿಂಗಿದಳಾಮಹೀಜಮಂ ॥೧೨೭॥

ವ॥ ಮತ್ತೊಂದೆಡೆಯೊಳ್—

ಲಲಿತಾಂಗಲತೆಯನೀಕ್ಷಿಸಿ ।
ತಳಿದೂಗುವ ತೆಱದಿನೆಸೆವ ಮಲಯಾನಿಲನಿಂ ॥

ದೊಲೆವ ಲತಾವನಮುಂ ಕೋ ।
ಮಲೆ ಪುಗದೆ ಮಗುಳ್ದ ಮೆ ೀದಳತಿಮುಗ್ಧತೆಯುಂ ॥೧೮೮॥

ನಿಮಿದು* ಕರಾಗ್ರದಿಂ ಪಿಡಿದು ಕೊಂಡಲಗೊಂಬೊಡನೆತ್ತುವಾಲತಾಂ।
ಗಮನೆನಿಸುಂ ಘನಸ್ತನಯುಗಂ ಕೆಳಗಣ್ಗಿರದೊತ್ತೆನಿಂದು ಪು ।
ಷ್ಪಮನವನೆಯ್ದಿ ಕೊಯ್ದು ಬಲಿಕಂ ಜಲಜಾನನೆ ಮೆಚ್ಚಿದಳ್ ಗುರು।
ತ್ವಮನಬಲಾಕುಚಕ್ಕೆ ಪಡೆದಂಬುಜಗರ್ಭನ ಸುಪ್ರಗಲ್ಭಮುಂ ॥೧೮೯॥

ವ॥ ಆವನೊಳಮಹೀಜಾತದಿಂದಸತಿದೂರದೊಳ್—

ಮುಡಿಯಲರ ಪರಿಮಳಕ್ಕೆಡೆ ।
ವಿಡದಳಿಗಳ್ ಮೇಲೆ ಬಳಸಿ ಬರೆ ಪೀಲಿಯು ನು ॥
ಣ್ಗೊಡೆವಿಡಿದು ನಡೆವ ತೆಱದಿಂ ।
ನಡೆದಳ್ ಪೂಗೊಯ್ಯಲಲ್ಲಿ ಮಲ್ಲಿಗೆಗೊರ್ವಳ್ ॥೧೯೦॥

ವ॥ ಆಮಲ್ಲೀಲತೆಯ ಕಾವಣದೊಳ್—

ಪುಲ್ಲಶರನೆಂಬ ಪೆಸರಿಂ ।
ಪುಲ್ಲಶರಂಗಾದುದಿದಱ ದೆಸೆಯಿಂದೆನುತುಂ ॥
ಮಲ್ಲಿಗೆಯನಾಯ್ದು ಕೊಯ್ದಳ್ ।
ಮಲ್ಲೀಪ್ರಸವಾನುವೋದೆ ಪದೆಪಿಂದದಱಿಂಗೊಳ್ ॥೧೯೧॥

ನೀಡೆ ಕರಾಗ್ರದೊಂದಳವಿಗೊಯ್ಯನೆ ಬಾರದೆ ಪೂದುಱುಂಗಲಿಂ ।
ನಾಡೆ ವಿರಾಜಿಸರ್ಪ ಸೆಳೆಗೊಂಬೆಲರಿಂ ತೊನೆದೆಱ್ದು ತಗ್ಗಿ ತೂ ॥
ಗಾಡಿದೊಡಂತದಂ ಪಿಡಿಮಕೊಂಡಲರಂ ನೆರೆ ಕೊಯ್ದು ಕಾಂತೆ ಕೈ ।
ಯ್ಗೊಡಿಸಿತೆನ್ನ ವಾಂಛಿತಮನೀಮಲಯಾನಿಲನೆಂದು ಮೆಚ್ಚಿದಳ್ ॥೧೯೨॥

ವ॥ ಅಸಹಕಾರಭೂರುಹದ ನಿಕಟಪ್ರದೇಶದೊಳ್—

ವಿರಹದೊಳೆನ್ನನಂದುರದದಿರ್ದ ಕಂತುಗೆ ತಾನುದಗ್ರನಿ ।
ಷ್ಠುರತರಮಪ್ಪ ಕೂರಲಗಿದಾಯ್ತದಱಿಂ ಪಗೆ ಸಿಲ್ಕಿತೀಗಳ ॥
ನ್ನುರುತರವೇಣಿಯೊಳ್ ಮಿಡುಕದಂದದಿದಂ ಸೆಱಗೆಯ್ವೆನೆಂದು ಸುಂ ।
ದರಿ ನೆಱಿ ಕೊಂಡಳಾಕ್ಷಣದೆ ಕೇದಗೆಯೊಳ್ಳಿಸಲೋಳಿಯೆಲ್ಲಮುಂ॥೧೯೩॥

ವ॥ ಆಕೇತಕೀಲತಾವ್ಯಂಡಪದುಪಕಂಠದೊಳ್—

ಸಲೆ ಕೊಯ್ದು ಮಾಧವೀಲತೆ ।
ಯಲರ್ಗಳನಂತಲ್ಲಿ ಪುದಿದ ಕಣ್ಬಿಳಗಂ ತಾ ॥
ನಲಘುಕುಚೆ ತುಡುಕುತಿರ್ದಳ್ ।
ಸುಲಲಿತಕುಸುಮಾಳಿ ಮತ್ತೆ ಮೂಡಿತೆನುತ್ತುಂ ॥೧೩೬॥

ವ॥ ಆವಾಸಂತೀಕುಜೋಪಾಂತದೊಳ್—

ಪೊಳೆವ ನವಪ್ರಸೂನಮನಭೀಕ್ಷ್ಣಿಪ ಭಂಗಿಯಿನಬ್ಜನೇತ್ರೆ ಪ ।
ಜ್ಜ್ವಳಿಪ ಕಟಾಕ್ಷರೋಚಿಯ ಪಸಾಯಮನಿತ್ತಲರ್ಗೊಯ್ವಳಲ್ತಿಯಿಂ ॥
ತಿಳಕದೊಳೀಯೆ ಕೊಯ್ವನೆವದಿಂ ಮೊಲೆಸೋಂಕಿನ ಸೌಖ್ಯಮಿತ್ತು ಕೋ ।
ಮಳೆ ಸಲೆ ಕೊಯ್ದಳಾಕುರವಕದ್ರುಮದೊಪ್ಪುವ ಪ್ರಪ್ಪಮೆಲ್ಲನುಂ ॥

ವ॥ ಆತಿಲಕ ಕುರವಕತರುಗಳ ತತ್ಸನ್ನಿಧಿಯೊಳ್—

ಇದಱಿಂತೆ ಮಧುಪತತಿ ಮು ।
ಟ್ಟಿದೆ ಪ್ರದಿದ ಸುಗಂಧಸಾರಮದು ಬೀಸರಮಾ ॥
ಗದ ಪೂಗಳಾವುವೆನುತುಂ ।
ಪದೆದೊರ್ವಳ್ ಕೊಯ್ದಳೆಯ್ದೆ ಚಂಪಕದರಲಂ ॥೧೩೭॥

ವ॥ ಆಚಂಪಕದ್ರುಮದ ಸಮೀಪದೊಳ್—

ಮಿಸುಪಧರರಾಗದಿಂ ದ್ವಿಗು ।
ಣಿಸುತುಂ ತನಿಗೆಂಪಸದಱ ಪಲ್ಲವತತಿಯೊಳ್ ॥
ಬಿಸಜಮುಖಿ ಕೊಯ್ದಳಸದಳ ।
ವೆಸೆವಸುಕೆಯ ಪೊಳೆಪುವೆತ್ತ ಪೊಸಕಿಸಲಯಮಂ ॥೧೩೮॥

ವ॥ ಆಕಂಕೆಲ್ಲಿಯ ಕುಜದ ಕೆಲದೊಳ್—

ಮನಸಿಜರಾಜನ ವಶ್ಯಾಂ ।
ಜನಸಸ್ಯಮಿದೆನಿಸಿ ಮರ್ವನುಗುಟ್ಟ ತಮೂಳಾ ॥
ವನಿಜದ ಕರ್ಗುಡಿ ತಳರ್ಗಳ ।
ನನಿತುಮನಳಿನೀಲಕುಟಿಲಕುಂತಲೆ ಕೊಯ್ದಳ್ ॥೧೩೯॥

ವ॥ ಆತಮಾಲತರುತಟದೊಳ್—

ರತಿಯಧರಮಣಿಯ ರಮಣೀ ।
ಯತೆಯನಧಃಕರಿಪ ಬಂದುಗೆಯ ಮುಕುಳದ ಸಂ ॥
ತತಿಯಂ ಬಂದುಗೆ ಮಿಗೆ ರತಿ ।
ಪತಿ ಮದಗಜಯಾನೆ ತಾನದಂ ನೆಱಸಿ ಕೊಂಡಳ್ ॥೧೩೯॥

ವ॥ ಮತ್ತಮೊಂದೆಡೆಯೊಳ್—

ತನಿಗಂಪುವಡೆದನೋ ಮು ।
ತ್ತಿನ ಮೊತ್ತಕ್ಕಬ್ಜಗರ್ಭನೆನೆ ಸೊಗಯಿಪ ಸೊಂ ॥
ಪನೆ ಪಡೆದತಿಮುಕ್ತಕಮುಕು ।
ಳನಿಕರಮಂ ಕೊಯ್ದಳೆಯ್ದೆ ಕಾಮಿನಿಯೊರ್ವಳ್ ॥೧೪೦॥

ನವಸುಕುಮಾರತೆ ನಿನಗೆ ।
ನ್ನವೊಲೆತ್ತಣದೆಂದು ನಖಮಯೂಖನೆ ನಗುತೊ ॥
ಪ್ಪುವ ನಳಿತೋಳ್ಗಳಿನಿರದೆ ।
ತ್ತಿ ವಧೂಟಿ ಶಿರೀಷಕುಸುಮಕುಲಮುಂ ಕೊಯ್ದಳ್ ॥೧೪೧॥

ಅಲರಂಬುಂಗಲರ್ಗಣಿಯಾ ।
ದಲರಾನೆಂಬುದಿತರಾಗವೊದವಿದವೊಲ್ ಪಾ ॥
ಟಲರುಜೆಯಿಂ ತಳೆದಾಪಾ ।
ಟಲದಲರ್ಗಳನೆಸೆವ ಪಾಟಳಾಧರೆ ಕೊಯ್ದಳ್ ॥೧೪೨॥

ವಕುಳಲವಂಗಲುಂಗಸುರಪರ್ಣಶಿರೀಷಪಲಾಶಚೂತಚಂ ।
ಪಕಹಯಮಾರ ದಾಡಿಮ ಜಪಾಂಬುಜಪಾಟಳಿಕಿಂಕಿರಾತಕೇ ॥
ತಕಿತಿಳಕಾನಿಳಾತಕಸುಮಾಧವಿ ಮಾಗಧಿನಾಗಕೇಸರ ।
ಪ್ರಕರದ ಪೂಗಳಂ ನೆಱಸಿಯೆ ಕೊಯ್ದುದು ತದ್ವನದೊಳ್ ವಧೂಜನಂ ॥

ವ॥ ಇಂತು ಕಂತುವಿನ ತೂಣೀರಕುಸುಮಕಾಂಡಮಂಡಳಮಂ ಸೂಱಸಿಗೊಂಡೆಳವೆಂಡಿರ ತಂಡಂ ಸ್ವೀಕೃತನವೀನಪ್ರಸೂನಸಂತಾನರಾಗಿ—

ಕಳಭೃಂಗೀನಾದಮಂ ನೂಪುರತತಿ ರುಜೆಯಿಂ ಕೊರ್ವಿಸುತ್ತುಂ
[ತವೋಮಂ ।
ಡಳಮಂ ಲೋಲಾಯತಾಕ್ಷಿಪ್ರಚಯರುಜೆಗಳಿಂ ಬೆರ್ಚಿಸುತ್ತುಂ ವಿಭಾಸ್ವ॥

ಚ್ಛಳನಂ ಪ್ರದ್ಯೋತದಿಂ ತದ್ವನನಸುಮತಿಯೊಳ್ ಮಾಡೆಯುಂ ರಾಗಮಂ
[ಸಂ ।
ಗಳಿಸುತ್ತುಂ ಬಂದುದೆತ್ತಂ ಧೃತಬಹುಕುಸುಮವ್ಯೂಹವಾಸ್ತ್ರೀಸಮೂಹಂ॥

ವನತರುಲತಾಲತಾಂತಮ ।
ನಿತಂ ತವೆ ಕೊಂಡಿರೆಂದು ಪ್ರಯ್ಯಲ್ಲ್ವವೊಲ್ ॥
ಜಿನುಗುತ್ತುಮಳಿಗಣಂ ಬಲಿ ।
ಯನೆ ಬರೆ ಬಂದುದು ವಿಲಾಸಿನೀಜನಮಾಗಳ್ ॥೧೪೫॥

ಬಂದು ವಿಲಾಸಿನಿಯರ್ ಪದೆ ।
ಪಿಂದಂ ವನಲಕ್ಷ್ಮಿ ಕೊಟ್ಟ ಕಾಣ್ಕೆಯನಿತಂ ॥
ತಂದೀವಂತಿರೆ ದೇವಿಯ ।
ಮುಂದಿಲಿ ಪಿದರಖಿಲಕುಸುಮಕಲಿಕಾವಲಿಯಂ ॥೧೪೬॥

ವ ॥ ಅಕುಸುಮಕಳಿಕಾವಳಿಯಂ ನಿಜನಯನಧವಳಾಂಶುವಿನಿಂ ಮಿಸಿಸುವಂತೆ ನೋಱ್ಪುಭಾವದಿಂದೇನೀಕುಸುಮವಿಸರದ ಪಸದನಕ್ಕೆ ಮನಂದಂದಳೆಂದು ವಜ್ರಾಯುಧನರೇಂದ್ರಸತಿಯಾಗಳ್ ಸಂಪಗೆಯ ಸೊಂಪುವೆತ್ತನನೆಯ ನೇವುರಂಗಳುಮಂ, ಪಾಟಲೀಕುಸುಮದ ಪಾಯವಟ್ಟಂಗಳುಮಂ, ಗೊಜ್ಜಗೆಯ ಗುಜ್ಜುಮುಗುಳ ಮೇಖಲಾಸೂತ್ರಂಗಳುಮಂ, ಕುರವಕಕುಟ್ಮಲದ ಕರವಲಯಂಗಳುಮಂ, ಪಾರಿಜಾತಪ್ರಸವದ ಪಿಂಡುಗಂಕಣಂಗಳುಮಂ, ಬಕುಳದ ಬಲ್ಮುಗುಳ್ಗಳ ಬಾಹುವಲಯಂಗಳುಮಂ, ಕುವಲಯದೊಳ್ಕೆಸಱ ಕಂಚುಕಂಗಳುಮಂ, ತೋರಮಲ್ಲಿಗೆಯ ಹಾರಜಾತಿಗಳುಮಂ, ಚೂತಕಳಿಕಾವಳಿಯ ಕಂಠಿಕೆಗಳುಮಂ, ವಾಸಂತೀವಿಚಕಿಲಂಗಳ ವೆಂಟಿಗಳುಮಂ, ಬಂದುಗೆಯ ಮುಗುಳ ಮಣಿಮುದ್ರಿಕೆಯಂ, ಸುರಹೊನ್ನೆಯ ಚೆನ್ನ ಚೆನ್ನಪೂಗಳುಮಂ, ಜಪಾಕುಟ್ಮಲದ ಚಳಕಿಗೆಗಳುಮಂ, ತಿಲಕದಲರ ತಲೆದೊಡವುಗಳುಮಂ, ಲವಂಗದ ಲಲಾಮಕಂಗಳುಮಂ, ಮಿಸುಪಸುಕೆಯ ಪಲ್ಲವದ ಮುಡಿಗಟ್ಟಿನ ಪಲ್ಲವಂಗಳುಮಂ, ವಿಚಿತ್ರ ಶೋಭೆವಡೆಯೆ ಏರಚಿಸಿ—

ವಿರಜಿಸಿದಲರ್ವಚ್ಚಂಗಳಂ ।
ಕರಮುಚ್ಚರಿವಡೆಯೆ ತಾನೆ ಮಾನಿನಿಯನಲಂ ॥
ಕರಿಸಿದನಾವಜಾಯುಧ ।
ನರಪತಿ ತನ್ನೊಲವಿನೆಸಕಮುಂ ಪ್ರಕಟಿಸುತುಂ ॥೧೪೬॥

ವ॥ ಆಸಮಯದೊಳ್—

ಅಸಮಾಯುಧಕುಸುಮಾಸ್ತ್ರ ।
ಪ್ರಸರಮಿದೆಂಬಂತೆ ವಾರನಾರೀನಿವಹಂ ॥
ಮಿಸುಗಿದುದು ತಳೆದು ತಮತಮ ।
ಗೆಸೆವ ಲಸತ್ಪ್ರಸವತತಿಯು ಪೊಸಪಸದನಮಂ ॥೧೪೭॥

ನಿಮಿರ್ವಲರ್ಗಣ್ಣ ನುಣ್ವೆಳಗನರ್ವಿಪ ಕೂರಲಗಾಸಕೋಮಳಾಂ ।
ಗಮೆ ಸರವಟ್ಟ ತೊಟ್ಟೆಲರ ಪಚ್ಚಮೆ ಬೆಳ್ಗಯಾಗೆ ಕಾಮಿನೀ ॥
ಸಮಿತಿ ವಿರಾಜಿಸಿರ್ದುದು ಮನೋಭವ ಭೂಪತಿಗೆಂದು ತಾಂ ।
ಕಮಲಜನೊಲ್ದು ನಿರ್ಮಿಸಿದ ಮೋಹನಬಾಣದ ಮೊತ್ತಮೆಂಬಿನಂ ॥

ವ॥ ಆಸಮಯದೊಳ್ ವನಪಾಲಂ ಬಂದು ನಿಂದಿರ್ದು ದೇವ ಬಿನ್ನಪಮಿದು ಜಲಕ್ರೀಡೆಗವಸರಮೆಂದು ನುಡಿದುದಂ ಮನದೆಗೊಂಡು ಸುದರ್ಶನ ಸರೋವರಕ್ಕೆ ನಡೆಗೊಂಡಾಗಳ್—

ಇದು ಬಿಜಿಸಂದು ಬರ್ದ ವನದೇವತೆಯರ್ಕಳ ಮೊತ್ತಮೋ ವಿಲಾ ।
ಸದೆ ನಡೆಗೊಂಡ ನಂದನಲತಾವಳಿಯೋ ದಿಟಮೆಂಬಿನಂ ನಿಜಾಂ ॥
ಗದ ಸೊಳೆವಚ್ಚ ಪೂದೊಡವೊ ರಾಜಿಪ ಪೌರವಿಲಾಸಿನೀಸಮಾ ।
ಜದೆ ನಡೆದಂ ನರೇಶ್ವರಪುರಂದರನಾಜಲಕ್ರೀಲೀಲೆಯಿಂ ॥೧೪೯॥

ಬಳಸಿ ವಿಳಾಸಿನಿಯರ್ ಬರೆ ।
ಜಲಕ್ರೀಳಿಗೆ ನಡೆವ ನೃಪಸುರೇಂದ್ರಂ ವರದಾ ॥
ವಲಿವೆರಸು ಕೊಳಕ್ಕೆಯ್ದುವ ।
ವಿಲಸತ್ಕಲಹಂಸಮಿಥುನಮಂ ನೆನೆಯಿಸಿದಂ ॥೧೫೦॥

ಕಮಲಭವಂ ಲಸತ್ಕರಿಮಳೋತ್ಕರದಿಂ ಕರುವಿಟ್ಟುವಾಡಿದಂ ।
ಗಮಿದೆನೆ ಕಂಪ್ರುವೆತ್ತು ಮಿಗೆಮೋಹಿಪ ದೇವಿಯ ಮೆಯ್ಗೆ ಸುಯ್ಗೆ ಸಂ ॥

ಭ್ರಮದೆ ಮದಾಳಿಮಾಳೆ ಒಜ್ಜಿಯಂ ಬರೆ ತನ್ನೆಸೆವುತ್ತರೀಯದಿಂ ।
ದಮೆ ಸಲೆ ಸೋವುತುಂ ನಡೆವನಾಜಲಕೇಳಗೆ ಲೀಲೆಯಿಂ ನೃಪಂ ॥೧೫೯॥

ವ। ಇಂತು ಬರ್ಪಾಗಳಾದೇವರಮಣೋದ್ಯಾನದ ಲಕ್ಷ್ಮೀಯ ಮುಗುಳ್ನಗೆಯಂತೆ ಬೆಳ್ಳಿಳಗನುಗುಜ್ವಿ ಶಶಿಕಾಂತದೆಸೆವ ಸೋಪಾನಂಗಳಿಂ ಮಳಯಜಮಿಳಿತಮಪ್ಪ ಸಕಲಕುಸುಮನಿಕರಮಕರಂದರಾಜಿತವಾರಿಪೂರದಿಂ ಸುತ್ತಲುಂ ಬಿತ್ತರಿಪ ಮೃಗಮದನಾರಿಪೂರಮಪ್ಪ ಹರಿಸೀಲದ ಕಲ್ಗಳಿಂ ಕುಂಕುಮವಾರಿಪೂರಮಪ್ಪ ಕನಕಕಟೂಹಪಟಲಂಗಳಿಂ ಚಂದನವಾರಿಪೂರಮಪ್ಪ ರಜತದ ಇಂಜಣಿಗೆಗಳಿಂ, ರಂಜಿಸುವ ಸುದರ್ಶನ ಸರೋವರಮನೆಯ್ದಿವಂದಾಗಳ್—

ತೊಳಗುವ ತನ್ನ ನಿರ್ಮಲತೆಯಿಂ ನೆರೆ ಕಣ್ಪೊಲನಾದುದಾರಸಾ
ತಳದ ಫಣೀಂದ್ರಮೌಳಿಮಣಿಮಂಜರಿಯೆಂದೆನೆ ತೀರಭೂರುಹಂ ॥
ಗಳ ನವ ಪಲ್ಲವಪ್ರತತಿ ಮಾಪ್ರೊಳೆವಂದು ವಿಲಾಸದಿಂ ಮನಂ ।
ಗೊಳಿಸಿದುದಾಸುದರ್ಶನಸರೋವರವಚ್ಛನಿಭಾಸರೋವರಂ ॥೧೫೩॥

ಮೊರೆವ ಮದಾಳಿಮಾಲೆಗಳ ಝಂಕೃತಿಯಿಂ ಕಲಹಂಸಮಂಡಳ ।
ಸ್ವರತತಿಯಿಂ ಕಲಾಪಿಗಳ ಚಾಪಲನಿಸ್ವನದಿಂ ರಥಾಂಗಬಂ ।
ಧುರರತಿಯಿಂ ಪೊದಳ್ದಿ ಬಹುಸಾರಸದಾರವದಿಂ ಸಮಂತು ಬಿ ।
ತ್ತರಿಪ ಸುದರ್ಶನಾಬ್ಜನಿಳಯಂ ನೆರೆ ನಾದಮಯಂ ನಿರಂತರಂ ॥೧೫೪॥

ವ। ಮತ್ತಾ ಸುದರ್ಶನಾಬ್ಜಷಂಡಂ ಪುಂಡರೀಕಾಕ್ಷನಂತೆ ಪರಿಯುಕ್ತ ಶ್ರೀಕರಮುಮಾಗಿರ್ಪುದಂತುಮಲ್ಲದೆಯುಂ—

ಹರಿಯಂತಾಹಿಮರೋಚಿಯಂತೆ ಕಮಲೋಪೇತಪ್ರಭಾವಂ ಮಹೇ ।
ಶ್ವರನಂತಾದನುಜಾತೆಯಂತೆ ಕುಮುದಪ್ರೋದ್ಭಾಸುರಂ ಪದ್ಮಮಂ ॥
ದಿರೆಯಂತಾಗಿರಿಜಾತೆಯಂತೆ ವರಹಂಸೋದ್ಯುಕ್ತಮಾಗಿಂತು ಬಿ ।
ತ್ತರಮಾದತ್ತು ಸುದರ್ಶನಾಬ್ಜನಿಲಯಂ ಸಾಶ್ಚರ್ಯಶೋಭಾವಹಂ ॥೧೫೫॥

ದಳಿತಶತಪತ್ರದಿಂ ಸಂ ।
ಚಳಿತಶಿಖೀಮುಖಸಮಾಜದಿಂ ಧೃತಚಕ್ರಾ ॥
ವಳಯಿಂ ಸಮರಮಹೀಮಂ ।
ಡಳದವ್ಲೋಲಿರ್ದುದು ಸುದರ್ಶನಾಂಬುಜಷಂಡಂ ॥೧೫೬॥

ಗರುಡಂ ತಾನಡಿಯಿಟ್ಟು ನಿಂತಮೃತಮಂ ಕೊಂಡುಯ್ದುದಕ್ಕಿಂತುಮಿ ।
ಲ್ಲಿರಿಸಲ್ಬಾರದೆನುತ್ತುವಾಸುಧೆಯುನಿಂದ್ರಂ ತಂದು ಬಯ್ತಿಟ್ಟನೀ ॥
ಸರಸೀಗರ್ಭದೊಳಿಂಬಿನಂ ಸುರುಚಿರಸ್ವಾದುತ್ವದಿಂ ಸ್ವಚ್ಛಭಾ ।
ಸುರಶುಭ್ರತ್ವದಿನಿರ್ದುದಚ್ಛರಿಯಿನಂತಬ್ಜಾಕರಾಂತರ್ಜಳಂ ॥೧೫೭॥

ಅರವಿಂದೋದ್ಭವನಂತಿರಾವೃತರಜಂ ತಾನಾಗಿಯುಂ ಪಂಕಜೋ ।
ದರನಂ ಪೋಲ್ತೆನಸುಂ ಸ್ವಕೀಯಜನಿತ್ರಾಂತಸ್ತತ್ವಮಂ ವ್ಯಕ್ತಮಾ ॥
ಗಿರೆ ತೋಱುತ್ತಿದು ಶೋಭವೆತ್ತುದೆನುತುಂ ವಜ್ರಾಯುಧೋರ್ವೀಶನ ।
ಚ್ಛರಿವಟ್ಟೇಕ್ಷಿಸುತಿರ್ದನಾವಿಲಸದಂಭೋಜಾಕರಾಚ್ಛಾಂಬುವಂ ॥೧೫೮॥

ವ॥ ಬಟ್ಟೆಯೊಳ್ಪೊಂಕೆನೆ ಬಂದು ನಿಂದು ನಡೆನೋಡುತ್ತು
ಮಿರ್ದು ನರೇಂದ್ರಂ ಜಳಕ್ರೀಡೆಯನೊಡರ್ಚಿ ನಿಖಿಳವಾರನಾರೀಜನಂ
ಗಳ್ಗೆ ನೇಮಿಸಿದಾಗಳ್—

ಗಿಳಿಯು ಚಕೋರದಂಚೆಯು ಮಯೂರದ ಪಾರಿವದಾರಥಾಂಗಕೋ
ಕಿಳ ಬಕ ಸಾರಸಾದಿ ವಿಹಗಂಗಳ ರೂಪದಿನೊಲ್ದು ಮಾಡಿದು ॥
ಜ್ಜ್ವಳನವರತ್ನರಾಜಿಗಳ ರಾಜಿಸುವಾಜಳಯಂತ್ರಜಾಳಮಂ ।
ಘಳಿಲೆನೆ ಕೊಂಡುದೆಯ್ದೆ ನಳನಿಂದನಿತುಂ ವರಕಾಮಿನೀಜನಂ ॥೧೫೯॥

ಜಳರೂಪಮಲ್ಲದಾವೃತ ।
ಕಳಂಕಮಲ್ಲದ ಸುಧಾಂಶುಕಳಿಗಳಿವೆನೆ ಕ ॥
ಣ್ಗೊಳಿಂದುಶಿಲೆಯು ಡೊಕ್ಕರಿ ।
ಗಳನಾಗಳೆ ಕೊಂಡು ತಾನುವಾವಾನಿನಿಯುಂ ॥೧೬೦॥

ಧರಣೀವಲ್ಲಭಚಕ್ರಿಗಿಂದು ಜಳಕೇಳೀಸ್ಥಾನವಾನಾದೆನೆಂ ।
ಬುರುಸಂತೋಷದೆ ತತ್ಸರೋವರಮದೊಮ್ಮೆಯ್ವೇರ್ಕುತಿರ್ದತ್ತು ಬಿ ॥
ತ್ತರದಿಂದೆಂಬಿನವಾಗಳುಬ್ಬರಿಸೆ ಸುವ್ಯಾವೋದವಾಃಪೂರಮ ।
ಚ್ಛರಿಯಂ ಬೀಱುತಿರಲ್ಕೆ ಪೊಕ್ಕನರಸಂ ಕಾಂತಾವಳೀವ್ಯಾವೃತಂ ॥೧೬೧॥

ಪವಣಿಸಿ ನಾಭಿಮುಂಡಳಸವಾನದೆ ತೀವಿದೊಡಂ ಘನಸ್ತನಾ
ಗ್ರವನೆ ತುಡುಂಕುತಿರ್ದುದತಿಕಾರ್ಮುಕನಂತೆ ತರಂಗಹಸ್ತದಿಂ ॥
ದವೆ ನೆಗೞ್ದಿಸುದರ್ಶನಸರೋವರಮೆಂದೆನೆ ವಾರಿಕೇಳಿಗು ।
ತ್ಸವದಿನಿಳಾಧಿನಾಥನೊಡವೊಕ್ಕ ವಧೂಜನಮೇಸಗಣ್ಣಿವೋ ॥೧೬೨॥

ಕರವೆಸೆದಳ್ಪಹುಳಕರಿಣಿಯುಂ ಸುರಸಿಂಧುರಮುಂ ಸುರಾಪಗಾಂ ।
ತರದೊಳುದಗ್ರಪುಷ್ಕರಪುಟಂಗಳನೂಡಿ ನವಾಂಬುಕೇಳಿಯಂ ॥
ಎರಚಿಸುವಂತೆ ಹೊಕ್ಕರಿಗಳಿಂ ವೊಗೆದೊರ್ವರೊಳೊರ್ವರಾಗಳ !
ಚ್ಚರಿ ನೆಲೆವೆರ್ಚಿ ಪೊಯ್ದರೊಲವಿಂ ನೃಪಸೌಂದರಿಯುಂ ನರೇಂದ್ರನುಂ ॥

ವೊಗೆವೊಗೆದು ಮಳಯರುಹವಾ ।
ರಿಗಳಿಂ ದರಹಂಸದೀಪ್ತಿವೆರಸೋರಂತಾ ॥
ಮೃಗನಯನೆ ಪೊಯ್ದು ಪಿರಿದುಂ ।
ದ್ವಿಗುಣಿಸಿದಳ್ತೋರಹಾರಮಂ ನೃಪನುರದೊಳ್ ॥೧೬೪॥

ಇರವಾಗಳೆ ದೇವಿಯ ನಿಜ ।
ಗುರುಳೋಳಿಗೆ ಮುತ್ತಿನೆಸೆವ ಮಂಜರಿಯಂ ಬಿ ।
ತ್ತರಿಸುವ ತೆಱದಿಂದೊತ್ತಿದ ।
ನರಸಂ ಜೀಕೊರ್ಜವಿಯಿಂದೆ ಚಂದನರಸಮುಂ ॥೧೬೫॥

ಚೆಲ್ಲುತುಮಾಸ್ಯದಿಂ ಮಿಗೆ ಮುಗುಳ್ನಗೆಯುಂ ಚಪಳೇಕ್ಷಣಂಗಳಿಂ ।
ಚೆಲ್ಲುತುಮೆಯ್ದೆ ನುಣ್ಬೆಳಗನಂಗದ ಭಂಗಿಗಳಿಂ ವಿಳಾಸಮುಂ ॥
ಚೆಲ್ಲುತುಮುಲ್ಲಸತ್ಸರಸಿಯೊಳ್ಮೆಗೆದುಜ್ಜ್ವಲಚಂದನಾಂಬುವಂ ।
ಚೆಲ್ಲಿದಳಾಗಳಂತೆ ನೃಪಕಾಂತೆ ನರೇಂದ್ರನ ಮೇಲೆ ಲೀಲೆಯಿಂ ॥೧೬೬॥

ವನಿತೆಯರಾಗಳ್ವಸುಧೇಶನ ಲೋ ।
ಚನಸಂಜ್ಞೆಯಱತು ಸಂಭ್ರಮದಿಂ ಭೋಂ ॥
ಕೆನೆ ತುಮುಳವಾರಿಕೇಳಿಯ ।
ನೆನಸುಂ ನೆಗಪ್ಪಿರ್ಮನೋನುರಾಗದೊಳಾಗಳ್ ॥೧೬೭॥

ಮಳಯರುಹಸಲಿಲಮಂ ಜೀ ।
ಕೊರ್ಜವಿಗಳಿಂದೊತ್ತಿ ರಮಣಿಯರ್ತಮತಮುಗಾ ॥
ಗಳೆ ಸೂಸುತಿರೆ ತುಷಾರಾ ।
ವಳ ಮುಸುಕಿದ ತುಹಿನಗಿರಿಗೆ ನೃಪನೆಣೆಯಾದಂ ॥೧೬೮॥

ಸರಭಸದಿಂ ನರೇಂದ್ರನೆಸೆವುಜ್ಜ್ವಳಚಂದನತೋರಿಯಂ ನಿರಂ ।
ತರಣಿನಲೊತ್ತಿ ಜೀಕೊರ್ಜವಿಯಿಂದೊಗೆನಾಣಿಳಧಾತೆಗಳ್ಗೆ ಸೈ ॥

ತಿರದೆ ವೊಗಂಗಳಂ ತಿರಿಪಿದಾವನಿತಾವಳ ಪೋಲ್ತುದಾಸುಧಾ ।
ಕರಕರವೋಳಿಗೀಲ್ದು ಬರೆ ಬೆಂಗುಡುತಿರ್ದ ಸರೋಜರಾಜಿಯಂ ॥೧೬೯॥

ತಳೆದನುರಾಗದಿಂ ತುಮುಳಕೇಳಿಯನಾಗಳೊಡರ್ಚಿ ಕೂಡೆ ಜೇ ।
ಕೊರ್ಲಿವಿಯಿನೊತ್ತಿ ಕತ್ತುರಿಯ ನೀರ್ಗಳ ಧಾರೆಗಳಂದೆ ನಾನ್ದು ಕಂ ॥
ಗೊಳಿಸಿದುದಾವಧೂಜನವನಿತ್ತ ಸಿತಚ್ಛವಿವೆತ್ತ ಗಾತ್ರದಿಂ ।
ಬಳವದಸಂಗನಾಜ್ಞೆ ಪಲವುಂ ಬಲನಾಕೃತಿಯಾದುದೆಂಬಿನಂ ॥೧೭೦॥

ಘನಘನಸಾರಸಮ್ಮಿಳಿತಚಂದನವಾರಿಯಸಂಬುಯಂತ್ರದಿಂ ।
ತನತನಗೆಯ್ದೆ ಪೊಯ್ದು ನೆರೆ ನಾಂದನಿತುಂ ನೆಗಟ್ದವನೋಜರಾ ॥
ಜನ ವರಕೀರ್ತಿವಾರಿಧಿಯೊಳಣ್ಮಿದ ಕಾಮಿನಿಯರ್ಕಳಂತೆ ಕಾ ।
ಮಿನಿಯರದೇಂ ಮನಂಗೊಳಿಸುತಿರ್ದರೊ ದೇಹದ ಶುಭ್ರಶೋಳೆಯಿಂ॥

ಮೃಗಮದವಾರಿಯನರಸಂ ।
ವೊಗೆವೊಗೆದೆಡೆವಿಡದೆ ಪೊಯ್ವುದುಂ ತಾನೆನಸುಂ ॥
ಸೊಗಯಿಸಿದಳರಸಿ ರಸೆಯಿಂ ।
ದೊಗೆದಸಿತಾಕಾರದವನಿವನಿತೆವೊಲಾಗಳ್ ॥೧೭೨॥

ಬಟ್ಟೆಯೊಳೆ ನೃಪಸತಿ ಮೃಗಮದ ।
ಜಳಮುಂ ಭೂಪತಿಯ ಮೇಲೆ ಪೊಯ್ಯುತ್ತಿರೆ ಕ ॥
ಣ್ಗೊಳಿಸಿದನರಸಂ ರೂಪಂ ।
ತಳೆದಂಗಜನೆನಿಸಿ ಮಿಸುಗುವಸಿತಚ್ಛವಿಯಿಂ ॥೧೭೩॥

ಜನಪತಿ ಕುಂಕುಮವಾರಿಯ ।
ನನುನಯದಿಂ ಪೊಯ್ಯೆ ರಯ್ಯವೊಗಿರ್ದಳ್ ದೇ ॥
ವಿ ನಿಜಸ್ವಾಂತದೊಳುಳ್ಕಿದು ।
ದನುರಾಗಂ ತನುವಿನಲ್ಲಿ ತಲೆದೋಱಿದವೊಲ್ ॥೧೭೪॥

ಘಳಲನೆ ಕಾಶ್ಮೀರಾಂಬುವ ।
ನಿಳಾಧಿಪನ ಮೇಲೆಮೇಲೆ ಪೊಯ್ಯಲೊಡಂ ಪಾ ॥
ಟಳತಾಂಗನಾಗಿ ಮಿಗೆ ಕಂ ।
ಗೊಳಿಸಿದನಾತ್ಮೀಯತೇಜಮುಣ್ಮಿದ ತೆಱದಿಂ ॥೧೭೫॥

ಅರಸಿಯು ಘನಸ್ತನದ್ವಯ ।
ಗಿರಿಶಿಖರಕ್ಕೊದವಿದಮಳನಿರ್ಝರಧಾರಾ ॥
ಪರಿಕರಮಂ ಪಡೆದಂ ತಾ ।
ನರಸಂ. ವೊಗೆವೊಗೆದು ಪೊಯ್ದು ಮಳಯಜಜಳದಿಂ ॥೧೭೬॥

ಪರಮಸ್ನೇಹರಸಾಢ್ಯದಿಂ ಮಿಸಿಸುವಂತುತ್ಕರ್ಷಹರ್ಷಾಮೃತೋ ।
ತ್ಕರದಿಂ ಸೇಚಿಸುವಂತೆ ಸಾತ್ವಿಕತರಾತ್ಮಪ್ರೇಮಪೀಯೂಷದಿಂ ॥
ಪಿರಿದುಂ ನಾಂದಿಸುವಂತೆ ಕಾಂತೆ ಪದೆದಾಗಳ್ಪೊಯ್ದಳಂತಾಮಹೀ ।
ವರಕೋಭಾಂಗದ ಮೇಲೆ ಲೀಲೆಯೊದವಿಂ ಕರ್ಪೂರಪೂರಾಂಬುವಂ ॥

ವ॥ ಆಸಮಯದೊಳ್

ಚಳನಯನಪ್ರತಿಬಿಂಬಂ ।
ಗಳನವನೆಳವಿಾಂಗಳೆಯ್ದ ಬಳಸುವುದೆಂದಾ ॥
ಗಳೆ ಬೆದಱಿ ಕರಂ ಕೋಮಳೆ ।
ಕೊಳದಿಂ ಪೊಱಮಟ್ಟು ಕೆಲದೊಳರ್ದಳದೊರ್ವಳ್ ॥೧೭೭॥

ಜಳಕೇಳಿಯೊಳಾಗಳ್ ಸು ।
ತ್ತಲಿದ ಬಲಿಲ್ಮಡಿಯ ಪೊಳಪಿನಸಿತೋರಗನೀ ॥
ಕೊಳದೊಳಿದೆಯೆಂದು ಭಯದಿಂ ।
ಕಳದಿಯ ಕಂಧರಮನಪ್ಪಿದಳ್ ಪೆಱತೊರ್ವಳ್ ॥೧೭೮॥

ಗುರುಕುಚಯುಗಳಂ ಪೊಳೆಯು ।
ತ್ತಿರೆ ಜಳದೊಳ್ ಜಕ್ಕವಕ್ಕಿ ಮುಱುಗಿರ್ದಪುವೀ ॥
ಸರಸೀಸಲಿಲದೊಳಿನುತುಂ ।
ತರಳೇಕ್ಷಣೆ ಬಿಡದೆ ನೋಡುತಿರ್ದಳದೊರ್ವಳ್ ॥೧೭೯॥

ಬಿಡುಮುಡಿ ವಿರಾಜಿಸುವ ಕ ।
ನ್ನಡಿವೊಗವುದು ಪೊಳೆಯೆ ರಾಹು ಶಶಿಮಂಡಳಮುಂ ॥
ಪಿಡಿದು ರಸೆಗೀಯುತಿದೆಯೆಂ ।
ದೆಡೆವಿಡದಾಸರಸಿಯೊಳ್ನಿರೀಕ್ಷಿಪಳೊರ್ವಳ್ ॥೧೮೦॥

ಅಳಕಾಳಮಿಳಿತನಿಜಮುಖ ।
ಜಳಜಂ ಜಳದೊಳಗೆ ತೊಳಗಿ ನೂಪ್ರೊಳೆಯುತಿರ ॥

ಲ್ಕಳಿ ಭರದಿಂ ಜಳರುಹಮಿದು ।
ಮುಟ್ಟುಗುತ್ತಿದೆಯೆಂದು ಮುಗ್ಧೆ ತೆಗೆಯಲ್ಬಗೆದಳ್ ॥೧೪-೭॥
ಕೊಳದೊಳಗೆ ಪೊಳವ ನಿಜಕೋ ।
ಮಳತರತನುವಂ ನನೀನಲತೆಯೆಂದು ಸಮು ॥
ಜ್ಜ್ವಳನಯನಂಗಳನಲರ್ದಲ ।
ರ್ಗಳಿವೆನುತುಂ ನೋಡುತಿರ್ದಳತ್ತಮದೊರ್ವಳ್ ॥೧೪-೮॥

ವ॥ ಆಗಳವಂದಿರ ಮುಗ್ಧಭಾವಮಂ ಲಕ್ಷ್ಮೀಮತಿಮಹಾದೇವಿಗೆ ತೋಱಿ ನರೇಂದ್ರಂ ಮುಗುಳ್ನಗೆನಗುತ್ತಿರೆಯುವಾಗಳ್

ಸ್ಮರಕರವಾಳಮೂಳವೆನಿಪಾನಳತೋಳ ವೊದಲ್ತುಳುಂಕೆ ಭಾ ।
ಸುರತರಮಪ್ಪ ನುಣ್ಬೊಗರನಾನಖಮುಜ್ವಳಕಾಂತಿಯಂ ಕಡ ॥
ಲ್ವರಿಯಿಸಲಾತಳಂ ತೊಳಪ ಕೆಂಬೆಳಗಂ ಕೆದಱುತ್ತಿರಲ್ಕೆ ತಾಂ ।
ತ್ವರಿತದೆ ಪೊಯ್ದುಳಾನೃಪನ ಮೇಲೆ ನೃಪಾಂಗನೆ ಚಂದನಾಂಬುವಂ ॥

ವ॥ ಇಂತಾಗಳಿರ್ವರುಮೋರೊರ್ವರೊಳ್ ತೀವ್ರಸ್ನೇಹಸುಧಾರಸಂ ಸೂಸುವಂತೆ ಮುಳಯಜಾಂಬುವಂ ಸೂಸುತುಂ ಮನೋಜನಿತಾನುರಾಗಮಂ ಚೆಲ್ಲುತುಂ ಮದನವಶೀಕರಣಶೃಂಗಾರರಸಮುಂ ಪೊಯ್ವಂತೆ ಕಸ್ತೂರಿವಾರಿಯಂ ಪೊಯ್ಯುತುಮಿರ್ಪಾಪದದೊಳ್

ವರಕಾಂತಾಂತಃಪುರಸ್ತ್ರೀವಿತತಿವೆರಸು ವಜ್ರಾಯುಧಂ ವಾರಿಕೇಳೀ ।
ಸರದೊಳ್ಪಾನಂದದಿಂದಂ ಸುಲಲಿತಸಲಿಲಕ್ರೀಡೆಯಂ ಮಾಡುತುಂ ತಾ ॥
ನಿರೆಯುಂ ಪೋಗುತ್ತುಮಾಗಳ್ ಪವನಪಥದೊಳೊರ್ವಂ ಮಹದ್ದಿವ್ಯನಕ್ತಂ
ಚರವಿದ್ಯುದ್ದಂಷ್ಟ್ರನೆಂಬಂ ಶಿಖಿಕಣನಿಭನೇತ್ರಂಗಳಂ ನೋಡಿ ಕಂಡಂ ॥

ಇವನೆನ್ನಯ ಬಂದಣ ಭವ ।
ದ ವಿರೋಧಿಯೆನುತ್ತ ನೆನೆದು ಮುನಿದಾಗಳ್ಮ ॥
ಡುವೆನೀತಂಗಾನುಪಸ ।
ರ್ಗವನೆಂಬುಜ್ಜುಗಮನಾಂತು ವಿದ್ಯುದ್ದಂಷ್ಟ್ರಂ ॥೧೪-೯॥

ವ॥ ಇಂತು ನೆನೆದಾಗಳಾಗಸದಿಂದವನಿಗವತರಿಸಿ ವಿದ್ಯುದ್ದಂಷ್ಟ್ರಂ ನಿಜವಿದ್ಯಾಬಲದಿಂ ವಜ್ರಾಯುಧನಂ ಫಣಿಪಾಶಪ್ರಬಂಧನಂ ಮಾಡಿ, ಬೆಟ್ಟು

ಮುಂ ತಟ್ಟುವುಂ ತಟ್ಟುಗೆಯ್ದಂತಪ್ಪತಿವಿಶಾಳಮೆನಿಪ್ಪ ಪಾಸಲಿಯಂ ಸುದ
ರ್ಶನಸರೋವರದಮೇಲೆ ಗಳಲನಿಟ್ಟಿಪಿದಾಗಳ್—

ದುರಿತಕ್ರಾಂತಮಹಾಂಧಕಾರಬಿಲದೊಳ್ಬಿದ್ದಂ...ತಾಮಾರ್ಗ (?)।
ಳೊರ್ವನಡೆನೋಡಿ ಕಾಣದೆ ಕಣ್ಗೆಟ್ಟು ಬಾಯ್ಬಿಟ್ಟು ಭೀ (?) ॥
ತರಸಾವೇಷ್ಟಿತಚೇತರಾಗಿ ವರಕಾಂತಾಂತಃಪುರಸ್ತ್ರೀಯರಿ।
ರ್ದಿರವಂ ಭೋಂಕೆನೆ ಕಂಡನಾಸರಸಿಯೊಳ್ವಜ್ರಾಯುಧೋರ್ವೀವರಂ ॥

ತಾನಿಂತು ನಿಟ್ಟಿಸಲ್ಪೆಱ।
ತೇನಾಗಳೆ ತನ್ನ ಮಹಿಮೆಯಿಂ ಪನ್ನಗಪಾ ॥
ಶಾನೀಕಂ ಪರಿಪಡೆಯುಂ।
ಭೂನಾಥಂ ನೆನೆದನಾಶಿಲಾಹತಿಕೃತಿಯಂ ॥೧೪೪॥

ಕರಕಳಿತಸಲಿಲಯಂತ್ರದಿ।
ನಿರದಾಗಳ್ ಪೊಡೆದು ನೂಂಕಿ ಸಿಡಿದು ನಭೋಂತಂ ॥
ಬರಮಾಶಿಲೆ ಪಾಱಿ ದಿಶಾಂ।
ತರದೊಳ್ಯತಚೂರ್ಣಮಾಗಿ ಬಿೞ್ದತ್ತಾಗಳ್ ॥೧೪೫॥

ವ॥ ಅದಂ ಕಂಡು ವಿದ್ಯುದ್ದಂಷ್ಟ್ರನಪ್ಪ ವಿದ್ಯುದ್ದಂಷ್ಟ್ರಂ ಹತ
ಪ್ರಭನಾಗಿ ಪೋಗೆ

ಘನಪಟಲಂ ಪಿಂಗಲ್ತ।
ನ್ನನುಪಮಿತ ಸಹಸ್ರಕರಸನುನ್ವಿತಮೆಸೆದಿ ॥
ರ್ದಿನನಂತಿರ್ದಂ ಸರಸಿಯೊ।
ಳನಿತುಂ ವನಿತಾಸಮೇತಮಾನರನಾಥಂ ॥೧೪೬॥

ವ॥ ಅಂತಿರ್ದ ವಜ್ರಾಯುಧಮಹೀಕಾಂತಂ ಸಕಳಕಾಂತಾಸಮು
ನ್ವಿತಂ ಸುದರ್ಶನಸರಸೀಸಲಿಲಸಮುತ್ಸಾರಿತನಾಗಿ,

ತತ್ಸರಸೀತಟದಮಳೋ।
ದ್ಯತ್ಸ್ಫಟಿಕಕಾಂತಪಟ್ಟಶಿಲೆಯೊಳ್ ವಸುಧಾ ॥
ಭೃತ್ಸ್ತೇವ್ಯನಿರ್ದನಾಯೋ।
ಚಿತ್ಸಮಿತಿಸಮೇತಮಲ್ಲಿ ಮಾಪೊಗೞಯುತ್ತುಂ ॥೧೪೭॥

ದೇವಿಯು ಸಲ್ಲಸತ್ಪುಳಕಿತಾನುಳ ಗಾತ್ರ.....ಯಷ್ಟಿರಾ ।
ಗಾವಿಳಲೋಚನಂ ವಿಲುಳಿತಾಳಕಲಗ್ನಕಪೋಳಭಿತ್ತಿ ಸೌ ॥
ಖ್ಯಾವಹವಿಭ್ರಮಾಧರಪುಟಂ ಪರಿಧೌತಸುಪತ್ರವಲ್ಲಿಯ ।
ಪ್ಪಾವಿಳಸತ್ಕುಚಂ ಮನಮನಿರ್ಕುಟಿಗೊಂಡುದು ತನ್ಮಹೀಶನಾ ॥೧೯೦॥

ಗಳಿತಾನೇಕೋದ್ಗಮಾಳಂಕರಣನುವಿರಳಾಲಗ್ನಚೇಲಂ ಸಮುದ್ಯ ।
ತ್ಪುಳಕಾಢ್ಯಂ ದೋರ್ದ್ವಯಾಗ್ರಸ್ಥಿತಕರಕಮಳಂ ಕ್ಷಾಳಿತಾಲೇಪನಂಪಾ॥
ಟಳಿತಾಕ್ಷಂ ಪಾಂಡರೋಷ್ಠಂ ಶಿಥಿಲಕಚಭರಂ ಸೀತ್ಕೃತಿವ್ಯಕ್ತವಕ್ತ್ರಾ ।
ವುಳಪದ್ಮಂ ಕಣ್ಗೆ ಚೆಲ್ವಾದುದು ಹಿಮುವೃತಕಾಯಂ ವರಸ್ತ್ರೀನಿಕಾಯಂ ॥

ಪುಟ್ಟಿರ್ಗರ್ಜಿರ್ದಂಗಜಾಸ್ತ್ರಂ ।
ಗಳ ಬಳಗಮಿದೆಂಬ ತೆಱದಿನಾದರ್ದ್ರತೆವಡೆದು ॥
ಜ್ಜ್ವಳಿಪಂಗಭಂಗಿಯಿಂ ಕ ।
ಣ್ಗೊಳಿಸಿರ್ದುದು ಬಳಸಿ ಬಳಸಿ ನಾರೀನಿವಹಂ ॥೧೯೪॥

ಸಮುಸಂದಾನುಳಯಜಕುಂ ।
ಕುಮುಕಸ್ತೂರೀಜಳಾರ್ದ್ರತನುತತಿಯಿಂ ತ ॥
ತ್ಪ್ರಮುದಾಜನವೆಸೆದುದು ರತಿ ।
ರಮಣನ ಪೊಗರೆಸೆವ ಕುಸುಮಶರಸಮಿತಿಯವೋಲ್ ॥

ಜಲಜಪರಿಮಳಕೆ ಜಿನುಗು ।
ತ್ತಲಿಗಣಮಿರೆ ವನಿತೆಯರ್ಕಳಂಕಿದರೆಮ್ಮಂ ॥
ಸಲೆ ತಮ್ಮಯ ವಿಳಸತ್ಕುಚ ।
ಕಲಶಂಗಳನೆನುತುಮುಲಿವ ತೆಱನಾಯ್ತು ಕೊಳಂ ॥೧೯೬॥

ವ॥ ಅಗಳ್ ಸಮಸ್ತವಸ್ತ್ರವಿಚಿತ್ರಭೂಷಣಪ್ರಸರಪಟ್ಟವಳಿಯಂ ತರಿಸಿ

ಎರಡಣಮಿಲ್ಲದೊಲ್ಮೆಯನೆ ಕನ್ನಡಿಪಂತಿರೆ ದೇವಿಯುಂ ಮನೋ ।
ಹರಮಯಮಾಗಲಂಕರಿಸಿ ತಾನುಮಲಂಕೃತನಾಗಿ ಮತ್ತಮಾ ॥
ವರವನಿತಾಜನಕ್ಕೆ ಬಗೆಯೊಳ್ಬಯಸಿರ್ದ ವಿಚಿತ್ರಭೂಷಣಾಂ ।
ಬರಮುಮನಿತ್ತು ಧಾರಿಸಿದಂ ಸರನಾಥನಮತ್ಸ್ಯಭೂಜಮುಂ ॥೧೯೭॥

ವ॥ ತದನಂತರದೊಳ್

ಇದು ಮೊವಿಂಗಿದು ಮಾಧವೀತತಿಗಿದುದ್ಯತ್ಫುಲ್ಲಮಲ್ಲೀಕುಳ ।
ಕ್ಕಿದು ಚಂಚಲ್ಲತಿಕಾಗೃಹಕ್ಕಿದು ವಿಭಾಸ್ವದ್ಯಾರಿಕೇಳೀಸರ ॥
ಕ್ಕಿದೆನುತ್ತಾಗಳೆ ಬೇಱಿವೇಱಿ ಪೆಸರ್ಗೊಂಡಿತ್ತಂ ಪಸಾಯಂಗಳಂ ।
ಪದೆಪಿಂದಾವನಪಾಲಕಂಗೆ ಪಸವೋಡಲ್ಕಾಮಹೀಪಾಲಕಂ ॥೧೯೪॥

ಚಪಳೋದ್ಯನ್ನಯನಾಂಶುವಿಂದೆ ಚಪಳಾಳಶ್ರೀಯನಂತಾವನೋ ।
ಚ್ಛಪಯೋದಕ್ಕೆ ಸಮಂತು ಸಂಗಳಿಸುತುಂ ಕಾಂತಾಸಮಾಜಂಬರ ॥
ಲ್ಕೆ ಪೊದಱ್ದಾತ್ಮಸತೀಕಪೋಳತಟದತ್ತಾಪಾಂಗದೇಶಂ ಧರಾ ।
ಧಿಪನುದ್ಯಾನಮನಾಗಳಿಂತು ಪೊಱಮಟ್ಟಂ ಲಬ್ಧಲೀಲೋದಯಂ ॥೧೯೫॥

ವ॥ ಇಂತು ಪೊಱಮಟ್ಟ ಸತೀಸಮನ್ವಿತಂ ವಜ್ರಾಯುಧನರೇಂದ್ರಂ
ಪಟ್ಟವರ್ಧನಗಜೇಂದ್ರಾರೂಢನಾಗಿ

ಜಳಕೇಳೀಜನಿತಪ್ರಮೋದದೊದವಿಂ ವಜ್ರಾಯುಧೋರ್ವೀಕನು ।
ಜ್ಜ್ವಳಜೆತ್ತಂ ನೆಗೞ್ದಾನೃಪಾಂಗನೆಯ ಜೆತ್ತಂ ಲೀಲೆವೆತ್ತಿರ್ದುವೀ ॥
ಗಳೆನುತ್ತುಂ ಘನವಾರ್ಗಲಕ್ಷ್ಮ್ಮಗೆನಸುಂ ಪೇೞ್ಲೆ ನೀಳ್ದಂತೆ ಮಂ ।
ಗಳನಾನಾನಕನಾದಮೆಯ್ದಿತು ನಭೋಭಾಗಮಂ ಬೇಗದಿಂ ॥೧೯೬॥

ಪರಿವೃತವಾಗಿ ಬರ್ದ ಬಲಯಾನಸಮುದ್ಭವರೇಣುಜಾಳಮು ।
ದ್ಧುರಮದಸಿಂದುರೋತ್ಕರನಿನಾದತುರಂಗಮಸಂಭ್ರಮಸ್ವರಂ ॥
ಬೆರಸು ದಿಶಾವಳೀಬಹುಗುಹೋದರಮಂ ಪ್ರದಿದಾಕ್ಷಣಂ ಪುಗು ।
ತ್ತಿರೆ ಪುಗುತುಂದನಾತ್ಮಪುರಿಗುತ್ಸವದಿಂ ಮನುಜೇಂದ್ರಚಂದ್ರಮಂ ॥೧೯೭॥

ಸುರಪುರಿಯಂ ಶಕ್ರಂ ಸಭೆ ।
ವೆರಸೊಲವಿಂ ಪುಗುವ ತೆಱದೆ ಪೊಕ್ಕಂ ಕೋಭಾ ॥
ಕರಮೆನಿಪ ರತ್ನಸಂಚಯ ।
ಪುರಮಂ ವಜ್ರಾಯುಧಂ ಸತೀಯುತನಾಗಳ್ ॥೧೯೮॥

ಜನತಾನಂದಾಸ್ಪದಂ ಸಂಪದಮಖಿಳಬುಧವ್ರಾತರಕ್ಷಾರ್ಥಮರ್ಥಂ ।
ಘನರಾಜ್ಯಂ ಲೋಕಪೂಜ್ಯಂ ಸಕಳಸುಕೃತಪಾತ್ರಂ ಚರಿತ್ರಂ ಜಿತಾರಾ ॥
ತಿನಿಕಾಯೋದ್ಯದ್ಬಳಂ ದೋರ್ಬಳಮುಪಜಿತಸತ್ವಂ ಲಸಜ್ಜೆತ್ತಮಾಗಿಂ ।
ತೆನಸುಂ ತಾನಿರ್ದನಂತಾಕ್ಷ್ಮಿತಿಪತಿ ಸತತಂ ಸೂಕ್ತಿಸಂದರ್ಭಗರ್ಭಂ ॥೧೯೯॥

ಗದ್ಯ|| ಇದು ವಿನಮದಮರೇಂದ್ರಮೌಳಿಮಣಿಕಿರಣಮಾಳಾಪರಾಗಪರಿರಂಜಿತ ಚರಣಸರಸೀರುಹರಾಜಿತಪರಮಜಿನರಾಜಸಮಯ ಸಮುದಿತಸದಮಲಾಗಮಸುಧಾ ಶರಧಿಶರದಿಂದು ಶ್ರೀ ಮಾ ಘ ಣ ಂ ದಿ ಪ ಂ ಡಿ ತ ಮುನೀಶ್ವರ ಮನೋಜನಿತನಿರುಪ ಮದಯಾರಸಸರಸೀಸಂಭೂತಸಂಭವಾಮಳ ಸುಕವಿ ಕಮಲಭವ ವಿರಚಿತಮಪ್ಪ

ಶಾಂತೀಶ್ವರ ಪುರಾಣದೊಳ್

ವಜ್ರಾಯುಧಮಹಾರಾಜ ರಾಜ್ಯವರ್ಣನಂ

ನವಮಾಶ್ವಾಸಂ ಸಂಪೂರ್ಣಂ.

ಶಾಂತೀಶ್ವರ ಪುರಾಣಂ.

॥ ಏಕಾದಶಾಶ್ವಾಸಂ ॥

ಶ್ರೀಯೆಸಕಂ ಸುಕೃತಸುಖ ।
ಶ್ರೀಯೆಸಕಂ ಪುದಿದು ಪದೆಪುವಡೆದಿರ್ದಂ ವಾಕ್ ॥
ಶ್ರೀಯೆಸಕಮನಿಂತು ಜಗಂ ।
ಜೀಯೆನೆ ಜಿನಪದಪಯೋಜರಾಜಮುರಾಳಂ ॥೧॥

ವ॥ ಇಂತು ಜಳಕ್ರೀಡೆಯಂ ಮಾಡಿ ಬಂದು ವಜ್ರಾಯುಧನರೇಂದ್ರನಾರಮಣೀಯಮಪ್ಪ ದೇವರಮಣೋದ್ಯಾನವಿಹಾರಮಂ ವಾರಿಕೇಳ್ದೀವಿಸ್ತಾರಮಂ ಮಂತ್ರಿಮಂಡಳಿಕದಂಡನಾಥಸಾಮಂತಾದಿಗಳ್ಗೆ ಸಾನಂದದಿಂ ಪೇೞುತ್ತುಮಿರ್ಪಾಗಳ್

ಭೂನಾಥನ ತೆಱದಿಂ ಪಿರಿ ।
ದಾನುಂ ಜಳಕೇಳಿಗೆಳಸಿದಂ ತತ್‌ಕ್ಷಣದೊಳ್ ॥
ತಾನೆಂಬಂತೆವೊಲಪರಾಂ ।
ಭೋನಿಧಿಗೆ ದಿನಾಧಿನಾಥನಭಿಮುಖನಾದಂ ॥೨॥

ಮಿಸುಗುವ ಕಾಂಚನಾಚಳದ ಕಾಂತಿಕಳಾಪಮನೆಯ್ದೆ ಪೀರ್ದು ತ ।
ನ್ನೆಸಕದ ಕಾಯ್ಪಿನುಗ್ರತೆಯಿನಾತಪಮಾತಪನೀಯದೀಧಿತಿ ॥
ಪ್ರಸರಮನಿಕ್ಕಿಸಲ್ನೆಱಿಯುದಿಂತು ಮಗುೞ್ದುದೆಂಬಿನಂ ವಿರಾ ।
ಜಿಸಿದುದು ಪೊಂಬಿಸಿಲ್ಪುದೆಪಿನಿಂದಪರಪ್ರಹರಾರ್ಧಕಾಲದೊಳ್ ॥೩॥

ಬಂದೊಲವಿಂದಮೆನ್ನೊಳೊಡಗೂಡಿಯುಮಂತಿರದತ್ತ ವಾರುಣೀ
ಸುಂದರಿಗಾಸೆಗೆಯ್ದನಿನನೆಂದು ಕರಂ ಮನದಲ್ಲಿ ಪೇಸಿ ಮಾ ॥
ಧ್ಯಂದಿನಲಕ್ಷ್ಮಿ ನೂಂಕೆ ಪವಮಾನಪಥಾಂತರದಿಂ ಕೆಲಕ್ಕೆ ಬೀ ।
ೞ್ವಂದದೆ ಭಾನು ತಾನಿರದೆ ಪೊರ್ದಿದನಿಂತಪರಾಚಳೇಂದ್ರಮಂ ॥೪॥

ತಿಮಿರಂ ಮೆಲ್ಲನೆ ಪೊಣ್ಮೆ ಪೂರ್ವದಿಸೆಯಂ ತಾಂ ಪೊರ್ದೆ ಭೂ
[ಕಾಳಿ ಬಂ ।
ದು ಮಹೀಭೃತ್ಕುಹರಂಗಳಂ ಪೊಱಗನಾಗಳ್ಪೊರ್ದೆ ಪೋತಪ್ರತಾ ॥
ನಮಣಂ ಮೂತ್ಯವಿಹಂಗಪಕ್ಷಪುಟದೊತ್ತಂ ಪೊರ್ದೆ ತಮ್ಮಿರ್ಕ್ಕದಾ ।
ಣಮನಾಕುರ್ಮಟಕೋಟಿ ಪೊರ್ದೆ ರವಿಯುಂದಸ್ತಾದ್ರಿಯಂ ಪೊರ್ದಿದಂ ॥
ವರುಣನ ವಕ್ಷದೊಳ್ಪೊಳೆವ ಪಚ್ಚೆಯ ರತ್ನಮಯೂಖವಮೂಳೆ ತ ।
ಬ್ಬಿರೆ ನವದೂರ್ವೆಗಳ್ವೊಗೆದ ಕಾಷ್ವಲಮೆಂಬತಿಶಂಕೆಯಿಂ ಕ್ಷುಧಾ ॥
ತುರವೆಡೆಗೊಂಡು ಕೊಂಡು ರಥಮಂ ಕಡುವೇಗದಿನೊಯ್ದುದಾಹಯೋ ।
ತ್ಕರವಿರದೆಂಬಿನಂ ದಿನಪನೆಯ್ದಿದನಂದಪರಾಚಳೇಂದ್ರಮಂ ॥೬॥
ವನನಿಧಿಯು ಗುಣ್ಪನೀಕ್ಷಿಪ ।
ವಿನೋದದಿಂದೆಬ್ಬು ನಿಂದ ವರುಣನ ವಿಳಸ ॥
ತ್ಕನಕಮಕುಟಾಗ್ರರತ್ನಮಿ ।
ದೆನಿಸಿದುದಿನಬಿಂಬಮಸ್ತಗಿರಿಮಸ್ತಕದೊಳ್ ॥೭॥
ಪೊಣ್ಮಿದಪಟುತೆ [1]ಕಳಂಕದಿ' ।
ನುಣ್ಮೆದ ನಿಸ್ತೇಜದಿಂದಮಸಾದ್ರಿಗೆ ವಂ ॥
ದಾಣ್ಮನನೀಕ್ಷಿಸಲಾಱದೆ ।
ಕಣ್ಮುಚ್ಚುವ ತೆಱದೆ ಮುಗಿದುದಬ್ಜಸಮೂಹಂ ॥೮॥
ಬಿಸರುಹಮಿತ್ರನೆಂದೆನಿಸಿದೆಮ್ಮನನೋವದೆ ರಾಜಬಾಧೆಗೊ ।
ಪ್ಪಿಸಿ ನೆಱಿ ಸಾರ್ದನೋಲಗಿಪ ಭೃಂಗ[2]ಘಟಾವಳಿ ಬಿಟ್ಟು [2]ಪೋಯ್ತು ತ ॥
ಟ್ಟಿಸೆವ ವಿಕಾಸಲಕ್ಷ್ಮಿ ಪಗೆಯಂ ನೆಱಿ ಪೊರ್ದಿದುದೇವುದೆಂತು ಜೀ ।
ವಿಸುವುದೆನುತ್ತೆ ಮೂರ್ಛೆಗಸುವವೋಲ್ಮುಗಿದತ್ತರವಿಂದಸಂಕುಳಂ ॥೯॥
ಲುಳಿತವಿಳಾಸಮಗ್ಗಿ ದಿನನಾಥವಿಯೋಗದೊಳಾದವಸ್ಥೆಯ ।
ಗ್ಗಳಿಸಿರೆ ಕಂಡು ತಾಂ ನಲವಿನಿಂ ನಗುತುಂ ನೆಲೆವೆರ್ದೆ ರಂಜಿಪ್ಪ ॥
ತ್ಪಳನಿಗೆ ಕೋಪದಿಂ ಪ್ರದಿದು ಪದ್ಮಿನಿ ಪಲ್ಮೊಱಿವಂದಮಾಯ್ತು ಕು ।
ಟ್ಮಳತಸರೋರುಹೋದರಗತೋನ್ಮದಭೃಂಗರುತೋತ್ಕೃತಸ್ವನಂ ॥೧೦॥

ಪಾ—1. ಕಳಂಕದೆ. 2. ಘಟಾಳಿವಿಸುಟು.

ಇನನ ವಿಯೋಗಾವಸ್ಥೆಯ ।
ದೆನಗಂ ನಿನಗಂ ಸಮಾನಮೆನುತುಂ ಮುನಿವ ॥
ಜ್ಜಿನಿಯ ಕೆಲದಲ್ಲಿ ಕೋಕಾಂ ।
ಗನೆ ಕಣ್ಬಸಿಯಂ ಕಟಲ್ಲಿ ಖೇದಿಸಿತಾಗಳ್ ॥೧೧॥

ವಿರಹಾವಸ್ಥೆಯನಪ್ಪುಕೆಯ್ದು ಪಿರಿದುಂ ಸುಯ್ವೆಂಕೆಯಿಂ ಪಂಕಜೋ ।
ತ್ಕರಮಂ ಕಂದಿಸುತುಂ ನಿರರ್ಗಳಗಳದ್ಬಾಷ್ಪಾಂಬುಪೂರಂಗಳಂ ॥
ಸದಸೀವಾರಿಗೆ ಪೆರ್ಚನುದ್ಭವಿಸುತುಂ ಕಂಠಂ ಕರಂ ಬೀಗಿದಾ ।
ಸ್ವರದಿಂ ವಿಹ್ವಳಿಸುತ್ತುಮಿರ್ದುದತಿದೀನಾಲೋಕಕೋಕವ್ರಜಂ ॥೧೨॥

ನಳನೀವೃಂದಂ ವಿಕಾಸಾಭ್ಯುದಯ[1]ಮುಡುಗಿ[1] ಸಂಕೋಚಮಪ್ಪಂದಮಂ ಪ|
ಜ್ಜಳಿಸುತ್ತುಂ ನಾಡೆ ನೀಳೋತ್ಪಳನಿ ನಗುವುದಂ ಚಕ್ರವಾಕಂ ವಿಯೋಗಾ||
ತುಳತೀವಾವಸ್ಥೆಯಿಂದಂ ನೆಜಕಿ ಮಱುಗುವುದಂ ನೋಡಲೇವಯ್ದಿದಂತಾ।
ಗಳೆ ತಾನಸ್ತಾಚಳೇಂದಾವ್ರಗ್ರದಿನಿಜಿದಪರಾಂಬೋಧಿಯಂ ಪೊಕ್ಕನರ್ಕಂ ॥

ಬಡಬಾನಳನ ಶಿಖಾವಳಿ ।
ಕುಡಿಯಿಟ್ಟುದು ನೆಗೆದು[2]ಮೇಲೆ ವಳಗಳೊಳೆನೆ[2] ಕೆಂ ॥
ಪಿಡಿದಡರ್ದು ನಾಡೆ ಪಡುವಣ ।
ಕಡಲೆಸಮುಂ ಮಿಸುಗೆ ಮುಱುಗಿದಂ ಬಿಸಜಸಖಂ ॥೧೪॥

ವರುಣಂಗಿಕ್ಕುವ ಚಾಮರೀಚಮರಜಾತಾಲೋಲಪಾತಾಹತೋ ।
ತ್ಕರದಿಂದಂಜನಕುಂಜರೇಂದ್ರದ ಕನತ್ಕುಂಭಾಗ್ರಸಿಂಧೂರಭಂ ॥
ಧುರರೇಣುಪ್ರಕರಂಗಳಂ ಪಡೆದು ಪತ್ತಿತ್ತೆಂಬವೋಲಂಬರಾಂ ।
ತರಮಂ ತಟ್ಟು ವಿರಾಜಿಸುತ್ತೆಸೆವ ಸಂಧ್ಯಾರಾಗರುಗ್ಮಂಡಳಂ ॥೧೫॥

ಅಂಬರಮದು ಮಿತ್ರವಿಯೋ ।
ಗಂ ಬೇಗದೊಳಾಗಲಾಗಳುಬ್ಬಿಗದಿಂ ಕಾ ॥
ಶಾಂಬರಮಂ ತಳೆದುದು ತಾ ।
ನೆಂಬಿನಮಾಸಂಜೆಗೆಂಪಿನಿಂ ರಂಜಿಸುಗುಂ ॥೧೬॥

ತಾನೊಗೆದತ್ತು ಕಟ್ಟಲೆ ಗತಪ್ರಭನಾಗಿ ರಜೋಭರದಿಂದೆನು ।
ತಾನಿಮಿರ್ದಸ್ತಶೈಳಶಿಖರಾಗ್ರದಿನಾಗಳೆ ಭಾನು ಪಶ್ಚಿಮಾಂ ॥

ಸೂ—1. ಮುಡಿಸೆ 2. ಮೇಲ್ವಲಿಗಳೆಂದಿದ್ದಲ್ಲಿ ಜೆನ್ನಾಗಿಲ್ಲ.

ಭೋನಿಧಿಯಲ್ಲಿ ಬೀಲ್ವ ಪದದೊಳ್ ಪೊಂಪಿಂಗಿದ ರಾಗಮುಂಬರ ।
ಸ್ಥಾನಮನೆಯ್ದಿ ತಲ್ತುದೆನೆ ಸಂಜೆಯ ಕೆಂಪಿನ ಸೊಂಪು ರಂಜಿಕುಂ ॥೧೩॥

ಇನನ ವಧೂಟಿಯರೆಂಬೀ ।
ಮುನಿಸಿಂದಿರದೆಯ್ದಿ ಮುತ್ತಿ ಗಳಗರ್ಜನೆಗೆ ॥
ಯ್ವನುಪಮತವೋಭಟರ್ಗಾ ।
ಮೆನೆ ಜಿನುಗುತ್ತಿರ್ದುವಳಿಗಳಬ್ಜಕರದೊಳ್ ॥೧೪॥

ನಿಮಿರ್ದಾಗಳ್ದೀಳ್ದಜಾಂಡೋದರಮನವಿರಳಾಕಾರದಿಂ ತೀವಿ ದಿಕ್ಚ ।
ಕ್ರಮನೆತ್ತಂ ಸುತ್ತಿ ತಲ್ತಿಪ್ಪೆಯ್ದಖಿಳಜಳಧಿಕಲ್ಲೋಲಜಾಳಕ್ಕೆ ಸಂಚಂ ॥
ಭಮೆನಿಪ್ಪಾವರ್ತನಕ್ರೀಡೆಯನೊದವಿಸುತುಂ ಪರ್ಬಿದತ್ತುರ್ವಿ ಸಂಧ್ಯಾ ।
ಸಮಯಪ್ರೌದ್ಭೂತಚೈತ್ಯಾಯತನತತಿಯ ಗಂಭೀರಭೇರೀನಿನಾದಂ ॥೧೯॥

ವ ॥ ಆಸಮಯದೊಳ್ ರಮಣೀಯಮಪ್ಪ ರತ್ನಸಂಚಯಪ್ರಕರದ ಪಣ್ಯಾವಾಟದ ವಾರಾಂಗನೆಯರ ಗಮನದೆ ವಾಸಿಸಲಿಕ್ಕಿದಗರುವ ಧೂಪ ಧೂಮಲೇಖೆಯನಗೆಯೆತ್ತಿ ವಿಟಜನದ ಮನಕ್ಕೆ ಮನಸಿಜನೆ ಕೂರಸಿಯ ಕರ್ವೋಗರ ಸುರ್ವಿದೆಂಬ ಸಂಕೆಯನುಂಟುಮಾಡಿಯುಂ। ಕುಸುಮಾಯುಧನ ಸಾಯಕಾಧಿದೇವತೆಯರಂತೆಸೆವ ಮಾಲಾಕಾರನಾರಿಯರ್ನೆಗಪಿದ ಪೂಮಾಲೆಯ ಪರಿಮಳಮುಮಂ ಸುಯ್ಯ ಸವಿಗಂಪುವನೊಡಗಲಿಸಿ ಮಧುಕರಂಗಳಂ ಮರುಳ್ಗೊಳಿಸಿಯುಂ।ಕುಸುಮಾಸ್ತ್ರನ ಶಸ್ತ್ರಂಗಳ್‌ಮೆಯ್ಯೊಳ್ನೆಯ್ದೊಡೆವಂತೆ ಚೇಟಿಯರ್ತೊಡೆದಂಗನಾಂಗಾನುಲೇಪನದ ಸುರಭಿಪರಿಮಳಮಂ ತೆರಳ್ಚಿ ವಿಟಜನಶ್ರೇಣೀಧೂಪ್ರಾಣಕ್ಕೆ ಪಾರಣೆಯನೊಡರ್ಚಿಯುಂ।ಮನಸಿಜನ ಮೋಹನಬಾಣಂಗಳಗಳ್‌ದೊಂಗಲಂತೆಸೆವ ರಮಣಿಯರನಿಳ್‌ಯ ತುಱಂಗಲನೆತ್ತಿ ಕಾಮುಕಜನದ ಮನದೊಡನೆ ತೂಗಾಡಿಯುಂ। ಮಣಿಮತ್ತವಾರಣಂಗಳೊಳ್ಕಳ್ಪರ್ ಕಾಂತಾಜನದ ಧಮ್ಮಿಲ್ಲಮಲ್ಲಿ ಕಾಕುಟ್ಮಳಂಗಳನಲರ್ಚಿ ಸವಪರಾಗಪ್ರಸರಮಂ ದೆಸೆದೆಸೆಗೆ ಪಸರಿಸಿಯುಂ।ಉಪರಿಭೂಮಿಕೆಯ ಮಲಗುಗಳೊಳ್ ಮನಃಪ್ರಿಯರ ವಾಮಾಂಕವಿನ್ಯಸ್ತರಾಗಿ ದೆಸೆವೆಱೆಯೆ ಬಾಜಿಸುವ ವನಿತೆಯರ ವಿಪಂಚಿಯ ಸುಸ್ವರಮನಂಜರಮಾಗಿ ಸಗರಿಯೊಳ್ತಿಕ್ಕನೆ ತೀವಿಯುಂ, ರಮ್ಯಹರ್ಮ್ಯಂಗಳ ಪರಿಸರಸರೋವರಂಗಳ ಸರೋಜಪರಾಗ

ಪರಿಕಳಿತಸಲಿಲಕ್ಕೆ ವಳಗಣಾನರ್ತನಮನುದ್ಭವಿಸಿಯುಂ । ವಿಕಾಸಲಕ್ಷ್ಮ್ಮಿಯ ಬರವಿಂಗೆ ತೆಱಪುಗುಡಲಿರ್ದ [1]ಕುವಳಯಂಗಳಿಸಲ್ಗಿಳೊಳ್ಪೊಕ್ಕು[1] ನಗೆಯ ನೊಯ್ಯನಲರ್ಚಿಯುಂ। ನಿಜಾಗ್ರಜನಪ್ಪ ನಿಶಾಕರನ ಕಯ್ಪೋಂಕು ಸಮನಿಸಲಾಗದೆಂದು ಕುಟ್ಮಳಿತಮಾದ ಕಮಳಂಗಳೊಳಾಕಂಪಮನೊದವಿಸಿಯುಂ।ನಳನೀದಳಂಗಳೊಳ್ಕೆಱಲ್ದು ಬಿರಿಯಿಸುವ ಜಕ್ಕವಕ್ಕಿಗಳೊ[2]ಳುಣ್ಮಿದ[2] ಮದನಾನಳನ ಜವ್ವನಮನೊದವಿಸಿಯುಂ । ಜಿನಭವನಂಗಳಂ ಬಲವರ್ಪಲಲನೆಯರ ಲಲಿತಗೆಯ ಪ್ರಣಾದಮುಂ ತಟಿಸ್ಫೋಟಮುದ್ದು ಪೆರ್ಚಿಸಿಯುಮಿಂತು ಸಾಯಂತನಸಮಿಧಾರಣಂ ತೀಡುತಿರ್ಪಾಗಳ್—

ಪದೆದೀಗಳ್ ರವಿಸಂಜೆವೆಣ್ಣ ನಳಪಿಂ ಕೊಂಡೊಯ್ದನೋವೆನ್ನ ಸಂ ।
ಗದಿನಿರ್ದೆಂಬ ವಿಷಾದವಾದಮದು ಮೆಯ್ವರ್ಚಲ್ ಜಗದ್ಭ್ರಾಮಿನೀ ॥
ಹೃದಯಂ [3]ಕತ್ತಲಿಸಿ[3]ತ್ತೆನಿಪ್ಪ ತೆಱದಿಂ ತಾನಿಂತು ತಟ್ಟುರ್ವಿ ಪ ।
ರ್ವಿದುದೋರಂತೆ ಕರಂ ವಿಗುರ್ವಿಸಿ ತಮಿಸ್ರಾನೀಕಮಾಲೋಕಮುಂ ॥

ರವಿಕಾತಾಪದಿಂದೆ ಹೃದಯಂ ಮಿಗೆ ಹೊತ್ತಿ ಧರಿತ್ರಿಯಾಸ್ಯದಿಂ ।
ದವಿರಳಮಾಗಿ ಮಿಕ್ಕೊಗೆವ ಕರ್ವೊಗೆ ತಾನೆನೆ ತನ್ಮಹೀಗುಪಾ ॥
ನಿವಹದಿನುಣ್ಮಿ ಪೊಣ್ಮಿ ಪೊಱಪಾಯ್ದಿ ತದಾಗಳೆ ನೋಡೆ ನೋಡೆ ಭೂ ।
ಭವನಮನೆಯ್ದೆ ಪರ್ವಿದುದು ದುಷ್ಟಮಹಾಂಜನಪುಂಜಮೆಂಬಿನಂ ॥೦೧॥

ಮೆಟ್ಟಿದುದಲ್ಲದಿಲ್ಲಲಿ೦ದ ಭೂತಳಮೆಣ್ದೆಸೆಗಳ್ನಭಸ್ಥಳಂ ।
ತೊಟ್ಟನೆ ಮಾಯಮಾಯ್ತು ತನುವಿರ್ದಸುವಿಲ್ಲೆನುತುಂ ಕರಾಗ್ರದಿಂ ।
ಮುಟ್ಟುತುಮಿರ್ದ ತಾಣದೊಳೆ ಸುಮ್ಮನೆ ವಿಸ್ಮಯದಿಂ ಜನೋತ್ಕರಂ ॥
ನಟ್ಟವೊಲಿರ್ಪನಂ ನಿಮಿರ್ದು ಪರ್ವಿದುದುರ್ವಿ ಮಹತ್ತಮುಂ ತಮುಂ ॥೦೨॥

ಎಡಗಯ್ಯಿಂ ನೀವಿಯಂ ಸಾರ್ಚುತುಮುರಸಿಜದೊತ್ತಂಬದಿಂ [ಬಳ್ಕುತುಂ ಸೋ।
ರ್ಮುಡಿಯಂ ಸೈತೊತ್ತುತುಂ ನೂಪ್ಪುರಮನೆ ಪದದಿಂದುರ್ಚಿ ಕಯ್ತಿಕ್ಕುತುಂ [ತುಂ ಕ ॥
ಳ್ಗುಡಿವೆಳ್ಪಿಂಗಂಜಿ ಜೇನಾಂಶುಕದ ಸೆಱಗನಡ್ಡಯ್ಸುತಂ ನಾಣಿಯುಂ ಮೆ ।
ಲ್ಲಡಿಗೆಂಟುಂ ಧಾತ್ರಿಯಂ ಜಿತ್ರಿಸುತುಮುಸತಿಯರ್ಪೋದರಿಂತತ್ತಮಿತ್ತಂ ॥

ಪಾ—1. ಕುವಳಯಂಗಕಿಸಳ್ಗಳೊ. 2. ಳುಣ್ಮಿದ. 3. ತತ್ತಲಿಸಿ.

ಪಾರಬೆ ಬರ್ಪ ದೂದವಿಯೆರಂ ತವಕಂ ತಲೆಮಿಳ್ಕು ನೀವಿಯಂ ।
ಚಾರುಕಳಾಪದೊಳ್ನಲಿಸುತುಂ ದೆಸೆಯಂ ನಡೆನೋಡುತುಂ ಪೊದ ॥
ಲ್ದೂರುತಟುಂಗಳಿಂದಿಱಿವ ನಾಲ್ಬದನಂ ನಿಱಿಯಿಂದವೊತ್ತುತುಂ ।
ಜಾರೆಯರೆಯ್ದುತಿರ್ದರುಪಕಾಂತರನಾಬಹಳಾಂಧಕಾರದೊಳ್ ॥೦೪॥

ಜನಿತಾಹ್ಲಾದಾಕುಳಾಳೋಕನಮುಪಜಿತಸಂಪತ್ಕತಾಂಬೂಲದಾನಂ ।
ಮುನಿಸಂ ಕೈಕೊಳ್ವ ಕಿಂಚಿತ್ಪ್ರಣಯಕಲಹಮತ್ಯುತ್ಸವವ್ಯಾವೃತಾಲಿಂ ॥
ಗನಮಸ್ಪಷ್ಟೋಲ್ಲಸಚ್ಚುಂಬನನುಸದೃಶವಾಗ್ಜಲ್ಪಮಬ್ಯಕ್ತಕಂಠ ।
ಸ್ವನಮೀಷತ್ತಾಡನಂ ಬಿತ್ತರಿಸಿ ನೆರೆದುದೋರಂದದಿಂ ಜಾರವೃಂದಂ ॥

ಮದನಾಂಬುಪ್ಲವಮುರ್ಕುಮಗ್ಗದೆ ಲಸತ್ಪೀನಸ್ತನಂ ಕೆತ್ತುಗುಂ ।
ದದೆ ಸುಯ್ಯಿಲ್ಲದೆ ಕಣ್ಗಳಿಚ್ಚದೆ ಘರ್ಮಾಂಭಪ್ಕಣಾನೀಕವಿಂ ॥
ಗದೆ ಮುಖಾಂಬೋರುಹಕಂಪಮಗ್ಗದೆ ನಿಜೋಷ್ಣಸ್ಪಂದನಸ್ಫೂರ್ತಿ ಮಾ ।
ಣದೆ ಮೆಯ್ಸೀದೆಯದಾಱಿಂತು ಸುಸಿಲಿಂದಾಪಾಶ್ರಿಯರ್ಪಿಂಗಿದರ್ ॥೦೬॥

ವ್ಯೋಮಮಹಾಮತ್ತದ್ವಿಪ
ದಾಮೆಯ್ಯೊಳ್ತೋರ್ಪ ಬಿಂದುಜಾಳಕಮನೆ ಶೋ ॥
ಭಾಮಯಮಾಗಿರೆ ತಾರಾ ।
ಸ್ತೋಮಂ ತಱಿಕ್ತೊಗೆದುದಿಂತು ಗಗನಾಂತರದೊಳ್ ॥೦೭॥

ಪಿಂಗದೆ ಬಂದು ಬಂದು ಬರೆ ಪೀರುತುಮಿರ್ಪ ಚಕೋರಪಕ್ಷಿಜಾ ।
ಳಂಗಳನೊರ್ಮೆ ತೀರ್ಗುಮಿರದೀಶಶಿಚಂದ್ರಿಕೆಯೆಂದು ಪದ್ಮಗ ॥
ರ್ಭಂ ಗಗನೋರ್ವಿಯೊಳ್ಪಡೆದು ಮುನ್ನಮೆ ತಾಂ ನೆಱಿ ಬಿತ್ತಿದಚ್ಚ ಬೆ ।
ಳ್ದಿಂಗಳ ಬೀಜರಾಜಿಯೆನೆ ತಱಿಸೆದಿರ್ದುದು ತಾರಕೋತ್ಕರಂ ॥೦೮॥

ಅತುಳತರಧೂತ್ಕೃತಾನಿಳ ।
ಹತಿಯಿಂ ನೆಱಿ ಸೂಸಿ ಪತ್ತಿದಿನತುರಗಮುಖೋ ॥
ದ್ಗತವ ನೊರೆವನಿಗಳೆ ಮಾ ।
ರುತಪಥದೊಳ್ತುಱಿಗಿ ಮಿಱಿಗಿದುವು ತಾರಗೆಗಳ್ ॥೦೯॥

ಕಮಳಭವನೊಸೆದು ರಜನೀ
ರಮಣಿಗೆ ತಾನೆತ್ತಿದಮಳಮುಕ್ತಾಳಿಚ್ಛ ।

ತ್ರಮಿದೆಂಬ ತೆಱದೆ ತಾರಾ ।
ಸಮಿತಿ ಸಮುಂತೊಗೆದು ಸೊಗಯಿಸಿರ್ದುದು ಗಗನಂ ॥೭೦॥

ಇಡಿದಡಸಿದಂಧಕಾರದ ।
ಕಡುಗೊರ್ವಿ೯ದಮರದಿಕ್ಕಟಂ ನಸುಗೆಂಪಿಂ ॥
ಗೆಡೆಯಾಯ್ತು ತಡೆಯದುದಯಿಸ ।
ಲೊಡರಿಸಿ ತಿಮಿರಾದ್ರಿಶಂಬವಾಶಿಬಿಂಬಂ ॥೭೧॥

ತ್ರಿದಶವರದಿಗ್ವಧೂನಿಟ ।
ಳದ ಕೇಸಲವ್ರೊಟ್ಟದೆಂಬಿನಂ ಶೋಣತೆವೆ ॥
ತ್ತುದಯಿಸಿದುದತನುರಾಗ ।
ಪ್ರದಲಲಿತಸ್ತಂಬವಾಸುಧಾಕರಬಿಂಬಂ ॥೭೨॥

ಕುಮುದಿನಿ ಕಾಣದೀತೆಱಪಿನೊಳ್ನಿರೆವೆಂ ಪದೆಪಿಂದಮೆಂದು ಚಂ ।
ದ್ರಮನನುರಾಗದಿಂ ಸುರದಿಶಾಂಗನೆಯಂ ಪಿಡಿದಾದಮಪ್ಪಲಾ ॥
ಪ್ರಮದೆಯ ಪೀವರಸ್ತನದ ಕುಂಕುಮಪಂಕಮೆ ಪತ್ತಿದತ್ತು ಗಾ ।
ತ್ರಮನೆನೆ ಕೆಂಪಿನಿಂ ಪುದಿದು ಪೊಣ್ಮಿದುದಿಂತಮೃತಾಂಶುಮಂಡಲಂ ॥೭೩॥

ವಿಳಸತ್ಪೂರ್ವಪಯೋಧಿಯೊಳ್ಪೊಳೆಯುತಿರ್ಪುದ್ಯತ್ಪ್ರವಾಳಪ್ರಭಾ ।
ವಳ ಮೇಗಣ್ಗಡರುತ್ತುಮಿರ್ದಪುದೊ ರಾತ್ರಿ ಜ್ವಾಳೆವೆತ್ತಂಗಜಾ ॥
ನಿಳಬೀಜಂ ಪೊಱಪೊಣ್ಮುತಿರ್ದಪ್ರದೊ ಪೇೞಿಂಬಂದದಿಂದಿಂದುಮಂ ।
ಡಳಮಾರಕ್ತತೆಯಂ ಪೊದೞ್ದುದಯಿಸಿತ್ತೆಂದ್ರೀನಗೇಂದ್ರಾಗ್ರದೊಳ್ ॥

ವಿರಹಿಗಳಿಂ ಮನೋಜನುರುಕೋಪದೆ ಕೆಂಪಿಡೆ ಕಾಸಿ ಕಾಸಿ ಕೊಂ ।
[1]ಡಿರದಿಡೆ[1] ಪಾಯ್ವ ಕರ್ಕಡೆಗಳೊಳೀೞ್ದವಿಯೋಗಿಕಾನನ ॥
ಕ್ಕುರವಣಿಪಂಗಜಾನಳನ ಕೇಸುರಿವಾೞೆಯೊ ಪೇೞಿನಲ್ಕೆ ಬಿ ।
ತ್ತರಿಸುವುದಿಂದುಮಂಡಳದೊಳುಣ್ಮಿದ ಶೋಣಮರೀಜಿಸಂಚಯಂ ॥೭೫॥

ಇದು ತರಣಿಬಿಂಬಮೆಂದತಿ ।
ಮುದಮಂ ತಾಳ್ದುವ ರಥಾಂಗತತಿಗಾಗಳೆ ತ ॥
ಣ್ಗದಿರ್ಗೆದೞ್ ಮದನರಾಗಮು ॥
ನೊದವಿಸಿತರುಣಾವಳಂಬಮಾಶಿಬಿಂಬಂ ॥೭೬॥

ಪಾ—1. ದಿರದೆದೆ.

ಮಿಾಱಿದ ಖೇದಮುಂ ಮುದಮುನೊರ್ಮೆ ಯೆ ಕೋಕಚಕೋರ
[ಕೋಟಿಗಿಂ ।
ತೆಱಿದುದಸ್ಮತಸ್ಮಿತಮನೊರ್ಮೆಯೆ ಪಂಕಜಕೈರವೋತ್ಕರ ॥
ಕ್ಕೆಱಿದುದಾವಿಯೋಗಿಗೆ ಪಯೋನಿಧಿಗೊರ್ಮೆಯೆ ಕಿಱ್ರುಪೆಱ್ರು ತ ।
ಱ್ತ್ತಿಱಿದುದಾಗಳಂತಮರದಿಕ್ಕುಧರೇಂದ್ರಮನೇಱಿ ಚಂದ್ರಮಂ ॥೩೩॥

ನಾಡೆ ಬಯಲ್ಗೆ ಬಿರ್ದ ತಮಮುಂ ತವೆ ನುಣ್ಮನೆ ನುಂಗಿ ಕೆಟ್ಟು ಬಿ ।
ಟ್ಟೋಡಿ ಕುಜಚ್ಛದಂಗಳಿಱುಬಂ ನೆಱಿ ಪೊಕ್ಕ ತಮಿಸ್ರಮಲ್ಲಿಯ ॥
ಕ್ಕಾಡೆ ಪೊರಱ್ಮೆ ತೂಳ್ದ ಕಡುಪಿಂ ಕೆದಱಿಟ್ಟ ಮಹಾಂಧಕಾರಮಂ ।
ಕೂಡೆ ಗುಹಾಳಿಯಂ ಪುಗಿಸುತಿರ್ದುವು ಚಂದ್ರನ ಸಾಂದ್ರರಶ್ಮಿಗಳ್ ॥೩೪॥

ಹೃದಯಂಗುಡದುದನಱಿಯದೆ ।
ಪದೆಪಿಂ ಪದ್ಮಿನಿಗೆ ಕಯ್ಯನಿಕ್ಕುವ ಶಶಿಯಂ ॥
ಪದೆದೀಕ್ಷಿಸಿ ಮಿಗೆ ನಗುವಂ ।
ದದಿನಲರ್ದುದು ನೋಡೆ ನಾಡೆ ಕುವಳಯನಿವಹಂ ॥೩೫॥

ಆಳಪಿಂ ನೀಡಿದ ಕಯ್ಗೆ ಪದ್ಮಿನಿ ಮುದಂಗೆಟ್ಟಾಗಳೇ ವಯ್ಸಿಸಂ ।
ಜಳಿಸಲ್ಕಂಡುಪಹಾಸದಿಂ ಕೆಲದೊಳಿರ್ದಾರೋಹಿಣೀದೇವಿ ತಾಂ ॥
ಪಱಿದಾದಂ ನಗೆ ತತ್ಪ್ರಹಾಸರುಜೆರಾಂಕುಶೈಣಿ ತನ್ನಂಗಮಂ ।
ಬಳಸಿತ್ತೆಂಬಿನಮಿಂಬುವೆತ್ತು ನಭದೊಳ್ಬೆಳ್ಪೇಱಿದಂ ಚಂದ್ರಮಂ ॥೩೦॥

ಉದಯಂಗೆಯ್ದಾಗಳೆ ತಡೆ ।
ಯದೆ ಕಾಮುಕಸಮಿತಿಗತುಳರಾಗಮ ॥
ನದನಿತ್ತುದಱಿಂ ನಿಜಧವಳತೆ ಪೊ ।
ಣ್ಮಿದುದೆನೆ ಬೆಳ್ಪೇಱಿದಂ ಕರಂ ತುಹಿನಕರಂ ॥೩೧॥

ಆಲರಂಬಿಂಗದಟೇಹೆ ಕಾಮುಕಜನಂ ನೀಱಿಹೆ ಕಂದರ್ಪದ ।
ರ್ಪಲತಾಗ್ರಂ ಕೊನರೇಱಿ ಕೋಕಕುಳಹೃತ್ಕಾಮಾಗ್ನಿ ಕಾಯ್ಪೇಱಿಯು ॥
ತ್ಪಲಲಕ್ಷ್ಮೀವದನಪ್ರಹಾಸವಿನಸುಂ ಚೆಲ್ವೇಱಿ ವಾರಾಶಿಯೊಳ್ ।
ವಿಳಸದ್ವರ್ತನಶೋಭೆಯೇಱಿ ನಭದೊಳ್ಬೆಳ್ಪೇಱಿದಂ ಚಂದ್ರಮಂ ॥೩೨॥

ಆಱಿಸುತುಂ ಚಕೋರಪರಿತಾಪಮನುಬ್ಧಿಯಂ ಕಡಂಗಿ ನೀ ।
ರೇಱಿಸುತುಂ ಲಸತ್ಕುಮುದವಕ್ತ್ರವಿಕಾಸದಗರ್ವವನೆಯ್ದಿ ಕೊ ॥

ರ್ವೆಗೊಳಿಸುತುಂ ಸವಸ್ಮಿತವಿಳಾಸದ ಮಲ್ಲಿಗೆಯಂ ಸಮಂತು ಕಂ।
ಪೇಳಿಸುತುಂ ಪೊದಳ್ದು ಪೊಳಪೇಱುತು ಚಂದ್ರಿಕೆ ಸಾಂದ್ರಶೋಭೆಯಿಂ ॥

ಎಲೆ ಶೀತಪ್ರಭ ನಿನ್ನ ಜನ್ಮನಿಳಯಂ ತಾನಪ್ಪ ಮದ್ಗರ್ಭಮಂ ।
ಸಲೆ ಕಾಯ್ವಿಂ ಬಿಡದಿಂತು ಶೋಷಿಸುವ ಕೀಳಾಭೀಳನಂ ಬಾಡವಾ ॥
ನಲನಂ ಬಾರಿಸು ನೀನೆನುತ್ತುಮೆನಿತಾನುಂ ಪೇಟಲೆಟ್ಟಿಂದುದು
ಜ್ವಲದುಗ್ಧಾಂಬುಧಿಯೆಂಬಿನಂ ಭುವನಮಂ ಪರ್ವಿತ್ತು ಚಂದ್ರಾತಪಂ ॥

ಸುರರಾಜದ್ವಿಪಕಾಯಕಾಂತಿ ಮದಲೇಖಾಕಾರ್ಷಸಂಯುಕ್ತಮಾ ।
ಹರಿಹಾಸಪ್ರಭೆ ಕಾಳಕೋಪಜಿತವಾಶೇಷಾಹಿದೇಹಾಂಶು ತ ॥
ದ್ಗರಳವ್ಯಾವೃತಮಾಸುಧಾಬ್ಧಿರುಚಿ ಕೃಷ್ಣೋಪಪೇತಮೆಂದಿಂತು ಮಾಂ ।
ಕರಿಸುತ್ತಿರ್ದುದು ನಿರ್ಮಳಪ್ರಕೃತಿಯಿಂ ಚಂದ್ರಾತಪಾಡಂಬರಂ ॥೪೫॥

ಜಲದಾಧ್ವಂ ಗಾಂಗಪೇನಾಂಶುವ ನೆವದೆ ಪೀಱುತ್ತಿರ್ದುದೋ ತಾನದಭ್ರಾ ।
ಮಲಶುಭ್ರಜ್ಯೋತಿಯಂ ಮೇಣ್ನಿಜಸುತಗೆನಿಪಾಸಿತಗುರು(?)ಹಂಸನಂ ತ॥
ನ್ನೊಲವಿಂದಂ ತೃಪ್ತಿಗೆಯ್ವಜ್ಜುಗದೊಳಡರ್ದುದೋ ದುಗ್ಧವಾರಾಶಿ
[ಯೆಂಬುಂ ।
ತಲಘುತ್ವಂಬೆತ್ತು ಪರ್ವಿತ್ತೆಸೆದು ಮಿಸುಪ ಜೊನ್ನಂ ಚಕೋರಾ
[ಮೃತಾನ್ನಂ ॥೪೬॥

ಅಸಮವರಕ್ಷುಧಾಗ್ನಿ ನೆಹೆ ನಂದೆ ಬಸಿರ್ಮಿಸುಪೇಱೆ ಪೊಂಗೆ ಮೆ ।
ಯ್ಪಸರಿಸೆ ನೀಳ್ದ ಕಣ್ತುಮಳೆ ಚಂದ್ರಿಕೆಯಂ ಪದೆಪಿಂದಮೀಂಟಿ ಸಂ ॥
ತಸವೆಡೆಗೊಂಡು ದಂಪತಿಚಕೋರಚಯಂ ನೆಹೆದಲ್ಲಿ ಗಲ್ಲಿ ಗಿಂ ।
ತೆಸೆದುದು ನುಣ್ಣರಂ ಪುದಿದ ಲಲ್ಲೆಯ ಚೆಲ್ಲದ ಕೂಟಕೋಟಿಯಿಂ ॥೪೭॥

ವ॥ ಅಗಳಾಸಕಳರತ್ನಸಂಚಯವಿರಚಿತಾಂಚಿತಮಪ್ಪ ರತ್ನಸಂಚಯ
ಪುರದ ಕೋಟಾರತ್ನಚಕ್ರಮಂ ಚಂದ್ರಕಾಂತಮಯಮೆನಿಸಿಯುಂ ; ಬೀದಿ
ಬೀದಿಯೊಳ್ ಪಾಲ್ಗಡಲ ಪೂರಂ ಮೇರೆದಪ್ಪಿ ಪರಿವಂದಮೆನಿಸಿಯುಂ, ದೀಕ್ಷ
ದಂಚೆಗಳ ಚೆತ್ತಕ್ಕ ಪರಿಮಿತಪಯಃಪೂರಮೆನಿಸಿಯುಂ ಹರ್ಮ್ಯಹರ್ಮ್ಯಾಜಿ
ರಂಗಳೊಳ್ವಿಳಾಸದಿಂ ನಡೆಪಾಡುವೆಳವೆಂಡಿರ ತಂಡಮುಂ ಚಂದ್ರಕಾಂತಚಳ

ಪ್ತಿ ಕೆಗಳನಿಸಿಯುಂ, ಪುಪ್ಪಲತಾವಿಸುರೆತ್ತಿದಪಾಟಳೀಪ್ರಸವದಾಮಮುಂ ಮಾ
ಱುಗೊಳ್ವವಿಸ್ಮಯ ಕರ್ಣಿಸಲ್ಲಲಿತಮಲ್ಲಿ ಕಾದಾವುಮೆನಿಸಿಯುಂ, ಬಯಲ್ದಾಣ
ದೊಳಾಲಾನಂಗಳೊಳ್ಪಹೆಗೆಯ್ದ ಮದಕರಿಗಳಂ ಸುರಕರಿಗಳೆನಿಸಿಯುಂ, ನಸೆ
ಯಲಂಪಿನಿಂ ಬಹುರುತ್ಥಮಹಾರವಪ್ರಂಗವಂಗಳನಭವಪುಂಗವಂಗಳೆನಿಸಿ
ಯುಂ, ಕಡುಗರ್ವಮೆತ್ತು ಬಿತ್ತರಿಪ ದೀವದೆರಳಿಗಳಂ ಬೆಳ್ಳರಳಿಗಳೆನಿಸಿ
ಯುಂ, ಗಣಿಕಾವಾಟಂಗಳೊಳ್ಸುಜೀವ ಬೊಜಂಗರ ವಿಜೆತ್ರವರ್ಣವಸ
ನಂಗಳಂ ದುಕೂಲಚೇಲಂಗಳೆನಿಸಿಯುಮಿಂತು ಪಳಚ್ಚನೆ ಪಜ್ಜಳಿಪ ಸಾಂ
ದ್ರಚಂದ್ರಾತಪಾಡಂಬರದೊಳ್:—

ಇಂತು ಪೊಗಟ್ಟಿದ ಪಜ್ಜಳಿಸುತುಂ ಪೊಳವೇಱಿದ ಚಂದ್ರಕಾವಿಳಾ ।
ಸಂ ತನಗೀಯೆ ಸಮ್ಮದಮನಾಕ್ಷಣದಿಂ ನೆನೆದಂ ನೃಪಂ ನಿಜ ॥
ಸ್ವಾಂತದೊಳಕ್ಷಚಾಪನ ಚರಿತ್ರವಿಜೆತ್ರಮನೆಯ್ದೆ ನೋೞ್ಪಿನೆಂ ।
ದಿಂತು ನಿತಾಂತಮುಜ್ಜಗಿಸಿದಂ ಸಲೆ ರಾತ್ರಿವಿಹಾರವಿನೋದಕೇಳಿಯುಂ ॥

ವ॥ ಆಗಳಿಂತು ಮನೋಹರವಾಗಿ ವಿಸ್ತರಿಪ ಸಾಂದ್ರಚಂದ್ರಕಾ ವಿಹಾರೋಜಿತ ಶೃಂಗಾರವಸ್ತುಗಳಂ ತರಿಸಿ ದಕ್ಷಿಣಾನುಕೂಲಕುಟಿಳಧೃಷ್ಟ
ರೆಂಬ ನಾಲ್ವರ್ನಾಯಕರ್ಗಂ ನಾಗರಿಕವಿಟವಿದೂಷಕಪೀಠಮರ್ದಕರೆಂಬ
ನಾಲ್ವರನುನಾಯಕರ್ಗಂ ಬೇೞ್ಕಿವೇೞ್ಕಿ ಪೆಸರ್ಗೊಂಡಸದಳವಾಗೆ ಕೊ
ಟ್ಟು ಮಹಾನಾಯಕನಪ್ಪ ವಜ್ರಾಯುಧನರೇಂದ್ರನಾನಂದದಿಂದಂ ತಾನುಂ
ನವ್ಯದಿವ್ಯಪರಿಮಳಮಿಳಿತಮಳಯಜರಸಾನುಲೇಪನನುಂ, ನವಿನೋದ್ದಾಮ
ಕ್ಷೌಮವಸನಪ್ರಸಾದನನುಂ, ಪರಮಪರಿಮಳಧಾರಿಕರ್ಪೂರಪಾರಿಜಾತತಾರ
ಹಾರಾವಳೀವಿಳಂಬಿತವಿಶಾಳವಕ್ಷಸ್ಥಳನುಂ, ಸಲ್ಲಲಿತಮಲ್ಲಿಕಾಕುಟ್ಮಳಪಟ
ಳಕಮಿನೀಯಶೇಖರನುಂ, ಗುಲ್ಫಾವಶಿಷ್ಟವಿಶಿಷ್ಟಜೇನಾಂಶುಕೋದಂಚಿತಕಂ
ಚುಕನುಂ, ಸ್ಫುರದರುಣಮಣಿನಯೂಖರಸಟೌದುಷ್ಕೃತ ಪಟ್ಟಗುಣವಿರಚಿತ
ವಿಜೆತ್ರಪಟ್ಟಕಾವೇಷ್ಟಿತವಿಭಾಸುರನಿತಂಬಪ್ರದೇಶನುಂ, ಸದಮಳಸ್ವರ್ಣ
ಕೋಶನಿವೇಶಿತಹ್ರಸಿದ್ಧೇಸುಸ್ಥಗಿತಜಘನಸಮಂಡಳನುಮಾಗಿ ರಾಗದಿಂದಾ
ಗಳ್ತಳೆಯ ಪರಿಜನಂ ಬೆರಸು ಕರಂಕವಾಹಿನೀಕರಪ್ರಕೋಷ್ಟಪುಟವಿನ್ಯಸ್ತ
ಹಸ್ತನಾತ್ಮನೃಪಮಂದಿರಮಂ ಪೊಱಮಟ್ಟು ರಾಜವೀಥಿವಲ್ಲರಿಯಂ ನಿಜ

ಪದಪಲ್ಲವಪ್ರಭಾವಳಿಯಿಂ ಪಲ್ಲವಿಸುತುಂ ವಿಳಸತ್ಸ್ವಕೀಯಚರಣನಖ
ಮಯೂಖಮಾಳಾಮಂಜರಿಯಿಂದಲರೇಱಿಸುತುಂ ಬರುತ್ತುಮಿರೆ—

ಸ್ತನಮೂಳಂ ಬಾಹುಮೂಳಂ ತೊಳಗಿ ಪೊಳೆಯೆ ಪೂವಾಲೆಯಂ
[ಲೀಲೆಯಿಂದೆ ।
ತ್ತಿ ನಖಾಂಶುಶ್ರೇಣಿಗಳ್ಮಂಬರಿಯೆ ಚಪಲನೇತ್ರಂ ತಟನ್ನಾಳೆಯಂ ಬೀ ॥
ಱೆ ನಿಜಾಸ್ಯಂ ಮಂದಹಾಸಪ್ರಭೆಯನುಗುಟಿಸಿ ನಿಂದಿರ್ದುದಿಂತೊಪ್ಪಿಸುಯ್ದಂ।
ಪಿನ ಪೆಂಪಿಂ ಕೂಡೆ ಕಂಪೇಱಿಸುತುಮಲರ್ಗಳಂ ಪುಪ್ಪಿಲಾವೀಕದಂಬುಂ ॥

ಮಾಲೆಗೆ ಸುಯ್ಗೆ ಸೂಳ್ವರುತಿರಲ್ಕಳಿವಮಾಳಿಕೆ ಮಾಲೆಗಾರ್ತಿಯ ।
ರ್ಮಾಲೆಯನೆತ್ತಿ ನಿಂದಿರೆ ಮುಖೇಂದುವನೀಕ್ಷಿಸುತುಂ ಪೊದಳ್ದಿ ತ।
ನ್ಮಾಲೆಗೆ ಕಯ್ಯನುಯ್ಯೆ ಕಂಡಾಲಲಿತಾಂಗಿಯರ್ಗಗೆ.....।
.....ನಕಾನನವಾಯ್ತು ವಿಟಪ್ರತಾನಕಂ ॥೫೦॥

ವ॥ ಆವಿಟರ್ಕಳ ವಿಭ್ರಾಂತಿಯಂ ಭೂಕಾಂತಂಗೆ ವಿದೂಷಕಂ
ತೋಱಿ ನಗಿಸುತ್ತುಂ ಪೋಗೆ—

ವರತಾಂಬೂಳವ್ಯಗ್ರೋದ್ಭವಾದ್ಯಖಿಳಗಂಧದ್ರವ್ಯನವ್ಯೋದ್ಗವೋ ।
ತ್ಕರಮುಂ ರಾಜಭುಜಂಗವೃಂದಮೆನಿತಾನುಂ ಮಾಱುಗೊಳ್ವಂದು ಬಿ॥
ತ್ತರದಿಂ ತಱ್ತು ವಿರಾಜಪಾವಿಪಣಿವೀಥೀಯೂಥಮುಂ ನೋಡುತುಂ ।
ಬರುತಿರ್ದಂ ಜಿತಕಂತುರೂಪವಿಭವಂ ವಜ್ರಾಯುಧೋರ್ವೀವರಂ ॥

ಸ್ಮರಮಂತೊರ್ಚ್ಚರಣಾಸ್ಪದಾವಳಿ ಮನೋಜಶ್ರೇಸಟೀನೃತ್ಯಭೂ ।
ಸುರಸದ್ಮಾಳಿ ರತೀಶ್ವರಾಧ್ವರಸಮುದ್ಯನ್ಮಂಡಪಶ್ರೇಣಿ ರಾ ॥
ಗರಸಾಂಬೋಧಿತರಂಗರಾಜಿ ವಿಟವೃಂದೋತ್ಕೀರ್ಣಕಂದರ್ಪಭೂ ।
ವರತಾರಾಗೃಹದೋಳಿ ತಾನೆನಿಪ ವೇಶ್ಯಾವಾಟಮಿಂತೊಪ್ಪುಗುಂ ॥೫೧॥

ಸ್ಮಿತನೀಳಾಬ್ಜಕರಾಂಭಸ್ಸುರಭಿಶಿಶಿರಭಾರಂ ಭುಜಂಗಾವಳೀತಾ ।
ಟಿತನಾನಾಳುಟಿಕಾಟಂಕೃತಿರವಮುಖರಂ ವಾರನಾರೀತನೂರೋ ॥
ಪಿತದಿವ್ಯಾವೋದನವ್ಯಗ್ರರುಪರಿಮಿಳಿತಂ ಭೃಂಗಮಾಳಾಗರುನ್ಮಾ ।
ರುತಪುಷ್ಪಂ ತೀಡಿದತ್ತೊಯ್ಯನೆ ಫಣಿವನಿತಾಗಾರಚಾರಂ ಸಮಾರಂ ॥೫೨॥

ವ॥ ಇಂತು ಕಂಗೊಳಿಪೀಕಾಂತುಗಜಕೇಳಿವಾಪಿಯೆನಿಪ ಸೂಳೆಗೇಱಿಯಂ ಪುಗುತಪರ್ದಾಗಳಲ್ಲಿ ಸಲ್ಲಲಿತಸಾಲಭಂಜಿಕಾರಂಜಿತಚತುರ್ದ್ವಾರಂಗಳುಮಂಗಳಾಯತಮಾನಮಳಯಹರುಸ್ತಂಭಚತುಷ್ಕಂಗಳಿಂ, ಪಟ್ಟಕಾಚತುಷ್ಟಯಾದಿತಚತುರ್ಮುಖಾಚ್ಛಾದ್ಯಹೃದ್ಯಶೋಭಾವಳಂಬದಿಂ, ಚತುರಗ್ರಮಣಿಕಳಶಮಧ್ಯಸ್ಥಿತಸಿತಕಿರಣಕಾಂತೋಪಳಮುಕುರುಂದ ಕಾಂತಿಸಂತಾನಸಂದರ್ಯದಿಂ, ಸಾಂದ್ರಚಂದ್ರಕಳಾಕಳಾಪಾಧಪ್ಕೃತಕಮನೀಯವಿಮಳಚಮರುಹ ಚತುರ್ವಿಳಂಬಿತಚತುಷ್ಕೋಣಚಂಚುರಾಯಮಾನದಿಂ, ತರಳೇತರತಾರಕಾಪರಿಕರೋಪಹಾಸಭಾಸುರನಿಸ್ಸುಳಸೂಳಮುಕ್ತಾವಳೀಪಟಳಪರಿಗ್ರಥಿತಪೃಥುಳದಾಮಸ್ತೋಮಂಗಳಿಂ, ತದೀಯೋಗ್ರಮಣಿಕಳಶಕಾಂತಿಚ್ಛಟಾಪಟಳಸ್ಪರ್ಧಿಮಾನಪಟ್ಟಗುಣಮಂಜರೀರಂಜಿತಪಲ್ಲವೋಲ್ಲಸಿತಂಗಳಿಂ, ಮರುನ್ನೀಳಮುಕ್ತಾಳಿನಿರ್ಮಿತಮಯೂರಕಿರಳಕೋಕಿಳಮರಾಳಮಾಳಾಕೀಳಿತಂಗಳಿಂ, ಮರಾಳತೂಳತಲ್ಪಮಂಡಿತಫಳಕಪರ್ಯಂಕನಿಬಿಡನಿಬದ್ಧವಿಸ್ಪಷ್ಟಚತುಷ್ಟಯಸುವರ್ಣಶೃಂಖಳಾಭಿರಾಮದಾಮಂಗಳಿಂ, ಬಂಧುರಗಂಧಮಯಚಂದನಪ್ರವಾಳವಂದನಮಾಳಾವಳಿಗಳಿಂ ರಯ್ಯಮೆನಿಸಿರ್ದ ನವಿಲುಯ್ಯಲ್ಗೆವಂದು,

ಸುರಿಪಲ್ಮಂದಸ್ಮಿತಾಸುಪ್ರಸರದೊಡನೆ ನುಣ್ಮಿಂಚನೀಯುತ್ತಿರಲ್ಕ ।
ಣ್ಣಲರ್ಗಳ್ಬೆಳ್ದಿಂಗಳಂ ಕೊರ್ವಿಸಿ ಬೆಳಗುತಿರಲ್ ಚಂದನಾಲೇಪನಂ ಸಿ ॥
ರ್ಮಳಿನಕ್ಷ್ವಾಮಾಂಶುಕಂ ಮುತ್ತಿನ ತೊಡವುಗಳುತ್ಫುಲ್ಲಧಮ್ಮಿಲ್ಲಮಲ್ಲೀ।
ಕುಳವಾಗಳ್ ಬೀಹೆ ಚೆಲ್ವಂ ಸುದತಿ ಶಶಿಕಳಾಲಕ್ಷ್ಮಿಯೆಂಬಂತಿರಿರ್ದಳ್ ॥

ವ॥ ಆಗಳ್ನಾಗರಿಕಂ ನೋಡಿ ಕಂಡೀಕಾಂತೆ ಕೈಯಾತ್ಮಶೃಂಗಾರದೊಳನುಲೇಪನಾಂಬರನೇಪಥ್ಯಮಾಲ್ಯಮೆಂಬ ನಾಲ್ಕು ಮಿಶ್ರಮಪ್ಪ ಶೃಂಗಾರದಿಂ ಭಂಗಿವಡೆದಳೆಂದರಸಂಗಱಿಯೆ ಪೇೞ್ದಿಲ್ಲಿ ನಿಂದು ನೀಡುಂ ನೋಡುತ್ತುಮಿರೆ—

ತೆಳದಿಯರೆಲ್ಲರಂ ಕರೆದು ಚಂದನಗಂಧಮನಿಟ್ಟು ವೀಳೆಯಂ ।
ಗಳನೊಲವಿಂದೆ ಕೊಟ್ಟು ಪೊಳಿಪಂ ಬಿಡೆ ಬೀೞ್ಕುವ ಪೊನ್ನಬಟ್ಟಲೊಳ್ ॥

ತೊಳಗುವ ಪಚ್ಚ ಕಪ್ಪುರದ ನುಣ್ಬಳಕಂ ನೆಱಿ ತೀವಿಕೊಂಡು ಕ ।
ಯ್ಯಳವಿಗೆ ಮಾಱಿ ಸೂಸುತಿರೆ ಕಾಮಿನಿ ಬಾಯಿನವಿತ್ತಳಟ್ಟಿಯಿಂ ॥೫೫॥

ಮಿಳಿರೆ ಸೆಱಂಗು ಮಿಳ್ಳಸೆ ಕುರುಳ್ದೊನೆಯುತ್ತಿರೆ ತಾರಹಾರಮು ।
ಜ್ಜಳಸೆ ಮೊಗಂ ವಿಳಾಸಮನೆ ತೋಱಿ ವಿಲೋಚನಕಾಂತಿ ನೀಳ್ದುಬೆ ॥
ಳ್ವಳಸೆ ಪೊನ್ದೊಡ್ಡ ಮೆಯ್ಯ ತನಿಗಂಪೆನಸುಂ ಪರೆದೇಱಿ ಕಾಂತೆ ನಿ ।
ರ್ಮಳದಶನಾಂಶು ಮುಂಬರಿಯೆ ರಾಗದೆ ಪಾಡುತುಮುಯ್ಯಲಾಡಿದಳ್ ॥೫೬॥

ವ॥ ಈಕಾಂತೆ ಕಂತುವಿನ ಕುಲಾಧಿದೇವತೆಯಂತೆ ಸರ್ವೋಹನವಿ
ಳಾಸಗಂಭೀರಮಂ ಬೀಱುತಿರ್ದಳೆಂದು ಭೂವರಂ ಮೆಚ್ಚುತ್ತುಮಲ್ಲಿಂ ತಳ
ರ್ದು ಪೋಗೆ ಮುಂದೊಂದೆಡೆಯೊಳ್—

ಇನಿಯನಗಲ್ಕೆ ದೈವವಶದಿಂದೆನಗಾಯ್ತು ಮದೀಯ ಕಾಂತನೊಳ್ ।
ಕನಸಿನೊಳಾದೊಡಂ ನೆರೆವನೆಂದಿರೆಯುಂ ಸಲೆ ನಿದ್ರೆಪೋದುದಾ ॥
ತನ ಬಟ್ಟೆಯೊಳ್ ಸಖೀ ಸುಕೃತಶೂನ್ಯೆಯೆನಾನೆನುತುಂ ಲತಾಂಗಿ ಭೋಂ ।
ಕನೆ ನಡುಗುತ್ತುಮಿಂತು ನಿಡುಸುಯ್ದಿರದಿಕ್ಕಿದಳಶ್ರುವಾರಿಯಂ ॥೫೭॥

ವ॥ ಇಂತು ವಿಯೋಗಭ್ರಾಂತಿ ಕಡಂಗಿ ನಿದ್ರೆಪಿಂಗಿ ಹಸಿವಂ ಮಱೆ
ದು ತನುಭೋಗಮುಂತೊಱೆದಿರ್ಪಾಕೆಯನೀಕ್ಷಿಸಿ ದಕ್ಷಿಣನಾಯಕನೀಕಾಂತೆ
ಜಾಗ್ರದವಸ್ಥಾಕಾಂತೆಯೆಂದು ಮಹೀಕಾಂತಂಗೆ ಪೇೞುತ್ತುಮಲ್ಲಿಂ
ತಳರ್ದು—

ಇನಿಯಂ ಕಾಲ್ಗೞಿದೊಡಂ ತಿಳಿಯದಾರುಂ ಪೇೞಿಕ್ಕೊಡಂ ಕೇಳದಿ।
ನ್ನೆನಗೀತಂ ವೊೞಿಯಲ್ತು ಸಾಲ್ದುದೆನುತುಂ ನೂಂಕಲ್ಕೆ ಬೇಸತ್ತು ಪೋ॥
ಪನನಾಗಳ್ವಿಡಿಯಲ್ಕರುಳ್ಬೆ ತಿರೆ ಮುಂದಣ್ಗಡ್ಡಬಂದಲ್ಲಿ ಕಾ ।
ಮಿನಿ ಪಾದಾನತೆಯಾಗಿ ನಿಲ್ಲದವನಂ ಕೊಂಡೆಯ್ದಿದಳ್ ಕಯ್ಯೆಯಂ ॥೫೮॥

ವ॥ ಅವನಿತೆಯಂ ವಿದೂಷಕಂ ಕಂಡು—ದೇವ, ಭಾವಿಸುವುದಿವಳ
ಕೋಪನುಂ ಪ್ರಸಾದಮುಂ ತನ್ನಯ ಜಘನ್ಯನಾಯಿಕಾಗುಣವನಳಿದು
ದೆಂದು ನುಡಿದು ನಗಿಸುತ್ತುಂ ಪೋಗೆ—

ಮುಳಿದು ನಿಜೇಶನೆಱಿಕ್ಕಿದೊಡನೆಲ್ದು ಜಿತೋಕ್ತಿಗಳಿಂದಮಾತನಂ ।
ತಿಳಿವುವುದೊಂದು ಪಾಂಗಱಿಯದಾಗಳೆ ಬಾಗಿಲೊಳಡ್ಡಬಿದ್ದು ಕೋ ॥

ಮುಳೆ ತಲೆವಾಗಿ ಕಂಪಿಸುತುಮುಂಗುಟದಿಂ ಬರೆಯುತ್ತುಮುರ್ವಿಯಂ ।
ಗಳಗಳನಿಕ್ಕುವಕ್ಕಣಮಾಮುಳಿಸಂ ಕಳೆದತ್ತಧೀಕನಾ ॥೫೯॥

ವ॥ ಅಮುಗ್ಧನಾಯಕಿಯುಂ ನಾಗರಿಕಂ ನೋಡಿ-ದೇವ, ನೀವೀಕೋ
ಮುಳೆಯುಂ ಜೆತ್ತೈಸಿ ನೋಱ್ಪುದಿವಳ ಸಾತ್ವಿಕಸ್ನೇಹಸೂಚಕಾಶ್ರುಜಳಕ
ಣಂಗಳವನೆ ಮುಳಿಸಂ ಫುಳಿಲೆನೆ ತೊಳೆದುದೆಂದು ಬಿನ್ನವಿಸುತ್ತುಂ ಪೊಗೆ--

ಎನಸುಂ ನಾಣ್ಗಡಲೇಸುವಂಗಜನ ರೂಪಂ ಕಾಣೆನಾಪ್ಪಪ್ಪಬಾ ।
ಣನಿಕಾಯಂ ಪರಿತಂದು ತಾಗುವುದನೆಂತುಂ ಕಾಣೆನಸ್ತ್ರಾಳಿ ವಂ ॥
ಚನೆಯಿಂ ತಾಗಿದ ತಾಣದಲ್ಲಿ ಪಿರಿದುಂ ಪುಣ್ಗಾಣೆನೋರಂತೆ ನೆ ।
ಟ್ಟನೆ ಬೆಳ್ವೀನೆ ತಗುಳ್ದು ಕೊಂದಪ್ಪದದರ್ಕಾನೇವೆನಬ್ಜಾನನೇ ॥೬೦॥

ವ ॥ ಇಂತು ದೀನತೆಯುಂ ಮಾನತೆಯನಪ್ಪುಕೆಯ್ದಾಕಾಂತೆಯ
ವಾಕ್ಕಾರುಣ್ಯರಸಕ್ಕೆ ಕಾವುಂ ಮನಮಿಕ್ಕುವ ಸಖಿಯರಂ ನಿರೀಕ್ಷಿಸಿ ಕರು
ಣಾತ್ಮಕರಾಗಿ ಪೋಗೆವೋಗೆ—

ಮುಳಯದೆ ಮುನ್ನವಾನ್ನಯದೊಳೇಕಿರೆನೌ ಮುನಿದಿರ್ದೊಡಂತವಂ ।
ತಿಳಿಪಿದೊಡೇಕೆ ಪೇೞ್ತಿಳಯೆನಾ ದಿಟವೆನ್ನಯ ಕೋಪಮಿಂತಿದೆ ॥
ನ್ನೊಳೆ ಪಗೆಯಾಯ್ತು ಬಾರನಿನಿಯಂ ಕೆಳದೀ ಮರುಳಾದೆನೆನ್ನನಿ ।
ನ್ನುೞಿದಪನೆಂದು ಸುಯ್ದು ಸುರಿದಳ್ತರಳೇಕ್ಷಣೆ ಬಾಷ್ಪಬಿಂದುವಂ ॥೬೧॥

ವ॥ ಆತರಳೇಕ್ಷಣೆಯ ಪಶ್ಚಾತ್ತಾಪಮಂ ಕಂಡು ವಿದೂಷಕನಾಯ
ಕನೆಲೆ ತರುಣಿ ನಿನ್ನಯ ತರಳತನಂ ನಿನ್ನಂ ಕೊಂದುದೆಂದು ನುಡಿಯುತ್ತುಮ
ರಸನಂ ನಗಿಸುತ್ತುಂ ಪೋಗೆ—

ಕಹೆಗಣ್ಣೋ ಕುಸುಮಾಸ್ತ್ರನುರ್ಜಿದಲಗೋ ಹೃದ್ಬೋಧನುರ್ಮಧ್ಯವೋ ।
ನಡುವೋ ಪೆರ್ವೊಲೆಯೋ ಮನೋಜಕೃತಕಾದ್ವಂದ್ವವೋ ತಾಂ ಬೞಿ॥
ಲ್ಮಡಿಯೋ ಕಂತುಪತಾಕೆಯೋ ಮದನಮಾತಂಗಾತುಳಾಲಾನವೋ ।
ತೊಡೆಯೋ ಪೇೞಿನೆ ವೋಹಿಸುತ್ತಬಳೆ ನಿಂದಿರ್ದಳ್ನಿಜದ್ವಾರದೊಳ್॥೬೨॥

ವ॥ ಆವಧೂಟಿಯ ಲಸತ್ಕಾಯಾತ್ಮಕಶೃಂಗಾರಸಂಗತಿಯುಂ ನಿಂದು
ನೋಡುತ್ತುಮಿರ್ದಲ್ಲಿಂ ತಳರ್ದು—

ಕೆಳದೀ ಕೂರರೆ ಚೋದ್ಯಮೋ ನೆಲೆಗೆ ನಿನ್ನಂತಾವಗಂ ಭೂಷಣಾ ।
ವಳ ಮೆಯ್ಯಂ ಪೆಱಪಿುಗಿ ವೋನವೆಡೆಗೊಂಡಿರ್ಪಾಱೆ ಬಿಂಬಾಧರಂ ॥
ಪುಳಚೆರ್ದೆಚ್ಚಱುಗೆಟ್ಟು ಕಣ್ಣೆವೆಗಳಾಟಂ ನೋಟಮುಳ್ಕಾಡಿ... ।
...ಪ್ಪರವೇಟಕಾರ್ತಿಯರನಾರಂ ಕಾಣೆನೀಕ್ಷ್ವಾಣಿಯೊಳ್ (?) ॥೬೩॥

ವ। ಇಂತು ಸುಡಿವ ಕೆಳದಿಯ ಸಮಯೋಜಿತಾಕ್ಷೇಪಾಳಾಪಂಗಳ್ ಮನಂಬುಗದೆ ಮುರವಟ್ಟರ್ದ ಬಿಂಬಾಧರೆಯ ವಿಪ್ರಳಂಬಾಡಂಬರಮಂ ನೋಡಿ ನೋಡಿಯುಂ ಪೆಱಗಾಗುತ್ತುಮಿರೆ—

ಲಲಿತಲತಾಂಗಭಂಗಿ ಬಹುಭಂಗಿಯ ಬೆಂದೊಡಲಿಂಗೆ ಚೆಲ್ವನ ।
ಗ್ಗಲಿಸುತಿರಲ್ಕೆ ವಕ್ತ್ರದ ಮುಗುಳ್ನಗೆ ಮುಂಬರಿಯುತ್ತಿರಲ್ಕೆ ಬಾ ॥
ಗಿಲ ಹುಡಿಯಲ್ಲಿ ಭಂಗಿವಡೆವಂಗನೆ ನಿಂದು ವಿಟರ್ಗೆ ಕಂತು ಕಾ ।
ಯ್ದಲಗಿಡುವಂತೆ ಚಾಪಲಕಟಾಕ್ಷದಿನೀಕ್ಷಿಪಳೊರ್ವಳೊಪ್ಪಿದಳ್ ॥೬೪॥

ವ॥ ಅವಳ ರೂಪವಿಳಾಸಮುಮಂ ದೇಸೆಯುಮಂ ನೋಡುತ್ತುಮಲ್ಲಿಂ ತಳರ್ದು—

ಎರಡಣಮಿಲ್ಲದೊಲ್ಕೆ ನೆಲೆವೆರ್ದ್ದ ಮುಗ್ಧೆಗೆ ನೀಂ ವಿದಗ್ಧನ್ಯೆ ।
ಪರಿಕಿಸದಿಂತು ಪೇೞ್ಕುನಿವರೇ ದಿಟವೇಕೆನೆ ಪೇೞಿನಾಕೆಯೊಂ ॥
ದಿರವನೆ ಕಂಡು ಜೆತ್ತಭವಬಾಣಕಳಾಪಹತೋಗ್ರತಾಪಮಂ ।
ಪರಿಹಸಲ್ಕೆ ಬಂದರೊಡಗೊಂಡನಿತುಂ ವನಕೇಳಿಗಾಳಿಯರ್ ॥೬೫॥

ವ॥ ಅಂತಾಕೆಳದಿಯರೆಂದಂದದಿಂ ಬೞಿಕ್ಕಂದು ಪ್ರಗುತಂದಾಗಳ್ ನಿನ್ನೆಯ ವಿರಹವಿದಗ್ಧೆಯಪ್ಪ ಮುಗ್ಧೆ ತದೀಯೋದ್ಯಾನದೊಳಿಲರಲೆಪದಿಂದಲುಗುವಲರ್ಗಳಂ ಕುಸುಮಶರನ ಸರಲ ಸರಿಮಟಿಯೆಂದು ಸಂಕೆಯನಪ್ಪುಕೆಯ್ಯುತುಂ, ಕಿಸುದಳಿರ ಕಂಕೆಲ್ಲಿ ಕುಜಂಗಳಂ ಕಂತುದವಶಿಖಿಯ ದಳ್ಳುರಿಯ ಬಳವಳಿಗಳೆಂದುಭೀರುವಾಗುತ್ತುಂ, ತಮಾಳದ್ರುಮದ ತಿಂತಿಣಿಯಂ ಮನೋಜಗಜಘಟಾನೀಕಮೆಂದು ಸಾಧ್ವಸಮನೆಯ್ದುತ್ತುಂ । ಕೈವೆಂದ ವೂಕಂದ ಸಂದೋಹಮಂ ಕಂದರ್ಪನ ಕೇತುಮಿಳಿತಸ್ಯಂದನವೃಂದಮೆಂದೇವಯ್ದುತ್ತುಂ, ಕುಟ್ಮಳಿತಜಂಪಕಪ್ರಚಯಮುಮಂ ಕಾಮನಿಸುವ ಕಾದ ಪುಳ್ಳುಂಬಿಸಂಬುಗಳ ಪೊದೆಯೆಂದು ಹೆಡವಿಸುತ್ತುಂ, ಬರ್ಹಮಂ ಬಿರ್ದ್ದ ಬಿಚ್ಚುತುಂ ಸಲ

ವ ಮದಕಳಾಪಿಗಳ ವೆಸತ್ತಮಂ ಜೆತ್ತಜನ ¹ವಿಚಿತ್ರಪಳಕಾಯಿತ¹ಬ್ರಾತ
ಮೆಂದಾತಂಕಮನೊಂದುತುಂ । ವಿಕಸಿತಂಬೆತ್ತ ಬಯಲ್ದಾವರೆಗಳಂ ಭಾವ
ಭವನಡ್ಡಣದೊಡ್ಡಣಮೆಂದು ಧೃತಿವಟ್ಟಿಯುತುಂ।ಮೃದುಗತಿಯಿಂ ಸುಟ್ಟಿವ
ಮರಾಳಮಂಡಳಮಂ ಕುಸುಮಸಾಯಕನ ನಾಯಕಭಟಾವಳಿಯೆಂದು
ಭೀತಿಗೊಳುತುಂ । ಶುಕಪಿಕಪ್ರಕರಸುಕರಪ್ರಣಾದಮಂ ಪ್ರಸವಬಾಣನ
ಬಳಪಟಹಪಟುರವಮೆಂದು ಪಾಂಗಟ್ಟಿಯುತುಂ।ಮದಸೇವೆಗೆಜ್ಜುವಮಧು
ಕರಝಣತ್ಕಾರಮಂಮಧುಸಖನಥನುಜ್ಯಾರುತಿಯೆಂದು ²ಜಂಗುಟ್ಟಿಯುತುಂ।
ಮಳಯಮಾರುತನಂ ಮನಸಿಜಂ ತಿರಿಪ್ರವಲರ್ಗಣಿಯ ಗಜ್ಜಿಯ ಗಾಳಿ
ಯೆಂದು ಅಳಾಪಂಗುಂದುತುಮಿರ್ದಳಾಕೋಮಳೆಯಂ ಕಂಡೆನಾನೆಂದು ನು
ಡಿದಾತನ ಜೆತ್ತದ ಮುಳಿಸಂ ಕಟ್ಟಿಲ್ಲಿ ಕೊಂಡೊಯ್ದು ಕೂಡಿದ ಕೆಳೆಯನಂ
ಕಂಡಿವಂ ತನ್ನ ದಕ್ಷಿಣನಾಯಕಗುಣಮಂ ಮೆಹೆದನೆಂದು ದಕ್ಷಿಣನಾಯಕಂ
ನೃಪಂಗೆ ಪೇಟ್ಟುತುಂ ಪೋಗೆ ಮುಂದೊಂದೆಡೆಯೊಳ್--

ನಸುಜೊಲ್ದುಳ್ಳೊಡೆ ನಾಂದು ಪತ್ತಿದಳಕಂ ರೋಮೋದ್ಗಮಂ ನೀಳ್ದನಿ ।
ಶ್ವಸಿತಂ ಬೀಗಿ ಬೆಳರ್ಪ್ಪವೆತ್ತಧರಮೀಷದ್ರಾಗನೇತ್ರಂ ನಖಾಂ ॥
ಕಸಮುತ್ಕೀರ್ಣಕುಚಂ ಸಡಿಲ್ದ ನುಡಿ ಚೆಲ್ವಂ ಬೀಱುತಿ ನಿಂದಿರ್ದಳಾ ।
ಱಿಸುತುಂ ಮೇಲುದಱಿಂ ಲತಾಂಗಿ ಸುರತಾಂತಶ್ರಾಂತಿಯಂ ಬಾಗಿಲೊಳ್॥

ವೆ॥ ಆಕಾಂತೆಯ ರತ್ಯಂತದೊಳ್ಬಂದು ಬಾಗಿಲೊಳ್ನಿಂದಿರ್ದಂಗಭಂ
ಗಿಯಂ ನೋಡಿ ನಾಡೆಯುಮಿಾಸೊಗಸಂ ನಿಟ್ಟಿಸುವಾಸಕುತರ್ಗೆ ರತಾಸಕ್ತಿ
ಯಂ ಪುಟ್ಟಪುದೆಂದು ಪೀಠಮರ್ದಕಂ ಮಹಿಪೋತ್ತಮಂಗೆ ಪೇಟ್ಟುತ್ತುಮ
ಲ್ಲಿಂ ತಳರೆ:—

ಇನಿಯಂ ಬಂದಪನೀಗಳೆಂದು ಪಿರಿದುಂ ಶೃಂಗಾರಸಂಘೂತದಿಂ ।
ತನುವಂ ಕಣ್ಗೊಳಪಂತಳಂಕರಿಸಿ ಕೊಂಡಾವಾಸಮಂ ಕಂತುಮೋ ।
ಹನದಾವಾಸಮೆನಿಪ್ಪನಂ ರಚನೆಗೆಯ್ದಿರ್ದಳ್ ವಿಳಾಸಂ ಪೊದ ।
ಟ್ಟಿದಸುಂ ಕಾಮಿನಿ ಬಾಗಿಲೊಳ್ಪರವನಾರಯ್ಯುತ್ತುಮಾತ್ಮೇಶನಾ ॥೬೨॥

ಟಿ—1. ವಿಚಿತ್ರಪತತ್ರಕಾಯತವ್ರಾತ ಎಂದಿರಬಹುದು.

ಪಾ—2. ಜುಂಗುರಿಯುತುಂ.

ವ॥ ಆಗಳಿಂತವಳ್ತನ್ನಯ ವಾಸವಸಜ್ಜಿಕಾಭಿದಾನಮನೆನಿತಾಸುಂ ಪ್ರಕಟೀಕರಿಸುತ್ತುಮಿರ್ದಪಳೆಂದು ನಾಗರಿಕಂ ನುಡಿಯುತ್ತುಂ ಪೋಗೆ ಮುಂದೊಂದೆಡೆಯೊಳ್—

ಶಕುನೀನಾದಮನಾದಮಾಗಳಳವಂ ಮಿಕ್ಕುಣ್ಮಿ ತತ್ಪಶ್ಚಿಮಾಂ ।
ಗಕರಾಸ್ಫಾಳನ ತಾರುರಾತ್ಕರಣಮುಂಜೀ[1]ರೋದುರುಣ್ಮಾರಮುಂ ॥
ಚಕಿತತ್ರಿಸ್ರತಿಯೋಗತಾಡನಪಟುಧ್ವಾನೋತ್ಕರಂ ಪೊಣ್ಮೆ ಕಾಂ ।
ತೆ ಕರಂ ಕಾಂತನೊಳಿಂತು ಸಂಭ್ರಮದೆ ಕಂತುಕ್ರೀಡೆಯುಂ ಮಾಡಿದಳ್ ॥

ವ॥ ಆಕಾಮುಕೋಲಾಹಳಮುಂ ಕೇಳ್ದು ವಿದೂಷಕನೆಯ್ದಿ ವಾತಾಯನವಿನಿಹಿತವಿಲೋಚನನಾಗಿ ನೀಡುಂ ನೋಡುತ್ತುಮಿವಳ ಸರಭಸಮಪ್ಪ ಸಂಭೋಗದ ಕಳಕಳಂ ಪ್ರಕಾಶಸಂಭೋಗಮೆಂಬಳಂಕೃತಿಯಂ ಪ್ರಭ್ಯಕ್ತಮುಂ ಮಾಡುತ್ತುಮಿರ್ದುದೆಂದು ಪರಿಸ್ಫುಟಮಾಗಿ ನುಡಿದು ನಗೆಯನರಸಂಗೆ ಪಡೆಯುತ್ತುಂ ಪೋಗೆ—ಮುಂದೊಂದೆಡೆಯೊಳಡಿಕೆಗೊಂಡು ಕಣ್ಗೊಳಪ ಪಣ್ಗೊಂಚಲ ಸಂಚಯದಿಂದಂಚಿತಮಾಗಿರ್ದ ಗೋಸ್ತನೀಲತಾಮಂಡಪದ ಸಲ್ಲಲಿತಪಲ್ಲವಾಸ್ತರಣದೊಳ್

ವಿಳಸಲ್ಲಾವಣ್ಯಶೇಷಸ್ಥಿತಿಯೆನಿಪ ಕೃಶಾಂಗಂ ಬೆಳಪ್ಪೆರ್ದಾಸ್ಯೋ ।
ಜ್ಜ್ವಳಪದ್ಮಂ ತ್ಯಕ್ತಹಾರಸ್ತನಕಳಶಯುಗಂ ವ್ಯಸ್ತಭೃಂಗಾಳಕಂ ಪ್ರ ॥
ಸ್ಫುಳಿತೋದ್ಯದ್ವೀಣೆ ಬಾನಲ್ಪೊಱೆದಮಳಕಪೋಳ[ಸ್ಥಳಂ] ತಾಪದಿಂದಿ ।
ರ್ದಳಿ[2]ಬಾಬಿಂಬಾಧರಂ ಕಣ್ಗೊಳೆ ತಳರ್ವ*ಸೆಯೊಳ್ಕಾಂತೆಯಂತಿರ್ದ
[ಳಾಗಳ್ ॥೬೯।

ಬೀಸುತುಮುಲ್ಲಸತ್ಪ್ರಸವವೀಜನದಿಂ ಕುಳವಾ*ಲಿನೀರ್ಗಳಂ ।
ಸೂಸುತುಮಂಗದಲ್ಲಿಗಲರ್ವಚ್ಚ ಮನಿಕ್ಕುತುಮುಬ್ಜಪತ್ರಮಂ ॥
ಭಾಸುರಚಂದನದ್ರವದೊಳಿದ್ದ ಕುಚಂಗಳೊಳೊಟ್ಟುತುಂ ಸಮಂ ।
ತಾಸತಿಗಾಳಯರ್ವಿರಚಿಸುತ್ತುಮಿರಲ್ ಶಿಶಿರೋಪಚಾರಮಂ ॥೭೦॥

ತಾಪಹರಕ್ಕೆ ನೂಲ್ಪು ಶಿಶಿರಕ್ರಿಯೆಗಳ್ಗಡಸೋಗವಹ್ನಿಗು ।
ದ್ದೀಪಸಪಿಂಡವಾಗೆ ನಿಲಲಾಱದೆ ದೇಹದ ದಾಹದೇಱಿಗಾ ॥

ಪಾ—1. ರೋದುರುಣತ್ಕಾರಮಂಜಳನಂ ಚೀ.

ಟಾಪಳನೇತ್ರ ಸುಯ್ಯೆ ಮುಖಸೌರುಭಸೇವೆಗಡರ್ತು ಸಾರ್ದು ಭೃಂ ।
ಗೀಪಟಳಂಗಳಾಕ್ಷಣದುರುಳ್ದುವೆಱಂಕೆ ಮುಱಂಟಿ ಧಾತ್ರಿಯೊಳ್ ॥೭೧॥

ವ॥ ಇಂತು ಪಂಚಬಾಣನ ಬಾಣಹತಿಯಿಂದೊಗೆದ ಪಂಚಮಾವಸ್ಥೆಯೊಳ್ ನಿತ್ತರಿಸಲಾಱದೆ ಪೊರಳುತ್ತುಂ ಪಲ್ಲವಾಸ್ತರಣದೊಳಿರ್ದ ಪದದೊಳಿನಿಯನಂ ಬರಿಸಲಟ್ಟಿದ ದೂತಿ ಬಂದಾಗಳ್—

ಇನಿಯಂ ತಾಂ ಬಂದನೆಂಬಾಳಯ ನುಡಿ ಕಿವಿಯಂ ತಾಗಿದಾ
[ವೇಗದಿಂ ಝು ।
ಮ್ಮೆನೆ ಘರ್ಮಂ ಪೊಣ್ಮೆ ಗಾತ್ರಂ ನಡುಗಿ ಮುಖಸರೋಜಂ ವಿವ
[ರ್ಣಕ್ಕೆ ಪಕ್ಕಾ ॥
ಗಿ ನಿಜಸ್ವಾಂತಂ ಪ್ರಕಾಶಂಬಡೆದು ಬಹಳರೋಮೋದ್ಗಮಂ ತಳ್ತು
[ಚೆಲ್ವಾ ।
ಗೆ ನಿತಾಂತಂ ಕಾಂತನಂ ನೋಡಿದಳಬಲೆ ಮುದಶ್ರೂದಮಿಶ್ರಾಕ್ಷಿಯಿಂದಂ ॥

ತಳರ್ವಾಸಂ ತನ್ವಿ ತನ್ವಂಗದ ಮುರಿವೆಸೆಯಂ ಗೆಲ್ದುದಂ ಕಂಡು ಶಯ್ಯಾ।
ತಳಮಂ ಸಾರ್ದಂದು ಕಾಳ್ಗಿರ್ದನಿಯನನಮರ್ದಾಲಿಂಗನಂಗೆಯ್ದವಳ್ಮೆ ॥
ಯ್ಯೊಳೆ ಮೆಯ್ಯಂ ಬಯ್ತು ಕೆಟ್ಟುತ್ತಿರಲದಱ ಪುಟಂ ಚುಂಬನ
[ಚ್ಛದ್ಮದಿಂ ಬಾ ।
ಯೊಳೆ ಬಾಯಂ ಬಯ್ತು ಸಯ್ತುಂ ಪಡೆದಳತನುಸೌಖ್ಯಾಮೃತಾಸಾರ
[ದೊಳ್ಪಂ ॥೭೫॥

ವ॥ ಇಂತು ತಳರ್ವಾಸೆಯೊಳಿರ್ದ ತರಳನೇತ್ರೆಯ ವಿರಹಪರಿತಾಪಾತಿರೇಕಮುಮಂ [1]ತತ್ಪ್ರಿಯನ ಸ್ಪರ್ಶನ[1]ಜನಿತಹರ್ಷಾನೀಕಮುಮಂ ಕಂಡು ತಾಮನಿತುಂ ಕಾಮನ ಕೆಯ್ತಕ್ಕೆ ಕೌತುಕಸ್ವಾಂತರಾಗುತ್ತುಮಲ್ಲಿಂ ಪೋಗೆ:—

ಮನಮಱಿದಿಚ್ಛೆಯಂ ನೆಗೞ್ವುದೋತವೊಲಿರ್ದ್ದು ಕೂಟದಲ್ಲಿ ಭೋಂ।
ಕೆನೆ ಹದನೀವುದೊಲ್ಮೆವುರುಡಿಂದಮೆ ಪೋರ್ವುನು ಮುದ್ದುಗೆಯ್ತುದಿಂ।

ಪಾ—1. ತತ್ಪ್ರಿಯಸಂಶ್ಲೇಷ,

ಮುನಿವುದು ಮೇಗುದೋಱ ಧನಮಂ ನೆಱಿ ಕೊಳ್ವುದು ಕೆಯ್ತ
[ಮೆಂದು ನೆ।
ಟ್ಟನೆ ಮುದುಗಲ್ಲೆಗೂಂಟಣಿ ಮಗಳ್ಗುಪದೇಶಮನಿಂತು ಮಾಡಿದಳ್ ॥೩೪॥

ವ॥ ಅದಲ್ಲದೆ ಮತ್ತೊಂದೆಡೆಯೊಳ್:—

ಮಳಯಜದಣ್ಪು ಮಲ್ಲಿಗೆಯ ಜೊಲ್ಲೆಯಮಾವಗಮಿಟ್ಟ ಬೊಟ್ಟು ಪ ।
ಜ್ಜಳಿಸುವ ಮಿಂಚುವಲ್ ಪಿಡಿದ ಬೆಳ್ಳಲೆ ಪಲ್ಲಟವಿಲ್ಲದೊರ್ಮೆಯುಂ ॥
ಹಳಜಿಕೆವೆತ್ತ ವಸ್ತ್ರದ ವಿಳಾಸದ ಚೆನ್ನಿಗರಲ್ಲಿ ಮೇಳವಂ ।
[1]ಬಳಸದಿರಿ[1]ಚ್ಛೆಯಂ ತಳೆದು ನೀಂ ಮರುಳಾಗದಿರಬ್ಜಲೋಚನೇ ॥೩೫॥

ವ॥ ಆತ್ತ ಮತ್ತೊಂದೆಡೆಯೊಳ್:—

ನಿನಗೆರಡಿಲ್ಲದೊಲ್ದವಳೆ ನಾಂ ಪ್ರಿಯ ನಿನ್ನಯ ಸಂಗಸೌಖ್ಯಮಿಂ ।
ತೆನಗೆ ಧನಂ ದಿಟಂ ಮನೆಯವರ್ಗಮು[2]ಸಲ್ಲರದಕ್ಕೆ[2] ನೀನವ ॥
ರ್ಮನವೊಸೆದಿರ್ದಿನಂ ಕಿಱಿದು ವಸ್ತುವನಿತ್ತೊಡೆ ಸಾಲ್ವುದೆಂದು ಮೆ ।
ಲ್ಲನೆ ನುಡಿದರ್ಥಮಂ ನೆಹೆ ಕಱಲ್ದುವುದಾತನೊಳಂಬುಜಾನನೇ ॥೩೬॥

ವ॥ ಅಲ್ಲಿ ಮತ್ತೊರ್ವಳ್:—

ನಗೆವೊಗಮಂ ವಿಟರ್ಗೆ ನಸುದೋರ್ಪುದು ಲೋಲಕಟಾಕ್ಷದಿಂದಲಂ ।
ಪೊಗೆದವೊಲೊಯ್ಯನೀಕ್ಷಿಪುದು ನೀಂ ಬಗೆಗೊಂಡವರೆಯ್ದಿ ನೋಡೆ ಮೆ ॥
ಲ್ಲಗೆ ಪೆಱಗಣ್ಗೆ ಸಾರ್ವುದೊಳಗಣ್ಗೆ ಬರಲ್ಕ್ಕಧುರೋಕ್ತಿಯಿಂದೆ ನೆ ।
ಟ್ಟಗೆ ಸೆಱಿ[3]ಗೆಯ್ವುದೆಂದು ಹೞಗೂಂಟಣಿ ಶಿಕ್ಷಿಸಿದಳ್ ಮೃಗಾಕ್ಷಿಯಂ ॥

ವ॥ ಆ ಮುದುಗಲ್ಲೆಯ ಸವಿಾಪದೊಳ್ಮತ್ತೊರ್ವಳ್:—

ಉಲಿ[3] [3]ಕಲಹಂ ಗಳಂ ಗರುವರಪ್ಪ ಬೊಜಂಗರೊಳೊಪ್ಪಿ ಮಾಟ್ಪುದೊ ।
ಲ್ದೆಳಸಿದಳಂತೆ ಗೆಯ್ದನಿತುಮಂ ಸಲೆ ಕೂರಿಸಿಕೊಳ್ವುದಾವಗಂ ॥
ಕೆಳೆತನಮುಂ ಕಳಾವಿದರೊಳಗ್ಗಳಮಾಗಿರೆ ಮಾಡಿ ರೂಢಿಯಂ ।
ತಳೆವುದೆನುತ್ತುಮಿಂತು ಮುದುಗಲ್ಲೆ ನಿಯೋಜಿಸಿದಳ್ ತನೂಜೆಯೊಳ್ ॥

ವ॥ ಎಂದಿಂತು ಪಲವಂದದಿಂ ತಮತಮಗೆ ತಮ್ಮಯ ತನೂಜೆಯರೊಳೋಜೆ ನೆಲೆಗೊಳ್ವಿನಂ ಸೂಳೆಸಿದ್ದಾಂತಮನುಪದೇಶಂಗೆಯ್ವ ಮುದು

ಪಾ—1. ಬಳಸಿರ್ದೆನಿ. 2. ಸಲ್ಲದದಕ್ಕೆ. 3. ಕರಹಂ.

ಗೊಂಟಣಿಯರ ವಚನಪ್ರಪಂಚಮುಂ ಪ್ರಚ್ಛನ್ನರೂಪದಿಂ ಕೇಳುತ್ತುಂ ಪ್ರಹಸನಮುಖರಾಗುತ್ತುಂ ಪೋಗೆ ಮುಂದೊಂದೆಡೆಯೊಳ್'—

ಸಿರಿಗೀ ಬೂರಗೆ ಬಾಗಿಲೊಳ್ಪೊಜಗರೀಗಳ್ಬಂದು ನಿಂದಿರ್ದರ್ ।
ಕರೆ ನಿಮ್ಮಕ್ಕನನಕ್ಕುವಕ್ಕು ಹೊಸತೀಜೆತ್ತೊಕ್ಕತ್ತಿಯಂ ಕೊಟ್ಟು ನೋ ॥
ಡಿರೆ ಹೋಗಂ ಕನಿ ಹತ್ತಿದಂತೆ ಬಿಡದಿಂತಾರಿರ್ದರೋವೆಂದು ಚೆ ।
ಚ್ಚರದಿಂ ಕೊಂಟಣಿ ಗೆಂಟಱಿಂದುಲಿದಳಾತಂ ನಾಣ್ಚಿ ಪೋಪನ್ನೆಗಂ ॥೭೯॥

ವ॥ ಆ ಕೊಂಟಣಿಯ [1]ಕಿವಿಲು[1]ತನಮುಂ ಕಂಡು ಕಂಟಣಿಸಿ ವಿದೂಷಕನಿವಳಂ ಜವನಾದೊಡೊರ್ಮಿಂಗೆ ಕೊಯ್ಯಲಮ್ಮನೆಂದು ನುಡಿದು ನಗಿಸುತ್ತುಂ ಪೋಗೆ ಮುದೊಂದೆಡೆಯೊಳ್':—

ಇನಿಯಳ್ಗಾಸಂದೆ [2]ಬರ್ಪಿಂ[2] ತಡೆದಿರೆನಿರೆನಬ್ಜಾಸ್ಯೆ ನಿನ್ನಾಣೆಯೆಂದಾ ।
ನೆನೆ ವಿಾಱಲ್ಕಾಱದೆನ್ನಂ ಕಳಿಪಿದಳಿರವಾಯ್ತಕ್ಕಟಾ ದೈವದಿಂದೋ ॥
ವೆನಿಗಿನ್ನೆಂತಿರ್ಪುವೋ ಮಾನಿನಿ ನಿಮಿಷಮಗಲ್ದಿರ್ಪುದಂ ಸೈರಿಸಳ್ತಾ ।
ನೆನಿತುಂ ಕಾಳ್ಗರ್ದು ಮಲ್ಲೀಲತೆವನೆಯೆನಸುಂ ಕಂಪಿಸಲ್ನೀಳ್ದ[3] ಸುಯ್ದುಂ

ವ॥ ಆತನಂ ಕಂಡು ನಾಗರಿಕನೀತಂ ಪ್ರವಾಸವಿಪ್ರಲಂಬಾವಸ್ಥೆಯೊಳ್ನಿಱಿ ಮುಱುಗುತಿರ್ದನೆಂದರಸಂಗಱಿಪುತ್ತುಮಿರೆ ಮುಂದೊಂದು ಮಂದಯಿಸಿದ ಮಾಧವೀಲತಾಮುಂದಿರದೊಳ್'—

ಪಡೆಯಲ್ಬಾರದ ಬೇಂಟಮುಂ ಪಡೆದು ಕಣ್ಣೊಳ್ಕಾದು ಸಂಭೋಗದಿಂ ।
ಗಡಲೊಳ್ಮಿಂಡಿ ಮುಱುಂಕಿ ತತ್ಸುಖದಿನೋಲಾಡುತ್ತುಮಾಲೀಲೆಯೊಳ್' ॥
ತೊಡರ್ದಿರ್ದಂದಮನೊಲ್ಲದೇಕೆ ಮುನಿಯಲ್ಕಾವಿಪ್ರಲಂಬಾನಳಂ ।
ಗೊಡಲಂ ಸಾರ್ಚೆ ನಿರರ್ಥಕಂ ಮುಱುಕಮುಂ ತಾಳ್ದರ್ಪುದೇಂ ಪೌಢಿಯೋ॥

ವ॥ ಅದಂ ಕೇಳ್ದು ಮತ್ತಮೊರ್ವನಿಂತೆಂದಂ;—

ಬಲವದು ದೈವದಿಂ ಸಮನೆ ಸಂಗಡಿಸಲ್ಬುರುಡಲ್ಲಿ ಪುಟ್ಟಿಕೋ ।
ಟಲೆಗೊಳಿಸುತ್ತುಮಿರ್ದುದಱಿಂದಮಗಲ್ಕೆಯೆ ಬರ್ಪುದಂತದ ॥
ರ್ಕಲಗರ್ನೆಗೊಂಡು ವಾಞ್ಛಿಸುವಂ ಮದನಂ ಮದನಾಸ್ತ್ರಪಾತದಿಂ ।
ಸಲೆ ಪರಿತಾಪಮುಂಟ್ಮಾವುದೆನಲ್ಕವರೇವರೊ ಕೂರ್ತ ಮಾನವರ್ ॥೮೦॥

ಪಾ—1. ಕವಡು-ಎಂದಿರಬಹುದು. 2. ಬರ್ಪಿಲ್ಲ, ಬಪ್ಪಿಲ. 3. ಲ್ಮೀಳ್ದ

ವ|| ಇಂತು ನೀನೆಂದುದಪ್ಪುದಾದೊಡಮಗಲ್ಕೆಯಪ್ಪ ಪುಳಿಸಂ ತಳೆಯಲಾಗದೆಂತೆನೆ:—

ಪಿರಿದುಂ [1]ಪೂರ್ವಭವಾ[1] ನುಯಾತದೆ ಸಮುಸ್ನೇಹಂ ಸಮುಂತಪ್ಪುದಾ ।
ಪರಮಸ್ನೇಹಮದಿರ್ವರೊಳ್ಪುದಿದಿರಲ್ ಸಂಯೋಗಸೌಖ್ಯಾಮೃತಾ ॥
ಕರದೊಳ್ಕ್ರೀಡಿಪುದಲ್ಲದಕ್ಕಟ ವಿಯೋಗಜ್ವಾಳಕಾಜ್ವಾಳದಿಂ ।
ದುರಿವೆತ್ತಾವಗಮಿರ್ಪ [2]ಜೀವನಮದೇ[2]ವೊಳ್ಳಿತ್ತು ಸಂಭಾವಿಸಲ್ ॥

ವ|| ಇಂತು ನುಡಿದಾತನ ನುಡಿ ತನ್ನ ಮನದೊಳ್ನೆನೆದನ್ನಮಾದೊಡ ಮದಕೆಂತೆಂದಂ:—

ಸುಡು ಸುಡು ಬಾಲ್ವುದಂ ಪ್ರಿಯರಗಲ್ಕೆಯೊಳಾತ್ಮವಧೂವಿಯೋಗದಿಂ।
ತಡೆಯದೆ ಸಾವುದೊಳ್ಳಿತದುಕಾರಣದಿಂದಮೆ ಸಾವೆನೆಂದು ಪೂ ॥
ಣ್ದೊಡೆ ಸಲೆ ಸಾವು ಬಾರದೆನಗೀಮದನಾಗ್ನಿಯ ಬೇಗೆ ಹೊತ್ತಿದ ॥
ತ್ತೆಡೆವಿಡದೆನ್ನವೊಲ್ಪ್ರಬಳಪಾತಕನಾವನೊ ಭೂತಳಾಗ್ರದೊಳ್ ॥೮೪॥

ವ|| ಇಂತು ತಮತಮಗೆ ಸಮನಿಸಿದಭಿಯೋಗಾವಸ್ಥೆಗಳಂ ಪಲತೆಱದಿಂ ಪಲುಂಬುತ್ತುಮಿರ್ದ ಕಾಮುಕರ ಮನೋಗತಕ್ಲೇಶವಚನಂಗಳಂ ಕೇಳ್ದು ವಿದೂಷಕಂ ನಿಮ್ಮ ಚಿತ್ತದೊಳೊತ್ತರಿಸಿದ ಚಿತ್ತಭವನ ಕುತ್ತಮಿದು ಸತೊಡಲ್ಲದೆ ಸವೆಯದೆಂದು ನುಡಿದುದಕ್ಕೆ ನಗುತ್ತುಮಿರ್ದ ವಜ್ರಾಯುಧಮಹೀಪಾಳನ ಮುಖಮನಭೀಕ್ಷ್ಣಿಸಿದ ದಕ್ಷಿಣನಾಯಕಂ-ದೇವ, ಬಿನ್ನಪವಿನೋಗಳ್ ತ್ರಿಯಾಮಾವಸಾನಮಾದುದೀಚಂದ್ರಕಾವಿಹಾರಮಿಂ ಸಾಲ್ವುದೆಂದೆನಲದಂ ಮನದೆಗೊಂಡು ಮಗುಳ್ದು ನಿಜನೃಪ[ವಾಸನಿ]ವಾಸಿತನಾಗಿ ನಾಯಕಾನುನಾಯಕರ್ಗೆ ಬೀಲಿಕ್ಕೊಟ್ಟು ಕರಂಕವಾಹಿನೀಕರಪ್ರಕೋಪ್ಪ ಪುಟಪರಿನ್ಯಸ್ತಹಸ್ತಾರವಿಂದಂ ಬಂದು--

ಅಲರಂಬನಿರ್ಕ್ಕವನೆ ಪರಿ ।
ಮಳಕಾಳದ ಕರಂಡಕಂ ವಿಜಿತ್ರದ ಜಿತಾ ॥
ವಳರಜಿತಮಪ್ಪ ಶಯ್ಯಾ ।
ನಿಳಯಕ್ಕೆಟ್ಟಿಂದು ಭೂಪಶಕ್ರಂ ಪೊಕ್ಕಂ ॥೮೫॥

ಪಾ—1. ಪೂರ್ವಭಯಾ. 2. ಜೀವಮನದೇ,

ಪ್ರೇಮರಸಾಮೃತಾಂಬುಧಿಯ ಮೇರೆಯೆ ತಾನೆನೆ ರೂಢಿವೆತ್ತ ಲ ।
ಕ್ಷ್ಮೀಮತಿದೇವಿಯೊಳ್ನೆರೆದು ಲಬ್ಧಮನೋಭವಸೌಖ್ಯನಾಗಿ ನಿ ॥
ದ್ರಾಮಹಿಳಾನುಸಂಗಸುಖಮಂ ಪಡೆದಿರ್ದನಿಳಾಧಿಪಂ ಲಸ ।
ತ್ಕೋಮಳಹಂಸತೂಳನವತಲ್ಪದೆ ರಯ್ಯೆಮೆನಿಪ್ಪ ಶಯ್ಯೆಯೊಳ್ ॥೪೬॥

ವ॥ ಇಂತು ಸುಖಸಂತೃಪ್ತಶೋಭೆವೆತ್ತು ವಜ್ರಾಯುಧನರೇಂದ್ರಂ ಕತಿಪಯ ಘರ್ಮನಿರ್ಮಳಾಂಬುಕಣರಾಜಿತನಿಟಿಳತಟಕಪೋಳಪುಟನಾಗಿರ್ಪಾಗಳ್—

ಭಗಣವಿಳಾಸಮೋಸರಿಸಲಾಗಳೊಡರ್ಚಿದುದಾಚಕೋರಕೋ ।
ಟಿಗಳ ಮನೋಮುದಂ ಕರಗುವಂದಮನೊಂದಿದುದುತ್ಪಳಂಗಳಾ ॥
ನಗೆಯಗೆಯೆಬ್ಬಿ ಪೋಗಲನುಗೆಯ್ದುದು ಯಾಮಿನಿ ಮಾಯವಾಗಲು ।
ಜ್ಜುಗಿಸಿದುದಾ[2]ಸಿತದ್ಯುತಿ[1] ಗತಪ್ರಭನಪ್ಪುದನಪ್ಪುಕೆಯ್ವುದುಂ ॥೪೭॥

ಮೊದಲೊಳೆ ಪಿಂಗೆ ಸಾಂದ್ರನವಚಂದ್ರಿಕೆ ಚಂದ್ರಿಕೆಯಂ ಧರಿತ್ರಿ [ಯೊಳ್ ।
ಕೆದಱುತುಮಿರ್ದ ತಣ್ಗದಿರ ತೊಂಗಲ ತೋರ್ಕೆಯಡಂಗಿ ತಬ್ಬಿ ತ ॥
ಣ್ಗದಿರ ಪೊದಲ್ಕಿಯಂ ಕಱುವಿನ ನವ್ಯಕಳಾವಿಸರಂ ಮಸಳ್ದು ಮಾ ।
ಸಿದ ಮುಕುರಂದದಂತೆ ಗಳಿತಪ್ರಭಮಾಯ್ತು ಮೃಗಾಂಕಮಂಡಲಂ ॥೪೮॥

ಇರದಳುರ್ದಾವಗಂ ಬಿಡದೆ ಶೋಷಿಸುತಿರ್ದಪುದೆನ್ನ ಜನ್ಮಮಂ ।
ದಿರಮೆನಿಪಬ್ಜಗರ್ಭನಮನೆನುತ್ತುಮೆ ತಾಂ ಮುನಿದೋರ್ವ ವಹ್ನಿಯಂ ॥
ನಿರವ(?)ಪೊಡರ್ಪಿನಿಂದವೆಳಪೊಕ್ಕಪನೆಂಬವೊಲಾಗಳಸ್ತಭೂ ।
ಧರಮನೆ ಬಿಟ್ಟು ಪಶ್ಚಿಮದಯೋನಿಧಿಗಿಂತಿಱಿದಂ ನಿಶಾಕರಂ ॥೪೯॥

ನೆಟ್ಟನೆ ತಾರಕಾಪತಿಯೆನಿಪ್ಪುದನೀಕ್ಷಿಸದೆಮ್ಮನಿಂದು ತಾಂ ।
ತೊಟ್ಟನೆ ಬಿಟ್ಟು ಪೋದನಿರದೀಗಳೆ ತನ್ನಯ ತೀಬ್ರಪಾತದಿಂ ॥
ದಿಟ್ಟೊರಸಲ್ಕೆ ಬರ್ದನಿನನೆಂಬಿನಿತುಮ್ಮಳಮಾಗೆ ಕಾಂತಿ ಮೆ ।
ಯ್ಗಿಟ್ಟುದೆನಲ್ಕೆ ನಿಷ್ಕಳೆಯನೆಯ್ದಿದುದಾಭಗಣಂ ಪ್ರಭಾತದೊಳ್ ॥೫೦॥

ಪಾ—1. ಲೊ. 2. ಸಿತದ್ವಿತಿ.

ಪೊಳಪಟ್ಟಿದು ತಾರೆಗಳ್ ಹಳ ।
ಹಳನಾದುವು ಕುವಳಯಂಗಳಿಸಟ್ಟಿಸಕಂಗೆ ॥
ಟ್ಟಳವಟ್ಟಿದುವಾಚಕೋರಂ ।
ಗಳ ಬಳಗಂ ಪೆಳಱಿದುವು ಕರಂ ದಿನಮುಖದೊಳ್ ॥೯೧॥

ನೀರಜದ ನಗೆ ಮುಗುಳ್ತ್ತದು ।
ಕೈರವದ ವಿಕಾಸವಟ್ಟಿದುದಾಕೋಕದ ಚೇ ॥
ತೋರಾಗಮುಧಿಕವಾಯ್ತು ಚ ।
ಕೋರದ ಮುದಮಗ್ಗಿ ಪೋಯ್ತು ಮುನ್ನೀಸಱಿನೊಳ್ ॥ ॥೯೨॥

ಹಿಮರುಚಿ ತಾನಗಲ್ದಿರಂದೆ ಪೋಗೆ ತದೀಯವಿಯೋಗತಾಪದಿಂ ।
ದಮರ್ದಿರಲಾಱುದಂಬರವನೊಕ್ಕಟ್ಟಿದುರ್ವಿಯ ಶಾಡ್ವಲಂಗಳ ॥
ಗ್ರಮದೊಳೆ ಮೆಯ್ಯನಿಕ್ಕಿದ ಸಮುಜ್ಜ್ವಳತಾರಕ[ಸಂಘ]ಮೆಂಬ ವಿ ।
ಭ್ರಮವನೆ ಬೀಱುತಿರ್ದುದಿನಸುಂ ಪನಿಪ್ರಲ್ಲಪಯಃಕಣಬ್ರಜಂ ॥೯೩॥

ಪನಿಪ್ರಲ್ಲಂಬುಕಣಂಗಳಂ ಕೆದಱುತುಂ ಕೋಕಂಗಳೊಳ್ ರಾಗಮಂ ।
ನನೆವೊಯ್ದುಣ್ಮಿಸುತುಂ ಪತತ್ರಿಗಳೊಳಿರ್ಪಾತೂಂಕಡಂ ನೂಂಕುತುಂ ॥
ವನಜಕ್ಕೊಯ್ಯನಲರ್ಕೆಯಂ ಸಮನಿಸುತ್ತೋರಂತೆ ಮೆಯ್ವೆರ್ಚಿ ತ ।
ಣ್ಣನೆ ತೀಡಿತ್ತೆನಸುಂ ಪ್ರಭಾತಸಮಯಪ್ರೋದ್ಭೂತಶೀತಾನಿಳಂ ॥೯೪॥

ಬಳಸಿ ಜಿಲಿಮಿಲಿಪ ವಿಹಗಂ ।
ಗಳ ಕಳಕಳದೊಡನೆ ತೋರ್ದು ಸರಸೀಜಳಮಂ॥
ವಳಿಗೊಳಿಸಿ ಕುಮುದಮುಖಮಂ ।
ಪೆಳಱಿಸಿ ತೀಡಿತ್ತು ಸುಪ್ರಭಾತಸಮೀರಂ ॥೯೫॥

ತನುವಂ ತಱಿಕ್ಕೊ[2]ಯ್ಯುತುದ[2] ಗಾಳಿಯು ಪದೆಪಿನೊಳೆಱ್ದ್ದಿತ್ತು ಪಕ್ಷಂ
[ಗಳೊಳ್ ಪ ।
ಟ್ಟನಿತುಂ [3]ಪೋತಂಗಳಂ[3] ವೀಕ್ಷಿಸುತೆಱಕೆಗಳಂ ಮೆಲ್ಲನುರ್ಚುತ್ತೆನಿಂದೊ ॥
ಯ್ಯನೆ [4]ಸಾದರ್ಪ[4]ತ್ರೋಟಿಯಿಂ [5]ತೊಟ್ಟಡಿದುಕ ಗಱಿಗಳಂ ನುಣ್ಚಿ
[ಬೆರ್ಚಿರ್ಚಿ ಮೆಯ್ಯಂ।

ಪಾ—1. ನೊಲ್ಕಿಳಿ 2. ಯ್ಯೆತಂ 3. ಪೊತ್ತಂಗಳಂ 4. ಸಾದರ್ಪ್ರ 5. ಕೊಟ್ಟಿಡೆದು.

ತೊನೆದುದ್ದಂ ನೀಡಿ ಗೋಣಂ ನವದಿನಮುಖದೊಳ್ಮಕ್ಕುಟಂ ಕೂಗಿ
[ತಾಗಳ್ ।೯೬॥

ಎಱಕೆಗಳೊಳ್ಪೊದೞ್ದಿ ಪನಿಪುಲ್ಲ ಪಯಪ್ಕಣಮುಂ ಬಿದಿರ್ಚೆ ಕ ।
ನ್ದೆಹೆದಿದಿಗೊರ್ಂಬಿನೊಳ್ತೊಡೆದುಚನಂಟ ನಿಮಿರ್ಚೆ ನೀವಿ ನು ॥
ಣ್ಗಿ೪'ಗಳನೊರ್ವೊದಲ್ಚಿ ಲಿಮಿಲಿಧ್ವನಿಗೆಯ್ದು ವಿಹಂಗಮಂಗಳ ।
ಕ್ಕಱುಗುಟುಕಂ ಕೊಳಲ್ಕಿರದೆ ಪಾ೪'ದುವೆನ್ದೆಸೆಗಂ ಪ್ರಭಾತಕಾಲದೊಳ್॥

ನಿನಿದಂಗೆಯ್ದಱಚುತ್ತುಮೆಯ್ದೆ ಪರಿತಂದಾನಂದದಿಂದೊಂದನೊಂ ।
ದನಲಂಪಿಂದಮರ್ದಪ್ಪಿ ಕಣ್ಮಲರ್ಗಳಿಂ ಹರ್ಷಾಶ್ರು ಮೆಯ್ವೆರ್ಚಿ ಭೋಗಂ ॥
ಕೆನೆ ಚಂಚೂಪುಟದಿಂ ಕರ್ದುಂಕಿ ತಲೆಯಂ ತತ್ಕೃಜಿತಧ್ವಾನಮು ।
ನ್ಮೈ ನವಾಂಭೋಜದಿಱುಂಬಿನೊಳ್ನೆರೆದುದೋರಂತಾರಥಾಂಗವ್ರಜಂ ॥೯೪॥

ತಡೆದು ಬರಲ್ಕೆ ಕೋಪಿಸಿ ನಿಜೇಕ್ಷನನೊಂದು ರಥಾಂಗಕಾಂತೆ ಪೆ ।
ಯ್ದುಡದೆ ಕಡಂಗಿ ಚಂಚುಪುಟದಿಂದಿ೪'ದತ್ತಲೆ ನೂಂಕೆ ಪೋಗದೋ ॥
ಗಡಿಸದೆ ಹತ್ತೆಸಾರ್ದು ತನುಸೋಂಕಿನೊಳಾಮುಳಿಸಂ ಕೞ್ಚಿ ತಾಂ ।
ಬಿಡದೊಡಗೂಡುತಿರ್ದುದು ಕರಂ ಸುರತೋತ್ಸುಕಕೋಕನಾಕ್ಷಣಂ॥೯೯

ವ್ಯಾಕುಳತೆ ಪಿಂಗಿ ಸುರತೋ ।
ದ್ರೇಕದೊಳಿರೆ ಒಂದು ತಡೆಯದೊಡಗೂಡಿ ಸಮಂ ॥
ತಾಕಾಂತೆಯನಾಲಿ೪'ಸಿದುದು ।
ಕೋಕನದಂ ಕೋಕನದ ನಿವಾಸದೊಳಾಗಳ್ ॥೧೦೦॥

ವಿರಹಮುಮಾ ತಮಿಸ್ರದೊಡನೋಡೆ ರತೋತ್ಕಟರಾಗಮನ್ದೆ ಚೆ ।
ಚ್ಚರದಿನದೆಯ್ದೆ ನಂದು ತವಕಂ ಸಲೆ ವಿಕ್ಕಮದರ್ಪಿ ನಾಬ್ಜದಂ ॥
ಪರಿಯೆ ಮುದಶ್ರುಗಳ್ಸುರಿಯೆ ಪಕ್ಷ್ಮಮೆಱಲ್ತರೆ ಕಣ್ಮಲರ್ಮುಗು ।
ಳ್ತರೆ ನೆರೆಯುತ್ತುಮಿರ್ದುದು ರಥಾಂಗಶತಂ ಶತಪತ್ರಸದ್ಮದೊಳ್ ॥೧೦೧॥

ಘನನಿದ್ರಾಮುದ್ರೆಯಿಂ ಮೆಯ್ಮಱೆದು ಸುಖದೊಳಾಲಾಸಮಂ
[ನೆರ್ಮಿದುಗ್ರೇ ।
ಘನಿಕಾಯುಕ್ಕೞ್ಚಿ೪'ಂ ಪೂಡುತುಮುಖಿಳಚಕೋರಾಳಿಗುದ್ಭೀತಿಯಂ ಪೊ ॥

ಟ್ಟನೆ ತಾನೀಯುತ್ತು...ಅ್ಪತಗಳುಹರಣಶ್ರೀಯನುಳ್ಳತ್ತುತುಂ ಭೋಕ್ತ ;
ಕೆನೆ ಪರ್ವಿತ್ತುರ್ವಿ ಜೈತ್ಯಾಯತನತತಿಯ ಕಂಬರಪ್ರಭೂತಪ್ರಸಾದಂ ॥
ಮಿಕ್ಕಸುರಾಗದೊಳಂ ಪೊಣ ।
*ರ್ವಕ್ಕಿಗಳುತ್ಸುಕದೆ ತಮ್ಮ ಕೆಲದೊಳ್ನಿರೆವಾ ॥
ಹೊಕ್ಕಳಮುಂ ನೋಡಿಯೆ ನಗೆ ।
ಮಿಕ್ಕವೊಲಲರ್ದೆಸೆದುವಸದಳಂ ಬಿಸಜಂಗಳ್ ॥ ॥೧೦೩॥
ಇನನ ವಿಯೋಗದೊಂದು ನೆವದಿಂ ಮುಗಿದೆಮ್ಮ ಕಾಟುಂಬಕೋಟಿಗಿಂ ।
ತನು¹ನಯ¹ಮಪ್ಪ ಸನ್ಮಧುವನೀಯದೆ ಬಯ್ತಿರಿಸಿಟ್ಟರೆಂದು ಬಂ ॥
ದನುವಿಸಿ ತುಂಬಿಗಳ್ವಲ ವರಲ್ದಯೆಯಿಂ ವೊಗಮಿತ್ತ ಮಾಟಕ್ಕಿಯಿಂ ।
ವನಜಸಮಾಜಮುಳ್ಳಲರ್ದುದಾಗಳೆ ವಾರಿಜಷಂಡಷಂಡದೊಳ್ ॥ ೧೦೪॥
ಘಳಿಲನೆ ಘೂಕನೇತ್ರತತಿಯೊಳ್ತಮಿರಂ ತಲೆದೋಱಿ ತೊಟ್ಟನಾ ।
ಗಳೆ ಪೊಣರ್ವಕ್ಕಿಯೊಳ್ಸುರತಕೇಳಿ ಕರಂ ತಲೆದೋಱಿ ವಾರಿಜಂ ॥
ಗಳ ಮುಖದೊಳ್ವಿಕಾಸವೆನಸುಂ ತಲೆದೋಱಿ ಪೊದಟ್ಟು ನಾಡೆ ಕ ।
ಣ್ಗೊಳಿಸುವುದೊಂದು ಕೆಂಪ್ರ ತಲೆದೋಱಿದುದೈಂದ್ರಿಯ ಭೂಧರೇಂದ್ರ
[ದೊಳ್ ॥ ೧೦೫॥
ಸುರದಿಕ್ಕಾಂತೆಯೊಳೋತು ಭಾನು ನೆರೆಯಲ್ಕೆಂದುಜ್ಜುಗಂಗೆಯ್ವನಂ ।
ಬುರುಹಶ್ರೀವಧು ಕಂಡೊಡೇಂ ಕಲುಪಮಂ ಕೈಕೊಳ್ಗುಮೆಂದಂಜೆ ಭಾ ॥
ಸುರನವ್ಯಾರುಣಮಪ್ಪ ಕಾಂಡಪಟಮಂ ತಂದೆತ್ತಿದಂ ಬೇಗದಿಂ ।
ದರುಣಂ ತಾನೆನೆ ಸಾಂದ್ರವಾಯ್ತುದಯದೊಳ್ಸಂಧ್ಯಾಮರೀಚಿಬ್ರಜಂ ॥
ಹರಿದಿಕ್ಕಾಂತಾಕನತ್ಕಾರಿಕೆಯ ತರಳಮಾಣಿಕ್ಯಮೋ ಪೂರ್ವರಾತ್ರೀ ।
ಧರಹವ್ಯಾಗ್ನಸ್ಥಳೀಶೋಣಮಣಿಕಳಶಮೋ ವಿಸ್ಫುರತ್ಸಾಂದ್ರಸಿಂಧೂ ॥
ದರಜಂ ತಟಿತ್ಕಾಪ್ಪುವೈರಾವತಗಜಶಿರಃಪಿಂಡಮೋ ಪೇಟಿದೆಂಬಂ ।
ತಿರೆ ಕೆಂಪಂ ತಾಳ್ದಿ ಪೊಣ್ಮುತ್ತಿರೆ ತಿಮಿರಭೃತ್ಸಂಭವಾಭಾನುಬಿಂಬಂ ॥
ಸರಸೀಜಾನನೆ ಚಕ್ರವಾಕವಿಳಸದ್ವಕ್ಷೋಜೆ ನೀಲಾಂಬರಾಂ ।
ಬರವಿಭ್ರಾಜಿತೆಯಾಗಿ ಬಂದ ದಿವಸಶ್ರೀದೇವಿಗೈಂದ್ರೀತನೂ ॥

ಸಾ— 1. ಭವ.

ದರಿ ತಂದುತ್ಸವದಿಂದೆ ತೋರ್ದರುಣರತ್ನಾದರ್ಶಮೆಂಬಂತೆ ಬಿ ।
ತ್ತರಿಸುತ್ತಿರ್ದುದು ಭಾನುಬಿಂಬಮರೇಂದ್ರಾಶಾಗಿರೀಂದ್ರಾಗ್ರದೊಳ್' ॥೧೦೯॥

ಹೊಹೊಸನಿರ್ದ ತಾರೆಗಳನಾಯ್ದು ಕುಱುಂಕುತು[1]ಮೊರ್ದ[1]ನಾನಲಂ ।
ಬಟ್ಟವಿಡಿದೊತ್ತುಗೊಂಡ ಹರಿಗಟ್ಟಿಲೆಯಂ ತವೆ ನುಂಗುತುಂ ಕುಳಾ ॥
ಚಳಶಿಖರಾಗ್ರಮಂಡಳಮನೆಯ್ದೆ ಪಳಂಚಲೆ[2]ಯು[ತ್ತುಮಾ²]ದಿಶಾ ।
ವಳಿಗೆ ಕರಾಳ ಮುಂಬರಿಯೆ ಬಂದುದಯಾದ್ರಿಯನರ್ಕನೇ[3]ದಂ ॥೧೧೦॥

ವ॥ ಅಸಮಯದೊಳ್ಮಂಗಳಸ್ತುತಿಶತಸಹಸ್ರಂಗಳಿಂ ಸಂಗತಿವೆತ್ತು ರೀತಿತ್ರಯಂಗಳ ಭಂಗಿಯನೀಯುತ್ತ ತಿಮಂಗಳಪಾಠಕರೋದುವ ಮಾಧುರ್ಯನಾದದಿ[3] ಗುರುಬೋಧೆಹೃದಯನಾದ ವಜ್ರಾಯುಧನರೇಂದ್ರನುಪ್ಪವಡಿಸಿ ತಡೆಯದೆ ನಿರ್ವರ್ತಿತನಿಖಿಳಪ್ರಭಾತಕ್ರಿಯಾನಿಕಾಯನಾಗಿ,

ಜಿನರಾಜಾಂಘ್ರಿಗಳಂ ಮನೋಜನಿತಸಮ್ಯಗ್ಭಕ್ತಿ ಮೆಯ್ವೆರ್ಜೆ ಪಾ ।
ವನಪೂಜಾತತಿಯಿಂದಮರ್ಚಿಸಿ ಮಹೋದ್ಯನ್ಮಂಗಳಾತೋದ್ಯನಿ ॥
ಸ್ವನಮಾಶಾಂತಮನಾದಮೆಯ್ದುತಿರೆ ಶೇಷಾಶಲ್ಪಕೋಟೀರನಾ ।
ಗಿ ನರೇಂದ್ರಂ ದಿವಿಜೇಂದ್ರನಂತೆಸೆಯುತಿರ್ದಂ ಪಾಜ್ಯಸಾಮ್ರಾಜ್ಯದೊಳ್ ॥

ಧರೆಯಂ ಮರ್ಯಾದೆಯಿಂ ಪಾಲಿಸುತುಮವನತೋರ್ವೀಕರಂ ನಿರ್ಭಯಂಬೆ[3]
ತ್ತಿರಿಮೆಂದಾಜ್ಞಾಪಿಸುತ್ತುಂ ಮದವದರಿನೃಪಶ್ರೀಯನಾಕರ್ಷಿಸುತ್ತುಂ ।
[ಸಿರಿಯಂ]ಬೇೞ್ಪಿಗೆ ಕಲ್ಪದ್ರುಮದ ತೆಱದಿನೀವುತ್ತುಮಿರ್ದಂ ನರೇಂದ್ರಂ।
ನಿರವದ್ಯಪಾಜ್ಯರಾಜ್ಯೋನ್ನತಿಯೊಳಿಸೆಯುತುಂ ಸೂಕ್ತಿಸಂದರ್ಭಗರ್ಭಂ ॥

ಗದ್ಯ॥ ಇದು ವಿನಮದನುರೇಂದ್ರಮೌಳಿಮಣಿಕಿರಣಮಾಳಾಪರಾಗಪರಿರಂಜಿತ ಚರಣಸರಸೀರುಹರಾಜಿತ ಪರಮಜಿನರಾಜಸಮಯಸಮುದಿತಸದಮಲಾಗಮಸುಧಾ ಶರಧಿಶರದಿಂದು ಶ್ರೀಮಾಘಣಂದಿಪಂಡಿತಮುನೀಶ್ವರ ಮನೋಜನಿತನಿರುಪಮ ದಯಾರಸಸರಸೀಸಂಭೂತಸಂಭವಾಮಳಸುಕವಿಕಮಲಭಸವಲಿತಮಪ್ಪ

ಶಾಂತೀಶ್ವರ ಪುರಾಣದೊಳ್

ವಜ್ರಾಯುಧನರೇಂದ್ರಚಂದ್ರ ಚಂದ್ರಿಕಾವಿಹರಣವರ್ಣನಂ

ವಿಶಾದಶಾಶ್ವಾಸಂ ಸಂಪೂರ್ಣಂ.

ಪಾ—1. ಮೋರೆ 2. ನೆತ್ತಮೋ.
3. ನುದುಬೊದ-ನುದ್ಬೋಧ ಎಂದಿರಬಹುದು.

॥ ದ್ವಾದಶಾಶ್ವಾಸಂ ॥

ಶ್ರೀಗೆ ಜಯಶ್ರೀಗೆ ವಚ ।
ಶ್ರೀಗೆ ಯಕಶ್ರೀಗೆ ತಾನೆ ಪತಿಯೆನಿಸಿ ಮನೋ ॥
ರಾಗದೊಳರ್ದಂ ಸ್ಥೈರ್ಯಸು ।
ಧಾಗಂ ಜಿನಪದಪಯೋಜರಾಜಮರಾಳಂ ॥೧॥

ವ॥ ಇಂತು ನಿರಂತರಮೆಸೆದು ಸಂತೋಷದಿಂ ವಜ್ರಾಯುಧನರೇಂದ್ರನರಸುಗೆಯ್ಯುತ್ತುಮಿರೆಯುಮೊಂದುದಿವಸಂ—

ಉದಯಿಸಿದುದಾಯುಧಾಗಾ ।
ರದೊಳಾಗಳ್ಳತತಸಹಸ್ರಕರಕರಚಕ್ರಂ ॥
ವಿವಳಿತಪರನೃಪಚಕ್ರಂ ।
ವಿದಿತಾಂಶುಸ್ಥಗಿತಭುವನಚಕ್ರಂ ಚಕ್ರಂ ॥೨॥

ವ॥ ಅದಂ ಕಂಡಾಗಳ್—

ಪರಿತಂದಾಯುಧರಕ್ಷಕ ।
ನುರುಮುದದಿಂ ಬಿನ್ನವಿಸಲದಂ ಕೇಳ್ದು ಮಹೀ ॥
ವರರತ್ನಂ ಬಂದಾಚ ।
ಕ್ರರತ್ನಮಂ ಪೂಜೆಗೆಯ್ದನತ್ಯುತ್ಸವದಿಂ ॥೩॥

ವ॥ ಆಚಕ್ರರತ್ನದ ಬಲಿಯೊಳ್ಸಂಗಳಿಸಿದ ವಿಳಸಚ್ಛತ್ರ ಚರ್ಮ ಮಣಿ ಕಾಕಿಣೀ ಖಡ್ಗ ದಂಡಂಗಳೆಂಬಾಯುಮಜೀವರತ್ನಂಗಳುಮಂ ಸ್ತ್ರೀ ವಾಜಿ ವಾರಣ ಸ್ಥಪತಿ ಗೃಹಪತಿ ಪುರೋಹಿತ ಸೇನಾಪತಿಗಳೆಂಬೇಳುಂ ಜೀವರತ್ನಂಗಳುಮಂ ಯಥೋಚಿತಪೂಜಾಸಮಾಜದಿಂ ಪೂಜೆಗೆಯ್ದು ಪರಿಲಬ್ಧ ಚತುರ್ದಶರತ್ನಾನೀಕನಾದ ವಜ್ರಾಯುಧನರೇಂದ್ರಂ ದಿಗ್ವಿಜಯೋದ್ಯೋಗಾನುರಾಗ

ನಾಗಿ ಮುಹೂರ್ತಿಕೋಪದಿಷ್ಟ[1]ಶುಭಾ[1]ವಹಮುಹೂರ್ತದೊಳ್ ಪ್ರಯಾಣ ಭೇರಿಯಂ ಪೊಯ್ಸಿದಾಗಳ್—

ಅದಿರ್ದುರ್ವೀಚಕ್ರಮಾಕಂಪಿಸಲುದಧಿಕುಳಂ ಕೂಡೆ ತುಳ್ಕಾಡಲಾಶಾ ।
[2][ವಿದುಗಳ್ಕಾಯ್ದೊಡೆ ಕೀಳಟ್ಟೊಳಲ] ಖಿಳದಿಕ್ಪಾಲಕರ್ ಭೀತಿಯಿಂದ ॥
ಳ್ದೆರ್ದೆಯಾಗಲ್ ಶೈಳಜಾಳಂ ಬಿದಿರ್ದಡಿಗೆಡೆಯಲ್ ವ್ಯೋಮದಿಂ ತಾರೆಗಳ್ಬಿ।
ಟ್ಟುದಿರಲ್ ತಟಿತ್ಪ್ರಾಯುದ್ದಾಗಳ್ಪ್ರಾಣಿಯಿಸೆ ನೆಗೆದಾಭೀಳಭೇರೀನಿನಾದಂ ॥

ಸರಭಸದಿಂ ವಜ್ರಾಯುಧ ।
ನರಪತಿ ಪೊಱಮಟ್ಟನುರ್ವಿ ತೆಱಪಿಲ್ಲೆಂಬ ॥
ಚ್ಛರಿ ಪುಟ್ಟೆ ಕರಿತುರಗ [ವರ] ।
ವರರೂಥನರಖಚರಧಿವಿಜಪಡಲಸಹಿತಂ ॥೫॥

ವ॥ ಮತ್ತಮಾಬಲದೊಳ್ ತ್ರಿವಿಧಜಾತಿಯಿಂ ಖ್ಯಾತಿವೆತ್ತ ಮದೋದ್ಧುರಂಗಳಪ್ಪ ಸಿಂಧುರಂಗಳೆಂಬತ್ತು ನಾಲ್ಕು ಕೋಟಿಯುಂ ಗಣನಾತೀತಮಪ್ಪ ದಿವಿಜವಿಯಚ್ಚರವಿತಾನಮುಂ ವಿದಿತ[3]ವಿದ್ಯುತ್ಪತ್ರ[3]ಮಪ್ಪ ಚಕ್ರರತ್ನಂ ಬೆರಸು ವಜ್ರಾಯುಧನರೇಂದ್ರಂ ನಿಜರಾಜಧಾನಿಯಪ್ಪ ರತ್ನಸಂಜಯಪುರಮಂ ಪೊಱಮಟ್ಟು ನಿಷಧನಗೇಂದ್ರಮನೆಯ್ದುವುಜ್ಜಗಮನಪ್ರಕಯ್ದುರಕ್ಕೋದಾನದಿಗೆ ಬೀಡಂ ನಡೆಯಿಸಿದಾಗಳ್—

ತಳರ್ದಂ ತಾನಿಂತು ವಜ್ರಾಯುಧನೃಪತಿ ಪ್ರರೋಪಾಂತದಿಂದಾಗಳಶ್ವಾ।
ತುಳಹೇಷಾಳೋಪದಿಂ ವಾರಣಪಟಲಘಟಾಬೃಂಹಿತಧ್ವಾನದಿಂ ಸಂ ॥
ಚಳದುದ್ಯತ್ಕೇತುದಂಡಾಗ್ರಿಮವಿಧುರಿತಘುಂಟಾಟಣತ್ಕಾರದಿಂ ಮುಂ ।
ಗಳತೂರ್ಯಾರ್ಭಟ್ಯರ್ಯನಾದೋತ್ಕಟದೆ ಕವ್ರುಡುವೀಱಲ್ದಿ ಕಾಚಕ್ರವಾಳಂ॥೬॥

ಜಳರಾಶಿಶ್ರೇಣಿ ಕಂಪಲ್ಮಸಗೆ ಒಲಪದೋದ್ಧೂತಧೂಳಿವ್ರಜ'ವ್ಯಾ' ।
ಕುಳದಿಂ' ದಿಗ್ಮಾಳಿ ಚಂದ್ರಾತಪವಿಸರದಗುರ್ವಾಗೆ ಸರ್ವಾಯುಧಪ್ರೋ ॥
ಜ್ಜ್ವಳಿತಪ್ರದ್ಯೋತದಿಂ ಭೂತಳವಮದು ನೇಹೆ ಜೌ...ಮತ್ತೇಭದಾನಾ ।
ತುಳಧಾರಾಪೂರದಿಂದಿಂತೆಸೆಯೆ ವಡೆದುದಾಭೂಪಸೇನಾಪ್ರತಾನಂ ।೭॥

ಪಾ—1. ಸುಭಾ. 2. ದಿಗ್ಗಜಗಳ್ಕಯ್ವೊಡೆ ಕೀಳಟ್ಟೊಳಲಾಲ.
3. ವಿದ್ಯುಟ್ಪತ್ರ. 4. ವ್ಯಾಖಿಳ್ಳ

ಹರಿಮುಖಹೇಷಾಘೋಷಂ ।
ಹರಿನ್ಮುಖಾಂತರಮನೆಯ್ದಿ ತೀವುತ್ತಿರೆಯುಂ ॥
ಹರಿಪದದಿಂದೊಗೆದ ರಜಂ ।
ಹರಿಪದಮಂತಡರೆವಡೆದುದಾನೃಪಸೈನ್ಯಂ ॥೪॥

ನೆಲನಂ ಮಾಱುನೆಗೆತ್ತೊವದೆ ಮುಸಗುವಿಭಂಗಳ್ಪರುತ್ತಿರ್ಪವಿಂತೀ ।
ಗಳೆ ಕೋಣೊಳ್ಪಯ್ದು ನಿಮ್ಮಾನೆಗಳನಿರಿಸಿ ಕೊಂಡಿರ್ಪುದೆಂದಾಗಳಂದಾ ॥
ನಳಕೀನಾಶಾಸುರಾಬ್ಧೀಶ್ವರಪವನಕುಬೇರಾಭವರ್ಗೆಯ್ದಿ ಪೇೞ್ವಾ ।
ಕುಳದಿಂದೆಯ್ದಿತ್ತೆನಲ್ತೀವಿದುದು ದೆಸೆಗಳಂ ಡಿಂಡಿಮೋಚ್ಚಂಡನಾದಂ ॥೯॥

ಹಯದೂತಾಕ್ಕರಾ[1]ನಿಳವ್ಯಾ[1]ಹೃತಬಹಲಿಮಲಾಲಾಲಸತ್ಫೇನಮಾಳಾ ।
ಮಯಮಾಶಾಚಕ್ರಮುಗ್ರೋನ್ಮದಕರಟಿಕಪೋಳೋಚ್ಚಳದ್ದಾನಧಾರಾ ॥
ಮಯಮುರ್ವೀಚಕ್ರಮುತ್ಕೀತನಕುಳಪಟಲೋಲಾಂಚಳಾನೀಕಶೋಭಾ ॥
ಮಯಮೋರಂತಾನಭಶ್ಚಕ್ರಮಿದೆನೆ ನಡೆಗೊಂಡತ್ತು ಚಕ್ರೇಶಚಕ್ರಂ ॥

ನದನದ್ಭೂಂಬುಪೂರಂ ಒಳಪದಹತಿಯಿಂ ಬತ್ತಿ ಬಾಯ್ವಿಟ್ಟು ದೂಳೆ ।
ಟ್ಟುದು ಭೂಜಶ್ರೇಣಿ ನುರ್ಗಾಗಿಯೆ ನೆಱಿ ಪುಡಿಯಿಟ್ಟತ್ತೆತ್ತಲುಂ
[ಸುತ್ತಿ ಬೇೞ್ದಿ ।
ಟ್ಟುದು ಕೇಳ್ಬಟ್ಟೆಲ್ಲಿಯುಂ ಕುಟ್ಟಿದ ತೆಱದೆ ಕರಂ ಪಿಟ್ಟು ಪಿಟ್ಟಾಗಿ ಪಾಹೆ ।
ಟ್ಟುದಿದೆಂಬಾಹಾಲ್ಯವೋ ಭೂಪತಿಯ ಪಟುತರಾನೂನಸೇನಾಪ್ರತಾನಂ ॥

ದ್ವಿಪದಾನಾವೋದಲುಬ್ಧಭ್ರಮರಮಧುರಝಂಕಾರಗೇಯಂ ಮದಾನೇ ।
ಕಪಸಂತಾನೋಚ್ಚಳದ್ಬಲ್ಲಂಹಿಕರುತಿ ವಿಳಸದ್ವ್ಯೆಮುದ್ಯನ್ಮರುತ್ಪಾ ॥
ತಪಟಾಂದೋಳಾಯಮಾನೋಲ್ಲಸಿತಕದಳಿಕಾನೀಕನೃತ್ಯಂ ಸಮಂತೊ ।
ಪ್ಪೆ ಪೊದಱ್ದಿಚ್ಛೆಯರ್ತೂರ್ಯತ್ರಯಮೆನಿಸಿದುದಕ್ಷ್ಮಾಣಸೈನ್ಯಪ್ರಯಾಣಂ ॥

ವ॥ ಇಂತು ನಿಚ್ಚವಯಣದಿಂದಚ್ಚಗಂ ಸಮನಿಸಿದಂತೆ ಸಕಳಸೇನೆಯುಂ ಸೇನಾನಾಯಕಂ ತಡೆಯದೆ ನಡೆಯಿಸಿ ಕೊಂಡು ರಕ್ತೋದಾಸದೀತೀರವನೆಯ್ದಿ—

ಭೂನಾಥನ ತೇಜೋಲ ।
ಕ್ಷ್ಮಾತೀನಂದನೆ ತಾನಿದೆನೆ ವಿರಾಜಿಪ ರಕ್ತೋ ॥

ಸಾ—1. ನಿಳದ್ವ್ಯಾ·

ದಾನದಿಯ ತೀರದೊಳ್ತ |
ತ್ಸೇನಾಪತಿ ಬೀಡುವಿಡಿಸಿದಂ ಸ್ವಪಬಲಮುಂ ॥೧೩॥
ಪದೆಪಿಂದಾರಕ್ಕೊ೯ದಾ ।
ನದಿ.....ತಟಂಬಿಡಿದು ವಿಡುವಿಡುತುಂ ಕೆಲವಾ ॥
ನುದಿನಕ್ಕಂಕಮು 'ನೆ'ಯ್ದಿದು ।
ದುದೆನಸುಂ ಖ್ಯಾತಿವೆತ್ತ ಸೀತಾನದಿಯಂ (?) ॥೧೪॥
ಸಮುದಿತಲಹರೀಶೀಕರ ।
ಸಮಿತಿಯ ಪೊಯ್ದೆಯ್ದಿದಂತೆ ತಡವಿಡಿದಾಗಳ್ ॥
ಸಮುಜೆತವೀಧೀಯೂಥ ।
ಕ್ರಮಂ ಸಮಂತೆಸೆಯಲಿಂತು ಬಿಟ್ಟುದು ಕಟಕಂ ॥೧೫॥

ವ॥ ಆಸಮಯದೊಳ್ದೀವರವಧರಿಸುವುದೆಂತೀಸೀತಾನದಿಯಿದಾರ್ಗಂ ದುಪ್ರವೇಕಮೆಂದು ತದಂತರ್ಗತಂಗಳಪ್ಪ ಜಲದುರ್ಗಂಗಳೊಳಿರ್ದರತಿದರ್ಪಿತರಪ್ಪ ಮಾಗಧವರತನುಪ್ರಭಾಸಾಮರರೆಂಬ ಮೂವರುಂ ತಾಮಿರ್ದರೆಂದು ತಮತಮಗೆ ಬಿನ್ನವಿಪ ಮಂತ್ರಿಮಂಡಳಿಕದಂಡನಾಥಸಾಮಂತಸೇನಾನಾಯಕರ ವಚನವಿಜಯಮಂ ಕೇಳ್ದು ಯಥೋಚಿತಪೂರ್ವಕ್ರಮದಿಂದಾ ಮೂವರಂ ಸಾದಿಸಿ ರಕ್ಕೊ೯ದಾನದೀತಟಾಸುಗತಕಟಕನಾಗಿ,

ಯಾನಕ್ರಮಹರಮಾಗೆನಿ ।
ತಾನುಂ ವಿಜಯಾರ್ಧಶೈಲಸಾನುಸ್ಥಳದೊಳ್ ॥
ತಾನಿರ್ದಂ ವಜ್ರಾಯುಧ ।
ಭೂನಾಥಂ ಸೇನೆವೆರಸು ಕೆಲವಾನುದಿನಂ ॥೧೬॥

ವ॥ ಇಂತು ನರೇಂದ್ರಮಿರುತ್ತುಮಿರೆಯುಮಂತಾಪದದೊಳ್—

ಬಗೆದಾಗಳ್ಮಾಟ್ಟುದುರ್ಕಂ ಮೊದಲೊಳೆ ತವೆ ತೂಳ್ದಕ್ಕಿ ದಾವಜ್ವಳಜ್ಜಾಜ್ವಳಿ ।
ಳಿಗಳಿಂದಂ ತೀಬ್ರಮಪ್ಪಾತಪದ [1][ಪಸರಮಂ][1] ಕೂಡೆ ಕಾಲುತ್ತುಮುದ್ಯ॥
ನ್ಮೃಗತೃಷ್ಣಾವಳಿಯಂ ಧಾತ್ರಿಗೆ ಮಿಗೆ ಕೆದಱುತ್ತುಂ ಕರಂ ಕಾಯ್ವಿನಿಂಕ ।
ಯ್ಮಿಗುತುಂ ಬಂದತ್ತದೊಂದದ್ಭುತವೊದವಿದವೋಘಂ [2]ವಿಮೇಘಂ[2]
[ನಿದಾಘಂ ॥೧೭॥

ಪಾ—1. ದೆ 2. ವಿಮೇಘಾ 3. ಸರಭಮಂ

ನೆಗಪುತ್ತುಂ ಗಗನತಳ ।
ಕ್ಕಗಣಿತವಾತೂಳಕಾಳಯಂ ಕಾಯ್ಪು ಸಮಂ ॥
ತೊಗೆದ ಕಡುವಿಸಿಲ ಪಸರಮು ।
ನುಗುಲುತ್ತುಂ ಬಂದುದತುಳಭೀಷ್ಮಂ ಗ್ರೀಷ್ಮಂ ॥೧೯॥
ಹ್ರದಿನೀಸರ್ವಾಂಬುವಂ ಪೀರ್ದಿನಿತ [1]ನಡಿವ[1]ಣಲ್ಗಾಣಿಸುತ್ತುಂ ಮರುತ್ಪಾ ।
ತದಳಂಗಳ್ಪೊತ್ತೆ ಭೂರೇಣುಗೆ ಮಿಗೆ ಬಿಸುಪಂ ಪೆರ್ಚಿಸುತ್ತುಂ ಕುಜಬಾ ॥
ತದ ಶೀತಚ್ಛಾಯೆಗತ್ಯುಷ್ಣತೆಯನೊದವಿಸುತ್ತುಂ ಪೊದಳ್ದಿಳೆಯಂ ಬಂ ।
ದುದು ತಾಂ ಸಂತಪ್ತತಿಗ್ಮತಪವಿಪುಳತರಜ್ವಾಳಮಾಗ್ರೀಷ್ಮಕಾಳಂ ॥೧೯॥
ತರುಗಿಡುವ ತತಿಯು ನೆಲಲುರಿ ।
ವರಿದೊಡೆ ನಿಲಲಾಱದೆಱ್ದು ಪಾಱುವ ವಿಹಗೋ ॥
ತ್ಕರದ ಕೊನೆಗಱ[3]ಗಳರೆಸೀ ।
ಕರಿವ್ರೋದುವದೇನಳುಂಬುವೋ ಬಿಸಿಲೆಸಕಂ ॥೨೦॥
ಒದವಿದ ನಿದಾಘಸಂತಾ ।
ಪದಳುರ್ಕಿಗಿಳಾವಧೂಟಿ ನೆಹೆ ಸೈರಿಸಲಾ ॥
ಱದೆ [2]ಜೀ[2]ಱುತಿರ್ಪ ತೆಱನಾ ।
ದುದು ಪಿರಿದುಂ ಪೊಣ್ಮಿತತುಳಭೇರಿರಾವಂ ॥೨೧॥
ತೊಟ್ಟನೆ ಪಲ್ವಲಾಂಬು ತವೆ ಪತ್ತಿರದಾಕ್ಷಣವೆಱ್ದಿ ಹೆಟ್ಟೆ [3]ಕಾ ।
ಯ್ದಿಟ್ಟ[3]ಗೆಯಂದಮಾಯ್ತು ನೆಲೆಗಾಣದಗಾಧನದೀಹ್ರದಾಂಬುಗಳ್ ॥
ನೆಟ್ಟಗೆ ನೋಡೆ ನೋಡೆ ಬಱತೆಯ್ದೆ [4]ಮಣಃಶ್ಮಿಡಿಯನ್ನಮಾಯ್ತೆನ ।
ಲ್ನಿಟ್ಟಸಲೋವೊ ಬಾರದೆನೆ ಬೇಸಗೆಯಗ್ರಮದೇನದುಗ್ರವೋ ॥೨೨॥
ಜಳಲವಮಿರ್ದ ಬೆಂಚೆಗೆ[5] ತೃಷಾತುರದಿಂ ಪರಿತಂದು ತೀರದೊಳ್ ।
[ಪುಳಲೆನೆ][6] ಕಾಲನೂಱ[4] ವೊಗಮಂ ನೆಱಿ ನೀಡಿ ತದೀಯಪಂಕವಾ ॥
ಪ್ಕಳದ ವೋಪ್ಪ(?)ವೋಪ್ಮಪುಟಮುಂ ಸುಡೆಸಾರ್ದುಬಿದಿರ್ಚೆವೋಱಿಯಂ
ಬಳವಳಿಸುತ್ತುಮಿರ್ದುದು ಸಮಂತು ಮೃಗೌಘಮದಾನಿದಾಘದೊಳ್ ॥

ಪಾ—1 ನದಿ. 2. ಬೀ. 3. ಕಾಯ್ದಿಟ್ಟಗೆ. 4. ಪುನ.
5. ರೆ. 6. ಳೊಳ್ಪುಳ್ತೆಲೆನೆ.

ಉರಿವರಿಯುತ್ತುಮಿರ್ದ ಬಿಸಿಲೇಱಿಗೆ ಸೈರಿಸಲಾಱದೆಯ್ದೆ ತ |
ಮ್ಮೆರುತರಬರ್ಹಮಂ ನೆಗಪಿ ಕೊಂಡು ಮಯೂರದ ವೊತ್ತಮಿರ್ಪುಗುಂ॥
ದಿರೆ ಪುದಿದಾನೆಱಲ್ಗಳಸಿ ಸಾರ್ದುದು ಸಂಕೆಯನೊಕ್ಕು ಪನ್ನಗೋ |
ತ್ಕರಮೆನಲೇನಳುಂಬವೊ ನಿದಾಘದ ತಾಪಕಳಾಪದುತ್ಕಟಂ ॥೦೪॥

ಕುದಿಗೊಳೆ ಕಾಯ್ದುಕ್ಕುವ ದೊಣೆ |
ಯುದಕದೊಳಿಡೆ ಚಂಚು ಬೆಂದು ಭೋಂಕೆನೆ ತಲೆಯಂ ॥
ಬಿದಿರ್ದು* ಕರಂ ಬಾಯ್ವಿಟ್ಟೊಳ |
ಱಿದುದೊದವಿದ ತಾಪದಿಂ ವಿಹಂಗಕಳಾಪಂ ॥೦೫॥

ತರಣಿ ಸಮಂತು ನಮ್ಮ ಧಿಪನಾಗಿಯುಮಿಂತುಱಿ ಕಾಯ್ದನೆಂದು ತ |
ತ್ಸರಸಿಜಲಕ್ಷ್ಮ್ಮಿಗೆಯ್ದಱುಚತಿರ್ದಪುದೆಂಬಿನವಾನಿದಾಘಭೀ ॥
ಕರತರತಾಪದೇಱಿಗೆನಸುಂ ನಿಲಲಾಱದೆ ಜೇಱುತುಂ ಕರಂ |
ಕೊರಗಿದ ಪದ್ಮಪತ್ರದ ನೆಱಲ್ವಿಡಿದಿರ್ದುದು ಕೋಕಸಂಕುಳಂ ॥೦೬॥

ನೆಱಲಾಗಿರ್ದ ಸರೋರುಹ |
ದಳಮದು ಕಡುವಿಸಿಲ ಬೆಂಕೆಯಿಂ ಕೊರಗಿದೊಡಾ ॥
ಗಳೆ ತನ್ನೆಱಂಕೆಗೊಡೆಯಂ |
ತಳಮಳಿಸುತೆ ಸತಿಗೆ ಪಿಡಿದುದೊಂದು ರಥಾಂಗಂ ॥೦೭॥

ಜನಿತನಿದಾಘದುರ್ಗ್ಗತರತಾಪದಳುರ್ಕೆಯೊಳೆಯ್ದೆ ಕಾಯ್ದು ಚಕು |
ಯ್ಯನೆ ಕುದಿಗೊಂಡ ನೀರ ಬಿಸುಪಿಂಗೆನಸುಂ ಮಱುಗುತ್ತೆ...ತೊ॥
ಟ್ಟನೆ ತವೆ ಮಗ್ಗಿ ಪದ(?)ಶಫರಾದಿಜಲೇಚರಜಂತುಚಾಲ†ಜೇ
ವನದೊಡನಾಗಳಂತೆ ಗತಜೀವನವಾಯ್ತು ಸರೋವರೋತ್ಕರಂ ॥೦೮॥

ಘನಪಂಕೋದರವಗ್ನಕಚ್ಛಪಕುಲಂ [1ವಿದ್ಧಾಶ್ಮ1]ತತ್ಸಂಧಿರಂ |
ಧ್ವನಿಕಾಯೋಪಗತಾತ್ತಕರ್ಕಟಕಜಾಲಂ 2ಸಾರ್ದ್ರ2ವೇಳಾಸುರಂ॥
ಗನಿವೇಕಸ್ಥಿತಸಂಕಟಾಂಗಮಯಶಾಲೂರೋತ್ಕರಂ ತ್ಯಕ್ತಜೀ |
ವನಮತ್ಸ್ಯಬ್ಜಮಿದುರ್ದಿಂತು ಸರಸೀಸಂದೋಹವಾಗ್ರೀಷ್ಮದೊಳ್ ॥

ಪಾ—† ಇಲ್ಲಿ ಜೆಕ ಎಂದು ಹೆಚ್ಚು ಪಾಠವಿದೆ.
1. ಬಿದ್ಧಾಶ್ಮ. 2. ಸಾರ್ದ.

ಗಿರಿಗುಹೆಗಳ ನೆಲಲುರಿಯಿಂ ।
ಬಿರಿದಾಗುತ್ತಿರೆ ತದೀಯತಾಪೋತ್ಕಟದಿಂ ॥
ಕೊರಗುತ್ತುಂ ನೆಳಿ ಬಾಯ್ವಿ ।
ಟ್ಟರುತಿರ್ದುದು ಕೇಸರಿ[1]ಬ್ಜಂ ಜೇಸಗೆಯೊಳ್ ॥೩೦॥

ತನುವಂ ತಟಿಕ್ಕೊಪ್ಪಯ್ವ ತೀವ್ರತಪದುರಿವ ಸರಕ್ಕಳ್ಕ ದೂಳೀವ್ರಜಾಸೇ
ಚನಮಂ ಮಾಬ್ಪುಜ್ಜುಗಂ ಮಿಕ್ಕಿರದೆ ವೊಗೆಯಲಾಭೂರಜಂ ವಿಸ್ಫುಲಿಂಗೌ
ಘನಿಕೃಷ್ಟೋತ್ಕೃಷ್ಟರೇಣುವ್ರಜಮನೆ ವೊಗೆದಂತಾಗೆ ತತ್ಪುಷ್ಕರಂ ಬೆಂ।
ದೆನಸುಂ [2]ಬೆಜ್ಜುತ್ತಿ[2] ಕೀಳಟ್ಟೊಳಲ್ ಪರಿದುದೋರಂದದಿಂ ಹಸ್ತಿವೃಂದಂ॥

ಉರಿವಿಸಲ ಬೇಗೆಯಿಂ ಬಿರಿಗೆ ।
ಬಿರಿದೆಡೆವಿಡದುಗುವ ಮುತ್ತುಮಂ ಜಳಬಿಂದೂ ॥
ತ್ಕರಮೆಂದು ತುಡುಕಿ ಕರಪ್ರ ।
ಷ್ಕರಮಂ ಬಿದಿರುತ್ತುಮಿರ್ದುದೊಂದು ಗಜೇಂದ್ರಂ ॥೩೨॥

[ಬಿದು] ಬಿರಿದು ಸುರಿವ ರಕ್ತಾ ।
ರ್ದ್ರದ ಮುತ್ತುಗಳಿಂ ಗಜಬ್ರಜಂ ನೆನೆಯಿಸುತಿ ॥
ರ್ದುದು ವಿಳಯಕಾಲದೊಳ್ಕಿಂ ।
ಡದ ಮಟಿಗೆಯಿವಬ್ದಮಂ ನಿದಾಘದೊಳಾಗಳ್ ॥೩೩॥

ಬಳಲುತ್ತುಂ ಗ್ರೀಷ್ಮಸಂತಾಪದೆ ಮಱುಗುವ ಬಾಳೇಭಮಂ ತನ್ನ ನಾಗಾ ।
ಲ್ಗಳ ಮಧ್ಯಚ್ಛಾಯೆಯೊಳ್ ಸೈತಿರಿಸಿ ಬಿಸಿಲ ಕಾಯ್ವಿಂದಣಂಬೀಡೆ...।
.....ತಟಿಕ್ಕೊಪ್ಪಯ್ವ ಬಿಸಿಲ್ಗೆ ಪಲ್ಲವದ ಗುಚ್ಛಂಗೊಂಡು ಸಯ್ತಂ... ।
ನೆಲಲ್ವಿಡಿವಾದಂ ಬರುತಿರ್ದುದೊಂದು ಮದವಾತಂಗಂ ಪಯೋವಾಂಛೆಯಿಂ॥

ಜಳಮಾತ್ರಂ ಪುದಿದಿರ್ದ ಪಲ್ವಲಮಹಾಜಂಬಾಳದೊಳ್ಕೇಸರಾ ।
ವಳಿಯಗ್ರಂ ನಸುದೋಱದಂತೆ ನೆಲಿ ನಿಷ್ಕಂಪತ್ವದಿಂ ಗಾತ್ರಸಂ ॥
ಕುಳದೊತ್ತೊತ್ತುಗಳಂ ಮುಟಿಂಕಿ ಲವಲೇಸಾದ್ವಕ್ರಮಾಗಿರ್ದುದ (?)।
ಸ್ಖಳಿತೋಚ್ಛಂಡನಿದಾಘತಾಪಭಯದಿಂ ಕ್ರೋಡವ್ರಜಂ ನಾಡೆಯುಂ॥೩೪॥

ಕಡುಗಾಯ್ದುಗ್ರತಪಜ್ವಾಳೆಗೆ ಮಿಗೆ ಘುಳಿಚೇಟಿಲ್ಲೆ ಬೆಂಬೆಂದು
[ಬಾಯುಂ ।

ಪಾ— 1. ರ. 2. ಬಿಜ್ಜುತ್ತೆ.

ಬಿಡುತುಂ [1]ತೇಕುಣ್ಮೆ[1] ಜಿಹ್ವಾಲತೆಯೆಱಲೆ ಜವಂಗುಂದುತುಂ ಬಂದು ಕಂಪ॥
ಲ್ಮಡುಗೊಂಡಾಪಲ್ವಲಂಬೊಕ್ಕಡಿಗೆ ಪೊರೆಳ್ದಬ್ಬುತುಂ ಮೆಯ್ಯನಾಱ ।
ಲ್ಗುಡದೋರಂತಿರ್ದುದೆತ್ತಂ ಬಿಡದಡವಿಗಳೊಳ್ ಸ್ವೈರದಿಂ ಸೈರಿಭಂಗಳ್॥

ವ॥ ಇಂತು [2]ವಿಳಯದಮನಂಗೆ ಸಮನೆನಿಸಿರ್ದ[2] ನಿಧಾಘದಿಂ ಪೊಡ ಪೊಗೆಟ್ಟ ಪೆಱೆಯ ಪರಿತಾಪಮುಂ ಪರಿಹರಿಸಲೆಂದು ಪಯೋಧರಕಾಲಂ ತಲೆದೋಱಿದಾಗಳ್—

ಸತತೋನ್ಮತ್ತಾಂಜನೇಭಾಯತಕರಮುಖಪ್ಲೂತ್ಕಾರ ಚೋದ್ಯನ್ಮರುತ್ಸಂ
ಗತಿಯಿಂ ಕೊವೇರ್ದಯಸ್ತಾಚಳಕಟಜನತಕ್ಕುಂದಸಂದೋಹೆಗಂಧಾ ॥
ವೃತದಿಂ ಕಂಪೇಱಿ ತದ್ವಾರುಣಿಯ ಜಳಧಿಜಾತಸ್ಫುರತ್ಕೀಕರಾಲಿಂ ।
ಗಿತದಿಂ ತನ್ಪೇಱಿ ತೀಡಿತ್ತಿರದವಿರಳದಿಂ ಪಶ್ಚಿಮಾಕಾಸಮಾರಂ ॥೩೬॥

ಪದೆಟಂ ಪಾವ್ಗಳ್ಬುಜಂಗಂ ಬರೆ ನೆರೆವ ರತಾಸಂರಂಭದಿಂ ಬಿ ।
ರ್ಚಿದ ಭಾಸ್ವತ್ಶ್ರೀಯ ವೇಣೀವಿಸರವೊ ಕುಸುಮಾಸ್ತ್ರಂ ವಿಯೋಗಿ
[ವ್ರಜಸ್ವಾಂ ॥
ತದ ಧ್ಯೆಯೋರ್ಚ್ಚಾಟನಕ್ಕಿಕ್ಕಿದ ಕಿಸುರ ಮಹಾಧೂಮಸಂತಾನಮೋ ತಾ।
ನಿದೆನಲ್ಮೇಘಪ್ರತಾನಂ ನೆಗೆದುದು ನಭದೊಳ್ಸಂದು[3]ಳಾದ್ದಾಮದಿಂದಂ (?)॥

ನಿಸದಂ ನೃತ್ಯವಿನೋದಲಕ್ಷ್ಮಿಯನೆ ಕೇಕೀಸ್ವಾಂತರಂಗೋರ್ವಿಗೇ ।
ಱಿಸುತುಂ ಹಂಸೆಯ ಹಿಂಡನಂಡ[4][ಲೆದು][4] ಮತ್ತಾಮಾನಸಾಬ್ಜಾಳಿಗೇ ॥
ಱಿಸುತುಂ ಗರ್ವಿತಹೃದ್ವಿಯೋಗಿಜನಜೀವಶ್ರೇಣಿಯಂ ನೆತ್ತಿಗೇ ।
ಱಿಸುತುಂ ನೀಳ್ದ ಕಱುಂಗುತೇಱಿದುದು ಮೇಘುಂ ತಟ್ಟು ಮೇಘಾ
[ಧ್ವದೊಳ್ ॥೩೯॥

ನೆರೆದುದು ವಿರಹಿಮನಸ್ತ್ರಾಣ ।
ಕರಣದೊಳಂಗಜದವಾಗ್ನಿಯಂ ನೆಱಪುತ್ತುಂ ॥
ನೆರೆದಭ್ರಂ ಕೊರ್ವಿದುದ ।
ಜ್ಜರಿಯಿಂ ಪೊದೆದಗೆಯ ಗರ್ಭಮುಂ ಕೊರ್ವಿಸುತುಂ ॥೪೦॥

ವಿಯದಂಬೋಧಿಯ ನೂತ್ನರತ್ನಚಯರೋಚಿರ್ಮಿಶ್ರಮೈವಾಳವಾ ।
ಳಿಯೊ ಮೇಣಂಬರಲಕ್ಷ್ಮಿ ನೀರದನೃಪಂ ಬಂದಂ ದಲೆಂಬುತ್ಸವೋ ॥

ಪಾ—1. ವೆಂಕುಣ್ಮೆ. 2. ವಿಳಯದಮುನ್ನಂಗೆ ಸಮನಿಸಿರ್ದ.
3. ಳ್ಸಾದು. 4. ಲದೆ.

ದಯದಿಂದಿಕ್ಕಿದ ವರ್ಣಪೂರಲತೆಯೋ ತಾನೆಂಬಿನಂ ಜೆತ್ರಕಾಂ ।
ತಿಯನಾಂತುಣ್ಮಿ ಸುರೇಂದ್ರಚಾಪವೆನಸುಂ ವಿಭ್ರಾಜಿಸಿತ್ತಭ್ರದೊಳ್ ॥
ಬಗೆದಂಭೋದಗಜಕ್ಕಮತ್ಯ್ರ್ಯಪತಿ ಬೀಸುತ್ತಿರ್ಪ ಮುಕ್ತಾವರ ।
ತ್ರಿಗಳೋ ಪೊಣ್ಮಿದಿರಮ್ಮದಾನಳಶಿಖಾದಾಮಂಗಳೋ ತಾಂ ವಿಯೋ ॥
ಗಿಗಕ್ಕುರ್ಚುವ ಮೇಘಮನ್ಮಥನ ತೂಣೀರೋದ್ಗತಜ್ಯಾಳಿಯುಂ ।
ಬುಗಳೋ ಪೇೞಿನೆ ಮಿಂಚುಗಳ್ಮಿಳಿರ್ದುದಾಜೀಮೂತಸಂಘಾತದೊಳ್ ॥
ಘನಮೋರ್ಗರ್ಶ್ರೀಯ ಮೇಘಾಗಮವರ್ತನ ವಿವಾಹೋತ್ಸವೋ
[ದ್ಭೂತವಾಹಿ ।
ತ್ರನವೀನಧ್ವನಿಮೋ ವಾರಿದಕರಟಿಘಟಾಗ್ರೋಲ್ಲಸದ್ಗಂಡಿಮಾನೀ ॥
ಕನಿಕೃಷ್ಟಾರಾವಮೋ ಕಾಮುಕಮೃಗಮೃಗಯಾಕ್ರೀಡೆಗೋತ್ತರ್ಪ ಕಂಪ ।
ರ್ಪನ ಭೇರೀಘೋಷಮೋ ತಾನೆಸಲೊಗೆದುದುಸಂರಂಭದಂಭೋದನಾದಂ॥
ಮುದವನ್ಮಯೂರರುತಿವೆರ ।
ಸೊದವಿ ಸಮಂತೊಗೆದುದಬ್ದರು[ತಿ] ವಿರಹಿಸಮೂ ॥
ಜದ ಬಾಷ್ಪಬಿಂದುಗಳ್ವೆರ ।
ಸುದಿರ್ದುವು ಘನವಾರಿಬಿಂದುಗಳ್ಮುಂಗಾರೊಳ್ ॥೪೪॥
ಬರೆ ವರ್ಷಾಗಮವಿಟನಂ ।
ಪರಿರಂಭಿಸ ಸಂಭ್ರಮಕ್ಕೆ ಪಲ್ದುಗುವ ಸಭ ॥
ಸ್ತರುಣಿಯ ಕುಚಹಾರದ ಬಿ ।
ತ್ತರಿಸುವ ಮುತ್ತುಗಳ ತೆಱದೆ ಸುರಿದುವು ಪನಿಗಳ್ ॥೪೫॥
ಎಱಲ್ವ ಪತತ್ರಮೆತ್ತಿ ನಸುನೀಡಿದ ಗೋಣ್ತೊಱಿದುದ್ಭಚಂಕುಮಂ ।
ಡಳಮರೆಮುಚ್ಚೆ ದಚ್ಚೆ ಮಿಡುಕಾಡುವ ತಾಳುಗೆ ತಪ್ಪುಖಾಕ್ಷಸ ॥
ಮ್ಮಿಳಿತಕನೀನಿಕಾಯುಗಳವೊಪ್ಪೆ ನವಾಂಬುದಬಿಂದುವೃಂದಮಂ ।
ಗಳಗಳನೀಂಟುತಿರ್ದುದು ಮನಂ ತಣಿವಂತಿರೆ ಚಾತಕೋತ್ಕರಂ ॥೪೬॥
ತಳತಳನೆ ಸುರಿವ ಮುಂಬನಿ ।
ಗಳ ಬಳಗಂ ಚಾತಕಕ್ಷುದಾಗ್ನಿಯನಲೆದಾ ॥

ಪಾ—1 ಱು.

ಗಳೆ ವಿರಹಿಜನಮನೋಜಾ ।
ನಳನುರಿಯಂ ಕೊರ್ವಿಸಿತ್ತಿದೇಂ ಚೆತ್ರತರಂ ॥೪೩॥
ಪನಿ[ತುವು]¹ ಮುಂಗಾರೊಳ್ಬ ।
ಲ್ವನಿಗಳ್ಬಿಲುವನಿಗಳೊಂದೆವನಿಗಳ್ತಂದ ॥
ಲ್ವನಿಗಳ್ಬಿಡುವನಿಗಳ್ಕಡು ।
ವನಿಗಳ್ಸುರಿವನಿಗಳಡಸಿದಿಡುಕುಂಬನಿಗಳ್ ॥೪೪॥

ನೆರೆದ ಪಯೋದಮಾಳೆ ತಪನೋತ್ಕಟತಾಪಮನೆಯ್ದೆ ಪೀರ್ದುದಿಂ ।
ಚರಿಯಿಪೊಡಾಯ್ತು ತಣ್ಪು ನಮಗೆಂದುಹೆ ಕಯ್ನೀ²ದಾಡುವಾವಿಯ ॥
ಚ್ಚರಿಯರ ತತ್ಕರಾಭರಣವಿದ್ರುಮರತ್ನದ ರಾಜಿ ಸೂಸಿದಂ ।
ತಿರೆ ಪರರಂಜಿಸಿತ್ತು ಪಿರಿದುಂ [ನೆರೆದಾ] ಸುರಗೋಪಮುರ್ವಿಯೊಳ್ ॥೪೫॥

ಸುರಗೋಪಚ್ಛಲದಿಂ ಧರಾರಮಣಿ ರಾಗಂಬೆತ್ತು ಮಾದ್ಯನ್ಮನೋ ।
ಹರಮುಖ್ಯಾಸನಮಂಡಳೀ...ವಿಷದೀಗಳ್ನರ್ತಿಸುತ್ತಿರ್ದಳಾಂ ॥
ಬರೆ ಕಂಡೆಂದು ಪಸಾಯಮಂ ಜಲಧರಂ ಕೂತಿರ್ಪವ ಮುಕ್ತಾಳಿವೋಲ್ ।
ಕರಕಂಗಳ್ ಪಿರಿದುಂ ಮಹೀತಳದೊಳಂತಲ್ಲೊಕ್ಕವೆತ್ತೆತ್ತಲುಂ ॥೪೬॥

ತರಳತಟಿದ್ವಿಲೋಚನೆ ಸಮುದ್ಗತವಜ್ರನಿನಾದನಾದೆ ವಿ ।
ಸ್ಫುರಿತಬೃಹತ್ಪಯೋಧರಪಯೋಧರೆ ತತ್ಕರಕೋರುಹಾರೆ ಕ ॥
ರ್ಪೂರಘನಕಾಂತಿಕಾಂತಕಬರೀಭರೆ ಮಾರುತಯಾನಯಾನೆ ಭಾ ।
ಸುರಸುರಚಾಪಚಿತ್ರವಸನಾವೃತೆ ನೀರಜಲಕ್ಷ್ಮಿ ರಾಜಿಪಳ್ ॥೪೭॥

ಭೋರೆನೆ ಸುರಿವಮಳಪಯೋ ।
ಧಾರಾರುತಿಯಿಂ ಪೊದಜ್ದು ಬೀಸುವ ಜಂಝಾ ॥
ಮಾರುತರುತಿಯಿಂ ಭುವನಮ ।
ದೋರಂತಿರೆ ಕಿವ್ಪುಡುವಟ್ಟುದಾಸರಿವಬ್ಬಿಯೊಳ್ ॥೪೮॥

ಪರಿವ ಜಳಪ್ರವಾಹಕಾಳದಿಂ ನೆಲಿ³ ²ಕಚ್ಚ ಟ¹²ವೋಗೆ ಭೂ ಧರೋ ।
ತ್ಕಳಮಿರದೆಯ್ದೆ ³ಬೇ³ಕೊರೆದಡಂಗೆಡೆಯುತ್ತಿರೆ ಪೆರ್ಮರಂಗಳು ।
ರ್ವಿನೆಯಳುಮರ್ಪಣಕ್ರಿಯೆಯನಾಂತುದು ನಾಡೆಯುವೆಂಬಿನಂ ಕರಂ ।
ಸುರಿದುದು ಭೋರೆನುತ್ತೊಗೆದ ಕಾರ ಮುಗಿಲ್ ಮಟಿಯಂ ನಿರಂತರಂ ॥

ಪಾ—1. ತಟ. 2. ಕಚ್ಚರಿ. 3. ಬೋ.

ವ ॥ ಅಮೇಘಕಾಲಮಂಧಾಸುರಧುರಧರಣೀಯಂತೆ ನೀಲಕಂಠತಾಂ
ಡವಾಡಂಬರಮುತ್ಸಾರಿತದ್ಯದೈಯಂತೆ(?)ಕಾಟಜಪ್ರಭಾವೋಪಜೆತವಿಭ್ರಾಜಿ
ತಮುಂ, ನವಗಭೂರ್ಂಗನಾವಿಭ್ರಮದಂತೆ ಕಾಳಿಮಪಯೋಧರಾಸ್ಯರಮಣೀ
ಯಮುಂ । ಸಂಚಾರಿಭಾವಸನುತಿಯಂತೆ ಸಮುಜ್ಜಿತಜಡವೃತ್ತಿಯುಂ ।
ಸತ್ವಮಯಸಖ್ಯಾಂತನಂತೆ ಸಮುತ್ಸಾರಿತರಜೋವೃತ್ತಿಯುಂ । ಶತಮಖಸ್ವ
ರುದಂಡದಂತೆ ನಿರಂತರಧಾರಾಭಿರಂಜಿತಮುಂ । ಸಂಯಮಿಪ್ರಕರದಂತೇಕ
ಸೌಭಾಕರಮುಂ । ನೀರೇರೇಜನಾಭನಂತಭಿವರ್ಧನೀಕೃತಾರ್ಜುನಮುಂ। ವಿಶ
ಸನಾವಳಿಯಂತೆ ವಿಜೃಂಭಿತವಾಹಿನೀಸಮೂಹಮುಂ।ತೂಣೀರಮಂಡಳದಂತೆ
ಶರೋತ್ಕೀರ್ಣಮುಮಾಗಿರ್ದಂತುಮಲ್ಲದೆಯುಂ

ಕಮನಪ್ರಸನ್ನಕೃತಕಕು ।
ಭಮಿದೆನಿಸಿಯಪ್ರಸನ್ನಕೃತಕಕುಭಂ ತಾಂ ॥
ಕಮಳಾಭಿವೃದ್ಧಿವೆತ್ತಂ ।
ಕಮಳೋತ್ಸವಕಾರಿಯಲ್ತು ಜಳಧರಕಾಲಂ ।೫೪॥

ತೊಡರ್ದ* ತಟಪ್ರಭಾಹತಿಗೆ ಕರ್ಪಟಿದತ್ತೆನೆ ಮೇಘಮೂಳೆ ಬೆ ।
ಳ್ಪಡರ್ದುದು* ತಾಂ ಕ್ಷಣಾಂಶುವೆನಿಸಿರ್ಪುದು ತಪ್ಪದೆನಲ್ಕೆ ಮಿಂಚು ಮೆ ॥
ಯ್ಯಡಗಿದುದವ್ಯವಸ್ಥನ ಮನಃಪ್ರಿಯದಂತಿರೆ ಪೋದುದಾಗಳಂ ।
ತೆಡೆವಿಡದಿರ್ದ ಶಕ್ರಧನುವಾಬಡಹಂ ಬರೆ ಮೇಘಕಾಲದೊಳ್ ॥೫೫॥

ಬತಹಂ ಕೈಕೊಂಡುದುರ್ವಿತಳಮದು ನೆಹ ಜೌಗೆಟ್ಟುಮೆಟ್ಟಲ್ಕೆಬಲ್ಪೊಂ ।
ದೆಡೆಯಿಲ್ಲೆಂಬಂತೆ ಕಂಪಲ್ಮಸಗೆ ನನೆದು ನಿರ್ವಾವುಕಂ ನಾಡೆಯುಂ ಬೀ ॥
ಗೆ-ಡೆದೆತ್ತಂ ಬೆಟ್ಟುಗಳ್ಮಕ್ಕಳಸೆ ತೆರಳದಲ್ಲಲ್ಲಿ ತಮ್ಮಲ್ತಿ ಕಾಲಂ ।
ಬಿಡೆ ಕೀಲಿಲ್ಲಾಂದಿರ್ದತ್ತೆನೆ ಮೃಗನಿಕರಂ ಕೋಡುತುಂ ಕೂಡೆ ಕಾಡೊಳ್॥

ಎಲೆಗಳಿಯುಂಬಿನೊಳ್ ಮರದ ತೂರಲ ಕೊಂಬಿನ[ನೀಳ]ನೀಡದೊಳ್ ।
ತೊಲಗದೆ ನಿಂದಣಂ ನಡುಗುತುಂ ತನು ಕೋಡೆ ಕುನುಂಗಿ ಕಂಠಕಂ ॥
ದಳಮಿರದಬ್ದಿವೋಲ್ಕುಸಿದು ಪಕ್ಷಿಗಳರ್ದುವೆಱಂಕೆಯಗ್ರದಿಂ ।
ಜಲಲವಬಿಂದುಗಳ್ಸುರಿಯೆ ಪೆರ್ಮಡಹಂಬಿಡೆ ಸೋರ್ವಗುರ್ವಿನೊಳ್ ॥

ತನಿವಡಹಕ್ಕೆ ಕೋಡಿ ತನುವೊರ್ವುಳಿವಂದು ಕೊ[ರ]ಲ್ಲುನುಂಗಿ ಮೇ ।
ಪಿನ ಪ್ರದಿದಿಚ್ಛೆ ಯಚ್ಛಟ್ಟಿದು ಕರ್ಣಮೆಟಿಲ್ದು ಕರಂ ಕಟಿಲ್ದು ಕಂ ॥
ಪನವೆಡೆಗೊಂಡು ಕಿಬ್ಬಿಸಿಱ ಸೀಳ್ದ ನವಿರ್ಗೂನೆಯಿಂದೆ ತಟ್ಟು ಕ ।
ಣ್ಬನಿವಿಡುತುಂ ಮೃಗಪ್ರಕರಮಿರ್ದುದು ಕಾನನದೊಂದು ನಾನಲೊಳ್ ॥
ಜನವನಿತುಂ ವಿಶೀರ್ಣಸದನೋತ್ಕರನಾಗಿ ನವಾರ್ದ್ರವಸ್ತ್ರವೇ ।
ಷ್ಟನದಿನುಪೇತಕಂಪನದಿನುದ್ಧತರೋಮವಿಕಾರಗಾತ್ರದಿಂ ॥
ಜನಿತಮನೋನಿರೋಧ[1][ದಿನನುದ್ಯಮದಿಂ][1] ಮುರವಟ್ಟರಲ್ಕೆ ಸೀ ।
ರ್ದನಿವಡಹಂ ಪೊದಟ್ಟು ಮಸಗಿತ್ತು ತುಷಾರದ ತುಂತುರಿಂಬಿನಂ ॥೪೯॥
ನಲವಿಂದಂ ಮೇದು [2]ಮೆಲ್ಪುಗುವ[2]ನೊದವಿ ಕಡಲ್ವಾಯ್ವು
[ಪೂರಾಂಬುವಂ ತಂ ।
ಮುಲಹಿಂ ಪೊಕ್ಕೀಂಟಿ ಮೆಯ್ಯಂ[3]ದಳೆದು[3] ಪ್ರದಿದೆರಳ್ಚಿಂಸಲಕ್ಕೊರ್ವಿ ಪಾಲ್ಗೆ ॥
ಚ್ಚಲ ಬಿಲ್ಪಿಂ ನಿಂದು ಮೆಲ್ಕೊತ್ತುತುಮಿಳೆಯ ಪೊನಲ್ಗೆಯ್ದ
[ರೋಮಂಥಫೇನಾ ।
ವಳಿ ಗಂಗಾಶ್ರೀಯ ಸೊಂಪಂ ಕುಡುತಿರೆ ಮಹಿಷೀವೃಂದಮಿರ್ದತ್ತದೆತ್ತಂ ॥
ಜಳವಾಗಳ್ ಲವಮಿಲ್ಲೆನಲ್ಕಱಿದು ಮೇಘುಶ್ರೀಣಿ ಮತ್ತಂ ಪಯ ।
ಪ್ಕುಳಮಂ ವಾರಿಧಿಯೆಱಳ್ತರಲ್ತಡೆಯದಾದಂ ಪೋದುದೆಂಬಂದದಿಂ ॥
ಮಟಿಗಾಲಂ ಪೆಱಪಿಂಗೆ ಬಂದುದು ಶರತ್ಕಾಲಂ ಲಸತ್ಕುಟ್ಮಳಾ ।
ತುಳರೋಮಾಂಚದ ಸಾಲನೆತ್ತುತುಮುದಂಚನ್ಮಾಳತೀಗಾತ್ರದೊಳ್ ॥೬೧॥
ಬರೆ ವಿಖ್ಯಾತಶರದ್ಭುಜಂಗನವನೊಳ್ತಾಂ ಕೂಡುವೌತ್ಸುಕ್ಯದಿಂ ।
ಪರಿಮುಕ್ತಾಂಬುದವಸ್ತ್ರೆಯಾದಳೊ ವರಾಳೀವಕ್ತ್ರಮಂ ವೀಕ್ಷಿಪಾ ॥
ತುರದಿಂ ವೇಟ್ಟಿತಕಾಂಡಕಾಂಡಪಟಮಂ ನೂಂಕಿರ್ದಳೊಬ್ಬ ಮಾಸಾಂ ।
ದರಿಯೆಂಬಂತೆ ಪಱಿಚ್ಚನಾಯ್ತು ಗಗನಂ ಮೇಘುಬ್ರಹಂ ಪೋಗೆಯುಂ ॥
ವಿಳಸಿತಮಪ್ಪಳಂಕರಣಕಾಸ್ತದವೊಲ್ದೆಸೆಗಳ್ಪ್ರಸನ್ನಮಂ ।
ತಳೆದು ಪೊದಟ್ಟುವಾರುಚಕಭೂಷೆಯದೊಲ್ನೆಲೆಗೊಂಡು ಕಾಂತದೊಳ್ ॥
ಪೊಳೆವ ಪಯಃಪ್ರವಾಹಮಯವಾಯ್ತು ನದೀತತಿ ಸತ್ಕವೀಂದ್ರನು ।
ಜ್ಜ್ವಳಕವಿತೋಕ್ತಿವೊಲ್ಮೃದುಪದನ್ಯಸನೋಜ್ಜಿತಮಾಯ್ತಿಳಾತಳಂ ॥

ಪಾ—1 ದಿನಮಧ್ಯಮದಿಂ. 2 ಮೆಲ್ಪುಲ್ಲುಗುವ 3. ದಳಿದು.

ವರಚಂದನಚರ್ಚಾವಿ ।
ಸ್ತರಮಪ್ಪ ಮನೋಜಕುಂಭಿಕುಂಭಂಗಳವೋಲ್ ॥
ನೊರೆವೆಳ್ಪಂ ಪುದಿದು ಮನೋ ।
ಹರಮಾದುವು ತೆಱದಿದು ನದಿಯ ಪುಳಿನತಳಂಗಳ್ ॥೬೪॥

ವನರುಹಷಂಡದ ವಾರಿಯ ।
ತನಿಗೊರ್ವಿಗೆ ತೊಲಗಿ ತಿಳಿಯೆ ತಪ್ಪದದೊಳ್ತಾ ॥
ಮಿನಮುಖವೀಕ್ಷಾತುರತೆಯ ।
ನೆನಸುಂ ನಿಮಿರ್ದಂತೆ ತೋಱಿದುವು ಜಲಜಂಗಳ್ ॥೬೫॥

ಜಾತಿವಿಳಾಸವೊಪ್ಪೆ ಸಡೆತಂದನುದಗ್ಶರನ್ಮಹೀಕನೆಂ ।
ದಾತತಲೀಲೆಯಿಂ ಗಗನಲಕ್ಷ್ಮಿಗೆ ಪೇೞಲಡರ್ತು ನೀಳ್ದುದಾ ॥
ಖ್ಯಾತಿಯ ದುಗ್ಧವಾರಿನಿಧಿಯಂಬಿನಮಂಬರಮಂ ಪೊದಱ್ದು ಶು ।
ಭ್ರಾತುಳಶೋಭೆಯಿಂದೊಗೆದುದಾಗಳೆ ಶಾರದನೀರದೋತ್ಕರಂ ॥೬೬॥

ಹೇಮಂತಂ ಬರಲಿರ್ದನೆಂಬ ಭಯದಿಂದೆಱ್ದಿಸರಂ ನೀರದ ।
ಸ್ತೋಮಂ ಪೋ ಬರುತಿರ್ದುದೀಗಳೆನಲುದ್ಯನ್ಮಾನಸಸ್ಥಾನದಿಂ ॥
ತಾಮೆೞ್ತಂದು ಮುರಾಳಜಾಳವೆನಸುಂ ಪೊರ್ದಿತ್ತು ಪ್ರಂಡಾಂಬುಜೋ ।
ದ್ದಾಮಶ್ರೀಯ ವಿಳಾಸಮಂ ದಿಗುಣಿಸುತ್ತಬ್ಜಾಕರಾನೀಕದೊಳ್ ॥೬೭॥

ತಾರಗೆಗಳ ಬೆಳಗವನಿಗೆ ।
ಬೇರಿಳಿಯುತ್ತಿರ್ದುದೆಂಬಿನಂ ಬೆಳ್ಸರಿಗಳ್ ॥
ಭೋರೆನೆ ಸುರಿದುವು ಶಾರದ ।
ನೀರದದಿಂ ತುಱುಗಿ ತೆಱತೆಱಂಬೊಳೆಯುತ್ತುಂ ॥೬೮॥

ವಿಳಸನ್ಮೌಕ್ತಿಕಯುಕ್ತದಿಂ ಮೊಗೆದು ಮುನ್ನಂ ವಾರ್ಧಿಯೊಳ್ತಂದು ತ ।
ಜ್ಜಳಮಂ ತಾಂ ನೆಱಿ ಧಾತ್ರಿಯೊಳ್ಕಱಿದು ಮತ್ತಂ ತಪ್ಪಯೋದಾಬ್ಜಮಂ ॥
ಬಲಿಯೊಳ್ಕಣ್ಗೊಳಿಸುದದಿಂದೆ ಕಱಿಕಿಯುತ್ತಿರ್ದಪ್ಪುದಾಶುಕ್ತಿಜಂ ।
ಗಳನೆಂಬಂತೆ ಸಮಂತು ಸಾರ್ದುವು ಪೊದಱಿಕ್ಕೀರಂತೆವಾರ್ಬಿಂದುಗಳ್ ॥

ಶರದಭ್ರಮೆಂಬ ಶುಭ್ರಾಂ ।
ಬುರುಹಮೃಣಾಳಂಗಳಿನಿಸಿ ಕಣ್ಮೊಳಸುತ್ತುಂ ॥
ಸುರಿದುವು ನಿರಂತರಂ ಬ ।
ಲ್ಸರಿಗಳ್ಸಂಗಳಿಸಿ ವಿಪುಳವಿಪುಳಾಂತರದೊಳ್ ॥೭೦॥

ಉತ್ಸುಕಹೇಮಂತಂ ಹಿಮ ।
ವತ್ಸುಭಟಂ ಬರ್ಪನೀಗಳೆಂಬುರುಭಯದಿಂ ॥
ದುತ್ಸಾರಿತವಾದಂತೆ ಶ ।
ರತ್ಸಮಯಂ ಪಿಂಗಿ ಬೀಗದಿಂ ಪೋದಾಗಳ್ ॥೭೧॥

ಪುದಿದವನೀಜಸಂಕುಳದಳಂಗಳನುರ್ಜೆ ಕೊಳುತ್ತುಮಾನದೀ ।
ನದನಿಕರಾಮಳೋದಕದೊಳಟ್ಟಿಕೊಳುತ್ತುಮರ್ದುತ್ತೆ ನಾಳತೀ ॥
ವಿದಳಿತಪದ್ಮರೇಣುಗಳನೊಟ್ಟಕೊಳುತ್ತುಮೆ ಬಂದುದುನ್ಮದೇ ।
ಭದ ತೆಱದಿಂ ಹಿಮಾವೃತಮಹಾರುತನೈಂದ್ರಿಯದೊಂದುಮಾರುತಂ ॥೭೨॥

ನಾಳತಿಯಲ್ಲದೇವುಳಿತರಪ್ರಸವಾವಳಿಯೆಂಬವೋಲ್ ಸಮು ।
ನ್ಮೊಳಸುತುಂ ಲತಾಂಕುಳದ ಪೂಗಳನುದ್ಯಹಿಮೋಗ್ರಖಡ್ಗಮಂ ॥
ಚಾಳಿಸುತುಂ ಸುರಾಧಿಪದಿಶಾನಿಳವಾಹಮನೇಱಿ ಬಂದುದಾ ।
ಭೀಳತೆವೆತ್ತು ಮಾಗಿ ತುಹಿನೋರುಕಳೀವರಮಾಗಿ ಬೀಗದಿಂ ॥೭೩॥

ಅನುಪಮನಾಳಕೇರಫಳಸಂಕುಳವೊಳ್ಳಿಳನೀರನಾಂತುದಿಂ
ಪಿನ ರಸದುರ್ವನಾಳ್ದ ನಯವೇಱುದುದಿಕ್ಪುನಿಕಾಯಮೆಯ್ದೆ ಭೋಂ ॥
ಕೆನೆ ನವಸಿಂಧುವಾರತರು ಕುಟ್ಮಳಕೋಟಿಯನಪ್ಪುಕೆಯ್ದುದೊ ।
ಯ್ವನೆ ಬದರದ್ರುಮಕ್ಕೆ ಫಳಮುನ್ಮೆದುದುನ್ಮೆ ಪೊದಳ್ದಿ ಮಾಗಿಯೊಳ್ ॥

ಭೂಮಿಹಿಳೆಯೊಳೊಂದಿದ ವಿಟ ।
ಹೇಮಂತನಿನಾಗಳೋದನವನಖರೇಖಾ ॥
ಸ್ತೋಮಮಿದೆನೆ ಬೀಡೆಗಳು ।
ದ್ದಾಮಂಬೆತ್ತೊಗೆದುವೆಱಿಯ ಕೆಯ್ಗಳೊಳಾಗಳ್ ॥೭೫॥

ಪೆಸರ್ವೆತ್ತ ಧಾತ್ರಿಯಂ ನೀ ।
ರಸವಂ ಮೂಡಿತ್ತು ಮತ್ತೆ ಧಾತ್ರೀಫಳಮುಂ ॥
ರಸಮುಯಮುಂ ಮೂಡಿತು ಮಾ ।
ಗಿ ಸಮುಂತೇಂ ಹರಣಿಭರಣಕಾರ್ಯಕ್ಷಮವೋ ॥೨೩॥

ಕುಂದುವ ಪೆಚರ್ವೊಂದು ತೆಱದಿಂ ಶಶಿಬಿಂಬವಿದಾವಗಂ ಸುವ್ಯಂ ।
ದಂ ದೊರೆವೆತ್ತು ತೋರ್ಪುದಱಿನಾರವಿಬಿಂಬಮಿದೆಂಬ ಭಾವಮಾ ॥
ದಂ ದಿಟವಾದುದಲ್ಲದೆ ಹಿವಾಹಿವಭೇದವುದಗ್ಗಿ ಪೋಯ್ತು ತಾ ।
ನೆಂದೊಡೆ ಬಂದ ಮಾಗಿಯ ಪೊದಱ್ದಿ ತುಷಾರವಿದೇನಪಾರವೋ ॥೨೪॥

ಇದು ಬಿಸಿಲಿದು ಪೊಸಚಂದ್ರಿಕೆ ।
ಯಿದು ದೀಪಿಕೆಯಿದು ನವೀನಮಣಿದೀಪಿಕೆಯೆಂ ॥
ಬುದು ತೋಱದು ತಾನೆನೆ ಪೇ ।
ಱಿರೊದವಿದ ಮಾಗಿಯ ಹಿವೌಘಮೇನದ್ಭುತವೋ ॥೨೫॥

ಮುಕುಳಿತವೃತ್ತಿಯಾಯ್ತು ಸತತಂ ಶತಪತ್ರಸಮೂಹಮಾವಗಂ ।
ವಿಕಸಿತರೂಪಮಾಯ್ತು ಕುಮುದಾವಳಿ ಕೋಕಕುಳಂ ವಿಯೋಗಮಾ ॥
ವಕಪರಿಯುಕ್ತಮಾಯ್ತು ನಿಶಮೆಯ್ದಿ ಚಕೋರಚಯಂ ವಿಭಾಸುರಾ ।
ಧಿಕಮುದಮಾಯ್ತೆನಲ್ಕೆ ತುಹಿನೋತ್ಕಟಮೆಂತುಟೊ ಮಾಗಿ
[ಯೀಱಿನಿಯೊಳ್ ॥೨೬॥

ಕಱುಕಿವ ಹಿಮವರ್ಷಪಾತದಿ ।
ನೆಱಂಕೆನಾಂದಳಿಗಳರ್ದುವೆತ್ತಂ ಪಾಱ ॥
ಲ್ಮೆಱುಕಿಯದೆ ಪಾಡಱಿದಂಬುಜ ।
ದಿಱುಂಬಿನೊಳ್ಕಡುಕದಲ್ಲಿ ಮಾಗಿಯೊಳೆಲ್ಲಂ ॥೨೭॥

ಜಳಧಿಪನೌರ್ವಹ್ನಿಯನೆ ಸಾರ್ದನಿನಂ ಸಲೆ ದಕ್ಷಿಣಾಯನ ।
ಚ್ಛಲದೊಳೆ ಪೊರ್ದಿದಂ ಶಿಖಿಯನಾ ಗಳಹಾರಭಣೀಶನೀಶ್ವರಾ ॥
ತುಳನಿಭಲಾಂಬಕಾನಳನ ಸಾಗಿರದೆಯ್ದಿದನೆಂದೊಡಾವನ ।
ಸ್ಖಳಿತದಿನಿರ್ದನಿಂತೊಗೆದ ಮಾಗಿಯ ವಿಸ್ತೃತಶೀತಪಾತದಿಂ ॥೨೮॥

ಪಲ್ಲದಾಗಳ್ಪನಿಪುಲ್ಲ ಬಿಂದುಗಳ ತಂದಲ್ ರೋಮರೋಮಂಗಳಂ ।
ನೆಹೆ ಪಾಱುತ್ತಿರೆ ಜಾನುಮಧ್ಯಗತಮೂರ್ಧ್ವಬಾಹ್ಯತಮಾಗಿಂತು ಪ ॥
ಲ್ಪಹೆಗುಟ್ಟುತ್ತುಮೆ ವಾನರಾಳಿ ನಡುಗುತ್ತಿರ್ದತ್ತು ಶಾಖಾಗ್ರದೊಳ್ ।
ಸೆಹೆಗೆಯ್ದಂತಿರೆ ಮುಂಬಗಲ್ವರಮದೆತ್ತಂ ಪೋಗದಾವಾಗಿಯೊಳ್ ॥೭೯॥

ಪುದಿಯೆ ಹಿಮಂ ನವಿರ್ಚಿದಱಿ ಮೆಯ್ಮಿಗೆ ಕೋಡಿ ಕಪಿಬ್ರಹ್ಮಂ ನಿಜಾ ।
ಸ್ಪದಕುಜಪಾರ್ಶ್ವದೊಳ್ಪುದಿದು ಕೆಂಬೆಳಗಂ ಕೆದಱುತ್ತುಮಿರ್ಪ ರ ॥
ತ್ನದ ಪಿರಿದೊಂದು ಪಾಸಹೆ ದವಾಗ್ನಿಯ ದಳ್ಳುರಿಯೆಂದು ಹತ್ತೆಸಾ ।
ರ್ವುದು ತಳಮಂ ನಿಮಿರ್ಚುತೆನೆ ಮಾಗಿಯ ಶೀತಮಿದೇಂ ಪ್ರಭೂತವೋ ॥

ಪಕ್ಕದಿಱುಂಬಿನೊಳ್ಮಱೆಯಸಿಟ್ಟು ಕುಲಾಯಮನೊತ್ತುಗೊಂಡು ಮೆ ।
ಯ್ಯಿಕ್ಕಿ [1][ಕೊರ]ಲ್ಗುನುಂಗಿ ನವಿರಗ್ರದೊಳಾಪನಿಪುಲ್ಲಬಿಂದುಗಳ್ ॥
ತೆಕ್ಕನೆ ತೀವಿ ಮುತ್ತಿನ ವಿಹಂಗಮದಂತೆ ವಿಹಂಗಸಂಕುಳಂ ।
ವೊಕ್ಕಳವಾಗಿ ಮಾಗಿಯೊಳಗಿರ್ದುದು ಪಾಱದೆ ಮುಂಬಗಲ್ವರಂ ॥೮೧॥

ಹಿಮಮನುರ್ದು ನಡುಗುತುಂ ಮೃಗ ।
ಸಮುದಯಮುಶ್ವಾಸಮಾರುತೋತ್ಪನ್ನದ ಲೋಭಂ ।
ನಿಮಿರ್ದಲ್ಲಿ ಮುಂಬಗಲ್ವರ ।
ಮನುರ್ದಿರ್ಪುದು ವೊತ್ತಮಾಗಿ ಮಾಗಿಯೊಳೆತ್ತಂ ॥೮೨॥

ಸಮುದಿತಶೀತವಾತಪರಿಪಂಕಕಳೇವರಮಾಗಿ ಕಾನನೇ ।
ಭಮದಿರೆ ಕಂಡು ಕಾಮ್ಪೊದವಿ ಕಾಯಲೊಡರ್ಚಿ ನಿಜಾಂಗಸಂಧಿಬಂ ॥
ಧಮನನಿತಂ ನಿಮಿರ್ಚಲಣಮಾಱದೆ ಗರ್ಬಿಸುತಿರ್ದುದಲ್ಲಿ ಸಂ ।
ಕ್ರಮಿಸಿದ ಮಾಗಿಯೊಂದು ತುಹಿನೋತ್ಕಟಸಂಕಟದಿಂ ವ್ಯಗಾಧಿಪಂ ॥

ಸಲೆ ನೆಲೆದೋಱದಾನದಿಯ ಕರ್ಮಡುವಂ ಪೊಱಮಟ್ಟು ಕೂಟಮ ।
ಗ್ಗಲಿಸಿ ಬಿಸಿಲ್ಗೆ ಮೆಯ್ಯ್ಯನಡವೊಡ್ಡಿ ತದೀಯತಟಂಗಳಲ್ಲಿ ಯಿಂ ॥
ಬಿಲ ಕಡುಗೊಂಬುಗಳ್ತಱುಗಿ ಬಿದ್ದವೊಲಿರ್ದುವು ಮುಂಬಗಲ್ವರಂ ।
ತೊಲಗದನಾಕುಲಂ ವೊಸಳೆಗಳ್ನೆರೆದೊತ್ತರವಾಗಿ ಮಾಗಿಯೊಳ್ ॥೮೩॥

ಪಾ—1. ಕರ.

ಕಡುದಣ್ಣಿಸಾಯ್ತು ದವಶಿಖಿ ।
ಕಡಲೊಳ್ಪೊಡೆಕರಿಸಿ ತೋರ್ಪ ಶಿಖಿ ಮುಗ್ಗಿದುದಾ ॥
ಮೃಡನ ನಿಟಿಲಾಕ್ಷಿಶಿಖಿ ಮೆ ।
ಯ್ಯಡಗಿದುದೇನೆಂಬೇನಾವಾಗಿಯ ಹಿಮಮಂ ॥೮೫॥

ಮುಳಿದ ನಿಯುಕ್ತವಲ್ಲಭಜನಂ ತಿಳಿವಿಲ್ಲದೆ ತಕ್ಕೈಗೊಂಡುದ ॥
ಸ್ಖಳಿತಕೃಷೀಕುತೂಹಳಜನಂ ಮದವಿಪ್ಪಗುತಿರ್ದುದಾತುಳಂ ।
ಗಳನೆಕಾರ್ಯದೃತಯಾಜನಂಮುಸುಕಿಟ್ಟುನಿಂದುದೇನಳಂಬವೋ(?) ।
.....ಪುದಿದ ಮಾಗಿಯ ಶೀತ[1]ವಿಜೃಂಭ[1]ಸಾತನಂ (?) ॥೮೬॥

ಪ್ರಯವನಿತಾಘನಸ್ತನದಿಂಬಿನೊಳ್[2][ದ್ಧ]ಕಟೀತಟಂಗಳಾ ।
ಶ್ರಯದೊಳುದಗ್ರಮಪ್ಪ ನಳತೋಳ್ಗಳ ತಳ್ಕನೊಳೊಪ್ಪುವೆತ್ತ ಬಾ ॥
ಸೆಯ ಬಲಿಯೊಳ್ನವೋಷ್ಮಪುಟಪಲ್ಲವದೊಳ್ಕಸುಪಾಗಭೀರನಾ ।
ಭಿಯೊಳೊಳಪೊಕ್ಕು ಕಾಮುಕಜನಂ ಬರ್ದುಕಿರ್ದುಮ ಬಂದ
[ಮಾಗಿಯೊಳ್ ॥೮೭॥

ನಸುಬಿಸಿಯಪ್ಪ ನಲ್ಲುಣಿಸಿನಿಂ ಘುಸೃಣಾದರ್ಶವಿಲೇಪದಿಂ ವಿರಾ ।
ಜಿಸುವ ಕದಂಬದಂಬುಲದಿನಂಜಿತಕಾಂಚನಭೂಷಣಂಗಳಿಂ॥
ದೆಸಕದ ಶೋಣವರ್ಣವಸನಾವೃತದಿಂ ಜನವಾಗಳಿಂತು ಜೀ ।
ವಿಸಿತಿನಿತಿಲ್ಲದಂದುಲಿ[3]ವುದೇ ಹಿಮದಾಗರಮಾದ ಮಾಗಿಯೊಳ್ ॥೮೮॥

ವ॥ ಇಂತು ಭುವನಮೆಲ್ಲಂ ಹಿಮಭವನಮಾಗಿರ್ದ ಮಾಗಿ ಪೋಗೆ ಯುಮಾಗಳ್ ಸೇನಾಪತಿ ತಾನೆ ಪೋಗಿ ತಾಂ ವೈಶ್ಚಖಂಡಮಂ ಸಾಧಿಸಿ ತದೀಯಧರಾಧೀಶ್ವರರಂ ಕರೆತಂದು ಕಾಣಿಸಿ ಕಾಣ್ಕೆಗೊಂಡು ನಯವು ನಿತ್ತುಂ ವಜ್ರಾಯುಧಚಕ್ರವರ್ತಿ ವಿಜಯಸೈನ್ಯಸಮನಿಂ ವಿಜಯಾರ್ಧ ಪರ್ವತಮಹೀಧರಗುಹೋದರಸರಿದುಭಯತೀರಂಬಿಡಿದು ನಡೆದು ಪೊಱ ಮಟ್ಟು ನಿಪಧನಗೇಂದ್ರಾಸನ್ನಮಪ್ಪ ಮಧ್ಯಮವೈಶ್ಚಖಂಡದೊಳ್ ಬೀ ಡಂಬಿಟ್ಟರ್ಧಿಸಮಾದಕ್ಷಿಣಖಂಡವರ್ತಿಗಳಪ್ಪ ಧರಿತ್ರೀಪತಿಗಳಂ ಸೇನಾಪತಿ ಸಾ ಧಿಸಿ ತಡಿಯನೆಯ್ದಿವಂದು ಮಧ್ಯಮಖಂಡದ ಚಂಡಬಳಧೆನಿಪ ಜೆಲ್ಲಾವರ್ತ

ಪಾ—1. ಪಾತಪಾತನಂ. 2.

ಭೂಕಾಂತರಂ ಭಯಾಯತ್ತ ಸ್ವಾಂತರಂಮಾಡಿ ಸಮಸ್ತವಸ್ತುವಾಹನಂಗಳ
ನಿರ್ಘಾಳಿಗೊಂಡು ತಂದು ಕಾಣಿಸೆ ಕಂಡವರ್ಗಭಯವುನಿತ್ತು ಚಕ್ರವರ್ತಿ
ವೃಷಭಗಿರೀಂದ್ರತಟವಿಶಾಳಶಿಳಾಪದ್ಮದೊಳ್ ನಿಜವಿಜಯಪ್ರಶಸ್ತಿವಿಸ್ತ
ರಮಂ ಬರೆಯಿಸಿ ಮಗಳ್ದ ವಿಜಯಾರ್ಧನಗೋಪತ್ಯಕದೊಳ್ಬೀಡಂ
ಬಿಡುತ್ತುಂ, ಬಂದು ಮುನ್ನಿನಂದದಿಂ ಪೃತನಾಪತಿ ತದೀಯಗುಹಾದ್ವಾರಮಂ
ತೆಹೆದು ತಮ್ಮೀಚ್ಛಖಂಡವಸುಂಡಿಗೆ ಸಾಧ್ಯಂಮಾಡಿ ನಾಟ್ಯಮಾಳಾವರರ
ನೆಱಗಿಸಿ ಕೊಂಡು ಮಹಾಗುಹಾದ್ವಾರದಿಂ ಮಗುಳ್ದಾರ್ಯಾಖಂಡದೊಳ್ಕಟ
ಕಮಿರ್ದುದುಂ ಮತ್ತಮುಱಿದ ಮ್ಲೇಚ್ಛರನಿಚ್ಛಾಮಾತ್ರವರ್ತಿಗಳಂ ಮಾಡಿ
ಬರೆಯುಂ, ಸ್ವಕೀಯಸೇನಾಪತಿಯುಂ ದಿಗ್ವಿಜಯಸಿದ್ಧಿವೆತ್ತು ಚಕ್ರವರ್ತಿ
ಮಗಳ್ದ ಪುರಾಭಿಮುಖನಾಗಿ—

ಧರೆ ಸೇನಾಪಾದಪಾತಕ್ಕದಿರ್ದು ಸುರುಳಿ ಸೂಳ್ಪೈಸುವಾಭೀಳನಿಸ್ಸಾ ।
ಳರವಕ್ಕಾಸಾಗರೌಘಂ ತೆರೆಮಸಗಿ ತುಳುಂಕಾಡೆ ನೀಳ್ದ ತಾರೋ ॥
ತ್ಕರಸಂಘನ್ನಕ್ಕೆ ತಾನಂಬರದೆಡೆಗಿಡೆ ಯಾನೋಚ್ಚಳದ್ಧೂಳಿಗಾಸಾ ।
[1]ಗರ [ಚಂದಂ] ಕಣ್ಗಳಂ ಮುಚ್ಚೆರೆ ಮಗುಳ್ದ್ದು[1] ಪುರಕ್ಕಿಂತು ಬಂದಂ
[ನರೇಂದ್ರಂ ॥೪೯॥

ವ॥ ಇಂತು ಪುರಮಂ ಪೊಕ್ಕು—

ಅವನತರಿಳಾಧಿಪರ್ತನ ।
ಗವನತರಪ್ಪವನಿಪತಿಗಳಲ್ಲೆನೆ ಪದೆಪಿಂ ॥
ದವನಿಪಚಕ್ರಧರಂ ತಾ ।
ನವನೀಚಕ್ರಮನೆ ಪಾಲಿಸುತುಮೆಸೆದಿರ್ದಂ ॥೯೦॥

ವ॥ ಇಂತು ಸಂತತಂ ಸುಖದಿಂ ವಜ್ರಾಯುಧನರೇಂದ್ರನರಸು
ಗೆಯ್ಯುತ್ತುಮಿರ್ದೊಂದುದಿವಸವೊಹ್ಮೋಲಗದೊಳಿರ್ದಲ್ಲಿ—

ಕರಣಾಗತನಾನೆನ್ನಂ ।
ಪರಿಹರಿಸದೆ ಕಾವುದೆಲೆಲೆ ವಜ್ರಾಯುಧ ಸ ॥
ತ್ಕರುಣಾಕರ ನೀನೆನುತುಂ ।
ತ್ವರಿತದೆ ಬಂದೊರ್ವ ಖೇಚರಂ ಮಹೆವೊಕ್ಕಂ ॥೯೧॥

ಸಾ—1. ಗರವರಚ್ಛಂದಂ ಕಣ್ಗಳಂ ಮುಚ್ಚಿರೆ ಮುಗುಳ್ದು.

ಕಡುಮುಳಿದಾಖಚರನ ಬೀಱ್ ।
ಪಿಡಿದಾಗಳ್ ಬಂದಳಟ್ಟುತುಂ ಕೂರಸಿಯಂ ॥
ಜಡಿಯುತ್ತುಂ ಖೇಟಕಮುಂ ।
ಪಿಡಿದರ್ಬಿಸುತುಂ ವಿಯಚ್ಚರಾಂಗನೆಯೊರ್ವಳ್ ॥೯೦॥

ಕರಕಳಿತಗದಾದಂಡಂ ।
ಜರಾತಿಜರ್ಝರಿತಗಾತ್ರನೊರ್ವಂ ವಿದ್ಯಾ ॥
ಧರನಾಗಳ್ ಬ್ಬಂದಂ ಟ್ಟಕೆ ।
ಚ್ಚರದಿಂ ಬೀಱ್ಯೊಳ್ತ್ತದೀಯವಿದ್ಯಾಧರೆಯಾ ॥೯೩॥

ವ ॥ ಅಂತು ಬಂದಾವೃದ್ಧವಿದ್ಯಾಧರಂ ವಜ್ರಾಯುಧನರೇಂದ್ರನಂ ಕಂಡು-ದೇವ, ನೀನೀಪಳನಂ ಕಾದೊಡೆ ದುರಿತವಾದಪುದೇಕೆನೆ—ದುಷ್ಟನಿಗ್ರಹಂ ಶಿಷ್ಟರಕ್ಷಣಂ ನಿಮ್ಮದದುಕಾರಣದಿಂ ವಿಚಾರಣಂಗೆಯ್ವುದೆಂದು ಬಿನ್ನವಿಸಲದಂ ಕೇಳ್ದರಸನಿಂತೆಂದಂ:—

ನೀವಾರ್ಗ್ಗೇತಕೀರ್ಗ್ಗತನ ।
ನೀವಿದ್ಯಾಧರ.....॥
.....।
ನಾವೃತ್ತಕಮುಂ ನೃಪಂಗೆ ಪೇೞ್ವಲ್ಪುದೆಂ ॥೯೪॥

ವ॥ ಅದೆಂತೆಂದೊಡೀಪೂರ್ವವಿದೇಹದ ಸುಕಚ್ಛವಿಷಯದ ವಿಜಯಾರ್ಧಶೈಳದುತ್ತರಶ್ರೇಣಿಯ ಶುಕ್ರಪ್ರಭೆಯೆಂಬ ಪೋೞಲೊಡೆಯನಪ್ಪಿಂದ್ರದತ್ತಂಗಂ ಯಶೋಧರೆಗಂ ಪುಟ್ಟಿದೆನೆನ್ನ ಪೆಸರ್ಪವನವೇಗನೆಂಬುದು ಮದೀಯ ಸತಿ ಕಿನ್ನರಗೀತಪ್ರಿಯ ಜಿತ್ರಚೂಳನ ಸುತೆ ಸುಕಾಂತೆಯೆಂಬಳಾಸುಕಾಂತೆಗಮೆನಗಂ ಪುಟ್ಟಿದ ಶಾಂತಿಮತಿಯೆಂಬಳೀಕೆ ಮುನಿಸಾಗರಗಿರಿನಿತಂಬದೊಳ್ನಜೇಚ್ಛೆಯಿಂ ವಿದ್ಯೆಯಂ ಸಾಧಿಸುತುಮಿರಲೀತಂ ಕಂಡು ನಿಷ್ಕಾರಣದಿಂ ವಿಘ್ನಮಂ ಮಾಡುತ್ತುಮಿರಲಾಗಳಲ್ಲಿ ಗಾರಾಧನೋಪಯೋಗ್ಯವಸ್ತುಗಳಂ ತರಲ್ಪೋದೆನಾಸಮಯದೊಳ್[1]ವೃದ್ಧವಿದ್ಯೆಯಾಗಿ ಮುನಿದಿವನಂ ಬೆನ್ನಟ್ಟಿ ಬಂದ ನೆ ಕೇಳ್ದು ಚಕ್ರಧರನವಧಿಬೋಧದಿಂದಱಿದು,

---

ಸಾ—1. ೞ್ದಿದ್ಧ.

ಮುನಿಸಿಂದೀವಿದ್ಯಾಧರಿ ।
ಗಿನಿತುಂ ವಿಘ್ನಮನೆ ಮಾಲ್ಪ ಕಾರಣಮುಂ[1]ಟೇ ॥
ತನಗಲ್ಲದೇಕೆ[1] ಮಾಡುವ ।
ನೆನುತುಂ ನೃಪನದನೆ ಪೇೞಲುದ್ಯತನಾದಂ ॥೯೫॥

ವ॥ ಅದೆಂತೆಂದೊಡೀಜಂಬೂದ್ವೀಪದೈರಾವತಕ್ಷೇತ್ರದ ಗಾಂಧಾರ ದೇಶದ ವಿಂಧ್ಯಪುರದರಸಪ್ಪ ವಿಂಧ್ಯಸೇನಂಗಂ ಸುಲಕ್ಷಣಾದೇವಿಗಂ ನಳಿನಕೇತುವೆಂಬ ಕುಮಾರನಾದನಾಪೋೞಲೊಳರ್ ವನಮಿಶ್ರನೆಂಬ ಪರದಂಗಂ ಶ್ರೀದತ್ತೆಗಂ ಸುದತ್ತನೆಂಬ ಸುತನಾದನಾತನ ಮನಃಪ್ರಿಯೆ ಪ್ರೀತಿಂಕರೆಯೆಂಬಳಾಕೆಯೊರ್ಮೆ ವನವಿಹಾರದೊಳರೆಯುಂ ನಳಿನಕೇತುಕುಮಾರಂ ಕಂಡು ಬಲ್ಪಿಂ ಕೊಂಡು ಪೋಪುದುಮದುವೆ ನಿರ್ವೇಗಮಾಗಿ ಸುದತ್ತಂ ಸುಬ್ರತಕೇವಳಗಳ ಪಕ್ಷದೊಳ್ದೀಕ್ಷೆಗೊಂಡು ಮಹಾಬ್ರತಂಗಳಂ ನೆಗೞುತ್ತುಮಿರ್ದು ಜೀವಿತಾಂತ್ಯದೊಳೀಶಾನಕಲ್ಪದಲ್ಲಿ ದೇವನಾಗಿರ್ದೀಕಸಾಗರೋಪಮಾಯುರವಸಾನದೊಳಲ್ಲಿಂ ಬಂದು ಯಿಜಂಬೂದ್ವೀಪದ ವಿದೇಹಸುಕಚ್ಛವಿಷಯದ ವಿಜಯಾರ್ಧದುತ್ತರಶ್ರೇಣಿಯ ಕಾಂಚನತಿಳಕಪುರದರಸನಪ್ಪ ಮಹೇಂದ್ರವಿಕ್ರಮಂಗಂ ನಿಳವೇಗಾದೇವಿಗಮಿತಸೇನಜಿತಸೇನನೆಂಬ ಸುತನಾದನಾನಳಿನಕೇತುವಪ್ಪಾತನುಳ್ಕಾಪಾತಮಂ ಕಂಡದುವೆ ವೈರಾಗ್ಯಮಾಗಿ ಮುನ್ನಂ ತನ್ನಗೆಯ್ದ ದುಶ್ಚರಿತಕ್ಕೆ ಭೀರುವಾಗಿ ಸೀಮಂಕರಗುರುಚರಣೋಪಾಂತದೊಳ್ಪರಮತಪಮಂ ತಳೆದು ವೋಕ್ಷಮನೆಯ್ದಿದವಾಪ್ರೀತಿಂಕರೆಯುಂ ಸುಬ್ರತೆಯರೆಂಬಾರ್ಕೆಯರ ಸಾರೆ ತಪಂಬಟ್ಟು ಚಾಂದ್ರಾಯಣಂ ನೋಂತು ಜೀವಿತಾಂತದೊಳೀಶಾನಕಲ್ಪದೊಳ್ಪುಟ್ಟಿಬಂದೀಕೆ ನಿನಗೆ ಶಾಂತಿಮತಿಯೆಂಬ ಮಗಳಾದಳಜಿತಸೇನಂ ತನ್ನನವಜ್ಞೆಗೆಯಳಿಂದೀಕೆಗೆ ವಿಘ್ನಮಂ ಮಾಡಿದನೆಂದು ವಜ್ರಾಯುಧನರೇಂದ್ರಂ ಪೇೞಿ ಕೇಳ್ದಾಮೂವರುಮದುವೆ ವೈರಾಗ್ಯಮಾಗಿ ಕ್ಷೇಮಂಕರತೀರ್ಥಕರಸಮಕ್ಷಮದೊಳ್ ಪವನವೇಗನುಮಜಿತಸೇನನುಂ ಪರಿಚ್ಛೇದಿಸಿ ದೀಕ್ಷೆಗೊಂಡಾಶಾಂತಿಮತಿಯುಮಲ್ಲಿಯೆ ಧರ್ಮಮಂ ಕೇಳ್ದು ಸುಲಕ್ಷಣೆಯರೆಂಬ ಕಂತಿಕೆಯರ ಪಾದೋ

ಪಾ—1. ಟೀಕೆನಗಲ್ಕದೆ.

ಪಾಂತದೊಳ್ತಪಮುಂ ಕೈಕೊಂಡು ಕಾಲಾಂತರದೊಳೀಶಾನಕಲ್ಪದೊಳ್ ದೇವನಾಗಿ ಪುಟ್ಟಿ ನಿಜಶರೀರಪೂಜೆಯಂ ಮಾಡಲೆಂದು ಬಪ್ಪುದುಮಾಪ್ತಾವದೊಳ್ಪವನವೇಗಾಜಿತಸೇನಮುನಿಗಳ್ಗೆ ಕೇವಳಜ್ಞಾನೋತ್ಪತ್ತಿಯಪ್ಪುದುಂ ಕೇವಳಪೂಜೆಯಂ ಮಾಡಿ ಶಾಂತಮತಿಚರಾಮರಂ ನಿಜನಿವಾಸಮನೆಯ್ದಿದನನ್ನೆಗಮಿತ್ತಲ್—

ಮನವೊಸೆದಾವಜಿತ್ರಯುಧ ।
ಜನಪಂ ಸುತಸೂನುಕನಕಶಾಂತಿಕುಮಾರಂ ॥
ಗನುನಯಮೆನೆ ವೈವಾಹಮ ।
ನೆನಸುಂ ಮಾಡಲ್ಕೊಡರ್ಚಿದಂ ಸಂಭ್ರಮದಿಂ ॥೯೬॥

ವ॥ ಆಗಳ್ ಸಜೆವರಂ ಸಮಾಳೋಜಿಸಿ ವಿಜಯಾರ್ಧಗಿರಿಯ ದಕ್ಷಿಣಶ್ರೇಣಿಯ ಶಿವಮಂದಿರದ ಮೇಘವಾಹನಂಗಂ ವಿಮಳಾದೇವಿಗಂ ಪುಟ್ಟಿದ ಕನಕಮಾಲೆಯುಮನಶೋಕಪುರದರಸು ಸಮುದ್ರಸೇನಂಗಂ ಜಯಸೇನಾದೇವಿಗಂ ಪುಟ್ಟಿದ ವಸಂತಸೇನೆಯುಮುಂ ತಂದು ಮಹೋತ್ಸವದಿಂ ಶಾಂತಿಕುಮಾರಂಗೆ ವಿವಾಹಮುಂ ಮಾಡಿ ರೂಢಿವೆತ್ತು ಸುಖದಿನಿರುತ್ತುಮಿರೆಯು ಮೊಂದುದಿವಸಂ ವಸಂತಸಮಯದೊಳ್ ವನಕೇಳ್ಗೀಲೋಲಜಿತ್ತನಾಗಿಯಾ ಕನಕಶಾಂತಿಕುಮಾರಂ ನಿಜಕಾಂತೆಯುರ್ವೆರಸು ಮನೋನುರಾಗದಿಂ ಪೋಗಿ,

ಮದಭೃಂಗೀವ್ರಾತಗೀತಾರವಲಲಿತಲಸನ್ಮಲ್ಲಿಕಾವಲ್ಲರೀಸ ।
ದ್ಮದೊಳುದ್ಯನ್ಮಾಧವೀಮಂಡಪದೊಳೆಸೆವ ಜಾತೀಲತಾವಾಸದೊಳ್ಪೊ ॥
ತದ ಚಾರುಚ್ಛಾಯೆಯೊಳ್ಪಂಕಜದ ಪುದುವಿನೊಳ್ಗೀಸ್ತನೀವಿಸ್ತರಾಗಾ ।
ರದೊಳೋರಂತಾಕುಮಾರಂ ಸಲೆ ಚರಿಯಿಸುತುಂ ಜೆತ್ತಜಕ್ರೀಡೆವೆತ್ತಂ ॥

ವೆ॥ ಇಂತು ಕಂತುಕೇಳೀಸುಖಸ್ವಾದನಸ್ವಾಂತನಾದ ಕನಕಶಾಂತಿಕುಮಾರಂ ತದನಂತರದೊಳ್—

ವನಮುಂ ತನ್ನಯ ಕಾಂತೆಯರ್ವೆರಸು ನೋಡುತ್ತುಂ ಬರಲ್ಕಲ್ಲಿ ಸೂ।
ತನ ಚೂತದ್ರುವದಾವಿಶಾಳತಳದೊಳ್ಕಂಡಂ ಕುಮಾರಂ ಗಭೀ ॥
ರನಿಜಸ್ವಾಂತನನುದ್ಯಶಾಂತನನನೂನಧ್ಯಾನಲೀಲೈಕಯೋ ।
ಗನನಂತಾವಿಮಳಪ್ರಭಾಖ್ಯಮುನಿಯಂ ಮೋಕ್ಷಾಂಗನಾಕಾಂಕ್ಷನಂ ॥೯೭॥

ವಿಮಳಪ್ರಭಮುನಿಪನ ವದ ।
ನಮನೀಕ್ಷಿಸಿದಾಕ್ಷಣಾರ್ಧದೊಳ್ಸಂಸೃತಿವಿ ॥
ಭ್ರಮಹರಣಂಗೆಯ್ವುಜ್ಜಗ ।
ಮಮರ್ದುನಿಜಜಿತ್ತದೊಳ್ಕಮಾರೋತ್ತಮನಾ ॥೯೯॥
ಮುನಿದಿಕ್ಕೆ ಮೆಟ್ಟದಂ ನೆ ।
ಟ್ಟನೆ ರಾಗಮನೆನೆ ಮುನಿಪದಾರುಣರುಚಿಯಂ ॥
ನೆನೆಯದೆ ಕುಮಾರರಂ ಮಕು ।
ಟನವಾರುಣಮಣಿಮಯೂಖದಿಂ ದ್ವಿಗುಣಿಸಿದಂ ॥೧೦೦॥

ವ॥ ಇಂತು ವಿನಮಿತನಾಗಿ ಕನಕಶಾಂತಿಕುಮಾರಂ ವಿಮಳಪ್ರಭ ಮುನೀಂದ್ರಮುಖೋದಿತಧರ್ಮೋಪದೇಶದಿಂ ನಿರ್ಮಳನಿಖಿಳತತ್ವನಿಶ್ಚಿತ ಚಿತ್ತನಾಗಿ ಬೇಗದಿಂ ಸಂಸಾರನಿವೃತ್ತಿಗೆಯ್ದು ತಪಮಂ ತಾಳ್ದುವುದು ಮುದಂ ಕಂಡು ಪತಿಯಾದುದನಪ್ಪೆನೆಂದು ನಿಶ್ಚಯಿಸಿ ಕನಕಮಾಳೆಯುಂ ವಸಂತಸೇನೆಯುಂ ವಿಮಳಮತಿಗುಣನೀಚರಣೋಪಾಂತದೊಳ್ತಾಮುಂ ದೀಕ್ಷೆಗೊಂಡು ಪೋಪುದುಮಾಕನಕಶಾಂತಿಮುನಿಪನೊರ್ಮೆ ಸಿದ್ಧಶೈಲೋಪಾಂತದ ಶಶಿಕಾಂತಶಿಲಾತಳದೊಳ್ ಪ್ರತಿಮಾಯೋಗದೊಳಿರೆ ಚಿತ್ರಚೂಳನೆಂಬಂ ಕಂಡು ವಸಂತಸೇನೆಯಂ ತನಗೆ ಕೊಡದೆ ತಮ್ಮ ಮಾವನಿವರ್ಗೆ ಕೊಟ್ಟನೆಂದುಪಸರ್ಗಂಗೆಯ್ಯಲೊಡಗರ್ಚುವುದುವೊಡನೆಯಾವಿದ್ಯಾಧರರರ್ಜಿಡಿದು ನಿವಾರಿಸುವುದುಂ ತನ್ಮನೀಂದ್ರನಲ್ಲಿಂ ತಳರ್ದು ವಿಹರಿಸುತ್ತುಂ ಬಹುವಿಧತಪಮಂ ನಿಷ್ಠೆಯಿಂ ನೆಗೞುತ್ತುವೊರ್ಮೆ ಚರ್ಯಾಮಾರ್ಗದಿಂ ರತ್ನಪುರಿಗೆ ವರೆ ತತ್ಪುರಪತಿ ರತ್ನಸೇನಂ ವಿಧಿಪೂರ್ವಕಂ ನಿಲಿಸಿ ನಿಂದು ಚರ್ಯಾನಂತರಮುಕ್ಷುಯದಾನವೆಂದು ಕಯ್ಯೆತ್ತಿ ಕೊಡುವುದುಂ ಪಂಚಾಶ್ಚರ್ಯಂ ನೆಗೞಿ ಮತ್ತೊಂದುದಿವಸಂ ಸುರನಿಪಾತವೆಂಬ ವನದೊಳಚಳಿತಪ್ರತಿಮಾಯೋಗದೊಳಿರೆ ಮುನ್ನಿನ ಚಿತ್ರಚೂಳಂ ಕಂಡುಪಸರ್ಗಶತಸಹಸ್ರಂಗಳಂ ಮಾಡೆ ಸೈರಿಸಿ ಶುಭಧ್ಯಾನದೊಳಿರೆ ಘಾತಿಕ್ಷಯದಿಂ ಕೇವಲಜ್ಞಾನೋತ್ಪತ್ತಿಯಾಗೆ ಕೇವಳಪೂಜೆಗೆ ಬರ್ಪ ದೇವರ್ಕಳಂ ಕಂಡು ಭಯಚಕಿತ ಚಿತ್ತನಾಗಿ ಚಿತ್ರಚೂಳಂ ತನ್ಮನೀಂದ್ರನಂ ಮುಂತಿವುಗುವುದುಂ ತತ್ಪೂಜೆಗೆ

ವಂದಿರ್ದ ವಜ್ರಾಯುಧಂ ನೆಹೆ ಕಂಡತಿವಿಸ್ಮಯಸ್ವಾಂತನಾಗಿ ಸುಸಾರನಿ
ವೃತ್ತಿಯನಾಕ್ಷಣದೊಳಪ್ಪುಕೆಯ್ದು—

ಜನಕಂ ತೀರ್ಥೇಶನಾದಂ ತನಯನ ತನಯಂ ಕೇವಳಜ್ಞಾನಿ ತಾನಾ ।
ದನಿದೇಕಾನಿನ್ನೆಗಂ ಮೆಯ್ಮಹೆದೆನಕಟ ಸಾವಮ್ರಾಜ್ಯಸೌಖ್ಯಪ್ರಮತ್ತಾ॥
ತ್ಮನೆ ದಲ್ಮತ್ತೆನ್ನವೊಲ್ ಪೆಱರ್ಮರುಳರೊಳರೆ ಭೂಪಾಳರೊಳ್ಬಾವಿಸಲ್ಕೇ ।
ಟಿನುತುಂ ಸಂಸಾರದೊಳ್ಪಂ ತೊಱೆದಿದನುಱದೆ ವಜ್ರಾಯುಧಕ್ಷ್ಮಾಣಿ
[ಪಾಲಂ ॥೧೦೧॥

ವ॥ ಎಂದಿಂತು ನಿಶ್ಚಯಿಸಿ ನರೇಂದ್ರನಾನಗದೊಳ್—

ನಿಲಿಸಿ ನಿಜರಾಜ್ಯದಪದವಿಯೊ ।
ಳೊಲವಿಂದಾತ್ಮೀಯಸುತ ಸಹಸಾಯುಧನಂ ॥
ನೆಲೆಗೊಂಡನಲ್ತೆ ತಾನವಿ ।
ಚಳಮೆನೆ ವೈರಾಗ್ಯಪದವಿಯೊಳ್ಚಕ್ರಧರಂ ॥೧೦೨॥

ಜನಕಂ ದೀಕ್ಷಾಗುರುವಾ ।
ದನೆನುತ್ತುಂ ಧಾತ್ರಿ ಪೊಗಟ್ಟಿ ಚಕ್ರಧರಂ ಭೋಂ ॥
ಕೆನೆ ಬಂದಾಕ್ಷೇಮಂಕರ ।
ಜಿನಾಂಘ್ರಿಮೂಳದೊಳೆ ದೀಕ್ಷ್ಯಯಂ ಕೈಕೊಂಡಂ ॥೧೦೩॥

ಧರಿಯಿಸಿದಂ ಕ್ಷಮೆ ಮೊದಲಾ ।
ಗಿರೆ ದಶಧರ್ಮಂಗಳಂ ಬ್ರತಾಳಿಯನಪ್ಪೋ ॥
ತ್ತರವಿಂಶತಿಮೂಲಗುಣೋ ।
ತ್ತರಂಗಳಂ ತಳೆದು ತನ್ಮನೀಶ್ವರನೆಸೆದಂ ॥೧೦೪॥

ವ॥ ಇಂತನುಪಮತಪೋವಿಭವವಿಭಾಜಿತನಾಗಿರ್ದ ವಜ್ರಾಯುಧ
ಮುನೀಂದ್ರಂ ಸಿದ್ಧಶೈಳಶೃಂಗದೊಳೇಕಾಬ್ದಂಬರಮಚಳಿತಪ್ರತಿಮಾಯೋ
ಗನಾಗಿರೆ—

ಚರಣಯುಗಾಬ್ಜಮಂ ಬಳಸಿ ಹುಟ್ಟಿದ ಹುತ್ತು ಪೊದಲ್ದು ಮೆಯ್ಯನಾ।
ವರಿಸಿ ಶಿರೋಗ್ರದೊಳ್ತುಱುಗಿ ನೀಳ್ದ ಲತಾವಳಿ ಭೂವಿಸೆ ಸಿಂಹವಿ ॥

ಷ್ಟರದ ವಿಳಾಸಮುಂ ಪೊಳವ ಮುಕ್ಕೊಡೆಯಂ ನೆನೆ ಸೂಜಿಪಂದಮಾ ।
ಗಿರೆ ಬರಿಸಂಬರಂ ಮುನಿಪನಿರ್ದನಕಂಪಿತನಾತ್ಮಭಾವದಿಂ ॥೧೦೫॥

ಆನಂದಮುನ್ಮೆ ಕಣ್ಮಲ ।
ರಾನಾಶಾನಿಹಿತವಾಗಿ ತನುಕಾಪ್ಯಮಯಂ ॥
ತಾನುಜ್ವಳಿಸಿರೆ ಧರ್ಮ ।
ಧ್ಯಾನದೊಳಿರ್ದಂ ಮುನೀಂದ್ರನಪಗತತಂದ್ರಂ ॥೧೦೬॥

ವ॥ ಇಂತು ಮುನೀಶ್ವರಂ ಶುಭಧ್ಯಾನದೊಳಿರೆಯುಮಕ್ಕಗ್ರೀವನ ತನಯರಪ್ಪ ರತ್ನಕಂಠನುಂ ರತ್ನಾಯುಧನುಂ ತಾವನುಬಂಧಕ್ರೋಧವಾಸನಾವಾಸಿತರನೇಕಭವಪರಿಭ್ರಮಣದಿಂದಸುರಕುಲದೊಳ್ ಬಳಾತಿಬಳರೆಂಬ ದೇವರಾಗಿ ಪುಟ್ಟಿದರ್ ಪಯೋಧರಪದದೊಳ್ ಪೋಗುತ್ತುಮಾ ಮುನೀಂದ್ರನಂ ಕಂಡು ಹಿಂದಣ ಜನ್ಮವೈರಮಂ ನೆನೆದುಪಸರ್ಗಮಂ ಮಾಡಲೊಡರಿಸುವಾಸಮಯದೊಳ್ದೇವಗಣಿಕೆಯರಪ್ಪ ರಂಭೆ ತಿಳೋತ್ತಮೆಯರಿರ್ವರುಂ ಬರುತ್ತುಮದಂ ಕಂಡು—

ಈಮುನಿಪತಿಗಕಟಕಟ ವೃ ।
ಥಾಮಿಥ್ಯೆಯನೆತ್ತಿಕೊಂಡು ಮಾಲ್ಪುಪಸರ್ಗ ॥
ಸ್ತೋಮಮಿದನೇಕದುಃಖದ ।
ರಾಮಯಮುಂ ನಿನುಗೆ ಮಾಡುಗುಂ ಭವಭವದೊಳ್ ॥೧೦೭॥

ವ॥ ಇಂತು ನುಡಿದು ಬಳಾತಿಬಳರಂ ನಿವಾರಿಸಿ ವಜ್ರಾಯುಧಮುನೀಂದ್ರನ ಚರಣಾರವಿಂದಮಂ ಪೂಜಿಸಿ ಯಾರಂಭಿತಿಳೋತ್ತಮೆಯುರ್ನಿಜನಿವಾಸಕ್ಕೆ ಪೋಪುದುಮಿತ್ತಲ್—

ಪರಿಭಾವಿಸಿ ಸಂಸಾ-ದ ।
ದುರಂತದುಸ್ಸ್ಥಿತಿಯನಾಸಹಸಾಯುಧಳೂ ॥
ವರನೇವಯ್ಸಿ ಕರಂ ಚೆ ।
ಚ್ಚರದಿಂ ವೈರಾಗ್ಯವಿಭಾವಮಂ ನೆಱಿ ತಳೆದಂ ॥೧೦೮॥

ಕಪಲಿಗೆ ಸಹಸಾಯುಧ ।
ಸತಿಮುದದಿಂದಿತ್ತು ರಾಜ್ಯವಿಭವಮನಾಗಳ್ ॥

ಯತಿಪದವಿಯುನಾಂತಂ ಸ ।
ಸ್ತುತಪಿಹಿತಾಶ್ರವಮುನೀಂದ್ರಪದಸನ್ನಿಧಿಯೊಳ್ ॥೧೦೯॥
ಪ್ರತಿಮಾಯೋಗದೊಳಿರ್ದಾ ।
ಯತಿ ವಜ್ರಾಯುಧಪದಾಬ್ಜದರ್ಶನವಾಂಛಾ ॥
ರತಿಯಿರ್ದು ಸಹಸಾಯುಧ ।
ಯತಿ ತಡೆಯದೆ ಸಿದ್ಧಶೈಳಮಂ ಸಾರ್ತಂದಂ ॥೧೧೦॥

ವ॥ ಇಂತು ಬಂದು ವಜ್ರಾಯುಧಮುನೀಂದ್ರನ ತತ್ಪ್ರತಿಮಾಯೋಗಾವಸಾನದೊಳ್ವಿನತನಾದಾಸಹಸಾಯುಧಯತಿಯಂ ಕಂಡತಿಮುದಮನಪ್ಪುಕೆಯ್ದಿರ್ವ್ವರುಂ ನಿರ್ಭರತಪೋನಿಷ್ಠೆಯಿಂ ಜಿತಪರೀಷಹರಾಗಿರ್ದು ವೈಭಾತಭೂಧರಾಧಿತ್ಯಕದೊಳ್ ಸನ್ಯಸನವಿಧಿಯಿಂ ಶರೀರಭಾರಮನಿಟ್ಟಿ ಸೌಮನಸದದೂರ್ಧ್ವಾಧೋಗ್ರೈವೇಯಕದೊಳಹಮಿಂದ್ರರಾಗಿ ಸಂಭವಿಸಿ

ಪೆಸರ್ವೆತ್ತಿರ್ಪತೊಂಬ ।
ತ್ತು ಸಮುದ್ರಪ್ರಮಿತಮಪ್ಪಿನಂ ಸುಖದಿಂ ಜೀ ॥
ವಿಸುತುಮೆಸೆದಿರ್ದರೊಸೆವ ।
ರ್ಚಿಸುತುಂ ಪೆನರಾಜಪದಪಯೋಜದ್ವಯಮಂ ॥೧೧೧॥

ವ॥ ಇಂತು ಸುಖದಿನಿರುತ್ತುಮಿರ್ದಾಯುರವಸಾನದೊಳಲ್ಲಿಂ ಬಂದೀಜಂಬೂದ್ವೀಪದ ಪೂರ್ವವಿದೇಹದ ಸೀತಾತರಂಗಿಣಿಯ ಬಿತ್ತರಿಪುತ್ತರತೀರದ ಪುಷ್ಕಳಾವತೀವಿಷಯದ ಪುಂಡರೀಕಿಣೀಪುರದ ಘನರಥಮಹಾರಾಜಂಗಂ ಮನೋಹರಿದೇವಿಗಂ ವಜ್ರಾಯುಧಚರಾಹಮಿಂದ್ರಂ ಬಂದು ಮೇಘರಥನೆಂಬ ಕುಮಾರನಾದಂ ಸಹಸಾಯುಧಚರಾಹಮಿಂದ್ರಂ ಬಂದಾಘನರಥಮಹಾರಾಜನ ಕಿಱಿಯರಸಿಯಪ್ಪ ಮನೋರಮಾದೇವಿಗೆ ದೃಢರಥನೆಂಬ ಕುಮಾರನಾದನಾಯಿರ್ವ್ವರುಂ ಶೈಶವಮಂ ಪತ್ತುವಿಟ್ಟು ರೂಪಯೌವನಸತ್ಯಶೌಚಸನ್ಮಾರ್ಗಸಂಪತ್ತಿಯನಪ್ಪುಕೆಯ್ದಿರ್ದುದುಮವರಂ ನೋಡಿ ರೂಢಿವೆತ್ತು ಸುಖದಿನಿರೆ--

ಅಮೇಘರಥಂಗಂ ಜಗ ।
ತೀಮಹಿಳಾರತ್ನಮೆನಿಸಿವಾಪ್ರಮಿತಾ ॥

ಭಾಮಿನಿಗಂ ಸುತನಾದಂ ।
ಕಾಮ್ಯಸಮಾಕೃತಿಯ ನಂದಿವರ್ಧನಸೆಂಬಂ ॥೧೧೨॥

ಅದೃಢರಥಂಗಮಾತನ ।
ಮೂದೇವಿಯೆನಿಪ್ಪ ಸುಮತಿಗಂ ಸುತನಾದಂ ॥
ಶ್ರೀದಯಿತನಂತೆ ಸತ್ವಗು ।
ಣೋದಯಸಂಪತ್ತಿವೆತ್ತು ವರಸೇನಾಖ್ಯಂ ॥೧೧೩॥

ಘನರಥರಾಜೇಂದ್ರಂ ತಾ ।
ನನುನಯದಿಂ ಪುತ್ರಪೌತ್ರಗೋತ್ರಸುಮಿತ್ರಾ ॥
ವನಿಪವರಮಂತ್ರಿಮಂಡಳ ।
ಕನಿಕರಯುತನಿರ್ದನೋಲಗದೊಳೊಂದುದಿನಂ ॥೧೧೪॥

ವ॥ ಅಸಮಯದೊಳ್ಮೇಘರಥಕುಮಾರನ ಪಿರಿಯರಸಿಯಪ್ಪ ಪ್ರಿಯಮಿತ್ರಾದೇವಿಯ ಚೇಟಕಿ ಸುಷೇಣೆಯೆಂಬಳ್ ಘನತುಂಡನೆಂಬ ಕುರ್ಕುಟನಂ ತಂದಿದಂ ಸೋಲಿಸುವ ತಾಮ್ರಚೂಳಮನುಳ್ಳೊಡೆ ಸಾಸಿರ ಪೊನ್ನಂ ಕುಡುವೆನೆಂದಿರಲದಂ ಕೇಳ್ದು ಕಿಱಿಯರಸಿಯಪ್ಪ ಮನೋರಮಾದೇವಿಯ ಚೇಟಕಿ ಕಾಂಚನೆಯೆಂಬಳ್ ವಜ್ರತುಂಡನೆಂಬ ಕ್ಕಟವಾಕುವ ಕೊಂಡು ಬಂದು ಪೋರಿಸಲಾನಿಂದಿರೆ—ಘನರಥಮಹಾರಾಜನಿವಱ ಯುದ್ಧಮೆರಡಕ್ಕಂ ದುಃಖಕಾರಣಮೆದಱಂ ನೋಡಲಾಗದೊಡಂ ನಿಜಾಗ್ರಸುತನ ವಿಜ್ಞಾನಾತಿಶಯಮುಂ ನೆಱಿಯಱಿಯಲುಂ ಪಲರ್ಗಂ ಧರ್ಮಸ್ವರೂಪಮನಱಿಯಿಸಲುಮೆಂದು ಮಾಣಿಸದೆ ಕೃತವಾಕ್ಯಯುದ್ಧಮುಂ ನೋಡುತ್ತುಮಿರೆ—

ಗಱಿಯ ಫಕಫಕರವಂ ಬಾ ।
ಯಲ್ಬಡುವ ಕೆಕೆಕೆಂಬ ನಾದವಾರಿಗಳೋರಂ ॥
ತುಱುಕಿ ತಾಗಲ್ಪೆಱಕೆನುತುಮೆ ।
ಬಿಱುದನಿಗೆಯ್ಯಲ್ಕೆ ನೆಗೆದು ತಾಗಿದುವಾಗಳ್ ॥೧೧೫॥

ಮಸೆಮಸೆದಾರೆಗಳಂ ಕಡಿ ।
ಪುಸಿ ನೀರಂ ಕಿವಿಯ ಗಱಿಯ ಮಡಿಯಂ ಪೆಱಸಾ ॥

ರಿಸಿ ಬಿಡೆ ಕೋಟಿಗಳೆರಡುಂ ।
ಮಸಕಂ ಮಿಗೆ ಪೊಯ್ದು ಪೊಯ್ದುಕಾದುತ್ತಿರೆಯುಂ ॥೧೧೬॥

ಎರಡಱ ಕೋಪದ ತೆಱನಂ ।
ಪರಿಭಾವಿಸಿ ಚೋದ್ಯಮಿಂತಿದೆ ಕಾರಣಮೆಂ ॥
ದರಸಂ ಬೆಸಗೊಂಡಂ ಮೇ ।
ಘರಥನನಾಕುರ್ಘಟಂಗಳಂದಮನಾಗಳ್ ॥೧೧೭॥

ವ॥ ಇಂತು ಬೆಸಗೊಳ್ವುದುಂ ಮೇಘರಥಕುಮಾರನವಧಿಬೋಧದಿಂದಱಿದಿಂತೆಂದಂ:—

ಈ ಜಂಬೂದ್ವೀಪದೈರಾವತಕ್ಷೇತ್ರದ ರತ್ನಪ್ರದೊಳ್ ಭದ್ರನುಂ ಧನ್ಯನುಮೆಂದೊಡಹುಟ್ಟಿದರಿರ್ವರ್ ಸಾರ್ಥಕಟಕಟಿಕರಿಂಧನವ್ಯವಹಾರದಿಂ ಜೀವಿಸುತ್ತುಮಿರ್ಪರೊಂದುದಿವಸಂ ಪ್ರಳ್ಳಿಯಂ ಪೇಱ್ದುಕೊಂಡುಬರುತುಂ ಶೀತನದಿಯೆಂಬ ತೊಱೆಯ ಪೊಟ್ಟಿಯೊಳೆತ್ತುಗಳ ಕಾರಣದಿಂ ಕಲಹಮಾಗಿ ಕಾದಿಸುತ್ತೆ ಸಂಗಡಿಸಿದಾರ್ತದಿಂ ಕಾಂಚನೆಯೆಂಬ ನದೀತೀರದೊಳ್ ಶ್ವೇತಕರ್ಣನುಂತಾಂಬ್ರಕರ್ಣನುಮೆಂಬ ದುಷ್ಟಗಜಂಗಳಾಗಿ ಪುಟ್ಟಿ ಪೊಣರ್ದು ಸತ್ತನುಗತಾರ್ಥಂಗಳಯೋಧ್ಯಾಪುರದೊಳಿರ್ದ ನಂದಿಮಿತ್ರನೆಂಬ ಗೋವಳಿಗನ ಮನೆಯೆಮ್ಮಿಂಡಿನೊಳ್ ಮಹಿಷಂಗಳಾಗಿ ಸಂಭವಿಸಿಯೊಂದನೊಂದು ಪೊಯ್ದು ಸತ್ತು ದುರ್ಲೇಶ್ಯಾಶುಭಧ್ಯಾನಪರಿಣಾಮಪರಿಣತಂಗಳಾ ಪೊಟ್ಟಿಲೊಳ್ ಶಕ್ತಿಸೇನವರಸೇನರೆಂಬ ಕುಮಾರರ ವಿನೋದಯುದ್ಧದ ತಗರ್ಗಳಾಗಿ ಸತ್ತೀಕೋಟಿಗಳಾದುವು ಎನೆ—

ಕೇಳ್ದರಸಂ ಮತ್ತಮಿಂತೆಂದನಿರ್ವಬಲ್ಲೆಯಿಲ್ಲದಿರ್ದಂದಮಾವುದೆನೆ ಕುಮಾರನಿಂತೆಂದು ಬೆಸಸಿದಂ:—ಧಾತಕೀಷಂಡದ ಪೂರ್ವಮಂದರದೈರಾವತಕ್ಷೇತ್ರದ ಭುವಿತಿಳಕಪುರದರಸನಪ್ಪ ಭಯಘೋಷಮಹಾರಾಜಂಗಂ ಕನಕತಿಳಕಾದೇವಿಗಂ ವಿಜಯನುಂ ಜಯಂತನುಮೆಂಬ ತನೆಯರಾದರ್ ನುತ್ತಮಭಯಘೋಷನರೇಂದ್ರಂ ವಿಜಯಾರ್ಧಗಿರಿಯ ದಕ್ಷಿಣಶ್ರೇಣಿಯ ಶಿವಮಂದಿರದ ಕಂಚಭೂತಿಗಂ ವಿಜಯಾದೇವಿಗಂ ಪುಟ್ಟಿದ ಪೃಥಿವೀತಿಳ

ಕೆಗೆ ಕೂತೊಂದು ವರ್ಷಂಬರಂ ಕನಕತಿಳಕಾದೇವಿಯ ಮನೆಗೆ ಬಾರ
ದೆಯುಮಾಕನಕತಿಳಕಾದೇವಿ ವಸಂತಸಮಯದೊಳೊಂದು ದಿನಮುರಸ
ನಲ್ಲಿಗೆ ತನ್ನ ಚೇಟಿಯನಟ್ಟಿ ವನಕೇಳಿಗೆ ಬಿಜಯಂಗೆಯ್ಯವೇಱ್ಕುಮೆಂದು
ಬಿನ್ನವಿಸೆನಲವಳ್ಪೋಗಿ ಬಿನ್ನವಿಸೆ ಕೇಳ್ದು ಬಂದಪೆನೆಂದು ಪೊಱಮ
ಡುವಭಯಘೋಷನೃಪನಂ ಪೃಥಿವೀತಿಳಕೆ ವನಕೇಳಿಯಂ ನಾವಿಲ್ಲಿ
ಯೆ ಮಾಟ್ಪಿವೆಂದೊಲವಂ ತೋಱಿ ನಿಲಿಸೆಯುಂ ನಿಲ್ಲದರಸಂ ಪೋಗೆಯುಂ
ಮನೋಭಂಗದಿಂಪೃಥಿವೀತಿಳಕೆ ಸುಮತಿಯೆಂಬಾರಿಕೆಯ ಸಾರೆ ದೀಕ್ಷೆಗೊಂ
ಡು ಪೋಗೆಯುಮುರಸಂ ನಿರೋಧಂಗೊಂಡಿರ್ದೊಂದುದಿವಸಂ ದಮವರಮು
ನೀಂದ್ರರಂ ನಿಲಿಸಿ ವಿಧಿಪೂರ್ವಕಮಾಹಾರದಾನಮಂ ಮಾಡಿದಾಶ್ಚರ್ಯದಿಂ
ಪಂಚಾಶ್ಚರ್ಯಮಾಗೆ ಜಾತವೈರಾಗ್ಯನಾಗಿಯುಮಭಯಘೋಷನೃಪನಂ
ತಗುರುಚರಣಸನ್ನಿಧಿಯೊಳ್ ತನ್ನಯ ತನಯರಪ್ಪವಿಜಯಜಯಂತವೈರಸು
ತಪಮಂ ತಳೆದು ಷೋಡಶಭಾವನೆಯಿಂ ತೀರ್ಥಕರನಾಮಕರಣಕರ್ಮೋ
ಪಾರ್ಜಿತನಾಗಿ ನಿಜಾಯುರವಧಿಯೊಳ್ಮಾವರುಮಚ್ಯುತಕಲ್ಪದೊಳಪ್ಪತ್ತೆರ
ಡು ಸಮುದ್ರೋಪಮಾಯುಃಪ್ರಮಾಣಮಿರ್ದಲ್ಲಿಂ ಬಂದುವಿರ್ವರುಂ ದಿವಿ
ತಿಳಕನುಂ ಚಂದ್ರತಿಳಕನುಮಾಗಿರೆ ನಿಮ್ಮ ಜನಕನಪ್ಪಭಯಘೋಷಚರಾ
ಮರಂ ಬಂದು ಪುಂಡರೀಕಣೀಪುರದ ಹೇಮಾಂಗದ ಭೂಮಿಪಂಗಂ ಮೇ
ಘಮಾಳನೀದೇವಿಗಂ ಘನರಥನೆಂಬನಾಗಿರ್ದಿಗಳ್ ಕೋಟಿಗಾಳಿಗಮಂ
ನೋಡುತ್ತುಮಿರ್ದಪನೆಂದು ಚಾರಣಮುನಿಪರ್ ಪೇಟ್ದು ಕೇಳ್ದು ವಿಸ್ಮಯಂ
ಬಟ್ಟು-ದೇವ, ನಿಮ್ಮಂ ನೋಡಲೆಂದು ಬಂದಾದಿವಿತಿಳಕನುಂ ಚಂದ್ರತಿಳ
ಕನುಂ ತಮ್ಮಾವಿದ್ಯೆಗಳನೀಕೋಟಿಗಳ ಮೇಲೆ ಸಂಕ್ರಮಿಸಿದರದುಕಾರ
ಣದಿಂ ಬಲಿಲ್ಕೆ ಪುಟ್ಟದೆ ಕಾದುತ್ತುಮಿರ್ದಪ್ಪವೆಂದು ನಿಜಜನಕನಪ್ಪ ಘನ
ರಥಮಹಾರಾಜಂಗೆ ಮೇಘರಥಕುಮಾರನಿಂತು ನೆಹೆಯಱಿಪೆ—

ಪರಿವಿಷ್ಟಾನೇಕರಾಜನ್ಯಕಸಭೆಯ ಮನಕ್ಕಾದಮಾಶ್ಚರ್ಯಮಾಗು ।
ತ್ತಿರೆಯುಂ ತ್ರಿಜ್ಞಾನಲಕ್ಷ್ಮೀಪತಿ ಘನರಥರಾಜೇಂದ್ರನಾಂದೋಳಶೀಪಾರ್ಶ್ವ
ಬುರುಹಂ ತಾನಾಗೆ ತದ್ವೃತ್ತಕಮನಱಿಪದಂ ವ್ಯಕ್ತಮಾಗಲ್ಕದಂ ಮೇ ।
ಘರಥಂ ಸ್ವಚ್ಛಾಂತದೀಜ್ಞಾನದಿನಱಿದೆಸಸುಂ ಸೂಕ್ತಿಸಂದರ್ಭಗರ್ಭಂ ॥

ಗದ್ಯ॥ ಇದು ವಿನಮದಮರೇಂದ್ರವೌಳಿಮಣಿಕಿರಣಮಾಳಾಪರಾಗಪರಿಂಚಿತ ಚರಣಸರಸೀರುಹರಾಜಿತಪರಮಜಿನರಾಜಸಮಯ ಸಮುದಿತಸದಮಲಾಗಮಸುಧಾ ಶರಧಿಶರದಿಂದು ಶ್ರೀ ಪೂ ಷ್ಪ ಣ ಂ ದಿ ಪ ಂ ಡಿ ತ ಮುನೀಶ್ವರ ಮನೋಜನಿತನಿರುಪ ಮದಯಾರಸಸರಸೀಸಂಭೂತಸಂಭವಾಮಳ ಸುಕವಿ ಕಮಲಭವ ವಿರಚಿತಮಪ್ಪ

ಶಾಂತೀಶ್ವರ ಪುರಾಣದೊಳ್

ವಜ್ರಾಯುಧಮಹಾರಾಜದಿಗ್ವಿಜಯವರ್ಣನಂ ಶಬ್ದೈರಾಗ್ಯವರ್ಣನಂ ಸೌಮನಸಕಲ್ಪಾಹಮಿಂದ್ರ ವರ್ಣನಂ ಮೇಘರಥಕುಮಾರಬೋಧೋದಯವರ್ಣನಂ

ದ್ವಾದಶಾಶ್ವಾಸಂ ಸಂಪೂರ್ಣಂ.

॥ ತ್ರಯೋದಶಾಶ್ವಾಸಂ ॥

ಶ್ರೀನತಸುರನಿಕರಂ ತ್ರಿ ।
ಜ್ಞಾನಾತ್ಮಕನಪ್ಪ ಘನರಥಂಗಚ್ಛರಿಯಂ ॥
ತಾನಿತ್ತ ಬೋಧದಿಂದೆನಿ ।
ತಾನುಂ ಜಿನಪದಪಯೋಜರಾಜಮರಾಳಂ ॥೧॥

ವ॥ ಅಗಳಾತ್ಮೀಯಭವಪ್ರಪಂಚಮಂ ನೆಹೆಯೆ ಕೇಳ್ದಾದಿವಿತಿಳಕ ಚಂದ್ರತಿಳಕವಿದ್ಯಾಧರರ್ನಿಜರೂಪಮಂ ತೋಱೆ ಸಕಳಸಭಾಜನಮನಿತು ಮಚ್ಚರಿವಡುತ್ತುಮಿರೆ ಘನರಥಮಹಾರಾಜನುಮಂ ಮೇಘರಥಕುಮಾರನುಮಂ ಬೀಜಿಸಿ ಬೊಡೆನುಟ್ಟು ತಡೆಯದೆ ಪರಿಲಬ್ಧವೈರಾಗ್ಯಯೋಗ್ಯಯೋ

ಗರಾಗಿ ಗೋವರ್ಧನಮುನೀಂದ್ರಪಾದಾರವಿಂದಸುಪಾರ್ಶ್ವದೊಳ್ ದೀಕ್ಷೆ
ಗೊಂಡು ಮೋಕ್ಷಮನೆಯ್ದಿದರಾಗಳಿತ್ತಲ್—

ನೆಱೆ ಕೇಳ್ದ ತಮ್ಮ ಜನ್ಮದ ।
ತೆಱನಂ ಕುಕರ್ಕಟಿಯುಗಂ ವಿರೋಧವನೆನಸುಂ ॥
ತೊಱೆದಾಗಳ್ ಚಿತ್ತದೊಳೆ ।
ಚ್ಛಱ ಜನಿಯಿಸಿ ಸಮನಿಸಿತ್ತು ಸಲೆ ಸಮಭಾವಂ ॥೦॥

ಸಮನಿಸಿ ಸಮಭಾವಂ ಮನ ।
ದ ಮುಚ್ಚರಂ ತೊಲಗಿ ತಾಮ್ರಚೂಡಂಗಳ್ಪೋ ॥
ಮುಮನಪ್ಪುಕೆಯ್ದು ನೋಡು ।
ತ್ತುಮೆ ನೆಟ್ಟನೆ ಬಿಟ್ಟುವಲ್ತೆ ತಮ್ಮಯ ತನುವಂ ॥೫॥

ವ॥ ಇಂತು ಕಾಲಮನೆಯ್ದಿದಾಕುಕರ್ಕಟಂಗಳ್ ಭೂತರಮಣ ದೇ
ವರಮಣನೆಂಬ ವನಂಗಳೊಳ್ತಾಮ್ರಚೂಡನುಂ ಕನಕಚೂಡನುಮೆಂಬ
ಭೂತಂಗಳಾಗಿ ಪುಟ್ಟಿ ಪೂರ್ವಪ್ರಕೃತಿಯಂ ನೆನೆದಿರ್ವರುಂ ಒಂದು ಭಕ್ತಿ
ಯಿಂದಾತ್ಮವಾಳಮಣಿಮಯಾಭರಮಾಳೆಯಿಂದೆ ಮೇಘರಥಕುಮಾರಪದ
ಪಯೋಜಮಂ ಪೂಜಿಸಿ ನಿಂದಿರ್ದು—

ಎಮಗಾದುಷ್ಕೃತಕಾರಿ ಕುಕರ್ಕಟಿಭವಂ ಪಿಂಗೀಸುರಾಕಾರವಿ ।
ಭ್ರಮದಿಂದಿರ್ದುದಾಯ್ತು ದೇವ ಭವದಂಘ್ರಿದ್ವಂದ್ವಸಂಭಾವದಿಂ ॥
ದಮೆ ನೀವೆವ್ಮೊಳೊಡರ್ಚಿದೊಂದಪ್ರತಿಮಪ್ರಖ್ಯಾತಿವೆತ್ತೆತ್ತೆನು ।
ತ್ತುಮಣಿಂ ಮೇಘರಥಂಗೆ ಬಿನ್ನವಿಸಿದರ್ತಾಮಿಂತು ಭೂತಾಮರರ್ ॥೪॥

ವ॥ ಇಂತು ನುಡಿದು ಮಾಣದೆ ಮತ್ತಮೆಲೆ ದೇವ ಪರೋಪಕಾರ
ವ್ಯಾಪಾರದಕ್ಷನುಂ ಪ್ರತ್ಯುಪಕಾರನಿರಪೇಕ್ಷನುಮನೂನಜ್ಞಾನಸಂಪನ್ನನುಂ ವೃ
ದ್ಧನುಮಖಿಳಕಾರ್ಯಸಿದ್ಧನುಮಪ್ಪ ನಿನಗಾಂ ಮಾಬ್ಬುಪಕೃತಿಯಪ್ಪೊಡೊಂ
ಡುಮಿಲ್ಲಾದೊಡಮೊಂದುಂಟು । ಅದಾವುದೆನೆ ಮಾನುಷೋತ್ತರಾದಿಯಪ್ಪ
ಮನುಜಭೂಭಾಗಾವಳೋಕನವಾಂಛೆಯುಳ್ಳೊಡನಿತುಮಂ ತೋಱಿಸುವ
ಮಗುಳೆ ತಪ್ಪ ಕಾರ್ಯಮೆಮ್ಮಿಂದಪ್ಪುದೆಂಬುದುಂ-ತನ್ನಿರೀಕ್ಷಾಕಾಂಕ್ಷೆವೆತ

ಸೂ—1, ಸಮ್ಮನಿಸಿ ಜನಿಯಿಸಿತ್ತು ಸತಿ

ಮೇಘರಥಕುಮಾರನುಂ ಸಮುಚಿತಪರಿಜನಪರಿವೃತನಾಗಿ ತನ್ನಯ
ಮಣಿಮಯ ವಿಮಾನಮನೇಱಿಸಿಕೊಂಡು ಗಗನತಳಕ್ಕೆನೆಗೆದು ಭರತಾದಿಕ್ಷೇ
ತ್ರಂಗಳುಮಂ, ವಕ್ಷಾರಾದಿಕೊಟ್ಟೀಧರಂಗಳುಮಂ, ಹಿಮವದಾದಿಕುಳಶೈ
ಳಂಗಳುಮಂ, ಗಂಗಾದಿಮಹಾನದಿಗಳುಮಂ, ಪದ್ಮಾದಿಮಹಾದ್ರಂಗಳುಮನ್ನರ್ಣ
ನಡುವಿರ್ದ ಶ್ರೀ ಮೊದಲಾದಱುವರ್ದೇವಿಯರ ನಿವಾಸಂಗಳುಮಂ, ವಕ್ಷಾ
ರಾದಿಕೊಟ್ಟೀಧರಂಗಳುಮಂ, ಗ್ರಾಹವತ್ಯಾದಿವಿಭಂಗನದಿಗಳುಮಂ ಹಿಮವ
ದಾದಿಕುಳಶೈಳಂಗಳುಮಂ, ಕಚ್ಛಸುಕಚ್ಛಾದಿವಿಜಯಂಗಳುಮಂ, ಕ್ಷೇಮಾ
ಕ್ಷೇಮಪದಾದಿರಾಜಧಾನಿಗಳುಮಂ ತೋಱುತ್ತುಂ ನಾಡೆಯುಂ ನೋಡುತ್ತುಂ
ಪೋಗಿ ಕುಳಗಿರಿಗಳ್ ಮಹಾನದಿಗಳ್ ವಿಜಯಂಗಳ್ ಪುರಂಗಳ್ ವಕ್ಷಾರ
ಪರ್ವತಂಗಳ್ ಪಂಚಮಂದರಂಗಳ್ ಮೊದಲಾದೆರಡುವರೆ ದ್ವೀಪಂಗಳೊಳಕೃ
ತ್ರಿಮಚೈತ್ಯಾಯತನಂಗಳನರ್ಚನಾಪೂರ್ವಕಂ ಬಂದಿಸಿ ಪರಮಾನಂದದಿಂ
ಮಗುೞ್ದು ಪುಂಡರೀಕಿಣೀಪುರಕ್ಕೆ ಬರ್ಪುದುಮಾತಾಮ್ರಚೂಡನನಚಿರ
ಡಸುರರ್ಮೇಘರಥಕುಮಾರಂಗಭ್ಯುವಸ್ತುಗಳನಿತ್ತು ಮಹೋತ್ಸವದಿಂ
ಪೂಜೆಗೆಯ್ದು ನಿಜನಿವಾಸಕ್ಕೆ ಪೋದರಿತ್ತಲ್—

ಘನರಥನರೇಂದ್ರ ನಿನ್ನಂ ।
ನೆನೆ ನೀಂ ನೆಱೆ ಮೆಱೆ ಭವನ್ಮಹತ್ವಮನದನಿ ॥
ನ್ನೆನುತುಂ ಲೋಕಾಂತಿಕಸುರ ।
ರನಿತುಂ ಪ್ರತಿಬೋಧೆಗೆಯ್ದರೇೞ್ದಂದಾಗಳ್ ॥೫॥

ಅನಿಮಿಷರಾಗಳ್ನೆನೆಯಿಸಿ ।
ತೆ ನೆವಂ ತಾನಾಗಿ ಪಿಂಗಿದುದು ಸಂಸೃತಿಖಂ ॥
ಧನಮಾಘನರಥರಾಜೇಂ ।
ದ್ರನ ಮನದಿಂ ದೀಪಮುಖದ ತಿಮಿರದ ತೆಱದಿಂ ॥೬॥

ಮುಖಿತಮದವೋಹನಾಘನ ।
ರಥರಾಜಂ ಮೇಘರಥಕುಮಾರಂಗಾಗಳ್ ॥
ಪೃಥಿವೀಪತಿತ್ವನುಂ ದೃಢ ।
ರಥಂಗೆ ಯುವರಾಜಪದವಿಯುಂ ಪದೆದಿತ್ತಂ ॥೭॥

ಅನ್ಯಪನಾಗಳಂತೆ ಪರಿನಿಪ್ಪ್ರಮಣಕ್ರಿಯೆಯಿಂ ಜಿನೇಂದ್ರದೀ
ಕ್ಷಾನಿಧಿನಾಥನಾಗಿ ಶುಭಭಾವನೆವೆತ್ತು ವಿಶುದ್ಧಶುಕ್ಲಸ ॥
ಧ್ಯಾನದೊಳೊಂದಿ ಘಾತಿಗಳನಾಕ್ಷಣದಿಂ ನೆಱಿ ತೂಳ್ದ ಕೇವಳ ।
ಜ್ಞಾನಸಮುದ್ಗ್ರ ತೀರ್ಥಕರನಿಂತೆಸೆದಂ ದಿವಿಜೇಂದ್ರವಂದಿತಂ ॥೮॥

ವ ॥ ಇಂತು ಘನರಥಮಹಾರಾಜಂ ಕೇವಳಿಗಳ ಬೋಧನಿಧಿವೆತ್ತು ತೀರ್ಥಕರನಾಮಸಂಪತ್ತಿಯಿಂ ಜಗತ್ತ್ರಯಸ್ತುತ್ಯನಾಗಿರುತ್ತಿರಲತ್ತಲ್—

ಜನಕನಿರೂಪಿತಸಕಳಾ ।
ವನಿಯಂ ಸಲೆ ಪಾಲಿಸುತ್ತುಮಾಮೇಘರಥಾ ॥
ವನಿಪಂ ದೃಢರಥಯುತನಿಂ ।
ತನಾರತಂ ಪ್ರಾಜ್ಯರಾಜ್ಯಲೀಲೆಯೊಳಿರ್ದಂ ॥೯॥

ವ ॥ ಇಂತು ಪಲಕಾಲಮರಸುಗೆಯ್ಯುತ್ತುಮಿರ್ದೊಂದು ದಿವಸಂ ವಸಂತಸಮಯದೊಳ್

ಸ್ಮರಸವ್ಮೋಹನಮಂತ್ರಫೋಪಮೆಸೆ ಮುಂಜೀರಾವಳೀಮಂಜುಳ ।
ಸ್ವರಮುಣ್ಮಲ್ಕೆ ಬರಲ್ವಿಳಾಸಿನಿಯರೆತ್ತಂ ಸುತ್ತಿ ಚೆಲ್ವಿಂ ನಿಜೇ ॥
ಶ್ವರಿಯಪ್ಪಾಪ್ರಿಯಮಿತ್ರೆಯುಂಬೆರಸು ಬಂದಂ ಕಂತುವೆಂಬಂತೆ ಮೇ ।
ಘರಥೋರ್ವೀವರನಿಂತು ದೇವರಮಣೋದ್ಯಾನಕ್ಕೆ ತಾನಟ್ಟಿಯಿಂ ॥೧೦॥

ವರಕಾಂತಾನಿಕರಾಸ್ಯನಿಶ್ವಸಿತವೊಲೋಲಾಕ್ಷಿರುಗ್ಮಾಳಿ ನೂ ।
ಪ್ರರನಾದಂ ಮಳಯಾನಿಳಂಗೆ ತನಗಂಪಂ ತದ್ವನಕ್ಕೊಂ ಣಿಗಿಂ ॥
ದುರುಜೆಯ್ತಾತವಿಳಾಸಮುಂ ವಧುಪಝುಣ್ಕಾರಕ್ಕೆ ಕೊರ್ವಂ ಕುಡು ।
ತ್ತಿರೆಯುಂ ಮೇಘರಥೋರ್ವಿಪಂ ವನವಿಹಾರಕ್ರೀಡೆಯಂ ಮಾಡಿದಂ ॥೧೧॥

ವ॥ ಇಂತು ವನವಿಹಾರಕ್ರೀಡೆಯಂ ಮಾಡುವಾಗಳೊಂದೆಡೆಯೊಳಾ ದೇವರಮಣೋದ್ಯಾನಲಕ್ಷ್ಮೀಲಲನೆಯ ವದನದರಹಾಸದೀಧಿತಿಯೆ ಬಳಗಂ ಬಲಿದು ನೆಲೆಗೊಂಡುದೆಂಬ ಸಂದೆಗವನೊಂದಿಸಿ ಬೆಳುವೆಳಗಿನೆಸಕಮಂ ದೆಸೆದೆಸೆಗೆ ಪಸರಿಸುತ್ತುಮಸದಳಂ ಮಿಸುಪ ಶಶಿಕಾಂತವಿಶಾಳಶಿಳಾತಳದೊಳ್ ಪ್ರಿಯಮಿತ್ರಾದೇವಿಯ ಮನವಱಿದಖಿಳವಿಳಾಸಿನೀಜನಂಬೆರಸು ಮೇಘರಥಮಹಾರಾಜಂ ಕುಳ್ಳಿರ್ದಾಸನಯದೊಳ್—

ಪೋಗುತ್ತಿರೆ ವಿದ್ಯಾಧರ ।
ನಾಗಳದೊರ್ವಂ ಸ್ವಕೀಯಸತಿವೆರಸು ನಭೋ ॥
ಭಾಗದೊಳರಸನ ಮೇಲದು ।
ಪೋಗದೆ ಕೀಲಿಸಿರ್ದವೊಲಿರಲ್ಕೆ ವಿಮಾನಂ ॥೧೦॥

ವ॥ ಅದಂ ವಿದ್ಯಾಧರಂ ಕಂಡು ಮುಳಿದು ವಿಮಾನದಿಂದೀಚೆದು ಶಿಲಾತಳಮುಂ ತಲೆಕೆಳಗುವಾಱಿಪ್ಪಿನೆಂದು ತಡೆಯದಡಿವೊಕ್ಕು ಬಿಡದೆತ್ತುವಾಗಳ್

ಅದಿರ್ದು* ನಡಸಡುಗೆ ಶಿಲೆ ಮೆ ।
ಯ್ಬಿದಿರ್ದರಸಿಯುಮಬಲೆಯುರ್ಕಳುಂ ಚಲಿಸಿ ಕೆಳ ॥
ಕ್ಕುದಿರ್ವಂತಿರೆ* ಕಂಡವನಿಪ ।
ನಿದಿರ್ವೊತ್ತಿದನೊಯ್ಯನುಂಗುಟದ ಕೊನೆಯಿಂದಂ ॥೧೧॥

ಕುಸಿದು ಕೊರಲ್ಕಣ್ಣೊಱಪಾ ।
ಯ್ದುಸಿರೆನಸುಂ ಸಿಲ್ಕಿ ಜೀವಸಂಕಟಮಾಗಲ್ ॥
ಬಸವಱಿದಾವಿದ್ಯಾಧರ ।
ನೆಸಕಂಗೆಟ್ಟೊಳಱಿದಂ ನೆಲಂ ಬಿಱಿವಿನೆಗಂ ॥೧೨॥

ಇಂತೊಳಱಿ ಕೇಳ್ದು ತನ್ನಾ ।
ಣ್ಮಂ ತಲೆಮುಟ್ಟೆತ್ತಲಾಱದಡಿಗಲ್ದಿಂ ಭೂ ॥
ಕಾಂತಪದಾಂಗುಷ್ಠದ ಭರ ।
ದಿಂ ತಾನೆಂದಱಿದು ಕಾಂತೆ ತಳವೆಳಗಾದಳ್ ॥೧೩॥

ವ॥ ಇಂತು ತಳವೆಳಗಾದ ವಿದ್ಯಾಧರಕಾಂತೆ ಭೂಕಾಂತನಲ್ಲಿಗೆ ವಂದು,

ನಿನಗಿಂತು ಪೊಲ್ಲಕೆಯ್ದುದ ।
ನೆನಸುಂ ಬಗೆಗೊಳ್ಳದೆಲೆ ಕೃಪಾತ್ಮಕ ಮತ್ತಾಂ ॥
ತನನೊಸೆದು ಪಕ್ಷಿಸ್ಯೆ ನೀ ।
ನೆನಗೀವುದು ಕಾಂತದಾನಮಂ ಭೂಕಾಂತಾ ॥೧೪॥

ವ॥ ಎಂದಿಂತು ಬಾಯಱಿಯುತುಂ ಬಂದು ಮುನ್ನಡಿಯೊಳ್ಕೆಡೆದ ವಿದ್ಯಾಧರಕಾಂತೆಯಂ ಕಂಡು ಕಾರುಣ್ಯಚಿತ್ತನಾಗಿ ಮೇಘರಥಮಹಾರಾಜಂ

ನಿಜಾಂಗುಷ್ಠಮನಾಗಳ್ಪಿಗದಿಂ ತೆಗೆಯೆ ಮೆಲ್ಲಸಲ್ಲಂ ಬಂದೆಳಗಿದ ವಿದ್ಯಾ
ಧರಂ ಮುಂದೆ ನಿಂದಿರೆ--

ನಡುಗಿದುದಿದೇಕೆ ಸಿಲೆ ನಿ ।
ಮ್ಮಡಿಗೆಯ್ಗಿದಳೊಳಜುತೀಕೆಯಾರ್ ಮತ್ತೀಗಳ್ ॥
ಪೊಡೆವಟ್ಟನಾವನೆಲೆ ನೃಪ ।
ತಡೆಯದಿದಂ ಪೇೞ್‌ನೆಂದರಸಿ ಬೆಸಗೊಂಡಳ್ ॥೧೩॥

ವ॥ ಆಗಳಿಂತು ಪ್ರಿಯಮಿತ್ರಾದೇವಿಯುರ್ವಿಸಗೊಳಲವಧಿಬೋಧ
ದಿಂದಱಿದರಸನಿಂತೆಂದನಾವಿಜಯಾರ್ಧದುತ್ತರಶ್ರೇಣಿಯಳಕಾಪುರಿಯ ವಿದ್ಯು
ದ್ದಂಷ್ಟ್ರಂಗಂ ನೀಳವೇಗೆಗಂ ಪುಟ್ಟದನೀತಂ ಸಿಂಹರಥನೆಂಬಂವಿಮಳವಾಹನ
ಜನಪತಿಯನಭಿವಂದಿಸಿ ನಿಜಪುರಕ್ಕೆ ಪೋಗುತ್ತುಮೆನ್ನ ಮೇಲೆ ವಿಮಾನಂ
ಪೋಗದಿರೆ ಕಂಡು ಮುನಿದೀಶಿಲೆಯನೆತ್ತಿದೊಡಾನುಂಗುಟದಿನೊತ್ತಿದೊಡೆ ಪೊ
ಡಕರಿಸಲಱದೆವೊಳಱದನದಕ್ಕೀಕಾಂತೆ ಬಂದೆನಗೆಱಗಿ ಜೀಡಿಕೊಂಡು-
ವಿಸ್ಮಯಂ ಬಟ್ಟರಸಿ ಜನ್ಮವೈರಮಿದಾಗಲಿವೇೞ್ಕುಮೆಂದೊಡದಾವುದು
ಮಿಲ್ಲೀವಿದ್ಯಾಧರಂ ಧಾತಕೀಷಂಡದ ಪೂರ್ವಮಂದರದೈರಾವತಕ್ಷೇತ್ರದ ಕಂ
ಚಪುರದರಸಂ ರಾದಗುಪ್ತನಾತನರಸಿ ಶಂಖಿಯೆಂಬಳವರೀರ್ವರುಂ ಶಂಖಶೈ
ಳದೊಳ್ ಸರ್ವಗುಪ್ತಮುನಿಪತಿಪದಸಾನ್ನಿಧ್ಯದೊಳ್ಪ್ರೋಷದೋಪವಾ
ಸಂಗಳಂ ಕೈಕೊಂಡು ನೆಗೞ್ತುಮೊಂದು ದಿವಸಂ ಧೃತಿಷೇಣಮುನಿಸತಿಗೆ
ಯಥಾವಿಧಿಯಿಂದಾಹಾರದಾನಮಂ ಮಾಡಿ ಪಂಚಾಶ್ಚರ್ಯಮುಂ ಪಡೆದು
ಸುಖದಿನಿರುತ್ತುಮವಸಾನಕಾಲದೊಳ್ ರಾದಗುಪ್ತರಾಜಂ ಸಮಾಧಿಗುಪ್ತರ
ಸನ್ನಿಧಿಯೊಳ್ಸನ್ಯಸನದಿಂ ಶರೀರಮಂ ತೊಱೆದುಬ್ರಹ್ಮಕಲ್ಪದೊಳ್ಬ್ರಹ್ಮೇಂ
ದ್ರನಾಗಿ ಪತ್ತುಸಾಗರೋಪಮಾಯುಷ್ಯದ ಕಡೆಯೊಳಾಯಿದಗುಪ್ತಚರಬ್ರ
ಹ್ಮೇಂದ್ರಂ ಬಂದೀಸಿಂಹರಥನಾದನಾತಂಕಿರಿಕೆಯುಂ ಸಂಸಾರದೊಳ್ತೊಱಲ್ದು
ತಪದ ಫಲದಿಂ ದೇವಗತಿವಡೆದಲ್ಲಿಂಬಂದು ವಿಜಯಾರ್ಧದ ದಕ್ಷಿಣಶ್ರೇಣಿಯ
ಸಜ್ವಲಯಪುರಪತಿಯಪ್ಪಿಂದ್ರಕೇತುಗಂ ಸುಪ್ರಭೆಗಮಿಂತಿ ಮದಸಮವೇಗ
ಯೆಂಬ ಮೆಗಳಾಗಿ ಸಿಂಹರಥಂಗರಸಿಯಾದಳದೆಲ್ಲಮುಂ ಕೇಳ್ದಾಸಿಂಹರಥಂ
ನೀಲರಥಮಹಾರಾಜಸಂ ಪೂಜಿಸಿ ಪೋಗಿ ವೈರಾಗ್ಯಯುಕ್ತನಾಗಿ ಕನಳ

ರಕ್ಷನೆಂಬ ನಂದನಂಗೆ ರಾಜ್ಯಮುಂ ಕೊಟ್ಟು ಪುನರಥತೀರ್ಥಕರ ಪದಪಾರ್ಶ್ವ
ದೊಳ್ ಪಲಂಬರರಸುಗಳ್ವೆಟಸು ದೀಕ್ಷೆಗೊಂಡನಾಮದನವೇಗೆಯುಂ ಪ್ರಿಯ
ಮಿತ್ರೆಯರೆಂಬಾರಿಕೆಯರ ಸಂಗಡೆ ದೀಕ್ಷೆಗೊಂಡಳಾವೇಘರಥಮಹಾರಾ
ಜಂ ದೇವವಿಮಾನೋದ್ಯಾನದಿಂ ನಿಜನಿವಾಸಕ್ಕೆ ಬಂದು—

ಪರಮಾಪ್ತಾಗಮಮುಂ ಪಲರ್ಗಜಿಪುತುಂ ಧರ್ಮಾರ್ಥಕಾಮಂಗಳಂ ।
ಧರೆ ಕೈವಾರಿಸುವಂದದಿಂ ನೆಗಟುತುಂ ಸಮುಕ್ತ್ವಸಂಪತ್ತಿ ಖಿ ॥
ತ್ತರಮಾಗಿರ್ಪಿನವೊರ್ವ ರಾಜಪುಷಿ ತಾನೆಂಬಂದದಿಂದಿಂತು ಮೇ ।
ಘರಥೋರ್ವೀಪತಿ ಪೆರ್ಮೆಪೆತ್ತರಸುಗೆಯ್ಯುತ್ತಿರ್ದನುತ್ಸಾಹದಿಂ ॥೧೯॥

ದಾನಗತಂ ದ್ರವ್ಯಂ... ।
.....ಧರ್ಮಮುಂ ಪರಮಶ್ರೀ ॥
ಜೈನಮಯಂ ನಿಜರಾಜ್ಯಂ ।
ತಾನೆನಲಿಂತರಸುಗೆಯ್ಯುತಿರೆ ಮೇಘರಥಂ ॥೧೯॥

ವ॥ ಇಂತರಸುತನಮನಾರೂಢಿಯಿಂ ಮಾಡುತ್ತುಮಿರ್ದ ಮೇಘರಥ
ಮಹಾರಾಜಂ ದೃಢರಥನುಂ ಪ್ರಿಯಮಿತ್ರಾದೇವಿಯರ್ಮೊದಲಾದಂತಃಪುರ
ಕಾಂತಾಜನಮುಂ ಸಹಿತಮಾನಂದದಿಂ ನಂದೀಶ್ವರಪೂಜಾಪೂರ್ವಕಮುಪವಾ
ಸಮಿರ್ದು ಸಕಳಸಭಾಜನಸಂಗಳಂ ಜಿನಧರ್ಮಕಥಾಮೃತಾಸಾರದಿಂ ಪರಿತೃ
ಪ್ತರಂ ಮಾಡುತ್ತುಮಿರ್ಪುದುಮಾಪ್ರಸ್ತಾವದೊಳ್:—

ಗರುಡನಿಳಘನಧ್ವನಿ ಭೋ ।
ರ್ಗರೆಯುತ್ತಿರೆ ಗಿಡಗನಡಸಿ ಬಿಡದಟ್ಟುತ್ತುಂ ॥
ಒರೆ ಭಯದಿಂ ಬಾಯ್ವಿಡುತು ।
ಮುದರಸನ ಮಹಿವೊಕ್ಕುದೊಂದು ಕಪೋತಂ ॥೨೦॥

ವ॥ ಆಗಳಾಕಪೋತನಂ ಕಟ್ಟಾಸುರದಿಂದಟ್ಟುತ್ತೆ ಬಂದ ಗಿಡಗಂ
ನರೇಂದ್ರನ ಮುಂದೆ ನಿಂದು,

ಎಲೆ ಭೂಪೋತ್ತಮ ದಾನಕೂರ ಸಲೆ ಜೀಯುತ್ತಿರ್ದೆ ನೀಗಳ್ಕ್ಷುಧಾ ।
ಸಳಿಂದೆನ್ನೆಯ ಬಾಯ ತುತ್ತಿದು ಕಪೋತಂ ನೀನಿದಂ ಕೊಟ್ಟೊಡೆ ॥
ಸ್ಖಳಿತಂ ಜೀವಿಪೆನಿಲ್ಲ ನಾವೆಸೆದುಂಪಾಂ ಸತ್ತೊಡಂ ನಿನ್ನ ಕೀ ।
ರ್ತಿಳತಾಳಂಗಮದಪ್ಪುದೆಂದು ಗಿಡಗಂ ತಾನಿಂತೆಸುತ್ತಿರ್ದುದುಂ ॥೨೧॥

ವ॥ ಇಂತು ನುಡಿವ ಗಿಡಗನ ನುಡಿಗೆ ದೃಢರಥಮಹಾರಾಜಂ ವಿಸ್ಮಯಸ್ವಾಂತನಾಗಿ-ದೇವ, ಬಿನ್ನಪವೀಪಕ್ಷಿಗಳ ವಿರೋಧಮನೀತಿರ್ಯಗ್ಜಾತಿಗೆ ನುಡಿ ಗಡಣಿಸಿದ ತೆಱನಂ ನೆಱಿಯಱಿವಂತೆನಗೆ ನೇಮಿಸುವುದೆನೆ-ಮೇಘರಥ ಮಹಾರಾಜನಿಂತೆಂದಂ:-ಜಂಬೂದ್ವೀಪದೈರಾವತಕ್ಷೇತ್ರದ ಪದ್ಮಿನೀಖೇಟಪುರದೊಳಿರ್ಪ ಸಾಗರಸೇನನೆಂಬ ಪರದಂಗಮಮಿತಗತಿಯೆಂಬಳ್ಗಂ ಧನಮಿತ್ರನುಂ ನಂದಿಷೇಣನುಮೆಂಬ ಸುತರಾದರವರ್ಧನಲಾಭಾನಳದಂದಹ್ಯಮಾನಚಿತ್ತರಾಗಿ ಈರ್ವರುಮೊರ್ವರೊರ್ವರನಿಱಿದು ಸತ್ತೀಗಳೀಕಪೋತಗಿಡಗಂಗಳಾಗಿ ಪುಟ್ಟಿದುವೀಗಿಡಗಂಗೆ ನುಡಿಯಾದುದಿದಱ ಮೇಲೊರ್ವ ವಿದ್ಯಾಧರಂ ವಸಿಯಿಸಿ ನುಡಿಯುತ್ತಿರ್ದನದೇಕೆಂದೊಡೆ ನಮ್ಮಿಬ್ಬರ್ಜನ್ಮಕ್ಕೆ ಕೃದನೆಯ ಜನ್ಮದಲ್ಲಿ ನಾಮಿರ್ವರುಮಪರಾಜಿತಾನಂತವೀರ್ಯರಾಗಿ ದಮಿತಾರಿಯೊಡನೆ ಕಾದುವಲ್ಲಿ ನಿನ್ನೊಡನೆ ಕಡಂಗಿ ತೊಡರ್ದು ಸತ್ತ ಕನಕರಥವೆಂಬ ವಿದ್ಯಾಧರನನೇಕರಥನೆಂಬ ವಿದ್ಯಾಧರನನೇಕಭವದೊಳ್ಬಂದು ಕೈಲಾಸಪರ್ವತೋಪಾಂತದ ಪರ್ಣಕಾಂತೆಯೆಂಬ ತರಂಗಿಣೀತೀರದೊಳಿರ್ಪ ಸೋಮನೆಂಬಾತಾಪಸಂಗಂ ಶ್ರೀದತ್ತೆಗಂ ಚಂದ್ರನೆಂಬ ನಂದನನಾಗಿ ಪಂಚಾಗ್ನಿತಪಃಫಳದಿಂ ಜ್ಯೋತಿರ್ದೇವನಾಗಿ ಪುಟ್ಟಿರುತ್ತುಮಿಶಾನಕಲ್ಪಕ್ಕೆ ಪೋಗಿರಲೀಶಾನೇಂದ್ರನೆನ್ನ ದಾನಗುಣಮನಭಿವರ್ಣಿಸಲದಕ್ಕೆ ತನಗೆ ಕರ್ಣಶೂಲವಾಗೆ ಕೇಳಲಾಱದೆ ನೋಱಿನಾದಾನಗುಣನುನೆಂದುಬಂದೀವಿಕಿರಮುಖಾಶ್ರಿತನಾಗಿನುಡಿಯುತ್ತುಮಿರ್ದನಿವನುಪೇಕ್ಷಾರ್ಹನಲ್ಲದೆ ದಾನಾರ್ಹನಲ್ಲ ಜೀವವಧಂ ದಾನಮಲ್ಲದ ದೆಂತೆಂದೊಡೆ:-ದಾತೃವೆಂದುಂ ದೇಯವೆಂದುಂ ಪಾತ್ರವೆಂದುಂ ದಾನಲಕ್ಷಣಂ ಮೂಱುಂ ತೆಱನಕ್ಕುಮಲ್ಲಿ ಶ್ರದ್ಧಾದಿಸದ್ಗುಣಸಂಪನ್ನಂ ದಾತೃವಕ್ಕುಮಾಹಾರಾಭಯಭೈಷಜ್ಯಶಾಸ್ತ್ರಸಂಪವಸದಸಯ್ಯೋಪಕರಣ ದೇವವಸ್ತುಗಳ್ ದೇಯಮಕ್ಕುಂ ಮತ್ತೀವಿಶುದ್ಧಸಮ್ಯಗ್ದರ್ಶನತತ್ವಗುಣಾತಿಶಯಮದುಳ್ಳೊಡೆ ಪಾತ್ರಮಕ್ಕುಮದಱಿಂದಾಹಾರದಾನಂ ಪಾರಂಪರ್ಯದಿಂ ಮೋಕ್ಷಕ್ಕೆ ಕಾರಣಮೆಂದು ಪೇೞಿಯುಂ ಜ್ಯೋತಿರ್ದೇವಂ ಮನೋವಿಷಾದಭಾವವುಂ ಬಿಟ್ಟು ನಿಜಮೂರ್ತಿಯಿಂ ನಿಂದು ಮೇಘರಥಮಹಾರಾಜಂಗೆ ನಿಜಾಗಮವೃತ್ತಕಮಂ ನೆಹೆಯೆ ಬಿನ್ನವಿಸಿ ತನ್ನಯ ನಿಳಯಕ್ಕೆ ಪೋದನಾಶಕುಂತಂಗಳುಪ

ಶಾಂತಂಗಳಾಗಿ ಸ್ವೀಕೃತೋಪವಾಸವ್ರತಂಗಳಿಂ ಸ್ವಕೀಯಶರೀರಭೂರವು
ನಿಜಿಪಿ ದೇವರಮಣವನದೊಳ್ ರೂಪಸುಮತಿರೂಪಸುಮೆಂಬ ವ್ಯಂತರರಾ
ಗಿ ಪುಟ್ಟಿ ಪೂರ್ವಕೃತೋಪಕೃತಿಯಂ ನೆನೆದು ಬಂದಾವ್ಯಂತರಾಮರಮೇರ್ಪ
ಘರಥಮಹಾರಾಜನಂ ಪೂಜಿಸಿ ಪೋದರನರಸನೊಂದು ದಿವಸಂ ದಮಪರರೆಂ
ಬ ಚಾರಣಋಷಿಯರ್ಗೆ ನಿಸರ್ಗಭಕ್ತಿಯಿಂ ಸಮುಚಿತಕ್ರಮದೊಳಾಹಾರ
ದಾನಮನನೂನಮಾಗಿ ಮಾಡಿ ಪರಿಲಬ್ಧಪಂಚಾಶ್ಚರ್ಯನಾಗಿರೆ--

ಬರೆ ನಂದೀಶ್ವರನೊಳ್ಪ |
ತ್ತರದಿಂದಷ್ಟಾಹ್ನಿಕಪ್ರಪೂಜಾತತಿಯ ॥
ವಿರಜಿಸಿ ಮೇಘರಥಮಹೀ |
ವರನುಪವಾಸಮನೆ ತಳೆದು ತಾನಿರ್ದಾಗಳ್ ॥೨೨॥

ಧೃತಿದಿವಿಜನಗಂ ಬೋಧ |
ತ್ರಿತಯಾತ್ಮಂ ಮೇಘರಥಮಹೀಶಂ ರಾತ್ರಿ ॥
ಪ್ರತಿಮಾಯೋಗದೊಳಿರ್ದ |
ನತೀವಮುದದಿಂದೆ ನೆಗಲಿಲುದ್ಯುತನಾದಂ ॥೨೩॥

ನಿಲಿಸಿ ನಿಜಚಿತ್ತದೊಳ್ನಿ |
ಶ್ಚಳಮೆನೆ ಜಿನಪತಿಯ ಮೂರ್ತಿಯಂ ಕರಣಂಗಳ್ ॥
ತಲೆಗರೆದು ದೇಹಮೋಹಂ |
ತೊಲಗಿ ನೃಪಂ ರಾತ್ರಿನಿಯಮಯೋಗದೊಳಿರ್ದಂ ॥೨೪॥

ವ॥ ಅಂತು ರಾತ್ರಿಪ್ರತಿಮಾಯೋಗದೊಳ್ ಧ್ಯಾನಾಧೀನಮಾನಸ
ನಾಗಿ ಮೇಘರಥಮಹಾರಾಜನಿರ್ದುಮತ್ತಲ್--

ಗುರುಗುಣವರರ್ಗದಾರೆಂ |
ಗರೊ ಜಿನೆಭಾವನೆಯೊಳಿರ್ದಲ್ಲಿ ನವೋಮೇ ॥
ಘರಥಾಯು ಯೆಂದನಾವೃತ |
ಸುರಸಭೆ ನೆಂಕಿ ಕೇಳಲಾಗಳ್ಶಾನೇಂದ್ರಂ ॥೨೫॥

ಪ॥ ಆಗಳಾನಮಸ್ಕಾರವಚನಮೆಂ ಕೇಳ್ದ ಸಕಲಸುರರೀಶಾನೇಂ
ದ್ರಂಗಿಂತೆಂದರ್:--

ಎಲೆ ದೇವ ಸಕಳದೇವಾ ।
ವಲಿಯಿಂದಭಿವಂದ್ಯನಪ್ಪ ನೀನೀಗಳದಾ ॥
ರ್ಗೊಲವಿಂದೆ ಬಂದಿಸಿದೆ ಪೇ ।
ಬಲೆವೇಟ್ಕುಮುದಾವನೆವಗೆನಲ್ಕನುರರ್ಕಳ' ॥೨೬॥

ಅತಿಕಯವಿದಲ್ತೆ ರಾತ್ರಿ ।
ಪ್ರತಿಮಾಯೋಗದೊಳತೀವನಿಷ್ಕಂಪತೆ ಸಂ ॥
ಗತಿವೆತ್ತ ಮೇಘರಥಭೂ ।
ಪತಿಗಾನತನಾದೆನೆಂದನೀಶಾನೇಂದ್ರಂ ॥೨೭॥

ತಾನವನತನಾದುದನೀ ।
ಶಾನೇಂದ್ರಂ ಪೇಟಿ ಕೇಳ್ದು ಸಾಂದೋಳಶಿರೋ ॥
ಬ್ಜಾನೀಕಮಾಯ್ತು ಸುರಸಂ ।
ತಾನಂ ತನ್ಮೇಘರಥನೃಪನೆ ಜಿನನೆನುತುಂ ॥೨೮॥

ವ॥ ಆಗಳೋಲಗದೊಳ' ಲೀಲೆವೆಕ್ಕು ಕಾಳ್ಕಿರ್ದ ರತಿರೂಪೆಯರೆಂಬ ಗೀರ್ವಾಣಗಣಿಕೆಯರೀರ್ವರುಂ ರೂಪಯೌವನಗರ್ವಿತೆಯರುಂ ಮುಗುಳ್ನಗೆನಗುತ್ತುಮಾಮೇಘರಥನ ನಿಶ್ಚಲತೆವೆತ್ತ ಶುದ್ಧಧ್ಯಾನವೃತ್ತಿಯುಂ ನಿಮಿಷಮಾತ್ರದಿಂ ಸಂಚಳವೃತ್ತಿಗೆ ಸಲಿಸಿದಪೆವೆಂದು ಪೊಣ್ಮಿ ಬಂದು—

ಕ್ಷ್ಮಿನಾಥಾಕಾರಮಾಯ್ತೋ ಕನಕನಗದಸುಸ್ಥೈರ್ಯಮೆಂಬಂತೆ ನಿಷ್ಕಂ।
ಪತೆಯಂ ತಾಳ್ದಿರ್ಪ ಕಾಯಂ ಸಮರಸಭರಿತಂ ಕಿಂಜೆಪುನ್ಮೀಳಿತಾಕ್ಷ್ಮಿ ।
ದ್ವಿತಯಂ ಜಾನುದ್ವಯಾತಿಕ್ರಮಕರಕಮಳಂ ಶೋಭೆಯಂ ಬೀರ್ಪಿ ರಾತ್ರಿ।
ಪ್ರತಿಮಾಯೋಗೈಕನಿಷ್ಠಾತ್ಮಕನವನಿಪನಿಂತಿರ್ದನಾನಂದದಿಂ ॥೨೯॥

ವ॥ ಇಂತು ಪರಮಧ್ಯಾನಪರಿಗತಸ್ವಾಂತನಾಗಿರ್ದ ಮೇಘರಥಮಹೀಕಾಂತನಂ ಕಂಡು ಕುಸುಮಕಾಂಡನ ಕಳಾಧಿದೇವತೆಯುರಂತೆ ರತಿರಮಣಾನುರಾಗಸಾಗರಸಮುದ್ಭೂತಶೀರಮಣಿಯರಂತೆ ಮನಸಿಜನ ವೈಜಯಂತ ಕಟ್ಟಂಗಳಂತೆ ಪೊದಟ್ಟುಪುರನ ಸಾಮ್ರಾಜ್ಯಲಕ್ಷ್ಮೀಲಲಿತೆಯರಂತೆ ತ್ರಿಭುವನಮುಮಭಿವಿಸಿದ ಭೂತಭವನ ವಿಜಯಕಕ್ಷ್ಮಿಗಳಂತೆ ಸಂಶೋಭಿಸುತ್ತುಮೇಳ್ತಿಂದು ಕೆಲದೊಳ್ನಿಂದು ರತಿರಾಗಮಾಗಳಂತುದಯಿಸುವ ಸಂಭೋಗಕ್ರಿಯಾ

ಕುತೂಹಳಮೆ ಸಂಭವಿಸುವ ಪರಿರಂಭೋತ್ಸುಕತೆ ಪೊದಮ್ಮಿ ಪುಟ್ಟುವ
ಬಿಂಬಾಧರಾಮೃತಸೇವೆಗೆ ಬಾಯುರೆರಯ್ಯುವ(?)ವೀರ್ಯಗಳನಮೂ ನಿಮಿಷ
[ದೊ]ಳ್ಸಮನಿಸುವ ಸುರತಪ್ರಸಂಗಮಂ ಸಂಗಳಿಸಿಯುಂ, ಸ್ವಕೀಯಕಾಮ
ಕಳಾಕುಶಲವೃತ್ತಿ ವಿಖ್ಯಾತಿವಿನೂತನವಚಃಪ್ರಚಯದಿಂ ಪ್ರಕಟಿಸಿಯುಂ, ಸಹ
ಜಸೌಂದರ್ಯಸಂಪತ್ತಿಯಿಂದಲಂಪಿಯುಂ, ಮನಃಕವಾಟಪುಟನಿಟಿತಧೈರ್ಯ
ರ್ಗಳಮನಾತ್ಮೀಯ ಮೋಹನವಕ್ತ್ರೋಕ್ತಿ ಕುಂದಕೆಗಳಂದುದ್ಘಟಿಸಲ್ಪೆಱತಿಯ
ದೆ ನಿಳಿಂಪಗಣಿಕೆಯರೀರ್ವರುಂ ಮನೋಗರ್ವಮನುಱಿದು ನರೇಂದ್ರಚರಣ
ನಳನಂಗಳ್ಗೆ ನಿಜಸೀಮಂತಸಿಂಧೂರರೇಣುಶ್ರೇಣಿಯಿಂ ಪರಾಗವಾಗಿಸಿಯು
ಮುಮರನಿಳಯಮನೆಯ್ದುವುದುಂ, ನಿರ್ವರ್ತ್ತಿತಾಷ್ಟಾಹ್ನಿಕಪೂಜನಾಗಿ—

ಪ್ರತಿವಾಯೋಗಸಮುದ್ಭವಾದಿಕಸಮುದ್ಯತ್ಸೌಖ್ಯಪೀಯೂಷಸೇ ।
ವಿತಚೇತಃಕಳಹಂಸನಾಗಿ ಬಱಿಯಂ ಸಾಗಾರಧರ್ಮೈಕನಿ ॥
ಷ್ಠಿತನಿಂತುರ್ವಿಯೊಳೊರ್ವನೆಂಬೆಸಕಮಂ ತಾನಪ್ಪುಕೆಯ್ದೊಪ್ಪಿದಂ ॥
ಸತತಂ ಮೇಘರಥಾವನೀಪತಿ ಮಹತ್ಸಾಮ್ರಾಜ್ಯಸಂಪತ್ತಿಯೊಳ್ ॥ ೭೦॥

ವ॥ ಇಂತರಸುಗೆಯ್ಯುತ್ತುಮಿರೆಯುಮುತ್ತಲೊಂದು ದಿವಸವಿಶಾನೇಂ
ದ್ರನಾಸ್ಥಾನದೊಳತಿಶಯರೂಪಸ್ತುತಿಪ್ರಸಂಗಮಾದಲ್ಲಿ ಮೇದಿನಿಯೊಳ್ಮೇ
ಘರಥಮಹಾರಾಜನ ಮನಃಪ್ರಿಯೆ ಪ್ರಿಯಮಿತ್ರಾದೇವಿಯೆ ರೂಪವತಿ
ಯುಂ ಗುಣವತಿಯುಮೆಂದು ವರ್ಣಿಸಿಯುಮದಂ ಕೇಳ್ದು ಕೌತುಕಮಿದಂ
ನೋಱಿಪ್ಪೆವೆಂದು ರತಿಯುಂ ರತಿಷೇಣೆಯುಮೆಂಬರಿರ್ವರ್ನಿರ್ಜಿಂಪನಾರಿಯರಾ
ಗಳ್ಬೀಗದಿಂ ಪುಂಡರೀಕಿಣೀಪುರಮನೆಯ್ದಿ ಮೆಯ್ಗರೆದರಮನೆಯಂ ಪೊಕ್ಕರಸಿ
ಯಂ ನೋಡಿ ಗಾಡಿಗೆ ನಾಡೆಯುಂ ಮೆಚ್ಚಿ ನಮ್ಮಧಿನಾಥನೆಂಬುದು ತಥ್ಯಮು
ಪ್ಪುದಾದೊಡಂ ಪ್ರಕಟದಿಂದಭೀಕ್ಷ್ಣಿಸಿ ಪೋಪಮೆಂದಾಪುರದ ಪರದನ ಕುಮಾ
ರಿಯುರಾಕೃತಿಯಂ ತಳೆದು ತನ್ನುಪಕಾಂತೆಯ ಮನ್ನಣೆಯು ವಿಳಾಸಿನಿಯು
ಸಾಗೆಂದೆಂದು ದೇವಿಯ ರೂಪಾತಿಶಯಾವಳೋಕನವಾಂಛೆಯಿಂ ಬಂದೆನುಗೆ
ನೀನೊಯ್ದುತೋಱೆನೆ-ತೋಱೆಂದವೆನೆಂದಾಕೆಯಾಕೆಗಳನಲ್ಲಿರಿಸೆಂದು ಚಂ
ದ್ರಕಾಲೆಯು ವಿಕಾಲನಿರ್ಮಾಹದೊಳ್ನಿಲಿಸಿ ತಡೆಯದೆ ತಾನೆಯ್ದಿ ತದ್ವೃತ್ತಕ
ಮುಂ ಬಿನ್ನವಿಸೆ-ಕೇಳ್ದು ತನ್ನ ಮನದೊಳಚ್ಚರಿವಟ್ಟು ಪಟ್ಟಮಾದೇವಿ

ಮುಜ್ಜನಕ್ರಿಯಾನಂತರಮೂಭರಣಾಭರಣಕ್ಕೆ ವಂದಳಂಕೃತಳಳೀವರೆಯಾಗಿ
ಶೃಂಗಾರಯೋಗಿಯು ಕಳಾಧಿದೇವತೆಯಂತೆ ನಡೆತಂದರಸನ ಹರಿವಿಷ್ಟರವಾ
ಮೂರ್ಧಮೂರ್ಧಾಗ್ರಮಣಿಯಾಗಿರ್ದು ಬರವೇಱಿಂ ಡಾವ್ಮೈಕ್ಯನಂದನೆಯು
ರ್ಮಂದು ಕಂಡು ಕುಳ್ಳಿರ್ದು ತವಿಮ್ಮಾರ್ವರೋರೊರ್ವರ ಮೊಗಮಂ ನೋಡಿ
ತಾವಿಮ್ಮಾರ್ವರೆಲೆ ದೇವಿ ನಿಮ್ಮಯ ರೂಪಾತಿಶಯಂ ಮುಜ್ಜನಕಾಜ್ಜುಗಿಸಿ ನೀ
ನಳಂಕೃತೆಯಾಗಿರ್ದಾಚೆಲ್ವಿನಿಂ ನಾಲ್ವಡಿ ಕುಂದಿತೆನೆ—ನೀವಾಗಳೆಂತು ಕಂಡಿ
ರೆಂದೊಡೆ-ನಿಜರೂಪಮಂ ತೋಱುತಾ ಬಂದ ತೆಱನಂ ನೆಹೆಯ್ದುಳ್ಳಿ ದಿವಿಜ
ಯುವತಿಯರುಂ ಪೋಗೆಯುಂ-ದೇವಿ ಮನದೊಳೀವಯಿಸಿ ಭೂವರನ ವದ
ನಾರವಿಂದಮಂ [1]ನೋ[ಡೆ][1]—

ಎಲೆ ದೇವಿ ಚೋದ್ಯಮಲ್ತಿದು ।
ಸಲೆ ಭಾವಿಸೆ ರೂಪಯೌವನಾಯುಷ್ಯಂಗ ॥
ಳ್ವಿಲಯಂ ಕ್ಷಣಲಕ್ಷಣಕಿವು ।
ಚಲಂಗಳಚಲಂಗಳೆಂದು ನೀಂ ಭಾವಿಪುದೇ ॥೩೧॥
ವ॥ ಅದಲ್ಲದೆಯುಂ,
ಕ್ಷಣರುಚಿ[ಯೆಸಕಂ] ಜಳಧರ ।
ಗಣದೆಸಕಂ ಶಕ್ರಚಾಪದೊಪ್ಪಂ ಕ್ಷಣಿಕಂ ॥
ಗಣಿಯಿಪೊಡವಕ್ಕೆ ವಿನಿತುಂ ।
ತೊಣೆಗಳ್ ತನುರೂಪಯೌವನಾಯುಷ್ಯಂಗಳ್ ॥೩೨॥
ವನರುಹದಳಗತಜಳಬಿಂ ।
ದು ನಿಕರದಿಂ ನೋಡೆ ನಾಡೆಯುಂ ತರಳತರಂ ॥
ಮನುಜರ ರೂಪಂ ಯೌ ।
ವನಮಾಯುರ್ವಿಭವಮಿಂತಿದೆಲೆ ಜಲಜಮುಖೀ ॥೩೩॥
ಕಿಃದಾನುಂ ಪೊತ್ತುವರಂ ।
ಬಿಳುಗಾಳಿಯ ಮುಖದ ಸೊಡರ ಸಿರಿ ಜೆರಮಿಂತೀ ॥
ತೆಳುದಿನಜೆರಂ ಕರಂ ನರ ।
ರಂಕೆಯ ತನುರೂಪಯೌವನಾಯುರ್ವಿಭವಂ ॥೩೪॥

ಸಾ.—1. ನೋಡಿ.

ವ॥ ಎಂದಿಂತು ಮೇಘರಥಮಹಾರಾಜಂ ಪ್ರಕೃತಿಚಲಮುಸ್ಪ ತನು ರೂಪಯೌವನಾಯುರ್ವಿಭವಂಗಳ ಭಂಗಿಯುಂ ತಿಳಯೆ ಪೇೞ್ದು ಪ್ರಿಯಮಿ ತ್ರಾದೇವಿ ಸಂಸೃತಿವಿರಕ್ತಿಭೃತಜಿತ್ತೆ ಚಿತ್ತಭವಭಂಜನಪದಪಯೋಜಪೂಜಾ ದಿಸಕಳಸನ್ಮಾನದಾನಂಗಳಂ ನೆಗೞುತ್ತುಮಿರೆಯುಮಾಸಮಯದೊಳ್—

ನಿವೃತಾಖಿಳರಾಜನ್ಯಕ ।
ನಿವೆಹಂ ನೃಪಮೇರು ಮೇಘರಥನೊಲೆ[1] [ದದಱಿೞಳ್][1] ॥
ಸವಿಳಾಸದಿನಿರೆಯುಂ ಋಷಿ ।
ನಿವೇದಕಂ ಬಂದನಾಗಳುತ್ಸವದಿಂದಂ ॥೩೫॥

ವ॥ ಆರುಷಿನಿವೇದಕಂ ಬಂದು ಮುಂದೆ ನಿಂದು ಮುಕುಳಿತಕರ ಕಮಳನಾಗಿ ರಾಗದಿಂದಿಂತೆಂದಂ:—

ಜನಪ ಭವದ್ಗುರು ತ್ರಿಭುವನೈಕಗುರು ತ್ರಿದಶೇಂದ್ರವಂದಿತಂ ।
ಘನರಥತೀರ್ಥನಾಥನುರುಕೇವಳಬೋಧರಮೂಧಿನಾಥನಿಂ ॥
ತನುಪಮಿತಂ ಮನೋಹರವನಕ್ಕೆ ನಿಮಿತ್ತದೆ ಬಂದು ತದ್ವನಾ ।
ವನಿಯ ತಮಿಸ್ರಮಂ ತವೆ ತೆರಳ್ಚಿದನಾತ್ಮತನೂಜ್ಜ್ವಳಾಂಕುವಿಂ ॥೩೬॥

ಎನೆ ಕೇಳ್ದಿರೆಱ್ದೊದೆಸೆ ।
ಗನುರಾಗದಿನಾಗಳಂತೆ ನಡೆದೇಱಿಯಂ ॥
ನಿನಿಹಿತಕರಕುಟ್ಮಳಘಟಿ ।
ತನಿಟಿಳತಟನಾಗಿ ಮೇಘರಥನರನಾಥಂ ॥೩೭॥

ತಡೆಯದೆ ಮಂಗಳಭೇರಿಯ ।
ನೆಡೆಯುಡುಗದೆ ಪೊಯ್ಸಿ ಮೇಘರಥನರನಾಥಂ ॥
ನಡೆದಂ ಭಕ್ತಿಪ್ರತತಿಯ ।
ಕುಡಿ ನಿಮಿರಲ್.....ಸುಪದಾಮರ[2] [ದ್ರುವ][2]ದೋಲ್ ॥೩೮॥

ಅನುರಾಗವಾಯ್ತು ಘನರಥ ।
ಜಿನಪಾಗಮನದಿನೆನಲ್ಕೆ ನವಕುಸುಮಪರಾ ॥
ಗನಿಕಾಯಪಿಹಿತಮಹಿಮೆಯ ।
ಘನೋದರೋದ್ಯಾನಮಂ ನೃಪಂ ಪುಗುತಂದಂ ॥೩೯॥

ಪಾ—1. ದೊಳ್. 2. ದ್ರುಮ.

ವ॥ ಅಗಳಿಂತು ಬಂದು ಘನರಥತೀರ್ಥಕರ ಸಮವಸರಣಮುಂ ಪೊಕ್ಕು ಗಂಧಕುಟಿಯಂ ಪ್ರದಕ್ಷಿಣಂಗೆಯ್ದು ತಾಸಸಮ[1][ದಾಸ್ಯ][1]ಮನಳ್ದು ನಮಿಪುವಂ[ತೆ] ತದೀಯಚರಣನಖಮುಖದಿನಿರ್ಗದೊಳ್ ಪ್ರತಿಬಿಂಬಿತದಾಸ್ಯನಾಗಿ ಮೇಘರಥಮಹಾರಾಜಂ ದಿವಿಜರಾಜಾರ್ಚಿತನಂ ವಿರಾಜಿತ ವಿಜೆತ್ರ ವಿವಿಧಾರ್ಚನೆಗಳಿಂದರ್ಚಿಸಿ—

ಹರಿಪೀಠಂ ಪುಂಡರೀಕತ್ರಿತಯಮಮಳಭಾಮಂಡಳಂ ಚಾಮರಂ ಚಂ।
ಚುರಪುಷ್ಪೋತ್ಕರ್ಪವರ್ಷಂ ಸುರ[2]ಪುರದ ವಶೋಕ[2]ದ್ರುಮಂ ನವ್ಯದಿವ್ಯ ॥
ಸ್ವರಮಿಂತೆ ಪ್ರಾತಿಹಾರ್ಯಾಷ್ಟಕಮಿದಿತಂ ದೇವಗೆ ತಾಸುಂಟು ನೀಂ ದೇ ।
ವರ ದೇವಂ ನಿನ್ನ ಪೆಂಪಂ ಪ್ರಕಟಿಪ್ರದತುಳಾಶ್ಚರ್ಯದಿಂದಂ ಜಿನೇಂದ್ರಾ ॥

ವ॥ ಎಂದಿಂತು ಭಕ್ತಿಭರಾನಂದದಿಂದಭಿವರ್ಣಿಸಿ ನಿರ್ಭಕ್ತಜೆತ್ತನಪ್ಪ ಮೇಘರಥಮಹಾರಾಜಂ ಸಮುಜಿತಪ್ರದೇಶದೊಳ್ಕುಳ್ದು ಪರಮಾನುರಾಗವೊದವಿ ಮುಕುಳಿತಕರಶಕಮುಳನಾ[3][ಗಿ][3] ವಿನೇಯಜನಹಿತಾಚರಣಮುಮಂ ಪಾವನಾರ್ಹದ್ಧರ್ಮನಿರ್ಮಳಾಗಾರಶ್ರಾವಕಾಚಾರಮುಮಂ ದೇವ ನೀವೆನಗೆ ನೇಮಿಸಿವೆಮೆನೆ ಘನರಥತೀರ್ಥಕರಂ ಘನಗಭೀರವಾಣಿಯರ್ ನಾದಮುಣ್ಮೆ ಇಂತೆಂದಂ:—

ಶ್ರಾವಕರಾಚರಿಸುವ ಚರಿ ।
ತಾವಳಿ ಹನ್ನೊಂದು ತೆಱನವಂ ನೆಱಿ ನೆಗಟ್ವೆ* ॥
ಶ್ರಾವಕದೊಳ್ಮೊದಲಾತಂ ।
ಭಾವಿಸೆ ದರ್ಶನಿಕನೆಂಬ ಪೆಸರಿಂದೆಸೆವಂ ॥೪೧॥

ಪಂಚಗುರುಭಕ್ತನಪಗತ ।
ಪಂಚಾದುಂಬರನತೀತಸಪ್ತವ್ಯಸನಂ ॥
ಪಂಚಭವಕಾಯಭೋಗಪ ।
ರಂ ಚಾರುಜಿನೇಂದ್ರಧಾರ್ಮಿಕಂ ದರ್ಶನಿಕಂ ॥೪೨॥

ಜಿನಮಾರ್ಗಂ ಸನ್ಮಾರ್ಗಂ ।
ಜಿನಚರಣಂ ಜನ್ಮಜಳಧಿತರಣಂ ತಾನಿ ॥

ಪಾ—1. ದಶಾಸ್ಯ. 2 ಘಹಮಶೋಕ. 3 ಗಳ್.

ನ್ನೆನಗಾವ ಭವದೆ.ಳೆಸುತುಂ ।
ಮನದೊಳ್ದೃಢನಾಗಿ ನಂಬುವುದು ಸಮ್ಯಕ್ತ್ವಂ ॥೪೭॥
ಅನವದ್ಯಹೃದ್ಯಸೌಖ್ಯದ ।
ಮೆನಿಪಕ್ಷಯವೋಕ್ಷಪದಮನೆಯ್ದಿಸುವ ವಿನೂ ॥
ತನಮಪ್ಪ ವಿಮಳಧರ್ಮಮ ।
ದನುಪಮರತ್ನತ್ರಯಾತ್ಮಕಂ ತಾನಲ್ತೇ ॥೪೪॥
ಪೆಸರ್ವೆತ್ತಾ ರತ್ನತ್ರಯ ।
ದ ಸವೋನ್ನತಿವೆತ್ತ ಪೆರ್ಮೆಯಂ ಸಲೆ ಪರಿಭಾ ॥
ವಿಸುವೊಡೆ ಪದೆಟಂ ತಾನೆ ।
ಯ್ದಿಸುವುದು ಲೋಕಾಗ್ರಪೀಠದಧಿಪತಿಪದಮಂ ॥೪೫॥
ದುರಿತಾಪವೃತ್ತಿ ಸುಚರಿತ ।
ವರದರ್ಶನಬೋಧವೃತ್ತಿ ಸರ್ವಹಿತಾರ್ಥಂ ॥
ಪರಮಜಿನಮಾರ್ಗಮಾರ್ಗಂ ।
ಪ್ಪರುಸುಖದಿಂ ಪೊರ್ದಿದರ್ಗಮಿದುವೆ ನಿಸರ್ಗಂ ॥೪೬॥
ನಿರುಪಮರತ್ನತ್ರಯದೊಳ್ ।
ವರಸಮ್ಯಗ್ದರ್ಶನಪ್ರಭಾವದೊಳಿನಸುಂ ॥
ಪರಿಭಾವಿಪೊಡಕ್ಷಯವೋ ।
ಕ್ಷರಮಾಸಂಗೈಕಸುಖದ ಕಾರಣಮುಲ್ತೇ ॥೪೭॥
ಪ್ಪದಿದಷ್ಟಾದಶದೋಷವರ್ಜಿತಜಿನಂ ತಾನಾಪ್ತನಂತಾಜಿನಾ ।
ಸ್ಯದಿನೋರಂತೊಗೆತಂದ ದಿವ್ಯವಚನೌಘಂ ಬೋಧಸಂಪತ್ತಿಯಂ ॥
ಪದೆದೀವಾಗಮವೂಸದಾಗಮದ ಪೇಳ್ದುಕ್ತಿ.....ಸೌ ।
ಖ್ಯಮೆಂದಾಚರಿಪಂ ದಿಟಂ ಮುನಿಪನೆಂಬೀಶ್ರದ್ಧೆ ಸದ್ದರ್ಶನಂ ॥೪೮॥
ಸ್ವಪರಹಿತಂ ಪೂರ್ವಾಪರ ।
ವಿಪರೀತವಿದೂರಮಿತರಮತನಿರ್ಭೇದ್ಯಂ ॥
ಸುವದಾರ್ಥಸೂಚಕಂ ಜಿನ ।
ಲಪನೋದ್ಭವದಿವ್ಯಭಾಷೆಯಾಗಮಮುಕ್ತಂ ॥೪೯॥

ಪರಮಾಗಮಜ್ಞಾನಪಹೃತ ।
ಪರಿಗ್ರಹಂ ವೀತರಾಗನುದ್ಧೂತತಮಃ ॥
ಪರಿಕರಸುಪಯೋಗಪರಂ ।
ನಿರಂತರಂ ತಾನೆನಿಪ್ಪನಾವಂ ಮುನಿಪಂ ॥೪೦॥

ವ॥ ಅಸಮ್ಯಕ್ತ್ವಸಂಪತ್ತಿಯ ಮಹಿಮೋನ್ನತ್ಯಮಿಂತೆಂದೊಡೆ:—

ಧೃತಸಮ್ಯಕ್ತ್ವಂ ಸಮುದ್ಯದ್ವ್ರತವಿಕಳತೆ ತಮ್ಮೊಳ್ಸವಂತಾ
[ದೊಡಂ ಕುಂ ।
ಶಿತಕಾಯಂ ಪಂಗು ಪಂಡಂ ಬಧಿರನಧನನಂಧಂ ವಿಧೂವ್ಯಂತರಂ ದು ॥
ರ್ಮತಿ ತಿರ್ಯಗ್ಜಾತಿಮೂಕಂ ನರಕಿ ಕುಣಿ ಕುಲಕ್ಷೀಣನುಗಾತ್ಮಕಂ ದುಃ।
ಖಿತನಜ್ಞಂ ದುಶ್ಚರಿತ್ರಂ ವಿಕಟನಘುರತಂ ರೋಗಿಯಲ್ಪಾಯುವಾಗಂ ॥೪೧॥

ಅತಿಶಯವಿಶುದ್ಧಶೀಳ ।
ವ್ರತಸಂಗತಿವೆತ್ತು ವಿಮಳಸಮ್ಯಕ್ತ್ವವಿಡಾ ॥
ಜಿತಜಿತ್ತನಪ್ಪ ಭವ್ಯಂ ।
ಗತುಳಸ್ವರ್ಗಾಪವರ್ಗಮಪ್ಪುದು ತಥ್ಯಂ ॥೪೨॥

ಸಂದೆಗಮಿದಲ್ತು ಕಿಡಿಸುವು।
ದೆಂದಂ ಸಮ್ಯಕ್ತ್ವಮೊಂದೆ ಒಹುದುಃಖಪುನೋ ॥
ರಂದದೆ ಪುಟ್ಟಿಪ ನಾಲ್ವ ।
ತ್ತೊಂದು ತೆಱಂ ದುರಿತಬಂಧನಮನಾಕ್ಷಣದಿಂ ॥೪೩॥

ಮನದೊಳ್ಶ್ರದ್ಧಾನಂ ಸಂ ।
ಜನಿಯಿಸಿದನೆ ಶುದ್ಧವೃತ್ತಸೆಂದಿರ್ದೊಡವಾ ॥
ತನೆ ದುರಿತನಿವೃತ್ತಂ ಪಾ ।
ವನತರತತ್ವಾರ್ಥವಿತ್ತನಪುಳಸಚಿತ್ತಂ ॥೪೪॥

ಜನಿಯಿಸುವುದಲ್ತೆ ಸದ್ದ ।
ರ್ಶನದಿಂ ದೇಹಿಗೆ ಸಮಸ್ತಸೌಖ್ಯೋನ್ನತಿ ತಾ ॥
ನೆನಿತಾನುಂ ಸಂಭವಿಸುವು ।
ದನಲ್ಪ ದುಷ್ಕಾಳ ಮಿಥ್ಯೆಯಿಂದಿದು ತಥ್ಯಂ ॥೪೫॥

ಹಿತವರದಾದೇ೯ಹಿಗೆ ಸ ।
ಸ್ಮುತತರಸಮ್ಯಕ್ತ್ವದಿಂದಮಹಿತರದಾದುರ್ ॥
ಪ್ಕೃತಕರಮಿಥ್ಯಾತ್ವದಿನಿಂ ।
ತತಿನಿಶ್ಚಯವಲ್ತೆ ಭಾವಿಸಿಲೆ ನರನಾಥಾ ॥೪೬॥
ಘನಕಂಕಾದಿಗಳೆಂಟಾ ।
ಅನಾಯತನಸೇವೆ ಮೂಱು ಮೂಢಂ ಮದಮೆಂ ॥
ಟನಿತಿಪ್ಪತ್ತೆಯ್ದು ಮಳಂ ।
ಜನಿಯಿಸದತಿವಿಮಳಮಲ್ತೆ ದರ್ಶನರತ್ನಂ ॥೪೭॥
ಸುಮತಂ ಕುಮತಂ ವರತ ।
ತ್ವಮತತ್ವಂ ಧರ್ಮಮುಂ ಕುಧರ್ಮಮೆನಿಪ್ಪೀ ॥
ಭ್ರಮೆಯಿಂ ಜೀವನೊಳುದಯಿಸಿ ।
ಸಮಸ್ತಯೋನಿಯೊಳ್ ಬರಿಸುವುದು ಮಿಥ್ಯಾತ್ವಂ ॥೪೮॥
ಸಮನಿಸೆ ಸಮ್ಯಙ್ಮಿಥ್ಯಾ ।
ತ್ವಮದೆನಸುಂ ತತ್ವಮುಂ ಕುತತ್ವಮುಮೆರಡುಂ ॥
ಸಮನಾಗಿ ದೇಹಿಗೊಡರಿಸಿ ।
ಸಮನಿಸಲೀಯದು ಸಮಂತು ಕರ್ಮಕ್ಷಯಮಂ ॥೪೯॥
ಸಲೆ ಸಮ್ಯಕ್ತ್ವಪ್ರಕೃತಿಯೆ ।
ವಿಳಸಿತಸದ್ದರ್ಶನಕ್ಷಣಂ ಪುಟ್ಟಿಸುಗುಂ ॥
ಚಳಮಳನಾಗಾಢತೆಯಂ ।
ತಿಳಿಪೊಳದೊಳ್ಕದಡನುದಯಿಸುವ ಪೆಱ್ಪಿಂತೆಳ್ವೊಲ್ ॥೫೦॥
ಪ್ರಕಟಿತಥಮಪ್ಪ ಸಪ್ತ ।
ಪ್ರಕೃತಿಕ್ಷಯದಿಂ ಕ್ಷಯೋಪಶಮದಿಂದಂ ಕ್ಷಾ ॥
ಯಿಕವೇದಕಂಗಳಿರದುದ ।
ಯಿಕುಮುಪಶಮದಿಂದಮುಪಶಮಂ ಸಮ್ಯಕ್ತ್ವಂ ॥೫೧॥
ಮಳರಹಿತದರ್ಶನಮನ ।
ಸ್ಖಲಿತಸ್ವರ್ಗಾಪವರ್ಗಸುಖಕರಮನದಂ ॥

ಪೆಳಸುವುದಾತ್ಮನೊಳ್ಸಂ ।
ಗಳಿಸಿದನಂತಾನುಬಂಧಿ ನಾಮಕಪಾಯಂ ॥೬೦॥

ವಿಮಳನವಿಕುದ್ಧಸಮ್ಯ ।
ಕ್ತ್ವಮುಪಾದೇಯಂ ಸಮಂತು ಹೇಯಂ ಮಿಥ್ಯಾ ॥
ತ್ವಮುದಾದೇಯಂ ಸಚ್ಚ ರಿ ।
ತಮದೆನಸುಂ ಹೇಯಮಲ್ತಿ ವಿಷಯಕಪಾಯಂ ॥೬೧॥

ವರವಂಶಂ ವಿಳಸದ್ಗೃಹೇಶ್ವರತೆ ಪಾರಿಬ್ರಾಜ್ಯಮಿಂದ್ರತ್ವಮು ।
ಚ್ಚರಿಯಂ ತಾಳ್ದಿದನೂನರಾಜ್ಯಮೆಸೆದಿರ್ಪಾರ್ಹಂತ್ಯಮಾನಿರ್ವೃತಿ ॥
ಸ್ಥಿರಸೌಖ್ಯಸ್ಥಿತಿಯೆಂಬ ಸಪ್ತಪರಮಸ್ಥಾನಂಗಳೊಳ್ಪುಟ್ಟುತುಂ ।
ಧರಿಯಿಪ್ಪಂ ವ್ರತಮುಂ ಸುಭವ್ಯನೆನಸುಂ ಸಮ್ಯಕ್ತ್ವಮಂ ಧರ್ಮಮಂ ॥

ವ॥ ಅವ್ರತಂಗಳಾವುವೆಂದೊಡೆ:—

ಪೆಣ್ಣುತಮಣುವ್ರತಮಯ್ದಾ ।
ಗುಣವ್ರತಂ ಮೂಱು ನಾಲ್ಕು ಶಿಕ್ಷಾವ್ರತಮಿಂ ॥
ತೆಣಿಕೆಗೆ ಪನ್ನೆರಡಾವ್ರತ ।
ಗಣಮೆನಸುಂ ಭವ್ಯಜನಚಯಕ್ಕಾಧೇಯಂ ॥೬೪॥

ಸಮುಜಿತಸದ್ಧರ್ಮಸುರ ।
ಧ್ರುಮಮೂಳವಮಿಂತಹಿಂಸೆಯಸ್ತೇಯಂ ಸ ॥
ತ್ಯಮಕಾಂಕ್ಷಾನಿವೃತ್ತಿ ಪರ ।
ಪ್ರಮದಾಜನವಿರತಿಯೆಂಬಣುವ್ರತತತಿಗಳ್ ॥೬೫॥

ವ॥ ಇಂತೀಪಂಚಾಣುವ್ರತಂಗಳ ಫಳದಿಂ ಪರಿಲಬ್ಧಿಯಾವುದೆಂ
ದೊಡೆ:—

ಪರಪತ್ನೀವಿರತಿವ್ರತಾತಿಶಯದಿಂ ಸೌಭಾಗ್ಯಮಸ್ತೇಯದಿಂ ।
ನಿರವದ್ಯೋನ್ನತಶೋಭೆವೆತ್ತ ಸಿರಿ ಸತ್ಯೋದಗ್ರದಿಂ ಸೂಕ್ತಿಭಾ ॥
ಸುರವಿಸ್ತಾರಮಹಿಂಸೆಯಿಂದಖಿಳಲೋಕಾನೀಕಮಿತ್ರತ್ವಮು ।
ದ್ಧುರನಿಷ್ಕಾಂಕ್ಷೆಯಿನಪ್ಪುದಸ್ಖಳಿತವೋಕ್ಷಾಕೂಣಸೌಖ್ಯೋತ್ಕರಂ ॥

ಅತಿಶಯಮಪ್ಪುಮೂಲ ।
ವ್ರತಮೆಂಟುಂ ಮುಖ್ಯಮೆನಿಸಿದಣುಗುಣಶಿಕ್ಷಾ ॥
ವ್ರತಮೆಂಬೀಪನ್ನೆರಡುಂ ।
ವ್ರತವಿತತಿಯನೊಪ್ಪೆ ನೆಗಜುತಿರ್ಪಂ ಬ್ರತಿಕಂ ॥೪೪॥
[1]ಕರ[1]ಕುಟ್ಮಳಧೃತನಿಟಿಳಂ ।
ಕರಣತ್ರಯಶುದ್ಧಿಯಿಂ ತ್ರಿಸಂಧ್ಯೆಯೊಳರ್ಹ ॥
ಚ್ಚರಣಕ್ಕೆಱಗಿ ಯಥಾಕ್ರಮ ।
ನಿರುತಂ ಸ್ತುತಿಗೆಯ್ವನೆಱಕದಿಂ ಸಾಮುಯಿಕಂ ॥೪೫॥
ತನುಶಕ್ತಿಯಱಿದು ತಿಂಗ ।
ಳ್ಗೆ ನಾಲ್ಕು ಪರ್ವೋಪವಾಸಮುಂ ಮಾಪ್ಪು ಜಿನೇಂ ॥
ದ್ರನನಮುಳಭಕ್ತಿಯಿಂದ ।
ರ್ಚನೆಗೆಯ್ವಂ ಪ್ರೋಷದೋಪವಾಸಿಯೆನಿಪ್ಪಂ ॥೪೬॥
ಫಳಕಂದಮೂಳಬೀಜಾ ।
ವಳಶಾಕಾದಿಗಳ ಪಾಕವಸ್ತುಗಳವು ಸಂ ॥
ಗಳಿಸಿರೆ ಕೊಳ್ಳಂ ಕರುಣಾ ।
ಕಳಿತಸ್ವಾಂತಂ ಸಜೆತ್ತ ನಿರತಂ ನಿರತಂ ॥೪೭॥
ಎನಿತಾನುಂ ಜೀವಂಗಳೊ ।
ಳನುಕಂಪಾತ್ಮ [ದೆ] ಚತುರ್ವಿಧಾಹಾರಮನಿಂ ॥
ತು ನಿತಾಂತಂ ನಿಶಿಯೊಳ್ಕೊ ।
ಳ್ಳನದೆಂತುಂ ರಾತ್ರಿಭಕ್ತವಿರತಂ ನಿರತಂ ॥೪೮॥
ಮಳಮೂತ್ರಾಂಗವನೀ ತನು ।
ಕೊಳೆ ನೆತ್ತರ[2] ಬಿಱಿಯು ತೊರತೆ[2] ಯೋನಿಯೆ ತಾನೆಂ ॥
ದೆಳಸದೆ ಲಲನಾಸಂಗಮ ।
ನುಱಿದಿರ್ಪಂ ಬ್ರಹ್ಮಚಾರಿ ವಿಜಿತವಿರಾಜಂ ॥೪೯॥
ಘನದೋಷಾಕರಮಿದು[3] ನೆ ।
ಟ್ಟನೆ ಕೃಷಿಸೇವಾವಣಿಕ್ಪ್ರಮುಖ್ಯಂಗಳ್ಗಂ ॥

ಪಾ—1. ನಕ 2. ಬರೆಯುತೊಳಿ. 3. ಧೆ.

ಎನಿತನಿತನುಱೀದನಾರಂ ।
ಭನಿವೃತ್ತನೆನಿಪ್ಪ ನಾಮದಿಂದೆಸೆದಿರ್ಪಂ ॥೭೪॥
ವಿಸ್ತರಿಸುವ ಬಾಹ್ಯೋಪರಿ ।
ವಸ್ತುಗಳ ಮಮತ್ವಮುಱೀದು ನಿರ್ಮಮತಾವಿ ।
ನ್ಯಸ್ತಮನನಾಗಿ ಜಿನಚರ ।
ಣಸ್ತುತಿಶತಕೃತಿರತಂ ಪರಿಗ್ರಹವಿರತಂ ॥೭೫॥
ಬಹಳಾರಂಭಾದಿಪರಿ ।
ಗ್ರಹಮೆಂಬೈಹಿಕದ ಕರ್ಮದನುಮತಿಯಂ ನಿ ॥
ಸ್ಪೃಹನಾಗಿ ತೊಱೆದು ಹರ್ಷಾ ।
ವಹನೆನೆ ನೆಗಱ್ದಿರ್ಪನಾತನನುಮತಿವಿರತಂ ॥೭೬॥
ತನಗೆಂದುದುಮಂ ಕೊಳ್ವಂ ।
ಮನೆವೊರ್ದಂ ಬಂಧಪಟಧರಂ ಸಲೆ ಭೈಕ್ಷಾ ॥
ಕನಿ ಗುರುಪದಾಂತಿಕಾಶ್ರಿತ ।
ನೆನಿಸಿದನುದ್ದಿಷ್ಟವಿರತನೆಂಬುದು ಪೆಸರಿಂ ॥೭೭॥
ಕ್ರಮದಿಂದುಪಾಸಕಾಚಾ ।
ರಮನಿನಿತಂ ಪೇೞ್ದು ಮೇಘರಥನರನಾಥಂ ॥
ಗಮಳನನಯನಿಕ್ಷೇಪ ।
ಪ್ರಮಾಣದಿಂ ಘನರಥಾಹ್ವಯಂ ತೀರ್ಥಕರಂ ॥೭೮॥

ವ॥ ಮತ್ತಂ ನಿತ್ಯಮಹಸ್ಸರ್ವತೋಭದ್ರಾಷ್ಟಾಹ್ನಿಕಚತುರ್ಮುಖಕಲ್ಪವೃಕ್ಷೇಂದ್ರ ಧ್ವಜಾತಿಭೇದನಾದರ್ಹದ್ಭಟ್ಟಾರಾನಿಶ್ಯೇಷಮುಮಂ। ಅಸೀಮಋಷಿಕೃಷಿವಾಣಿಜ್ಯ ಶಿಲ್ಪಾದಿ ಪಾಪಾಪಚಯಕರಣಪೂರ್ವಕಮುತ್ಥೋರ್ಧ್ವಾರ್ಜನಪ್ರವರ್ತನಾವರ್ತ ಯುಮಂ । ದಯಾಪಾತ್ರಸಮುಸಕಳಭೇದೋಪಾತ್ತಮಾದ ದತ್ತಿಯುಮಂ। ವಾಚನಾಪೃಚ್ಛನಾನುಪ್ರೇಕ್ಷಾಮ್ನಾಯಧರ್ಮೋಪದೇಶಮುಪ್ಪ ಸ್ವಾಧ್ಯಾಯ ಮುಮಂ । ಪ್ರಾಣೇಂದ್ರಿಯಪ್ರಮಾದವಾರ್ತಾವಾಚರ್ಯಮುಮುಪ್ಪ ಸಂ ಯಮಮುಮಂ । ಅನಶನಾದಿಕಾಯಕ್ಲೇಶನಿಷ್ಕಾಗರಿಮತಪಃಕ್ರಮಮುಮಂ । ವಿಶುದ್ಧದರ್ಶನೋಜ್ಜಿತಕ್ರಮಮುಮುಪ್ಪೈವತ್ತ ಮೂಱು ಗಭರ್ಾ

ಧಾನಕ್ರಿಯೆಗಳುಮಂ। ನಾಳ್ವತ್ತೆಂಟು ದೀಕ್ಷಾನ್ವಯಕ್ರಿಯೆತರ್ಪಾವಾಗಳು(?)
ಮಂ । ಏಟುಂ ತೆಱದ ಕರ್ತಾನ್ವಯಕ್ರಿಯೆಗಳುಮಂ ಪೇೞ್ದು ನೀನೀ
ಭವಕ್ಕೆ ಮೂಱನೆಯ ಜನ್ಮದೊಳ್ ಜಂಬೂದ್ವೀಪದ ಭರತಕ್ಷೇತ್ರದೊಳ್ಪಂ
ಚಮಚಕ್ರವರ್ತಿಯುಂ ಪದಿನಾಱನೆಯ ತೀರ್ಥಕರನುಮಪ್ಪೆ ಎನಲದಱಿಂ
ಕೇೞ್ದು ಹದಿನಾಱುಮಡಿ ಪರಮಹರ್ಷೋತ್ಕರ್ಷಮನಪ್ಪುಕೆಯ್ದು ಮೇ
ಘರಥನುಹಾರಾಜಂ ತದೀಯಪದನಖಮಯೂಖಮಲ್ಲಿ ಕಾನೀಕಶೇಖರಿತ
ಕೋಟೀರನಾಗಿ—

ಮನದೊಳ್ಮನ್ನಮೆ ರಾಜ್ಯವಲ್ಲಿಯ ತೊಡರ್ಪಂ ನಾಡೆಯುಂ ಬಿಟ್ಟು ನೆ।
ಟ್ಟನೆ ಕೈಕೊಂಡಪನಲ್ತೆ ನಿಶ್ಚಳಸನ್ನಿಶ್ರೇಯಸಶ್ರೀಯ ಸ ॥
ಯ್ಪೆನಸುಂ ಕೂಡುವ ದೂತಿಯಪ್ಪ ಸುತಪಸ್ತ್ರೀಸಖ್ಯಮಂ ಮಾಡಲಾಂ ॥
ನೆನೆದಂತೀಗುರು ಪೇೞ್ದನೆಂದು ನೃಪನತ್ಯಾನಂದಮಂ ತಾಳ್ದಿದಂ ॥೭೯॥

ವ॥ ಇಂತು ಮನದೊಳ್ನಿಶ್ಚಯಿಸಿ ಮೇಘರಥಮಹೀನಾಥಂ ನಿಜಾ
ನುಜನಪ್ಪ ದೃಢರಥನ ವೊಗಮಂ ನೋಡಿ—

ವಿನಯಂ ನಿಮ್ಮೊಳ್ನಿಜಂ ಮದ್ವಚನಲವಮನುಲ್ಲಂಘನಂಗೆಯ್ದುದಿಲ್ಲಂ।
ಬಿನಿತಂ ಬಲ್ಲಂ ಸಮಂತಾದೊಡಮಿದನೆ ದಿಟಂ ಪೇೞ್ದಪೆಂ ಪೇೞ್ದವೊಲ್ಕೊಳ್ಗಂ॥
ಕೆನೆ ಕೈಕೊಳ್ಪ ರಾಜ್ಯಸಾಮ್ರಾಜ್ಯಮನನುನಯದಿಂ ತಾಳ್ದ ನಿತ್ಯಂಸಮಸ್ತ।
ವನಿಯಂ ಸಲ್ಲೀಲೆಯಿಂ ಪಾಲಿಸು ದೃಢರಥ ನೀನೆಂದು ಭೂನಾಥನೆಂದಂ ॥

ನೀನಲ್ಲದೆ ತಾಳ್ದುವರಾ ।
ರೀನಿರುಪಮರಾಜ್ಯಭರಮನಿದನೆಂದಾತ್ಮೀ ॥
ಯಾನುಜ ದೃಢರಥನೃಪತಿಗೆ ।
ಭೂನಾಥಂ ನುಡಿದನಿಂತು ನಯಮುಂ ಪ್ರಯಮುಂ ॥೮೧॥

ತನಗಿಂತು ನುಡಿದ ಮೇಘರ ।
ಥನರೇಂದ್ರನ ಮಾತುಗೇೞ್ದು ಮಂದಸ್ಮಿತಮುಂ ॥
ಡನವುಂಡನಾಗಿ ದೃಢರಥ ।
ನೆನಸುಂ ಕಯ್ಮುಗಿದು ಮೆಲ್ಲನಿರದಿಂತೆಂದಂ ॥೮೨॥

ದೇವರ ಕಾರ್ಯಮೆಂಬುದಾವುದುಂ ನೀವೆನಗೊಲ್ವುದಿಂತು ಸಂ ।
ಭಾವಿಸದೇಕೆ ನೋಮಿಸಿದಿರಾಂ ಭವದಂಘ್ರಿಸಗಳಂದೆ ಪಿಂಗಿ ಪಿಂ ॥

ತಾವಗಮಿರ್ದನೇಂ ದುರಿತಭೂಜನರಾಜ್ಯದೊಳಂತದಿರ್ದ ನಿ ।
ಮ್ಮಾವಿಳಸತ್ಪದಾಬ್ಜಮನಗಲ್ವುದೆಯೆನ್ನ ಮನೋಮಧುವ್ರಜಂ ॥೪೩॥
ಭಿನ್ನಮನಮಾಡಿ ನೋಮಿಸು ।
ವೆನ್ನನೆ ಭವದಂಘ್ರಿಸಂಗದಿಂ ಪಿಂಗುವೆನೆಂಬೀ ॥
ಬಿನ್ನವಿದಿಂನವಧರಿಸುವು ।
ದೆನ್ನ ಮನೋವೃತ್ತಿ ದೇವ ನೀವಱಿಯದುದೇ ॥೪೪॥
ಸಮನಿಪುದು ಸಕಳದುಷ್ಕೃತ ।
ಸಮುದಯಮನವೋಘುಮೆನಿಪ ರಾಜ್ಯಮಹಾಭಾ ॥
ರಮನೀಗಳ್ತಳಿದಂ ತಾಂ ।
ಭ್ರಮಿತಾತ್ಮನೆ ನಿಮ್ಮ ತಮ್ಮನಲ್ಲನೇ ನೃಪತೀ ॥೪೫॥
ಎನೆ ಕೇಳ್ದಾಗಳ್ ತಮ್ಮನ ।
ಮನದ ಪರಿಚ್ಛೇದಮಂ ವಿಚಾರಿಸಿ ತಾನಿಂ ॥
ತು ನಿಜಸ್ವಾಂತದೊಳತಿಮುದ ।
ಮನೆ ತಳಿದಂ ಮೆಚ್ಚಿ ಮೇಘರಥನರನಾಥಂ ॥೪೬॥
ಅಸುಜಂಬೆರಸುರುಮುದದಿಂ ।
ದೆನಸುಂ ತಡೆಯದೆ ನರೇಂದ್ರನಾಗಳ್ನಿಜನಂ ॥
ದನನಪ್ಪ ಮೇಘಸೇನಂ ।
ಗನುಪಮನಿಜರಾಜ್ಯಪದವಿಯುಂ ಪದೆದಿತ್ತಂ ॥೪೭॥
ಅನುಪಮಿತಾತ್ಮಕೀರ್ತಿ ಭುವನತ್ರಯಮುಂ ಬೆಳಗುತ್ತಿರಲ್ಕೆ ತಾ ।
ನನುಜಸಮನ್ವಿತಂ ತಡೆಯದಷ್ಟಸಹಸ್ರನರೇಂದ್ರಸಂಯುತಂ ॥
ಮನದನುರಾಗದಿಂ ತಳಿದನಾಗಳೆ ಮೇಘರಥಾವನೀಶನಾ ।
ಘನರಥತೀರ್ಥನಾಥಪದಪಾರ್ಶ್ವದೊಳಕ್ಷಯಜೈನದೀಕ್ಷೆಯಂ ॥೪೮॥
ನರಪಂ ಪದಯೊ(?)ಳಾಶಾಂ ।
ಬರಪರಿವೃತಕೀರ್ತಿಯಾದನದುವಾಗ್ದಮಿಳಾ ॥

ವರನಾಸಾಂಬರಧರಕೀ ।
ರ್ತಿರಮಾಪರನಾಥನಾದನದು ಜಿತ್ಕ್ರತರಂ ॥ ॥೪೯॥
ಸುರುಚಿರಪಂಚಮಹಾವ್ರತ ।
ನಿರತಂ ಧೃತಪಂಚಸಮಿತಿಯೆನಿಸಿಯುಮಷ್ಟೋ ॥
ತ್ತರವಿಂಶತಿಮೂಲಗುಣಾ ।
ಭರಣಂ ತಾನಾಗಿ ಮೇಘರಥಯತಿಯೆಸೆದಂ ॥೫೦॥
ಪೆಸರ್ವೆತ್ತಾ ಮುನಿಪಂ ಶೋ ।
ಭಿಸುವಪ್ಪತ್ತಾದಶಸಹಸ್ರಶೀಲಸಮಾಜಾ ॥
ವಸಥಂ ವಿಖ್ಯಾತಿಯು ಚತು ।
ರಶೀತಿಲಕ್ಷಗುಣಮಣಿವಿಭೂಷಣನಾದಂ ॥೫೧॥
ಕ್ಷುಮಾಮಾರ್ದವಾರ್ಜವಮು ।
ತ್ತಮಸತ್ಯಂ ಶುಚಿತೆ ಸಂಯಮಂ ಸುತಪಂ ತ್ಯಾ ॥
ಗಮಕಿಂಚನತ್ವಮಾಶ್ಚ ॥
ರ್ಯಮೆನಿಪ್ಪ ಬ್ರಹ್ಮಚರ್ಯಮಿದು ದಶಧರ್ಮಂ ॥೫೨॥

ವ॥ ಇಂತು ನೆಗಟ್ಟಿವೆತ್ತ ನಿರ್ಮಲದಶಧರ್ಮಂಗಳೊಳ್ಮೀಘರಥ ಯತಿನಾಥನಕ್ಷೂಣಕ್ಷವಾಳಂಕೃತನುಂ ಮಾರ್ದವೋದಂಚಿತನುಂ ಸತ್ಯಸಂಯುತನುಂ ಶೌಚಶೋಭಿತನುಂ ಸಂಯಮಾನ್ವಿತನುಂ ಸುತಪಃಭೃತನುಂ ತ್ಯಾಗಾನುರಾಗನುಮಾಕಿಂಚನ್ಯವರ್ಯನುಮಾಶ್ಚರ್ಯಬ್ರಹ್ಮಚರ್ಯನುಮಾಗಿ—

ಅಱುಂ ತೆಱದ ಬಹಿಸ್ತಪ ।
ವಾಱುಂ ತೆಱದಂತರಂಗತಪವಿಂತೆಸೆವೀ ॥
ರಾಱು ತಪಂಗಳುಮುಂ ಮೆ ।
ಯ್ವೀಱೀ ಕರು ನೆಗಟ್ದಿನೆಯ್ದಿ ತನ್ಮನಿಮುಖ್ಯಂ ॥೫೩॥
ಎನಸುಂ ಭಾವಿಸೆ ಸಾಕಾ ।
ರನಿರಾಕಾರಂ ದಲೆಂದೆರಟ್ಟಿಱುದಿಂ ನೆ ॥
ಟ್ಟನೆ ತೋಕೆರ್ದವೆತ್ತ ವೊದಲನ ।
ಶನತಪಮಂ ತಳೆದನಿಂತು ಮುನಿಪಂ ಮುದದಿಂ ॥೫೪॥

ನೆಗಟ್ಟಿಂದು ತುತ್ತಿನುಣಿಸಿನೊ ।
ಳಗುಟ್ಟಿಂದಪ್ಪಿನೆಗವಿಟ್ಟಿ ತತ್ಕ್ರಮದಿಂದಾ ॥
ವಗವೇಳ್ಪೆರಡನೆಯ ತಪ ।
ವೊಗೆದುದು ತನ್ಮನಿಗೆ ವರ್ಯಮದವೋದರ್ಯಂ ॥೯೫॥
ಇದಿರ್ವಂದೆಮಗಿಂ ನೀ ನಿಲಿ ।
ನಿದೊಡೆಂತು ನಿಲ್ಲೆವೆಂಬ ಪೂಣ್ಕೆಯೊಳೊಂದಿ ॥
ಪ್ಪುದು ಮೂಱನೆಯ ತಪಂ ಸಂ ।
ದುದು ತನ್ಮನಿಪತಿಗೆ ವೃತ್ತಿಪರಿಸಂಖ್ಯಾನಂ ॥೯೬॥
ನುನಿಪತಿಯೊಳಿಸದುದೆನಸುಂ ।
ವಿನುತಪಯೋದಧಿಘೃತಾದಿರಸವರ್ಜಿತದಿಂ ॥
ದನವರತಂ ನೆಗಟ್ಟಿಬ್ಬರಿ ।
ಯೆನಿಸಿದ ನಾಲ್ಕನೆಯ ರಸಪರಿತ್ಯಾಗತಪಂ ॥೯೭॥
ಯುವತಿನಪುಂಸಕಪಶುಮೃಗ ।
ಮಿವಿರ್ದುದಿರಲಾಗದೆಂಬುದೆ ವಿವಿಕ್ತಾವಾ ॥
ಸವೆನಿಪ್ಪಯ್ದನೆಯ ತಪಂ ।
ಪ್ರವಿದಿತವಾಯ್ತಲ್ತೆ ಮೇಘರಥಯತಿಪತಿಯೊಳ್ ॥೯೮॥
ಸಮನಿಪ ಕಾಲತ್ರಯದೊಳ್ ।
ಕ್ರಮದಿಂ ಕಲ್ನೆಲೆ ಜಲಾಂತ ತರುಮೂಲದೊಳಿಂ ॥
ತಮುರ್ದಿರೆ ತಾಂ ಕಾಯಕ್ಲೇ ।
ಶಮೆನಿಪ್ಪಾಱನೆಯ ತಪದೊಳಿಸೆದಂ ಮುನಿಪಂ ॥೯೯॥
ಪಿರಿದುಂ ನೋಡಿದರೆವೆ ನೀ ।
ಕರಿಯೋದಪ್ಪದೆನಿಪ ಬಿಸಿಲ್ಗೆ ಪೊಸಜೊನ್ನದವೋ ॥
ಲಿರೆ ಮುನಿವರನಿರ್ದಂ ಶಾಂ ।
ತರಸಂ ನೆಲೆವೆರ್ದೆ ಸಾಡೆಯುಂ ಕಲ್ನೆಲೆಯೊಳ್ ॥೧೦೦॥
ಘನಲಕ್ಷ್ಮೀ ಭಾವಿಜಿನನ ।
ಪ್ಪನೆಂದು ತಾನಱಿದು ಮಾಡುವಭಿಷವಮೆನೆ ಭೋ ॥

ರೆನೆ ಸುರಿವ ಮಲಿಯ ಸರಿಯೊಳ್ ।
ಮುನಿ ಮರ ಮೊದಲೊಳ್ಸುಖೈಕಭಾವದಿನಿರ್ದಂ ॥೧೦೧॥

ವಿನುತಜಿನಭಾವಸುಖಸಂ ।
ಜನಿತಲಸತ್ಪುಳಕಕುಳಮೆನಲ್ಕೆ ತುಷಾರಂ ॥
ತನುವಂ ತುಳುಗಿರೆ ಶಿಶಿರದೊ ।
ಳನಾರತಂ ಬೆಳ್ಳವಾಸದೊಳ್ಮುನಿಯಿರ್ದಂ ॥೧೦೨॥

ವ॥ ಮತ್ತಂ ಪ್ರಾಯಶ್ಚಿತ್ತವಿನಯವೈಯಾವೃತಸ್ವಾಧ್ಯಾಯವ್ಯುತ್ಸ
ರ್ಗಧ್ಯಾನಮೆಂಬಾಱುಂ ತೆಱದಾಭ್ಯಂತರತಪಂಗಳೊಳ್ನಿಱಿದು—

ನೆಱಿ ನೆಗಲ್ದಿಂ ಪನ್ನೆರಡುಂ ।
ತೆಱದ ತಪಂಗಳುಮನೋವದಿಪ್ಪತ್ತಿರಡುಂ ॥
ತೆಱದ ಪರೀಷಹತತಿಯುಂ ।
ನೆಱಿ ಗೆಲ್ದಾವೋಘರಥಯತೀಶಂ ಮೆಱೆದಿದಂ ॥೧೦೩॥

ತನುವೆನಸುಂ ತ್ವಗಸ್ಥಿತಪರೀಷಮೆನಲ್ಕ ಕೃಶಮಾದುದಾಗಳಾ ।
ತನುವಿನೊಳಗ್ನಿ ಪೋದುವಖಿಳೇಂದ್ರಿಯಮುಂತವು ಪೋಗೆ ಸಾಸ್ಥ್ಯವಾ ॥
ಮನಕೆ ಪೊದಟ್ಟುದಃತದಹಿನಾದುದನೂನಮೆನಿಪ್ಪ ಜಾನವಾ ।
ಜನಿಯಿಸಿದೊಂದು ಜಾವದ ಪೊದಟ್ಟಿಕ್ಕಿಯಿನಾಯ್ತಘಸಂಚಯಕ್ಷಯಂ ॥

ಮತ್ತಂ ತನ್ಮನಿಪತಿ ಮೂ !
ಳೀತ್ತರಗುಣಗಣಮನುತ್ತರೋತ್ತರವಾ ॥
ಗುತ್ತಿರೆ ನೆಗಟ್ಟಿದತ್ತುಂ ಪೆಸ ।
ರ್ವೆತ್ತಂ ಸುತಪಃಪ್ರಭಾವದಿಂ ಯತಿತತಿಯೊಳ್ ॥೧೦೪॥

ಅನುನಯದಿಂ ಪೊರೆಡಶಭಾ ।
ವನೆಯಂ ಭಾವಿಸುತುಮಿರ್ಪ ಸಯ್ಪುದಯಿಸಿದ ॥
ತ್ತನೆ ನಿಶ್ಶ್ರೇಯಸಮಿದಿರ್ವ ।
ರ್ಗನಘಮಹತ್ವಂಗೆ ಮತ್ತಿದಾವುದು ಚಿತ್ರಂ ॥೧೦೫॥

ಅದೆಂತೆಂದೊಡೆ:—ತೀರ್ಥಕರಮಹಾಪುಣ್ಯಕಾರಣಂಗಳಪ್ಪ ಶಂಕಾದಿ
ಮಳಶಹಿತಸನ್ಯಗ್ದರ್ಶನವಿಶುದ್ಧಿಯುಂ । ರತ್ನತ್ರಯಾಂಗಳೊಳ್ತದ್ವಂತರೊ

ಳಪ್ಪುಚ್ಚೈರ್ಯತ್ತಿವಿನಯಸಂಪನ್ನತೆಯುಂ । ಕ್ರೋಧಹಿಂಸಾವಿರಹಿತಮಪ್ಪ ಬ್ರತಾನದಿತಿಚಾರಮುಂ । ನಯಪ್ರಮಾಣನಿಕ್ಷೇಪಲಕ್ಷಿತಶಾಸ್ತ್ರಾಧ್ಯಯನ ಲಕ್ಷಣಮಪ್ಪಭೀಕ್ಷ್ಣಜ್ಞಾನೋಪಯೋಗಮುಂ। ದುಃಖಾಗಾರಘೋರಸಂಸಾರಭೀರುತ್ವಪ್ರಕೃತಿಯಪ್ಪ ಸಂವೇಗಮುಂ । ಅಭಯದಾನಾದಿಗಳೊಳ್ ಶುಭತರಮಪ್ಪ ಶಕ್ತ್ಯನುರೂಪತ್ಯಾಗಮುಂ । ಸಾಮಾಥೋರ್ಧ್ವಪರೂಢಿವೆತ್ತ ಶರೀರಕೃಶ ಲಕ್ಷಣಮಪ್ಪ ಶಕ್ತ್ಯನುರೂಪತಪಮುಂ ಸಮುಪಾತ್ತಸತ್ತ್ವೋ ವಿಘ್ನವಿಧ್ವಂಸಕರಮಪ್ಪ ಸಾಧುಸಮಾಧಾನಮುಂ।ಭವ್ಯಜೀವಸಂದೋಹದುಃಖಬಂಧನಾಪ್ತಿತಿಪೀಡಾಪರಿಹಾರಮಪ್ಪ ವೈಯಾವೃತ್ಯಮುಂ । ಅರ್ಹದ್ಭಕ್ತಿಯಾಚಾರ್ಯಭಕ್ತಿ ಬಹುಶ್ರುತಭಕ್ತಿ ಪ್ರವಚನಭಕ್ತಿಯಪ್ಪ ಚತುರ್ಭಕ್ತಿಯುಂ। ಷಟ್ಪ್ರಕಾರಾವಶ್ಯಕಕ್ರಿಯಾಪರಿಪಾಲಕಮಪ್ಪಾವಶ್ಯಕಮುಂ । ತಪೋಜ್ಞಾನ ಪ್ರಭಾವನಮಪ್ಪ ಮಾರ್ಗಪ್ರಭಾವನೆಯುಂ । ಸದ್ಧರ್ಮಸ್ನೇಹಮಪ್ಪ ದರ್ಶನ ವತ್ಸಳಕೂರಮುವೆಂಬ ಷೋಡಶಭಾವನೆಗಳ್ ತಮ್ಮೊಳನೂನಮಾಗದೆ ನಿಸಿ ನೆಗಲ್ತು ವಿರ್ದು—

ನಾನಾದೇಶಂಗಳನೆನಿ ।
ತಾನುಂ ಪಾವನತೆಗೆಯ್ದಿ ಪಕ್ಕಾಗಿಸುತುಂ ॥
ಜ್ಞಾನನಿಧಿ ಮೇಘರಥಯತಿ ।
ತಾನಿಂತು ವಿಹಾರಿಸುತ್ತಮಿರಲನವರತು ॥೧೦೬॥

ವ॥ ಅಂತು ನಲಕಾಲಮಕಾಲಂ ತಪೋಲೀಲೆಯಿಂ ವಿಹಾರಿಸುತ್ತಂ ಬಂದು ಚರ್ಯಾಪರ್ಯಾಯದಿಂ ಶ್ರೀಪುರದ ಪರಪೇಣುಮಹಾರಾಜನುಂ ದತ್ತಪುರದ ನಂದನನರೇಂದ್ರನುಂ ಪುಂಡರೀಕಿಣೀಪುರದ ಸಿಂಹಸೇನಭೂನಾಥನುಂ ಭಕ್ತಿಯುಕ್ತಂ ವಿಧಿಪೂರ್ವಕಂ ನಿಲಿಸಿ ನಿಂದು ಪಂಚಾಶ್ಚರ್ಯಮಾಗಿ ನೆಗಲ್ದಿಂತು ಚರಿಯಿಸುತ್ತಮಿರಲಾಗಳ್—

ಶ್ರೀಮೇಘರಥಯತಿಗೆ ವಿನು ।
ತಾಮಳಬೋಧಾಂಬುನಿಧಿಗೆ ಸಂಭವಿಸಿದುದಾ ॥
ಜ್ಞಾಮಳದುರುಸಾಮಾಥ್ಯೋರ್ಧ ।
ದ್ಧಾಮಂ ಸಪ್ತಪ್ರಸಿದ್ಧ.....ಸ್ತೋಮಂ ॥೧೦೭॥

ಸುಗತಿವಡೆವುದಿನ್ನೆಂತು. ಕು ।
ಗತಿಗೆ ಸಲೆ ಸಲ್ಲ್ನೆಂಬವೊಲ್ನೆಲಸಂ ನೆ ॥
ಟ್ಟಗೆ ಮೆಟ್ಟರೆ ತನ್ಮನಿಪಂ ।
ಮುಗಿಲ್ವಟ್ಟೆಯೆ ಬಟ್ಟೆಯಾಗಿ ಚರಿಯಿಸುತಿರ್ದಂ ॥೧೦೯॥

ವ॥ ಇಂತಪಾರಮೆನಿಸಿದ ಸಂಸಾರಪಾರಾವಾರೋತ್ತರಣಕಾರಣಮು ಪ್ಪಾಚಾರಣಮಪ್ಪ ರುಷಿಬಹಿತ್ರದಂತೆ ಮೇಘರಥಯತಿವರಂ ವಿಹಾರಿಸು ತ್ತುಮಿರ್ದು—

ನಿರುತಂ ಭಾವಿಸಿದಂ ನಿಜಾಂತರದೊಳಂತಾಯೋಗಿವರ್ಯಂ ವಿಭಾ ।
ಸುರಬೋಧಾತ್ಮಕನಮ್ಮವಾಶರಣಸಂಸಾರೋದ್ಯದನ್ಯತ್ವವಿ ॥
ಸ್ತರತ್ಯೈಕತ್ವಜಿರಾಸುಜೆತ್ಯವಿಳಸಲ್ಲೋಕಾಶ್ರವಖ್ಯಾತಸಂ ।
ವರೆಯಾನಿರ್ಜರೆ ಬೋಧಿಧರ್ಮವೆನಿಸಿಪ್ಪೀರಾಱನುಪ್ರೇಕ್ಷ್ಯಯಂ ॥೧೧೦॥

ಜೀವಾವಸಾನಮಂ ಸಂ ।
ಭಾವಿಸಿ ದೃಢರಥಸಮನ್ವಿತಂ ನಡೆದಂ ಶೋ ॥
ಭಾವಹನಭಸ್ಥಳಕಗಿರಿ ।
ಗಾವೇಗದಿನೆಯ್ದೆ ಮೇಘರಥಯತಿನಾಥಂ ॥೧೧೧॥

ಎನೆ ಸಾರ್ಥಕಮಾಯ್ತು ನಭ ।
ಸ್ಥಳಕಾಖ್ಯಂ ತನಗೆನುತ್ತುಮೀಕ್ಷಿಸಿ ಜನಮೂ ॥
ಜಳದಾಧ್ವರಮಾನನಮಂ ।
ಸಲೆ ಚುಂಬಿಸುತಿರ್ಪುದಾನಭಸ್ಥಳಕನಗಂ ॥೧೧೨॥

ವ॥ ಆಗಳಾಮೇಘರಥಮುನಿನಾಥಂ ದೃಢರಥಯತಿಸಮನ್ವಿತಂ ಸ ರ್ವಾರ್ಥಸಿದ್ಧಿಪ್ರಾಸಾದಸೋಪಾನನಿವಹಾರೋಹಣನುನಭಿನಯಿಸುವಂತೆ ನ ಭಸ್ಥಳಕನಗಾಗ್ರಮನಾಗಳೇಱಿ ನೇಪುರ್ವಡೆದ ವಿಶಾಲಶಿಲಾಪಟ್ಟದರು ಣಕಿರಣಂ ನಿಜಚರಣಪಲ್ಲವಪ್ರಭೆಗಣದಿಂ ಪಲ್ಲವಿತಂ ಮಾಡಿ—

ಇನ್ನೊಂದು ತಿಂಗಳಾಯ್ತು ।
ಪ್ಪನ್ನೆಟ್ಟನೆ ತಮಗದೆಂಬುದಂ ನಿಟ್ಟಿಸಿ ನಿ ॥

ಪ್ಪನ್ನಮನರ್ದೆಬಿಂ ತಾ ।
ನುನ್ನಾಂಗನಿವೃತ್ತಿಗೆಯ್ದರಾಮುನಿಮುಖ್ಯರ್ ॥೧೧೨॥
ಒಳಕೆಯ್ದು ಮೊದಲ ಶುಕ್ಲಾ ।
ತುಳಶುದ್ಧಧ್ಯಾನಮುಂ ಮನಂ ಶಾಂತಗುಣಂ ॥
ವಿಳಸ[ದಿನಿ]ದಲ್ಕೆ ತನ್ಮನಿ ।
ತಿಳಕರವರ್ ಸುಕೃತಸಿದ್ಧಿಯಂ ನೆಲೆ ಪಡೆದರ್ ॥೧೧೩॥
ಅವಿಚಳಭಾವಂ ಸಂಗಳಿ ।
ಸಿ ವಿಶುದ್ಧಮನಂ ಸಮುಜ್ಜ್ವಳಧೈರ್ಯದೊಳಿಂ ॥
ತೆ ವಿಭಿನ್ನತೆವೆತ್ತಿರೆ ತಾ ।
ಮನಶೀರ್ಣಶರೀರಭಾವರಾವರ್ಮನಿಪರ್ ॥೧೧೪॥
ಅದು ಲೋಕಾಗ್ರದ ಕೆಳಗಿ ।
ರ್ದ್ದುದು ತಾನೀರಾಱು ಯೋಜನಾಂತರದಿಂದ ॥
ಗ್ಗದ ಜಂಬೂದ್ವೀಪಸಮಂ ।
ಪೊದಳ್ದು ಸರ್ವಾರ್ಥಸಿದ್ಧಿಯೆಂಬುದಗುರ್ವಿಂ ॥ ॥೧೧೫॥
ಸುರಲೋಕಾನೋಕಹಸುರು ।
ಜಿರಳಿಳಮುಂಜರಿ ಪೊದಳ್ದು ಮುಕ್ತಿಪುರೀಗೋ ॥
ಪುರಮಹಮಿಂದ್ರರ್ಕಳ ಬಂ ।
ಧುರಜನ್ಮಸ್ಥಾನಮಖಿಳಸೌಖ್ಯಸಿದಾನಂ ॥೧೧೬॥
ನಯದ ಹರಿಸೀಳಕಾಟ್ಟಮು ।
ಮಯದ ವಿಮಾನಂಗಳಲ್ಲಿ ನಾಲ್ಕುಂ ವಿಜಯಾರ್ಧಂ ॥
ಹಯಮುಂತೆ ವೈಜಯಂತಂ ।
ಜಯಮುಂತಮಪರಾಜಿತಂ ದಲೆಂದೆಸೆದಿರ್ಕುಂ ॥೧೧೭॥
ವ॥ ಆಸರ್ವಾರ್ಥಸಿದ್ಧಿಯೊಳ್
ಪರಪಿದ ಮುಕ್ತಾಪರಿಕರ ।
ಮರೀಚಿಯಿಂ ಕೂನ್ಯಮೆಂದು ನಭಮುಂ ನಗುವಂ ॥

ಪಾ—1. ಮಾಗಿ.

ತಿರೆ ತದ್ವಿಮಾನಹರಿನೀ ।
ಳರತ್ನಕುಟ್ಟಿಮತಳಂಗಳಸದಳಮೆಸಗುಂ ॥೧೧೪॥
ನವಮಣಿ.....ಘೃಣಿ ।
ನಿವಹದೆ ಹರಿನೀಳಕೂಟಕೋಟಿಗಳವು ಪ ॥
ಲ್ಲವಿತಂಗಳಾಗಿ ತಮ್ಮಂ ।
ತೆವೊಲಾಗಿಸುತಿರ್ಪುವೊಪ್ಪಿ ಗಗನಾಂತರಮುಂ ॥೧೧೫॥
ಕಳನಿನದಶೇಷಮಾಯ್ತಳಿ ।
ಕುಳಮೆನೆ ಮಗಮುಗಿಪ ಕಂಪನುಗುಳ್ವಗರುವ ಧೂ ॥
ಮಳತಾಸಮೂಹದಿಂ ಶ್ಯಾ ।
ಮಳಿತಾಂತರ್ಭಾಗಮಾವಿಮಾನಮನೂನಂ ॥೧೧೬॥

ವ॥ ಇಂತು ನಿರಂತರಾತಿಶಯಶೋಭಾನಿಶಾಂತಮಾಗಿರ್ಪ ಸರ್ವಾರ್ಥಸಿದ್ಧಿವಿಮಾನದ ವಿನೂತನೋಪಪಾತಕನಿಳಯದೊಳಮಳತೆವೆತ್ತಮಳ್ವಿಸಿನ ಪೊರೆಯೆಡೆಯಿಂನದಭ್ರಶುಭ್ರಸಂದಚಪಟಳದ ಪೊರೆಯೆಡೆಯಿಂ ಪೊಱಮಡುವ ನೆಳಲಿಂಗಳ್ ಳಿಂಬಂತೆ ಕಣ್ಗೊಳಿಸುತುಮಹಮಿಂದ್ರರಾಗಿ ಸಂಭವಿಸಿ ಸಮಚತುರಸ್ರಸಂಸ್ಥಾನರುಂ 'ಶರದಿಂದುಕಾಂತಕಾಂತಿಕಮನೀಯರುಂ ಪ್ರವಿಲಸದರತ್ನಿಪ್ರಮಾಣಾವಹದೇಹರುಂ ಸಹಜಾತಸೂತ್ನಮಾಲ್ಯಾಂಬರಾಭರಣಭಾಸುರರುಂ ಷೋಡಶವರ್ಷಪ್ರಾಯದೆಸೆಯುರುಂ ಶುದ್ಧಶುಕ್ಲಲೇಶ್ಯಾಪರಿಣಾಮರುಂ ಪ್ರಣುತಾಣಿಮಾದ್ಯಷ್ಟಗುಣಸೂತ್ನರತ್ನನಿಧಾನರುಂ ಲೋಕನಾಳಿಕಾಭ್ಯಂತರಸಮಸ್ತವಸ್ತುಭೇದವಿಷಯೀಕೃತದೇಶಾವಧಿಜ್ಞಾನಮೂನಿತರುಂ ತ್ರಯಸ್ತ್ರಿಂಶದಬ್ಧಿಪರಿಮಿತಾಯುಷ್ಯರುಂ ತತ್ಪ್ರಮಾಣಸಹಸ್ರವತ್ಸರವಿರಾಮಸಂಕಲ್ಪಿತಾಮೃತಾಹಾರರುಂ ತತ್ಪ್ರಮಾಣಪಕ್ಷವಸಾನನಿರ್ಯತ್ಸುರಭಿನಿಶ್ವಾಸರುಂ ಅಪ್ರವೀಚಾರಸಂಜನಿತಪರಮಸುಖರುಮಾಗಿ—

ಒಡವುಟ್ಟಿದರೆಂಬೀಬಿಱು ।
ನುಡಿವಡೆವರ್ಪ್ಪಿರದಿರ್ಕ್ಕೆ ಮಱುಮೆಯ್ಯೊಳಗಾ ॥
ರೊಡವುಟ್ಟುವರಿಂತಚ್ಚರಿ ।
ಪೊಡವಿಗೆ ಮೇಘರಥದೃಢರಥರ ಸುಚರಿತ್ರಂ ॥೧೧೭॥

ಪಾ—1. ಸರಸಂ.

ಬಳಸದೆ ಮನಮಚ್ಚಿಗದೊಳ್ |
ಬಳಸದೆ ನಿರವದ್ಯನಿಖಿಳಭೋಗಂಗಳ್ ಸಂ ||
ಗಳಿಸಿ ಪಿರಿದಾಗಿ ಮೆಱೆವೆ |
ಯ್ಯೊಳಮಿಂದ್ರಿಯಸುಖದಿನಿರ್ದರಿಂತಹಮಿಂದ್ರರ್ ||೧೦೨||

ತಮಗೆಸೆವ ವಿಷಯಸೌಖ್ಯಂ |
ಸಮನಿಸಿಯುಂ ತಣಿವದಿಲ್ಲ ಪದಮಜೆನೇಂದ್ರ ||
ಕ್ರಮುಕಮಳಯಮಳ ಪೂಜಾ |
ಕ್ರಮುಕಕ್ರಿಯಾನಿಕರದಿಂದಮಿಂತಹಮಿಂದ್ರರ್ ||೧೦೩||

ನಡೆಯಿಸಿ ಕೊಳ್ಳದಿಂಗಡಲೊಳುದ್ಭವಿಸಿದ ಕಳಂಕಪಂಕದೊಳ್ |
ತೊಡರದ ಕುಂದುಪೆರ್ಚನೊಳಕೆಯ್ಯದ ನಿರ್ಮಳಚಂದ್ರಬಿಂಬಮು ||
ಳ್ಕೊಡಮದು ಪಾಟಿಯಲ್ತೆನಿಸ ಮೆಯ್ವೆಳಗಿಂ ಮಿಗೆ ರಯ್ಯಮಾಗಿ ನೇ |
ರ್ಪಡು ನೆಲೆವೆರ್ಚಿ ನವ್ಯಸುಖಮುಂ ಪಡೆದಂತಹಮಿಂದ್ರರಿರ್ಪುದುಂ ||೧೦೪||

ವ|| ಇಂತು ಮೇಘರಥದೃಢರಥಧರಣೀಪತಿಚರಾಹಮಿಂದ್ರರಿರ್ವರುಂ ನಿರ್ವಾಣಧರೆಯ ನೆರೆಯೆನಿಸಿದ ಸರ್ವಾರ್ಥಸಿದ್ಧಿಗೆಯಧೀಶ್ವರರಾಗಿರ್ಪುದು ಮಿತ್ತಲ್ —

ಜಳನಿಧಿಪರಿವೃತಜಂಬೂದ್ವೀ |
ಪಲಸದ್ಭರತೋರ್ವಿಯೊಳ್ಸತಾಸಿತಪಕ್ಷಂ ||
ಗಳವೊಲ್ವರ್ತಿಸುತಿರಲವಿ |
ರಳದಿಂದುತ್ಸರ್ಪಿಣಾವಸರ್ಪಿಣಿಕಾಲಂ ||೧೦೫||

ವ|| ಅಂತನೂನನಾಗಿ ವರ್ತಿಸುವವಸರ್ಪಿಣಾಕಾಲದ ಸುಷಮ ಸುಷಮಾದಿಷಟ್ಕಾಲಂಗಳೊಳಗೆ ಸುಷಮದುದ್ಭವಿಯೆಂಬ ತೃತೀಯಕಾಲಸ್ಥಿತಿಯೆರಡು ಕೋಟಾಕೋಟಿಸಾಗರೋಪಮಂಗಳ ಕಡೆಯೊಳ್ಪಲ್ಯಾಪ್ಯಮಭಾಗವಾದಿಯಾಗಿ ಜಘನ್ಯಭೋಗಭೂಮಿಯ ಪ್ರವರ್ತನಮುಪವರ್ತಿಸುತ್ತುಂ ಬರಲಾಕಾಲದೊಳ್ಪ್ರತಿಶ್ರುತಿಸ್ಮೃತಿನಾಭಿರಾಜಾವಸಾನ ಚತುರ್ದಶ ಮನುಗಳ ಪ್ರಥಮತೀರ್ಥೇಶ್ವರನ ಪ್ರಥಮಚಕ್ರಧರನ ತತ್ಪ್ರವರ್ತನಾನಂತರಂ ದುಷ್ಪಮಸುಷಮಮೆಂಬ ಚತುರ್ಥಕಾಲದೊಳಜಿತಾದಿಧರ್ಮಾವ

ಸಾನತೀರ್ಥಂಕರರುಂ ಸಗರಮಘವಸನತ್ಕುಮಾರರೆಂಬ ಚಕ್ರಧರರುಂ
ಪ್ರವರ್ತಿತಜಿನಮಾರ್ಗರವಶಿಷ್ಟಯಶರಾಗೆ ಪಲ್ಯೋಪಮತ್ರಿಚತುರ್ಥಭಾ
ಗೋನತ್ರಿಸಾಗರೋಪಪ್ರಮಾಣಮಾದ ಧರ್ಮತೀರ್ಥಕರಸಂತಾನಪ್ರವ
ರ್ತನಕಾಲದವಸಾನದ ಪಳಿತೋಪಮಚತುರ್ಥಭಾಗದೊಳ್ವಕ್ತ್ರಸೋತ್ಕೃಜ
ರಿಷ್ಣುಗಳಲ್ಲದೆ ಧರ್ಮಪ್ರವರ್ತನಂ ನಿಲೆ ತತ್ಕಾಲದ ಪರಿಸಮಾಪ್ತಿಯೊಳಂ
ಕತಿಪಯು ಸಂವತ್ಸರಂಗಳವಶಿಷ್ಟಂಗಳಾಗೆ—

ಕುರುಧರೆಯ ಪೆರ್ಮೆ ನೂರ್ಮಡಿ ।
ಸಿರಿ ತವ್ಮೊಳ್ ಸಕಳವಸ್ತುವೈಭವದಿಂದಾ ॥
ಕುರುಜಾಂಗಣವಿಷಯಂ ಬಿ ।
ತ್ತರಿಸಿರ್ಪುದು ಭರತಧಾತ್ರಿಯೊಳ್ವ್ರತತಿಯಿಂ ॥೧೦೬॥

ಆವಿಷಯದೊಳೆಂದುಂ ಪರಿ ।
ಭಾವಿಸೆ ಪೊಕ್ಕಳಿಯದಂತೆ ಮದವಾ ॥
[1ತಾರ್ಮ1]ವಿಷಯಂ ದಾಮರವಾ ।
ರ್ತಾವಿಷಯಂ ದುಶ್ಚರಿತ್ರವಾರ್ತಾವಿಷಯಂ ॥೧೦೭॥

ಭುಜಗಪುರಿ ಧನದ 2[ನ ಪುರಿ ದಿ ।
ತಿಜ]2ಪುರಿ ಪಡೆದೂರ್ಗಳಿಂತಿವೆಂಬಂತಿರೆ ಭೋ ॥
ಗಿಜನಂ ಪಣ್ಯಜನಂ ವಿಬು ।
ಧಜನಂ ಬೆರಸೆಸೆವ ವಿಷಯದೂರೂರ್ಗಳ್ ॥೧೦೮॥

ವನವಾಳಾಮಂಡನಂ ವಾರಿರುಹನಯನನಂತಃಪುರಸ್ತ್ರೀಮವಿಭಾ ।
ಜಿ ನಿಳಿಂಪಾವಾಸದಂತುಜ್ಜ್ವಳತರವಿಳಸದಾ ಜಹಂಸಪ್ರಭಾಭಾ ॥
ಸಿನಭೋಂತರ್ಭಾಗದಂತೂರ್ಜಿತಸುರುಚಿರಗೋಮಂಡಳಾಕೀರ್ಣಶೋಭಾ
ಜನಿತಂ ಮಾತಾರ್ಮಂಡನಂತಾವಿಷಯದಖಿಳಸದ್ವಸ್ತುಸಂಭೂತಪೂತಂ ॥

ಇನಕರಪಾತಭೀತಪಥಿಕಶ್ರಮಸಂಹರಣಾರ್ಥಮಂಬುಜಾ ।
ಸನನೊಸೆದಿಟ್ಟ ತಣ್ಣೆಲ [ಸೋಲದ] ಸಾಲೆಯೆನಲ್ತಳಿರ್ತು ಪೂ ।
ವಿನ ಕನಗಾರ್ಯು ಕಾಯ್ತು ತನಿವಣ್ಗಳ ಭಾರದೆ ಗುಜ್ಜುಗೊಂಡ ಮಾ ।
ವಿನ ಮರದೊಳಿ ದಿಟ್ಟಗೆಸೆದಿರ್ಪುದು ನೆಟ್ಟಗೆ ಬಟ್ಟೆಬಟ್ಟೆಯೊಳ್ ॥೧೦೯॥

ಪಾ—1 ವಾತೋರ್ಮ 2. ಪುರೀಂದ್ರಜ

ಸರಳಂಬೆತ್ತಿಳಗೊಂಬು ಸಾದ್ರ್ರಹದವಿಲ್ಲನ್ಮತ್ತಭೃಂಗವ್ರಜಂ ।
ತಿರು ತಟ್ಟಿಕ್ಕೊಪ್ಪುವ ನುಣ್ದಳಿರ್ದೊಣೆ ಲತಾಂತಶ್ರೇಣಿ ಬಾಣೌಘಮಾ ॥
ಗಿ ರತೀಶಂ ಪರಿಪಂಥಿರೂಪದಿಸುತಿರ್ಪಂ ಮಾರ್ಗಮಾರ್ಗಾಮ್ರಭೂ ।
ಮಿರುಹಬ್ರಾತಮನೊತ್ತುಗೊಂಡು ಬಿಡದಧ್ವಶ್ರಾಂತರಂ ಪಾಂಥರಂ॥೧೭೧॥

ಎಲವ್ರೋಯಿಲ್ಲಿಂ ಸದ್ರಸಂ ಸೋರ್ವೆಸಕದ ತನಿವಣ್ಣೀಖಂದಿವ್ಯೌಷಧಿಗಳ್ಪ ।
ಣ್ಗೊಲೆ ಮೂಲಾಗ್ರಂಬರಂ ತಟ್ಟಿಕ್ಕೊಲಿವ ಹಲಸುಗಳ್ಬಿಡೆವಣ್ಬೆತ್ತು ಕೀರ ॥
ಕ್ಕೊಲವಂ ಮೇಳಿಪ್ಪ ದಾಳಿಂಬದ ತರುತತಿಗಳ್ಪಣ್ಗಳೊತ್ತಂಬುದಿಂ ಕ ।
ತ್ತಲೆವೊತ್ತಂತಿರ್ಪ ಜಂಬೂದ್ರುಮಸಮಿತಿಗಳೋರಂದದಿಂ ಕುಂದವೆಂದುಂ॥

ಎನಸುಂ ಪ್ರೀತಾಭಿಭೂತಂಬಡೆದು ಬಿಡದೆ ಪೆತ್ತಳ್ ಕ್ಷಮಾವೃತ್ತಿಯಿಂದೆ
ಮ್ಮನೆ ತಾನಿಂತು ತಾಯಪ್ಪವನಿಗೆ*ಗಿ ತಾವಿರ್ದುವೆಂಬಂದದಿಂ ನೆ ॥
ಟ್ಟನೆ ಪೀಸೊದ್ಯತ್ಫಳಬ್ರಾತದ ಘನಭರದಿಂ ಕೊಂಬುಗಳ್ಜೋಲ್ದು ಮೆಯ್ವಿ।
ಕ್ಕಿನಿತಾಂತಂ ರಯ್ಯಮಾಗಿರ್ಪುವು ಪುದಿದು ಕರಂ ಮಾಕುಳಂಗದ್ರುಮಂಗಳ್॥

ಉರಗೇಂದ್ರನ ತನುರುಜೆ ನೀ ।
ಳ್ದೀರದುರ್ವಿಯನೊಡೆದು ಮೂಡಿದುದು ಸಲೆ ಲಲಿತಾಂ ॥
ಕುರಕುಳರೂಪದಿನೆನೆ ಬಿ ।
ತ್ತರಿಪ್ಪದು ಪುಂಡ್ರೇಕ್ಷುವಾಟಪೇಟಕಮದಱಿಂಗಳ್ ॥೧೭೪॥

ಹೊಲನೆಲ್ಲಂ ನಾಳಿಕೇರದ್ರುಮಫಳವಿಗಳದ್ವಾರಿವಾರ್ಮಾತೃಕಂ ಸ ।
ತ್ಫಲಭಾರಾಂಗೋಳಭಾಸ್ವತ್ಕನಕಕದಳವಾರ್ಮಾತೃಕಂ ನವ್ಯಕುಭ್ರೀ ॥
ಕ್ಷ್ಮಲಸತ್ಪರ್ವಪ್ರತಾನೋಜ್ಜ್ವಳಿತಮಧುರವಾರ್ಮಾತೃಕಂ ರುಂದ್ರಚಂದೊ್ರೀ
ಪಲಜಪ್ರಾಯೇಯವಾರ್ಮಾತೃಕಮೆನಲದನೇವೇಟ್ವಿನಾದೇಶದೊಳ್ಪಂ ॥

ಸರಸೋದ್ಯತ್ಕಣಿಶಾವಳೀಘೃಣಿಮಯಂ ಕೇದಾರಜಾಲಂ ಲಸ ।
ತ್ಸರಸೀಜಾತಮಯಂ ಸರೋವರಚಯಂ ನಾನಾಮಣಿಬ್ರಾತಜಾ ॥
ತರುಜೆಶ್ರೀಮಯಮದ್ರಿಸಂಚಯಮನೇಕೋದ್ಯಾನವೆಂದುಂ ಫಳೋ ।
ತ್ಕರಶೋಭಾಮಯಮೆಂದೊಡಾವಿಷಯಮುಂ ಪೇೞಾವನೇವರ್ಣ್ಯಂ ॥೧೭೬॥

ಕಳಮಕ್ಷೇತ್ರಂಗಳ ಫಳ ।
ಮಿಳಿತವನಂಗಳಸಿತಸ್ಮಿತಾಂಬುಜಷಂಡಂ ॥

ಗಳ ತಟ್ಟಿ ತ್ತಿಡೆಗಳನಿತುಂ ।
ಸ್ಥಳನಳನೀಮಯಮದಾವಿಷಯದಿಳೆಯೆಲ್ಲಂ ॥೧೩೭॥

ವ॥ ಇಂತು ಕಮನೀಯಮಪ್ಪಾಕುರುಜಾಂಗಲವಿಷಯಂ ವಿಶದನಾವ
ಸೆಯಂತೆ ವಿಮಳತರವಾರಿವಿಲುಳಿತವಾಹಿನೀಸಮೂಹಶೋಭಿತಮುಂ।ಪಯೋ
ಜಾಕ್ಷವಕ್ಷಪ್ರದೇಶದಂತೆ ಪದ್ಮಾಕರಪ್ರಕೀರ್ಣಭಾಸುರಮುಂ । ವಾರಾ
ನ್ನಿಧಿಯಂತೆ ವಿದ್ರುಮಾನ್ವಿತವನೋತ್ಕೀರ್ಣವಿಭ್ರಾಜಿತಮುಂ । ಸುರೇಂ
ದ್ರಸಂಪತ್ತಿಯಂತೆ ರಂಭಾನವೀನವಿಳಾಸೋಪೇತಮುಂ । ಅಮೃತಾರ್ಣವಗ
ರ್ಭದಂತೆ ಲಕ್ಷ್ಮೀಸಮನ್ವಿತಪುರುಷೋತ್ತಮಾಳಂಕೃತಮುಂ । ರಾಕಾತಿ
ಥಿಯಂತೆ ಸಕಳಕಳಾಧರಪ್ರಭಾವಾಭಿಶೋಭಿತಮುಂ। ವೈಶ್ರವಣನಗರಿಯಂ
ತಗಣ್ಯಪುಣ್ಯಜನವಿಸ್ತೀರ್ಣಮುಂ,ದಕ್ಷಿಣದಿಶಾವನೀಮಂಡಳದಂತೆಸಮುನ್ನತ
ಧರ್ಮಸಂಪದಾಸ್ಪದಮುಂ । ವಾರವ್ಯಂದದಂತೆ ವಿನುತಮುಂಗಳವಿಭವೋಪ
ಜೆತವಿರಾಜಿತಮುಂ । ಅಲಂಕೃತಿಶಾಸ್ತ್ರದಂತೆ ಜಾತಿಕ್ರಮವಿವರಕಮನೀಯ
ಮುಂ । ಮತ್ತಂ ದಾನಹೀನತೆ ಕರಿಣಿಗಣಂಗಳೊಳ್ । ಪಕ್ಷಪಾತಂ ಶಿಶಿರಸ
ಮಯಶ್ಯಾಮಕಂಠಂಗಳೊಳ್ । ದೋಷಾನುಬಂಧಂ ದ್ವಿಜರಾಜನೊಳ್ । ಪುಣ್ಯಜನದ್ವೇಷಂ ಪಂಕರುಹನೇತ್ರನೊಳ್ । ಕಾಯಕ್ಲೇಶಂ ತಪೋವಿಶೇ
ಷದೊಳ್। ವಿಪರೀತವೃತ್ತಿ ಫಲಿತಾಮ್ರಪಾದಪಂಗಳೊಳ್ । ವಿವೇಕಶೂನ್ಯಂ
ವನಿತಾಘನಸ್ತನಂಗಳೊಳ್ಭ್ರಮರಪ್ರವರ್ತನಂ ಸಂಚಾರಿಭಾವಂಗಳೊಳ್ ।
ಲೋಲತೆ ಲಲನಾಕಟಾಕ್ಷದೊಳ್।ಜಡವೃತ್ತಿ ವರ್ಷಕಾಲದೊಳಲ್ಲದಿಲ್ಲಂತು
ಮಲ್ಲದೆಯುಂ—

ಎನಸುಂ ರಾಗಮದಾಜನೇಂದ್ರಮತದೊಳ್ ದೋಷಂ ದುರಂತಾಶುಭಾ
ಜನಸಂಸಾರದ ಭೋಗದೊಳ್ಬಹುವಿಚಾರಂ ತತ್ವದೊಳ್ಪಚ್ಚರಂ ॥
ಜಿನಧರ್ಮಕ್ರಿಯೆಯೊಳ್ನಿರಂತರಿತವೋಹಂ ನಾಡೆಯುಂ ಭವ್ಯಜೀ ।
ವಿನಿಕಾಯಂಗಳೊಳಲ್ಲದಿಲ್ಲ ಪೆಱತೇನಂತಾಮಹೀಮರ್ತ್ಯರೊಳ್ ॥೧೩೮॥

ಆಕುರುಜಾಂಗಲವಿಷಯಾ ।
ಬ್ಜಾಕರಮಧ್ಯದಸಿತಾಬ್ಜಮೆನೆ ಶಶಿಕಾಂತ ॥

ಪಾಕಾರಂ ಸೌಂದರ್ಯದ ।
ಮಾಕಾರಂ ಹಸ್ತಿನಾಖ್ಯಪುರಮೆಸೆದಿರ್ಪುದಂ ॥೧೩೯॥

ಧರೆಗಿಂತೊಪ್ಪುವ ಹಸ್ತಿನ ।
ಪುರಮೆಂಬಾಪೂರ್ಣಶಶಿಯ ಪರಿವೇಷದವೊಲ್ ॥
ಕರಮೆಸೆವುದು ಶಬಳಚ್ಛವಿ ।
ಪರಿಯುತದಿನನೂನಮೆಸೆದ ಬಹಿರುದ್ಯಾನಂ ॥೧೪೦॥

ಸುರಭೂಜಂಗಳ ಬೀಜಮುಂ ಪದೆಪಿನಿಂ ತಂದಿಕ್ಕಿ ಧಾತ್ರಂ ನಿರಂ ।
ತರಮತ್ಸ್ಯಾಮೃತಪೂರದಿಂ ಬೆಳಯಿಸಲ್ತಾಮಾದುವಕ್ಕುಂ 'ಸುಧಾ' ॥
ಸರಸತ್ವಂ ಸಫಳತ್ವಮನ್ಯತರುಗಳ್ಗೀಸುಂಟೆ ತಾನಿಂತೆನಲ್ ।
ಕರವೊಪ್ಪಿರ್ಪುದನೇಕಕಾಂತತರುಸಂತಾನಂ ತದುದ್ಯಾನದೊಳ್ ॥೧೪೧॥

ಕಳಕಂಠೋಪೇತಚೂತಂ ಶುಕರವವಿಲಸದ್ದಾಡಿಮಂ ಚಂಚರೀಕಾ ।
ವಿಳಚಂಚತ್ಫುಲ್ಲಮಲ್ಲೀಪ್ರತತಿ ಕಿಸಲಯೋತ್ಕೀರ್ಣಕಂಕೇಲ್ಲಿ ನಾರಂ ॥
ಗಲವಂಗೋತ್ತುಂಗಲುಂಗಂ ಪೃಥುಳಫಳಭರಂ ಮಾತುಳಂಗಂ ದರಸ್ಮೇ ।
ರಲತಾಂತೋದ್ಭಾಸುರಂ ಕೇಸರವಿಸರಮದುದ್ಯಾನದೊಳ್ಕುಂದವೆಂದುಂ ॥

ಬಿರಿವಣ್ಣಿಟ್ಟಳವಾದ ಬಿಣ್ಗೊನೆಯ ತಂಬಾಡಂಬರಂ ಪಣ್ಗಳೂ ।
ತ್ತರದಿಂ ಪರ್ಣದ ತೋರ್ಕೆಗೆಟ್ಟೊಲೆವ ನಾರಂಗಂ ಮರುಸ್ನೀಳಮಂ ॥
ಜರಿವೊತ್ತಂತಿರೆ ಪಣ್ಗಳಿಂ ಪುದಿದ ಜಂಬೂಜಾಳಮುದ್ಯತ್ಫಳೋ ।
ತ್ಕರಭೂರಾನತನಾಳಕೇರನಿಚಯಂ ಚೆಲ್ವಾದುದುದ್ಯಾನದೊಳ್ ॥೧೪೩॥

ಕೆಂಬಿತ್ತಂ ಸವಿ ಬಾ ಶುಕ ।
ನೀಂ ಬೇಗದೊಳೆಂಬ ವನರಮೆಯ ಬಾಯ್ದೆಱೆತ ॥
ನೆಂಬಿನಮೆನಸುಂ ಬಿರಿವ ।
ಣ್ಣಂ ಬಿತ್ತರಮಾಯ್ತು ದಾಡಿವೋತ್ಕರಮದಱೊಳ್ ॥೧೪೪॥

ವ್ಯಾವೃತವಿದ್ರುಮಮುತ್ಕಳ ।
ಕಾವಿದ್ಯುತಮನಂತಹರಿಮಯಂ ಶಿಖಿಯುತಮಂ ॥
ತಾವನಮೃತಾಬ್ಧಿಗೆ ಸರಿ ।
ಭಾವಿಪೊಡಮಬಾಧ್ಯದಿಂದಭಂಗದಿನಧಿಕಂ ॥೧೪೫॥

ಪಾ—1. ಸದಾ.

ಕೊಡೆಯೆಲೆವೊತ್ತಿನೊಳ್ನಲಿವ ಕೋಕಯುಗಂಗಳ ತಂಡತಂಡದಿಂ ।
ಪಿಡಿದು ಮೃಣಾಳಮಂ ಕಡಿಗಳೊಳ್ಬರೆ ಪೀರ್ವ ಮರಾಳಜಾಳದಿಂ ॥
ಬಿಡದಲರ್ವಂಡನುಂಡು ಮಿಗೆ ಝೇಂಕರಿಪುನ್ಮದಭೃಂಗಸಂಗದಿಂ ।
ದೆಡೆವಿಡದಿರ್ಪ್ಪದಾಬನದ ಪುಂಡ್ರಸರೋರುಹಪಂಡಸಂಚಯಂ ॥೧೪೩॥

ಮೃದುಕಳಿಕಾಗ್ರಮಂ ಪರಭೃತಂ ನಲಿಗರ್ಚುವ ಸನ್ಮೃಣಾಳಮಂ ।
ಪದೆಪಿನೊಳಂಚೆ ಪೀರ್ವ ಗಿಳಿ ಪಣ್ಗಳನೀಂಟುವ ಭಂಗಿಯಿಂ ವಿನೋ ॥
ದದೆ ನಡೆ [ಪಾಡಿ]ಚುಂಬನದ [1][ಚೇತ್ಕೃತಿಯಂ]1 ಕಲಲಾಬನಕ್ಕೆ ಬ ।
ಪ್ಪುದು ಪಿರಿದುಂ ನುಮತ್ಪಚರಕಿನ್ನರಪನ್ನಗಕನ್ಯಕಾಜನಂ ॥೧೪೪॥

ಲಲಿತಮೃಣಾಳದಿಂ ತಣಿದು ತಣ್ಬಳಿನಸ್ಥಳದೊಳ್ನಜೇಚ್ಛೆಯಿಂ ।
ನಲಿವ ಮರಾಳದೊಳ್ನಡೆಯನಚ್ಚಗಱುಂಕೆಯನಾಯ್ದು ಮೆಯ್ದು ತ ॥
ಟಿಕ್ಕೊಲವಿನೊಳಿರ್ಪ ಬಾಳಮೃಗಜಾಳದ [2][ತಟ್ಟಿ]2ಮದಾವಲೋಕಮಂ ।
ಸಲೆ ಕಲಲೆಂದು ಬರ್ಪುದು ತದೀಯಬನಕ್ಕಬಲಾಕದಂಬಕಂ ॥೧೪೫॥

ತರುತವ್ಮೊಳ್ನಲಿತೋರ್ಪುವೆಯ್ದೆ ಗಣನಾತೀತದುರ್ಮಂಗಳ್ನರಂ ।
ತರವೆನ್ನೊಳ್ತದಕರ್ಕಳಿರ್ಪವರೆ ತವ್ಮೊಳ್ಕ್ರೀಡಿಸುತ್ತಿರ್ಪರಾ ॥
ದರದಿಂದೆನ್ನೊಳನಂತಮೆಂದು ಪಲಿಕೆಯ್ಯುತ್ತಿರ್ಪುದೆಂದುಂ [3][ಶುಕೋ]3 ।
ತ್ಕರದಾಳಾಪದ ಚಾಪಳಚ್ಚಳದಿನುದ್ಯಾನಂ ಸುರೋದ್ಯಾನಮಂ ॥೧೪೬॥

ವ॥ ಇಂತನೂನಶೋಭಾನಿಧಾನವೆನಿಸಿದುದ್ಯಾನಮೆಂಬ ಸುರಧನು
ವಿನ ಸುತ್ತುವೆತ್ತುಬಿತ್ತರಿಪ ತಾರಾನಗವೆಂಬಂತೆ ತೋರ್ಕೆವಡೆದ ತುಹಿನೋ
ಪಳದ ಕಮನೀಯಕೋಟೀಚಕ್ರದ ಬಳಸಿನೊಳ್—

ವನುಜಗರ್ಗರ್ವಲಂಘ್ಯಮೆಂದು ನೆಱಿ ತಾಂ ನಚ್ಚಿ ಲಂಕಾಧಿನಾ ।
ಥನವಂ 'ವೈರವನೋವದಿರ್ಪ' ನೆಮಗಂತಾರಾವನಸ್ಯೈನ್ಯಕ್ಕೆ ನೆ ।
ಟ್ಟನೆ ದಾಂಟಲ್ಕುಲುವಳ್ಳವಾಯ್ತು ಪಿರಿದುಂ ತಾನೆಂದು ಫೇನಪ್ರತಾ ।
ನನವಾಂಶುಚ್ಛಲದಿಂದಣಂ ನಗುವುದಾವಾರಾಶಿಯಂ ಪೇರಗಲ್ ॥೧೪೭॥

ಪವನಪಥಮೆಂಬ ಪೆಸರಂ ।
ಸವಂತು ಸಲಲೀಯದಡ್ಡ ಬಂದುದು ತಾನೆಂ ॥

ಪಾ—1. ಚಿತ್ರತೆಯಂ. 2. ತಳ 3. ಸುಖೋ. 4. ನೈತಮನೋವದಿರ್ಪ.

ಬವೊಲಂಬರಮಂ ಚುಂಬಿಪ ।
ದವಿರಳಮೆನೆ ಚಂದ್ರಕಾಂತಕೋಟಾಚಕ್ರಂ ॥೧೫೭॥

ಇದಱುತ್ತರೋಳ್ ಶ್ರೀಜಿನನಪ್ಪನುದ್ಭವಿಸುವಂ ಬಂದೆಂದಱಂ ಮೇಗೆ ಪೋ ।
ಗದೆ ಸದ್ಭಕ್ತಿಸಮನ್ವಿತಂ ಬಲವರುತ್ತಿರ್ದಪ್ಪರೆಂಬಂತೆ ಚಂ ॥
ದ್ರದಿನೇಶರ್ಕ್ಕಬದಲ್ಲಿ ಪೋಪರನಿಶಂ ತಾನೆಂದೊಡೇವೇೞ್ವಿನ ।
ಗ್ಗದ ಶೋಭಾಸ್ಪದಮಪ್ಪ ಹಸ್ತಿನಪುರಪ್ರಾಕಾರದೌನ್ನತ್ಯಮುಂ ॥೧೫೮॥
ನೆಗೆದಟ್ಟಾಳಕಜಾಳದ ।
ಸೊಗಯಿಪ ಹರಿನೀಳಚೂಳಿಕಾವಳಿಯೊಳತ್ತಾ ॥
ರಗೆಗಳ್ತುಱುಂಗಿ ಮಿಱುಗುವು ।
ವಗಲದೆ ತೆತ್ತಿಸಿದ ಮುತ್ತುಗಳ ವೊತ್ತದವೋಲ್ ॥೧೫೯॥

ಉದಯಿಸಲಿರ್ದಪಂ ತಡೆಯದೆನ್ನೊಳೆ ಪೋಡಶತೀರ್ಥನಾಥನೆಂ ।
ಬುದಿತಮನೋನುರಾಗದೊದವಿಂ ನಲಿದಾಡುತುಮಿರ್ಪ ತತ್ಪುರೀ ॥
ಸುದತಿಯುದಗ್[ವಾಮು]ಕರಪಲ್ಲವರಾಗಮೆನಲ್ಕರುತ್ಪ್ರಭಾ ।
ತದೆ ತೊನೆಯುತ್ತುಮೊಪ್ಪು [1][ಗುನೆ][1] ಕೆಂಗುಡಿಗಳ್ಮಣಿಹರ್ಮ್ಯಹರ್ಮ್ಯದೊಳ್ ॥೧೬೦॥

ಎನಗಾಧಾರಧರಿತ್ರಿಯಾಯ್ತು ನಿಮಿರ್ದಪ್ರಾಕಾರಚಕ್ರಂ ದಲೆಂ ।
ದು ನಿರಸ್ತತುಳರಾಗಮಂ ತಳೆದುದೋ ತಾನೆಂಬಿನಂ ಶೋಣಮಾ ॥
ಯ್ತೆನಸುಂ ನೀಳ್ದ ತದೀಯಗೋಪ್ರರಚತುಷ್ಕಾಗ್ರಸ್ಥಳೀಜಾಳಮುಂ ।
ಡನಘಂಟಾಖಿಳನೂತ್ನರತ್ನಕಳಶಾಗಾಳಂಒದಿಂದಂಬರಂ ॥೧೬೧॥

ರೋಹಣನಗದವತಾರಸ ।
[2]ಮೂಹ[2]ಮಿದೆನೆ ಸಕಳರತ್ನತತಿ ವಿರಚಿತನಾ ॥
ನಾಹವ್ಯಾವಳಿನಿಜರುಚಿವನ(?)ಪ್ರಾರ್ಯ ।
ವಾಹಮಯಂ ವ್ಯೋಮಮಮಾಗಿ ಮಿಗೆ ಸೊಗಯಿಸುಗುಂ ॥೧೬೨॥

ಹರಿನೀಳೋಪಳಬದ್ಧಭೂಮಿ ಪುರವೀಥೀಯೂಥಮೆಲ್ಲಂ ಸಿತಾಂ ।
ಬುರುಹಸ್ವಚ್ಛಪಯಸ್ವರಾವರಮುಖಂ ಹರ್ಮ್ಯಾಳಿಯೆಲ್ಲಂ ಲಸ ॥

ಪಾ—1. ಗುವು. 2. ಮೂರ್ಹ

ದ್ವರವಸ್ತು ಬ್ರಜಕೋಶಮೆಯ್ದೆ ವಿಪಣಿಪ್ರಸ್ತೋಮಮೆಲ್ಲಂ ಕಳಾ ।
ಧರರಂತ [ತಲ್ಲಿಯ], ಮತ್ಯರ್ಕರೆಲ್ಲಮೆನಲಿನ್ನೇವೇೞ್ವಿನಾಶ್ಚರ್ಯಮಂ॥
ಸುರಗಿರಿ ಜಾತರೂಪಧರಮೆಂದು ಕರಂ ನಗುವಂತೆ ಸಂತತಂ ।
ಸುರುಚಿರಶುಭ್ರಕಾಂತಿಯದಗುಂತಿಯನಿಂತೆಸೆದಿರ್ಪವಲ್ಲಿ ಭಾ ॥
ಸುರಬಹುಚಿತ್ರಪತ್ರಮಯಮಪ್ಪ ನಭಸ್ಸ್ಫಟಿಕೋಲ್ಲಸಜ್ಜಿಲಾ ।
ವಿರಚಿತಚಾರುಚೈತ್ಯಭವನಾವಳಿಗಳ್ಪರದೊಳ್ನಿರಂತರಂ ॥೧೫೯॥
ಪರಮಶ್ರೀಜಿನಪಾಭಿಷೇಕವಿಳಸತ್ಪೂಜಾಕ್ರಿಯೋದ್ಭೂತಬಂ ।
ಧುರನಾನಾನಕವಾದ್ಯದಿಂ ಜಿನವರಸ್ತೋತ್ರತ್ರಯೋಚ್ಚಾರಣಾ ॥
ತುಳಭಕ್ತ್ಯಾತ್ಮಕಭವ್ಯಸಂಭವನವೀನಧ್ವಾನದಿಂ ಸನ್ಮನೀ ।
ಶ್ವರವೃಂದಾಧ್ಯಯನಾಗಮಾರ್ಥನಿಚಯವ್ಯಾಖ್ಯಾನಗಂಭೀರಭಾ ।
ಸುರನಿಘೋರ್ಷದಿನೊಪ್ಪುಗುಂ ನಿಖಿಳಚೈತ್ಯಾಗಾರಮೋರಂದದಿಂ ॥೧೬೦॥
ಇತದೇೞ್ತಂದಪನೆನ್ನೊ [2]ಳಿನ್ನು[2] ದಯಿಸಲ್ಸರ್ವಾರ್ಥಸಿದ್ಧೀಶನಾ ।
ಗಿರಿ ಪೊೞಶತೀರ್ಥನಾಥನವನೀಗಳ್ಪಿಟ್ಟು ತಾನೆಂಬ ಹ ॥
ರ್ಷರಸಂ ಪೆರ್ಚೆ ತದೀಯಹಸ್ತಿನಪುರಶ್ರೀ ನರ್ತಕೀ[3][ಭ]ದ್ಮದಿಂ ।
ಪಿರಿದುಂ ನರ್ತಿಸುವಂದಮಾಯ್ತು ಜಿನಸದ್ಮವ್ರಾತಸಂಗೀತಕಂ ॥೧೬೧॥
ಮಣಿಹರ್ಮ್ಯಶ್ರೀಯ ಕೇಳೀವನವಿಳಸಿತಮಾನವ್ಯಪುಷ್ಪೋಪಹಾರೋ ।
ಲ್ಬಣವೋಕಃಪ್ರಾಂಗಣಂ ಸಸ್ಮಿತಸರಸಿಜಕಾಸಾರಮುನ್ಮತ್ತಭೃಂಗೀ ॥
ಗಣಭೃನ್ನಾಥಾಕ್ಷರಂ ಸ್ರುತೋಳೀಕಾಳಮಗರುವ ಸೌರಭ್ಯಸಾಶಾಕಾಳಂ ತ ।
ದ್ಗಣಿಕಾವಾಟಪ್ರತಾನಂ ನೃಪವಿಟಸಿಕರಾನೂನಶೋಭಾಯಮಾನಂ ॥೧೬೨॥
ಅನಗರಾಂಗನಾಜನದ ರೂಪನೆ ವರ್ಣಿಪೊಡಬ್ಜಸೂನುಗಂ ।
ತಾನಱಿವಂತದಿರ್ಕೆ ಪ್ರರವೀಧಿಯೊಳೊಳ್ಳರಲೆತ್ತಿ ಮಾಱುವಾ ॥
ಖ್ಯಾನದ ಮಾಲೆಗಾರ್ತಿಯರ ರೂಪನಭೀಕ್ಷಿಸಿ ಸೋಲ್ತು ಮಾಱುಗೊ ।
ಳ್ವೀನೆವದಿಂದಮಿಪ್ಪುದಮರೋರಗಖೇಚರಕಿನ್ನರೋತ್ಕರಂ ॥೧೬೩॥
ಅಲ್ಲಿಯ ಘಟ್ಟವಳ್ತಿಯರ ರೂಪನದೇಂ ಪೊಗೞ್ವಿಂ ಕಟಾಕ್ಷಮಾ ।
ಫುಲ್ಲಶರಾಳಿ ನೀಳ್ದ ನಸುಗೊಂಕಿದ ಬಿಂಕದ ಪುಬ್ಬಿನುರ್ವು[ವಾ] ।

ವಾ—1. ವನಿಯ. 2. ಳಾನು. 3. ಸ.

ಬಿಲ್ಲೆನಗಾದುದೆನ್ನರುಮನಿನ್ನೆಸುಂ ಕೆಡೆಯೆಚ್ಚ ಕಾದುವೆಂ ।
ಬಿಲ್ಲಿದರಾಗಿ ನಿಲ್ವರೆನಗಾರೆನುತುಂ ಸಲಿವಂ ಮನೋಭವಂ ॥೧೬೪॥

ಸಿರಿಯಂ ಗರ್ವದ ಗಾಳುವಂ ತರಳೆಯಂ ತಾಂ ನೆತ್ತು ದಿಂತೊರ್ವಳಂ ।
ನಿರುತಂ ಪಾಲ್ಗಡಲೆಂದವಂ ನಗುವುದೆಂದುಂ ರೂಪಸೌಭಾಗ್ಯಭೂ ॥
ಸುರನಾನಾವರಕಾಮಿನೀಭರಿತವೇಶ್ಯಾವಾಟವಾಚ್ಯರ್ಯರ ।
ವ್ಯರಮಾಭ್ಯಾಟಮದಿಂದುಕಾಂತಕೃತಮಾತ್ಮಾವಭ್ರ(?)ಕುಭ್ರಾಂಶುವಿಂ ॥

ಪುರಮಧ್ಯದೊಳಿರ್ದುದು ಭೂ ।
ವರನಿಳಯದ ಚೆಲ್ವನೀಕ್ಷಿಸಲ್ಬಂದಿರ್ದಂ ॥
ವರವಪ್ರಾಕೃತಿಯಿಂ ಸಿತ ।
ಕರನೆಂದೆನೆ ಚಂದ್ರಕಾಂತಕೋಟಾಚಕ್ರಂ ॥೧೬೬॥

ಅತಿಶಯಮೆನಿಪ್ಪ ವಪ್ರೋ ।
ನ್ನತಲಕ್ಷ್ಮೀಮುಖಮಿದೆನಿಸಿ ಭೂಮಿಕೆಗಳ್ಸಂ ॥
ಗತಿವಡೆದ ಚಂದ್ರಶಾಲಾ ।
ಧೃತಗೋಪುರಮೆಸೆವುದಖಿಳಮಣಿಗಣರಚಿತಂ ॥೧೬೭॥

ಅನಗರಮೆಂಬ ವರಲ ।
ಕ್ಷ್ಮೀನೂತನರತ್ನಮುಕುಟಮೆನಲೆಸೆವುದು ನಾ ॥
ನಾನಘ್ರ್ಯಮಣಿಮಯಂ ಪಿರಿ
ದಾನುಂ ಕಣ್ಗೊಳಿಸಿ ರೂಢಿಯಿಂ ಕರುಮಾಡಂ ॥೧೬೮॥

ಪ್ರಣುತಮಹಾಗಜೇಂದ್ರಘಟೆಯಂತೆ ಸಮುನ್ನತಭದ್ರಮುತ್ತಮಾ ।
ರಣಮಯಮುದ್ಧೃತಾಜಿಮುಖದಂತೆ ಸಮಗ್ರವಿಜಿತ್ರಪತ್ರಭೂ ।
ಷಣಮಯಮುಚ್ಚರೋಹಣಮಹೀಧರದಂತೆ ನಿರಂತರಂ ಸಮು ॥
ಲ್ವಣ.....ಮುರರ್ಪಡೆವರೆಂದೊಡೆ ಜೆತ್ರಮೆ ಜೆತ್ರಮಲ್ಲವೆ ॥೧೬೯॥

ನೀಳದ ಕೋಕಿಳಾಂಗನೆಗೆ ಪಚ್ಚೆಯ ಪೆಣ್ಗಣೆದಿಂದುಕಾಂತದಾ ।
ಲಾಲಿತಮಾರಳಾವಳಿಗೆ ಸೋಲ್ತರದೆಯ್ದುವುದಲ್ತೆ ಲೀಲೆಯಿಂ ॥
ಮೇಳಿಸಲೆಂದು ದೀವದ ಪಿಕಾಳಿ ಶುಕಾಳಿ ಮುರಾಳಮುಂಡಲಂ ।
ಲಾಲಿಸದಿಂದೆನಲ್ಕೆ ಕುಸುಮಾಸ್ತ್ರನ ಕೆಯ್ದುಮಿದೇಂ ವಿಜಿತ್ರವೋ ॥೧೭೦॥

ಮೇರುವಿನೊಪ್ಪುವಾವರಿಸಿ ಕಣ್ಗೊಳಸಲ್ಕರುವಾಡದಲ್ಲಿ ಕೊ ।
ಟ್ಟರದ ವಾರಣಂಗಳ ಹಯಂಗಳ ರನ್ನದ ಚೆನ್ನ ಹೊನ್ನ ಭಂ ॥
ಡಾರದ ರೂಢಿವೆತ್ತರಸಿಯರ್ಕಳ ಸಜ್ಜೆಯ ಶಸ್ತ್ರವಸ್ತ್ರಶೈ ।
ಗಾರದಗಾರಮಾಳೆ ಕುಳಶೈಲಸವಾಜದವೊಲ್ವಿರಾಜಿಕುಂ ॥೧೩೧॥

ಪೆಸರ್ವೆತ್ತ* ಹಸ್ತಿನಾಪುರ ।
ಕಸಮುಂ ತಾವಾಗಿ ನಾಣ್ಚಿ ಸುರಪುರಿ ಪೋಯ್ತಾ ॥
ಗಸದತ್ತಲ್ಪಣಿ [ಪತಿ]ಪ್ರರಿ ।
ರಸೆಗಿಲ್ದುದು ಗೊಂಟುವೊಕ್ಕುದಳಕಾನಗರಂ ॥೧೩೨॥

ಪೆಱತೇಂ ಮೂಲೋಕದ ಸಿರಿ ।
ನೆಱಿ ಬಂದಿಲ್ಲಿಯೆ ನಿರಂತರಂ..... ॥
ಮೆಹೆವುದೆನೆ ನೆಱಿಯೆ ವರ್ಣಿಸ ।
ಲಱವನೆ ತತ್ಪುರದ ವಿಭವಮುಂ ಕಮಳಭವಂ ॥೧೩೩॥

ಧರೆಗೆಸೆವಾಹಸ್ತಿನಪುರ ।
ದರಸಂ ಜಿತಸೇನನೆಂಬನಾತ್ಮಪ್ರಿಯಸಖಂ ॥
ದರಿಯೆಸಿಪಾಪ್ರಿಯದರ್ಶನೆ ।
ವೆರಸೆನಸುಂ ಸುಖದಿನರಸುಗೆಯ್ಯುತ್ತಿರ್ಪಂ ॥೧೩೪॥

ವ॥ ಅಂತೆಸೆಯುತ್ತಿರ್ಪುದುವಾಜಿತಸೇನಮಹಾರಾಜಂಗಂ ಪ್ರಿಯದರ್ಶನಾದೇವಿಗಂ ಬ್ರಹ್ಮಕಲ್ಪದ ದೇವಂ ಬಂದು ವಿಶ್ವಸೇನನೆಂಬ ಕುಮಾರನಾಗಿ ಸಂಭವಿಸಿರೆಯುಮತ್ತಲ್—

ಭೂವಿನುತಂ ಗಾಂಧಾರಪು ।
ರೀವರನಜಿತಂಜಯಂ ಸುರಾಧಿಪಸಮಕೋ ॥
ಭಾವಿಭವನಜಿತಸೇನಾ ।
ದೇವಿಯ ಪ್ರಿಯನಖಿಳರಾಜ್ಯಲೀಲೆಯೊಳಿರೆಯುಂ ॥೧೩೫॥

ವ॥ ಇಂತು ನಿರಂತರಮಖಿಳ ಸೌಖ್ಯಸಂಪತ್ತಿಯೊಳ್ನಲಿಯುತ್ತುಮಿರೆಯು ಮಜಿತಂಜಯಮಹಾರಾಜಂಗಮಜಿತಸೇನಾದೇವಿಗಂ ಸನತ್ಕುಮಾರಕಲ್ಪದ ದೇವಂ ವಂದ್ಯೆರಾದೇವಿಯೆಂಬ ತನೂಜೆಯಾಗಿ ಮನೋಜರಾಜನ ಸಂಮೋ

ಹನಸಸ್ಯದಂತೆ ಬೆಳೆದು ವಿಳಸನ್ನವೀನಯೌವನಾರೂಢಿಯಿಂ ಸಕಳಕಳಾಪ್ರೌ
ಢಿಯಿಂ ಪುದಿದು ಪೆಸರ್ವೆತ್ತಿರೆ—

ಜೆತಸೇನಾವನಿಪಂ ಸ್ವಕೀಯಸುತನಪ್ಪಾವಿಶ್ವಸೇನಂಗೆ ಸ ।
ನ್ಮತಿವೆತ್ತರ್ಪಜೆತಂಜಯಾತ್ಮಜೆಯುನ್ಮೈರಾದೇವಿಯಂ ತಂದು ತಾ ॥
ನತುಳಾನಂದದಿನಪ್ರತಿಕ್ಯಶುಭಶೋಭಾಶ್ಚರ್ಯವಾಂ ವಿಷ್ಟಪ ।
ತ್ರಿತಯಂ ವರ್ಣಿಸೆಯುಂ ವಿವಾಹಮನತೀವಾರೂಢಿಯಿಂ ಮಾಡಿದಂ ॥೧೭೬॥

ಆವಿಭವದಿನಧಿಕಮೆನ ।
ಲ್ಕಾವೇಗದೆ ವಿಶ್ವಸೇನಸತಿಯಾದೈರಾ ॥
ದೇವಿಗೆ ಸಮಸ್ತರಾಜ್ಯ ।
ಶ್ರೀವಧುವಂ ಸವತಿಮಾಡಿದಂ ಜೆತಸೇನಂ ॥೧೭೭॥

ಸಿತಕಿರಣಂಗೆ ಕಳಾಸಂ ।
ಗತಿ ಸಮನಿಸಿದಂತೆ ವಿಶ್ವಸೇನಂಗೆ ಮನ ॥
ಸ್ಪತಿಯಾದಳುಪಯಶೋವತಿ ।
ಸತಿಯೈರಾದೇವಿ ಸಕಳಸುದತೀರತ್ನಂ ॥೧೭೮॥

ಸ್ಮರಸಮ್ಮೋಹನಶಕ್ತಿ ಮನ್ಮಥಮದಶ್ರೀಕಾಮಸಾಮ್ರಾಜ್ಯಲ ।
ಕ್ಷ್ಮೀ ರತೀಶಾತುಳಶೌರ್ಯಸಿದ್ಧಿ ಮದನಾಜ್ಞಾಮೂರ್ತಿ ಹೃದ್ಭೂವಿಭಾ ।
ಸುರಸತ್ಕೀರ್ತಿ ಮನೋಜಮಂತ್ರದಧಿದೈವಂ ಕಂತುರಾಜೋಲ್ಲಸ ।
ತ್ಕರವಾಳಂ ಕುಸುಮಾಸ್ತ್ರನರ್ಪಿಪ ಸರಂ ತಾನೆಂಬೆನಾಕಾಂತೆಯಂ ॥೧೭೯॥

ವನಿತಾನೀಕಂಗಳಂ ನಿರ್ಮಿಸಿ ಕುಶಲತೆ ಮೆಯ್ವೆರ್ಚಿ ಕಂಜಾತನಂತಾಂ
ನೆನೆದಂತೀಪ್ರೌಢಿಯಾರೂಢಿಗೆ ಕಳಸಮಿದೆಂಬಂತೆ ಕಯ್ಮೀಲ್ಮೆಯಂ ತೆ ೀ ॥
ರ್ಪನೆನುತ್ತುಂ ನಾಡೆಯುಂ ನಿಟ್ಟಿಸಿ ಪಡೆದ ನವೀನಾಂಗನಾರತ್ನಮಿಂತಾ ।
ವೆ ನಿತಾಂತಂ ತಾನೆನಲ್ಕಣ್ಗೊಳಿಪಳಸಮಸಾಶ್ಚರ್ಯಸೌಂದರ್ಯದಿಂದಂ ॥

ಸುದತಿಯ ವಕ್ತ್ರಮಂಡಳಮನೀಕ್ಷಿಸಿ ಚಂದ್ರಮನೆನ್ನ ಕಾಂತಿಯಿಂ ।
ದಿದು ಮಿಗಿಲಾದುದಾದುದೆನುತುಂ ಮನದೊಳ್ಪರಿದೊಂದು ಮತ್ಸರಂ ॥
ಪುದಿಯೆ ತದೀಯಮತ್ಸರದಿನಾದ ವಿಷಾದಮೆ ಕೆಚ್ಚುಗೊಂಡುದಾ ।
ಹೃದಯದೊಳಂತದಂ ಕಡಿಯೆನುತ್ತಮೆ ಕಲ್ಪಿಸುತಿರ್ಪುದೀಜನಂ ॥೧೮೦॥

ಕಮನೋದ್ಬುದ್ಧತೆವೆತ್ತು ನಿತ್ಯಮೆಸೆವೈರಾದೇವಿಯಾಸ್ಯಾರವಿಂ ।
ದನು ಣಾಂ ಫೋಲ್ತಪೆನೆಂದು ಪೊಕ್ಕ ಜಳದೊಳ್ ಭೃಂಗಾಳಿಝಣ್ಕಾರಸಾ ॥
ರಮೆ ಮುಂತಾ ಷ್ಟಸಹಸ್ರರಘೋಷಮುಜ್ವಳಪರಾಗಂ ಭೂತಿಬೀಜೌಘಮ ।
ಕ್ಷ್ಮವ ಣಿವಾ ಜನುದಾಗಿ ರಾಜಿಸೆ ತಪಂಒಟ್ಟಿರ್ದಬ್ಜಬ್ಜಂ ॥೧೪೯॥

ಕಮುದಾಕ್ಷಿಯಾಕೃತಿ ಜಗತ್ರಯವೋಹನಮನ್ಮಥ್ಯೈಕವಿ ।
ದ್ಯಾಕೃತಿ ವಿಷ್ಟಪತ್ರಿತಯನುಂಗಳ್‌ವಾಕೃತಿ ಸೌಕುಮಾರ್ಯಶೋ ॥
ಭಾಕೃತಿ ನಿಶ್ಚಿತಾಖಿಳಕಳಾಕಮನಾಕೃತಿ ವಿಶ್ವಲೋಕದಾ ।
ಲೋಕನಪುಣ್ಯದಾಕೃತಿಯೆ ತಾನೆನಲಿನ್ನದನೇನನೆಂದಪೆಂ ॥೧೪೯॥

ಎಸೆವೈರಾದೇವಿಯ ಸೊಗ ।
ಯಿಸುವತಿಶಯರೂಪದೆಸಕಮುಂ ಪಿರಿದುಂ ವ ॥
ರ್ಣಿಸುವೊಡೆ ಕಮಳಭವಂಗರಿ ।
ದು ಸಮುಂತೆನೆ ಮಿಕ್ಕ ಜಡರದೇವಣ್ಣಿಪರೋ ॥೧೪೪॥

ಧರೆಯುಂ ಜಿಳಗುವ ದವಿಪಾ ।
ದರಾಗಮುಸ್ಥಿರಮದೆಂದು ಪಜ್ಞಾಕೆಯ್ವುವು ಸು ॥
ಸ್ಥಿರರಾಗದ ಪದೆಪಿಂ ಸುರು ।
ಚಿರಕೃದುಪದಪಲ್ಲವಂಗಳ್ಕೈರಾಂಗನೆಯಾ ॥೧೪೫॥

ತಾವಪದಸ್ಥಂಗಳ್ನಿಗ ।
*ಚಿದ್ವಿಷಮ ಪದಸ್ಥಂಗಳೆಂದು ನಗುವುವು ತಾರಾ ॥
ಸ್ತೋಮಂಗಳನುಜ್ಜ್ವಳನಿಜ ।
ದಾವದಿನಾಭಾಮೆಯಂಘ್ರಿಗಳ ನಖಮಣಿಗಳ್ ॥೧೪೬॥

ಯುವತಿಯ ಮೇಗಾಲ್ಗಳ್ ಸು ।
ಚ್ಛವಿಯುತವೃತ್ತಾಯತೋನ್ನತಂಗಳ್ನಖರಾಂ ॥
ಶುವ ನೆವದಿಂ ನಗುವುವು ಕೂ ।
ರ್ಮವಿಳಾಸವನೆಂದೊಡಿನ್ನದೇ ವರ್ಣಿಸುವೆಂ ॥೧೪೭॥

ನಯೆಯಂಬನೆಂಬ ಮುಲ್ಲನ ।
ಕನಕದ ಪಿಲ್ಲಣಿಗಳುಪಮೆಗೇವಯಿಸಿದುವೆಂ ॥

ದೆನಿಸಿ ನಸುವಾಗಿ ಜಂಘೆಗ ।
ಳೆನಸುಂ ಕಣ್ಗೊಳಪುವಾಸರೋಜಾನನೆಯಾ ॥೧೪೪॥
ಆಪುಪ್ಪಶರಗಜಾಲಾ ।
ನೋಪಮೆಯಂ ಪಟ್ಟಿದು ಕನಕಕದಳೀನವಕಾಂ ।
ಡೋಪಮೆಯನಿಟ್ಟಿಸಿ ಪೊಳೆವಮ ।
ಳಾಪಜೆತೋರುಗಳವೆಸೆವುವಾಶಶಿಮುಖಿಯಾ ॥೧೪೫॥
ಸ್ಮರಕರಿಕುಂಭೋಪಮೆಯಂ ।
ನಿರುಪಹತಾತಿಶಯತುಜೆರರುಜೆಯಿಂ ಮಿಗೆ ಮಾಂ ॥
ಕರಿಸುತ್ತುಮೆ ಕರಮೆಸೆವುವು ।
ನಿರಂತರಂ ವನಜಮುಖಿಯ ಘನಜಘನಂಗಳ್ ॥ ॥೧೪೬॥
ಜಳವಂಗರುಜೆತರಂಗಾ ।
ವಳತತಿ ಸೈವಾಳಮಾಳೆ ಸಮುದಿತರೋಮಾ ॥
ವಳ ನಾಭಿ ಸುಟ್ಟಿಯೆನೆ ಸರಿ ।
ದ್ವಿಳಾಸದಂತೆಸೆದುದಂಗನೆಯ ತನುಮಧ್ಯಂ ॥೧೪೭॥
ಭರಿತನವಯೌವನಶ್ರೀ ।
ತರುಣಿಯ ಕೇಳೀವಿಶಾಳಶೈಳದ್ವಯದಂ ॥
ತಿರೆ ತಾರಹಾರರುಜೆನಿ ।
ರ್ಜರಧೃತಮೆಸೆದತ್ತು ಕೋಮಳೆಯ ಕುಚಯುಗಳಂ ॥ ॥೧೪೮॥
ವರಶೀಲಂ ಸೌಭಾಗ್ಯಂ ।
ಸುರೂಪಮೊಂದೆಡೆಗೆ ವಂದುದೆಂದು ಸಮಂತಂ ॥
ಬುರುಹಭವಂ ಬರೆದಂತಿರೆ ।
ಕರಮೆಸದುದು ಸತಿಯ ಕೊರಳ ರೇಖಾತ್ರಿತಯಂ ॥೧೪೯॥
ತಳರುಜೆ ತಳರ್ದಳದ್ಯುತಿ ।
ಕುಳವಲರೆನೆ ಸತಿಯ ಸೊಗಯಿಸುವ ನಳತೋಳ್ಗ ।
ಳ್ನಳನಳಪನಂಗಲತಿಕೆಯ ।
ನಿಳಾಸಮಂ ತಳೆದು ಭಂಗಿಯಿಂ ಕಣ್ಗೊಳಕುಂ ॥೧೪೯॥

ದರಹಾಸದ್ಯುತಿಲಕ್ಷ್ಮೀ ।
ಶರಣಂ ತಾನೆಂದೊಡಾನದೇವಣ್ಣೆನಾ ॥
ತರುಣಿಯು ಮುಖಮಂಡಲವಾಂ ।
ನಿರಂತರಾಧಃಕೃತೇಂದುರುಚಿಮಂಡಳಮುಂ ॥೧೯೫॥
ಸ್ಮರಚಿತಾಮಣಿಯೆಂಬೆಂ ।
ತರುಣೀಜನತಾಶಿರೋಮಣಿ.....ಯಾ ॥
ಧರಮಣಿಯಂ ವದನಸುಧಾ ।
ಶರಧಿಸಮುದ್ಭೂತವಿಮಳವಿದ್ರುಮಮಣಿಯುಂ ॥೧೯೬॥
ಮಿಗೆ ಚೆಲ್ವುವಡೆಯೆ ಪಡೆದಾ ।
ವೊಗದೊಳ್ಪೊಗಯಿಸೆ ಪಯೋಜಭವನಿಟ್ಟ ಮುಗು ॥
ಳ್ನಗೆಯ ಪೊಸಮುತ್ತುಗಳ ಪ ।
ಙ್ತಿಗಳಿನೆ ದಶನಂಗಳಿಸೆದುವಾಶಶಿಮುಖಿಯಾ ॥೧೯೭॥
ಜನಿತವದನಾರವಿಂದದ ।
ತನಿಗಂಪಂ ತರದಿನುಗುೞ್ವ* ನಿರ್ಮಳತರನೂ ॥
ತನರತ್ನನಾಳಕಾಂಡಮಿ ।
ದೆನೆ ಸೊಗಯಿಪುದಲ್ತೆ ಸತಿಯ ನಾಸಾವಮುಕುಳಂ ॥೧೯೮॥
ಸೊಗಯಿಪ ಮುಖಾಬ್ಜಸರಸಿಯೊ ।
ಳಗಲದೆ ಸಲೆ ಚಪಳವೃತ್ತಿಯಿಂ ಪೊಳೆವೆಳವಾ ॥
ಟಿಗಳಂತೆ ಕಾಡಿವೆಳಗು ನೆ ।
ಟ್ಟಗೆ ನಿಮಿರ್ದಂತೆಸೆವುವಂಗನೆಯ ನಿಡುಗಣ್ಗಳ್* ॥೧೯೯॥
ಸ್ಮರರಾಜಮಜಿರಮಂದಿರ ।
ಪರಿಘುಟಿತಾಗರ್ಳಯುಗಾಪಸರಕೃತಿಗೆಯ್ವಾ ॥
ಹರಿನೀಳಕುಂಭಿಕೆಗಳಿನೆ ।
ತರಳಾಕ್ಷಿಯ ಕೊಂಕೆ ನಿಮಿರ್ದ* ಪುರ್ವುಗಳಿಸೆಗುಂ ॥೨೦೦॥
ಅವತಂಸಸ್ಯೋತ್ಕಿಕದ್ಯುತಿ ।
ನಿವಹಲಸತ್ಪರಿಧಿಯೆಸಿಸಿ ಮರ್ಣಾಳ(?)ವಿಳಾ ॥

ಸವನಪ್ಪಕೆಯ್ದು ಪಿರಿದುಂ ।
ಯುವತಿಯ ತತ್ಪ್ರವಣಪಾಳಕಾಯುಗಮೆಸೆಗುಂ ॥ ೦೦೧॥
ಎಸವಟು[1]ಮಿಂದುವಸ್ಥಿರ ।
ನಸದೃಶನೆಂದಿಂತು ನಾಡೆ ಕೀಱ್ತಿಸ್ಥಾಪಿಪುವುದಾ ॥
ಬಿಸಜಮುಖಿಯಖಿಳಸೌಂದ ।
ರ್ಯಸಮಾಜಾಘಟಮೆನಿಸಿ ಮಿಸುಪ ಲಲಾಟಂ ॥ ೦೦೨॥
ಚಳನಯನಶಫರಭೀತಿಯೊ ।
ಳೊಳಪುಗದುಳ್ಳಳ್ಳಿ ವದನಕಮಳ[2][ವ][2] ಒಳಸಿ ॥
ರ್ಪಳಿಗಳಿನೆ ನೊಸಲೊಳಿಸೆವುದು ।
ಸುಜಿಗುರುಳ್ಗಳ ಒಳಗವಾಸಗೋಜಾನನೆಯಾ ॥ ೦೦೩॥
ಇದು ಪುದನಂ ತ್ರಿಜಗಮನೋ ।
ವದೆ ಗೆಲಲೆತ್ತಿದ ವಿನೀಳವಿಜಯದ್ವಜಮೆಂ ॥
ಬುದನೆನಿಸಲ್ಕಾರ್ದುದ ।
ತ್ಸುದತಿಯ ಕಮನೀಯಮಪ್ಪ ಕಛರೀಭಾರಂ ॥ ೦೦೪॥
ಏವೇಱಿಸ್ವಿಂ ತ್ರೈಲೋಕ್ಯದ ।
ಲಾವಣ್ಯಮದೊಂದೆ ರೂಪುಗೊಂಡುದೆನಲ್ಕಿಂ ॥
ತಾವಗಮೆಸೆದಿರ್ಪ್ಪಿರಾ ।
ದೇವಿಯ ರೂಪಾತಿಶಯಮದೇನಚ್ಚರಿಯೋ ॥ ೦೦೫॥

ವ ॥ ಇಂತಗಣ್ಯಲಾವಣ್ಯಸೌಭಾಗ್ಯವತಿಯೆನಿಸಿದ್ದೈರಾದೇವಿಯೊಳಾ ವಿಶ್ವಸೇನಮಹಾರಾಜನಶೇಷಸಂಸಾರಸೌಖ್ಯಮನಲಂಪ್ರಪೊಂಪುಳವ್ಪೋಗಲತೀವರಾಗದಿಂ ಪಲವು ಕಾಲಮನುಭವಿಸುತ್ತುಮಿರೆಯುಮತ್ತಲಾದೇವರದೇವಂ ಸರ್ವಾರ್ಥಸಿದ್ಧಿಯಿಂದುರ್ವಿಗೆ ವಂದು ಹಸ್ತಿನಪುರದೀಶ್ವರಸೇನಮಹಾರಾಜನ ಮಾದೇವಿಯಪ್ಪೈರಾದೇವಿಯುದರದೊಳುದಯಿಸಲಿರ್ದುದಂ ಸೌಧರ್ಮೇಂದ್ರನವಧಿಬೋಧದಿನಱಿದು ಸಂತೋಷದಂತನೆಯ್ದಿ ವೈಶ್ರವಣನಂ ರತ್ನವೃಷ್ಟಿಯುಂ ಕಱುಕಿಯುತ್ತಿರೆಂದು ನೇಮಿಸಿದಾಗಳ್—

ಪಾ—1. ಎಸವೆಟ್ಟ. 2. ದ.

ಸುರಿಯಲೊಡರ್ಚಿದನನುದಿನ ।
ಮುರುಮುದದಿಂ ಮೂಱುಪೊತ್ತಹೊಳ್ ವೈಶ್ರವಣಂ ॥
ನಿರುಪಮಪಂಚಾಶ್ಚರ್ಯಂ ।
ಬೆರಸಿರೆ ಸಾರ್ಧ ತ್ರಿಕೋಟಿರತ್ನದ ಮಟಿಯಂ ॥೨೦೬॥

ಸುರಚಾಪದ ಸರಿವಟಿ ಸಲೆ ।
ಸುರಿಯುತ್ತಿರ್ದತ್ತಿನಲ್ಕ ರನ್ನದ ಮಟಿಯಂ ॥
ಸುರಿಯುತ್ತಿರ್ದಂ ಕಿನ್ನರ ।
ವರನಿಂತೋರಂದದಿಂದೆ ಹಸ್ತಿನಪುರದೊಳ್ ॥೨೦೭॥

ರನ್ನದ ಮಟಿ ಕಱಿದುದು ಸಲೆ ।
ತನ್ನಯ ಗರ್ಭಾವತಾರದಿಂದಂ ಮುನ್ನೋ ॥
ರನ್ನವೞುದಿಂಗಳಿನೆ ಪೇ ।
ೞ್ದಿನ್ನೆಂತುಟೊ ಪುಣ್ಯದೆಸಕವಾಜಿನಪತಿಯಾ ॥೨೦೮॥

ವ ॥ ಮತ್ತಪಾಸೌಧರ್ಮೇಂದ್ರನಾನಂದದಿಂ ಜಿನಜನನಿಯಾಗಲಿ ಪ್ಪೈರಾದೇವಿಯಂ ಕೈಗೆಯ್ಯುತ್ತಿರಿಮೆಂದು ಹಿನುವದಾದಿವರ್ಷದಧರಾಧಿತ್ಯ ಕಾಕಲ್ಪವಪ್ಪ ಪದ್ಮಾದಿಸರೋವರಂಗಳೊಳಿಪ್ಪ ಶ್ರೀ ಹ್ರೀ ಧೃತಿ ಕೀರ್ತಿ ಬುದ್ಧಿ ಲಕ್ಷ್ಮಿಯೆಂಬೞುವರ್ದೇವಿಯರುಮಂ। ಮತ್ತಂ ಜಿನಜನ್ಮೋತ್ಸವದೊಳ್ ಶೃಂಗಾರಧಾರಿಣಿಯರಾಗಿರಿಮೆಂದು ರುಚಕಾವನೀಧರದ ಮೂಡಣ ಕೂಟಂಗಳೊಳಿಪ್ಪ ವೈಡೂರ್ಯದ ವಿಜಯೆ ಮೊದಲಾದೆಣ್ಬರುಮಂ । ಮತ್ತಂ ವಿಶ್ವಸೇನಮಹಾರಾಜನರಸಿಗೆ ಮಣಿಮುಕುರಮಂ ತೋಱುತಿರಿಮೆಂದು ತನ್ಮಹೀಧರದ ತೆಂಕಣ ದೆಸೆಯ ಕೂಟಂಗಳೊಳಿಪ್ಪ ಮೋಘೆ ಸುಪ್ರತಿಷ್ಠೆಯೊ ಪಲಾದೆಳವೆಣ್ಗಳೆಣ್ಬರುಮಂ । ಮತ್ತಮರ್ಹದಂಬಿಕೆಗೆ ಗಾಯಕಿಯರಾಗಿರಿಮೆಂದು ಪರ್ವತದ ಪಡುವಣ ದೆಸೆಯ ಕೂಟಂಗಳೊಳಿಪ್ಪ ಲೋಹಿತಾಕ್ಷಿದ್ರಿಳಾ ದೇವಿಯೊದಲಾದ ಹರಿತ್ಕುಮಾರಿಯರೆಣ್ಬರುಮಂ। ಮತ್ತಮಾಭಾವೋತ್ತಮಿಗೆ ಚಾಮರಮನಿಕ್ಕುತಿರಿಮೆಂದು ತದ್ಧರದ ಬಡಗಣ ದೆಸೆಯ ಕೂಟಂಗಳೊಳಿಪ್ಪ ಸ್ಫಟಿಕದ ಕ್ಷಂಭ್ಮುದೇವಿ ಮೊದಲಾದಧಿಕಾಂತೆಯರೆಣ್ಬರುಮಂ । ಮತ್ತಂ ಶ್ರೀಭುವನ ಶ್ರೀರತ್ನದೀಪಿಕೆಗೆ ದೀಪಧಾರಿಣಿಯಾಗಿರಿಮೆಂದು ತದಿ

ರೀಂದ್ರದ್ಯೆಂದ್ರೀದೆಸೆಯ ವಿಶೇಷಕೂಟಂಪಳೊಳಪ್ಪ ವಿಮಳಚೈತ್ರದ ವಿಜೆತೈ
ವೊದಲಾದ ವಿದ್ಯುತ್ಕುಮಾರಿಯರ್ನಾಲ್ವರುಮಂ । ಮತ್ತಮಾಮಹಿಮಾವ
ಳಂಬಿನಿಗೆ ಪುಷ್ಪಸ್ತ್ರೀಯರಾಗಿರಿಮೆಂದು ತತ್ಕುಧರದ ವಿಧಿಕೂಟಂಗಳೊಳಪ್ಪ
ಮೈಡೂರ್ಯದ ರುಚಕೆ ಮೊದಲಾದ ದಿವಿಜಕನ್ನಕೆಯರ್ನಾಲ್ವರುಮಂ। ಮತ್ತ
ಮಖಿಳವಿದ್ಯಾಪ್ರಗಲ್ಭೆಗೆ ಗರ್ಭಶೋಧನಾದಿಕರಣವ್ಯಾಪಾರದೊಳಿರಿಮೆಂದು
ತತ್ಕೈಳದ ಕೂಟಂಗಳೊಳಪ್ಪ ರತ್ನಕೂಟದ ವಿಜಯೆ ಮೊದಲಾದ ವಿದ್ಯುನ್ನಾ
ರಿಯರ್ನಾಲ್ವರುಮಂ । ಮತ್ತಮನೇಕವಿನೋದಂಗಳಂ ಸಲಿಸುತಿರಿಮೆಂದು
ವಕ್ಷಾರಕುಂಡಳಾದ್ಯನೇಕನಗನಿವಾಸಿಗಳಪ್ಪ ಮೂಳಕೆ ಮೂಳನಿ ಕನಕದೇವಿ
ಕನಕವೃದ್ಧಿ ಪುಷ್ಪವೂಲೆ ಪುಷ್ಪವೂಲಾವತಿ ಸುರಾದೇವಿ ತ್ರಿಶಿರೆ ಮೊದಲಾದ
ಪಲಂಬರಮರಕಾಂತೆಯರಂ ಕಳಪುವುದುಮವರವನಿಗವತರಿಸಿ—

ಚಳನಪ್ರದ್ಯೋತದಿಂ ಪಲ್ಲವಿಸುತುಮಿಳೆಯಂ ಕೇಕರಾಳೋಕದಿಂದು ।
ಜ್ವಳಿಸುತ್ತುಂ ಸುತ್ತಿ ದಿಗ್ಮಂಡಳಮನೊಗೆವ ಮುಂಜೀರಚಾರುಪ್ರಣಾದಾ ॥
ವಳಯಿಂ ಹಂಸೀಪ್ರತಾನೋತ್ಸವಮನೊದವಿಸುತ್ತುಂ ಸಮುಂತಿಂತು ಬಂದಾ।
ಗಳಗೇ ಸಾವಾಸಮಂ ಪೊಕ್ಕುದು ಸರಭಸದಿಂ ದೇವಕಾಂತಾಕದಂಬಂ ॥

ವೆ॥ ಇಂತು ಬಂದಾಗಳ್—

ವಿಮಳಮುಖೇಂದುಖಿಂಬಮನೆ ತಮ್ಮಯ ನೇತ್ರಚಕೋರಿಗಳ್ಕರಂ ।
ಪ್ರಮದವನೆಯ್ದುವೆಯ್ದೆ ನಡೆ ನೋಡುತುಮುತ್ಸವವೃತ್ತಿ ಜೆತ್ತದೊ ॥
ಳ್ಸಮನಿಸೆ ನಾಡೆಯುನ್ನತಿಸುತುಂ ನಲವಿಂ ನೆಲವೆರ್ಚಿ ಬಿರ್ದುತುಂ ।
ತಮತಮಗರ್ಹದಂಬಿಕೆಗೆ ಬಂದೆಱಗಿತ್ತವರಾಂಗನಾಜನಂ ॥೨೦೯॥

ವ॥ ಆಗಳಾದಿವಿಜಯುವತಿಯರ್ ತಂತಮ್ಮ ನಿಯೋಗದಿನಿಸುವೆಸಂಗಳಂ
ಕೈಕೊಂಡು ನೆಗಟುತ್ತುಮಿರೆ—

ನಿಸಗೇಕಚ್ಛತ್ರಂ ತ್ರಿಭು ।
ವನಮೆಂದುಸಿರಲ್ಕೆ ಬಂದನಾಯಿಂದುವೆ ತಾ ॥
ನೆನೆ ಸೊಗಯಿಸಿದುದು ಸುರವಧು ।
ಜಿನಜನನಿಗೆ ಪಡಿಪ ಮುತ್ತಿನೇಕಚ್ಛತ್ರಂ ॥೨೧೦॥

ಕಮಳಮುಖಿಯಪ್ಪ ದೇವಿಗೆ ।
ನಿಮಿರ್ದ*ಮರಿಯರಿಕ್ಕುವಮಳಚಮರರುಹವಿಳಾ ॥
ಸಮದು ನೆನೆಯಿಸಿತು ಮದಮಿಳಿ ।
ತಮುರಾಳಂ ನಲಿವ ಲಲಿತಜಲಜಾಕರಮಂ ॥೨೧೧॥
ತಳತಳಿಸುವ ಶಶಿಕಳೆಗು ।
ಜ್ವಳಪಮರ್ದ*ಂ ತೊಡೆವ ತೆಱದೆ ಜಿನಜನನಿಯು ಕೋ ॥
ಮಳತನುವಂ ಭೂಷಿಸಿದಳ್ ।
ನಿಳಿಂಪವಧು ಮುಳಯಜಾನುಲೇಪನದಿಂದಂ ॥೨೧೨॥
ನಿರುಪಮನವೀನಜೇನಾಂ ।
ಬರಮಂ ಸುರತರುಣಿ ತಂದು ನಿಱ್ ವಿಡಿದುಡಿಸಲ್ ॥
ವರಫೇನಮಾಳಕಾವೃತ ।
ಸುರಸಿಂಧುಗೆ ಜಿನನ ಜನನಿ ದೊರೆವೆತ್ತೆಸೆವಳ್ ॥೨೧೩॥
ಸುರವಧುವೊರ್ವಳ್ದೀವಿಯ ।
ಚರಣಕ್ಕೊಲಗಿಸೆ ಪೊಳೆವ ಹರಿನೀಳದ ನೂ ॥
ಪುರಮದು ನೆನೆಯಿಳಿದುದು ಪ ।
ಟ್ಟರಣಾವಳಿ ಬಳಸಿದರುಣಸರಸಿಜದಿರವಂ ॥೨೧೪॥
ಭಾವಜನ ವಿಮುಳಕಲ್ಪಲ ।
ತಾವಾಳದೊಳಮೃತಪೂರಮುಂ ಪರಿಯಿಪವೊಲ್ ॥
ದೇವಿಯು ನಿತಂಬದೊಳ್ತಾ ।
ರಾವಿರಜೆತರಶನೆಯಂ ತೊಡರ್ಚಿದಳೋರ್ವಳ್ ॥೨೧೫॥
ಮುತ್ತಿನ ತಿಸರಮನರಸಿಯ ।
ವೃತ್ತಕುಚಕ್ಕೊರ್ವಳವಡಿಸೆ ಕಡುಚೆಲ್ವಂ ॥
ಪೆತ್ತುದು ಮೃಣಾಳತತಿ ಧೃತ ।
ಚಿತ್ತಜಕರಿಕುಂಭಶೋಭೆಯಂ ನೆನೆಯಿಸುತುಂ ॥೨೧೬॥
ಜಿನಜನನಿಯ ಧಮ್ಮಿಲ್ಲದೊ ।
ಳನಿಮಿಷವಳ್ಳು ಹುದುಗೆ ಮುಕುಳವಿಚಕಿಳಚಯಮುಂ ॥

ನೆನೆಯಿಸಿದುದು ತಾರಾಳಿಯ ।
ನೆನಸುಂ ಮುತ್ತಿರ್ದ ಹಾರ ಕಾರಿರುಳಿರವಂ ॥ ॥೨೧೩॥

ತ್ರಿದಶಾಂಗನೆ ಜಿನಜನನಿಗೆ ।
ಪದೆಪಿಂ ತಾರಾವತಂಸಮಂ ಭೂಷಿಸೆ ತ ॥
ದ್ವದನೇಂದುಮಂಡಲದ ಜೊ ।
ನ್ನದ ಪುಂಜಿಕೆಯಂತಿರೆಸೆದುವೆರಡುಂ ಕೆಲದೊಳ್ ॥ ೨೧೪॥

ತಳರಂ ತಳದೆಳಲತೆಯನೆ ।
ತಳರುಜೆಯಿಂದೆಸೆವ ಜಿನಪಜನನಿಯ ನಳತೋ ॥
ಳ್ಗಳೊಳಮರಾಂಗನೆ ಮುತ್ತಿನ ।
ವಳಯಮನಳವಡಿಸಿ ಪಡೆದಳಗ್ಗಳಸಿರಿಯಂ ॥ ॥೨೧೫॥

ಕಂದದ ಕಳಿಗಳನಮಳಮು ।
ಖೇಂದುವ ನೆರೆಯಲ್ಕೆ ಬಂದ ಸಸಿಯೆಸೆದುದಾ ॥
ನಂದದೆ ಜಿನಜನನಿಗೆ ಸುರ ।
ಸಾಂದರಿ ತೋರ್ಪಿಂದುಕಾಂತಮಣಿನುಕ್ಕುರುಂದಂ ॥ ೨೧೬॥

ಕರಧೃತಕರವಾಳದೆ ಬಿ ।
ತ್ತರಿಸುವ ಮೆಯ್ಗಾಪಿನಮುರರಮಣೀತತಿ ಮಾಂ ॥
ಕರಿಸುವುದು ಪೊಳೆವ ಮಿನ್ಗಳ ।
ನೆರವಿಯನೊಳಕೊಂಡ ತಿಳಿಗೊಳಂಗಳ ಚೆಲ್ವಂ ॥ ೨೧೭॥

ದೇವಿಗೆ ಬೋನಮಂ ಸಮೆವ ಗದ್ದುಗೆಯಿಕ್ಕುವ ವೀಳೆಯಂಗಳಂ ।
ಭಾವಿಸಿ ನೋಡಿ ನೀಡುವ ನಿವಾಳಿಯನೆತ್ತುವ ದಿವ್ಯಗಂಧಪು ॥
ಷ್ಪಾವಳಿಯಂ ನಿಯೋಜಿಸುವ ಕನ್ನಡಿದೋಳುವನೇಕಸೇವೆಯಿಂ ।
ದಾವಗಮಾದವೋಲಗಿಸುತಿರ್ಪುದು ತದ್ದಿವಿಜಾಂಗನಾಜನಂ ॥ ೨೧೮॥

ನಾನಾವಿಧದ ನಿಯೋಗದೊ ।
ಳೇನುಂ ತೆಱಪಿಲ್ಲದೋಲಗಿಸುತಿರ್ಪುದು ಪೂ ॥
ಜ್ಞಾನಂಗದೆ ಸಕಳಸುರ ।
ಸ್ತ್ರೀನಿಚಯಮಂ ವಿಶ್ವಸೇನನೃಪವಲ್ಲಭೆಯುಂ ॥ ೨೧೯॥

ವ|| ಮತ್ತಮಾಜಿನಾಂಬಿಕೆಯ ಮುಂದೆ ಸಂಗೀತಕಮಂ ಸಂಗಳಿಸಿ ಪದಂಬಡಿಸುವೆಡೆಯೊಳ್--

ಸರಳಾಂಗುಳಿಗಳ ಸಾರಣೆ ।
ಸುರಾಗಸುವ್ಯಕ್ತಿಯುಂ ಕುಡುತ್ತಿರೆ ತಾನ ॥
ಚ್ಚರಿವಡೆಯೆ ದಿವಿಜವಧು ಜಿನ ।
ವರಜನನಿಯ ಮುಂದೆ ಪೀಣೆಯುಂ ಬಾಜಿಸಿದಳ್ ॥೨೭೪॥

ಅವಧಾನಂ ಸ್ವರಪದತಾ ।
ಳವಿವರದೊಳಳಂಕೆಗೊಂಡು ರಾಗೋಚ್ಚರಣಂ ॥
ಸವಿಯಂ ಸಾಲಿಡುತಿರೆ ದಿವಿ ।
ಜವಧು ಜಿನಾಂಬಿಕೆಯ ಮುಂದೆ ಪಾಡುತ್ತಿರ್ದಳ್ ॥೨೭೫॥

ತಳೆದೆಡಗಯ್ಯೊಳ್ ಡಕ್ಕೆಯ ।
ನಳವಡೆ ಮುರಿದಂಗವೊಪ್ಪಿ ಕುಡುಪಿನ ಘಾತಂ ॥
ಗಳೊಳತಿಮೃದುಶಬ್ದಂ ಸಂ ।
ಗಳಿಸುತ್ತಿರೆ ಬಾಜಿಸುತ್ತುಮಿರ್ದಳದೊರ್ವಳ್ ॥೨೭೬॥

ಇತಿ ಜೋಕೆ ತುಡುಕು ಪಹರಣೆ ।
ಗತಿ ಗಮುಕಂ ಕಾತ ಖಿಣಿ ಬೆಡಂಗಿನಿಱಂ ಸಂ ॥
ಗತಿಪಡೆಯೆ ವಾದನಕಳಾ ।
ವತಿ ಬಾಜಿಸುತಿರ್ದಳಿಂತು ಮುರಜವನುಸೊರ್ವಳ್ ॥೨೭೭॥

ವರತಾಳಗೀತವಾದ್ಯೋ ।
ತ್ಕರಮನುಗತಮುಂಗಿ ರೂಪ್ಪುದಾಪನೆ ರೇಖಾ ॥
ಕರಣ ಸಭಾವಂ ಸಂಗತಿ ।
ಕರಮೆಸೆಯಲ್ದಿವಿಜಯುವತಿ ನರ್ತಿಸುತಿರ್ದಳ್ ॥೨೭೮॥

ಜಿನಚರಿತಕಾವ್ಯಮಂ ಸ ।
ಜ್ಜನಸೇವ್ಯಮನೆಸೆವ ರಾಗರಸದಿಂ ತೊಯ್ದುಂ ॥
ತನಿಮಿಹವಧೂಟ ಕಿವಿಗವು ।
*ರ್ದಿನ ಸಖಿಯೆನೆ ಸೊಗಯಿಸಲಾದವೋಲಿರ್ದಳ್ ॥೨೭೯॥

ವ॥ ಅದಲ್ಲದೆಯುಮಚ್ಛರಿವೆತ್ತ ಸಚ್ಛಕುರೆಯರಪ್ಪ [ಚ್ಛರಸಿಯರೊಳ್] ಲವಲವಿಕೆಯೆಂಬಳ್ ನಿಜಲಲಿತಪದಪಲ್ಲವಪ್ರಭೆಯೊಡನೆ ತಡಂಗಲಿಸೆ ಕಾಶ್ಮೀರವಾರಿಸೇಚನಮನೆಡೆವಿಡದೆ ಮಾಡಿಯುಂ ; ಪ್ರಾಣಾಳಿಕೆಯೆಂಬಳಾತ್ಮಪದನಖಮಯೂಖಮಾಳೆಯೊಳ್ಮೀಳಸುತ್ತಿರೆ ಪೂವಲಿಯಂ ಪಸರಿಸಿಯುಂ ; ಚಿತ್ರಲೇಖೆಯೆಂಬಳ್ ವಿಚಿತ್ರಮಾಗೆ ವಿದ್ಧಚಿತ್ರಯದ ರಸಚಿತ್ರಂಗಳಂ ಚಿತ್ರಶಾಳೆಯ ಭಿತ್ತಿಗಳೊಳ್ಚಿತ್ರಿಸಿಯುಂ ; ಮುಂದಾರಿಕೆಯೆಂಬಳಿಂದ್ರವದನದ ಮುಂದಾರಕಾಸುಮವಿಸರದಿಂ ಲಂಬೂಷಮಾಳಿಕಾಜಾಳಮುಂ ವಿರಚಿಸಿಯುಂ ; ಲವಂಗಿಕೆಯೆಂಬಳ್ ಲವಂಗದಲರ ಮೇಲುಕಟ್ಟನಿಟ್ಟಳವಾಗಿ ದಿಟ್ಟಗೆಸೆಯೆ ನಲ್ಮೆಯಿಂ ನಿರ್ಮಿಸಿಯುಂ ; ವರ್ಣಮಾಳಿಕೆಯೆಂಬಳ್ ಬಹುರತ್ನಪಾಂಶುಪ್ರಸರದಿಂ ಪಲತೆಱದ ವರ್ಣಪೂರಂಗಳಂ ಪರಿಪೂರ್ಣವಾಗಿ ಬೆಡಂಗುವಡೆಯೆ ತಿಂಬಿಯುಂ ; ಚಂದನತಿಳಕೆಯೆಂಬಳ್ ಚಂದನದ ಪಲ್ಲವದ ವಂದನವಾಳಿಗಳನಂದಂಬಡೆಯೆ ಸಂದಣಿಸಿ ಕಣ್ಗೊಳಿಸೆ ಸಂಗಳಿಸಿಯುಂ ; ಪ್ರಭಾವತಿಯೆಂಬಳ್ ಮದನಮಂದಿರದ ಮಣಿದೀಪಮಾಳಿಕೆಯಂ ಪ್ರಭಾವಿಸಿಯುಂ ; ಪುಷ್ಪವಾಳಿಕೆಯೆಂಬಳ್ ಪಲತೆಱದಲರ ಪಸದನಂಗಳಂ ಪೊಸೆಯಿಸಿಯುಂ ; ತವಾಳಿಕೆಯೆಂಬಳ್ ಮಾಲ್ಯಾನುಲೇಪನಂಗಳನಳವಡಿಸಿಯುಂ ; ಸುಗಂಧಕಳಿಕೆಯೆಂಬಳ್ ಸುರುಚಿರಕಾಳಾಗರುಧೂಪಕಳಿಕೆಗಳನಗೆಯೆತ್ತಿಯಂ ; ಅಮೃತವತಿಯೆಂಬಳಾರೋಗಣೆಯ ಭೋಜನಮಂ ಕ್ರಮದೆ ಸಮಕೊಳಿಸಿಯುಂ ; ಚಂದ್ರಿಕೆಯೆಂಬಳಿಂದುಕಾಂತಕರಕಂಗಳಂ ನಯನಕಾಮುದಿಯಿಂದಮಳವಾರಿಯುಂ ಪೂರಿಸಿಯುಂ ; ತಾಂಬೂಳಿಕೆಯೆಂಬಳ್ ಕರ್ಪೂರದ ವೀಳೆಯಂಗಳನೋಳಿಗೊಳಿ ಮೇಳಿಸಿಯುಂ ; ನಿಪುಣಿಕೆಯೆಂಬಳ್ ನಿರುಪಮದೇವಾರ್ಚನೋಪಕರಣಂಗಳಂ ನಿರ್ಮಳಿಕೆಯಿಂ ಮಾಡಿಯುಮಿಂತೊಳಗಣ ಹೊಱಗಣ ಕೆಲಸಂಗಳಂ ದೇವಿಯ ಕಣ್ಣಱದು ಮನ ಮುಱಿದವರಕಾಂತೆಯರೆಡೆವಿಡದಱುದಿಂಗಳ್ ಲೀಲೆಯಿಂದೋಲಗಿಸುತ್ತುಮಿರೆಯುಮದಲ್ಲದೆಯುಂ—

ದಿವಿಜಾರಾಧ್ಯಜಿನಾರ್ಚಕಾವತರಣಕ್ಕತ್ಯಂತಯೋಗ್ಯಂ ದಲ ।
ಪ್ಪವೊಲೋರಂದದೆ ಗರ್ಭಶೋಧನಮನಾದಂ ಮಾಡೆ ಸಂಶುದ್ಧವ ॥

ಸ್ತುವಿತಾಸಂಗಳನಾಸುರಾಂಗನೆಯರಾಗಳ್ದೀವಿ ಪೀಯೂಷದಿಂ ।
ದವಣಂ ಕ್ಷಾಲಿಸಿದಿಂದುಲೇಖೆಯ ವಿಳಾಸಂಬೆತ್ತು ಕಣ್ಗೊಪ್ಪಿದಳ್ ॥೬೩॥

ದಿವಿಜಾಂಗನೆಯರ್ಸಲೆ ದಿ ।
ವ್ಯವಸ್ತುವಿಂ ಗರ್ಭಶೋಧನಂಗೆಯ್ಯಲ್ದೊಡೀ ॥
ಪವಿದೂರಮಾಗಿ ಪುಣ್ಯಾ ।
ರ್ಣವದೊಳ್ನಿಗಟ್ಟಿದಮಳಲಕ್ಷ್ಮಿಯೊಲ್ಸತಿಯೆಸೆದಳ್ ॥೬೪॥

ವ॥ ಇಂತು ವಿಶುದ್ಧವೃತ್ತಿ ಸಿದ್ಧಿವೆತ್ತು ನಿರ್ಮಳತೆ ನಿಜಮಾಗಿ ವರೇಣ್ಯಾಗಣ್ಯದೇವತೆ ಸನ್ನಿದಮಾದಂತೆ ವನಿತಾರತ್ನಮಪ್ಪೈರಾದೇವಿ ವಿರಾಜಿಸುತಿರ್ಪುದುಮತ್ತಲ್—

ಬರಲಿಪ್ಪೆನ್ನಂದಮಂ ಮುನ್ನಮೆಯಱಿದಱುದಿಂಗಳ್ವರಂ ರತ್ನವರ್ಷಾ ।
ಕರಮುಂ ತತ್ಪೌರದೊಳ್ತಾಂ ಕಱುಕಿಯಿಸಿದನೆನುತ್ತುಂ ಸುರೇಂದ್ರಾಂಗೆ ಮೆಚ್ಚುತ್ತಿರದಾಸರ್ವಾರ್ಥಸಿದ್ಧೀಶ್ವರಪದವಿಯಿನಿಂತುರ್ವಿಗೇಱ್ತಿರ್ಪ್ಪುದಂ ನಿ ।
ರ್ಭರದಿಂ ತ್ರಿಜ್ಞಾನತೇಜೋನಿಧಿ ನೆನೆದನದಂ ಸೂಕ್ತಿಸಂದರ್ಭಗರ್ಭಂ ॥

ಗದ್ಯ॥ ಇದು ವಿನಮದಮರೇಂದ್ರವರ್ಣಿಳಿಮಣಿಕಿರಣಮಾಳಾಪರಾಗಪರಿರಂಜಿತಚರಣಸರಸೀರುಹರಾಜಿತಪರಮಜಿನರಾಜಸಮಯ ಸಮುದಿತಸದಮಲಾಗಮಸುಧಾಶರಧಿಶರದಿಂದು ಶ್ರೀಮೂಘಣಂದಿಪಂಡಿತಮುನೀಶ್ವರ ಮನೋಜನಿತನಿರುಪಮದಯಾರಸಸರಸೀಸಂಭೂತಸಂಭವಾಮಳ ಸುಕವಿ ಕಮಲಭವ ವಿರಂಚಿತಮಪ್ಪ

ಶಾಂತೀಶ್ವರ ಪುರಾಣದೊಳ್

ಮೇಳ್ಗಿರಥಮಹಾರಾಜಚರಿತಸರ್ವಾರ್ಥಸಿದ್ಧೀಶ್ವರಾವತರಣವರ್ಣನಂ

ತ್ರಯೋದಶಾಶ್ವಾಸಂ ಸಂಪೂರ್ಣಂ.

ಚತುರ್ದಶಾಶ್ವಾಸಂ.

ಶ್ರಿಮದನವಧಿಸುಖಾಮರ ।
ಧಾಮದಿನೀಧರೆಗೆ ವರಲಕ್ಷಣಂ ಬಗೆದಿರ್ದಂ ॥
ಪ್ರೇಮದಿನಗಣ್ಯಸುಚರಿತ ।
ಸೀಮಂ ಜಿನಪದಪಯೋಜ ರಾಜಮರಾಳಂ ॥೧॥

ವ॥ ಅಂತಿಪ್ಪುದುಮಿತ್ತಲಾವಿಶ್ವಸೇನಮಹಾರಾಜಂ ವಿರಾಜಿಸುತುಮ
ಖಿಳರಾಜ್ಯಸುಖದೊಳಿರೆಯುಮೊಂದುದಿನದೊಳ್—

ಫಲಮುದಯಿಪ ಕಲ್ಪಲತಿಕೆ ।
ಗಲರೊಗೆವಂದದೆ ಜಿನಾರ್ಚ್ಚಕಂ ಜನಿಯಿಪ ನಿ ।
ರ್ಮಳಗಾನೃಪಸತಿಗಾದುದು ॥
ನಿಳಂಪವನಿತಾನುರಾಗಮಯಋತುಸಮಯಂ ॥೨॥

ವ॥ ಇಂತು ಸಮನಿಸಿದ ಋತುಸಮಯದೊಳ್ಸಿಳಿವಿಡಿದು ನಿರಾಳಂಕಾ
ರೆಯಾಗಿರ್ದೈರಾದೇವಿಯಂ ದಿವಿಜಯುವತಿಯನೋರ್ವಡಿ—

ರನ್ನದ ರಯ್ಯಮನ್ಪೆ ತೊಡವಂ ತುಡದುಣ್ಮುವ ಮೆಯ್ಯ ಚೆಲ್ವು ತಾ ।
ನುನ್ನತಿವೆತ್ತು ನೂರ್ಮಡಿಸುತಿರ್ದಪುದೀ ಋತುಕಾಲದೊಳ್ವಿಚೆ ॥
ತ್ರನ್ನೆಗಟ್ಟಿದೀನೃಪಾಂಗನೆಯ ಪುಣ್ಯಮಿದೆಂತುಟೊ ಪುಟ್ಟುವಂ ಜಿನಂ ।
ಸನ್ನುತನೆಂದು ಸಂತಸಮನಾಂತುದು ತತ್ಪುರಸೌದರೀಜನಂ ॥೩॥

ವ ॥ ಇಂತಮರಕಾಂತೆಯರ್ಸಂತಸದಿಂ ಕಲ್ಪಿಸುತ್ತಿರ್ಪುದುಮಾರ
ಮಣೀಶಿರೋಮಣಿಗೆ ಚತುರ್ಥದಿನಸವನಸಮಯಂ ಸಮನಿಸಿದಾಗಳ್—

ಕನಕಕಟಾಹಪೇಟಕದೊಳುಷ್ಣಮಯಾಮಳತೀರ್ಥವಾರಿಯಂ ।
ತನತನಗೆಯ್ದಿ ತೀವಿ ಘನಸಾರಸಮನ್ವಿತಮಪ್ಪ ಚಾರುಚಂ ॥

ದನವರಕುಂಕುಮಪಂಕಮನೊಲ್ವನಿತಂ ತೆರಳ್ದಮು ।
ತ್ತಿನ ಮಣಿಭಾಜನಬ್ಜದೊಳಕ್ಕಿದುದಾದಿನಿಜಾಂಗನಾಜನಂ ॥೪॥

ವ॥ ಆಗಳಾಸವನಸಮಯೋಚಿತವಸ್ತುಸಂಚಯಪರಿಕಳಿತಪಾಣಿಗಳಪ್ಪ ಗೀರ್ವಾಣರಮಣೀಜನಂ-ರಮಣೀಯಮಪ್ಪನಿಜಚರಣಮಣಿಮಂ । ಜೀರಸಂಜನಿತಮೃದುಮಧುರಝೃಂಕೃತಿರುತಿಗೆ ಮದಮುರಾಳಮಂಡಳಿ ಬಳಸಿಬರೆಯುಂ । ಮಿಱುಪ ಬಟ್ಟಲ್ಮಡಿಯ ನಱುಸುಯ್ಯ ಕಡುಗಂಪಿಂಗಲಂಪು ಮಿಕ್ಕು ಕವ್ವರೆಗೊಂಡು ಮುಂಡಳಿಸಿ ಬರ್ಪ ಮುಱಿದುಂಬಿಗಳ ಬಳಗಮಂ ಹೀಲಿದಳೆಯಂತೆ ಮೇಲೆ ಪೊಳೆವಳಿಗಳ ಕರ್ಪಂ ಕಪ್ಪಂಗೊಂಡಂತೆ ಬಿತ್ತರಿಪ ಬಟ್ಟಲ್ಮಡಿಗಳಂ ಬಳಾಹಕದ ಬಳಗಮೆಂದು ಬಟ್ಟಿಗೊಂಡು ಮೊಗಮಂ ನೆಗಪಿ ನಲವು ನೆಲೆವೆರ್ಚಿ ಕ್ಷುಣಿಯುತ್ತುಮೊಡವರ್ಪ ಭವನಬಾಳಕಮುಯೂರಜಾಳಂಗಳುಂ। ಮಿಸುಪ ನಸುಗೆಂಪುವೋಲೆಸೆವ ದಶನಂಗಳ ಪೊಱಪೊಣ್ಮುವ ಬಾಯ್ದೆಱೆಗಳಂ ಬಿತ್ತುಗಾಣೆ ಬಿರಿದ ದಾಳಿಂಬದ ಪಣ್ಗಳೆಂದು ಕಣ್ಗೊಂಡು ಕಿರ್ಕಿರೆನುತ್ತುಮೆಱಗಿ ತಱುಗಿ ಬರ್ಪ ದೀವದ ಮುಱಿಗಿಳಿಗಳುಂ । ತೊಳಪ ನಗೆವೊಗದ ಪೊಳಪು ತಳತಳಿಸಲಂತುಮಿಂತು ನೋಡುವ ಮಧುರಾವಳೋಕನವಿಳಾಸಮಂ ನೀಡುಂ ನೋಡಿ ನಿಜಜಾತಿಶಂಕೆಯಿಂದೆಳಸಿ ಬರ್ಪ ಮಂದಿರದ ಮೃಗಶಾಬಕಂಗಳುಂ। ತದೀಯ ಕ್ರಿಯಾತುರತೆಯೊಳ್ತಮತನುಗೆ ತವ್ಮೊಳೊರ್ವರೊರ್ವರಂ ಕರೆವ ಕಳಕಳದ ಕಳನಿನಾದಮುಂ ಸ್ವಕೀಯಪಿಕಪ್ರಣಾದಮೆಂಬ ಸಂದೆಗದೊಳೊಂದಿ ಮರುಳ್ಗೊಳ್ವ ಮುಱಿಗೋಗಿಲೆಗಳುಂ । ಬಿತ್ತರಿಸಿ ಜೆತ್ತಭವಂ ಬಲಂಬೆರಸು ಬಹಳಾಟೋಪದಿಂ ಬರ್ಪ ಭಂಗಿ ಸಂಗೊಳಿಸಿ ಕಣ್ಗೊಳಿಸುತುಂ ಬಂದುದೆಂದಿಂದು ಕಾಂತಕೃತಕಮನೀಯಮಜ್ಜನಮಂದಿರಮಂ ಪೊಕ್ಕು ವಿರಾಜಿಸುವೈರಾದೇವಿಯಂ ಪೊಳೆವ ಪಳಕಿನ ವಿಳಸದಭಿಸವನವಿಷ್ಟರೋಪಯರ್ಯುಪವಿಷ್ಟೆಯಂ ಮಾಡಿ—

ಉಗುರಿಕ್ಕಿ ಟಿಕ್ಕಿ ಸೊಗಯಿಪ ।
ಸುಗಂಧತೈಲದೆ ಸುಕೇಶಪಾಕಮನೆನಸುಂ ॥

ಮಿಗೆ ಮುಸ್ಯಣನೂಗೆ ತೊಡೆದರ್ |
ಮೃಗನೇತ್ರೆಯ ಗಾತ್ರಲತೆಯೊಳಮರಾಂಗನೆಯರ್ ॥೫॥

ಕೊಡಕೆಗೆ ಸಾರ್ಜಿ ಕೆನ್ನೆಯುಳಕಂಗಳನೆತ್ತಿ ಕುಚೋರುಹಾರಮಂ |
ಮುಡುಪಿನ ಪಿಂದಣಕ್ಕೆಱಪಿ ಕಂಕಣಮಂ ಪಿಡಿದೇಱಿ ನೂಂಕಿ ಕಾ ॥
ಲ್ತೊಡರ್ದಪುದೆಂದು ಸೆಕ್ಕಿ ನಿಱಿಯಂ ಕಟಸೂತ್ರದೊಳಾಲತಾಂಗಿಗಿಂ |
ತೊಡರಿಸಿದರ್ತದೀಯಸವನಕ್ರಿಯೆಯಂ ಸಲೆ ದೇವಕಾಂತೆಯರ್ ॥೬॥

ವ॥ ಆಗಳಮರಿಯರ್ತಮತಮಗೆ ವಿಮಳಕಮನೀಯಕನಕಕಳಶಂ
ಗಳೊಳ್ಸುರತರಂಗಿಣೀಸುರಭಿಸಲಿಲಮಂ ತೀವಿ ತಳೆದು—

ಕನಕಕಳಶಂ [1][ನೀಜೋರು[1]] |
ಸ್ತನಕಳಶದ ತೊಣೆಯಿದೆಂದು ನೋಲ್ಪಂತಮರಾಂ ॥
ಗನೆಯುರ್ಕುಚಕಲಶದ ಮೇ |
ಲನುನಯದಿಂ ಕನಕಕಳಶಮಂ ತಳೆದೆಸೆದರ್ ॥೭॥

ಅಲರ ಪೊದಱಿಕ್ಕೆವೆತ್ತರುಣಪಲ್ಲವಪೂರಿತಮಾದುವೆಂಬಿನಂ |
ಲಲಿತನಖಪ್ರಭಾಲುಳಿತಪಾಣಿತಳಾತುಳಶೋಣಕಾಂತಿಸ ||
ಮ್ಮಿಳಿತಸುವರ್ಣಪೂರ್ಣಕಳಶಂಗಳನೆತ್ತಿ ಮರುತ್ತನೂದರೀ |
ಕುಳಮಮಳಾಂಬುವಂ ಸುರಿಯುತಿರ್ದುದು ದೇವಿಯ ಮೇಲೆ ಲೀಲೆಯಿಂ ||

ವಿಮಳಾಮೃತರುಜೆಲೇಖಾ |
ರಮೆಗಭಿಷವಮಂ ಸು[2]ಧಾಂ[2]ಬುವಿಂ ಮಾಳ್ಪವೊಲಾ ||
ರಮಣಿಗೆ ಮಾಡಿದ [3][ರಣಿಯೆರ |
ಮುಮರ][3]ನದೀಕುಭತರಾಂಬುವಿಂದಭಿಷವಮಂ ॥೮॥

ಜನಶಿಕುಸಂಭವಿಸುವನೆಂ |
ಬನುರಾಗಂ ಪೊಣ್ಮಿದತ್ತು ದೇವಿಯ ತನುವಿಂ ||
ದೆನೆ-ಸುರಿದರ್ಸುರತರುಣಿಯ |
ರಸುಧಾಗಂ ನಿಮಿರೆ ನಿಮಿರ್ದು ಕುಂಕುಮಜಳಮಂ ॥೧೦॥

ಪಾ—1. ನಿರೋರು. 2 ರಾ. 3. ರಮಣಿಯರಮರ.

ವರಮಲ್ಲೀಲತೆಗಳ್ಪೊದೞ್ದಿ ಮುಕರಂದಾಸಾರಪುಷ್ಪಮುಂ ।
ಜರಿಯಿಂದಾ ವನದೇವಿಗೆತ್ತಿ ಸುರಿವಂತಾನಂದದಿಂ ದೇವಸೌಂ ॥
ದರದೇವಿಯು ಶೀರ್ಷದೊಳ್ಸುರಿದರಿಂತೋರಂದದಿಂ ಸ್ಫಾಟಿಕ ।
ಸ್ಫುರಿತಾಂಭಃಕಳಶಂಗಳಿಂ ಮಳಯಜೋತ್ಕರ್ಪೂರಪೂರಾಂಬುವಂ ॥೧೧॥

ವ ॥ ಇಂತಮರಾಂಗನೆಯರ್ಮಂಗಳಸವನಕ್ರಿಯಾನಂತರಂ ಮಣಿಮಯಪಾದುಕಾದ್ವಯಮುಂ ಸಾರ್ಚಿ ತತ್ಸಮಯೋಚಿತಾಂಬರಪರಿಧಾನೆಯುಂ ಮಾಡಿದಾಗಳ್—

ಇದು ಸುಕೃತಶಲಾಕೆ ಸಮಂ ।
ತಿದು ಭುವನತ್ರಯದಗಣ್ಯಪುಣ್ಯಾಂಕುರಮಿಂ ॥
ತಿದು ಮಂಗಳವಲ್ಲರಿಯೆನಿ ।
ಸಿದುದೈರಾದೇವಿಯಮಳಕಮನಾಕಾರಂ ॥೧೨॥

ವ॥ ಆಗಳಿಂದುಲೇಖಾಲಕ್ಷ್ಮ್ಯಯ ಓಲಿವಿಡಿದು ಒರ್ವ ತಾರಾಗಣಂಗಳಂತೆ ನೃಪಕಾಂತೆಯ ಒಲಿವಿಡಿದು ಸುರಕಾಂತೆಯಭ್ರೂಪಣಾವಾಸಕ್ಕೆ ಬಿಜಯಂಗೆಯ್ಸಿ ತಂದು ಸಾರ್ಚಿದ ಪಳಕಿನ ಪಟ್ಟವಶೆಯ ಮೆಟ್ಟ ನಿಂದಿರ್ದಾಪದದೊಳ್—

ಅಮೃತಾರ್ಣವದಿಂ ಪೊಱಮ ।
ಟ್ಟಮಳಸುಧಾಕಿರಣಲೇಖೆಯಿಂ ತೊಡೆವಂ ॥
ತಮರೀತತಿ ತೊಡೆದುದು ನೃಪ ।
ರಮಣಿಯು ಮೆಯ್ಯಿರ್ದನೆಸೆವ ಮಸೃಣಾಂಶುಕದಿಂ ॥೧೩॥

ತೊಡೆಯ ಸುಗಂಧಬಂಧುರವಿಲೇಪನಮಂ ಲಲಿತಾಂಗದೊಳ್ಸಮಂ ।
ತುಡಿಸಿ ದುಕೂಲಚೇಲಮನುದಂಚಿತವಸ್ತ್ರಕಮಂಡನಂಗಳಂ ॥
ತುಡಿಸಿ ನವೀನದಿವ್ಯಕುಸುಮಂಗಳನೊಪ್ಪಿರೆ ಕೇಶಪಾಶದೊಳ್ ।
ಮುಡಿಸಿ ಸುರಾಂಗನಾಜನವಲಂಕೃತಿಗೆಯ್ದುದಿಳೀಶಕಾಂತೆಯಂ ॥೧೪॥

ಸ್ಮರಪರಮೇಷ್ಠಿ ನಿರ್ಮಿಸಿದನೋ ಶರದ್ದೈವದಸಾಂದ್ರಚಂದ್ರಿಕಾ ।
ಸುರುಚಿರಕಾಂತಿಯಿಂದೆ ಸುರಸಿಂಧುವ ವೇಸನವೀಸದೀಪ್ತಿಮಂ ॥

ಹರಿಯೊದವಿಂದೆ ರಂಜಿಸಿದನೋ ನವನವೋಕ್ತಿಕರೋಜೆಯಿಂದೆ ಬಿ ।
ತ್ತರಿಸಿದನೋ ಸಮಂತೆನೆ ವಿರಾಜಿಸುತಿರ್ದುದು ರೂಪು ಕಾಂತೆಯಾ ॥೧೫॥

ಪ್ರಜೃಂಭಿಗರ್ಜಿದ ಪಳಿಕಿನ ಪು ।
ತ್ತಳಿ ಕಪ್ಪುರದೊಪ್ಪ ಸಲಗೆಯಿಂ ಖನಿಮಿನುಕಂ ॥
ತಳೆದಂತಿರೆ ಪರಿಜಂ ಕ ।
ಣ್ಗೊಳಿಸಿದುದಾಕಾಂತೆ ತಳೆದ ಬೆಳ್ವಸದನದೊಳ್ ॥೧೬॥

ಅಲರ ವತಂಸದುಜ್ಜ್ವಳಿಕೆ ಕೊರ್ವಿತು ನವೋಕ್ತಿಕರೋಜೆಯಿಂ ಮುಖಾ ।
ಮಳರುಚೆ ನೀಳ್ದುದುರ್ವಿ ಸುಲಿಪಲ್ಗಳ ಸುಣ್ಬೆಳಗಿಂ ಮಡಲ್ತುದಾ ॥
ಲಲಿತದುಕೂಲದೊಳ್ನಖ[1]ಸಖೋ[1]ನ್ಮುಖದೀಧಿತಿಯಿಂ ತನುಪ್ರಭಾ ।
ಕುಳಮೆ ಪಟಚ್ಛನಾಯ್ತು ನವನವೋಕ್ತಿಕಮಂಡನಕಾಂತಿ ಕಾಂತೆಯಾ ॥೧೭॥

ಎಸಕದ ಬೆಳ್ವಸದನದಿಂ ।
ಪೊಸಜೋನ್ನ ಸರೂಪುಗೊಂಡಂತಿರೆ ಮೋ ॥
ಹಿಸುತುಂ ವಿಳಸ[2]ದಿ[2]ಲಾಲಪ ।
ಗತಿ ಪೊಸಮಟ್ಟಳರಿಸಿ ಭೂಷಣಗೃಹಮಂ ॥೧೮॥

ವ॥ ಇಂತು ನೇಪಥ್ಯನಿಳಯಮಂ ಪೊಕ್ಕನುಟ್ಟು ರಾಜಹಂಸನಲ್ಲಿಗೇ ಟ್ಟಿಪ್ಪ ಮರಾಳವಿಳಾಸಮಂ ನೆನೆಯಿಸುತ್ತುಮ್ಮೆ ರಾದೇವಿಯರ್ಬಳಸಿ ಬರೆ ಬಂದು ಕನತ್ಕನಕ ಪರ್ಯಂಕಪರಿಖಚಿತಮುಚಿರಮಣಿಗಣಪರಿಕರಪ್ರತಿಬಿಂ ಬಾಳಂಬದಿನಿಂದ್ರಚಾಪವ್ರಂದಮನೀಂಬವೆಂಬಂತಿರೆಸೆದು ಪೊಳೆವ ಪಳಿಕಿನ ಭಿತ್ತಿಬಾ[3]ತವಿಸ್ತಾರಿತಮುಂ । ಪರಿಪಿದ ನವ್ಯದಿವ್ಯಕುಸುಮಕುಟ್ಮಳಂಗಳ ಪರಿಮಳಕ್ಕೆಜಗುವ ಪಱಮೆಗಳ್ಮಱುಗುವ ತಮ್ಮ ತನುವಿನ ಮಾಪ್ಪೊಳಪು ತುಂಬಿವೆಣ್ಣೆಂಬ ಶಂಕಾಸಕ್ತಿಯಿಂದೆಱಗಿ ಸಂಗಸುಖಂ ಸಂಗಳಿಸದೆ ಪೇಸಾ ರುತಿರ್ಪವರ ಮರುಳ್ತನಕ್ಕೆ ಮುಗಳ್ನಗುವಂತೆ ಬೆಳ್ವಿಳಗನುಗುಳ್ವ ಶಶಿಕಾಂ ತಘುಟಿತಕುಟ್ಟಿಮತಳವಿಳಸಿತಮುಂ। ಕುಸುಮಶರನ ಕೂರಸಿಯ ಕರ್ಬೊ ಗರ ಪುರ್ವಿದೆಂಬ ಸಂದೆಗವನೊಂದಿಸಿ ರತಿರುಚಿಯನಗೆಯಿತ್ತುವ ರುಚಿರ ಕನಕರಜಿತೋದ್ದಾಮಧೂಮಘಟಪಟಳಮುಖದಿನೊಗೆವ ಸವಕಾಳಾಗ ರುಧೂಮಸಮಾಜೋತ್ಕೀರ್ಣಶ್ಯಾಮಳಿತಮುಂ । ಕನಕಕಮನೀಯಪ್ರಪ್ರಪ

ಪಾ—1. ನಭೋ. 2. ವಿ

ಟಿಳಕಂಗಳ ಸುರುಚಿರಮರೀಚಿನಿಚಯಂ ಪ್ರಸವರೂಪವಾದಂತೆಸೆವ ನವ
ಚಂಪಕಪ್ರಸೂನಸಂತಾನವರಸೌರಭ್ಯಸಮುತ್ಕೀರ್ಣಮುಂ, ಪರಮಹಿಮಪ
ರಿಮಳಪರಿಕಳಿತಮಳಯರುಹಪಂಕಪರಿಪೂರ್ಣ ನಿರ್ಗಿಕ್ತಸುವ್ಯಕ್ತಸಕ್ತಿ ರುಹ
ಸುತ್ತಿ ಕಾನಿಕಾಯಸಮಾವೃತಶೋಭಾಯಮಾನಮುಂ । ಸ್ವಕೀಯಸಂಭವ
ಸುಕಾಂತಿಸಂಚಯಾಚ್ಛಾದಿತದಿವ್ಯಪರಿಮಳೋದ್ಗಾರಿಕಸ್ತೂರಿಕಾವಕಿಳಕಳಿತ
ಹರಿನೀಳವಿಶಾಳಭಾಜನಬ್ರಜವಿಭ್ರಾಜಿತಮುಂ । ಮಸೃಣತರಘುಸೃಣಜಂ
ಬಾಳಪರಿಧೃತಾಕೂಣಶೋಣಮಣಿಪಾತಪರಿಕರಪ್ರಭಾಭರಿತಭಾಸುರಮುಂ।
ಕಂತುವಿನ ಕೂರಲಗಿದೆಂಬ ವಿಡಂಬಕ್ಕೆ ಪಕ್ಕಾಡ ನೂತನಕನಕಕೇತಕೀದ
ಳಂಗಳ ಚೆಲ್ವನೀಡ್ದಿಕೊಂಡಂತೆ ನೀಳ್ದಿಸೆವ ನಾಗವಲ್ಲೀದಳಾವೃತರಜತ
ಘಟಿಕಾವಳೀರಮಣೀಯಮುಂ, ಪೊಳೆವಮಳಶಶಿಕಳಾಸಕಲನಿಕರಾಯಕಾ
ರಿಯಪ್ಪ ಕಪ್ಪುರವಳಿಕಿನ ಬಳಗಂ ತೆಕ್ಕನೆ ತೀವಿದಂತೆ ಚಂದ್ರೋಪಳಚಪಕ
ಚಯಕಮನೀಯಮುಂ, ಪರಮಜಿನಜನನಿಯಪ್ಪಗಣ್ಯಪುಣ್ಯವತಿಯರಿನ್ನರ
ನ್ಯರಾರೆಂದೈರಾದೇವಿಯುಂ ತವೆ ನೋಡಲ್ಕೆ ನಾಡೆಯುಂ ತದೀಯಾವಾಸದಧಿ
ದೇವತೆ ಕಣ್ಬಡೆದಳೆಂಬಂತೆ ಪಳಕಿನ ಭಿತ್ತಿಗಳೊಳ್ಮಾರ್ಪೊಳೆವ ಮಣಿದೀಪಿ
ಕಾವಳಿಮನೋಹರಮುಂ । ಸುರತಕೇಳೀಪ್ರಭಾವಕಾರಣಲಲಿತಲಾವಕ
ಪುರಿಳಪಾರಾವತಮಯೂರಮುರಾಳಜಾಳಕುಹರಣಕ್ವಣನಮಯಮಾಗಿ ರ
ಯ್ಯಮಪ್ಪ ಶಯ್ಯಾಸದನದೊಳ್ ಧವಳದುಕೂಲಪ್ರಚ್ಛದಾಚ್ಛಾದಿತದಿನೆಸೆದು
ತರಂಗಿಣಿಯ ಭಂಗಿಯನನುಕರಿಸಿ ಕಣ್ಮೊಳಪ ಮಂಚದೊಳ್ ಮಲಗಿತಮಾಗಿ
ರ್ದ ವಿಶ್ವಸೇನಮಹಾರಾಜನ ಸೂಚಿಸಿ ಬಂದ ನೃಪಸೌಂದರಿ ಕಂದರ್ಪಸಂ
ದೋಹಸಂತುಷ್ಟಿಯಂ ಪಡೆದು ಸುಖಸುಪ್ತಿಯೊಳಿರುತ್ತುಮರಸಿ ಭಾದ್ರಪ
ದ ಬಹುಳ ಸಪ್ತಮಿಯ ಬೆಳಗಪ್ಪ ಜಾವದೊಳ್ ಭರಣಿನಕ್ಷತ್ರದೊಳ್
ಷೋಡಶಶುಭಸ್ವಪ್ನಂಗಳಂ ಕಂಡಾಗಳ್—

ಒದವಿದ ಮುಂಗಳ ಪಾಠಕ

ಮೃದುರವದಿಂ ದಿವಿಜಗಾಯಕೀಗೇಯನಿನಾ ॥
ದದಿನೋಕಶ್ಯಕಾನಿಗಳುಲಿ ।
ಪದಿನುಪ್ಪವಡಿಸಿದಳರಸಿ ನೃಪನೊಡನಾಗಳ್ ॥೧೯॥

ತಮತಮಗಮರಸ್ತ್ರೀತತಿ ।
ಸಮಯಂಬಾರ್ದಿರ್ದುದು ಸಾರ್ಜೆ ಪಾವುಗೆಯುಂ ವಿ ॥
ಭ್ರಮದಿಂ ಕೈಗೊಟ್ಟರಸಿಗೆ ।
ಚಮರಮನಿಕ್ಕಿದುದು ಮುಂಕದಿಂದಿಱೆ ವೆಡೆಯೊಳ್ ॥೦೦॥

ವ॥ ಆರಯ್ಯಮಪ್ಪ ಶಯ್ಯಾಸನದಿಂ ಸುದತೀರತ್ನಮಪ್ಪೈರಾದೇವಿಯಿಂತು ಪೊಱಮಟ್ಟು ನೆಟ್ಟನೆ ನಿಖಿಳವಿಭಾತಕೃತ್ಯಾತುರತೆಯಿಂ ಕೃತಸ್ನಾನೆ ತಾನಾಗಿ--

ಕನಕೋತ್ತುಂಗವಿಜೈತ್ರಚೈತ್ಯನಿಳಯಕ್ಕೇಱ್ತಂದು ಸಾನಂದದಿಂ ।
ದನಘಶ್ರೀಜಿನರಾಜರಾಜಿತಪದಾಂಭೋಜಂಗಳಂ ಪೂಜೆಗೆ ॥
ಯ್ದು ನತಾಸ್ಯಾಂಬುಜೆಯಾಗಿ ಭಕ್ತಿಭರದಿಂ ಶೇಷಾಪ್ರಸೂನಪ್ರಸಾ ।
ದನಸಂಪತ್ತಿಗೆ ಪಕ್ಕವಾಡಿ ಮುಡಿಯಂ ತತ್ಕಾಂತೆ ಕಣ್ಗೊಪ್ಪಿದಳ್ ॥೦೧॥

ವ॥ ಆಜಿನೇಂದ್ರಮಂದಿರದಿಂ ಸುರಪುರಂಧ್ರಿಯರ್ವೆರಸರಸಿ ಪೊಱಮಟ್ಟಾಗಳ್.

ಸುರಕಾಂತಾಕೇಕರಾಂಶುಪ್ರಸರದ ಪೊಸವೆಳ್ದಿಂಗಳೊಳ್ಪಾರುತಾರಾ ।
ವರಲೇಖಾಲಕ್ಷ್ಮಿಯೆಂಬಂತೆವೊಲೆಸೆದು ಚಳಚ್ಚಾಮರಚ್ಛಾಯೆಯೊಳ್ಪ್ಪ ॥
ತ್ತರಿಸುತ್ತುಂ ನೂಪುರಾರಾವದಿನತನುಧನುರ್ಜ್ಯಾಮೃದುಧ್ವಾನಮುಂ ವಾಂ ।
ಕರಿಸುತ್ತುಂ ಬಂದಳಾನಂದದಿನರಸಿ ನಿಜಾಧೀಶನಾಸ್ಥಾನಕಾಗಳ್ ॥೦೨॥

ವ ॥ ಇಂತು ಬಂದಗ್ರಮಹಿಷಿಯಪ್ಪೈರಾದೇವಿಯುಂ ವಿಶ್ವಸೇನ ಮಹಾರಾಜಂ ರಾಜಿಸುವ ನಿಜಾಸನನವ್ಯಸವ್ಯಾರ್ಧಾಸನಾಳಂಕಾರೆಯುಂ ವಾಡಿ ಮೊಗಮುಂ ನೋಡಿದಾಗಳ —

ಪದಿನಾಱುಂ ಕನಸುಗಳಂ ।
ಪದೆಪಿಂ ಬೆಳಗಪ್ಪ ಜಾವದೊಳ್ಸತಿ ತಾಂ ಕಂ ॥
ಡುದನೆಯ್ದೆ ಪೇೞ್ದುದನೊಡ ।
ರ್ಚ್ದಳಂತಾವಿಶ್ವಸೇನನೃಪತಿಗೆ ನಲವಿಂ ॥೦೩॥

ವ॥ ಅದೆಂತೆಂದೊಡೆ—

ದಿವಿಜಾಧೀಶದ್ವಿಪೇಂದ್ರಂ ವೃಷಭರಿಪು ಶ್ರೀಲಸನ್ಮಾಲೆ ಚಂದ್ರಂ ।
ರವಿ ಮಿಾನಂ ಪೂರ್ಣಕುಂಭಂ ಕೊಳನಮೃತಪಯೋರಾಶಿ ಸಿಂಹಾಸನಂ ಶ॥
ಕ್ರವಿಮಾನಂ ನಾಗಸದ್ಮಂ ವಿಮಳಮಣಿಸಮೂಹಂ ವಿಧೂಮಾಗ್ನಿಯಿಂದಿಂ ।
ತಿವನಾಂ ಸ್ವಪ್ನಂಗಳೀರೆಂಟುಮನೆಸಕದುಷಃಕಾಲದೊಳ್ದೇವ ಕಂಡೆಂ ॥೨೪॥

ವ॥ ಮತ್ತಮಾಪದದೊಳ್—

ಶರದಿಂದುರೋಜೆಯುಂ ಮಾಂ ।
ಕರಿಸುವ ದಿವಿಜದ್ವಿಪೇಂದ್ರಮೆನ್ನಯ ವದನೋ ॥
ದರಗತಮದಾದುದೆಂದಾ ।
ಧರಣೀಶಂಗರಸಿ ಪೇೞ್ದಿಳನಿತಂ ಕ್ರಮದಿಂ ॥೨೫॥

ಎನೆ ಕೇೞ್ದರಸಂ ತ್ರಿಭುವನ ।
ವಿನುತಜಿನಂ ನಿನಗೆ ತನಯನಪ್ಪನೆಸಲ್ತಾ ॥
ನಸುಪಮಮುದಮಂ ತಳೆದಳ್ ।
ತನುವೆನಸುಂ ತಳೆಯೆ ಪುಳಕಕುಟ್ಮಳಕುಳವಮಂ ॥೨೬॥

ವ॥ ಆಗಳೆನಿತಾನುಂ ಮುದಮನಪ್ಪುಕೆಯ್ದುವಸೀವಲ್ಲಭಂ ತದೀಯ ಶುಭಸ್ವಪ್ನಫಲವೃಂದಮನಿಂತೆಂದಂ:—

ಪಿರಿದಾನುಂ ದಾನಿ ಧರ್ಮಾನ್ವಿತನತುಳಬಳಂ ಶ್ರೀವರಂ ಭೂಮಿಭೃತ್ಯೇ।
ಶರನಂಚತ್ಕೀರ್ತಿ ತೇಜೋಧಿಕನನಿಮಿಷವಂದ್ಯಂ ಗುಣೋತ್ಪೂರಿತಂ ಸ ॥
ಚ್ಚರಿತಾವಾಸಂ ಗಭೀರಂ ತ್ರಿಭುವನವಿಭು ಸನ್ಮಾನಿ ಸದ್ಯೋಗಿ ಮಾಂಗ ।
ಲ್ಯರಮಾರಮ್ಯೋತ್ಕರಂ ಬೋಧದ ನಿಧಿಯೆನಿಪಂ ನಂದನಂ ತಪ್ಪದಪ್ಪಂ ॥

ನಂದನನನುಪಮನುದಯಿಸು ।
ವಂ ದಿಟದಿಂ ನಮಗೆನಲ್ನೃಪಂ ತದ್ವಚನ ॥
ಕ್ಕಂದಾಗಳೆ ಸುತನಂ ಪಡೆ ।
ದಂದದೆ ಪರಮಾನುರಾಗಮಂ ಸತಿ ತಳೆದಳ್ ॥೨೮॥

ವ॥ ಅನ್ನೆಗಮಿತ್ತಲ್ ಮುನ್ನೆ ಪೇೞ್ದಿ ಮೇಘರಥಚರಾಹೆಮಿಂದ್ರಂ ನಿಜಾಯುರವಸಾನಮಪ್ಪುದುಮಾದಿವಿಜಭವನದಿಂ ಬಂದೈರಾವತಾಖ್ಯತಿಯಿಂ

ದೈರಾದೇವಿಯ ಮುಖೇಂದುಬಿಂಬದಿಂ ಪೊಕ್ಕುದರಕ್ಕೈರವದೊಳ್ಪುರಂದರಪ್ರ
ಥಮಕಲ್ಯಾಣಪೂಜಾಪುರಸ್ಸರಮವತರಿಸಿದಾಗಳ್—

ನೆಲಸೆ ಜಗತ್ರಯೈಕಗುರುವಪ್ಪ ಜಿನಾರ್ಭಕನಾತ್ಮಗರ್ಭದೊ ।
ಳ್ನೆಲಸಿದುದಲ್ತೆ ಜೆತ್ತದೊಳತರ್ಕ್ಯತರಪ್ರಮದಂ ಲತಾಂಗದೊ ॥
ಳ್ನೆಲಸಿದುದೂರ್ಜಿತೋಜ್ವಳನಕಾಂತಿಯ ತಿಂತಿಣಿ ನೀಳ್ದಪಾಂಗದೊ ॥
ಳ್ನೆಲಸಿದುದಾವಗಂ ನಿಮಿರ್ದ* ನುಣ್ಬೆಳಗಾನರನಾಥಕಾಂತೆಯಾ ॥೦೯॥

ತನುವಿನ ಮಧ್ಯದೊಪ್ಪುವ ಕೃಶತ್ವಮಣಂ ಕಿಡದುಜ್ವಳಪ್ರಭಾ ।
ವಿನಿಹಿತಮಾಗಿ ತೋಱುವ ವಳತ್ರಿತಯಂ ಕಿಡದಾಬೃಹದ್ಘನ ॥
ಸ್ತನಯುಗಜೂಜುಕಚ್ಛವಿ ಲವಂ ಕಿಡದಂಗನೆಗಕ್ಷಯಾತ್ಮಕಂ ।
ಜಿನಶಿಶು ಪುಟ್ಟರಲ್ಪ ಕೃತಿವೆತ್ತೆಸೆದಿರ್ಪುದಿದಾವ ಕೌತುಕಂ ॥೧೦॥

ಭುವನತ್ರಯಕ್ಕೆ ಗುರುವೆನಿ ।
ಸುವ ಜಿನಶಿಶು ಗರ್ಭದಲ್ಲಿ ಸುಭವಿಸಿಯುವಾ ॥
ಯುವತಿಗೆ ಭರಶ್ರಮಂ ಸಂ ।
ಭವಿಸದು ತಾನೆಂದೊಡೆಂತಿದೇನಚ್ಚರಿಯೋ ॥೧೧॥

ಗತಿಯೊಳ್ಮಾಂದ್ಯಂ ಪುಟ್ಟದು ।
ಮತಿಯೊಳ್ಜಡವೃತ್ತಿ ಪ್ಪಗದು ನಿದ್ರಾಲಸ್ಯಂ ॥
ಸತಿಗೆ ಸವನಿಸದು ಭುವನ ।
ತ್ರಿತಯಾಧಿಪ ಜಿನಶಿಶೂದಯಂ ಜೆತ್ರತರಂ ॥೧೨॥

ಪ್ರಕೃತಿಸ್ವರೂಪದೊಳಾ ।
ಧಿಕಮೀಂ ಕಿಡಲೀಯದಂಬಿಕೆಯ ಗರ್ಭದೊಳಾ ॥
ಮುಕರಾಂಕವಿಜಯಜಿನಶಿಶು ।
ಮುಕುರದೊಳಮರಾಚಳೇಂದ್ರವಿರ್ಪಂತಿರ್ದಂ ॥೧೩॥

ಅನಿಮೇಷಾಂಗನೆಯರ್ನೃಪಾಂಗನೆಗನಿತ್ತುಂ ದಿವ್ಯಗಂಧಾನುಲೇ ।
ಪನನುಂ ದಿವ್ಯಮಣಿಪ್ರಜಾಭರಣಮುಂ ದಿವ್ಯಾಂಬರಬ್ರಾತಮುಂ ॥
ಡನವುಂ ದಿವ್ಯನವೀನಪುಷ್ಪಚಯಮುಂ ದಿವ್ಯಾನ್ನಮುಂ ದಿವ್ಯವ ।
ಸ್ತುನಿಕಾಯಂಗಳನಾದನೋಲಗಿಸುವರ್ನಿತ್ಯಂ ಮನೋಲೀಲೆಯಿಂ ॥೧೪॥

ವ॥ ಆಗರ್ಭದ ಜಿನಾರ್ಭಕನ ಲೇಶಾನುರೂಪಂಗಳಪ್ಪ ವಿಕುದ್ಧ ಭೋಗಂಗಳೊಡನೆ ಕಾಲಂ ಸಲುತ್ತುಮಂತಾಪರಿಪೂರ್ಣ ಪ್ರಸವಸಮಯಂ ಸಮನಿಸಿದಾಗಳ್—

ಧರೆಯೆಲ್ಲಂ ನೀರಜಂಬೆತ್ತುದು ಗಗನತಳಂ ಸ್ವಚ್ಛಮಾಯ್ತಬ್ಜಷಂಡೋ
ತ್ಕರಮಚ್ಛಾಂಭೋವಿಳಾಸಂಬಡೆದುದು ಮುನ್ನಂ ದಕ್ಷಿಣಾವರ್ತಮಾಯ್ತಾ ॥
ಮರುತಂ ಮಂದ್ರಪ್ರಚಾರಂ ಪುದಿದು ಸುಖದುದಾಶಾಮುಖಾಳಿ ಪ್ರಸನ್ನ ।
ಸ್ಫುರಿತಪ್ರದ್ಯೋತಮಾಯ್ತು ನ್ಮೆದುದಖಿಳಜಗಸ್ವಾಂತದೊಳ್ ಶಾಂತಭಾವಂ॥

ತುರಗಂಗಳ್ ಗಿಗಟ್ಟುತಿರ್ದುವು ಗಜಂಗಳ್ ಕೈಯೆತ್ತಿ ಬಿ ।
ತ್ತರಿಸುತ್ತಿರ್ದುವು ದೀವದಂಚೆ ನವಿಲೇಣಶ್ರೇಣಿ ಪಾರಾವತೋ ॥
ತ್ಕರಕೀರಾವಳಿ ಬಿಚ್ಚತಂ ನಲಿದುದಾದೇವಾನಕಧ್ವಾನಮುಂ ।
ಬರದೊಳ್ಪೂರ್ಣಿತು ಪುಷ್ಪವೃಷ್ಟಿ ಸಲೆ ಸೋರುತ್ತಿರ್ದುದೋರಂದದಿಂ ॥

ಪಿಂಗದೆ ಪಿರಿದಾನುಂ ಭುವ ।
ನಂಗಳೊಳಸೆವಾಚರಾಚರಂಗಳೊಳನಸುಂ॥
ಸಂಗಳಿಸುತ್ತಿರೆ ಶುಭಜೆ ।
ಪ್ನಂಗಳ್ಪಲವಂದದಿಂದಮಂತಾಪದದೊಳ್ ॥೩೭॥

ಸ್ತುತಿವೆತ್ತ ಜ್ಯೇಷ್ಠಬಹುಳದ ।
ಚತುರ್ದಶಿಯ ದಿವಸಮುಖದೊಳ್ಕೈರಾದೇವೀ ॥
ಸತಿಯುದರವದನದಿಂ ಸ ।
ನ್ನುತಬೋಧತ್ರಯರಮಾಧಿಪತಿ ಪೊಱಮಟ್ಟಂ ॥೩೮॥

ಭುವನತ್ರಯಭವನಕ್ಕೊ ।
ಪ್ಪುವ ಮಣಿದೀಪಿಕೆಯನೊಸೆದು ಪಡೆವಂತೆ ದಯಾ ॥
ರ್ಣವನು ಸತಿ ಪಡೆದಳ್ಸುರ ।
ನಿವಹೋತ್ಸವಕರನನಮಳಬೋಧಾಕರನಂ ॥೩೯॥

ಸಮಭಾವನಲ್ತೆ ಪುಟ್ಟಿದ ।
ಕುಮಾರನೆಂದಱಿಪುವಂತೆ ಕಮಳಸಮಾಜಂ ॥

ಕುಮುದಸಮುದಯಮೆದೊರ್ಮೆಯೆ ।
ಸಮಮಲರ್ದುದು ಬೋಧನಯಸನುದಯದೊಳಾಳ್ ॥೪೦॥

ಅನಿಮಿಷನಾಥನೊಲ್ದು ನಮಗಿತ್ತ ಬೆಸಂ ಸಲೆ ಸಿದ್ಧಿಯಾಯ್ತು ನಾ ।
ಮಿನಿತುಮಲಂಪಿನಿಂ ಪುದಿದು ದೇವಿಯ ಸೇವೆಯೊಳರ್ದಿದಿಂತು ನೆ ॥
ಟ್ಟನೆ ಫಲವಾಯ್ತು ಪುಟ್ಟಿದನಣಂ ತ್ರಿಜಗತ್ಪತಿಯೆಂದು ರಾಗದಿಂ ।
ತನತನಗಿಂತು ನರ್ತಿಸುತುಮಿರ್ದುದಮರ್ತ್ಯವಧೂಕದಂಬಕಂ ॥೪೧॥

ತನಯಂ ತ್ರಿಜ್ಞಾನಲಕ್ಷ್ಮೀವರನುದಯಿಸಿದಂ ತಾನೆನಲ್ಕೆಳ್ದ ಮುಂಲೋ।
ಚನವಾನಂದಾಶ್ರುವಂ ಮೆಯ್ಯೊಳಕಪುಳಕಸಂತಾನಮುಂ ತಾಳ್ದಿಯುಂ ನೆ ॥
ಟ್ಟನೆ ತಾಳ್ದಂ ನಿಟ್ಟೆಯಾಗಿ ತ್ರಿಭುವನವಿಳಸತ್ಪ್ರಾಜ್ಯಸಾಮ್ರಾಜ್ಯಪಾದಂ ।
ತನಗೇಕಚ್ಛತ್ರವಾದಂದದಿನುರುಮುದಮಂ ವಿಶ್ವಸೇನಾವನೀಶಂ ॥೪೨॥

ವ॥ ಮತ್ತಮಾಗಳ್ದ್ವಿತೀಯಕಲ್ಯಾಣಕ್ಕೆ ಶಕ್ರಾದ್ಯರಂ ಸರಭಸದಿಂ ಕರೆವಂತಿರೆ ಮೊಳಗುವ ಮಂಗಳಾನಕಪ್ರಣಾದಮುಂ । ಆಗಳುದಯಿಸಿದ ಬೋಧನಿಧಿಯ ತನುರುಚಿ ತಲೆಮಿಕ್ಕು ನಭಕ್ಕೆಸೆವ ಸಂಧ್ಯಾರುಣಶ್ರೀಯ ನೀವುತ್ತಿರ್ದಪುದೆಂಬಂತಿರನಿಮಿಷನಿತಂಬಿನಿಯರ ಸದಮಳಮೆಸೆಯೆ ಸೂಸುವರುಣಪಿಷ್ಟಾತಕಪ್ರಸರಮುಂ । ತ್ರಿಭುವನಗುರುವಿನುದಯಕ್ಕನುರಾಗಮುಂ ತಳೆದುದವನೀತಳಮೆಂಬಿನಂ ಕೆಂಜೆಳಗು ಪುದಿಯೆ ಪಳಕಿನ ಕಾಟ್ಟಮು ತಳಕ್ಕೆ ಕೆಂಕವಾಗಿ ತಳಿವ ಕುಂಕುಮಜಳದ ಚಳಯಮುಂ । ಸುರಿವ ಸುರಕುಸುಮವಿಸರವಪಾರಸಾರಶೋಭೆಯನಿರ್ಮಡಿಸುವಂತೆ ವಿರಜಿಸುವ ಸುರಜೆರಪುಪ್ಪೋಪಹಾರಮುಂ ಪೊಣ್ಮುವ ಮಂಗಳತೋದ್ಯದೊಡನೆ ಗಡಣಿಸಿ ಕಂಪಮೂದುವಂತಿರಾಮೋದಕ್ಕೆಱಗಿ ಬಲಿಕುಸುಮಕುಟ್ಮಳಂಗಳೊಳ್ತಱಗಿ ಮೊಱೆವ ಪಲ್ಮೆಗಳನೆಬ್ಬಿಪ್ಪತ್ತುಮರ್ಬಿ ಸಂಚರಿಪ ಸುರತರುಣಿಯರ ಚರಣಮಂಜುಳಾರಾವಪೂರಿತಮುಂ । ವ್ಯೂಹೂರ್ತಿಕಪ್ರಚಯಮುಚ್ಚರಿಸುವಾಶೀರ್ವಾದನಾದಮನುರ್ವಿ ಕೊರ್ವಿಸುವ ಮಂಗಳಪಾಠಕಪ್ರಕರಪಟುತರಾನೂನದಾನಸಂತಾನಮಯನುಮುಂ । ಕಳಪಿಳಪ್ರಕರಸಂಚಿತಪಂಚಮಸ್ವರಮನಧಿಕರಿಸಿ ಮಧುರಮಧುಕರರುಣತ್ಕಾರಸಾರಮನಾಚ್ಛಾದಿಸಿ ಗೃಹತುರಂಗಸಾರಂಗಕೇಳೀಕಳಹಂಸವಿಸರಮುಂ ಮುರುಳ್ಗೊಳಿಸಿ ಪಾ

ಡುವ ದಿನಿಜಾಂಗನೆಯರ ಮಂಗಳಗೇಯಪ್ರಣಾದಪರಿಪೂರ್ಣಮುಂ। ಕಣ್ಬಿಡೆ
ದ ಜೋತ್ಸ್ನರದರಂತೆ(?) ಕಡಾರಂಬಡೆದ ಬಡವರಂತೆ ನಲವು ನೆಲೆವೆರ್ದ ಕ
ಯ್ಯೆತ್ತಿ ನರ್ತಿಸುವ ಕುಲಕಾಮಿನೀಜನದ ಕಂಕಣದ ಕಾಲ್ದುಡುಗೆಯ ಝು
ಣತ್ಕೃತಿಕ್ವಣನದೊಡನೆ ಬಿಡದಾಡುವ ರಾಜಮರಾಳಮಾಳಾವಿಳಾಸಮುಂ।
ಉದಯಿಸಿದ ವಿಮಳಬೋಧನಿಧಿಯ ನಿಜಕೀರ್ತಿನಿರ್ಮಳೋಲ್ಲಸಿತವಲ್ಲರೀ
ಪ್ರರೋಹಸಂದೋಹಮೆಂದೆನೆ ಸಂದಣಿಸಿ ನೆಗೆದು ಗಗನತಳಮುಂ ಧವಳಿಸು
ತ್ತುಮಗಣಿತಮಾಗಿ ಸೊಗಯಿಪ ದುಗುಲದ ಗುಡಿಗಳುಂ। ಜನಿಯಿಸಿದ ಜಿನಾ
ರ್ಭಕನ ಜನ್ಮೋತ್ಸವಮಂಗಳಕ್ರಿಯಾನಂದದಿಂ ಪುರಂದರಂ ಒಂದಪನೀ
ಮುಂದೆ ಪೋಗಿ ವಂದನಮಾಳಾವಳೀಚ್ಛಲದಿನೋಲಗಿಪೆನೆಂದು ಸಾರ್ತಂದ
ಶಕ್ರಚಾಪಲತಾಕಳಾಪಮೆಂಬ ವಿಡಂಬವೊಡಂಬಡೆ ಕಣ್ಗೊಳಿಸುವ ಪಂಚ
ರತ್ನಸಂಚಯದಿಂ ವಿರಚಿಸಿದ ವಿಚಿತ್ರತೋರಣಂಗಳುಂ, ಸಕಳಜನತಾ
ನಂದಕರಮುಂ, ಪ್ರಬಳದುರಿತಾಪಹರಣಮುಂ। ಸಂಸರಣಪಾರಾವಾರತೀರೋ
ತ್ತರಣಮುಂ। ನಯನಾಳೋಕನಕೌತುಕಾಯಮಾನ ಶೋಭಾಭರಣಮು
ಮಾಗಿ ತತ್ಕುಮುದೋದಯವಿಭವಮಭೂತಪೂರ್ವಕಮನೀಯಮುಮಾಗಿ
ರ್ಪ್ಪುದುಮತ್ತಲ್—

ಮೊಳಗಿದುವೆಯ್ದೆ ಬಾಜಿಸದೆಯುಂ ಸುರದುಂದುಭಿಗಳ್ ಲತಾವನಂ।
ಗಳ ಕುಸುಮೋತ್ಕರಂ ತಿಱಿಯದಲ್ಲುಗುತಿರ್ದುದು ನಮ್ಮುಮೊಗದಾ॥
ಗಳೆ ಸುರಮೌಳಿಮಾಳೆ ನತಮಾದುದು ನಾಕದೊಳೆಂದೊಡೇನಿದ।
ಗ್ಗಳವೊ ಜಿನಾರ್ಭಕೋದಯದ ಪುಣ್ಯಫಲಂ ವಿನಮಜ್ಜಗತ್ಕುಳರ್॥೪೩॥

ವರಘಂಟಾನಿನದಂ ಸುರಾವಸಥದೊಳ್ಭೇರೀರವಂ ವ್ಯಂತರಾ।
ಮರವೃಂದಾಲಯದೊಳ್ಮೃಗೇಂದ್ರನಿನದಂ ಜ್ಯೋತಿಷ್ಕದೇವಾಳಿಮಂ॥
ದಿರದೊಳ್ಶಂಖನಿನಾದಮೂಳನನದೇವಾವಾಸದೊಳ್ಪುಣ್ಮಿತ।
ಚ್ಛರಿಯಿಂ ಪೋಡಶತೀರ್ಥಕೃತ್ಪರಮಜನ್ಮೋತ್ಸಾಹಸಂಸೂಚಕಂ॥೪೪॥

ಜನಿಯಿಸಿದಂ ಜಿನಶಿಶು ಭೋಂ।
ಳೆನೆ ಬಪ್ಪುದು ನೀಂ ದ್ವಿತೀಯಕಲ್ಯಾಣಕ್ಕಂ॥

ದಿನಿತನಳಿಪುವವೊಲಾಯ್ತಾ ।
ಸನಕಂಪಮುದಾನಿಳಿಂಪನಾಥಂಗಾಗಳ್ ॥೪೫॥

ತನಗಾದಾಸನಕಂಪದಿ ।
ನನಿಮಿಷವರನಳಿದನವಧಿಬೋಧದಿನೀಗಳ್ ॥
ಜನಿಯಿಸಿದ ಷೋಡಶತೀರ್ಥನಾ ।
ಥನೆಂದೆಱಗಿ ತಳೆದನಧಿಕೋತ್ಸವಮುಂ ॥೪೬॥

ವ॥ ಇಂತು ಸಂತೋಷಮನಾಂತು ಶಚೀಕಾಂತಂ ಜಿನಜನ್ಮಕಲ್ಯಾಣಕ್ರಿಯಾತುರನಾಗಿರ್ದಾಗಳ್—

ಘನಮಾಗೋರ್ದರಮುಜ್ಜೃಂಭತಧ್ವಜಮಯಂ ದಿಕ್ಕೈಣಿ ನಾನಾನಕ ।
ಕ್ವಣಸಂತಾನಮಯಂ ದಲಾಗೆ ನೆರೆದೇಱ್ತಿಂದಿರ್ದರಾತ್ಮೀಯವಾ ॥
ಹನವೈಮಾನವಿಭೂಪರಾಗಿ ಭುಜಗೇಶವ್ಯಂತರಜ್ಯೋತಿರಂ ।
ಗನಿಳಿಂಪರ್ಸಲೆ ಪಾರುತುಂ ಸಮಯಮುಂ ಸೌಧರ್ಮಕಲ್ಪೇಂದ್ರನಾ ॥೪೭॥

ವ॥ ಆಗಳಾನೀರ್ವಾಣನಾಥಂ ನಿಖಿಳಮಂಗಳಸನಾಥಸಾಮಾನಿಕ ತ್ರಯಸ್ತ್ರಿಂಶತ್ಪಾರಿಷದಾತ್ಮರಕ್ಷಪರೀತನುಮಾಭಿಯೋಗ್ಯಸುರಸಕಳದಿಗಧಿಪವ್ರಾತಸಮೇತನುಂ ಪರಿವೃತಸಮಸ್ತಕರಿತುರಗವರರೂಥಪದಾತಿಪ್ರಮುಖ [1][ಬ]ಳಸಂಘಾತನುಂ, ರಂಭೆ ಊರ್ವಶಿ ತಿಲೋತ್ತಮೆ ಸುಕೇಶಿ ಮಂಜುಘೋಷೆ ಘೃತಾಚಿ ಮೇನಕೆ ಶಚಿದೇವಿ ಮೊದಲಾದಖಿಳದಿವಿಜವಿಳಾಸಿನೀಜನೋಪೇತನುಮಾಗಿ—

ಅಸೌಧರ್ಮೇಂದ್ರನತ್ಯುತ್ಸವದೊಳ್ ಪೊಂಮಟ್ಟಂ ಸುರಾನೇಕಪಸ್ಕಂ ।
ಧಾಸಂಧ್ಯಾಸೇನನಾಶಾಬಧಿರಿತಬಹಳತೋದ್ಯನಾದಂ ಮರುತ್ಸೈ ॥
ನಾಸಂಘನ್ನಂಬುದಾಧ್ವಂ ವಿವುಳಚಮರಜಾದಭ್ರಶುಭ್ರಾತಪತ್ರೋ ।
ದ್ಭಾಸಂ ಭಾಸ್ವನ್ಮುಖಾಂಶುಸ್ಥಗಿತಶಶಿ ಶಚೀವಕ್ತ್ರವೀಕ್ಷಾಕಟಾಕ್ಷಂ ॥೪೮॥

ವಿಯದಿನಾಸೌಧರ್ಮೇಂ ।
ದ್ರನ ತೇಜಮನೆಯ್ದೆ ತಲೆಯೊಳಾಂತಿರ್ದರೊ ತಾ ॥
ನೆನಲೆಸೆದಸಂಕಳಾಮರ ।
ರೆನಸುಂ ಮಣಿಮಕುಟದರುಣಕಿರಣೋತ್ಕರದಿಂ ॥೪೯॥

ಸ್ಥಾ—1. ಜಳ.

ವಿಳಸನ್ನೀಳಾಳಕಾಳಪ್ರತತಿ ವಳತರಂಗಂ ತನುಸ್ವಚ್ಛ ಗೋಜೆ ।
ರ್ಜಿಳವಾಲೋಲಾಕ್ಷಿಲೋಲಚ್ಛ ಷತತಿ ವಿವಿಧಾಕಲ್ಪಮಿಶ್ರಪ್ರಭಾಸಂ ॥
ಕುಳಶೈವಾಳಂ ಮುಖಾಬ್ಜಾವಳಿ ಘನಕುಚಕೋಕವ್ರಜಂ ರಾಜಿಸಲ್ಪಾ ।
ಗೊಳನೆಂಬಂತಾಗಳೀಚ್ಛಂದುದು ಸುರವನಿತಾವೃಂದಮಾನಂದದಿಂದಂ ॥೪೦॥

ಸುರಸೇನಾಯಾನಸಂಘಟ್ಟನಜನಿತನಿನಾದಂ ವಿಮಾನಧ್ವಜಾನೀ ।
ಕರಣಧ್ವಾಂಟಾವಳೀಟಂಕೃತಿರುತಿ ವಿಳಸನ್ನಂಗಳಾತೋದ್ಯಹೃದ್ಯ ॥
ಸ್ವರಮುದ್ಯಚ್ಛಾ ಮರಶ್ರೀನಿಕರಕರಲಸತ್ಕಂಕಣವ್ರಾತಖಣ್ಕಾ ।
ರವಂ ಮೆಯ್ವೆರ್ಚಿ ದೇವಾಗಮನದೆ ಭುವನಕ್ಕಾಯ್ತು ಶಬ್ದಾತ್ಮಕತ್ವಂ ॥

ಬರೆ ಮುಂದಾನಂದದಿಂ ರನ್ನದ ಮೞಿಗೞಿಯುತ್ತುಂ ಕುಬೇರಂ ಸಮಸ್ತೋ।
ರ್ವರೆಗಂ ನಾನಾವಿಮಾನೋಲ್ಬಣಮಣಿಗಣನಿರ್ಯತ್ಪ್ರಭಾಮಾಲೆ ಮೇಲಂ ॥
ಬರಮುಂ ಚಿತ್ರಾಂಬರಾಡಂಬರಮನೊದವಿಸುತ್ತಾದಮೇೞ್ತರ್ಪಿನಂ ಚೆ !
ಚ್ಚರದಿಂದೇೞ್ತಂದನಾಹಸ್ತಿನಪುರಿಗೆ ಮನೋರಾಗದಿಂದಂ ಸುರೇಂದ್ರಂ ॥೪೨॥

ಸುರಿಯುತ್ತಿರ್ಪ ಸುರಕ್ಷ್ವೇಡ್ಯ ಸುಕಾಂತಿಶ್ರೇಣಿಗಂ ತನ್ನಭೋಂ ।
ತರಮುಂ ತೀವ್ರತೆ ಬರ್ಪ ನಿರ್ಜರವಿಮಾನಾನರ್ಘ್ಯರತ್ನಾಂಶುಮಂ ॥
ಜರಿಗಂ ವಿಸ್ಮಯಮುತ್ತು ಹಸ್ತಿನಪುರಸ್ತ್ರೀಲೋಕಮಾಲೋಕನಾ ।
ತುರದಿಂದೇೞ್ದುದುಣ್ಮೆ ನೂಪ್ರರರವಂ ಪ್ರೇತ್ತುಂಗಹರ್ಮ್ಯಾಂಗಳಂ ॥೪೩॥

ಆದೆ ತಾರಾಚಳದಂತೆ ಬರ್ಪುದೆ ಸಮುಂತೈರಾವತಂ ತತ್ಕರೀಂ ।
ದ್ರದ ಪೂರ್ವಸ್ಥಳಭಾಸಿ ಶಕ್ರನೆವೊಲಂ ತತ್ಕಾಂತೆ ಪೌಲೋಮಿಯಂ ।
ತದು ಗೀರ್ವಾಣವಧೂಸಮೂಹಮದೆ ದಲ್ಕಲ್ಪಾಮರಶ್ರೇಣಿ ಸು।
ತ್ತಿದುದೆಲ್ಲಾಮಮರೇಂದು ನೋಡುತಿರೆಯುಂ ತತ್ಪೌರನಾರೀಜನಂ ॥೪೪॥

ಕ ವ॥ ಇಂತು ಕಲ್ಪಿಸುತ್ತುಂ ತತ್ಪೌರಪುರಂಧ್ರೀಸಂದೋಹಮುನ್ಮುಖ
ತೆವೆತ್ತು ನೀಡುಂ ನೋಡುತ್ತುಮಿರೆಯುಮಾಸಾಧರ್ಮೇಂದ್ರಂ ಪ್ರಥಮದ್ವಿ
ತೀಯಕಲ್ಪಾಧಿನಾಥಸಮೇತನಾಗಿಯಾಗಸದಿನಿೞಿದು ತದೀಯವಿಶಾಳಶಾಳಾಲ
ಹಿಭೂಗದೊಳ್ಸಕಳಸುರಸೇನೆಯುಂ ನಿರವಿಸಿ ತಾನಾಗಳ್ಸುರಾಗದಿಂ ಸರೇಂ
ದ್ರಮಂದಿರಾಂಗಣಕ್ಕವತರಿಸಿ—

ದರಹಾಸಕೇಸರಾವಳಿ ।
ತರಳಾಯತದೃಗ್ಜಳಂ ಚಳಾಳಕಭೃಂಗೋ ॥
ತ್ಕರಮೆಸೆವ ತತ್ಪಜೇಮುಖ ।
ಸರಸಿರುಹಮನೊಸೆದು ನೋಡಿದಂ ಸುರರಾಜಂ ॥೫೫॥

ವ॥ ಇಂತು ನೋಡಿ ಶಜೇದೇವಿಗೆ ದಿವಿಜರಾಜಂ ಜಿನಾರ್ಭಕನಂ ಬಿಜಯುಂಗೆಯ್ಸಿ ತಪ್ಪ ತತ್ಕ್ರಮಮಂ ನಿಯಮಿಸಿದಾಗಳ್—

ಲುಳಿತಮಣಿಕಂಕಣಧ್ವನಿ ।
ಕಳಕಾಂಚೀಕ್ವಣದ ಘಂಟಿಕಾರವಮುಣ್ಮಲ್ ॥
ಥುಳಲೆನೆ ಸುರೇಭದಿಂ ತಾ ।
ನಿಲ್ದಳ್ನಲವಿಂ ನಿಳಿಂಪಪತಿಸತಿಯಾಗಳ್ ॥೫೬॥

ಬಳಸಿ ಬರೆ ಸುರಪುರಂಧ್ರೀ ।
ಕುಳಮಾಗಳ್ ರಾಗದಿಂ ಶಚೀದೇವಿ ಸಮು ॥
ಲ್ಲಳಿತಗತಿ ಸೂತಿಕಾಗೃಹ ।
ದೊಳಗಂ ಪೊಕ್ಕಳ್ ಜಿನಾರ್ಭಕನನೀಕ್ಷಿಸುತುಂ ॥೫೭॥

ಉದಯನಗೇಂದ್ರಶಿಖರಿಳಿಯ ಪಾರ್ಶ್ವದೊಳುದ್ಗತಪಾಟಲಳಾಂಶುವಿಂ ।
ಪುದಿದೆಸೆದಿರ್ಪಿನಂಗೆ ತೊಣೆಯಾಗಿ ತದೀಯನೃಪಾಂಗನಾಂಗಪಾ ॥
ರ್ಶ್ವದೊಳನಸುಂ ವಿರಾಜಿಪ ಜಿನಾರ್ಭಕನಂ ಶಚಿ ನೋಡಿದಳ್ದೃಗ ।
ಬ್ಜದೊಳೊಗೆಯಲ್ಮದಶ್ರು ನೆಗೆಯಲ್ಪ ಮದಂ ಹೃದಯಾರವಿಂದದೊಳ್ ॥
ಬಲನಂದು ಮೂರ್ಜಸೂತಿ ।
ತ್ಕಲಲಾಟವಿನಿಹಿತನಿಜಕರಾಂಬುಜನವಕು ॥
ಟ್ಮಳಪುಟಿತೆಯಾಗಿ ಪೊಱಮ ।
ಟ್ಟೊಲವಿಂ ಸೌಧರ್ಮಶಕ್ರವಲ್ಲಭೆಯಾಗಳ್ ॥೫೯॥

ವೆ॥ ಆಗಳ್ಮಾಯಾನಿದ್ರೆಯಂ ನಿರವಿಸಿ ನಿದ್ರಾಮುದ್ರಿತನೇತ್ರಕತಪತಿ ಯಾಗಿರ್ದ್ದೈರಾದೇವಿಯ ಮುಂದೆ ಮಾಯಾರ್ಭಕನನಿರಿಸಿ ಜಿನಾರ್ಭಕನಂ ದುಕೂಲದೊಚ್ಚೆಯಿಂ ಪೊದೆಯಿಸುವಂತೆ ನಿಜನಯನಧವಳಾಂಶುವಿಂ ಪೊದೆಯಿಸಿ ನಿಜಕರಸರೋಜಮಂ ನೀಡಿ ತೆಗೆದೆತ್ತಿಕೊಂಡು,

ಕರನಖರುಚಿ ನೀಳ್ದರೆ ಕರ ।
ಸರೋಜದಿಂ ತಳೆದು ಚಿನಶಿಶುವಸಿಂದ್ರನ ಸೌಂ ॥
ದರಿಯೆಸೆದಳರುಣನುಣಿಮುಂ ।
ಜರಿರಂಜಿತಾವರಕಲ್ಪಲತಿಕೆಯ ತೆಱದಿಂ ।೬೦॥

ಅಲರ್ಗುಡಿಯನೆತ್ತಿ ಸುತ್ತಲ್ ।
ನಲವಿಂ ಪಾಡುತ್ತುಮರಿಯರ್ಬರೆ ಒಂದಳ್ ॥
ಲಲಿತಗತಿಯೆಸೆಯೆ ಶಚಿಕರ ।
ತಳರುಚಿ ನೆಲೆವೆರ್ಚೆ ತಳೆದು ಜಿನಬಾಳಕನಂ ।೬೧॥

ತರುಣಾರ್ಕನನರುಣಾಬ್ಜಿನಿ ।
ಧರಿಯಿಸಿ ಬಪರ್ಂತೆ ಶಚಿ ಜಿನಾರ್ಭಕನಂ ತಂ ॥
ದರುಣಕರತಳದೊಳಾಂತೆ ।
ಯ್ತರುತಿರೆ ಕಂಡಿಂದ್ರನೆಯ್ದಿದಂ ಸನ್ಮದಮಂ ॥೬೨॥

ಮುನ್ನವೆ ವಿನಮಿತನಾಗು ।
ತ್ತುನ್ನೀಡಿದ ಪತಿಯು ನಿಡಿಯು ಕಯ್ದಾವರೆಗಾ ॥
ದನ್ನೀಡಿದಳಾಶಚಿ ಕಡೆ ।
ವೊನ್ನೆಸಕಮನಿಱಿಸಿ ಮಿಸುಪ ಜಿನಬಾಳಕನಂ ॥೬೩॥

ತೆಗೆದಾಜಿನಶಿಶುವಂ ವಸೌ ।
ಳಿಗೆ ನೆಗಪಿ ವಿನಮ್ರನಾಗೆ ತತ್ಪದರಾಗಾಂ ॥
ಶುಗಳಿಂದ್ರನ ರಾಗಯುತಂ ।
ದ್ವಿಗುಣಿಸಿದುವು ತನ್ಮಣಿಪ್ರಭಾಮಾಳಿಗಳಂ ।೬೪॥

ಆಗಳ್ಯಜೇರಮಣಿ ಪರ ।
ಭಾಗದೊಳೆಸೆಯಲ್ನಿಜಾಂಕಪೀಠಾಗ್ರದೊಳಂ ॥
ಬಾಗಿ ಜಿನಾರ್ಭಕನಿರಲನು ।
ರಾಗದಿನೊದವಿರ್ದನಿಂತು ಸೌಧಮೇರ್ಂದ್ರಂ ॥೬೫॥

ಜಿನಬಾಲಕನ ಮುಖಂಗಂ ।
ಡನಿತುಂ ಜಯು ಜಯು ಜಯು ನಂದ ವರ್ಧಸ್ವ ಜಿರ ॥

ಸ್ವನಮುಖರವಮಾಯ್ತು ಚತುರವು ।
ರನಿಕಾಯಂ ಹರ್ಷವಾರಿನಿಧಿಯೆಂಬಿನೆಗಂ ॥೬೬॥

ಜನಿತಾನುರಾಗವೆನಸುಂ ।
ತನಿಗೊರ್ವಿದುದೆಂಬ ತೆಱದೆ ಜಿನಶಿಶುವಿನ ಮೆ ॥
ಯ್ಯ ನವೀನರಾಗರುಚಿ ತ ।
ಟ್ಟಿನಿಮಿಷತತಿ ಕೂಡೆ ಶೋಣಮಾದತ್ತಾಗಳ್ ॥೬೭॥

ವ ॥ ಅಜಿನಾರ್ಘಕನಂ ಛತ್ರರೂಪಚ್ಛಲದಿನೋಲಗಿಸಲ್ಸಾರ್ದಿರ್ದ ರಾಕೇಂದುವೆಂಬಂತೆ ರಾಜಿಸುವ ಧವಳಾತಪತ್ರಂಬಿಡಿಯಿಂತಾನೇಂದ್ರ ವಾಹನಾರೂಢನಾಗಿ ಬಲಗೆಲದೊಳ್ಬರೆಯುಂ । ತದೀಯಸುಧಾಕಿರಣಕಾಂತಿ ಕಳಾಪದಂತೆ ಕಣ್ಗೊಳಪ ಚಾಮರಮನಿಕ್ಕುತುಂ ಸನತ್ಕುಮಾರಮಾಹೇಂ ದ್ರನೆಡಗೆಲದೊಳ್ಬರೆಯುಂ। ಸೌಧರ್ಮೇಂದ್ರನಮರಾಚಳೇಂದ್ರಮನೆಯ್ದುವು ಜ್ಜುಗದಿಂ ನಿಖಿಳಸುರಸೈನ್ಯಕ್ಕೆ ಕಣ್ಸನ್ನೆಗೆಯ್ದಾಗಳ್—

ಭುವನಾಂತರ್ಭಾಗಮುಂ ಮುಂಗಳಪಟಹರವಂ ತಿ ಬಿ ಶಸ್ತ್ರಾಂಶುಗಳ್ದೀ।
ವವಧೂನೇತ್ರಪ್ರಭಾಮಾಳೆಯೊಳೆ ಪೊಣರೆ ಚಂಚದ್ಧ್ವಜಶ್ರೇಣಿಗಳ್ವ್ವಾ ॥
ಯುವಿಹಾರಾಕ್ರೀಡೆಯುಂ ನೆಟ್ಟಗೆ ತೆಗೆಯೆ ಸನುತ್ತಾನಪೂನಸ್ವರಂ ದಿ ।
ಗ್ಭಿವಹಶ್ವಭ್ರಂಗಳೊಳ್ಮಾರ್ದಸವಿಡೆ ನಡೆಗೊಂಡತ್ತು ಗೀರ್ವಾಣಸೈನ್ಯಂ ॥

ಜಿನಶಿಶುವಂ ಜನ್ಮಸ್ನ ।
ನನಿಮಿತ್ತಂ ತಲೆಯೊಳಾಂತು ತಂದಪುದೋ ತಾ ।
ರನಗಂ ಮೇರುನಗೇಂದ್ರ ।
ಕ್ಕೆನೆ ಕಣ್ಗೊಳಿಸರ್ದುದಿಂತು ದಿವಿಜಗಜೇಂದ್ರಂ ॥೬೯॥

ವ ॥ ಇಂತು ವಿಭ್ರಾಜಿಸುವಭ್ರಗಜರಾಜನ ವಿಕ್ರಿಯಾಕಾರಕ್ಕಾತು ಕಾದಭ್ರವಿಭ್ರಮಮುಂ ವರ್ಣಿಸುವೊಡೆ--

ಪದೆಱಿಂದೈರಾವತಕ್ಕಾದುವು ಮುಖಮವು ಮೂವತ್ತೆರಳ್ದಂತಮುಂತಾ ।
ವದನಕ್ಕೆಂಟೊಂದು ದಂತಕ್ಕೆಸೆವ ಕೊಳನದೊಂದಾಕೊಳಕ್ಕಂಬುಜಂಗ ॥
ಳ್ವಿದಿತಂ ಮೂವತ್ತೆರಳ್ತದ್ದಳವನಿತೆ ದಳ್ಕೈಕಾಗ್ರದೊಳ್ನರ್ತಿಪ ಪ್ರೇ ।
ಮದೆ ಮೂವತ್ತಿರ್ವರುದ್ಯತ್ಸುರಸುದತಿಯರೇವೇೞ್ವಿನಾಶ್ಚರ್ಯದೊಳ್ಪಂ ॥

ಕಮಳದೆಸಱ್ಕುಟ್ಟದೆ ತಮ ।
ತಮಗವುರಿಯರೆಸೆವರಸವುಯಾನರ್ತನದೊಳ್ ॥
ಭ್ರಮರಿಗಳಂ ಮಾಡುವ ವಿ ।
ಭ್ರಮದಿಂ ಭ್ರಮಮುಂ ಸುರಗೆ ಸಮುನಿಸುತಿರ್ದರ್ ॥೬೧॥

ನಿಲವಿನ ಭಂಗಿ ಸುರೇಖಾ ।
ವಿಲಸಿತ ಮುಂದಿಟ್ಟ ಹಸ್ತಗತಿಸಂಗತಿಗಳ್ ॥
ಸಲೆ ಸೊಗಯಿಸೆ ರಸಭಾವಂ ।
ನಲವಿಂ ನರ್ತಿಸುತುಮಿರ್ದರಮರಾಂಗನೆಯರ್ ॥೬೨॥

ಅಲಿತಂಡಕ್ಕಾರವಂ ಮಿಕ್ಕೆಸೆಯೆ ಮೃದುಮೃದಂಗಪ್ರಣಾದಂ ಪೊದೞ್ದು ।
ಣ್ಮೆ ಲಸದ್ವಾಂಶಾದಿವೀಣಾತಳಕಳರುತಿಗೀತಸ್ವರಂ ಪೊಣ್ಮೆ ತತ್ಕಾ ॥
ಹಲರಾವಂ ಮೇಳವಂಬೆತ್ತೊಗೆಯೆ ಮಿಗೆ ಚತುರ್ಭಂಗಿ ನೃತ್ಯಂ ವಿಜೆತ್ರಾ ।
ವಿಲಮಾಗಲ್ ರಾಗದಿಂ ನರ್ತಿಸುತಿರೆ ದಳದೊಳ್ದೇವಕಾಂತಾಳದಂಬಂ॥೬೩॥

ವ॥ ಇಂತು ಜಿನರಾಜಭಕ್ತಿಭಾವಂ ಮೆಯ್ವರ್ಜಿಯವತರಿಸಿದ ವೈ ಕುರ್ವಣಿದಿನಗುರ್ವಡೆದೈರಾವತಗಜೇಂದ್ರಂ ಮೊದಲಾದ ದಿವಿಜವಾಹನಂ ಗಳ್ಗೆ ಸುಖತರಯಾನಯೋಗ್ಯಮಪ್ಪಂತು ಹಸ್ತಿನಾಪುರದಿಂ ಸುರಗಿರಿಪರಿ ಸರಂಬರಂ ಸೌಧಮೇರ್ದಂದ್ರಂ ನೀಳಶಿಳಾತಳಮಂ ವಿಶಾಳಮಾಗಿ ವಿರಜಿಸಿ ದಾಗಳ್—

ತರಣೀಂದುತಾರೆಗಳ್ಸಂ ।
ಚರಿಸದ ನಭವಿಂತಿದೆಂಬ ವಿಭ್ರಾಂತಿಯನು ॥
ರ್ವರೆಯ ನರಗಿರ್ತ್ತುದೆನಸುಂ ।
ಹರಿವಿರಜಿತಮಪ್ಪ ವಿಪುಳಹರಿನೀಳತಳಂ ॥೬೪॥

ಸುರಕಾಂತಾನೀಕಮೆತ್ತಂ ಕೆದಱುವ ನವರತ್ನಾವಳೀಸೂಕ್ಷ್ಮಪಾಂಶೂ
ತ್ಕರದಿಂ ಜಿತ್ರೀಕೃತಾಲಂಕೃತಿಜಜಿತಮಣಿವ್ರಾತನೂತ್ನಪ್ರಭಾಮಂ ॥
ಜರಿಯಿಂದಾಕಂಜಗರ್ಭಂ ಶಬಲರುಜೆಗಳಿಂ ತೀವಿದುದ್ಯತ್ಕರಂಡಂ ।
ಧರೆ ದಿಗ್ವ್ಯೋಮೋದರಂ ತಾನೆನೆ ತಳೆದನಗುರ್ವಾಗೆ ಗೀರ್ವಾಣನಾಥಂ ॥

ಜನಿತಾಗಣ್ಯವರೇಣ್ಯಹರ್ಷರಸದುಗ್ಧಾಂಭೋನಿಧಿಕ್ಷ್ವೇಳವಂ ।
ಯ್ತೆನೆ ನಾನಾವಿಧದಿಂ ಜಿನಸ್ತುತಿಗಳಂ ಪಾಡುತ್ತುಮಾಡುತ್ತುಮಿಂ ॥
ತು ನಿತಾಂತಂ ನಿಖಿಳಾಮರಾಮರವಧೂಸಂದೋಹಮುಂ ಸುತ್ತಿ ಬ ।
ರ್ದಿನಮಾಗಳ್ನಡೆದಂ ಮರುದ್ದಿರಿಗೆ ಸೌಧಮೇರ್ದಂದ್ರನಾನಂದದಿಂ ॥೭೬॥

ವ॥ ಇಂತು ಪೊಗಟ್ಟುತ್ತುಮಾಗಳ್—

ವದನದೊಳೀಷದ್ಧಾಸದ ।
ಮುದಯಿಸೆ ವಿಶಾಳನೇತ್ರಗಳೊಳ್ ಬಾಷ್ಪಮುದು ॥
ಸ್ಮೇ ದರದರಹಾಸದ ಸಿರಿ ।
ಪ್ರದಿದ ಜಿನಾರ್ಭಕನನಿಂದ್ರನೊಸೆದೀಕ್ಷಿಸಿದಂ ॥೭೭॥

ವ॥ ಆಜಿನಾರ್ಭಕನ ಶೈಶವದೊಳಲಭ್ಯಮಾದ ಸೌಷ್ಠವಮುಂ ನೀಡುಂ ನೋಡಿ—

ಜನನೀಸ್ಮೃತಿನಿರ್ಜಿತಮೋ ।
ಹನೊಳಂಬಾಸ್ತನ್ಯಪಾನಕಾಮುಂ ಗತತೃ ॥
ಷ್ಣನೊಳಪ್ಪುದೆಯೆನುತಿಂದ್ರಂ ।
ಜಿನಮಹಿಮೆಯನಮರಸಮಿತಿಗಾಗಳ್ನುಡಿದಂ ॥೭೮॥

ಪುದಿದಾವ್ಯಂತರಸೇನೆ ಮುಂದೆ ಬಲದೊಳ್ಬೃಂದಾರಕಶ್ರೇಣಿ ವಾ ।
ಮದೊಳುದ್ಯತ್ಫಣಿಭೃದ್ಬಲಂ ಪೊಗೆ ಜ್ಯೋತಿಷ್ಕಸೈನ್ಯಾಳಿ ಪ ॥
ಕ್ಕದೊಳಾಪರ್ವವರೊಲ್ದು ಕೀರ್ತಿಸೆ ಲಸದ್ಗಂಧರ್ವರುಂ ಪಾಡೆ ರಾ ।
ಗದಿನಾದೇವಿಯರಾಡೆ ನಾಡೆ ಗಮನಂ ಕಣ್ಗಿತ್ತುದಾಶ್ಚರ್ಯಮಂ ॥೭೯॥

ಲವಣಾರ್ಣವ ಸರಸಿಯೊಳೊ ।
ಪ್ಪುವ ಜಂಬೂದ್ವೀಪಮೆಂಬ ಕನಕಾಂಬುಜಮ ॥
ಧ್ಯವಿಭಾಸಿಯಪ್ಪ ಕರ್ಣಿಕೆ ।
ಯವೊಲಿರ್ದುದು ಕಣ್ಗವಂದು ಮಂದರಶೈಳಂ ॥೮೦॥

ಕಪಿಹಸ್ತಾಕಂಪಿತೋಚ್ಚಾಮರಕುಜಕುಸುಮಾಸಾರಸೌರ
[ಭ್ಯಮುಂ ಕೊ ।
ಡುಪಕಂಠಸ್ಮೇರಕಂಜಾಕರಸಲಿಲವಳಶ್ರೇಣಿಯೊಳ್ಕೊಡಿ ತೂಗಾ ॥

ಡಿ ಪರೀತೋದ್ಯಲ್ಲತಾಮಂದಿರವಿಹರಣವಿದ್ಯಾಧರೀಶ್ವಾಸದಿಂ ಪೊಂ ।
ಗಿ ಪೊದಲ್ದಾವೋದಿ ತೀಡಿತ್ತಮರಗಿರಿದರೀಚಾರಸಾರಂ ಸಮಿಾರಂ ॥೪೧॥

ಇಳೆಗಾಂ ಮಧ್ಯಸ್ಥ ನಾದುನ್ನತಿಕೆ ಸಫಳಮೆನ್ನೀವಿಭಾಸ್ವತ್ಪಿರೋಮಂ ।
ಡಳಮರ್ದಾ ಬ್ಬಳಜನ್ಮಾಭಿಷವಭವನಮಾಯ್ತೆಂದು ತನ್ನುದ್ಭಭಾಗ್ಯಾ ॥
ತುಳಸೌಭಾಗ್ಯಕ್ಕೆ ತಾಸುತ್ಸವದೊಳೆ ತಲೆದೂಗುತ್ತುಮಿರ್ಪಂತೆ ರೋಧೋ
ನಿಳಲೋಳಾಚೂಳಿಕೋರ್ವೀಜದಿನೆಸೆವುದಣಂ ಮೇರುಶೈಳಂ ವಿಶಾಳಂ ॥

ಎಸೆವಾಕಾಶಂ ನಿರಾಧಾರಮುಮದಱದರಾವಾಸದೊಳ್ವಪ್ಪಪಶ್ಯೇ ।
ಣಿ ಸಮಿಾರವ್ರಾತದಿಂದಾವೃತಮದು ದೃಢಮಲ್ಲೆಂದು ಪದ್ಮೋದ್ಭವಂ ಭಾ॥
ವಿಸಿ ತನ್ಮೂಳಾಗ್ರ ಭಾಗಂಬರಮತಿನಿಬಿಡಂಬೆತ್ತಿರಲ್ಮಾಡಿ ಸೈತಿ ।
ಟ್ಟಸುವರ್ಣಸ್ತಂಭಮೆಂಬಂತಿರೆ ಸೊಗಯಿಪದುದ್ದಾಮದಿಂ ಹೇಮಶೈಳಂ ॥

ದಿವಿಜಾದ್ರಿ ವಿರಾಜಿಸಿದುದು ।
ಸುವರ್ಣವಿಭ್ರಮದೆ ಸುದೃಢಬಂಧದೆ ಸಮವೃ ॥
ತ್ತವಿಳಾಸದೆ ಸುಮನಃಪ್ರಮ ।
ದವಿಕಾಸದೆ ಕಮಳಭವನ ಕಾವ್ಯದ ತೆಱದಿಂ ॥೪೪॥

ಸುರಶೈಳಂ ಸಮಮುನಿವೊ।
ಲ್ಕರಮೆಸೆದುದು ತಾಂ ಕ್ಷ್ಮಾಸಮನ್ವಿತದಿಂ ಭಾ ॥
ಸುರಸುಮನಸ್ಸ್ಥಿತಿಯಿಂ ಜಾ ।
ತರೂಪಧರದಿಂ ಕಾ...ನಿಸೇವ್ಯೋನ್ನತಿಯಿಂ ॥ ॥೪೫॥

ಬಳಸಿದ ಪರಿಪೂರ್ಣೇಂದುವ ।
ಬಳಗವಿದೆನೆ ಪುಂಡರೀಕಮಂಡಿತಸರಸೀ ॥
ಕುಳಪರಿಕಳಿತಚತುರ್ಮೇ ।
ಖಳಾವಿಶಾಳಂ ವಿರಾಜಿಪುದು ಸುರಶೈಳಂ ॥೪೬॥

ಅಮೇರುವೆಮೇಖಳೆಗಳಂ ।
ತಾಮೆಸೆಗುಂ ಭದ್ರಶಾಳಮುಂ ನಂದನಮುಂ॥
ಸೌಮನಸಮುಮನುಪಮಶೋ ।
ಭಾಮಯಪಾಂಡುಕಮುಮೆಂಬ ನಾಲ್ಕುಂ ಬನದಿಂ ॥೪೭॥

ತುಱುಗಿರ್ದಾವನವೊಂದೊಂ ।
ದಱಿಂಗಳಿರ್ಪುವು ನಾಲ್ಕುನಾಲ್ಕು ಜಿನಭವನಂಗಳ್ ॥
ನೆಱಿ ನವರತ್ನಮಯಂಗಳ್ ।
ಮಿಱುಗುತ್ತುಮಕೃತ್ರಿಮಂಗಳಮಳತರಂಗಳ್ ॥೪೪॥

ತರುವೆಲ್ಲಂ ಹರಿಚಂದನಪ್ರತತಿ ಸಂತಾನದ್ರುಮಶ್ರೇಣಿ ಬಂ ।
ಧುರಮಂದಾರಕುಜಂ ನಮೇರುಮಹಿಜಾತಂ ಪಾರಿಜಾತಾಂಘ್ರಿಪೋ ॥
ತ್ಕರಮಶ್ಮಬ್ರಜಮುಂ ಪಯಃಪ್ರಸರಮುಂ ಚಿಂತಾಮಣಿ ಸ್ಪರ್ಶನಾ ।
ದ್ಧಿರಸಂ ತಾನೆನಲಾವನೇವೊಗಟ್ವನಂತಾಮೇರುಮಾಹಾತ್ಮ್ಯಮಂ ॥೪೫॥

ಪರಿವೃತಮೇಖಳಾವಳಯ ಕಲ್ಪಲತಾಲಯವಾಳೆಯೋ ವಿಯ ।
ಚ್ಛರಸುರದಂಪತಿಪ್ರತತಿ ಕೂಡುವ ಕಾಮವಿಕಾರಕೋಟಿಕಾ ॥
ತರತೆಯನಾಮರುದ್ಧಿರಿ ನಿರೀಕ್ಷಿಸಿ ನಕ್ಕಪಳಕ್ಕುಮೆಂಬವೊಲ್ ।
ಕರಮೆಸೆದತ್ತು ಸುತ್ತಿ ಸುರಿತಪ್ಪುಮಳಾಂಬುವ ನಿರ್ಝರಪ್ಲವಂ ॥೪೬॥

ಮಳಯಸಮೀರಸಂಚರಣಶಾಲೆ ಮಯೂರದ ನೃತ್ಯಶಾಲೆ ಕೋ ।
ಕಿಳಕಳನಾದಶಾಲೆ ಶುಕಸಂಚಯದೋದಿನ ಶಾಲೆ ಖೇಚರೀ ॥
ಕುಳವೃದುಗೀತಶಾಲೆ ಮಧುಪಂಗಳಮಂಗಳಶಾಲೆಯಪ್ಪು ಸ ।
ಲ್ಲಲಿತವನಾವಳೀನಿವೃತಸೌಂದತಕಂಧರಮಲ್ತೆ ಮಂದರಂ ॥೪೭॥

ಕಲಕೀರಪ್ರಕರಪ್ರಣಾದಮಿಷದಿಂ ಸ್ತೋತ್ರಂಗೆಯುತ್ತೆ ಪ್ರವಾ ।
ಳಲಸದ್ರಾಗಮುದಾದಮುನ್ಮಿ ಕಳಹಂಸಾನಂದಯಾನಸ್ಫುರ ॥
ಚ್ಛಲನನ್ಯಾಸದೊಪ್ಪೆ ಸಂಚರಮರುತ್ಕಾತಪ್ರಕಂಪಾಂಘ್ರಿಪಾ ।
ತುಲಶಾಖಾಮಿಷದಿಂದೆ ನರ್ತಿಸಿದುದಿಂದುದ್ದಾಮಹೇಮಾಚಳಂ ॥೪೮॥

ವ॥ ಇಂತು ಮನೋಹರಂಬೆತ್ತ ಮಂದರಮಹೀಧರೇಂದ್ರದ ಸಾಂ
ದ್ರಶೋಭೆಯುಂ ಸೌಧಮೇರ್ಯಂದ್ರನುಳಯಪಾರ್ಶ್ವದೊಳಿರ್ಪಶಾನೇಂದ್ರಸ
ನತ್ಕುಮಾರಮಾಹೇಂದ್ರಾದ್ಯರ್ವೆರಸು ನೀಡುಂ ನೋಡುತ್ತುಂನಾಡೆಯುಂ
ಮೆಚ್ಚುತ್ತುಂ ನಲವಿಂ ಬಲವಂದು ತದೀಯಶೈಳಮೂಳಮೌಳಿಗೆ ಚತು
ರ್ನಿಕಾಯಾಮರರ್ಕಳಂ ತಡೆಯದೆ ನಡೆಯಿಪಮೆಂದು ನಿಯಮಿಸಿದಾಗಳ್—

ಸಾನುವನೆ ಸಾರ್ವಸತದ ।
ಭೂನೀಕಮಿದೆನೆ ಪೊದಳ್ದ ಬೆಳ್ವಳಗಿನ ಸಂ ॥
ತಾನಮನುಗುಱುತ್ತಮರವಿ ।
ಮಾನಾವಳಿ ಸಾರ್ದುದಿಂತು ಮಂದರದಣಿಯಂ ॥೯೩॥

ತಮತಮಗೆ ದಿವಿಜರಡರು ।
ತ್ತುಮೆ ಮೂಳಾಗ್ರಂಗಳಂ ತುಱುಂಗಿರೆಯುಂ ತಾ ॥
ನಮರಮಯವಾಗಿ ಪಡೆದ ।
ತ್ತಮರಾಚಳವೆಂಬ ನಾಮಮುಂ ಕನಕನಗಂ ॥೯೪॥

ನೆರೆದು ಸುರರಡರುತ್ತುಂ ।
ಮಿರುಗಿರೆಯುಂ ರೂವಾರವಿಟ್ಟಳಂಬೆತ್ತಿರೆ ಕಂ ॥
ಡರಸಿದನೋ ಕಮಳಭವಂ ।
ಕರಮೆಸೆದುದು ಕಣ್ಗೆ ವಂದು ಕನಕನಗೇಂದ್ರಂ ॥೯೫॥

ಅಳಿಗಳ ಲರಿಂದಮೆಱ್ಱಾ ।
ಗಳೆ ಪೋಗದೆ ಸಾರ್ದು ಪೈಂಬಳಿಪೂವಿಂಗೆಸಸುಂ ॥
ಸುಱಿಗೊಳ್ತಿರಲ್ಕೆ ಹೀಲಿಯು ।
ತಳೆಯಂ ಪಿಡಿದಂದವಾಯ್ತು ದಿವಿಜಸಮೂಹಂ ॥೯೬॥

ಬೆಳಕಿಗೆ ಕಣ್ಗಳ ಬೆಳಗದು ।
ಬಳಸಿ ತುಷಾರಾದ್ರಿಯೆಂಬ ಸಂದೆಗಮಂ ಸಂ ॥
ಗಳಿಸುತ್ತಿರೆ ನೋಡುತ್ತುಂ ।
ನಿಳಿಂಪನಾರಿಯರ ಮೊತ್ತಮಡರ್ದತ್ತಾಗಳ್ ॥೯೭॥

ಮಿಱುಗುವ ದೋರೆವಾಯ್ದೊಱೆಗೆ ಮೆಲ್ನಡೆಗುಣ್ಮುವ ಸುಯ್ಗೆಸುತ್ತಲುಂ ।
ಮುಱಿಗಿಳವಿಂಡು ಮಿಂಚುವ ಮರಾಳದ ಪಿಂಡಲರ್ವಕ್ಕಿವಿಂಡು ತ ॥
ಟ್ಟಿಱಿಗಿ ಬರಲ್ವಿಳಾಸಕದಿ ದಡರುತ್ತಿರೆ ದೇವಕಾಂತೆಯರ್ ।
ತುಱುಗೆ[ಮೆಗಣ್ಣ]ಕಾಂತಿ ಕುಡಿಯಿಟ್ಟೆಸಸುಂ ಬಳಸಲ್ಸುರಾದ್ರಿಯಂ ॥೯೮॥

ಪಾ—1. ಮಗಣ್ಯ

ಅನಿಮಿಷರ ಮಕುಟತಟಘಟ ।
ತನವಿನಾನೇಕರತ್ನರುಜೆಯಡರ್ವಿಡೆಯೊಳ್ ॥
ತನಿಗೊರ್ವಿ ತಲ್ತಿರಲ್ಕನ ।
ಕನಗಂ ನೆನೆಯಿಸಿಯದೆಸೆವ ರೋಹಣಗಿರಿಯಂ ॥೯೯॥

ವ॥ ಮತ್ತವೂಪದದೊಳ್

ಕನಕಾದ್ರೀಂದ್ರದ ಭವ್ಯಕಾಳವನದಿಂದಂ ನಂದನಕ್ಕುದ್ಯನಂ ।
ದನದಿಂ ಸೌಮನಸಕ್ಕೆ ಸೌಮನಸದಿಂದಂ ಪಾಂಡುಕ್ಕಕ್ಕೇಱಿದ ॥
ತ್ತೆನಸುಂ ವಜ್ರಗೆ ಪುಟ್ಟ ವಿಸ್ಮಯವಿಭೂಕಾರಕ್ಕೆ ಪಕ್ಕಾದ ತಾ ।
ರನಗಂ ತಾನೆನೆ ಕಣ್ಗೆ ಕೌತುಕಮನೀಯುತ್ತುಂ ನಿಳಂಪದ್ವಿಪಂ ॥೧೦೦॥

ವ॥ ಅವನದ ಪಾವನೀಯಮಪ್ಪೀಕಾನದಿಕಾವಿಕಾಳಪ್ರದೇಕದೊಳ್--

ತನು ತುಚ್ಛಮದೆಂಟುಂ ಯೋ ।
ಜನಮೆಣಿಕೆಗೆ ನೂಱು ನೀಳಮಗಲಮದೈವ ॥
ತ್ತೆನೆ ಪಾಂಡುಕಶಿಲೆ ಸೊಗಿಯಿಪ್ಪು ।
ದೆನಸುಂ ವಿಮಳಾರ್ಧಚಂದ್ರರುಂದಾಕೃತಿಯಿಂ ॥೧೦೧॥

ನವಮುಕುಟಂಒಡೆದಂತಿರೆ ।
ನವಮಣಿಗಣಖಚಿತಕನಕಪೀಠತ್ರಿತಯ ॥
ಚ್ಛವಿನಿಜಯಾಚ್ಛಾದಿತವೈ ।
ಭವದಿಂ ಪಾಂಡುಕಶಿಳಾತಳಂ ಕರಮೆಸೆಗುಂ ॥೧೦೨॥

ವ॥ ಇಂತು ಮಂಡಿತವಾದ ಪಾಂಡುಕಶಿಳಾತಳದೊಳಾಖಂಡಳನಿಯಮದಿಂ ಸುರಶಿಲ್ಪಿನಿರಚಿತಸವನಮಂಡಪಂ ಮಣಿಸ್ತಂಭಸಂಭೃತಮುಂ । ವಜ್ರಘಟ್ಟಿತಾವೇಷ್ಟಿತಮುಂ । ವಿವಿಧಮಣಿಪ್ರತಾನೋದಂಚಿತವಿತಾನಮುಂ । ವಿಚಿತ್ರಪತ್ರಚಿತ್ರಿತಬಹುಭೂಮಿಕೋದ್ದಾಮಮುಂ । ಮರುನ್ಮಾರ್ಗರುಚಿಕೃತೋನ್ಮುಖಮುಯೂಖಮಣಿಕಳಕಳಿತಕಮನೀಯಮುಂ । ಹರಿನ್ಮಣಿನಿಕಾಯಹರಿನ್ಮಯೀಕೃತಮರಕತಮಣಿರುಚಿರಚಿತ ಚತುರ್ದ್ವಾರಬಾರುಪ್ರಭಾಸುರಮುಂ । ತರಳತಾರತಾರಕಾಹರಿಸ್ಪರ್ಧಿಪ್ರಭಾಭಿವ್ಯಕ್ತಮುಕ್ತಾವಳೀರಚಿತಲಂಬೂಪಲಲಿತವಳಂಬಮುಂ । ನನ್ಯದಿವ್ಯಾನರ್ಘ್ಯಬಹುರತ್ನನಿಹಿ

ಪ್ಪತಚಕುಪೊಕ್ಕೀಣಕಳಶಮುಂಗಳಭೃಂಗಾರ ಘಟಿಪಟಲಸುಚ್ಛವಿಸವಮುಚ್ಛ
ಯಾಚ್ಛಾದಿತಸುಂ ನೀಳಮಣಿಶಿಲಾನಿರ್ಮಿತನಿರ್ಮಳಧೂಪಘಟೀಕಳಾಪಕ
ವನೀಯಮುಂ । ಹರಿನ್ಮಣಿಮರೀಜವಾಳೋದ್ಗಾರಿಜಾಳಂಗಳ ಪಸುರ್ವೆಳ
ಗಿನ ತಂಡದಿಂ ಮಂಡಿತವೂದ ಜಿನಸವನಮಂಡಪದೊಳ್—

ವಿಮಳಾತಪತ್ರಮಣಿಕಳ ।
ಶಮುಕುರಭೃಂಗಾರಕೇತನವ್ಯಜನೆಲಸ ॥
ಚ್ಛಮರೀಜಸುಪ್ರತಿಷ್ಠಾ ।
ಪ್ಪಮಂಗಳಂ ಕಣ್ಗೆ ವಂದುದಾಮಂಡಪದೊಳ್ ॥೧೦೩॥

ಹರಿವಿಷ್ಟರದಿಕ್ಕಲದೊಳ್ ।
ಸುರುಚಿರಜನ್ಮಾಭಿಷೇಕಮಂಗಳವಿಧಿಯಿಂ ॥
ವಿರಜಿಸಿದಾಭವಾಸನ ।
ಮೆರಡುಂ ಕರಮೆಸೆದುವಲ್ತೆ ಮಣಿಗಣಘೃಣಿಯಿಂ ॥೧೦೪॥

ತನಿಗಂಪು ದೆಸೆಗೆ ಪಸರಿಸು ।
ವನರುಹಮಸಂತಾನಮುಖ್ಯಮಪ್ಪಾಹರಿಚಂ ॥
ದನಪಾರಿಜಾತಮುಂದಾ ।
ರನಮೇರುಪ್ರಸವಪೂರ್ಣಪಾತ್ರಮುವೆಸೆಗುಂ ॥೧೦೫॥

ಪರಿಮಿತ ಭ್ರೂವಲಿಯುಂ ಕ ।
ಪ್ಪುರವಳಿಕುಂ ವರ್ಣಪೂರಮುಂ ಮುತ್ತಿನ ಬಿ ॥
ತ್ತರಿಸುವ ಕಡೆಯುಂ ಪೊಸಕ ।
ತ್ತುರಿನೀರ್ಗಳ ಚಳಯಮುಂ ಕರಂ ಕಣ್ಗೊಳಕುಂ ॥೧೦೬॥

ಮುಗಮುಗಿಸುವಗರುಧೂಪದ ।
ಹೊಗೆ ನಿಮಿರ್ದು* ಕವಿಲ್ತು ಸವನಮಂಡಪವೆನಿಸುಂ ॥
ಸೊಗಯಿಸುವ ದಿವ್ಯಸೌರುಭ ।
ಮುಗೆ ಮಿಗೆ ತೀವಿದ ಕರಂಡಕಂ ತಾನೆನಿಕುಂ ॥೧೦೭॥

ವ। ಅದಲ್ಲದೆಯುಂ ಕಜೇದೇವೀ ವಿರಜಿತಸವನಮಂಗಳೋಪಕರಣ
ಸಂಪೂರ್ಣಕೋಭಿತಮುಂ । ಸಕಳಸುರವನಿತಾನೀಯನಾನಾನವೀನಪ್ರಸೂ

ನವರಿಳಿತನುಣಿಪಟಳಪರಿಪೂರ್ಣಮುಂ । ಹರಿಚಂದನಪಲ್ಲವೋಲ್ಲಸಿತಮು
ಖಚಂದನಚರ್ಚಾರಜಿತಚಂದ್ರೋಪಳಪುಟೀಪ್ರತಾನಪರೀತಮುಂ । ಶಬಲ
ಚ್ಛಾಯಪಟಾವಳೀಪರಿತ ಪುನರಾಂತರಂಗವುಪ್ಪ ಮಂಗಳಮಣಿತೋರಣ
ಮೂಳಾತುನೋಹರಮುಂ । ಮಾಧುರ್ಯನಾದೋದ್ಗಾರಿಮುಖಶಿಳೀಮುಖ
ಪತಶ್ಯಪವನಾಂದೋಳಿತಪ್ರಲಂಬಪ್ಪಪದಾವೋದ್ದಾಮ ಹರಿವಿಷ್ಟರವಳಯ
ಮುಂ । ಧೂಮಪ್ರರೋಹವಿಂಜೆನಿರ್ಮಳನಿರಸ್ತೋತ್ಸುಖಮಯೂಖ
ಲೇಖಾಪ್ರಸರಮಣಿದೀಪಿಕಾಕಳಾಸಕಮನೀಯಮುಮಾಗಿರ್ದ ಭಿವಣಮಂ
ಡಪಮಂ ಕಂಡು ಸೌಧರ್ಮೇಂದ್ರನಾಂದೋಳವಳಿಯಾಗಿ ತ್ರಿಭುವನ
ಶಿರೋಮಣಿಯುಂ ಪೂರ್ವಮುಖವಾಗಿ ತತ್ಸುರುಚಿರಹರಿವಿಷ್ಟರಶಿರೋಮ
ಣಿಯುಂ ಮಾಡಿದಾಗಳ್—

ಧಾತುಧರಿತ್ರೀಧರಸಂ ।
ಭೂತಾತುಳನಿರ್ಝರಾಂಬುಪೂರದೊಳಲ್ದಿಂ ॥
ತಾತನವೊಸೆದುದು ನಿರ್ಝರ ।
ಜಾತಂ ಜಿನಶಿಖರೀಶರೋಣಿಪ್ರಭೆಯೊಳ್ ॥೧೦೯॥

ಹರಿ ಶಿಖಿ ಯಮ ನಿರುತಿ ಜಳ ।
ಕರಪತಿ ಮರುದ್ಧಿಳಬಿಳ ಹರಾಹಿಪ ಶಶಿ ಭಾ ॥
ಸ್ಕರರಂ ಸೌಧರ್ಮೇಂದ್ರಂ ।
ನಿರವಿಸಿದಂ ದಕದಿಶಾಳಿಯೊಳ್ ಬಲಸಹಿತಂ ॥೧೧೦॥

ಮ ॥ ಮತ್ತಮಾಮಂಡಪದಭ್ಯಂತರಚತುರ್ದಿಸೆಗಳೊಳಾರಣಾಚ್ಯು
ತೇಂದ್ರರಾದಿಯಾದ ಕಲ್ಪಾಮರರುಮಂ ಚಮರವ್ಯೆರೋಚನಾದಿಯಾದ ಭವ
ನಾಮರ್ತ್ಯರುಮಂ ರವೀಂದುಗಳಾದಿಯಾದ ಜ್ಯೋತಿಷ್ಕದೇವರುಮಂ ಸತ್ಪು
ರುಷಮಹಾಪುರುಷರಾದಿಯಾದ ವ್ಯಂತರನಿಳಿಂಪರುಮಂ ನಿಲವಿಸಿ ನಿರುಪಮ್ಯ
ಕುಜಿವಸನಾದಿವಿವಿಧಮಂಗಳಮಣಿಭೂಷಣಸ್ವೀಕೃತರಪ್ಪ ಸೌಧರ್ಮೇಂದ್ರ
ನುತ್ತರಾಭಿಮುಖನಾಗಿಶಾನೇಂದ್ರಂ ದಕ್ಷಿಣಾಭಿಮುಖನಾಗಿ ರಾಗದಿಂ ಭಿವಣ
ಕ್ರಿಯೋಚಿತಮಂಗಳಪೀಠಂಗಳನಳಂಕರಿಸಿದಾಗಳ—

ವೊಳಗಿತ್ತೊರ್ಮೆಯೆ ದೇವತೂರ್ಯನಿನದಂ ದೇವಾಂಗನಾನೀಕಮುಂ ।
ಗಳಗೀತಧ್ವನಿ ದೇವವಂದಿಜನತೋದ್ಯತ್ಕೀರ್ತಿಸಧ್ವಾನಮಾ ॥
ವಿಳಭಕ್ತ್ಯಾಹ್ವಕದೇವಥವ್ಯಜನತಾಶೀರ್ವಾದನಾದಂ ಸಮು ।
ಜ್ವ್ವಳಪುಣ್ಯಾಣ್ಣವಭೂರ್ಣಿತಸ್ವರನಿಕಾಯೋಜ್ಜೃಂಭಮೆಂಬಂದದಿಂ॥೧೧೦॥

ಸುರುಜೆರಕುಸುಮೂದ್ಗರ್ಕ್ಷತ ।
ಪರಿಕಲಿನವಚಂದನಾಂಬುಕುಳದಿಂದಭ್ಯರ್ಚ್ಯ ॥
ದ್ಧರಣಿಂಗೆಯ್ದಂ ದಿವಿಜೇ ।
ಶ್ವರನುತ್ಸವದಿಂದನಿಸಿನ ನಾಂದೀವಿಧಿಯಿಂ ॥೧೧೧॥

ಹರಿಚಂದನಪಲ್ಲವಮುಖ ।
ವರಚಂದನಚರ್ಚಿತಾಚ್ಛ ಸುರಕುಜಕುಸುಮೋ ॥
ತ್ಕರಭೂಷಿತಕಳಶಂಗಳ ।
ನುರುವುದದಿಂದೆತ್ತಿ ಕೊಂಡು ನುಂತಾನ್ವಿತದಿಂ ॥೧೧೨॥

ಸಿತಪಂಕೇಜಪರಾಗಪೂರಿತಸಮುದ್ಯಚ್ಚಂದನಕ್ಲೋದಸಂ ।
ಯುತಗಂಗಾದಿಸನುಸ್ತತೀರ್ಥದತುಳಕ್ಲೋಣೀಧ್ರಚೂಳಾಭಿಷೇ ॥
ಭಿತಪದ್ಮಾದಿಸರೋವರಪ್ರಚಯದಚ್ಛಾಗಣ್ಯಪುಣ್ಯಾಂಬುವಂ ।
[ವ್ರತ]ದಿಂದಂ ಸುರಿದರ್ಚಿನಾರ್ಭಕನ ಸೌಂದಯೋರ್ತ್ತಮುಂಗಾಂಗದೊಳ

ವ॥ ಅಗಳ್ಪ್ರಂಹಾದಿಕಲ್ಪೇಂದ್ರರಾನಂದದಿಂ ದಿವ್ಯಕುಸುಮಸಂದೋ
ಹಮುಂ ನವ್ಯಗಂಧಮುಂ ನಿರ್ಮಳಾಕ್ಷತಮುಂ ನವೀನದರ್ಭೆಯುಂ ನೂತನದೂ
ರ್ವೆಯುಂ ನರಮಾನ್ನಚರುವುಂ ಪ್ರೋಜ್ವಳನ್ಮಣಿದೀಪಿಕಾವಳಿಯುಂ ತಮತ
ಮಗೆ ತಂದು ನಾಡೆಯುಂ ನೀಡುತ್ತಿರೆ ಪರಮಜಿನಜನ್ಮಾಭಿಷೇಕಂ ಕೋಭೆ
ಯನೆಯ್ದುತ್ತುಮಿರೆ—

ಸುಲಲಿತಸುವರ್ಣಕಳಶೋ ।
ಜ್ಜ್ವಲಿತಾಂಕುವಿನೊಡನೆ ಪೊಣ್ದರ್ದು ಕೈಮುಂದ ನಿ ॥
ರ್ಮಲನಾಳಕೀರವಾರಿಯ ।
ನೊಲವಿಂ ಸುರಿದರ್ಚಿನಾರ್ಭಕನ ಮಸ್ತಕದೊಳ್ ॥೧೧೪॥

ಕರಕಳಿತಕಸಕಳಶ ।
ಸ್ಫುರಿತದ್ಯುತಿಮಾಳೆಯೆಂಬ ಸಂದೆಗಮೊಂದು ॥
ತ್ತಿರಲೆಸೆವ ಚೂತಫಲರಸ ।
ಪರಿಕರಮಂ ಸುರಿದರಲ್ತೆ ಜಿನಶಿಶುಶಿರದೊಳ್ ॥೧೧೪॥

ದೆಸೆದೆಸೆಗೆ ಪರಿಮಳಂ ಪಸ ।
ರಿಸುತುಂ ಮಧುಪಾಳಯಂ ಮರುಳ್ಗೊಳಿಸುತುಮಿಂ ॥
ತೆಸೆವ ಮಧುರೇಕ್ಷುರಸಮಂ ।
ನಿಸದಂ ಸುರಿದರ್ಚಿನಾರ್ಘಕನ ಮಸ್ತಕದೊಳ್ ॥೧೧೫॥

ಸಂಪಗೆಯ ಸೊಗಯಿಸುವ ತನಿ ।
ಗಂಪಂ ವೈಡೂರ್ಯರತ್ನರುಜೆಯಂ ತಳೆದಾ ॥
ಸುಂಪೆಸವ ನವಘೃತಮನೊಲ ।
ವಿಂ ಪರಮನ ಶಿರದ ಮೇಲೆ ಸುರಿದರ್ಸುರಸರ್ ॥೧೧೬॥

ಸುರಕುಜಕುಸುಮರಜಃಪರಿ ।
ಕರಮಂ ಪರಿಭವಿಪ ವಿಮಳತರಸಿತಚೂರ್ಣೋರ್ ॥
ತ್ಕರಮಂ ಜಿನಶಿಶುಶಿರದೊಳ್ ।
ಸುರಿದರ್ಸುರಪತಿಗಳೊಸೆದು ಸುರರಾಯೆನೆಯುಂ ॥೧೧೭॥

ಪಂಚಮಚಕ್ರಿಯೆನಿಪ್ಪಂ ।
ಪಂಚಮಗತಿಲಬ್ಧವಿಭುಗೆ ಯೋಗ್ಯಂ ॥
ಪಂಚಮಜಳಧಿಜಳಂ ತಾ ।
ನಿಂ ಚೆಚ್ಚರವೆಂದು ಸುರಗೆ ಸುರಪತಿ ಬೆಸಸಲ್ ॥೧೧೮॥

ಪಿರಿದೆಸೆವ ದಕ್ಷಿಣೋತ್ತರ ।
ವೆರಡುಂ ದೆಸೆಯೆಸೆವ ಪಾಲ್ಗಡಲ್ಗಯ್ದಿ ಕಡಲ್ ॥
ಪರಿಯುತ್ತಿರೆ ಮಕುಟಮಣಿಗಣ ।
ಕಿರಣಂ ಪರಿದುದು ನಿರಂತರಂ ಸುರನಿಕರಂ ॥೧೧೯॥

ಜಳಗೆಂಟುಯೋಜನಂ ಕ ।
ಣ್ಗೊಳಿಸುವ ವೊಗವೊಂದು ಯೋಜನಂ ಪಥಣಿನೆ ಪ ॥

ಜ್ಜ್ವಳಪ ನವರತ್ನಘಟಸಂ ।
ಕುಳಮುಂ ತಮುತಮುಗೆ ಕೊಂಡುದಮರಸಮಾಹ ॥೧೨೧॥

ಮಣಿಹಾರಾವಳಿಯಂ ಹೆಗಲ್ಗಿಟ್ಟಿ ಮುಂಗಯ್ಯಿಂದೆ ಮೇಗಣ್ಗೆ ಕಂ ।
ಕಣಮುಂ ಸಾರ್ಚಿ ಸಮುಲ್ಲಸನ್ಮಕುಟನುಂ ಸಯ್ತೊತ್ತಿ ಕಯ್ಗಯ್ಯೊಳಾ ॥
ಕ್ಷ್ಣದಿಂ ರತ್ನಘಟಂಗಳಂ ಪಿಡಿದು ಪೊಕ್ಕರ್ ಕ್ಷೀರವಾರಾಶಿಯಂ ।
ಗಣನಾತೀತಮೆನಲ್ಕುದಂ ಪ್ರದಿದು ಸಾರ್ತಂದಂದು ವ್ಯಂದಾರಕರ್ ॥೧೨೨॥

ನಿರ್ನಿಕ್ತನಿಖಿಳಮಣಿರೋ ।
ಚಿರ್ನಿಚಯಾವಹಮಹತ್ತರಂಗನಿಕಾಯೋ ॥
ತ್ಕೀರ್ಣಂ ನೆಲೆವೆರ್ಚಿದುದಮೃ ।
ತಾರ್ಣವಮೆನೆ ಪೊಕ್ಕ ದಿವಿಜರೇನಗಣಿತವೋ ॥೧೨೩॥

ಮಾನಸದಿಂದಮಳಪಯಃ ।
ಪಾನಕ್ಕೆಳಗಿದ ಮರಾಳಜಾಳಂ ಪೆಱತೆಂ ॥
ತಾನಿದೆನೆ ವೊಗೆದುದಖಿಳಸು ।
ರಾನೀಕಂ ಚಂದ್ರಕಾಂತಘಟಕೋಟಿಗಳಂ ॥೧೨೪॥

ಜಿನಸವನಯೋಗ್ಯಮಾನಾ ।
ದೆನೆಂಬ ರಾಗಂ ಸುಧಾಬ್ಧಿಗುಣ್ಮಿದುದೆನೆ ಕಂ ॥
ಪಿನ ಸೊಂಪು ಪುದಿಯೆ ಮಣಿಕಳ ।
ಶನಿಕಾಯದಿನಮರಸಮಿತಿ ವೊಗೆದತ್ತಾಗಳ್ ॥೧೨೫॥

ಕುಳಶಳಯದಿಂದೆ ಬಂದಿರ ।
ದೊಳವುಗುತಿರ್ಪತುಳನೀಳಶೈಳಮಿದೆನೆ ಕ ॥
ಣ್ಗೊಳಪತೀತರತ್ನಘಟಸಂ ।
ಕುಳದಿಂ ವೊಗೆದುದು ಮುದಂ ಪೊದಳ್ದಿಮರಗಣಂ ॥೧೨೬॥

ಲವಣಾರ್ಣವಶಂಕೆಯನು ।
ದ್ಭವಿಸಿದುದಾವೊಗೆಯುತಿರ್ಪ ದಿವಿಜಾವಳಿಗು ॥
ಣ್ಮುವ ಪಚ್ಚನಪ್ಪ ನಿಜಸು ।
ಚ್ಛವಿಯಿಂ ನವಗಾರುಸ್ಮಘಟೀಸಂತಾನಂ ? ॥೧೨೭॥

ತಮತಮಗೆ ಸಂಭ್ರಮಂ ಮಿ ।
ಕ್ಕಮರರ್ವೊಗೆಯುತ್ತಿರಲ್ಕೆ ತೆರೆಮಸಗುತುಮಿ ॥
ರ್ದಮೃತಾರ್ಣವಮೆಸೆದುದು ಸವ ।
ನಮಹೋತ್ಸವವೊದವಿನಮಿರ್ದು ನರ್ತಿಪ ತೆಱದಿಂ ॥೧೨೪॥

ವೊಗೆವ ತೆಗೆವೆತ್ತಿ ನೀಡುವ ।
ಮಗುಳಿ ಕೊಡಂಗೊಳ್ವ ತೆಱಪನಾರಱಿವರ್ನೆ ॥
ಟ್ಟಗೆ ಪೋಪ ಬರ್ಪ ಸುರಮಾ ।
ಳಿಗಳಾಗಳ್ಕಣ್ಗೆ ವಂದುವೀನಚ್ಚರಿಯೋ ॥೧೨೫॥

ಎಡೆವಿಡದೆ ನೀಡುತಿರ್ದುದು ।
ಗಡಣಿಸಿ ತನತನಗೆ ದಿವಿಜತತಿ ಘಟಿಕತಿಯಂ ॥
ತಡೆಯದೆ ನೀಡಿಸಿಕೊಳ್ವಾ ।
ಬೆಡಂಗು ಕಡುವೇಗವಾಯ್ತು ಕಕ್ಕಸನೊಳಾಗಳ್ ॥೧೩೦॥

ಕುಡಿ ಘಟಿವಾಳೆಯಂ ತಳೆವ ಕಯ್ಗಳನೇಕವಡುರ್ತುಕೊಂಡು ಕೊಂ ।
ಡೆಡೆವಿಡದಲ್ತಿಯಿಂ ಸುರಿವ ಕಯ್ಗಳನೇಕಮುದಗ್ರಭಕ್ತಿಯಿಂ॥
ಪೊಡೆವಡುತಿರ್ಪ ಚೆನ್ನೊಸಲ ಕಯ್ಗಳನೇಕಮವರ್ಗೆ ನೀಡುವಾ ।
ಗಡಣದ ಕಯ್ಗಳನೇಕಮೆನೆ ಕಕ್ಕವಿಕುರ್ವಣಮೇನಗುರ್ವಮೋ ॥೧೩೧॥

ಸುರಿಯುತ್ತಿರ್ದಂ ಸುರೇಂದ್ರಂ ಜಿನಶಿಶುವಿನ ಶೀರ್ಷಾಗ್ರದೊಳ್ಪೂರೆನಲ್ಕೆ
ಚ್ಚರದಿಂ ಕ್ಷೀರಾಂಬುಧಾರಾವಳಯನಿಲಿಪ ಪೂರೋತ್ಕರಂ ಮುಂದರೋರ್ವೀ॥
ಧರದಿಂದಂ ಬೀಳ್ವ ಚಂಡಧ್ವನಿಗೆ ಕಿವುಡುವೀಡ್ದತ್ತು ದಿಕ್ಚಕ್ರವೋರಂ ।
ತಿರೆ ಸೂಸುತ್ತಿರ್ಪತುಂತುರ್ವನಿತುಱುಗಿಸುಧಾಲೋಕಮಾಯ್ತಲ್ತೆ ಲೋಕಂ

ಅವಿರಳಮಿದೆಸೆ ಜಿನಂಗಮ ।
ರವರಂ ಮಾಜ್ಪಭಿಷವಣಪಯಃಪ್ಲವದೊದವಿಂ ॥
ದಿವಿಜಾದ್ರಿ ಸೂಱುಗೊಂಡಂ ।
ತೆವೊಲೆಸೆದುದು ತುಹಿನಗಿರಿಯ ಬೆಳಗಿನ ಸಿರಿಯಂ ॥೧೩೩॥

ವ॥ ಆಗಳಂತೆಡೆವಿಡದೆ ಮಾಡುವಭಿಷವಣಪಯಸ್ಸೂಳಧಾರಾಪರಿಕರಾ
ಘಾತದಿಂ ಜಿನಾರ್ಭಕಂಗೆ ಸಂಕಟವಾಗದೇಕಿರ್ಯಾಮೇದು ಕಂಳೆಯನಪ್ಪುಕೆ

ಯ್ದುಮುರಸಮಿತಿ ತವುತಮಗೆ ನುಡಿನ ನುಡಿಯುಂ ಕೇಳ್ದು ಸೌಧರ್ಮೇಂದ್ರಂ
ಮುಂದಸ್ಮಿತಮುಖಾರವಿಂದನಾಗುತ್ತುಮಿರೆಯುಮಾಪದದೊಳ್—

ತನು ಮಿಡುಕದೆ ಜಿನಶಿಶುವೊ ।
ಯ್ಯನೆ ರಚಿಸುವನಿಳಪಾತದಿಂದನುರವಿಮಾ ॥
ನನಿಕಾಯಂ ಪಾಱದುದೆಂ ।
ದೆನೆ ತನ್ನಹಿಮೆಯನದಾವನೇವಣ್ಣಿಸುವಂ ॥೧೩೪॥

ವ॥ ಅದಂ ಕಂಡು ದಿನಿಜರ್ಕಳ್ಕೇಳ್ದು ಜಿಕ್ಕಸಂಬಟ್ಟು ತದೀಯಜಿನಾ
ರ್ಭಕನ ಮಹದಾದಿತ್ಯವೈಭವಕ್ಕೆ ಜಯಜಯಧ್ವಾನಂಗೆಯ್ಯುತ್ತುಮಿರೆ—

ಸುರಪತಿ ಜಿನಶಿಶುವಿಂಗತಿ ।
ಸರಭಸದಿಂ ಮಾಡುವಭಿಷವಾಮೃತಪೂರೋ ॥
ತ್ಕರಮನದೇವೊಗಟ್ಟಿಂ ಸುರ ।
ಗಿರಿಯುಳುಮರ್ಪಣಮನಿರ್ದ ತೆಱನಾಯ್ತಾಗಳ್ ॥೧೩೫॥

ಸುರಗಿರಿಯುಂ ಸಾರ್ದುದು ಹಿಮ ।
ಗಿರಿಯುಂ ಸಲೆ ಬಿಟ್ಟು ಸುರತರಂಗಿಣಿಪೆಂಬಂ ॥
ತಿರೆ ಜಿನಶಿಶುಪವನದ ಪಾ ।
ಲ್ವರಿಯೆಸೆದುದು ಸುತ್ತಿ ಸುರಿವ ಸರಭಸದಿಂದಂ ॥೧೩೬॥

ಜಿತಮಲ್ಲೀಫುಲ್ಲಜಾಳಂ ಜಿತಮಳಯಜವಿದ್ರಂಜಿತಾಂಚತ್ತುಪಾರಂ ।
ಜಿತಚಂಚತ್ತಾರಹಾರಂ ಜಿತಸಿತಕರದಭ್ರಂ ಜಿತಾಮರ್ತ್ಯಸಿಂಧೂ ॥
ದ್ಗತದಿಂದೀರಂ ಜಿತೇಂದುದ್ಯುತಿ ಜಿತಹರಹಾಸಂ ಜಿತಾಭ್ರದ್ವಿಪೇಂದ್ರಂ ।
ಜಿತಹೈಮಾದ್ರೀಂದ್ರಮಾಯ್ತಾ ಜಿನಶಿಶುಸವನಸ್ವಾದಪೀಯೂಷಪೂರಂ ॥

ತನ್ನುಳ್ಳಮೃತಮನಿತ್ತೆನ ।
ಗಿನ್ನುಳ್ಳದು ರತ್ನನಿವಹಮಿವನೊಯ್ದು ಜಗ ॥
ತ್ಸನ್ನುತಸಂ ಪೂಜಿಸಿವೆನು ।
ತುನ್ನೀಡುವ ತೆಱದಿನುದಧಿ ಬಳಿದಾಯ್ತಾಗಳ್ ॥೧೩೭॥

ಧರೆಯೆಲ್ಲಂ ಕ್ಷೀರೋದಾ ।
ಕರಮಯಮಿತ್ತಲ್ಸುಧಾಬ್ಧಿಯಿತ್ತಲ್ ದಶ್ಮಾ ॥

ಕರಮಯಮಾಗುತ್ತಿರೆ ಸುರ ।
ವರನಭಿಷವಮಂ ಜಿನಂಗೆ ಮಾಡಿದನೊಲವಿಂ ।೧೩೯॥

ವ॥ ಇಂತು ಮನನಾಹೆ ಜಿನಾರ್ಭಕಂಗಭಿಷೇಕಂಗೆಯ್ದು ಘನಮು
ದಮನೆಯ್ದಿ ಶಚಿಕಾಂತನನಂತರಮನಂತಮಹಿಮುಂಗೆಯನಂತಚತುಷ್ಟಯಪ
ದವೀಪತಿತ್ವಕ್ಕೆಂದಭಿಷವಣಮೆಂಬಂತೆ ಪುಣ್ಯಾಂಬುಪೂರ್ಣಚತುಷ್ಕೋಣಕ
ಲಂಗಳಂ ಮಜ್ಜನಮುಂ ವಿರಚಿಸಿ ನಿರ್ವರ್ತಿಸಿ ವಿವಳಮಣಿಕರ್ಪೂರದಾರ
ತಿಗಳನೆತ್ತಿ ಮುಂಗಳಗೀತತೋದ್ಯನಾದಂಗಳಿಸೆಯೆ ಮಿಸುಪ ಹರಿಚಂದನ
ಘನಸಾರಕರ್ದಮಮನುದ್ವರ್ತನಂಮಾಡಿ—

ನಲವಿಂ ಕೊಂಡು ಬಟ್ಟಿಕ್ಕೆ ಶಕ್ರನೆಸೆವಾಕರ್ಕೋಳವೇಳಾಪ್ರಿಯಂ ।
ಗುಲವಂಗಾದಿಸುಗಂಧಮಪ್ಪ ಶುಚಿವಸ್ತುಕ್ಷೋದಸಮ್ಮಿಶ್ರನಿ ॥
ರ್ಮಳವಾಃಪೂರ್ಣಸುವರ್ಣಕುಂಭತತಿಯಂ ತಾನೆತ್ತಿ ದೇವಾನಕಾ ।
ವಳಿ ಪೊಣ್ಮಲ್ಕಭಿಷೇಕಮಂ ಜಿನವರಂಗಾರೂಢಿಯಿಂ ಮಾಡಿದಂ ॥೧೪೦॥

ಪರಮಾಂಭಶ್ಚಂದನಾದ್ಯರ್ಚ್ಯತಕುಸುಮಚರುಪ್ರೋಜ್ವಳದ್ದೀಪಕಾ ।
ಗರುಧೂಪೋದ್ಯತ್ಫಲಾಪ್ಯಾರ್ಚನೆಗಳಿನಮಳಚ್ಛತ್ರಚಾರುಧ್ವಜೋದ್ಘ ॥
ಸುರನಾನಾರತ್ನಭೂಷಾವಳಿಚಮರಜಸಂಗೀತಕಬ್ಯಾತದಿಂದ ।
ಚ್ಚರಿಯಾಗಲ್ಪೂಜೆಗೆಯ್ದಂ ಜಿನಶಿಶುಚರಣಾಂಭೋಜಮಂ ದೇವರಾಜಂ ॥

ವ॥ ಇಂತು ವಿಶಿಷ್ಟಾಷ್ಟ ವಿಧಾರ್ಚನಾದಿಯಪ್ಪನಂತಾರ್ಚನೆಗಳಂ
ಸದ್ವಿನಯದಿಂದರ್ಚಿಸಿ ಸಂಸ್ತವತ್ರಿತಯದಿಂದಭಿವರ್ಣಿಸಿ ಪರಮಹರ್ಷಜನಿತ
ಪುಳಕಸೂಕ್ತಿರುಹವರ್ಮಧೃತ ನಿರ್ಮಳಾಂಗನಪ್ಪ ಸೌಧರ್ಮೇಂದ್ರನೀಶಾ
ನೇಂದ್ರಾದಿನೈಂದಾರಕದ್ವೀರನು ನಿರುಪಮಜಿನಸ್ನಪನವಿಪುಳದಿವ್ಯಾಮೋ
ದಬಂಧುರಗಂಧೋದಕಪವಿತ್ರೀಕೃತಕೋಟೀರನುಂ ತ್ರಿಭುವನಸ್ತವನೀಯ
ಪಾವನಜಿನಚರಣಮತನುಲಿಪ್ತಲುಳಿತಮಳಯರುಹ ಕರ್ದಮಾಲೇಪಿತಕರೀ
ರನುಂ ಮತಂಗಜನಿದ್ಯುಪ್ತವಿಪ್ತರನುಸ್ತಕನ್ಯಸ್ತವಿಳಸದಹರ್ದಮಳಾಂಘ್ರಿಕ
ಮಳಪೂಜಿತಶೇಷಾಕ್ಷತಾಳಂಕಾರನುಮಾಗಿ—

ಆದಿವಿಜಾಂಗನಾಜನಯುತಂ ಜಿನಬಾಳಕಪಾದಪಂಕಜ ।
ಕ್ಕಾದರದಿಂದೆ ಸಾರ್ದೆಱಗಿ ತತ್ಸವನಾಮಳಪಾವನೀಯಗಂ ॥

ಧೌದಕಸೇಚನಕ್ರಿಯೆಯಿನಾಕ್ಷಣದಿಂ ನಿಜಗಾತ್ರವಲ್ಲಿಗು ।
ತ್ಪಾದಿಸಿದಳ್ ಕಜೇಸತಿ ಲಸತ್ಪುಳಕಾಳುಳಕೋರಕಂಗಳಂ ॥೧೪೨॥

ಪರಮಜಿನಾರ್ಚಕಸ್ಪರ್ಶನಪುಣ್ಯೋದಯಪ್ರಣಕುಕ್ತಿಜಂಗಳಂ ।
ಶಿರದೊಳೆ ಭೂಷೆಗೆಯ್ದು ವರಸೇಸೆಯ ಮಾಲೆಯನಾತ್ಮವೇಣಿಯೊ ॥
ಳ್ಕರಿಯಿಸಿ ಪಾವನಾಮಳನಗಂಧನಿಷದ್ವರದಿಂ ಲಲಾಮಮಂ ।
ವಿರಜಿಸಿ ನಾಡೆಯುಂ ಪ್ರಮದಮಂ ಪಡೆದತ್ತ ಮರಾಂಗನಾಜನಂ ॥೧೪೩॥

ವ॥ ಮತ್ತಮಾಗಳನುರಾಗದಿಂದೆ ಕಜೆದೇವಿ ಕುಜೆವಸನೆಮೃಣಾಂ ಚಳದಿಂ ಜಿನಾರ್ಚಕನ ರಯ್ಯುಮಪ್ಪ ಮೆಯ್ಯ ಲವಜಲಕಣದಿರ್ಪನೊಪ್ಪೆ ತೊಡೆದುಂ । ಪರಮಚರಮಾಂಗಮಂಗಳಾಂಶುನೆರ್ತಕೀನಿಖಿಳಜನಲೋ ಚನರಂಗಪ್ರಭುವೆಸದೊಳ್ಪಡಿದ ನವೀನಜೇನಕಮನೀಯಕಾಂಡಪಟಮಿಂತಿ ದೆನೆ ವಿಮಳವಿಳಯಜಲೇಪಮಂ ವಿರಚಿಸಿಯುಂ । ವಿಳಸದಪವರ್ಗ ಲಕ್ಷ್ಮೀಲಲನೆ ಕಡುಸೋಲ್ತು ನೀಡುಂ ನೋಡುವಲ್ಲಿ ಬಿಡದೆ ನೆಲೆಗೊಂಡ ನಯನಾವಳೋಕನನಯೂಪಮಿಂತಿದೆನೆ ರಂಜಿಪ ತಿಲಕಮನಲಂಕರಿಸಿ ಯುಂ । ಪರಿಯರ್ಗೆಸಿಯನಪ್ಪ (?) ಜಗತ್ರಯಪ್ರಭು ಜನಿಯಿಸೆ ಶಿಶುತ್ವಕುಜಿತ ಮಿಂತಿದೆನೆ ಬಾಳೋಪಯೋಗ್ಯಮಪ್ಪನೇಕರತ್ನಾಳಂಕರಣಂಗಳನಳವಡೆ ತು ಡಿಸಿಯುಂ । ವೀರಾವರಣವಿಭ್ರಮಾಸ್ಪದನಪ್ಪ [1]ನಾದೋದ...[1]ಸಮಯದೊ ಳದುವೆ ಬೇಱುದಿಂತಿದೆನೆ ಕಮನೀಯಕಾಮಾಂಶುಕಾಭರಣಮಂ ಸಮನಿ ಸಿಯುಂ । ಮುಕ್ತಿಸಂಮಾಜ್ಯಪಟ್ಟಕ್ಕೆ ನೆಟ್ಟನೆಡೆಯಾದುದಿಂತಿದೆನೆ ವಿಶಾಳ ವಾದ ಭಾಳಪಟ್ಟನನಭೀಕ್ಷಿಸಿಯುಂ । ನಿರಸ್ತಗಾಢಬೋಧಲಕ್ಷ್ಮೀ ವಿಳೋಕನಮುಕುರುಂದಮಿಂತಿದೆನೆ ಸುಪ್ರಸನ್ನ ಶೋಭಾಸ್ಪದಮಪ್ಪ ವದನ ಮನಡಿಗಡಿಗೆ ನೋಡಿಯುಂ । ನಿಶ್ಶೇಯಸನಿತಂಬಿನೀಜಪಳಾಯತಚಾರು ಲೋಚನಶಫರಸಂಚರಣವಿಸ್ತಾರವಾರಿಜಾಕರಮಿಂತಿದೆನೆ ವಿರಾಜಿಸುವ ಕ್ಷೋರಂಗಮಂ ನೀಡುಂ ನೋಡಿಯುಂ । ಕೈವಲ್ಯಕಾಮಿನೀಕುಟಿಳಕುಂ ತಳಕಳಾಪಾಕೃಷ್ಟಿಕ್ರಿಯಾನಿಮಿತ್ತದಿಂ ನೀಳ್ದುವಿಂತಿದೆನೆ ಜಾನುದ್ವಯಮನ ತಿಕ್ರಮಿಸಿ ನಿಮಿರ್ದ ಬಾಹುಕಾಂಡಂಗಳನಡಿಗಡಿಗೆ ನಿರೀಕ್ಷಿಸಿಯುಂ । ಸದ ನುಳಾಮೃತ ಸೌಂದರೀಸೌಂದರ್ಯಸಲಿಲಕೇಳಿಕಾಸಾರಮಿಂತಿದೆನೆ ಭಾಸು

ಪಾ—1. ನಾದೋದಮಿ.

ರತಿವೆತ್ತ ಗಭೀರನಾಭೀಮಂಡಳಮಂ ಮಗುಳ್ದ ಮಗುಳ್ದು ನೋಡಿಯುಂ।
ಕಂಬುಪಂಕಜಕಪರಹಲಕುಲಿಶಚಕ್ರಧ್ವಜಾದಿಶುಭಚಿಹ್ನಸಂಚಯಾಂಚಿತ ಚಾ
ರುಚರಣಂಗಳನವಳೋಕನಂಗೆಯ್ದು ತೆಗೆತೆಗೆದು ನೊಸಲೊಳಟ್ಟು ಮುಂ
ಡಾಡಿ ಮುದಮನೆಯ್ದುತ್ತುಮಿರ್ದಾಪದದೊಳ್—

ಜಿನಶಿಶುಮೂರ್ತಿಯಂ ಪದೆದಭೀಕ್ಷಿಸಿಯುಂ ಪೊದಟ್ಟುಂ ಸಹಸ್ರಲೋ ।
ಚನಮೆನಗಾಯ್ತು ದಿಂದು ಸಫಳಂ ವಿಸಂದ್ವಿಸಹಸ್ರಜಿಹ್ವೆಯಾ ॥
ಯ್ತೆನಗದು ನೋಟಕ್ಕಿಂದು ಸುಖದಂ ದಿಟಮೆಂದಮರೇಂದ್ರನುಂ ಫಣೀಂ।
ದ್ರನುಮನುರಾಗಮಂ ತಳದವರ್ತಳದಪ್ಪಳಕಾಂಕುಶಂಗಳಂ ॥೧೪॥

ಪರಮೌದಾರಿಕದೇಹನ ,
ನಿರುಪಮನಿಜಕಾಂತಿಜಾಳಬಾಳಾತಪಮಾ ॥
ಸುರಪತಿಯು ಫಣಿಪತಿಯ ಹೃ ।
ತ್ಸರಸಿಜದೊಳ್ಪಡೆದುದುರುವಿಕಾಸಶ್ರೀಯುಂ ॥೧೪೫॥

ವ॥ ಅಗಳಿಂತು ನಿರುಪಮಾನಂದಲಕ್ಷ್ಮೀಜನಿತಹೃದಯಾರವಿಂದನಾ
ಪುರಂದರಂ ತ್ರಿಭುವನಚೂಡಾಮಣಿಯ ಪದನಖಮಣಿಗೆ ನಿಜಚೂಡಾಮ
ಣಿಯು ಮಯೂಖಮಾಲೆಯನೋಲಗಿಸಿ ತಡೆಯದೆತ್ತಿಕೊಂಡ್ಕಿರಾವತವೇ
ತಂಡಮೂರ್ಧಪಿಂಡಾಸನಾಸೀನನಾಗಿ ಶುಚಿವಸ್ತ್ರನಿಚಿತನಿಜಾಂಕಪೀಠದೊಳ್
ತಜ್ಜಿನಶಿಶುವಂ ತಳೆದು ಚತುರ್ನಿಕಾಯಾಮರಸೇನಾಸಂದೋಹದಿಂ ಮುಂದ
ರಾಚಳದಿಂ ತಳರ್ದು—

ನೆಗೆದೆತ್ತಂ ಪೊಣ್ಮೆ ನಾನಾನಳರುತಿ ಸುರಕಾಂತಾನಖಾಂಕುಪ್ರತಾನಂ ।
ಗಗನಾಂತರ್ವೀಧಿಯಂ ಭೂಷಿಸುತಿರೆ ಬಳಯಾನೋಚ್ಚಾಳಕೋಳಾ
[ಹಳಂ ಮೂ ॥
ಜಗಮಂ ಮೆಯ್ವೆರ್ಚಿ ತೀವುತ್ತಿರೆ ದಿವಿಜಗಜೋದ್ಯದ್ಗಮಂ ನಾಡೆಯುಂ ದಿ।
ಟ್ಟಿಗಪೂರ್ವಾಶ್ಚರ್ಯಮಾಗುತ್ತಿರೆ ತಳರ್ದನಮತ್ಯೇಂದ್ರಸುತ್ಸಾಹದಿಂದಂ ॥

ಅನಿಮಿಷವಾರಣಾಂಗರುಚಿ ವಾರಿ ಸುರಪ್ರಮದಾಕ್ಷಿಮಾಳೆ ವಾ।
ಕ್ಷ(?)ತಿ ಕಸ್ತ್ರಕಾಂತಿ ವಳಸಂಳುಳಮೆಂದೆನೆ ತಾನಮತ್ಯ್ಗವಾ ॥

ಹಿನಿಬಲಮತ್ಯರ್ಘವಾಹಿನಿ ಬರಲ್ಮಡೆದಂ ಸುರರಾಜನಿಂತು ಹ ।
ಸ್ತಿನಪುರಿಗುಣ್ಮುತುಂ ಬರೆ ವಿರಾಜಿಪ ಮಂಗಳತೂರ್ಯನಿಸ್ವನಂ ॥೧೪೭॥

ಆದಿವಿಜಪತಿ ಲಸದ್ಭೋ ।
ಧೋದಯನಂ ಕೊಂಡು ಪಿಂಗಿ ಪೋಗೆ ನಿಧಾನಂ ॥
ಪೋದ ಕುಟಿಯುಂತೆ ಕಣ್ಗಳ ।
ಗಾದುದು ಮಂದರಮಹೀಧರಂ ತತ್ಪದದೊಳ್ ॥೧೪೮॥

ಸುರಪತಿ ಜಿನಶಿಶುವೆರಸೇ ।
ಱ್ತಿರುತಿರ್ದಪನೆಂಬ ಸನ್ಮದಂ ಪ್ರದಿಡಾಗಳ್ ॥
ಕುರುಪತಿ ಕಯ್ಗೆಯಿಸಿದನ ।
ಚ್ಚರಿ ಕಯ್ಮಿಗೆ ಪೆಂಪ್ರವೆತ್ತ ಹಸ್ತಿನಪುರಮಂ ॥೧೪೯॥

ಗುಡಿಗಳ್ತದ್ಭೂಪಕೀರ್ತಿಬ್ರತತಿಯ ಕುಡಿಗಳ್ಮತ್ತಿನಿಂ ಬಿತ್ತರಿಪ್ಪು ।
ಕಡೆಗಳ್ವಧೀವಿಯತ್ತಾರಗೆಯ(?) ಪಡೆದಳುದ್ಯನ್ಮಣಿಶ್ರೇಣಿಯಿಂ ಚೆಂ ॥
ಬಡೆದಿರ್ಪಾತೋರಣಂಗಳ್ಪುರವರಮೆಯಾರಾಳ ತಜ್ಜ್ಯೋರಣಂಗಳ್ ।
ಗಡಮೆಂಬಂತಾದವಾಹಸ್ತಿನಪುರಿ ಮಿಗೆ ಚೆಲ್ವಾಗೆಕೈಗೆಯ್ದುದಾಗಳ್॥೧೫೦॥

ವ॥ ಇಂತು ಕೈಗೆಯ್ದ ವಿಜೆತ್ರಕೋಭೆಯನಪ್ಪಳಯ್ದ ನಿರ್ಜಿತನಿಳಿಂಪನಾಥನಗರಂ ವಿಜಿತವಿತ್ತಪತಿಪತ್ತನವಿಭವಮಧಃಕೃತಭೋಗವತೀಪುರಮಾಗಿರ್ದ ಹಸ್ತಿನಪುರಕ್ಕಾಗಳ್—

ಪರಿವೃತಚತುರ್ನಿಕಾಯಾ ।
ಮರಸೇನಾಯಃಸಕಳಕಳಧ್ವನಿ ಭುವನೋ ॥
ದಂಭರಿತಮಾಗೆ ಹಸ್ತಿನ ।
ಪುರಿಗೇಱ್ದಿಂದಂ ಪುರಂದರಂ ಪದೆಪಿಂದಂ ॥೧೫೧॥

ವ॥ ಅಂತು ಬಂದು ಸೌಧರ್ಮೇಂದ್ರಂ ತದೀಯಹಸ್ತಿನಪುರಪರಿಸರ ಪರೀತೋದ್ಯಾನದೊಳ್ಸಕಳಸುರಸೇನಾಪ್ರತಾನಮಂ ನಿಲಿಸಿ ಸಲವಿಂದಮಿಶಾನೇಂದ್ರಪ್ರಮುಖಪರಿಮಿತಸುಮನಸ್ಸಮೂಹಂ ಬೆರಸು ಪುಗುತಿರ್ದಾಗಳ್—

ತರುಣಾರ್ಕಂ ತುಹಿನಾದ್ರಿಚೂಳಿಕೆಗೆ ವಂದಿರ್ದಂದದಿಂ ಕಳ್ಪಿಸಿಂ ।
ಧುರಕುಂಭಾಸನದೊಳ್ವಿಭಾಸುರಸುತೇಜೋಮೂರ್ತಿವೆತ್ತಿಂತು ಬಿ ॥
ತ್ತರಿಸುತ್ತಿರ್ದನೆ ತಾಂ ಜಿನಾರ್ಚಕನೆನುತ್ತುಂ ಪೌರರಾಗಳ್ಕರಾಂ ।
ಬುರುಹನ್ಯಸ್ತಲಲಾಟರಾಗಿ ನಮಿರಾಗುತ್ತಿರ್ದರೆತ್ತತ್ತಲುಂ ॥೧೫೯॥

ಚಳನೇತ್ರಂ ಚಂಚರೀಕಾವಳಿಯನುಗುಲ್ವಿವೊಲ್ನೋಡುತುಂ ಚಾರು

[ಮಲ್ಲೀ

ಕುಳಸಂಮಿಶ್ರಚ್ಛತೀರ್ಥಾಂಬುವನೆ ಜಿನವರಂಗಳ್ಗೆವೆತ್ತುತ್ತುಮತ್ಯು ॥
ಜ್ಜ್ವಳವನ್ಮಾಣಿಕ್ಯದೀಪಪ್ರಸರಮನೆಸೆದೆತ್ತುತ್ತುಮಿರ್ದತ್ತು ಹೆರ್ಮ್ಯಂ ।
ಗಳ ಚಂಚಚ್ಚೂಳಿಕಾಭೂಮಿಕೆಗಳೊಳಿನಿತಾನುಂ ಪುರಸ್ತ್ರೀವಿತಾನಂ ॥

ತನತನಗೆ ಹರ್ಮ್ಯಹರ್ಮ್ಯದ ।
ಕೊನೆನೆಲೆಗಳನೇಹ ನೋಡುತುಂ ಪುರಜನವಿಂ ॥
ತನಿತುಂ ಜಯಜಯರುತಿ ಮಿಗೆ ।
ಜಿನತಿಕುವಿಂಗೈತ್ತಿರ್ದುದೊದವಿದ ಮುದದಿಂ ॥೧೫೪॥

ಜಿನಪಂ ಬೋಧಪ್ರದೀಪಂ ತಮಗುದಯಿಸಿದಂ ನೋಡಿರೇ ತಾವಿದೇನೆಂ ।
ಬನಘೂತ್ಮರ್ಮ್ಮನ್ನಮೆಂತಪ್ಪತಿಕಯಸುಕೃತಂಗೆಯ್ದರೆಂದೊರ್ವರೊರ್ವ ॥
ರ್ಗೆನಿತಾನುಂ ಪೇೞುತುಂ ವೀಕ್ಷಿಸುತುಮಸದಳಂ ವಿಶ್ವಸೇನಾವನೀಪಾ ।
ಳನನ್ಯೋರಾದೇವಿಯಂ ತತ್ಪುರಜನವನಿಕುಂ ವರ್ಣಿಸುತ್ತಿರ್ದುದೆತ್ತಂ ॥೧೫೫॥

ವ॥ ಎಂದಿಂತು ಪುರಜನವಾನಂದದಿಂದಭಿವರ್ಣಿಸುತ್ತುಮಿರ್ಪನ್ನೆಗ ಮಾಪುರಂದೆರಂ ಬಂದು ತದೀಯನರೇಂದ್ರಮಂದಿರಮಂ ಪೊಕ್ಕುಂ ಮುನ್ನಮೆ ತನ್ನ ನಿಯಮದಿಂ ಕಲ್ಪಜಶಿಲ್ಪಿ ನಿರ್ಮಿಸಿದ ವಿಜಿತ್ರಮಂಡಪದೊಳ್ಕಂಡಿ ತಂಬೆತ್ತ ವೇತಂಡವಿದ್ಯುಪ್ಪವಿಪ್ಪರಾಗದೊಳ್ಜಿನಾರ್ಚಕನಂ ಬಿಜಯಂಗೆಯ್ಸಿದಾಗಳ್--

ಮನದಿಂ ಲೋಚನದಿಂ ಮುದಶ್ರೀ ಪರಿಯಲ್ಕಂದಾಗಳೀಟ್ಟಂದು ನಾಂ
ದಶವಶ್ರೀಯಿಂ ಬುಹಮಂ ನಿರೀಕ್ಷಿಸಿ ನಿರಸ್ತಾಸಂದಟೀಯೂಪವಾ ॥
ರಿನಿಧಾನೋಜ್ಜ್ವಲತರಂಗಮಾಳಿಕೆಗಳೊಳ್ತೀಂಕಾಡುತಿರ್ದರ್ ಮಹೀ
ಕಣುವಾದೇವಿಯುಮಃತೆ ಸನ್ಮದಮನೆಯ್ದಿತ್ತೆಯ್ದೆ ಬಂಧುವ್ರಜಂ

ವ॥ ಆಸಂದಸಮುಯೂಖಾವಳೋಕನದಿನಾನಂದಮನೆಯ್ದಿದ ವಿಶ್ವ
ಸೇನನುಹಾರಾಜಸುನುಸ್ಯೈರಾದೇವಿಯುವನುಜಿತಾಸನಾಸೀನಂ ಮಾಡಿ ಜೆ
ನಾರ್ಚಕನ ಜನ್ಮಾಭಿಷವಕಲ್ಯಾಣೋತ್ಸವಮುಂ ಶಚೀವಲ್ಲಭನವರ್ಗ
ಸೊಂಪುಮಳವಿಯೆ ಪೇೞ್ದು—

ಗುರುವಾದಿರ್ನೆಗೞ್ದೀತ್ರಿಲೋಕಗುರುವಿಂಗಾರಿಂತು ನಿಮ್ಮಂತೆ ನೋ೦।
ತರೆನುತ್ತುಂ ಕುರುರಾಜಶೇಖರನನ್ಯೈರಾದೇವಿಯುಂ ನಾಡೆಯುಂ ॥
ಸುರರಾಜಂ ನುತಿಗೆಯ್ದು ಪೂಜಿಸಿದನುದ್ಯನ್ಮವ್ಯದಿವ್ಯಪ್ರಭಾ ।
ಸುರಮೂಲ್ಯಾಂಬರಭೂಪಣಾವಳಿಗಳಿಂ ತಾನಂದು ಸಾನಂದದಿಂ ॥೧೫೩॥

ಪಿರಿದುಂ ಪಿತೃಮಾತೃಗಳೊಳ್ ।
ಪರಮೋತ್ಸವಮುತ್ಸುದಗ್ರಮಾಗಲ್ಕಾಗಳ್ ॥
ಸುರಪತಿ ಪರಮೋತ್ಸವದಿಂ ।
ವಿರಜಿಸಿದಂ ಶಿಶುಗೆ ಜಾತಕರ್ಮೋತ್ಸವಮುಂ ॥೧೫೪॥

ವ॥ ತದನಂತರದೊಳ್—

ನಿರುಪಮಶಾಂತಿಗೆ ನೆಲೆಯಿದು ।
ಜರನುಶರೀರನ ನಿಜಪ್ರಭಾವಮೆನುತ್ತುಂ ॥
ಪರಿಭಾವಿಸಿ ಪೆಸರಿಟ್ಟಂ ।
ಸುರಪತಿ ಶಾಂತೀಶನೆಂದು ಸಂತಸದಿಂದಂ ॥೧೫೫॥

ಎನಿತಾನುಂ ಕೃತಕೃತ್ಯನಾನೆ ಪೆೞ್ತೇನಿಂತೀಜಿನೇಂದ್ರಂಗೆ ಪಾ ।
ವನಜನ್ಮಾಭಿಷವಕ್ರಿಯಾವಿಭವಮಂತಾರ್ಚ್ಯಂ ಮಪ್ಪುದೆಂತೆ ಪೂ ॥
ಜ್ಞೆನಸುಂ ಮಾಡಿದೆನೆಂಬ ಸನ್ಮದಮಣಂ ಮೆಯ್ವೆರ್ಚಿ ಮೆಯ್ಯಾಯಿ ನೆ ।
ಟ್ಟನೆ ನಾಟ್ಯಾಭಿನಯುಂಗೆಯಲ್ಕೆಗೞ್ದನಾಸೌಧರ್ಮಕಲ್ಪಾಧಿಪಂ ॥೧೫೬॥

ವ ॥ ಮತ್ತನೂಗಳ್ನೆರೆದಿರ್ದ ಕುತಪಜನಸಮುದಯದೊಳ್ಪಡ್ವಾಧೀ
ಶ್ವರಸಂದೋಹಸಂದರ್ಭರಪ್ಪ ಗಂಧರ್ವಗಾಯಕನಾಯಕರುಂ, ವಿವಿಧವಿಚಿತ್ರ
ವಾದನವಿಶಾರದರಪ್ಪ ವಿಬುಧವಾದಕರುಂ । ಚತುರ್ವಿಧವಾಂಕವಾದನಚತು
ರ್ಮುಖರಪ್ಪ ವೃಂದಾರಕವಾಂಶಿಕರುಂ । ವೀಣಾತ್ರಿಣವಾದನವಿಜಯ

ವಾಣಿಗಳಪ್ಪ ಗೀರ್ವಾಣವೈಣಿಕರುಂ । ತಾಳವಾದನತತ್ಪರೋಚಿಸರಪ್ಪ ತ್ರಿದಶತಾಳಧರರುಂ। ಕೇಳಕೇಳಿಕೆಯ ಮೇಳವಂ ಸಮಕೊಳಿಸಿ ದಕ್ಷಿಣೋತ್ತರಾಶಾಧೀಶಯರ್ವನಿಕಾಪಟಮನೆತ್ತಿ ಪಿಡಿದು[1] ದಿವಿಜೇಂದ್ರಂ ದುರಿತಾಪಹರನಿಮಿತ್ತಮೆನೆ ಭಾರತಿಕಾಚಾರಮನಪ್ಪುಕೆಯ್ದು ನಾಂದೀವಿಧಿಯೊಳ್ಪಂದು ನಿಂದಿರ್ದು ಜಿನಪತಿಗೆ ವಿನತನಾಗಿ ಪ್ರಷ್ಪಾಂಜಳಿಯಂ ಸೂಸಿದ ಪದದೊಳ್—

ಸುರಪತಿಪಾಣಿಪಯೋಧರ ।
ಪರಿಚ್ಯುತಸ್ವಚ್ಛಮೌಕ್ತಿಕೋತ್ಕರಮೆಂಬಂ ॥
ತಿರೆ ಕರಮೆಸೆದುದು ಸೂಸಿದ ।
ಸುರುಜೆರಪುಷ್ಪಾಂಜಳಿಪ್ರಸೂನವಿತಾನಂ ॥೧೬೧॥

ವ॥ ಅಂತುಮಲ್ಲದೆಯುಂ—

ಆಪರಮನ ಪದನಖತಾ ।
ರಾಪತಿಸಮಿತಿಯನೆ ಸಾರ್ದ ಸದಮಳತರತಾ ॥
ರಾಪರಿಕರಮೆಸಲೆಸೆದ
ತ್ತಾಪುಷ್ಪಾಂಜಳಿಯ ರಂಜಿಪಲರ್ಗಳ ಬಳಗಂ ॥೧೬೨॥

ವ ॥ ಆಗಳ್ದರ್ಶನಾವತಂಸೀಯವೋಸರಿಸುವಂತೆ ಕಾಂಡಪಟವೋಸರಿಸೆ—

ಸ್ಥಾನಕವೊಂಭತ್ತಕೆ ನೆಗ ।
*ಟ್ಟಿನೂಲಿಂಟೆಂಬ ನಿಲವುಗಳ ನಿಜಹಸ್ಮ ॥
ಸ್ಥಾನಮಿದೆನೆ ಋಜ್ವಾಗತ ।
ಮೇನೆಸೆದುದೊ ಪೂರ್ವನಾಟ್ಯದೊಳ್ಸುರಪತಿಯಾ ॥೧೬೩॥

ಆಸಮಯಋಜುವಿಸ ಪದವಿ ।
ನ್ಯಾಸಂ ಸೌಷ್ಠವವನೂನರೇಖೆ ಸಭಾ ॥
ಭಾಸುರಮಾಗಿರೆ ಸಕಳಸ ।
ಭಾಸದರಂ ಮೋಹಿಸಿದನೆಮತ್ಯಾದೀಶಂ ॥೧೬೪॥

ಪಾ—1. ದಿಶರ್ಯಸಂ ನಿಕಾಪಟಮನೆತ್ತಿ ಪಿಡಿಯೆ।

ವ॥ ತನ್ನಯ ನೃತ್ಯವಿಶೇಷದೊಳ್ಪದಿಮೂಱುಂ ತೆಱದ ಶಿರೋಭೇದಮುಂ। ಇರ್ಪತ್ತ ನಾಲ್ಕುಂ ತೆಱದ ಪ್ರಥಮಹಸ್ತಭೇದಮುಂ।ಇಪ್ಪತ್ತೆರಡುಂ ತೆಱದ ನೃತ್ಯಹಸ್ತಭೇದಮುಂ।ಪದಿಮೂಱುಂ ತೆಱದ ಸಂಯತಹಸ್ತಭೇದಮುಂ। ನೂಱಿಂಟುಂ ತೆಱದ ಕರಣಭೇದಮುಂ। ಮೂವ್ವತ್ತೆರಡುಂ ತೆಱದ ಚಾರಿಭೇದಮುಂ ।ಮೂವ್ವತ್ತೆರಡುಂ ತೆಱದಂಗಹಾರಭೇದನುಂ।ಎಂಟುಂ ತೆಱದ ರಸದೃಷ್ಟಿಭೇದಮುಂ। ಎಂಟುಂ ತೆಱದ ಭಾವದೃಷ್ಟಿಭೇದಮುಂ।ಇಪ್ಪತ್ತುಂ ತೆಱದ ಸಂಚಾರಿದೃಷ್ಟಿಭೇದಮುಂ । ಬಂಭತ್ತುಂ ತೆಱದಾಲಿಭೇದಮುಂ । ಎಂಟುಂತೆಱದಾಲೋಕಭೇದಮುಂ । ಬಂಭತ್ತುಂತೆಱದಾಲಿಭೇದಮುಂ । ಎಂಟುಂ ತೆಱದಾಲೋಕನಭೇದಮುಂ। ಬಂಭತ್ತುಂ ತೆಱದ ಪಕ್ಷ್ಮಭೇದಮುಂ । ಏೞುಂ ತೆಱದ ಪುರ್ವಿನಭೇದಮುಂ । ಅಱುಂತೆಱದ ನಾಸಿಕಾಭೇದಮುಂ।ಅಱುಂತೆಱದೊಳಭೇದಮುಂ। ಅಱುಂ ತೆಱದರಭೇದಮುಂ। ಏೞುಂ ತೆಱದ ಹನುಭೇದಮುಂ । ಬಂಭತ್ತುಂ ತೆಱದ ಗ್ರೀವಾಭೇದಮುಂ।ಅಯ್ದುಂ ತೆಱದುರೋಭೇದಮುಂ।ಮೂಱುಂ ತೆಱದ ವರಭೇದಮುಂ।ಅಯ್ದುಂತೆಱದ ಪಾರ್ಶ್ವಭೇದಮುಂ। ಅಯ್ದುಂ ತೆಱದ ನಿತಂಬಭೇದಮುಂ।ಬಂಭತ್ತುಂ ತೆಱದ ಸ್ಥಾನಕಭೇದಮುಂ। ಪನ್ನೆರಡುಂ ತೆಱದ ಗತಿಭೇದಮುಂ,ಎಂಟುಂ ತೆಱದ ಸ್ಥಾಯಿಭಾವಭೇದಮುಂ; ಮೂವ್ವತ್ತಾಱುಂ ತೆಱದ ಸಂಚಾರಿಭೇದಮುಂ। ಎಂಟುಂ ತೆಱದ ರಸಭೇದಮುಂ। ಎಂಟುಂ ತೆಱದ ಭಾವರಸಭೇದಮುಂ । ಎಂಟುಂ ತೆಱದ ಸಾತ್ವಿಕಚೇಷ್ಟಾಭೇದಮುಂ; ಅಱುಂ ತೆಱದ ಲಾವಣ್ಯಭೇದಮುಂ।ನಾಲ್ಕುಂ ತೆಱದ ಮುಖರಸಭೇದಮುಂ । ಅಂಗಿಕವಾಚಿಕವಾಹಾರ್ಯಸಾತ್ವಿಕಮೆಂಬ ನಾಲ್ಕುಂ ತೆಱದಭಿನಯಭೇದಮುಂ।ಎರಡುಂ ತೆಱದ ರೀತಿಭೇದಮುಂ । ಎರಡುಂ ತೆಱದ ನೃತ್ಯಭೇದಮುಂ। ನಾಲ್ಕುಂತೆಱದಂಗಭೇದಮುಂ ನೆಹೆದು—

ಸೊಗಯಿಪ ಮಧುರುತಿಮಾಯಾ ।
ನುಗತಂ ತಾಳಾನುಗತಮುದಂಚಿತವಾದ್ಯಾ ॥
ನುಗತಮೆನಲ್ಪಿರಿದುಂ ಕೈ ।
ಮಿಗೆ ಚಿತ್ರತೆ ಶಕ್ರನಿಂತು ನರ್ತಿಸುತಿರ್ದಂ ॥೧೬೫॥

ಜಿನಮಹಿಮೆಯೊಡನೆ ತನ್ನಯ ।
ಮನದುತ್ಸವಮೊದವಿದುದು ತದೀಯೋತ್ಸವದಿಂ ॥

ತನಿವೆರ್ಚಿದುದೆನೆ ಬೆಳಗದು ।
ತನುಪರಿಚಪ್ಪಂಬರಂಬರಂ ಸುರಪತಿಯಾ

ವ॥ ಇಂತು ಮೆಯ್ವೆರ್ಚಿ ಬಿಚ್ಚತಂ ಸುರೇಂದ್ರಂ ತಾಂಡವಾಡಂಬ
ರಮನುಜ್ಜುಗಿಸಿದಾಗಳ್-

ಎನಸುಂ ವಿಕ್ರಯೆಯಿಂ ನಿಲ ।
ವೆನಿತನಿತುಮನಂಗಹಾರಹಸ್ತಶಿರೋಲೋ ॥
ಚನಪದಗತಿಯೆನಿತನಿತು ।
ಮನನಿಮಿಷಪತಿ ಮೆಱೆದನೊರ್ವೊದಲ್ತಾಂಡವದೊಳ್ ॥೧೬೩॥

ಇಳೆ ಪಾದೋದ್ಯತ್ಪ್ರಚಾರಕ್ಕಿದು ನೆಱೆಯಿತಿಲ್ಲವಿಸ್ತಾರಿಪಾಶಾ ।
ವಳಯಂ ಹಸ್ತಂಗಳಾಚಾಳಿಯದಚಳಬಳಕ್ಕೆಯ್ದಿತಿಲ್ಲಾನಭೋಂತ॥
ರ್ವಳಯಂ ತನ್ಮೌಳಿಚೂಳಾವಳನದ ತುಡುಕಿಂಗೆಯ್ದಿತಿಲ್ಲೆಂಬಗುರ್ವಂ ।
ತಳೆದುರ್ವಿಂ ತಾಂಡವಾಡಂಬರಮನೆಸಗಿದಂ ರಾಗದಿಂ ಶಕ್ರನಾಗಳ್॥೧೬೪॥

ಧರೆ ಚರಣಾನಯಂ ದಿಕ್ಕತಿ ।
ಕರಪಲ್ಲವದ ಕಾಳಮಯಂ ನಭಂ ಮುಕುಟಮೆ ॥
ಸ್ಫುರದರುಣದ್ಯುತಿಮಯಮಾ ।
ಗಿರೆ ನರ್ತಿಸುತಿರ್ದನಿಂದ್ರನುತ್ಸವದಿಂದಂ ॥೧೬೫॥

ನೆಹೆ ವಿಕ್ರಯೆಯಿಂ ನಿರ್ಮಿಸಿ ।
ಮಿಱುಗುವ ಬಾಹಾಸಹಸ್ರತತಿಯಿಂದೆನಸುಂ ॥
ತಱಿಸಂದು ನರ್ತಿಸುತ್ತುಂ ।
ಮೆಱೆದಿದಂ ತನ್ನಯ ಮಹೇಂದ್ರಜಾಲಮನಿಂದ್ರಂ ॥೧೬೬॥

ತುಱುಗಿದ ತೋಳ ತೊಂಗಲೆಡೆಯೊಳ್ಪುದಿದಾಕರಪಲ್ಲವಂಗಳೊ ।
ಳ್ಕುಱುಪ ಸಮುನ್ನತಾಂಸಪುಟದೊಳ್ಕುಟಿಯೊಳ್ಸವಿಳಾಸವಕ್ಷದೊ ॥
ಳ್ನೆಱಿ ನಲಿದಾಡುತಿರ್ಪ ಮರನರ್ತಕಿಯರ್ಕಳನೀಕ್ಷಿಸೊಪ್ಪಿದಂ।
ಮೆಱೆವವೊಲೊರ್ಮೆದಲ್ನೆಗಲ್ದ ರೂಢಿಯ ತಾಂಡವಲಾಸ್ಯಭೇದಮಂ ॥

ಜಳದಾಧ್ವಲಕ್ಷ್ಮ ಕಱಿದಪ ।
ಳಲರ್ವಱಿಯನೆನಲ್ಕೆ ಭಗಣಮುಲುಗುತ್ತಿರ್ದ ॥

ತನ್ನಯ ವಿಕ್ರಿಯಾಕೃತಿಯೆ ನರ್ತನರಂಗಧರಿತ್ರಿಯಾಗೆ ಜೆ ।
ತ್ರನ್ನೆಲೆವೆರ್ಜೆ ನರ್ತಿಪ ಸುರಾಂಗನೆಯರ್ಕಳ ಹಸ್ತಚಾರಿ ಸು ॥
ಚ್ಛನ್ನತೆ ನೇತ್ರವಿಭ್ರಮತೆ ತಟ್ಟಿರೆ ಪಲ್ಲವದಿಂ ಪೊದಟ್ಟಿ ಪ್ರ ।
ಪೊನ್ನತಿವೆತ್ತು ತೋರ್ಪ ದಿವಿಜದ್ರುಮದಂದದಿಸಿಂದ್ರನೊಪ್ಪಿದಂ॥೧೩೩॥

ಚರಣಾಘಾತಚಳದ್ಧರಾವಳಯದುದ್ಯತ್ಕ್ಷೋಭದಿಂ ವಾರ್ಧಿಗಳ್ ।
ತೆರೆವೆತ್ತೆಯ್ದಿ ತುಳುಂಕಿ ಕೂಡೆ ಕುಳಶೈಳಶ್ರೇಣಿ ತೂಗಾಡೆ ದಿ ।
ಕ್ಕರಿಗಳ್ಕುರ್ಗಿ ಕುನುಂಗೆ ಬಾಹುದಳನಾಂದೋಳಕ್ಕೆ ದಿಗ್ವಾಳಮಂ ।
ಬರಮಾಗಳ್ತಿಳಿಪಾಗೆ ನರ್ತಿಸಿದನೊಲ್ದಿಂದ್ರಂ ನಿಜಾಸಂದದಿಂ ॥೧೩೪॥

ಸುಮನಶ್ಶೈಳವನಾಜಿನಾಭಿಷವಣಕ್ಷೀರಾಂಬುಧಾರಾಳಯಿಂ ।
ದೆ ಮುಳುಂಕಾಡಿಸಿದಂದದಿಂ ಸಕಳಮರ್ತ್ಯಾಮರ್ತ್ಯರಂ ನೋಡೆ ನಾ ॥
ಡೆ ಮುಳುಂಕಾಡಿಸಿದಂ ಸ್ವಕೀಯರಸವನ್ನೃತ್ಯಾಮೃತಾಸಾರದಿಂ ।
ದಮೆನಲ್ಕೀವೊಗಟಿಪ್ಪಿಂ ಸುರೇಶ್ವರನ ಸಮ್ಯಗ್ಭಕ್ತಿಸಂಪತ್ತಿಯಂ ॥೧೩೫॥

ವ॥ ಇಂತು ತನ್ನಯ ಮನೋಜನಿತಾನಂದದಿಂ ನರ್ತಿಸುವ ನೃತ್ಯ ಪೀಯೂಷಪಾರಾವಾರಪೂರಪ್ರವಾಹದಿಂದಖಿಳ ಸುರನರಸಭಾಜನಸಮಾಜ ಮಂ ತಣಿವನೆಯ್ದಿಸಿಯುಂ । ಪರಮಹರ್ಷೋತ್ಕರ್ಷದಿಂ ತಾನುಂ ತಣಿವ ನೆಯ್ದಿಯುಂ । ತದನಂತರದೊಳ್ಸ್ವಧರ್ಮೇಂದ್ರಂ ತ್ರಿಭುವನರಕ್ಷಾರ್ಥಮಾ ಗಿ ದಿವಿಜಧಾತ್ರಿಯರಂ ಸಮರ್ಪಿಸಿ ಸಮಸ್ತ ಜೀವಹಿತಕರವಿನೋದಂಗೆ ವಿನೋದಾರ್ಥಮಾಗಿ ಸುರಕುಮಾರಸಮುದಯಮಂ ನಿಯಮಿಸಿ ನಲವಿಂ ಬಲವಂದು ಶಾಂತಿಸಭಾಸುರಪದನಖಮಯೂಖಮಾಲ್ಯಾಲಂಕೃತಕೀರೀಟ ಮುಖನಾಗಿ ಶಚೀದೇವಿವೆರಸು ಪುನಃಪುನರಾಳೋಕನಂಗೆಯ್ಯುತ್ತುಂ ಮಗುಳೆ ಪೊಡೆವಡುತ್ತುಂ ತಜ್ಜನನೀಜನಕರಂ ಬೀಳ್ಕೊಂಡು ನರೇಂದ್ರಮಂದಿರಮ ನೆಂತಾನುಂ ಪೊಱಮಟ್ಟು ಚತುರ್ನಿಕಾಯಾಮರಬ್ರಾತಕ್ಕೆ ಬೀಳ್ಕೊಟ್ಟು ನಿಜಗಜಾರೂಢನಾಗಿ—

ಪರಿಲಬ್ಧಾನಂದನಾನಂದಿತನಿಖಿಳಮರುನ್ನರ್ತ್ಯಸಂದೋಹಸಭ್ರ ।
ದ್ವಿರದಾರೂಢಂ ಸಮಸ್ತಾಮರಬಹಳಬಳವ್ಯಾವೃತಂ ದಿಕ್ಪ್ರತಾನೋ ॥

ದರಮುಂ ಸೇನಾನಸಕೋಲ್ಜ್ವಧ್ವನಿ ಪುಗುತಿರೆ ಪೊಕ್ಕಂ ಸ್ವಕೀಯಪ್ರಭಾಸ್ವ ।
ತ್ಪುರಮುಂ ಸಂರಂಭವಿಂದಂ ವಿಬುಧಪರಿವೃಢಂ ಸೂಕ್ತಿಸಂದರ್ಭಗರ್ಭಂ ॥

ಗದ್ಯ॥ ಇದು ವಿನಮದಮರೇಂದ್ರಮೌಳಿಮಣಿಕಿರಣಮಾಳಾಪರಾಗಪರಿರಂಜಿತ ಚರಣಸರಸೀರುಹರಾಜಿತಪರಮಜಿನರಾಜಸಮಯಸಮುದಿತಸದಮಲಾಗಮಸುಧಾ ಶರಧಿಶರದಿಂದು ಶ್ರೀ ಮಾ ಘ ಣ ಂ ದಿ ಪಂ ಡಿ ತ ಮುನೀಶ್ವರ ಮನೋಜನಿತನಿರುಪಮ ದಯಾರಸಸರಸೀಸಂಭೂತಸಂಭವಾಮಳ ಸುಕವಿ ತ ಮ ಲ ಭ ವ ವಿರಚಿತಮಪ್ಪ

ಶಾಂತೀಶ್ವರ ಪುರಾಣದೊಳ್

ಗರ್ಭಾವತರಣ ಜನ್ಮಾಭಿಷೇಕ ವರ್ಣನಂ

ಚತುರ್ದಶಾಶ್ವಾಸಂ ಸಂಪೂರ್ಣಂ.

ಪಂಚದಶಾಶ್ವಾಸಂ

ಶ್ರೀ ಶಾಂತೀಶನ ಸೊಗಯಿಪ ।
ಶೈಶವದೆಸಕಮನೆ ಮನದೆಗೊಂಡನುಪಮವಿ ॥
ಲಾಕಯನೆಸೆದಿರ್ದನಮ ।
ತ್ಯೇರ್ಕಂ ಜಿನಪದಪಯೋಜರಾಜಮರಾಳಂ ॥೧॥

ವ॥ ಇಂತು ಸೌಧರ್ಮೇಂದ್ರಂ ಶಾಂತೀಶಭಾವಭರಿತಸ್ವಾಂತನಾಗಿ ಸುಖದಿನಿರೆಯುಮಿತ್ತಲ್,

ತರುಣಸಿತಕರನ ಬೆಳವಿಗೆ ।
ಪಿರಿದುಂ ಕುಂದಲ್ನಿಮಿತ್ತವೆಂದೇಱಿಪುದಾ ॥
ಶುರುಸ್ಯಪಕುಮಾರಕನಿರಂ ।
ತರವರ್ದ್ಧನದೆಸಕಮಪ್ಪ ಬೆಳವಿಗೆ ನಿಸದಂ ॥೨॥

ತನು ಮಾರ್ಪೊಳೆಯುತ್ತಿರೆ ಪಳ ।
ಕಿಸೆ ಹುಟ್ಟಮತಳದೊಳಿಂತು ತಳರಡಿಯಿಡುತುಂ ॥
ನೆನೆಯಿಸಿದಂ ನೃಪಸುತನಮ ।
ರ್ದಿನ ಕಡಲೊಳ್ತೊಳಗುವರುಣರಾಕಾಶಶಿಯಂ ॥೩॥

ಸಿರಿಯು ತರುಕಿರಣಗಣವೂ ।
ವರಿಸಿದ ಕನಕಾರವಿಂದದಂತೆಸೆದುದು ಬಿ ॥
ತ್ತರಿಸಿ ಸೊಗಯಿಪ ಮುಗುಳ್ನಗೆ ।
ವೆರಸಿದ ಮುಖಕಮಳಮಾಕುಮಾರೋತ್ತಮನಾ ॥ ॥೪॥

ಪುಟ್ಟಿದ ಮುನ್ನಖದಿಂಗ ।
ಳ್ಪುಟ್ಟಿಸಿದಂ ತ್ರಿಭುವನಕ್ಕೆ ಪರಮೋತ್ಸವಮುಂ ॥
ಪುಟ್ಟಿ ಪಿತೃಜನಕೆ ಪಿರಿದುಂ ।
ಪುಟ್ಟಿಪುದಚ್ಚರಿಯೆ ಹರ್ಷಮಂ ಶಾಂತೀಶಂ ॥ ॥೫॥

ಜನಿತರಜಃಕಣಗಣಕಳಿ ।
ತನವೀನದಳಪ್ರಕೀರ್ಣಕನಕಾಂಬುಜದಂ ॥
ತೆನಿತಾನುಂ ಸೊಗಯಿಸಿದುವು ।
ಪನೆಗಳ್ಪುದಿದಾಕುಮಾರಕನ ವಿಮಳಮುಖಂ ॥ ॥೬॥

ನಿನಗೆ ಪತಿಯಾದನೀತ್ರಿಭು ।
ವನ ಪತಿಯೆಂದವನಿಗುಸಿರ್ವ ತೆಱನಾಯ್ತುವಿನೂ ॥
ತನರತ್ನನೂಪುರದ ನು ।
ಣ್ಪಿನಿ ತಳರಡಿಯಿಡುವ ಪದದೊಳಾಬಾಳಕನಾ ॥ ॥೭॥

ತಳರಡಿಯಿಡುವೆಡೆಯೊಳ್ಪದ ।
ತಳವುಳಿಕುಗುಮೆಂದು ಪಳಕಿನಡಿನೆಲದೊಳ್ಕಂ ॥
ದಳರಂ ಪರಪಿದರೆನೆ ಕ ।
ಣ್ಗೊಳಪುವು ಬಾಲಕನ ಚರಣದರುಣದ್ಯುತಿಗಳ ॥ ॥೮॥

ಪರಮಜ್ಞಾನಸುಧಾರಸ ।
ಪರಿತುಷ್ಟಸ್ವಾಂತನಾದೊಡಂ ಶಾಂತೀಶಂ ॥
ವರಜನನಿಗೆ ಮುದಮಪ್ಪಂ ।
ತಿರೆ ಮಾಬ್ಪಂ ಸ್ತನ್ಯಸೇವೆಯಂ ಪದೆಪಿಂದಂ ॥ ॥೯॥

ಎನಸುಂ ಕಲವೀಣಾವಾ ।
ದನಜನಿತಾವ್ಯಕ್ತವರ್ಣತತಿಯಂತತಿವೋ ॥

ಹನವಮಾಯ್ತರಸನ ದೇವಿಯ ।
ಮನಕ್ಕೆ ತನಯನ ತೊದಲ್ನುಡಿಯ ಗಡಣಂಗಳ್ ॥೧೦॥
ಸೊಗಯಿಪ ತನ್ನ ಮೂರ್ತಿ ಮಣಿಭಿತ್ತಿಗಳೊಳ್ಪೊಳೆಯಲ್ಕೆ ಪಾಂಶುಕೇ ।
ಳಗೆ ಪರಿಕಿನ್ನಿಮೆಂದು ಕರಪಲ್ಲವದಿಂ ಕರೆವೊಂದು ಮುಗ್ಧವೃ ॥
ತ್ತಿಗೆ ನೆಲೆಯಾದ ನಂದನನ ನುಣ್ಗೊಗಮಂ ನಡೆ ನೋಡಿ ನೋಡಿ ನೆ ।
ಟ್ಟಗೆ ಪಡೆವರ್ಮಹೋತ್ಸವಮನಾಜನನೀಜನಕರ್ನಿರಂತರಂ ॥೧೧॥

ದರಹಾಸಂ ಮೊಗದೊಳ್ತಳಂಕೆ ಪರಿತಂದಪ್ಪಿಪ್ಪಿನುತ್ತಪ್ಪಿ ಕಂ ।
ದರಮುಂ ಸೋಗಿಲೊಳಡ್ಡಬಿಟ್ಟು ಕುಚಮುಂ ಬಾಯ್ಗೊಯ್ಯುತುಂ ಹಾರಶು॥
ಕ್ತಿರುಹಶ್ರೇಣಿಯೊಳೆಯ್ದಿ ಮಾರ್ಪೊಳೆವ ತನ್ನಾಕಾರಮುಂ ಕಂಡು ಚೆ ।
ಚ್ಚರದಿಂದಾಯೆನುತಿಂತು ತಾಯ್ಗೆ ಪಡೆವಂ ಸಲ್ಲೀಲೆಯಂ ಬಾಳಕಂ ॥೧೨॥

ಅರಸನ ದೇವಿಯು ಚೆತ್ತೋ ।
ರ್ವರೆಯೊಳ್ನಿಂಪೆತು ನವೀನಹರ್ಷೋತ್ಕರ್ಷಾ ॥
ಮುರಲತೆಯಂ ಬೆಳೆಯಿಸುವಂ ।
ದರಹಸಿತಪಯಃಪ್ರಪೂರದಿಂದೆ ಕುಮಾರಂ ॥೧೩॥

ಎನಿತುಂ ವಿಸ್ಮಯಹರ್ಷಂ ।
ಜನನೀಜನಕರ್ಗೆ ಜನಿಯಿಸುತ್ತಿರೆ ಪರಿವ ॥
ರ್ಧನಶೋಭೆವೆತ್ತು ಶೈಶವ ।
ಮನೆ ನೆಟ್ಟನೆ ಪತ್ತುವಿಟ್ಟನಿಂತು ಕುಮಾರಂ ॥೧೪॥

ವ ॥ ಮತ್ತಂ ಸುತಾಮುಖಮರ್ಪಿತದಿವಿಜಧಾತ್ರೀಜನಮನುದಿನ ಮುಜ್ಜೃಗಿಸಿ ಮೂಲ್ಕಿ ಮಜ್ಜನದ ಸೆಜ್ಜೆಯ ಸಜ್ಜೀಕರಣದೊಳಂ। ಅಸ್ವಪ್ನ ದಿನಾದರೂಪಿತ ನಿಖಿಳಾನಿಮೇಷಯಾಮೇಕಸ್ತ್ರೀವನನನುಸರಿಸುವಹೋ ರಾತ್ರಿಗಳ ಸುಯಿಧಾನದೊಳಂ। ಸುಧಾಸನಾದೀಶ್ವರನಿಯಮಿತನಿಳಿಂಪಪಲ್ಲ ವತತಿ ಪದವಡಿಪ ನವ್ಯದಿವ್ಯಾನ್ನದೊಳಂ । ನಿರಸ್ತಕಾಸ್ತಿತಿ ಕಳಾಕಳಃಪಾ ಭಿನವ ಸುಧಾಂಶುಪ್ರಕಾಶತೆಯಿಂ ಪ್ರತಿದಿನಪ್ರವರ್ಧಮಾನಮಾಗಿ ಬಳೆಯೆ ಬಳೆಯೆ—

ಅನಿಮಿಷೋದಾರಕರ್ತಂ ।
ಮುನಿಶುಂ(?)ಸಮಸಂದು ಸಮುಜಿತಂಗಳಿನಿಪ್ಪಾ ॥
ಬಿನದಂಗಳಂ ಪ್ರವರ್ತಿಸು ।
ತನುದಿನವೋಲಗಿಸುತಿರೆ ಕುಮಾರೋತ್ಪ್ರಮನಂ ॥೧೫॥

ಸದಮಳಬೋಧಾತ್ಮಕನೆಂ ।
ಬುದನಿಂತು ಜಲಕ್ಕನೀಜಗಕ್ಕಱಿಪಿದನೋ ॥
ವದೆ ಸಕಳಶಾಸ್ತ್ರತತಿಯಂ ।
ಪದೆಪಿಂ ನೆಹೆಯಱಿದು ಮೆಹೆದು ಶಾಂತಿಕುಮಾರಂ ॥೧೬॥

ತಾನಭ್ಯಸಿಸದೆಯುಂ ಶಾ ।
ಸ್ತ್ರಾನೀಕಮನಱಿದನೆನಲಿದೇನರಿದೀತಿ ॥
ಜ್ಞಾನನಿಧಿಗೆಂದು ವಿಬಧವಿ ।
ತಾನಂ ವರ್ಣಿಸುವುದೊಸೆದು ಶಾಂತೀಶ್ವರನಂ ॥೧೭॥

ನ॥ ಮತ್ತಮನವರತಮುಸ್ವೇದಾತ್ತಭಾಸುರವೃತ್ತಿಯುಂ। ಸರ್ವಶರೀರಮಳಹೀನತ್ವಮುಂ । ಸ್ವಚ್ಛತರಸುಚ್ಛವಿವ್ಯಕ್ತಸಿತರಕ್ತಗೌರವಾದಿಕತ್ವಮುಂ । ಸಮಚತುರಸ್ರಸಂಸ್ಥಾನಮುಂ । ವಜ್ರವೃಷಭನಾರಾಚಸಂಹನನಮುಂ। ಭುವನತ್ರಯನೇತ್ರಾಹ್ಲಾದಕರಸಾಶ್ಚರ್ಯಸೌಂದರ್ಯಮುಂ। ವಿಜಿತಸಕಳಸೌರಭಪ್ರಭಾವಸೌಗಂಧಬಂಧುರಮುಂ । ತಿಳಮುಸೂರಿಕಾಂಕುಶಸ್ವಸ್ತಿಕಾದಿಪ್ರಶಸ್ತೋತ್ಪ್ಲೋತ್ತರಶತಲಕ್ಷಣ ನವಶತವ್ಯಂಜನೋಪರಂಜಿತಮುಂ। ಪ್ರತಿಹತವ್ಯಪೇತಾನಂತವೀರ್ಯಗುಣಮುಂ। ಸಕಳಜನಶ್ರವಣರಮಣೀಯಕರಮಪ್ಪ ಪ್ರಿಯಹಿತವಾದಿತ್ವಮುಮೆಂಬ-ದಶವಿಧಸಹಜಾತಿಶಯಮುಂ। ಪವನಪಿತ್ತಪೀನಸವಿಷಮಸಂಭವಾಮಯನೋಕರ್ಮ ಭಯಾದ್ಯುಪಘಾತವ್ಯಪೇತಮುಂ। ಶಿಳಾಕಾಪೃಕಂಟಕಾಗ್ನಿವರ್ಷಶೀತಾತಪಾದಿಬಾಧಾನಿರ್ಘೇದ್ಯಮುಂ। ನಿರತಿಶಯೇಂದ್ರಿಯಾತಂದ್ರಿಯಾತ್ಮಾಪಗತಾಭ್ಯುದಯನಿಶ್ರೇಯಸಸುಖಸಾಧನಮುಂ। ಪಂಚಾಷ್ಟಧನುಃಪರಿಮಿತೋತ್ಸೇಧಮುಂ । ದಶತಾಳಲಕ್ಷ್ಮಣೋಪಜೀವಿತಮುಂ। ಶತಸಹಸ್ರಾಬ್ಧಿಪರಿಮಿತಾಯುಷ್ಯಮುಮುಳವಡೆಯುಮೌದಾರಿಕಶರೀರಮಂ ತಳೆದು ಶಾಂತಿಕುಮಾರಂ ನವೀನಯೌವನಶ್ರೀಸಂಗಮಕ್ಕೆ ಪಕ್ಕಾಗಿರೆ—

ತನುವಂ ಸಂಶುದ್ಧಕಾರ್ತಸ್ವರಕಿರಣಲಸಲ್ಲಕ್ಷ್ಮ ತರ್ಕೈಸೆ ಲೀಲಾ ।
ನನಮಂ ನಿತ್ಯಪ್ರಸನ್ನಪ್ರಮದೆ ಪದೆಪಿನಿಂ ಪೊರ್ದೆ ದೀಪೋರ್ಲ್ಲಸಲೊಲ್ಲೀ॥
ಚನಮಂ ನೀಳೋತ್ಪಳಶ್ರೀಯಿಸೆಪಮಸದಳಂ ಸಾರ್ದು ಚೆಲ್ವಾಗೆ ಸಾರ್ದ ।
ಕ್ತು ನವೀನಂ ಯೌವನಂ ತತ್ಕುರುನೃಪಸುತನಂ ನಾಡೆಯುಂ ರೂಢಿಯಿಂದಂ॥

ದಿನಮಣಿಗೆ ಕರಸಹಸ್ರಮ ।
ದನುಪಮರತ್ನತ್ರಯಕ್ಕೆ ನೂತ್ನಕಿರಣಂ ಕಲ್ಪಾ ॥
ವನಿಜಕ್ಕೆ ವಿತರಣಂ ನೆ ।
ಟ್ಟನೆ ಪ್ರದಿದವೊಲಾಯ್ತು ಯೌವನಂ ನೃಪಸುತನೊಳ್ ॥೧೯॥

ಜನಿತನಿಜಪ್ರಬೋಧಪರಿವರ್ಧನದೊಳ್ಸಮಸಂದು ಸಾರಮ ।
ಪ್ಪನಘುಚರಿತ್ರರತ್ನದೊಳುಪಾಶ್ರಯವೃತ್ತಿಯನಪ್ಪುಕೆಯ್ದು ಪಾ ॥
ವನವಿಳಸದ್ಗುಣಪ್ರತತಿಗಾಶ್ರಯಮಾಗಿ ನೆಗಟ್ಟಿತ್ತೆವೆತ್ತ ಯೌ ।
ವನದೊದವಿಂ ವಿರಾಜಿಸಿದನಾಕುರುರಾಜಕುಮಾರಶೇಖರಂ ॥೨೦॥

ಶಾಂತರಸಾಬ್ಧಿವೇಳೆ ಮದವಾರಿಜವೃಂದತುಷಾರಮಿಂದ್ರಿಯ ।
ಶ್ರಾಂತಿ ಘನಪ್ರಚಂಡಪವನಂ ದುರಘೂಸ್ಪದರಾಗದುಸ್ತರ ॥
ಧ್ವಾಂತರವಿಪ್ರಭಾಪಟಳಮೆಂದೆನಿಪೊಂದು ವಿಜೆತ್ರವೃತ್ತಿಯಿಂ ।
ಶಾಂತಿಕುಮಾರನೊಳ್ಪುದಿದುದಿಂತಭಿವಂದ್ಯನವೀನಯೌವನಂ ॥೨೧॥

ಎಸೆವಾಶ್ರಯದಿಂ ರತ್ನ ।
ಪ್ರಸರಂ ಮಿಗೆ ಸೊಗಯಿಪಂತೆ ಪಿರಿದುಂ ಸವ್ಮೋ ॥
ಹಿಸಿದುದು ನವಯೌವನಲ ।
ಕ್ಷ್ಮ ಸಮಂತಾಶ್ರಯಿಸೆ ತತ್ಕುಮಾರಾಕೃತಿಯಿಂ ॥೨೨॥

ವನಿತಾನೇತ್ರೋತ್ಪಲಸವ್ಮೋಹನಮೆನಿಸಿದುದಾರ್ಜ್ಯರ್ಸೌಂದರ್ಯದಿಂದೊಂ ।
ದಿ ನವೀನಂ ಯೌವನಂ ವಿಶ್ರುತಸಕಳಕಳಾನೀಕಸುಪ್ರೌಢಿ ವಿದ್ವ ॥
ಜ್ಜನತಾಜೆತ್ರೋತ್ಪಲಸವ್ಮೋಹನಮೆನಿಸಿ ಕರಂ ರೂಢಿವೆತ್ತಂ ಪೊದಟ್ಟಿಂ ।
ತನಘಂ ತ್ರಿಜ್ಞಾನಲಕ್ಷ್ಮೀಪರಿಚಿತಮುದನಾಕಾರನಂದಾಕುಮಾರಂ ॥೨೩॥

ವ॥ ಇಂತು ಶಾಂತಿಕುಮಾರಂ ಸಮ್ಮೋಹನನವೀನಯೌವನೋದ
ಯನಾಗಿಯುಂ ನಿರ್ಮಳಾಗಾಧಬೋಧವೃದ್ಧನುಂ। ವಿಶ್ವಜನತಾನುರಾಗಪ್ರದ
ನಾಗಿಯುಂ ರಾಗರಹಿತನುಂ। ಪುಣ್ಯಜನಸಂಸ್ತೋಮಸುಪ್ರೇಮಿಯಾಗಿಯುಂ
ವಿಬುಧಪರಿತುಷ್ಟಿಕರವಿತರಣ ವಿನೋದನುಂ । ನಿತಥ್ಯೈಕಶಬ್ದಮಾತ್ರಜ್ಞಾನ
ಹೀನನಾಗಿಯುಂ ಸಕಳಶಬ್ದಶಾಸ್ತ್ರಾಗಮಾನೀಕವಿವೇಕಾಭಿಜ್ಞನುಂ। ರೂಪ
ರಮಣೀಯೋದ್ದಾಮಕಾಮದೇವನೆನಿಸಿಯುಂ ಕಾಮವಿಕಾರದೂರನೆಂಬೀ
ಮಹಿಮೆಗಾಳಂಬಮೆನಿಸಿ ಪೆಂಪುವಡೆದು ಪಂಚವಿಂಶತಿಸಹಸ್ರಸಂವತ್ಸರಂಬ
ರಂ ಯುವರಾಜಪದವಿಯನಪ್ಪುಕೆಯ್ದಿರ್ದು ಮತ್ತಮಿಪ್ಪತ್ತೈದು ಸಾಸಿರಂ
ಸಮಪ್ಪನ್ನೆಗಂ ವಿಶ್ವಸೇನಮಹಾರಾಜಾನ್ವಯಮಂಡಿತಮಂಡಳೇಶ್ವರಪದವಿ
ಯೊಳ್ಪಡೆಪಿನಿಂ ಸಕಳಸುಖಮನನುಭವಿಸುತ್ತುಮಿರೆ—

ಸುರರಾಜಂ ನಿಜಭಕ್ತಿಯಿಂ ಕಳಿಪೆಯುಂ ತಂದೆಯ್ದೆ ದೇವರ್ಕಳಾ ।
ದರದಿಂದಾವಗವಿಾಯುತಿರ್ಪಮುರಲೋಕೋದ್ಭೂತವಿಖ್ಯಾತವಿ॥
ಸ್ಫುರಿತಾನರ್ಘ್ಯವಿಭೂಷಣಾಂಬರವರಶ್ರೀಖಂಡಮಾಲ್ಯಾದಿಭಾ ।
ಸುರವಸ್ತೂತ್ಕರಭೋಗದಿಂದೆಸೆಯುತುಂ ಶಾಂತೀಶನಿಂತಿರ್ಪುದುಂ ॥೨೪॥

ಬೆಸಕೆಯ್ವಂ ದಿವಿಜೇಂದ್ರನೆಂದೊಡೆ ಮಹತ್ವಕ್ಕಿನ್ನದಾರ್ಪಾಟ ತಾ ।
ನೆ ಸಮಂತಗ್ಗದ ಕಾಮದೇವನೆನೆ ರೂಪಾಶ್ಚರ್ಯದೊಳ್ನಾಡೆ ಪಾ ॥
ಲಿಸಲಾರ್ಪಾಸಟಿ ಪೇೞ್ತಿನುತ್ತುಮೆನಸುಂ ತೆೈಳೋಕ್ಯವೋರಂತೆ ವ ।
ರ್ಣಿಸೆಯುಂ ಮಂಡಳಕಾಧಿಪತ್ಯಪದದೊಳ್ಶಾಂತೀಶನಿಂತಿರ್ಪುದುಂ ॥೨೫॥

ವ॥ ಸ್ವಕೀಯಾನುಜನಪ್ಪ ಚಕ್ರಾಯುಧನಾಗಳ್—

ಭುವನಾಧಿಪನಾಜ್ಞೆಯಾನಾಂ ।
ತವಿಚಳಸಾಮ್ರಾಜ್ಯಭಾರದೊರೆಯ(?)ಭುಜಂ ॥
ಯುವರಾಜಂ ಚಕ್ರಾಯುಧ ।
ನವಿರತನಿಂತಿರೆ ಜಿತಪ್ರತಾಪದಿನೇಕಂ ॥೨೬॥

ವ॥ ಇಂತು ನಿರಂತರಂ ಪರಮಾನುರಾಗದಿಂದರಸುಗೆಯ್ಯುತ್ತುಮಿರೆ
ಯುಮಾತೀರ್ಥಕರನ ಪೂರ್ವೋಪಾರ್ಜಿತಶುಭಕರ್ಮಕಾಮಧೇನುಪ್ರೇ
ಣೆಯಿನಾಗಳ್—

ಪಾ—1. ನವಿರಥಮಿಂ.

ಉದಯಿಸಿದುದಾಯುಧಾಗಾ ।
ರದೊಳಿಸೆವ ನಿಶಾತನಿಜಸಹಸ್ರಾತಮಯೂ ॥
ಪದಿನಿನನನಿಟ್ಟಿಸಿ ಬೆಳುಗು ।
ತ್ತದೊಂದು ಚಕ್ರಂ ಜಿತಾರಿವಿಕ್ರಮಚಕ್ರಂ ॥೬೫॥

ಉದಯಿಸಿದಾ ಸಹಸ್ರನಿಶಿತಾರವಿಭಾಸುರಚಕ್ರರತ್ನಮುಂ ।
ತದು ಪರಚಕ್ರಸಂಹರಣಚಕ್ರಮಿನದ್ಯುತಿಹಾಸಭಾಸಿಯ ॥
ಗ್ಗದ ವಿಜಯಪ್ರಕಾಶಿ ವಿಳಸನ್ಮನುಜಾಧಿಪರಾಜ್ಯವೈಭವ ॥
ಪ್ರದಮತಿದುರ್ಜಯಾಸ್ಪದಮುದಂಜಿತಯಕ್ಷಸಹಸ್ರರಕ್ಷಿತಂ ॥೬೬॥

ಅಕ್ಷಣದೆ ಬಂದು ಶಸ್ತ್ರ ।
ಧ್ಯಕ್ಷಕನಿಂದಾರ್ಜಿತಂಗೆ ಬಿನ್ನವಿಸಿದನಾ ॥
ಯಕ್ಷಭಟಶತಕದ ಪರಿ ।
ರಕ್ಷಿತವರಚಕ್ರರತ್ನಮುದ್ಭವಿಸಿದುದಂ ॥೬೭॥

ವ॥ ಅದಂ ಕೇಳ್ದು ಪೂಜಿತಜಗತ್ರಯನಪ್ಪ ಶಾಂತೀಶನಾಗಳ್—

ಭೂಚಕ್ರಪತಿತತಿಗೆ ವಿಹಿ ।
ತಾಚರಣಂ ಪೂಜಿಸೆಂದು ಬೆಸಸಿದನೊಸೆದಂ ॥
ತಾಚಕ್ರರತ್ನಮಂ ಸಚ ।
ರಾಚರಲೋಕಪ್ರಪೂಜಿತಂ ಶಾಂತೀಶಂ ॥೬೮॥

ಸತತಂ ಯಕ್ಷಸಹಸ್ರರಕ್ಷಿತಮಹಚ್ಚಕ್ರಾಜಿನಸ್ತ್ರೀಪುರೋ ।
ಹಿತಸೇನಾಪತಿಕಾಕಿಣೀಸ್ಥಪತಿಗೇಯೋದ್ಯತ್ಪ್ರತಿಭಾಸಿದಂ॥
ಡತುರಂಗೋತ್ತಮರತ್ನಮೆಂದೆನಿಪ ಜೀವಾಜೀವರತ್ನಾವಳೀ ।
ವೃತನಾದಂ ಕ್ರಮದಿಂ ಚತುರ್ದಶಮನಂತಾಕಂತುಶಾಂತೀಶ್ವರಂ ॥೬೯॥

ಸಲೆ ಸಾರ್ವಭೌಮಪದವೀ ।
ಫಲಮುದಯಮೆನಿಸಿದಾಚತುರ್ದಶರತ್ನಾ ॥
ವಳಗಧಿಪನಾಗಿ ಕುರುಕುಳ ।
ತಿಳಕಂ ಶಾಂತೀಶನಿರೆಯುಮಿಂತಾಪದದೊಳ್ ॥೭೦॥

ವ॥ ತನ್ನಯ ಕುರುಳುಳಾನ್ವಯಾಗತಾವನೋತ್ಯಮುಂಡಳಿಕದಂಡನಾಥ ಸಾಮಂತಸಂದೋಹಂ ಕಟ್ಟಳತಕರಾರವಿಂದರಾಗಿ-ದೇವ ಬಿನ್ನಪಮಿಷಕ್ಕ ಪದವಿಯೊಳೀಭರತಷಟ್ಖಂಡಮಂಡಳಾವಳೋಕನಂಗೆಯು ವ್ದುಚಿತಮೆಂದು ಬಿನ್ನವಿಸೆಯುಮದಂ ಮನದೆಗೊಂಡು ಶಾಂತೀಶನಂತೆಗೆಯ್ವೆನೆಂದು ನಿಜಾನು ಜನಪ್ಪ ಚಕ್ರಾಯುಧನ ವೊಗಮಂ ನೋಡಿ ದಿಗ್ವಿಜಯಪ್ರಯಾಣಮನು ಜ್ಜುಗಿಸೆಂದು ನಿಯಮಿಸಿದಾಗಳ್—

ತಡೆಯದೆ ಚಕ್ರಾಯುಧನಾ ।
ಗಡೆ ಚಕ್ರಾಧೀಶನಾಜ್ಞೆಯಿಂ ದಿಗ್ವಿಜಯ ॥
ಕೊಡರಿಸಿ ಸರಭಸದಿಂದೆಡೆ ।
ವಿಡದಾಪ್ರಸ್ಥಾನಭೇರಿಯಂ[ನಡೆ]ಪೊಡೆಯಿಸಿದಂ ॥೩೩॥

ಎಸೆವೀಬ್ರಹ್ಮಾಂಡಮಂ ಬಿಚ್ಚನೆ ಬಿರಿಯಿಸುತುಂ ವಾರ್ಧಿಯಂ ಕೂಡೆತುಳ್ಕಾಡಿಸುತುಂ ದಿಗ್ದಂತಿಯಂ ಬಾಯ್ವಿಡೆ ಬೆದಕ್ಕಿಸುತುಂ [1]ನಭೋಲಂಧಮಂ[1] ಬಿ॥ ರ್ದಿಸುತುಂ ದಿಕ್ಪಾಳರಂ ಬೆರ್ಚಿಸುತುಮಗಮನೋರಂದದಿಂದಣ್ಣಿಕಲ್ಲಾ । ಡಿಸುತುಂ ಪರ್ವಿತ್ತಗುರ್ವಿಂ ತಳೆದೊಗೆದ ಗಂಭೀರಭೇರೀನಿನಾದಂ ॥೩೪॥

ವ॥ ಇಂತು ವಿಜಯಪ್ರಯಾಣಭೇರಿಯಂ ಪೊಯ್ಸಿ ತದನಂತರಂ ಶಾಂತೀಶ್ವರಚಕ್ರಧರಂ ಭರತಷಟ್ಖಂಡಮಂಡಳವಿಜಯಲಕ್ಷ್ಮೀಪರಿಣಯನ ಮಂಡಪಮುಂ ನವರತ್ನಾನೀಕಪ್ರಭಾಪಟಳಪಿಹಿತವಿಹಾಯೋಮಂಡಳ ಮುಂ ಅನುಕೂಲಪವನವಿಚಳಿತವೈಜಯಂತೀ [2]ಕಾಂಡಮುಂ[2] ಕುಳಿಶಕುಳ ಖಚಿತರಥಾಂಗಾಕ್ಷರಾನುಣೀಯಕಮುಂ ಸಮುಪಹಸಿತಸಪ್ತಸಪ್ತೀಪ್ರಸ ರಸಪ್ತಿಸಂವಾಹ್ಯಮುಮಪ್ಪ ವಿಜಯರಥಮನೇಱಿ ನಿಜಾನುಜರಥದ್ವಿತೀಯಂ ಸ್ವಕೀಯನೃಪನಿಳಯದಿಂ ತಳರ್ದು—

ಪರಸುವ ವಂಶವೃದ್ಧಜನತಾನಿನದಂಬೆರಸುಣ್ಮವಾನಕೋ ।
ತ್ಕರನಿನದಂ ಸಮಸ್ತಕಹಳಾನಿನದಂ ವಿಳಸದ್ಗಭೀರ ಝಂ ॥
ಧುರತರಪಾಂಚಜನ್ಯನಿನದಂ ನಿಮಿರ್ದಣ್ಡೆಸೆಗೆಯ್ದ ಧೀಂಕೆಡು
ತ್ತಿರೆ ನೃಪಗೇಹದಿಂ ತಳರ್ದನಾಕುರುವಂಕನಮೇರುಭೂರುಹಂ ॥೩೫॥

ಪಾ—1. ದಿಗ್ಮಹೀಮಂಡಲಮಂ. 2. ಕಾಂತಮುಂ.

ಕುಲವನಿತಾಜನಂ ಪರಸುತುಂ ಪದೆಪಿಂ ತಳಪಳ್ಪತಾವಳೀ ।
ಲಲಿತಲತಾಂತಮುಂ ಮಕುಟದೊಳ್ತಳೆಯುತ್ತುಮನೇಕವಂದಿಸಂ ॥
ಕುಳಮಭಿವರ್ಣಿಪಂನಿಖಿಲವರ್ಣಯುಗಾಂತರಮುಂ ಪಳಂ ।
ಚಲೆವುತಿರಲ್ಕೆ ಚಕ್ರಿ ಪೊಱಮಟ್ಟನಿಳಾಧಿಪಪದ್ಮಸಾಳದಿಂ ॥೫೬॥

ವ॥ ಇಂತು ಪೊಱಮಟ್ಟು ನಿಖಿಳಮಣಿಮಯಾನೇಕತೋರಣದ್ವಾರವಾರಾಭಿರಾಜಿತವೀಥಿಯೊಳಾರಾಜಶೇಖರಂ ಬರುತ್ತಿರ್ದಾಗಳ್

ಪುರಕಾಂತಾಸಿಕರಂ ಸಿವಾಳಿಸುವ ದೀಪಸ್ತೋಮದಾಮಂ ಪ್ರಭಾ ।
ಸುರಬೂಳಾತಪಮಾಗೆ ಬರ್ದ ತರುಣಾರ್ಕಂ ತಾನೆನಿಪ್ಪಂತೆವೋ ॥
ಲ್ಬರುತಿರ್ದಂ ಪದೆಪಿಂದಲರ್ಚುತುಮಡುತ್ತಾಳೋಕನಂಗೆಯ್ಯುತಿ ।
ರ್ದರ ಚೆತಾಂಬುರುಹಂಗಳಂ ಕುರುಕುಲಶ್ರೀಕಾಂತಶಾಂತೀಶ್ವರಂ ॥೫೭॥

ಉಡೆನೊಲ್ಬಿಜ್ಜರೆ ನೀವಿ ಜೋಲ್ತರೆ ಸಡಿಲ್ದುತ್ತುಲ್ಲಫುಲ್ಲಾಳಿ ಸೋ ।
ರ್ಮುಡಿಯಿಂದಲ್ಲುಗೆ ಮೇಲುದುಂ ತೊಲಗೆ ತುಟ್ಟುದ್ಧಾರಮುಕ್ತಾಳಿ ನು॥
ನ್ನಡಿಯೊಳ್ಸೂಸೆ ಪದಂ ತಡಂತಡಿಸೆ ಹವ್ಯಾಗ್ರಂಗಳಂ ಬಂದು ಸಂ ।
ಗಡದಿಂದೇಱಲತಾಂಗಿಯರ್ತವಕದಿಂ ಶಾಂತೀಶನಂ ನೋಡಿದರ್ ॥೫೮॥

ತರಳಾಕ್ಷಿಯರೀಕ್ಷಿಪ ದೃ ।
ಗ್ಮರೀಜೆಗಳ್ ಬಿಡದೆ ಬಳಸಿ ಬರೆ ಕುರುವಂಶಾ ॥
ಭರಣಂ ತುಱುಂಗಿ ಬೆಳ್ದಾ ।
ವರೆಯ ಸರಳ್ಮಸುಱ್ ಬರ್ಪಿನಂಗೆಣೆಯಾದಂ ॥೫೯॥

ವ॥ ಮುಂದೊಂದೆಡೆಯೊಳಾಳೋಕನ ಕುತೂಹಳಿತ ಸಖ್ವಂತೆಯೊರ್ವಳ್—

ಕುರುವಂಶಾಗ್ರಣಿಯುಂ ನಿರೀಕ್ಷಿಸುವ ಸಂರಂಭಂ ಪೊದಟ್ಟಿರ್ದ್ದಳಾ ।
ತುರದಿಂ ಚಂದನಗಂಧಮುಂ ತಳೆದು ಕೊಂಡಾದರ್ಶದಿಂ ತೋರ್ಪ ಭಾ ॥
ಸುರಮಪ್ಪಾತ್ಮಮುಖಸ್ಮಿತಾಂಬುರುಹದೊಳ್ಪೊಟ್ಟಟ್ಟವಳ್ದರ್ಪಣಂ ।
ಬೆರಸಾಗಳ್ಪರಿತಂದು ನೋಡಿದಳನಂಗಭ್ರಾಂತಿಯೇಗೆಯ್ಯದೋ ॥೬೦॥

ವ॥ ಮುಂದೊಂದೆಡೆಯೊಳ್—

ಪಾ—1. ತಳೆರ್ವ.

ಪರಿತಂದಾಕಂತುಶಾಂತೀಶ್ವರನ ಸೊಗಯಿಪಾಕಾರಮಂ ನೋಡಿ ಕಣ್ಣೊಲ್ಲು ರತಿಕ್ರೀಡಾತಿಸೌಖ್ಯಂಬಡೆದು ಪುಳಕಿತಾಂಗಂ ಮುಗುಳ್ದಾಯತಾಕ್ಷಿ ॥
ಸ್ಫುರಿತೌಷ್ಠಮನ್ಮಥಾಂಬುಪ್ಲವಮಿಲಿವ ಘನೋರುದ್ವಯಂ ಚೆಲ್ವನೀಯು।
ತ್ತಿರೆ ಜೋಲ್ದೊರ್ವಳ್ಸ್ವಕೀಯಾವಸಥಮುಖಮಣಿಸ್ತಂಭಮಂ ನೆಮ್ಮಿ [ನಿಂದಳ್ ॥ ೪೧॥

ವ॥ ಮುಂದೊಂದೆಡೆಯೊಳ್—

ನಡಿಲೆ ಮುಡಿ ತಡತಡಿಸೆ ಮೆ ।
ಲ್ಲಡಿ ನೆಲೆನೊಲೆ ನಡುಗೆ ಬಳ್ಕ ಬಡನಡು ನಿಲ್ದ್ ಮುಂ ॥
ದೊಡರೆ ನಡೆತಂದು ತಡೆಯದೆ ।
ಬೆಡಂಗಿ ಬಿಡದಡರಿ ನೋಡಿದಳ್ ಕುರುಪತಿಯಂ ॥ ೪೨॥

ವ॥ ಮುಂದೊಂದುರುತರದ ಕೇಳೀಮಂದಿರದೊಳ್—

ಸುರತಾಸಕ್ತನಧೀಶ್ವರಂ ತುಡುಕೆ ನಾಣಂ ಕುಂತಳಶ್ರೇಣಿಯಂ ।
ಕರದಿಂದಂ ಪಿಡಿದೊತ್ತಿ ಚುಂಬಿಸಲಡುತ್ತೇಲ್ಕೆ ಬಾಯೊಟ್ಟು ಬೆ ॥
ಚ್ಚರದಿಂ ನಂಬಿಸಿ ಕೂಟಮುಂ ಕುಡದೆ ಸಾರ್ದೆಯ್ತಂದು ತನ್ವಂಗಿ ಸಾ ।
ದರದಿಂ ತಾಂ ನಡೆನೋಡಿದಳ್ಕುರುಕುಲಶ್ರೀಕಾಂತಶಾಂತೀಶನಂ ॥ ೪೩॥

ವ॥ ಮತ್ತಮತೊಂದೆಡೆಯೊಳತೀವರೂಪಲಾವಣ್ಯವತಿಯಪ್ಪ ಸೌಂದರಿಯೊರ್ವಳ್—

ಕುಡಿಮಿಂಚಂ ಕಡೆಗಣ್ಣಲರ್ಕಳಿಯೆ ಯಾನಂ ಕಂತುಮತ್ತೀಭದೊ ।
ಳ್ನಡೆಯಂ ಕೈಮಿಗೆ ಮೆಯ್ಯನೋಳವಲತಾಂಚದ್ಭಂಗಿಯಂ ಬೀಱಿ ಕ ॥
ನ್ನಡಿಯಂತಪ್ಪ ಕುಚಂ ಕದಕ್ಕದಿಸೆ ಕಾಂಚೀಕ್ವಣದ್ಘಂಟಾರವಂ ।
ಪೊಸರುತ್ತಿರ್ಪನಮಿಂತು ಕಾಂತೆ ನಡೆತಂದಾಚಕ್ರಿಯಂ ನೋಡಿದಳ್ ॥ ೪೪॥

ವ॥ ಮುಂದೊಂದೆಡೆಯೊಳ್—

ನೆಗಪದೆ ಬೀೞ್ವ ರತ್ನಕಟಸೂತ್ರಮನುರ್ಜಿದ ಪಾದಭೂಷೆಯಂ ।
ತೆಗೆಯದೆ ಜೋಲ್ವ ಸೋರ್ಮುಡಿಯನೆತ್ತದೆ ನೀವಿ ಜಗುಳ್ದರಲ್ಕೆ ಸಾ ॥
ವಗಿಸದೆ ಪೀವರಸ್ತನಭರಕ್ಕಿರದಾದವೆಱೀೞ್ವ ಮೇಲುದಂ ।
ಬಗೆಯದೆ ಬಂದು ಕಾಂತೆ ನಡೆನೋಡಿದಳಾಕುರುವಂಶಮೇರುವಂ ॥ ೪೫॥

ವ॥ ಮುಂದೊಂದೆಡೆಯೊಳೀಕ್ಷ್ಣಾತುರಸ್ವಾಂತೆಯಪ್ಪ ಕಾಂತೆಯೊ
ರ್ವಳ್—

ಕೊರಲೊಳ್ಪನ್ನದ ಜಿನ್ನ ಮೇಖಳೆಯನಾಧಮ್ಮಿಲ್ಲದೊಳ್ಹಾರವ ।
ಲ್ಲರಿಯಂ ಮಾಲೆಯನುಲ್ಲಸಜ್ಜಘನದೊಳ್ಕೇಯೂರಮಂ ಪಾದದೊ ॥
ಳ್ಕರದೊಳ್ನೂಪುರಮಂ ವಿಭೂಷಿಸುತುಮಾಳೋಕನಾಂತಿಕ್ಕಾತೂಹಳೋತ್ಕ
ರದಿಂದಂ ಪರಿತಂದು ನೋಡಿದಳದೊರ್ವಳ್ಕಾಂತೆ ಶಾಂತೀಶನಂ ॥೪೬॥

ಸುರಚಾಪಾಳಿಪರೀತಮಾಗಿ ನಡೆವೆತ್ತಾವೇರುವೆಂಬಂತೆ ವಿ ।
ಸ್ತರಿಸುತ್ತುಂ ಕುರುವಂಶಮೇರು ಬರುತಿರ್ದಂ ತತ್ಪುರೀವೀಥಿಯೊಳ್ ॥
ಪಿರಿದುಂ ಕಣ್ಗೊಳಿಸುತ್ತುಮಾವೃತನರೇಂದ್ರಾನೀಕಕೋಟೀರವಿ ।
ಸ್ಫುರಿತಾನರ್ಘ್ಯಸಮುಸ್ತರತ್ನರುಜಿರಾಂಶುಬ್ರಾಜವಿಭ್ರಾಜಿತಂ ॥೪೭॥

ವ॥ ಇಂತು ನಡೆತಂದು ಪೊಡವೀಶ್ವರಂ ಹಸ್ತಿನಪುರಪುರೋಳ್ಭಾಗದ
ನತಿದೂರಧರಾಮಂಡಲದೊಳ್ ಸೇನಾಪತಿನಿಯಮಿತವಿಜಯಶಿಬಿರಮಧ್ಯ
ದೊಳ್ ಸನ್ನುತನಾಗಿ ಚೆನ್ನುವಡೆದ ತದೀಯಸ್ಥಪತಿರತ್ನವಿರಚಿತಜಿತಾನೂ
ನವಿರಾಜಮಾನರಾಜಾವಾಸನಿವೇಶಿತನಾಗಿ

ದೆಸೆಯಂ ಕೀಳಿತರತ್ನಜಾಳಸಬಳಪ್ರದ್ಯೋತದಿಂ ಕೂಡೆ ಜೆ ।
ತ್ರಿಸುತುಂ ಜಿತಲತಾವಿಜಿತಗಜವಿದ್ಯುಪ್ಪ್ರಸನಾಸೀನನಾ ॥
ಗಿ ಸಮಂತನ್ವಿತಮಂತ್ರಿಮಂಡಳಕದಂಡಾಧೀಶಸಾಮಂತಯೂ ।
ಧಸಮೇತಂ ಕುರುವಂಶಚಕ್ರಿ ಮುದದಿಂದೊಡ್ಡೋಲಗಂಗೊಟ್ಟರಲ್ ॥೪೮॥

ಮೃದುಮಾಧುರ್ಯೋಕ್ತಿನಿರ್ಯನ್ಮುಖಸುಕರಕವೀಂದ್ರಾವಳೀ
[ಮುಖ್ಯಮಪ್ಪ ।
ಗ್ಗದ ನಾದಿವ್ರಾತ ವಾಗ್ಮಿಪ್ರತತಿ ಗಮಕಿಸಂಗಪ್ರಸಂಗಾತಿಸೌಖ್ಯಂ ॥
ಪುದಿದಿಂತೋರಂತೆ ಶಾಂತೀಶ್ವರನಿರೆ ಪಿರಿದುಂ ಕರ್ಣರಂಧ್ರಾಂತಮಂ ಸೋಂ
ಕಿದುದೆತ್ತಂ ತಬ್ಬು ಮಾಧ್ಯಂದಿನಸಮಯಸಮುದ್ಭೂತಶಂಖಪ್ರಣಾದಂ॥೪೯॥

ಅಂತಾಪದದೊಳ್ಪದೆಪಿಂ ।
ಶಾಂತೀಶ್ವರಚಕ್ರಿ ಮಂತ್ರಿಮುಖ್ಯಧರಿತ್ರೀ ॥

ಕಾಂತಾಳಿಗೆ ಬೀೞ್ಕೊಟ್ಟು ಸ ।
ಮಂತು ವಿಸರ್ಜಿಸಿದನೋಲಗಮ ಕುರುತಿಲಕಂ ॥೫೦॥

ವಿಳಸದ್ದೀವಾಂಗನಾವೀಜಿತಚನುರಜಲೋಲದ್ದುಕೂಲೋ
[ತ್ತರೀಯಾಂ ।
ಚಳನಂತಾಚಕ್ರ ಚಂಚನ್ಮಣಿಮಯಹರಿಪೀಠಾಗ್ರದಿಂದೆೞ್ದನಾಕೀ ॥
ರ್ಣಲಸತ್ಕರ್ಪೂರಪಾಂಶುಪ್ರಸರದೆಸಕಮುವೇರ್ೞಿ ಕಾಂತಾವಳೀಮಂ ।
ಜುಳಮಂಜೀರಪ್ರಣಾದಂ ಪ್ರದಿದು ಪದಪುವೆತ್ತೋೞಿ ವಿಭ್ರಾಜಿಸುತ್ತುಂ ॥

ವ॥ ಇಂತು ಶಾಂತೀಶ್ವರಚಕ್ರವರ್ತಿ ವಿಸರ್ಜಿತಾಸ್ಥಾನನಾಗಿ ಸುರ ಕರಂಕವಾಹಿನೀಪ್ರಕೋಪ್ಯಪುಟಪರಿನ್ಯಸ್ತಹಸ್ತಾರವಿಂದಂ ಪರಿವೃತಾಪ್ತಜನ ವೃಂದಂ ಪರಮಾನಂದದಿಂ ಬರುತಿರ್ಪಾಗಳ್—

ಅವಸರಮಾರೋಗಣಿಗಿದು ।
ಭುವನಾಧಿಪಚಕ್ರಿ ತಡೆಯದಿಂ ಬಿಜಯಂಗೆ ॥
ಯ್ಯಿಮೆನುತ್ತುಂ ಪದೆಟಿಂ ಬಿ ।
ನ್ನವಿಸಿದರಾಗಳ್ಮಹಾನಸಾಧಿಕೃತರ್ಕಳ್ ॥೫೧॥

ವ॥ ಆ ಬಿನ್ನಪಕ್ಕೆ ಚಕ್ರಧರಂ ದತ್ತಜೆತ್ತನಾಗಿ ರಾಗದಿಂ ಬಂದು ವಿಮಳಧವಳೀಂದುಕಾಂಕತೃತಭಾಸುರಾನ್ನವಾಸಮಂ ಪೊಕ್ಕು ಮೊಕ್ಕಳ ವಾಗಿ ಮಾಪ್ರೊಳಿವ ದೀಪಕಳಿಕೆಗಳಿಂ ಮಣಿಕಳಾಪಕೇಳಿತಂಗಳಾದಂತೆ ಕಣ್ಗೊಳಪ ಚೆಂಬೊನ್ನ ಪರಿಯಾಣಂಗಳ ಪಂತಿಗಳುಂ ; ಪರಿಷ್ಕೃತಕಳಂಕ ವಾದ ಪರಿಪೂರ್ಣಪೀಯೂಷಮಯಾಮೃತಮುಂಡಳಂಗಳಂತೆ ಸಾಲ್ಗೊಂಡು ಸೊಗಯಿಸುವ ಕುದ್ಧರಜತಪಾತ್ರಂಗಳುಂ ; ಮಿಸುವ ಹೊಸಹೊನ್ನ ಪರಿಪ ರಿಯ ಚಷಂಕಂಗಳುಂ, ಕನಕಮಯಕಮನೀಯಕರಕಂಗಳುಂ, ಹೊಳೆವ ಕಳಧೌತದ ಸಿಪ್ಪುಗಳುಂ ; ಪಲತೆಱದ ಕೆಲಸರಚನೆಯಡ್ಡಣಿಗೆಯ ಗದ್ದುಗೆಯ ಗಿಂಡಿಯ ಪಡಿಗದ ಪಾದುಕೆಯ ತಿಂತಿಣಿಗಳುಂ ; ಪರಪಿದ ಪೂವಲಿಯ ಮುಗ ಮುಗಿಪಗರುವಿನ ಸೊಗಯಿಸುವ ಧರಿಮಳದ ಪಸರಮಸದಳವೆಸೆದು ಮನೋಹರಮಾಗೆಯುಂ ಕಂಡು ನಿಜಾನುಜಂಬೆರಸು ಸಮುಚಿತಮಣಿಮ ಯಾಸನಮನಳಂಕರಿಸಿದಾಗಳ್——

ಇರ್ಕೆಲದೊಳಿಸೆದುದಾಕುವ ।
ರರ್ಕಳ ಮಂಡಳಿಕದಂಡನಾಥರ್ಕಳ ವೈ ॥
ದರ್ಕಳ ಸಜೀವರ್ಕಳ ವಿಭು ।
ಧರ್ಕಳ ಮಿತಾನ್ವಯಾಗತರ್ಕಳ ತಂಡಂ ॥೪೩॥

ವ॥ ಮತ್ತಂ ಮೇಳದ ಖೇಳಾಯತರ ದಾಯಿತರ ಪಸಾಯಿತರ ಪಡಿಯಱರ ಗಾಣರ ವೈಣಿಕರ ವಾದಕರ ವಾಂಶಿಕರ ನಟುಕುಬ್ಜ ವಾಮನಾದಿಗಳ ತಂಡಂ ತಮತಮಗೆ ತಮ್ಮಯ ಪಬ್ಬಿಯ ಪಾಂಗಱದು ಕುಳ್ಳಿರ್ದಾಗಳ್—

ದೆಸೆಯಂ ಲೋಚನರೋಜೆಯಿಂ ಬೆಳಗುತುಂ ಹಾರಾಂಶುವಿಂ ಪರ್ವಿ ಕೊ।
ರ್ವಿಸುತುಂ ಮೆಯ್ವೆಳಗಿಂ ಮನೋಜಗಜಲೀಲಾಯಾನಮಂ ನಾಡೆ ಹೋ ॥
ಡಿಸುತುಂ ಸಾಲಸಯಾನದಿಂದಮೆನಸುಂ ಕಣ್ಗಿಡ್ಡಮಾಗಿರ್ತು ಬ ।
ಡ್ಡಿಸಲೇಱ್ಪಂದುದು ಸಟ್ಟುಗಂಬಿಡಿದು ಭೂಕಾಂತಂಗೆ ಕಾಂತಾಜನಂ ॥೪೪॥

ಉಡೆನೂಲೊಳ್ಸಿಕ್ಕ ತೊಂಗಲ್ಮಿಱಾಯನೆಸೆವಿನಂ ಚೊಲ್ಲೆಯುಗೆಯ್ದು ಬಂಬ।
ಲ್ಮಡಿಯಂ ನೀಳಾಳಕಾನೀಕಮನೆ ಕೊಡಕೆಯೊಳ್ಸರ್ಜಿ ರುಣ್ಮಾಕರನಾದಂ॥
ಪೊಡರಲ್ಮಾವೇಗದಿಂ ಕಂಕಣಮನಡರೆ ನೂಕುತ್ತುಮೇಱ್ಪಂದರಾಮೆ ।
ಲ್ಲಡಿಯಿಂ ಕೆಂಪೇಱಿಸುತ್ತುಂ ಪಳಕಿನ ವಿಳಸದ್ಭೂಮಿಯಂ ಭಾಮೆ
[ಯರ್ಕಳ್ ॥೪೫॥

ಕಿವಿಗಿಂಪಂ ಬೀಱುತುಂ ಕಂಕಣರುಣರುತಿ ಪೊಣ್ಮಲ್ಕೆ ಲಾವಣ್ಯಚಾರು
ಚ್ಛವಿ ಕಣ್ಗಾಕರ್ಷಮಾಗಲ್ಕೆಸೆವ ನವವಧೂವೃಂದಮಾಚಕ್ರಿಗತ್ಯು ॥
ತ್ಸವದಿಂದಂ ಬಡ್ಡಿಸಲ್ಬಂದುದು ವರಪರಮಾನ್ನಾದಿಚಾತುರ್ವಿಧಾಹಾ ।
ರಮನೋರಂತಾದಮಾಯುತ್ತಿರೆ ವಿವಿಧನವಾನಳ್ಪಸಾರಭ್ಯದೊಳ್ಪಂ ॥೪೬॥

ಪೊಳೆವ ಕರಚ್ಛಂದಿಕೆಯೊ ।
ಳ್ಮಳಿಂಕಿ ನಸುದೊರ್ಪ ತಾರೆಗಳ ತೆಱದಿಂ ಕ ॥
ಣ್ಗೊಳಿಸಿ ಮಗಮಗಿಪ ಮಱಿಸರ ।
ವಳಗೆಯ ಪಾಯಸಮನಸದಳಂ ಬಡ್ಡಿಸಿದರ್ ॥೪೭॥

ಜನಿಯಿಸಿದ ಚಂಪಕಾನೂ ।
ಪಸಪರಿಮಳಮುಂ ಸಮಂತು ಪರಿಚರಿಸುವ ಕಂ ॥

ಪಿನ ಪೆಂಪನಾಜ್ಯದಿಂ[ದಂ] ।
ತೆನೆ ತೀವಿದ ಪೊನ್ನ ಬಟ್ಟಲಂ ತಂದಿಟ್ಟರ್ ॥೪೪॥
ಪೆಸರ್ವೆತ್ತ ಪಾರಿಜಾತ ।
ಪ್ರಸವರಜೋವ್ರಜದ ಸಿರಿಯನೆಳಕುಳಗೊಂಡಂ ॥
ತೆಸೆವ ನವಸಿತಸಮೂಜವು ।
ನಸದಳವೆನೆ ಬೆಳ್ಳವಟ್ಟಲೊಳ್ತೀವಿಟ್ಟರ್ ॥೪೫॥
ಕಂಪು ಮಿಗೆ ಸೊಗಯಿಸುವ ತಳ ।
ರ್ಗೆಂಪನೆ ಪೋಲ್ತೆಸವ ಶರ್ಕರಾಪೂರಣದಿಂ ॥
ದಂ ಪೊಗೆವ ಬಿಸುಬೂರಿಗೆ ।
ಯಂ ಪಲವಂ ನಲವಿನಿಂದವಂ ಬಡ್ಡಿಸಿದರ್ ॥೪೦॥
ಸರದದ ನವಚಂದ್ರಿಕೆಯಂ ।
ಪೊರೆಯೆತ್ತಿದ ತೆಱದೆ ಮಿಱುಪ ಬೆಳ್ಪಿಂ ತೆಳ್ಪಿಂ ॥
ಪಿರಿದೆಸೆವ ಮುಂಡಕಾಪರಿ ।
ಕರಮುಂ ಬಡ್ಡಿಸಿದರಸದಳಂ ಸುರಸತಿಯರ್ ॥೪೧॥
ಸುರಸಿಂಧುಫೇನಪಿಂಡೋ ।
ತ್ಕರಮಿವೆನಲಕ್ಕಂತಿವೆತ್ತು ನಗಣದ ತೆಱದಿಂ ॥
ಪಿರಿದುಂ ಲಘುತ್ವದಿಂ ಪಿ ।
ತ್ತರಿಪಿತ್ತಡಿಲಿಗೆಗಳನಂತವರ್ ಬಡ್ಡಿಸಿದರ್ ॥೪೨॥
ಉದಯಿಪ ರಾಕೇಂದುವ ಬಿಂ ।
ಬದ ಪೋಲ್ವೆಯನಪ್ಪುಕೆಯ್ದು ಬೆಳ್ಗೆಂಪೆನಸುಂ ॥
ಪುದಿದಂಗರಹೋಳಿಗೆಗಳ ।
ನೊದವೆ ಮುದಂ ತಂದು ಬಡ್ಡಿಸಿದರಂಗನೆಯರ್ ॥೪೩॥
ರಸನಾಮೃತಂಗಳೆಸಕದ ।
ರಸಾಯನಂಗಳ್ಸಮಂತಿವೆನೆ ನೆಗಜ್ಜಾದ್ದಕ್ಷೀ ॥
ರಸಲಡ್ಡುಕಾದಿವರಭ ।
ಕ್ಷ್ಯಸಮೂಹವನೊಸೆದು ಬಡ್ಡಿಸಿದರಸದಳಮುಂ ॥೪೪॥

ಪೆಸರಿಂ ರಸಜ್ಞೆಯೆನಿಸಿದ ।
ರಸನೆಗೆ ಪೊಸಪೊಸತಪ್ಪ ರುಚಿಯನೆಸಗುವಣಂ ॥
ಮಿಸುಗುವ ಪಾನಂಗಳನೆಸೆ ।
ವ ಸುವರ್ಣದ ಚಷಕ ತತಿಗಳೊಳ್ತ್ರೀವಿಟ್ಟರ್ ॥೬೫॥

ಅಮರ್ದಿನ ಸವಿಯಂ ಶುಭ್ರ ।
ತ್ವಮನೆಳಕುಳಿಗೊಂಡ ತೆಱದೆ ರಸನೆಗೆ ಕಣ್ಗಂ ॥
ಪುವುನೊಪ್ಪಮುಮಂ ಕೂಡುವ ।
ಸಮನಿಪ ಶಿಖರಣಿಯನಬಲೆಯರ್ಬಡ್ಡಿಸಿದರ್ ॥೬೬॥

ಕಱುಗಿಗಳೆದ ಕಶಿಯ ತಣ್ಗದಿ ।
ರ್ದುಱುಂಗಲಂ ನಗುವ ತೆಱದ ನೀಳ್ಪಂ ಬೆಳ್ಪಂ ॥
ನೆಱಿ ಮಿಱುಗುವ ಶಾಲ್ಯನ್ನಮ ।
ನೆಱಕದಿನಮಳೀಂದುವದನೆಯರ್ಬಡ್ಡಿಸಿದರ್ ॥೬೭॥

ಪಳಹಶಿಖರಣಿಗಳಂಪಂ ।
ಪಱಿವಿಡಿಪ ಮರೀಚರಾಮಠಂಗಳ ಕಂಪಂ ॥
ತಳೆದೆಸೆವ ತಕ್ರತೇಮನ ।
ವಳುಂಬಮೆನೆ ಬೆಳ್ಳವಟ್ಟಲೊಳ್ತ್ರೀವಿಟ್ಟರ್ ॥೬೮॥

ಅಧರೀಕೃತಶಾರದನೀ ।
ರಧರದ್ಯುತಿಯೆನಿಪ ಕೆನೆಯನೊಳಕೆಯ್ದಿರ್ದಾ ॥
ಮಧುರಾಮ್ಲಮಪ್ಪ ದಧಿಯಂ ।
ವಿಧುವದನೆಯರೊಸೆದು ನಿಸದಮೆನೆ ಬಡ್ಡಿಸಿದರ್ ॥೬೯॥

ಮೃದುಪಕ್ವಂಬೆತ್ತ ಕಪ ।
ತ್ಥದ ಪಳರಸದಿಂಪನಾಂತು ಮಗಮಗಿಸುವ ಕಂ ॥
ಪೊದವಿರ್ದ ತಕ್ರಮಂ ತೀ ।
ವಿದ ದಾಳಿಯಮಂ ಮೃಗಾಕ್ಷಿಯತ್ತಂದಿಟ್ಟರ್ ॥೭೦॥

ಪರಿಕಳಿತಕುಳಿಶನೇಮಿಗ ।
ಳರಿವಿಜಯೋದ್ಧಾಮಿಗಳ್ಸ ಕೀಲಿತರಥ್ನೋ ॥
ತ್ಕರಕಾಂತಿಜಾಳವಿಜಿತೇ ।
ನರಥಂಗಳ್ಜ ತುರಶೀತಿಲಕ್ಷ ಗುಣಂಗಳ್ ॥೨೪॥
ಕೃತವೈರಿಕುತೂಹಳಮು ।
ನ್ನತಿ ಶ್ಯೋರ್ದ್ದಂಡಬಾಹುದಂಡಂ ಸೇನಾ ॥
ಪತಿನಿಯಮಿತಮದು ತಳರ್ದ್ದುದು ।
ಚತುರಧಿಕಾಶೀತಿಕೋಟಿ ಪಾದಾತಳಬಳಂ ॥೨೫॥
ಅಗಣಿತಖಚರಾಮರಸೈ ।
ನ್ಯಗಣಸಮನ್ವಿತದೆ ನಡೆವ ಷಡ್ಬಲತಿ ತಾ ॥
ವಗವಿನ್ನೆಹೆಯದು ನೆಲನುಂ ।
ಗಗನಮುಮೆಂದೆನಿಸೆ ತಳರ್ದ್ದ*ನಾಚಕ್ರಧರಂ ॥೨೬॥
ಕಮಳಕರಿಚಕ್ರಶಿಖಿಸಿಂ ।
ಹಮರಾಳಸುಧಾಂಶುತಿಗ್ಮಕರವೃಷಭವಿಹಂ ॥
ಗಮರಾಜಾಂಕಿತಕಮನೀ ।
ಯಮಷ್ಟಷಷ್ಟ್ಯಧಿಕಶತಕೋಟಿಕೇತುಬ್ರಾತಂ ॥೨೭॥
ಲಳತಲತಾಂಗಭಂಗಿಯ ಬೆಡಂಗಿಯರಿಕ್ಕುವ ಚಾಮರಾಳಿ ಸಂ ।
ಚಳನದ ಚಿತ್ರಕಾಂತಿ ನಿಮಿರುತ್ತಿರಲೆತ್ತಿದ ಮೇಘಡಂಬರಾ ॥
ವಳಯ ವಿಳಾಸಮಗ್ಗಳಿಸೆ ಮತ್ತಗಜಂಗಳನೇಱಿ ಚಕ್ರಿಯಂ ।
ಬಳಸಿ ಬರುತ್ತುಮಿರ್ದುದು ವಿರಾಜಿಸುತುಂ ಕ್ಷಿತಿಪಾಳಜಾಳಕಂ ॥೨೮॥
ಕರಿಣಿಗಳನೇಱಿ ಪದೆಪಿಂ ।
ಬರುತಿರ್ದುದು ಮದನಸುದತಿಯಾಕೃತಿಯನಧಃಕ ॥
ಕರಿಸುವ ಸೌಂದರ್ಯಂ ಬಿ ।
ತ್ತರಿಸಿ ವಿರಾಜಿಸುವ ಪೆಂಡವಾಸೆದ ತಂಡಂ ॥೨೯॥
ಯುವತಿಯರಿಕ್ಕೆಲಂಬಿಡಿದು ಬೀಸುವ ಚಾಮರಮೆತ್ತಿದಾತಪ ।
ತ್ರವಿಸರದುಜ್ಜ್ವಳಾಭರಣಕಾಂತಿಯ ತಿಂತಿಣಿಯಿಂ ವಿಳಾಸಮು ॥

ದ್ಭವಿಸೆ ನಿರಂತರಂ ಸಿಬಿಕೆಯಂ ಪದೆದೇಱಿ ಬರುತ್ತುಮಿಂತು ಪ ।
ಣ್ಣವತಿಸಹಸ್ರ[1]ಸಂಖ್ಯ[1]ಮೆಸೆದತ್ತವರೋಧವಧೂಕದಂಬಕಂ ॥೪೬॥

ಪೂಸಿದ ಚಂದನಂ ಮುಗುಳ ಮಲ್ಲಿಗೆಯೊಪ್ಪುವ ಚೊಲ್ಲೆಯಂ ನವೀ ।
ನಾಸಿತಪಂಕಜಶ್ರವಣಭೂಷೆ ಮೃಗೋದ್ಭವದಿಟ್ಟ ಬೊಟ್ಟು ತೆ ॥
ಳ್ವಾಸಿನ ಜೇನವೇಳೆಮಮರಾ(?)ತುಳವ್ಯೊಕ್ತಿ ಕಹಾರಮಾವಗಂ ।
ಮಾಸರವಾಗೆ ಪೆರ್ವಿಡಿಯನೇಱಿ ಬರಲ್ಕೆ ವಿಳಾಸಿನೀಜನಂ ॥೪೭॥

ಸುಲಲಿತಮಪ್ಪ ತಮ್ಮಯ ಸುರೂಪದ ಗರ್ವದಿನಂಗಜಂಗೆ ಕಾ ।
ಯ್ದಲಗಿಡುವಂತೆ ಕಯ್ಯ ಕುಳಶಾಂಕುಶಮಂ ತಿರಿಪುತ್ತುಮೆತ್ತಿದು ॥
ಜ್ಜ್ವಳಧವಳಾತಪತ್ರಮೆಸೆಯುತ್ತಿರೆ ವಾರಣವೇಱಿ ಲೀಲೆಯಿಂ ।
ಸಲೆ ನಲವಿಂದಣಂ ತಳರ್ದು*ದಿಂತು ಕುಮಾರಕರತ್ಯುದಾರಕರ್ ॥೪೮॥

ನಯಶಾಸ್ತ್ರನೀಕಮಾಕಾರಮನೆ ಪಡೆದುದೆಂಬಂತೆ ಸನ್ಮಂತ್ರಿವಿದ್ಯಾ ।
ತಿಯನಾದಂ ತಾಳ್ದ ಮಂತ್ರೀಶ್ವರತತಿ ತಳರ್ದು*ತ್ತಾತ್ಮಕಾಂಜೇಲತಾಸ ॥
ರ್ವ್ಯುತಸ್ವೇತೋರ್ಚಕೂರ್ಚಂಶ್ರವಣನಿಕಟಲಗ್ನಾಯತಶ್ಮಶ್ರುಶುಭ್ರೋ
ದಯಜೇನಾನೂನಕೂರ್ಪಾಸಕಮುಜಿತಧೃತಚ್ಛತ್ರಮಾರೂಢವಾಹಂ ॥

ಕಡಿತಲೆ ಕೆಯ್ಯನೇವಲೆಗೆ ಸೆಕ್ಕಿದ ಜೆಕ್ಕಸಿಧೇನು ಮುಂಡೆಯೊ ।
ಳ್ಕಡುಮುರಿದೊತ್ತಿ ಸುತ್ತಿದ [2]ಕಣ್ಣದಣಿ[2] ನೇಣರೆದೊಟ್ಟ ಕಾಪ್ಪಸಂ ।
ಕುಡಿನಿಮಿರ್ದಿರ್ಪ ಮಾಸೆ ನಸುಗೆಂಪಡದರ್ವಿಪ ಬಿಟ್ಟ ದಿಟ್ಟ ನೂ ।
ರ್ಮಡಿಸೆ ಪೊಡರ್ಪನಿಂತು ನಡೆದರ್ನಲವಿಂ ಪತಿಗಂಗರಕ್ಷಕರ್ ॥೪೯॥

ಅರುಣತೆವೆತ್ತ ಮೈಯ್ಬಿಗಿವೊಗಂ ನಸುವೂಸಿದ ಕಾಪ್ಪಸಂ ಪೆಗ ।
ಲ್ವರವಿಜಿದಾತಮುಂಬರೆವ ಟೊಪ್ಪಿಗೆ ಕಟ್ಟದ ಪಾಂಗು ಪೂಸಿ ಸೂ ॥
ಗಿರಿಸಿದ ಗಡ್ಡಮಾಸೆ ಕರದೊಳ್ಸಲೆ ಜೆತ್ರಿತವೇತ್ರದಂಡವೊ ।
ಪ್ಪಿರೆ ಸಹವಾಸಿಗಳ್ತಳರ್ದ*ರಾತ್ಮನಿಯೋಗನಿವಿಷ್ಟನಿಷ್ಟರ್ ॥೫೦॥

ತಳರ್ದ*ತ್ತಾಗಳ್ಮನೋರಾಗದೆ ವಿಷಯಗೃಹಾಮಾತ್ಯ ದಂಡಾಧಿನಾಥಾ ।
ವಳಿ ಧರ್ಮಾಧ್ಯಕ್ಷ ಕೋಶಾಧಿಪ ತಳವರ ಹಾಸ್ಯಾದಿತಂತ್ರಾಳಪಾಳಾ ॥

ಪಾ—1. ಸಂಖೆ. 2. ಕಣ್ಣಣಿ.

ವಳ ರಾಜಶ್ರೀಷ್ಮ ಸೇನಾಪರಿಕರಣ ಪುರೋಧೋಧಿಕಾರಾಂಗರಕ್ಷಾ ।
ವಳ ಮುಖ್ಯಂಬೆತ್ತ ಬಾಹತ್ತರದೆಸಕದ ನಾನಾನಿಯೋಗಿಪ್ರತಾನಂ ॥೯೦॥

ವ॥ ಇಂತು ನಿರಂತರಾತಿಸಂಭ್ರಮೋಜ್ಜೃಂಭಿತದಿಂದೆಡೆವಿಡದೆ ನಡೆವ ಪೊಡವೀಶ ಚಕ್ರಧರನ ಪಡೆಯ ಪಟುತರಮದಕರಿತುರಗರಥ ಪದಾತಿಪದ ಪಾತಪರಿಷ್ಕುಣ್ಣಕ್ಷ್ಮಾತಳೋತ್ಥ ಧೂಳೀಜಾಳಧೂಸರಿತ ದಿಗಂಗನಾಕಾಟಿಳಕುಂತಳಕಳಾಪಮುಂ। ಪ್ರಬಳತರಪವಮಾನಭಂಗೀಕೃತಸಮುತ್ತುಂಗ ಕೇತುಪ್ರತಾನಪರಿಕೀರ್ಣಪವನಪಥಮಂಡಳಮುಂ । ಚೂಳಿಕಾಕಪಣ ವಿಗಳಿತಭಗಣೋತ್ಪುಲ್ಲಮಲ್ಲಿಕಾಮಿಳಿತಮಣಿಕಳಶಕಮನೀಯ ಖಚರಸು ರಸುವಿಮಾನಪ್ರತಾನಸಂಕೀರ್ಣಸಂಕಟನಭಸ್ಥಳಮುಂ। ನಿಖಿಳನೃಪಕುಮಾರನಿಕರವೀರ್ಯಮಾಣಕಪೂರಪಾರಿಕಾಕಸೂತ್ರಿಕಾರೇಣು ಜಾಳಪರಿಮಳ ಮಿಳಿತಮತ್ತ ಗಜಮದಾಸವಾಸಿತಚಮರರುಹಪವನಸಂಚಾರಭರಿತಭುವನವಿವರಮುಂ। ಸಮೇತಸಕಳಾತಪತ್ರಸಂಛನ್ನಸಮುದಿತಚ್ಛತ್ರಯಾಕ್ರಾಂತಸಕಳವಸುಮತೀಚಕ್ರಮುಂ । ಸಂಜನಿತನಿಖಿಳಪಟುಪಟಹಶಂಖಸಂಕೀರ್ಣಒಹಳಕಹಳಾಗಭೀರಭೇರೀಭೂರಿಭ್ರಾಂಕಾರಪೂರಿತಾಶಾಸಮಾಜಮುಮಾಗಿ ನಿಚ್ಚವಯಣಂಗಳಿಂ ನಡೆಯುತ್ತುಂ ಕತಿಪಯದಿವಸಕ್ಕೆ ಗಂಗಾತರಂಗಿಣೀತೀರಮನೆಯೆದ್ದವರ್ಗಳ್—

ನವನಾನಾಪ್ರಸವಾವಳೀಜನಿತದಿವ್ಯಮೋದಿ ನವ್ಯಪ್ರಸೂ ।
ನಿವಸನ್ಮಾಧುಕದಾದ್ರಿ(?)ಮಧುಪಭಾಜಾನಿಳಭಾಜಿ ಭೂ ॥
ಭುವನೇಶಂಗಿದಿರ್ವಂದುದಿಂತು ಪುದಿದಾಗಂಗಾಧುನೀತೀರಜಾ ।
ರುವನಾಂತಸ್ಥನಿಳಿಂಪದಂಪತಿರತಿಕ್ರೀಡಾರುತಂ ಮಾರುತಂ ॥೯೧॥

ವ॥ ಆಗಳಿಂತಿದಿರ್ವಂದ ಜಗತ್ಪ್ರಾಣನಂ [1]ಪ್ರಾಣ[1]ಪ್ರಿಯಮಾಡಿ ನಾಡೆಯುಂ ತಕ್ಕೈಸಿ ಚಕ್ರಧರಂ ಲೀಲೆಯಿಂದಾಲಲಿತಗಂಗಾತರಂಗಿಣೀಯ ತೀರಮನೆಯೆದ್ದವಂದು—

ಸ್ಮಿತನೀರೇಜಾಸ್ಯಲೋಲಜ್ಜಘನಯನೆ ರಥಾಂಗೋರುವಕ್ಷೋಜೆ [ಭೃಂಗಾ ।
ಯತವೇಣೀಬಂಧೆ ಚಂಚತ್ಕುನಜಘನೆ ಹಂಸೀಲಸದ್ಯಾನೆ ಶುಭ್ರೋ ॥

ಪಾ—1. ಪ್ರಾಯ.

ನ್ನತಫೇನಾನೂನಜೇನಾಂಶುಕೆ ತರಳತರಂಗಾವಳೀಬಾಹುವಿಭ್ರಾ ।
ಜಿತೆ ವುಣ್ಯೋತ್ತುಂಗೆ ತಾನೆಂದೆನೆ ಪೆಸರ್ವೆಡೆದಾಗಂಗೆಯಂ ಚಕ್ರಿ ಕಂಡಂ॥

ವ ॥ ಆಗಂಗಾತರಂಗಿಣಿಯುಂ ನಿಜಕೀರ್ತಿಗಂಗಾತರಂಗಿಣೀಪ್ರವಾ
ಹಪೂರಿತಜಗತ್ರಯಾಂತರಂಗನಪ್ಪ ಚಕ್ರಧರನೀಕ್ಷಿಸುವಂದಮುಸಲ್ದು ರಥ
ಚೋದಕಂ ರಥಮನಲ್ಲಿಯೆ ನಿಲಿಸಿ ಮೆಲ್ಲನಿಂತೆಂದಂ:—

ಇದು ಹೇಮದಿಳಾದ್ರಿದ ಶಿಖ ।
ರದಿನಿಱಿದು ಜಿನಾಂಗಸಂಗದಿಂದಾ ಗಂಗಾ ॥
ನದಿ ಪಾವನಮುಘಹರಮ ।
ಪ್ಪುದು ಭಾವಿಸೆ ದೇವ ನಿಮ್ಮ ಚರಿತದ ತೆಱದಿಂ ॥೯೩॥

ಇದು ಹೇವಾದ್ರೀಂದ್ರಜಾಮಹಿಮರುಜೆಧವಳಂ ವಿಶ್ವಲೋಕೋತ್ತ
[ಮಂ ಕ ।
ಶ್ವದವಿಚ್ಛಿನ್ನಪ್ರವಾಹಪ್ರಕಟಿತಮಹಿಮೂಳಂಬಮುತ್ಸೃಷ್ಟದೋಷ್ಟ ॥
ತ್ರಿದಶಸ್ತುತ್ಯಂ ಲಸತ್ಕಿನ್ನರಸುರಗಣಿಕಾಗೀತಮಿಂ ತುಂಗಗಂಗಾ ।
ನದಿಯ.....ವೋಲತುಳಖ್ಯಾತಮತ್ಯಂತಪೂತಂ ॥೯೪॥

ಜಿನರಾಜಾಂಗಾಮುಷ್ಕಂಗಂ(?)ಸಮನಿಸಿ ಬರುತಿರ್ದತ್ತು ತಾನಂತ್ಹಂ ಪಾ ॥
ವನಮಿಂತೀಗಂಗೆಯೆಂದಿಲ್ಲಿಯೆ ಸುಜೆತೆ(?)ನಿಮಿತ್ತಂ ಸುರೇಂದ್ರಾದಿಗೀರ್ವಾ॥
ಣನಿಕಾಯಂ ದೇವಕಾಂತಾವಳಿ ಸಲೆ ಸಲಿಲಕ್ರೀಡೆಯಂ ಮಾಱ್ಪುದೇಱ್ಪಂ ।
ದು ನಿತಾಂತಂ ಬಂದು ನೀರೂಡುವುದಿದಱೊಳಮರ್ತ್ಯದ್ವಿಪೇಂದ್ರಂ
[ನೃಪೇಂದ್ರಾ ॥೯೫॥

ವಿನುತಂಬೆತ್ತೀಗಂಗಾ
ವನಿತೆಯ ಕಮನೀಯಮಪ್ಪ ಕಟಿಸೂತ್ರಂ ತಾ ॥
ನೆನೆ ಕಣ್ಗೊಳಿಸುತು ಮಣಿಮಯ ।
ಕನಕದ ವಸವೇದಿಕಾವಿಳಾಸಮಿಳೇಶಾ ॥ ॥೯೬॥

ದೇವರವಧರಿಪ್ರದೀವನ ।
ಮಿವರಗಂಗಾಸುಸಂಗದಿಂ ಪಾವನಮೆಂ ॥

ದಾವಿಬುಧಾವಳಿ ವನಕೇ ।
ಳೀವಿಭವವನಿಲ್ಲಿ ಮಾಲ್ಪುದತ್ಯುತ್ಸವದಿಂ ॥೯೬॥
ಕಮಳಕುಮುದಾಕರಂಗಳ ।
ಕಮನೀಯನಿವಾಸಮಖಿಳತರುಗಳ ನಿಳಯಂ ॥
ಸುಮನೋಬಾಣನ ತಾಣಂ ।
ಸಮುದಿ[1]ತಸರ್ವರ್ತುಕಂ[1] ವನಂ ಭುವನಪತೀ ॥೯೭॥

ತಿಳಕಂ ತಾಳಂ ತಮಾಳಂ ಕನಕಕದಳಿ ಖರ್ಜೂರ ಜಂಬೀರ ಜಂಬೂ।
ಕುಳವಮ್ಮಂ ನಾಳಕೇರಂ ಕುರವಕ ವಕುಳಾಶೋಕ ವಾಸಂತಿಭೂಜಾ॥
ವಳ ನಾರಂಗಂ ಲವಂಗಂ ಫಳಮಯಪನಸಂ ಚಂದನಂ ಚಂಪಕಂ ಪಾ ।
ಟಳ ಲುಂಗಂ ಮಾತುಳುಂಗಂ ವನದೊಳೊದವಿ ಚೆಲ್ವಾದುದೆತ್ತಂವಿಜಿತ್ಯಂ॥
ಫಳಭಾರಾನತಮಾಯ್ತು ಮಾವು ತಳರಿಂ ಚೆಲ್ವಾಯ್ತು ಕೋಕಾಂಘ್ರಿಪಾ ।
ವಳ ಬೇರಿಂ ತುದಿಗೊಂಬುಮುಟ್ಟಿ ತನಿವಣ್ಣಂ ಬಕ್ಕೆ ಪೇಕ್ಷಿತ್ತು ಕಾ ॥
ಯ್ಗಳನಚ್ಚಾಳಗೆ ನಾಳಕೇರಮೆನಸುಂ ಪಕ್ವಾಯ್ತಣಂ ಬೀಡೆವ ।
ಣ್ಗಳ ಬಿನ್ಪಿಂ ಸಲೆ ದಾಡಿಮದ್ರುಮಚಯಂ ತಾಳ್ದಿತ್ತು ಧಾತ್ರೀಶ್ವರಾ ॥

ವ ॥ ಇಂತು ಬಿನ್ನವಿಪ ತನ್ನಯ ವಚನಕ್ಕೆ ಚಕ್ರಧರಂ ಚಿತ್ತ ಮಿತ್ತುದನಱಿದು ರಥಚೋದಕನಾಮಧ್ಯವನಕ್ಕೆ ರಥಮಂ ಚೋದಿಸಿ ದಾಗಳಾಬನಮಂ ನೋಡಿ—

ಪಡೆಯ ಬಲ್ಲೆಯಂ ನೆಱಿ ಪಡಲ್ವಡಿಸಲ್ಕೆ ಸಮರ್ಥಮೀಬನಂ ।
ಬಿಡಿಸುವುದಿಲ್ಲಿ ಬೀಡನಿದಱಿಂಪೊಳ್ಪರಿದುಂ ಕ್ರಮವಾಱುವಂತಿರೀ ॥
ಗಡೆ ವನಕೇಳಯಂ ಸಲಿಲಕೇಳಯನುಜ್ಜುಗಿಸೆಂದು ನೇಮವಂ ।
ಕುಡೆ ಪೃತನಾಧಿಪಂಗೆ ವನಮಧ್ಯದೊಳರ್ದು ನರೇಂದ್ರಚಂದ್ರಮಂ ॥೯೯॥

ವ॥ ಇಂತು ಚಕ್ರವರ್ತಿಯಿಂ ದತ್ತಾಜ್ಞನಾಗಿ ಸೇನಾಪತಿ ಬಿಡಿಸುವುದುಂ—ನಿಜನಿಖಿಳವಾಹನಂಗಳನಿಱಿದಾವನಿತಾಜನಂ ಶ್ರಮಜನಿತ ಘನ ಘರ್ಮಬಿಂದುವ್ಯಂದಮಂ ತದೀಯವನಪವನಂಗಾಹುತಿಯನೀಯುತ್ತುಂ, ಯಾನತ್ರಯಸಂಭವಾನೂನತನುತಾಪಕಳಾಪಮನಲ್ಲಲ್ಲಿ ಸುಲಲಿತಪಲ್ಲವಾ

ಪಾ—1. ಸಂವರ್ತಕಂ.

ಸ್ತರಣಸಮಿತಿಗೆ ಸಮನಿಸುತುಂ, ಮುಖಸೌರಭಕ್ಕೆ ಕವ್ವರೆಗೊಳ್ವಳಗಳಗ
ಱಿಯು ಗಾಳಿಯಿಂದಾಱಿದ ನಿಱಿಗುರುಳ್ಗಳಂ ಕೊಡಂಕೆಯೊಳ್ಸಾರ್ಚುತುಂ,
ಬೆಮರಮರ್ದು ಜಗುಲ್ತ ತ್ತುಸ್ತತ್ತಿರೆಯ(?)ಪುಡಿಯಡಿದ ಬಳಲ್ಮುಡಿಯಂ ಸಡಿ
ಲಿಸಿ ವಸನಮಂ ತನಿಗಂಪಿನಿಂ ಪುದುಂಗೊಳಿಸುತುಂ, ಕುಚಕೂಚುಕಂಗಳನು
ತ್ಸಾರಿಸಿ ನಳತೋಳ ವೊದಲ ನುಸ್ಪೊಗರ ಪೊಳಪುಮಂ ನೋಡಿದರ ಕಣ್ಗ
ಕೋಟಲೆಯನೊಡರಿಸುತುಂ, ನಿಜಹೃದಯದಾಹಮಂ ನಿವಾರಿಸಲೆಂದು
ಪಚ್ಚೆವಳಿಕುಗಳಂ ಮುಖಂ ತೀವೆ ತಳದಾತ್ಮಸ್ವಸ್ತಿಕಸೌರುಭವನಿರ್ಮಡಿ
ಗೆಯ್ಯುತುಂ, ವಕುಳಕುರವಕಾಮ್ರಜಂಬೀರಚೋಚವೋಚಮಳಯ
ಜಾದಿರುಚಿರತರುಸಿಚಯಾಭಿಜೆ್ಞಚ್ಛಾಯಾವಗಾಹವಾಗಿರುತ್ತುಮಂತುಂ
ತನಿಯದೆಯುಂ ಜಳಾವಗಾಹವಾಂಛೆಯಿಂದನಿತುಮಲ್ಲಿಂ ತಳರ್ದುವಾಗಳ್

ವಿಳಚಾಂಭೋರುಹಷಂಡತೀರದ ಲಸನ್ಮಲ್ಲೀಲತಾವಾಸದೊಳ್ ।
ಸಕಳಾಂತಃಪುರಕಾಮಿನೀಕುಳಕಟಾಕ್ಷಾಲೋಕಸೌಖ್ಯೋದಯಾ ॥
ಧಿಕನಾಗಿರ್ದ ನೃಪೇಂದ್ರನಲ್ಲಿಗೆ ಬರುತ್ತಿರ್ದತ್ತು ಮಂಜೀರಚಾ ।
ರುಳಧ್ವಾನಘನಪ್ರಪೂರಿತವನಂ ತದ್ವಾರನಾರೀಜನಂ ॥೧೦೨॥

ವ॥ ಇಂತು ಬರ್ಪ ವಿಳಾಸಿನೀಜನದ ಮನಮಱಿದವರೋಧವಧೂ
ಜನಂ ಬೆರಸು ನೀವನಿತುಂ ಜಲಕ್ರೀಡೆಯಂ ಮಾಡಿಮೆಂದು ಮಹೀವರ
ಕೇಸರಂ ನೇಮಿಸಿದಾಗಳ್

ತನತನಗಾಗಳಂತೆ ಕುಸುಮಾಪಚಯಕ್ರಿಯೆಯಂ ನಿಮಿರ್ದ ಬೇ ।
ಱಿನಿತಲರ್ವಚ್ಚಮಂ ತಳೆದು ಜೆಚ್ಚರದಿಂ ಜಲಕೇಳಿವಾಂಛೆಯಿಂ ॥
ದನಿಮಿಷವಾಹಿನೀತಟಮನೆಯ್ದಿದುದೆಯ್ದೆ ಪೊಕ್ಕುದಂಗನಾ ।
ಜನವನಿತುಂ ಝಷಾವಳಿಯೆನೆ ದೃಷ್ಟಿ(?)ಬಿಂಬಿತದಂಬವಿಭ್ರಮಂ॥೧೦೩॥

ವ॥ ಆಗಳಂತು ತಮ್ಮತಮಗೆ ಗಮನಶ್ರಮಪರಿಹರಣಾರ್ಥಮುಂ ಲೀ
ಲಾರ್ಥಮುಮಾಗಿ ಸರಭಸದಿಂದೊಳಪೊಕ್ಕು ಪೀವರೋಚ್ಚಕುಚಪ್ರಚಯಾ
ಸ್ಫಾಳನದಿನಾಗಂಗಾತರಂಗಿಣೀತರಂಗಭಂಗುರತೆಗೆ ಭಂಗಮನೊಡರಿಸುತುಂ
ಸ್ವಕೀಯಸುಲಲಿತಾಂಗಾಸುಲೇಪನಾಮಳಮಳಯರುಹಪರಿದಾತನಿಷಧರವಿಸ

ರದಿಂ ತದ್ಧವಳದಿಧೀತಿಯಂ ದ್ವಿಗುಣಿಸುತುಂ ಸ್ತನತಟಪಯೋಳಪುಟಭುಜ
ಶಿಖರಸರೋದರವಿರಜಿತಮುಕರಿಕಾಪತ್ರಕಸ್ತುರಿಕಾವಳೀಕ್ಷಾಲನದಿಂ ಯ
ಮುನಾಸಿತಸಲಿಲಾಭಿಷಂಕೆಯಂ ಸಂಗಳಿಸುತುಂ ಮುಹುರ್ಮುಹುರವಗಾಹ
ಕ್ರಿಯಾಗಳಿತಸೀಮಂತಸಿಂಧೂರಧಮ್ಮಿಲ್ಲವಲ್ಲಿಕಾಪ್ರಸವ ಪರಿಕೀರ್ಣದಿಂ
ಫೇನಕಣಗಣಾಕಳಿತಾಕ್ಷಿಣ ಶೋಣಾಪಗಾಂಬುಸಂಕಯಮನವಳಂಬಿಸು
ತುಂ ಸಕಳಕಾಂತಾಜನಂ ಜಳಕೇಳಿಯೊಳ್ವನೋದಾವಸಾನಮನೆಯ್ದಿ ತಾ
ಮೆಯ್ದ ನವ್ಯದಿವ್ಯಾಪ್ಪ ರಾಭರಣಮೂಲ್ಯಾನುಲೇಪನಾಳಂಕೃತರಾಗಿ ಮುದ
ಮನಪ್ಪುಕೆಯ್ದಿರ್ದುವಾಪದದೊಳ್—

ದ್ಯುಮಣಿಶ್ವೇತವುರೀಜೆಗಳ್ಪದೆಪಿನಿಂದಸ್ತೋದಯಾದ್ರಿದ್ವಯಾ ।
ಗ್ರಮನಂದೊರೆ್ಮದಲೆಯ್ದಿ ತಮ್ಮಯ ವಿಭಾಸ್ವತ್ಪುಪ್ಪದಂತಾಭಿದಾ ॥
ನಮುಮಂ ಸಂಗಳಿಸರ್ದ ಪೌರ್ಣಮಿಯುಮಂ ಪ್ರವ್ಯಕ್ತಮಂ ಮಾಡಿದರ್ ।
ಸಮರಾಂಗಂ ಕಮನೀಯವಾಗಿರೆಯುಮಾಗಳ್ತಮ್ಮ ಬಿಂಬಂಗಳಿಂ ॥೧೦೪॥

ವ॥ ಇಂತು ಸಾಂದ್ರಕೋಭೆವೆತ್ತ ಚಂದ್ರೋದಯದೊಳ್—

ಪೆಳಱಿಸುತುಂ ಕುಸುಂಕುಱಿ ತಮಿಸ್ರಮನಾವರಿಸುತ್ತುಮಾದಿಶಾ ॥
ವಳಯನೊಡಚ್ಚುತುಂ ಜಳಧಿಗಂಬುವಿಜೃಂಭಿತಮಂ ಕ್ಷುಧಾನಳಂ ॥
ಮಿಳರ್ವ ಚಕೋರಕೋಟಿಗಳ ಪಾರಣೆಗೋಗರಮಾಗುತುಂ ಸಮು ।
ಜ್ವಳಿಸದುದುರ್ವಿಪರ್ವಿಜಗಮಂ ನವಚಂದ್ರಿಕೆ ಸಾಂದ್ರಕೋಭೆಯಿಂ ॥೧೦೫॥

ವ ॥ ಇಂತು ಸಾಂದ್ರಮಾದ ಚಂದ್ರಾತಪಾಂಡಂಬರಸುಧಾಂಬುರಾ
ಶಿಯೊಳ್ಕ್ಕಧರಂ ನಾಗರಕಾದಿಜನಂಬೆರಸು ಲೀಲೆಯಿಂದೋಲಾಡುತ್ತು
ಮಿರ್ದನಂತರಮಂತಃಪುರಕಾಂತಾನೀಕನಯನಕುಮುದಿನೀಚಂದ್ರನಾಗಿ ಖ
ಟ್ಕಂ ನಿದ್ರಾಂಗನಾಸಂಗಸುಖಮನೆಯ್ದಿರೆ—

ಇಳೆಯೊಳ್ ಹರ್ಷವಿಷಾದಂ ।
ಗಳನೊರ್ವೊದಲಾಗದಂತೆ ಕೋಕಚಕೋರಾ ॥
ವಳಯೊಳ್ಕಮಳೋತ್ಪಳಸಂ ।
ಕುಳದೊಳ್ಸಮನಿಸಿತುಮರ್ಕಸುದಯಂಗೆಯ್ದಂ ॥೧೦೬॥

ವ॥ ಅಗಳ್ನಿದ್ರಾಂಗನಾಸಂಗದಿಂ ಪಿಂಗಿ ಚಕ್ರವರ್ತಿ ನಿರ್ವರ್ತಿತ ನಿಖಿಳಪ್ರಭಾತಕ್ರಿಯಾನಿಕಾಯನಾಗಿ ಸೇನಾಪತಿಗೆ ಪಡೆಯ ನಡೆಯಿಸೆಂದು ನೇಮಿಸಿದಾಗಳ್—

ನಡೆದತ್ತಾರಾಜರಾಜೇಂದ್ರನ ಬಲಮದು ಗಂಗಾಪಗೋಪಾಭ್ಯತೀರಂ ।
ಬಿಡಿದಾಗಳ್ ಯಾನಕೋಲಾಹಳಕಟುರುತಿಯಿಂ ದಿಗ್ಗಜಾನೀಕಮಂ ಕೇ ॥
ಳ್ವಡಿಸುತ್ತುಂ ವಲ್ಗದಶ್ವೀತ್ಕರಖುರರಹತಿಯಿಂ ಬೆಟ್ಟುವೆಟ್ಟೆಲ್ಲಮಂ ದೂ ॥
ಳ್ವಡಿಸುತ್ತುಂ ದಂತಿದಾನಪ್ಲವದಿನವನಿಯಂ ಕೂಡೆ ಜೌಗೇಱಿಸುತ್ತುಂ ॥

ಇಳೆ ಕಂಪಂಗೊಳ್ವನಂ ಸಂಭ್ರಮದಿ ನಡೆತರುತ್ತಿರ್ಪ ಸೇನಾಪದೋತ್ಥಿ
ತುಳಧೂಳೀಜಾಳವಾತಕ್ಕಗಿದುಱಿದು ಬಲೋದ್ರೇಕದಿಂ ದಾನಧಾರಾ ॥
ವಿಳದುದ್ದಂಡಜಂಡದ್ವಿಪವರತುರಗಬ್ರಾತಮಂ ತಂದು ತನ್ಮಂ ।
ಡಳನಾಥಕ್ರೋಟ್ಟು ಕಂಡರ್ಭಯಧರವಿನಮನ್ಮಸ್ತಕನ್ಯಸ್ತಹಸ್ತರ್॥ ೧೦೪॥

ಕನಕವ್ಯಾಕೀರ್ಣಕೋಶಬ್ರಜಮನಮಳರತ್ನಾವಳೀಕೇಳತಾನೇ ।
ಕನವೀನಾನರ್ಘ್ಯಭೂಷಂತತಿಯನತುಳಲಾವಣ್ಯವಿಖ್ಯಾತಕಾಂತಾ ॥
ಜನಮಂ ತಂದಿತ್ತು ಚಕ್ರೇಶ್ವರನ ಚರಣಕಂಜಾತಮಂ ಕಾಣುತಿರ್ದ ।
ತ್ತನಿತುಂ ಪ್ರತ್ಯಂತದೇಶಾವಳಿಯ ವಸುಮತೀವಲ್ಲಭಾನೀಕಮೆಲ್ಲಂ॥ ೧೦೫॥

ಘನಸಂಜಾತವನದ್ವಿಪೇಂದ್ರಜನರಾಹೋದೂತವೇಣೂದ್ಭವಾ ।
ಭಿನುತಜ್ಯೋತಿಗಳಪ್ಪ ಮುತ್ತುಗಳನಾಕಾಂತಾರಮಾತಂಗನೂ ॥
ತನದಂತಾವಳಿಯಂ ಮೃಗೋದ್ಭವಲಸತ್ಕಾಳಾಗರುಸ್ತೋಮಚಂ ।
ದನಮಂ ಚಕ್ರಿಗೆ ತಂದುಕೊಟ್ಟಿಱಿದು ಪ್ರತ್ಯಂತಪೃಥ್ವೀಶ್ವರರ್ ॥ ೧೦೦॥

ವ॥ ಮತ್ತಮಾವಾರಾಶಿಯಂ ಪುಗುವ ವರ್ಷಾಕಾಲವಾಹಿಗಳಂತೆಡ
ವಿಡದೆ ಪೋಗುತಿರ್ಪನಸುದೇಶವಾಹಿನಿಗಳನೊಳಕೊಳುತ್ತುಮಾಚಕ್ರಧ
ರನ ಮಹಾವಾಹಿನಿ ಪೂರ್ವಾಭಿಮುಖವುಮಿ ಪೋಗಿ ಗಂಗಾಸಾಗರಾಸನ್ನವ
ರ್ತಿಯಾಗಿ—

ಫೇನಪರಿಧಾನಧೃತಗಂ ।
ಗಾನದಿಯ ಪಯೋಧಿನದುಭಯಸಮೀಪ ॥
ಸ್ಥಾನದ ವಸುಧಾತಳದೊ ।
ಳ್ಸೇನಾಪತಿ ಬೀಡುಪಿಡಿಸಿದಂ ಸರಭಸದಿಂ ॥೧೦೧॥

ವಳಹಸ್ತಾಗ್ರಂಗಳಂ ಕೊಂಡತುಳತರಳಮುಕ್ತಾಳಯಂ ನಿನ್ನ ತಾರಾ ।
ವಳಯಂ ವೇಲೆಂದು ತೋಱಲ್ನಿಮಿರ್ದುದು ಗಗನಕ್ಕೆಂಬಿನಂ ಶೀಕರೌಘಾ
ಕಳತೋರ್ಮಿಸ್ತೋಮದಿಂದಂಬರತಳಮನಣಂ ಚುಂಬಿಸುತ್ತುಂ ಕರಂ ಕ॥
ಱೊಳಸುತ್ತಿರ್ದತ್ತು ನಾನಾಮಣಿಗಣಜನನಸ್ಥಾನಮಂಭೋನಿಧಾನಂ ॥
ವಳಕರಕಳತಾಂಬಪ್ಪಣ ।
ಕಾಳಾಕ್ಷ್ಯಂಗಳನೆ ತಳೆಯುತ್ತುಂ ಘನಘೋಷಾ ॥
ವಳಯಿಂ ಚಕ್ರಿಯನೆನಸುಂ ।
ನಲವಿಂ ಪರಸುವವೊಲೆಸೆದುದುರ್ಣವಮೊಗಳ್ ॥೧೧೩॥

ವ॥ ಇಂತೆಸೆಯುತ್ತಿರ್ದ ಸಮುದ್ರಶೋಭೆಯಂ ದೂರದಿಂ ನೋಡುತ್ತುಮಲ್ಲಿಂ ತಳರ್ದು ಚಕ್ರಧರನಾಗಂಗಾತಟರಂಗಿಣೀವೇದೀತಟಂಬಿಡಿದು ಪಸಮುದ್ರದುತ್ತರದೆಸೆಯೀ ನಡೆದು ತದೀಯಗಂಗಾದ್ವಾರಸೋಪಾನಮಾರ್ಗದಿಂ ತೀರಮನೆಯ್ದಿ ವೇದೀತಟನಿವೇಶಿತಶಿಬಿರನಾಗಿರ್ದಲ್ಲಿಗಿಪ್ಪತ್ತು ನಾಲ್ಕುಯೋಜನಾಂತರದೊಳರ್ದ ಮಾಗಧಾಮರನನೆಱಗಿಸಿಕೊಳಲೆಂದು ಯಥೋಚಿತಕ್ರಮಾರೂಢದೃಢರಥಂ ಮನೋರಥಂಬೞೆಯೆ ಜಳನಿಧಿಯ ನೊಳಪೊಕ್ಕು ಪನ್ನೆರಡುಯೋಜನಂಬರಂ ಯಾನಪಾತ್ರಂ ಪರಿವಂತೆ ಪರಿದು-

ನೆಲೆಗೊಂಡುದಲ್ಲಿ ರಥಮವಿ ।
ಚಳದಿಂ ನೆಲದಲ್ಲಿ ನಿಲ್ವವೊಲೆನೆ ಕುರುವಂ ॥
ಕಲಲಾವನಪ್ಪ ಚಕ್ರಿಯ ।
ಏಳಸತ್ಪುಣ್ಯಪ್ರಭಾವಮೇನತಿಶಯವೋ ॥೧೧೪॥

ಬರೆದು ನಿಜನಾಮಮುಂ ನೃಪ ।
ವರನಾಲಿಖಿತಪ್ರಯುಕ್ತಬಾಣದಿನಿಸೆ ಚ ॥
ಚ್ಚರಮೆಯ್ದಿ ನಟ್ಟುದಣಮ ।
ಚ್ಚರಿವಡೆ ಮಾಗಧನ ನೆರ್ಮುಗಂಭಮನಾಗಳ್ ॥೧೧೫॥

ವ॥ ಅದಂ ಕಂಡು ತೆಗೆದಾಲಿಖಿತಮನೋದೆಂದು ಕರಣಾಗ್ರಣಿಗೆ ನೀಡಲಾತಂ ಸ್ವಸ್ತಿ ಶ್ರೀಮತ್ಪಂಚಮಚಕ್ರವರ್ತಿ ತ್ರಿಭುವನಭುವನಚರಿತ ಕೀರ್ತಿ ಸಕಳಮಹೀಪಾಳಮೌಳಿಜಾಳಕೀಳತವಿಶಾಳಮಣಿಗಣೋದ್ಘೃಷ್ಟ

ಪಾದಪೀಠಂ ನಿಜಮೂರ್ತಿವಿಜಿತರತಿನಾಥಂ ಶ್ರೀಶಾಂತಿನಾಥಂ ಮಾಗಧನಂ ಬೆಸಸಿರ್ದೀನೇಮಂಗಂಡಾಕ್ಷಣದೆ ಬಂದಾಳ್ವಿಸಂಗೊಂಡು ಬಾಟ್ಪುದೆಂದೊಡೆಕೇಳ್ದು ಕಳರ್ದು ಗಜಿಸಿ ಗರ್ಜಿಸಿ ಗದ್ದಿಗೆವೊಯ್ದು ಮಾಗಧಂ ಮುನಿದು ತಾನೊರ್ವ ಶಾಂತೀಶ್ವರಂ ಗಡ ಪಂಚಮುಚಕ್ರಧರಂ ಗಡ ಮತ್ತಮೆನ್ನ ನಾನಾಳ್ವಿಸಂಗೆಯ್ದು ಬಾಟ್ಪುದೆಂಬಂ ಗಡ ತಡೆಯದೀಗಳೆ ತನಗೆ ತಕ್ಕುದಂ ತೋರ್ಪೆನೆಂದು ಸಮರಕ್ಕೀಡೆಗೊಡರ್ಚಿ ಸನ್ನಾಹಭೇರಿಯಂ ಪೊಯಿಸಲುಹ್ಜುಗಿಸಿದಾಗಳ್—

ಮುಳಸನೆಲೆ ದೇವ ತಳೆಯ ।
ಲ್ಕಳವಲ್ಲಿದು ಚಕ್ರಿಗೆಱಗಿ ಕಪ್ಪಮನಿತ್ತಾ ॥
ಗಳುಮಿರ್ಪರಲ್ತೆ ನಮ್ಮಯ ।
ಕುಳಾಗತರ್ದಿವಿಜರೆಂದು ಸಜೀವರ್ಪೇೞ್ದರ್ ॥೧೧೬॥

ವ॥ ಇಂತು ಯಥೋಜಿತಮಂ ನುಡಿದ ಸಜೀವರ ವಚನಮಂ ಮನದೆ ಗೊಂಡು ಭಯಚಕಿತಜಿತ್ತನಾಗಿ—

ಪರಿಕಳಿತಭಯಂ ಮಾಗಧ ।
ನಿರದಾಗಳ್ಯರಧಿಯೊಳಗಣುತ್ತಮರತ್ನೋ ॥
ತ್ಕರಮಂ ತಂದಾಚಕ್ರಿಗೆ ।
ಭರದಿಂ ತಾನಿತ್ತು ತಳೆದನಾಳ್ವಿಸನನವಂ ॥೧೧೭॥

ವ॥ ಆಗಳಿಂತು ಕಾಣ್ಕೆಗೊಟ್ಟಾಳ್ವಿಸಂಬೆತ್ತ ಮಾಗಧಂಗನುರಾಗಮಪ್ಪಂತೆ ಕಲವು ರತ್ನಂಗಳಂ ಕೊಂಡು ಸಮುದಾಂತರಾಳದ್ವೀಪದೆ ದೇವನ ವಿಧಿಯೊಳಗಣ್ಗೆ ಬಂದು ವೈಜಯಂತೀದ್ವಾರದೊಳ್ನಿಂದು—

ಮಾಗಧನಂ ಸಾಧಿಸಿದಂ ।
ತಾಗಳ್ತನ್ನಡಿಗೆ ತಡೆಯದೆಱಗಿಸಿಕೊಂಡಾ ॥
ವೇಗದೆ ವರತನುಸುರನಂ ।
ಭಾಗದೊಳರ್ದಂತು ನಿಲಿಸಿದಂ ಚಕ್ರಧರಂ ॥೧೧೮॥

ವ॥ ಅಲ್ಲಿಂ ತಳರ್ದು ಪಶ್ಚಿಮಾಭಿಮುಖನಾಗಿ ನಡೆದು ಸಿಂಧುನದಿಯು ವಾರಾನ್ನಿಧಿಯು ಸಂಗಮದೊಳ್ನಿಂದು ಚಕ್ರಧರಂ ತತ್ಕ್ರಮದಿಂ ಪ್ರಭಾಸತೀ

ಮುರನಂ ಸಾಧಿಸಿ ಮುನ್ನಿನಂತಿರಾಳ್ವಸಕ್ಕೆ ಸಲಿಸಿ ಮಗುಳ್ದು ಪೂರ್ವಾಭಿಮು
ಖನಾಗಿ ಸಿಂಧುನದಿಯ ದಕ್ಷಿಣತಟಂಬಿಡಿದು ಕೆಲಂಬರರಸುಗಳಂ ಸಾಧಿಸಿ
ತನ್ನದೀಪೂರ್ವತೀರಂಬಿಡಿದುತ್ತರಾಭಿಮುಖನಾಗಿ ನಡೆದು

ವರವರ್ಣಸ್ವರ್ಣಚೈತ್ಯಾಲಯಮಣಿಕಳಶಾಗ್ರಾವಳೀಚುಂಬಿತಾಂಬೋ
ಧರಮಾರ್ಗಂ ಚಾರುಪೂರ್ವಾಪರಶರನಿಧಿತಾರಸ್ಥಳೀಲಗ್ಧಮುದ್ಭಾ ॥
ಸುರಶುಭ್ರಾದಭ್ರದೀಪ್ತಿ ಬ್ರಜಎಜಿತಸರಂ ನೀರದಸ್ಫಾರತಾರಾ
ಹರಹಾಸೋದ್ಭಾಸಮೆಂಬೊಂದೆಸಕದ ವಿಜಯಾರ್ಧಾದ್ರಿಯಂ ಚಕ್ರಿ ಕಂಡಂ

ಜೆತಸುಮನೋವನತತಿ ಪರಿ ।
ವೃತವಿಜಯಾರ್ಧಾದ್ರಿಕಟಕದೊಳ್ಕಟಕಮನಾ ॥
ಕ್ಷಿತಿನಾಥಚಕ್ರಿ ಬಿಡಿಸಿದ ।
ನತಿಮುದದಿಂದಾನತಾವನೀವರವೃಂದಂ ॥೧೦೦॥

ಅದನರ್ಿದು ಜನಿತಘನಭಯ ।
ಹೃದಯಂ ಕೃತಮಾಳನಾತ್ಮಶೈಳಶಿಖರಾ ॥
ಗ್ರದಿನೀಡಿದು ಬಂದು ಚಕ್ರಿಯ ।
ಪದಮುಖದೊಳ್ಕದರ್ದಂ ಕಿರೀಟಪ್ರಭೆಯಂ ॥೧೦೧॥

ಧರಣೀಶ ಭವತ್ಪದಕಿಂ ।
ಕರನೆಂ ನೆಗಟ್ಟಿಂ ಗಿರೀಂದ್ರದ ಗುಹೆಯಿಂ ಮೇ ॥
ಲಿರುತಿರ್ಪುದಲ್ತೆ ಮನ್ಮಂ ।
ದಿರಮಿಳೂವಿದಿತನೆಂ ಪೆಸರಂ ಕೃತಮಾಳಂ ॥೧೦೨॥

ವ॥ ಎಂದಿಂತು ಬಿನ್ನವಿಸಿ ತನ್ನಯ ತಂದ ನವೀನಾನರ್ಘ್ಯರತ್ನಕುಂ
ಡಳಕಟಕಕೇಯೂರಹಾರಾದ್ಯಾಭರಣಂಗಳಂ ಕೊಟ್ಟು ಪೊಡೆವಟ್ಟು ಚಕ್ರಿ
ಧರಚಿತ್ತಪ್ರಸಾದದೊಳೆ ನೇರ್ಪಟ್ಟು ತದ್ಗುಹಾಕವಾಟಪುಟಭೇದನೋಪಾ
ಯವಱಯೆ ನೆಱಿ ಬಿನ್ನವಿಸಿ ಬೀೞ್ಕೊಂಡು ನಿಜನಿಳಯಮಂ ಕೃತಮಾಳ
ನೆಯ್ದಿದಾಗಳ್—

ತಡೆಯದೆ ಚಕ್ರಿಧರಾಜ್ಞೆಯ ।
ನೆಡೆಯುಡುಗದೆ ಪಡೆದು ತನ್ನ ಪಡೆಯುಂ ಪದೆಪಿಂ ॥

ನಡೆಯಿಸಿದಂ ಸೇನಾಪತಿ ।
ಪೊಡರ್ಪಿನಿ ತದ್ಗುಹಾಪ್ರದೇಶದಿನಾಗಳ್ ॥೧೦೩॥

ವ॥ ಆಗಳಾಗುಹಾಸೋಪಾನವಾರ್ಗದಿಂ ಪಡೆಯ ನಡೆಯಿಸಿ ತನ್ನ ದೀಪಶ್ಚಿಮತೀರದೊಳ್ಬೀಡುವಿಡಿಸಿ ದ್ವಾದಶಯೋಜನವ್ಯಾಸಮುಮಪ್ಪ ಯೋಜನೋತ್ಸೇಧಮುಮಪ್ಪ ತಮಿಸ್ರಗುಹಾದ್ವಾರದೊಳ್ನಿಂದಶ್ವರತ್ನಾರೂಢನಪಶ್ಚಿಮಾಭಿಮುಖನಾಗಿ ದಂಡರತ್ನದಿಂ ಕವಾಟಪುಟಮಂ ಪೊಯ್ದು ಕಾದುರೆಯಂ ತೋಱಿ ಬಿಡಲೊಡಂ ಗುಹೆಯ ಪಶ್ಚಿಮಕ್ಕೆ ಪನ್ನೆರಡುಯೋಜನಮಂ ಲಂಘಿಸಿ ತಡೆಯದೆ ಪೋಗಿ ತನ್ಮ್ಲೇಚ್ಛರಾಜರಂ ಷಣ್ಮಾಸಂಬರಂ ಸಾಧಿಸಿ ಮಗುಳ್ದು ಮುಕ್ತಾಗ್ನಿಜ್ವಾಳಮಾದ ಗುಹಾಪ್ರದೇಶದಿಂ ನಿಜಪ್ರಬಳಸಮೇತಂ ಒಂದು ತನ್ನ ತಂದ ವಸ್ತ್ರವಾಹನಂಗಳನೋಲಗಿಸಿ ಲೀಲೆಯಿಂದಾನೃಪಾಳರ್ವೆರಸು ಚಕ್ರಧರನಾಜ್ಞೆಯಂ ತಲೆಯೊಳಾಂತು ಕೊಂಡು–

ಭರದಿಂದುತ್ತರಭರತೋ ।
ರ್ವರೆಗೆತ್ತಲೆವೇಟ್ಟುಮೆಂದು ಬಿನ್ನವಿಸೆ ನೃಪೇ ॥
ಶ್ವರನಾಜ್ಞೆವೆತ್ತು ಸೇನಾ ।
ವರನಾಗಳ್ಸಕಳಸೈನ್ಯಮಂ ನಡೆಯಿಸಿದಂ ॥೧೦೪॥

ವ॥ ಇಂತು ಸೇನಾಪತಿ ಷಡಂಗಬಳವನೆತ್ತಿಸಿ ತಾಂ ಮುಂದೆ ನಡೆಯೆ ಚಕ್ರಧರಂ ಚಕ್ರರತ್ನಪುರಸ್ಸರಂ ಗುಹಾದ್ವಾರದೊಳ್ನಿಂದು ಸಿಂಧುಸರಿದುಭಯತಟದೊಳೆರಡೆರಡು ಯೋಜನಾಂತರದೊಳ್ಪಸರಿಸಿ ಪಡೆಯಂ ನಡೆವಂತು ನಿಯಮಿಸಿ ತದ್ಗುಹಾಭಿತ್ತಿಗಳೊಳ್ಏಕಯೋಜನಾಂತರದೊಳಲ್ಲಲ್ಲಿಗೆ ಕಾಕಿಣೀರತ್ನದಿಂ ಬರೆದ ಚಂದ್ರಾರ್ಕರ ಬೆಳಗಿನೊಳ್ ನಡೆದುನ್ಮಗ್ನಮುಗ್ನನದೀದ್ವಯಮಂ ಸ್ಥಪತಿರತ್ನರಚಿತ ವಿಜಿತ್ರಯಂತ್ರವಾರ್ಗದಿಂ ಕಟ್ಟಿದು ಕೆಲವು ದಿವಸಕ್ಕೆಯ್ದಿಯಾಗುಹೋತ್ತರದ್ವಾರಕವಾಟಂಗಳಂ ತಳ್ದು ಪೊಱಮಟ್ಟುತ್ತರಭರತಮಧ್ಯಮ್ಲೇಚ್ಛಖಂಡದೊಳ್ ಬೀಡುವಿಟ್ಟಪ್ಪುದುಂ–

ನಡೆದಾಗಳ್ಸೇನಾಪತಿ ।
ತಡೆಯದೆ ತತ್ಸಿಂಧುನದಿಯ ಪಡುವಣ ತೀರಂ ॥

ಬಿಡದಿರ್ದಾವೆಲ್ಲೀಚ್ಛನೃಪರ ।
ನಡಿಗೆಱಗಿಸಿ ಕೊಂಡನಂತೆ ನಿಜಭುಜಬಲದಿಂ ॥೧೨೫॥

ವ॥ ಆಗಳಲ್ಲಿ ಸೇನಾಪತಿ ಮಗುಳ್ದು ಬಂದು ಮಧ್ಯಮಖಂಡದ ಜೆಳಾತಾವರ್ತ ರಾಜರನಾಜ್ಞಾವಿಧೇಯರಂ ಮಾಡಿ ತಂದು ಕಾಣಿಸುವುದುಂ ಚಕ್ರಧರನವರಂ ಮನ್ನಿಸಿ ಕಟ್ಟಿಪಿ ಮತ್ತಮುತ್ತರಾಭಿಮುಖನಾಗಿ ಪೋಗೆ—

ದ್ವಿತಯಾಂಭೋರಾಶಿತೀರಾಯತಮಮರನಿವಾಸಪ್ರಲಗ್ನಾಗ್ರಕೂಟೋ
ನ್ನತಮುದ್ಯನ್ಮೇಖಳಾಳಂಕೃತನಸುವಿಸರಾಂಶುಬ್ರಜವ್ಯಾಪ್ತದಿಕ್ಸಂ ॥
ತತಿಶಾಃಪೂರಾತ್ತಪದ್ಮಾಕರವನರುಹಸಂಪೂರ್ಣನಾನಾಮರಸ್ತ್ರೀ ।
ತತಿ ಕಣ್ಗಾಕರ್ಷಣಂ ಸಂಗಳಿಸಿದುದು ನೃಪೇಂದ್ರಂಗೆ ಹರ್ಮ್ಯಾ
[ಚಳೀಂದ್ರಂ ॥೧೨೬॥

ಇದು ಭರತಕ್ಕೆ ಸೀಮೆ ಸುಮನಸ್ತುತಗಂಗೆಗೆ ಸಿಂಧುಗುದ್ಭವಾ ।
ಸ್ಪದಮನಿತುಂ ಕಾಳಾಚಳಚಯಕ್ಕೆ ಮೊದಲ್ಪೆಸರ್ವೆತ್ತ ಚಕ್ರಿವ ॥
ರ್ಗದ ವಿಜಯಕ್ಕೆ ಮೇರೆಯೆನುತುಂ ನಡೆ ನೋಡುತುಮಾಹಿಮಾದ್ರಿಕಂ ।
ತದ ವನಮಧ್ಯದೊಳ್ಬಿಡಿಸಿದಂ ಬಲಮುಂ ಕುರುವಂಶವಲ್ಲಭಂ ॥೧೨೭॥

ವ॥ ಇಂತು ಕುರುವಂಶಚಕ್ರಧರನಿರ್ದುದಂ ಕಂಡು ಬಂದು ಕಂಡ ಹಿಮವತ್ಕೂಟದ ಹಿಮವದಾಮರನಂ ಮನ್ನಿಸಿ ನಿಜಾಜ್ಞಾವಶಂಮಾಡಿ ಕಟ್ಟಿಪಿ ಸಿಂಧುದೇವ್ಯಭಿಷಕ್ತನುಂ ತತ್ಪ್ರದತ್ತಾಖಿಳರತ್ನಸ್ವೀಕೃತನುಮಾಗಿ ಪ್ರಾಜೀಮುಖದೆ ನಡೆದು ದೇವಸಿಂಧುದೇವಿಲೀಲೆಯಿಂದೋಲಗಿಸಿ ಸಿಂಹಾಸನಾದಿವಸ್ತುಗಳಂ ಸ್ವೀಕರಿಸಿ ಬಳಾಧ್ಯಕ್ಷಂ ದಕ್ಷಿಣಾಭಿಮುಖದೆ ಬರುತ್ತುಮಾಮಧ್ಯಮಖಂಡವರ್ತಿಯಾಗಿ ಶತಯೋಜನೋತ್ಸೇಧಮುಂ ಶತಯೋಜನಭೂವ್ಯಾಸಮುಂ ಶತಾರ್ಧಯೋಜನೋಪರಿವಿಸ್ತಾರಮುಂ ಸಕಳಚಕ್ರಧರದಿಗ್ವಿಜಯಪ್ರಶಸ್ತಿಲಿಖಿತಕೀರ್ತಿಸ್ತಂಭಮುಂ ವೃಷಭಾಮರಾವಪ್ಪಂಭಮುಮುಪ್ಪ ವೃಷಭಾಚಳೇಂದ್ರಕ್ಕೆ ವಂದು ಬೀಡುವಿಟ್ಟರ್ದಲ್ಲಿ—

ಸ್ವಸ್ತಿಶ್ರೀಮದಶೇಷಭೂವರಕಿರೀಟಾಗ್ರಸ್ಥಮಾಣಿಕ್ಯವಿ ।
ನ್ಯಸ್ತಾಂಘ್ರಿದ್ವಯಪಂಕಜಂ ಸಕಳಚಕ್ರೇಶಂ ಜಿತಾರಾತಿರಾ ॥

ಜಸೊತ್ತೀಮಂ ವರಶಾಂತಿದಾಮನನುಳೋದ್ಯತ್ಕೀರ್ತಿಕಾಂತಂ ತ್ರಿಲೋ ।
ಕಸ್ತುತ್ಯಂ ಕುರುವಂಕವರ್ಧನಕರಂ ಶ್ರೀಶಾಂತಿತೀರ್ಥೇಶ್ವರಂ ॥೧೨೪॥

ವ॥ ಎಂದಿಂತು ಚಕ್ರಧರಂ ನಿಜಪ್ರಶಸ್ತ್ಯಭಿಧಾನಂಗಳಂ ಕಾಕಿಣೀ ರತ್ನದಿಂದಾವೃಷಭಶೈಳೇಂದ್ರಶಿಖರಶಿಳಾಫಳಕದೊಳ್ಬರೆಯಿಸಿ ತದುರ್ವೀ ಧರಾಗ್ನೇಯದಿಗ್ಭಾಗಂಬಿಡಿದು ನಡೆದು ವಿಜಯಾರ್ಧಗಿರಿಯ ಕಾಂಡಪ್ರತಾಪ ಕೂಟಗುಹಾಮೂಳದೊಳ್ಪೀಡಂ ಬಿಟ್ಟರಲ್ ಮುನ್ನಿನ ಮಾರ್ಗದಿಂ ಗುಹಾ ದ್ವಾರಮಂ ತೆಱದು ಸೇನಾಪತಿ ಮೂಡಣ ಮ್ಲೇಚ್ಛಖಂಡಮಂ ದಂಡಸಾ ಧ್ಯಂ ಮಾಡಿ ವಸುಮಿತಸಹಸ್ರವರ್ಷಂಗಳ್ಗೆ ಚಕ್ರಧರಂ ಸಿದ್ಧದಿಗ್ವಿಜಯ ನಾಗಿ ಮಗುಳ್ದು—

ಭುವನಂ ನಾದಾತ್ಮಕಂ ತಾನೆನೆ ಮೊೞಗುವ ಗಭೀರೋರುಭೇರೀ ।
ನಿವಹಪ್ರಧ್ವಾನನುದ್ಯನ್ಮದಕರಟಿಘಟಾಬ್ಧಿಂಹತೌರಾವಮಶ್ವೀ ॥
ದ್ಭವಹೇಷಾಘೋಷಮಾಕಹಳರುತಿ ವಿತರತ್ಕಿಂಖಸಂಘುಸ್ವರಂ ತೀ ।
ವ್ರವಿನಂ ಸಂರಂಭದಿಂ ಹಸ್ತಿನಪುರಿಗಿರದೇೞ್ತಂದು ತಾಂ ಚಕ್ರಿ ಪೊಕ್ಕಂ ॥

ವ॥ ಇಂತು ಪುರಮಂ ಪೊಕ್ಕು ಚಕ್ರಧರಂ ಮಾಗಧವರತನುಪ್ರ ಭಾಸಕೃತಮಾಳಕಾಪ್ಟಮಾಳವಿಜಯಾರ್ಧ ಕುಮಾರಹಿಮದ್ವಿಜರ್ಕಳಿಂ ದ್ವಾತ್ರಿಂಶತ್ಸಹಸ್ರಮಕುಟಬದ್ಧರಾಜರ್ಕಳಿಂ ಸಕಲತೀರ್ಥಸಲಿಲಾಭಿಷಿಕ್ತ ನಾಗಿ ಚತುರಧಿಕಾಶೀತಿಲಕ್ಷಪ್ರಮಿತಮದಸಿಂಧುರಂಗಳಿಂ ತತ್ಪ್ರಮಿತಸ್ಯಂ ದನಂಗಳಿಂದಷ್ಟೋತ್ತರದಶಕೋಟಿಜಾತ್ಯಶ್ವಂಗಳಿಂ ಚತುರೋತ್ತರಾಶೀತಿ ಕೋಟಿಪದಾತಿಯಿಂ ದ್ವಾತ್ರಿಂಶತ್ಸಹಸ್ರಮಕುಟಬದ್ಧಭೂಪರಿಂ ತತ್ಪ್ರ ಮಾಣಾಂಗರಕ್ಷಕಗಣಬದ್ಧದೇವರಿಂ ಅಷ್ಟಾದಶಸಹಸ್ರಮ್ಲೇಚ್ಛಮಹೀಪಾ ಳರಿಂ ಷಣ್ಣವತಿಸಹಸ್ರಾವರೋಧವಧೂಜನಸಂಗಳಿಂ ಅನಂದಿನೀನಾಮಂಗ ಳಪ್ಪ ಪನ್ನೆರಡುಂ ಗಂಭೀರಭೇರಿಗಳಿಂ ತನ್ಮಿತಂಗಳಪ್ಪ ನಾಲ್ವತ್ತೆಂಟು ಕಂಬಂಗಳಿಂ ಷಡ್ಗುಣಿತಾಪ್ತಕೋಟಿಗಳಪ್ಪ ವಿವಿಧವೈಜಯಂತಿಗಳಿಂದಲಂ ಕರಿಸಿದ ಸೇನಾಂಗಮುಂ ಶ್ರೀನಿಳಯಜನಿತಮಪ್ಪಂತುಜಿತಪುಷ್ಪಾದಿದ್ರವ್ಯ ಭಾಜನಧಾನ್ಯಾಯುಧತೂರ್ಯಹಮ್ರ್ಯವಸ್ತ್ರಾಭರಣನಾನಾರತ್ನಪ್ರದಂಗಳಪ್ಪ ಕಾಳ ಮಹಾಕಾಳ ಪಾಂಡುಕ ಮಾಣವ ಶಂಖ ಸ್ಯೆಸರ್ಪ ಪದ್ಮ ಟಿಂಗಳ

ಸರ್ವರತ್ನಂಗಳೆಂಬೀಸವನಿಧ್ಯಂಗಮುಂ । ಆಯುಧಾಗಾರಸಂಭವಂಗಳಪ್ಪ ಶುದ್ಧದರ್ಶನವೆಂಬ ಚಕ್ರರತ್ನಮುಂ । ಸೂರ್ಯಪ್ರಭಮೆಂಬ ಛತ್ರರತ್ನಮುಂ, ಸೌನಂದಕಮೆಂಬ ಖಡ್ಗರತ್ನಮುಂ । ಚಂಡವೇಗಮೆಂಬ ದಂಡರತ್ನಮುಂ, ಶ್ರೀಸದನಸಂಭವಂಗಳಪ್ಪ ಚೂಡಾಮಣಿರತ್ನಮುಂ । ಚಿಂತಾಮಣಿಯೆಂಬ ಕಾಕಿಣೀರತ್ನಮುಂ । ವಜ್ರಾಂಗವೆಂಬ ಚರ್ಮರತ್ನಮುಂ । ವಿಜಯಾರ್ಧಪರ್ವತಸಂಭವಂಗಳಪ್ಪ ವಿಜಯಪರ್ವತಮೆಂಬ ಗಜರತ್ನಮುಂ । ಪವನಂಜಯನೆಂಬ ತುರಗರತ್ನಮುಂ । ಸುಭದ್ರೆಯೆಂಬ ಸ್ತ್ರೀರತ್ನಮುಂ। ಹಸ್ತಿನಪುರೀಪ್ರಭವಂಗಳಪ್ಪಯೋಧ್ಯನೆಂಬ ಸೇನಾಪತಿರತ್ನಮುಂ । ಬುದ್ಧಿಸಾಗರನೆಂಬ ಪುರೋಹಿತರತ್ನಮುಂ । ಕಾಮವೃಷ್ಟಿಯೆಂಬ ಗೃಹಪತಿರತ್ನಮುಂ । ಭದ್ರಮುಖನೆಂಬ ಸ್ಥಪತಿರತ್ನಮುಮೆಂಬಿಂತು ಜೀವಾಜೀವರತ್ನರೂಪಂಗಳಪ್ಪ ಚತುರ್ದಶರತ್ನಾಂಗಮುಂ । ಪಪ್ಪ್ಯತ್ತರಶತವಲ್ಲಭರುಂ । ತತ್ಪ್ರಮಿತರಪ್ಪ ವೈದ್ಯರುಂ । ಪರಮಕಲ್ಯಾಣಾಹಾರಮೆಂಬ ಭೋಜನಾಂಗಮುಂ । ಪುಷ್ಕರಾವತಿಯೆಂಬ ಶಯ್ಯಾನಿಳಯಮುಂ । ಸಿಂಹಧೃತಸಿಂಹವಾಸಿನಿಯೆಂಬ ಶಯನಾಂಗಮುಂ । ಅನುತ್ತರಾಭಿಧಾನಸಿಂಹಾಸನಪ್ರಮುಖವಪ್ಪಾಸನಾಂಗಮುಂ । ಅಜಿತಂಜಯರಥಾದಿನಾನಾಯಾನರೂಪಂಗಳಪ್ಪ ವಾಹನಾಂಗಮುಂ । ದ್ವಯೋತ್ತರತ್ರಿಂಶತ್ಸಹಸ್ರನೃತ್ಯಶಾಳಾವಿಭಾಸಿಯಪ್ಪ ನಾಟ್ಯಾಂಗಮುಂ । ದ್ವಾಸಪ್ತತಿಸಹಸ್ರಹರಿನಿರಾಜಿತಮಪ್ಪ ಪುರಾಂಗಮುಂ । ದಿಕ್ಸ್ವಸ್ತಿಕಮೆಂಬ ಸಭಾಂಗಮುಮೆಂದೆಸೆವ ದಶಾಂಗವುಮೆಂದೆಸೆವ ದಶಾಂಗಭೋಗದೊಳಂ । ತದವಯವಂಗಳಪ್ಪ ಮೂವತ್ತಿಟ್ಟಾಸಿರ ವಿಷಯಂಗಳುಂ । ತೊಂಭತ್ತಾಱುಕೋಟಿ ಗ್ರಾಮಂಗಳುಂ । ತೊಂಭತ್ತೈಸಾಸಿರ ದ್ರೋಣಾಮುಖಂಗಳುಂ । ಅಷ್ಟಚತ್ವಾರಿಂಶತ್ಸಹಸ್ರಪತ್ತನಂಗಳುಂ । ಷೋಡಶಸಹಸ್ರಖೇಡಂಗಳುಂ । ಪಟ್ಟಂಬಾಶದಂತರದ್ವೀಪಂಗಳುಂ । ಚತುರ್ದಶಸಹಸ್ರಸಂವಾಹನಂಗಳುಂ । ನಿಕಕೋಟಿಗೋಮಂಡಲಂಗಳುಂ । ಪ್ರತ್ಯಂತಾಶ್ರಯಂಗಳಪ್ಪ ಸಪ್ತಶತಕುಕ್ಷಿನಿವಾಸಂಗಳುಂ। ಅಷ್ಟವಿಂಶತಿಸಹಸ್ರದುರ್ಗಾಟವಿಗಳುಂ । ಕ್ಷಿತಿಸಾಗರಪ್ರಕಾರಸರ್ವತೋಭದ್ರಗೋಪುರದ್ವಾರರಾಜಿತವಾದ ವೈಜಯಂತಿಯೆಂಬ ಪಾಸಾದಮುಂ । ಸಂಧ್ಯಾವರ್ತಮೆಂಬ ಶಿಬಿರಮುಂ। ಗಿರಿಕೂಟವೆಂಬ ಸಕಳದಿಗ್ಜಯೋಕನಾ

ಗಾರಮುಂ । ವರ್ಧಮಾನಮೆಂಬ ಪ್ರೇಕ್ಷಣಾವಾಸಮುಂ । ನಿದಾಘನಿರಸನ
ಮೆಂಬ ಧಾರಾಗೃಹಮುಂ । ಕುಬೇರಕಾಂತಮೆಂಬ ಭಂಡಾರಮುಂ । ವಸುಧಾಕರಮೆಂಬ ಕೋಷ್ಠಾಗಾರಮುಂ । ಜೀಮೂತಮೆಂಬ ಮಜ್ಜನ
ಗೇಹಮುಂ । ಅವತರಿಸಿಕೆಯೆಂಬ ರತ್ನಚೂಳಿಕೆಯುಂ । ದೇವರಮ್ಯ
ಮೆಂಬ ಗಂಧಕುಟಿಯುಂ । ಯಕ್ಷಕರವಿಧೂಯಮಾನಂಗಳಪ್ಪನುಮತಂಗ
ಳೆಂಬ ಮೂವತ್ತೆರಡ್ಚಾಮರಂಗಳುಂ । ಸೂರ್ಯಪ್ರಭಮೆಂಬಾತಪತ್ರ
ಮುಂ । ವಿದ್ಯುತ್ಪ್ರಭಂಗಳೆಂಬ ಮಣಿಕುಂಡಳಂಗಳುಂ । ವಿಪವೋಚ್ಛೆಕಂ
ಗಳೆಂಬ ಪಾದುಕೆಗಳುಂ । ಅಭೇದ್ಯಮೆಂಬ ಕವಚಮುಂ । ವಜ್ರಕಾಂಡ
ಮೆಂಬ ಕೋದಂಡಮುಂ । ಅವೋಘಮೆಂಬ ಶರಾನೀಕಮುಂ । ವಜ್ರ
ತುಂಡಮೆಂಬ ಶಕ್ತಿಯುಂ । ಸಿಂಹಾಧಿಕಮೆಂಬ ಕುಂತಮುಂ । ಲೋಹ
ವಾಹಿನಿಯೆಂಬ ಸುರಗೆಯುಂ । ಮನೋವೇಗಮೆಂಬ ಕಣೆಯುಂ । ಸೌನಂ
ದಕಮೆಂಬ ಬಾಳುಂ । ಭೂತಮುಖಮೆಂಬ ಖೇಡಮುಂ । ಮೊದಲಾಗೆ
ಮತ್ತವನೇಕಾಯುಧಾಭರಣಭೋಗಂಗಳೊಳ್ನೆಹೆದು ದಿಗ್ವಿಜಯಕಾಲೋನ
ಪಂಚವಿಂಶತಿಸಹಸ್ರಸಂವತ್ಸರಂಗಳ್ ಸಲ್ವಿನಮಖಂಡಿತಪ್ರಭಾವದಿಂ ಪ
ಟ್ಟಖಂಡಭರತಭೂಮಂಡಳಪಾಜ್ಯಸಾಮ್ರಾಜ್ಯಲಕ್ಷ್ಮಿಯಂ ತಳೆದು—

ಸಕಳಶ್ರೀಲೀಲೆ ನಿತ್ಯಂ ನಿಖಿಳಸುಜನದೊಳ್ಕೀರ್ತಿನಂ ಸಂತತಂ ಸೇ
ವಕಧಾತ್ರೀನಾಥಯೂಥಂ ನಿಜಪದವಿಯೊಳೊಪ್ಪಿರ್ಪಿನಂ ನಿರ್ಮಳಾತ್ಮೇ ॥
ಯಕನತ್ಯರ್ತಿಪ್ರಕಾಶಂ ತ್ರಿಜಗಮನೊಳಕೊಂಡಿರ್ಪಿನಂ ಪೆಂಪಿನಿಂ ತೀ
ರ್ಥಕರಂ ಶಾಂತೀಶನೋರ್ವಂತರಸುತನಮನಾರೂಢಿಸುಂ ಮಾಡುತಿರ್ದಂ ॥
ಸ್ಮರನುಂ ಚಕ್ರೇಶನುಂ ತೀರ್ಥಕರನುಮೆನಿಪೀರೂಢಿಯಿಂ ನಾಡೆಯುಂ ಬಿ।
ತ್ತರಿಸುತ್ತಿರ್ಪನ್ನೆಗಂ ತನ್ನಯ ಸೊಗಯಿಪ ಸೌಂದರ್ಯಸಂಪತ್ತಿ ವಿದ್ಯಾ ॥
ಧರನಿರ್ವಾಣೋರ್ವರಭೃತ್ಪರಿವೃತ(?)ಮಹಿಮೋನ್ನತ್ಯನುದ್ಭೂದಬೋಧಂ।
ಪರಿರಮ್ಯಂಬೆತ್ತು ಪೆಂಪಿಂದೆಸೆದನಸಮಸಾಮ್ರಾಜ್ಯದೊಳ್ ಶಾಂತಿನಾಥಂ ॥

ವನಜಾಂಬಕನಂತೆಸಸುಂ ।

ವಿನತಸನೆಂದೆನಿಸಿ ಚಕ್ರಿ ಪೆಸರ್ವಡೆದಂ ಪಾ ॥

ವನಮಪ್ಪ ತನ್ನ ರಾಜ್ಯಮು ।
ದನಿತಿಯುತಮಬುಧನಂತಿದೇನಚ್ಚರಿಯೋ ॥೧೩-೭॥
ವಿಯದಂಗಂ ಸಾಂದ್ರಸಂಧ್ಯಾರುಜೆಮಯಮಚಳಶೈಣಿ ಮಾಣಿಕ್ಯರೋಜೆ ।
ರ್ಮಯಮಾಶಾವಾಳಿಬಾಳಾತಪಮಯಮಟಿಳಾಂಭೋನಿಧಾನಂಪ್ರವಾಳೋ॥
ದಯರುಕ್ಕೋಭಾಮಯಂ ತತ್ತಟವನವನಿಕುಂ ಪಲ್ಲವೋಲ್ಲಾಸಲೀಲಾ ।
ಮಯಮಾಗಲ್ಕೊರ್ವಿ ಪರ್ವಿತ್ತೆಸೆದನುಪಮಶಾಂತೀಶತೇಜಸ್ಸಮಾಜಂ ॥

ಕ್ರಮಸೇನಾಸಕ್ತವಿದ್ಯಾಧರಂದಿವಿಜಧರಾಧೀಶ್ವರಬ್ರಾತಜೇತ ।
ಪ್ಪುಮುದವ್ಯಾಕೋಶಮಂ ವೀಕ್ಷ್ಣಕಿರಣಕಳಾಪಾತದಿಂ ಮಾಡಿ ಪೀಯೂ॥
ಷಮಯಂಜೆತ್ತೊಪ್ಪೆ ಲೋಕತ್ರಯಮನಪಗತದ್ವಾರಮಂ ಮಾಡಿದಂ ತ ।
ನ್ನಮಳೋದ್ಯತ್ಕೀರ್ತಿಚಂಗಾತಪದೆಸಕದೆ ಚಕ್ರೇಶ್ವರಂ ಶಾಂತಿನಾಥಂ ॥

ವ ॥ ಇಂತು ಕುರುವಂಶವನಜನಾವಾಸರೇಶ್ವರನಪ್ಪ ಶಾಂತೀಶ್ವರ ಚಕ್ರಧರಂ ಸಕಳಸಾಂಮ್ರಾಜ್ಯಸುಖಮನನುಭವಿಸುತ್ತುಮಿರ್ದೊಂದು ದಿವಸಂ ದಿವಿಜೇಂದ್ರವಿಳೋಚನಚಯವಿಲೋಕನಾತಿಕೌತುಕಮಪ್ಪ ವಿಳಾಸಮನಪ್ಪುಕೆಯ್ದೊಡ್ಡೋಲಗಂಗೊಟ್ಟರೆ—

ಸುರುಚಿರಶೋಭೆವೆತ್ತು ಚೆತವಿಪ್ಪರದೊಳ್ಸುರಖೇಚರಾವನೀ ।
ಶ್ವರವರಮಂತ್ರಿಮಂಡಳಿಕರಾಜಕುಮಾರಸಮಾಜಮೋಜೆವೆ ॥
ತ್ತಿರೆ ಕಳಕಂಠಕಂಠರವಕಿನ್ನರಕಾಂತೆಯರೋಳವೆತ್ತು ಬಿ ;
ತ್ತರಿಸಿರೆ ರಾಜಿಸಿರ್ದುದು ಸಭಾಸದನಂ ಕುರುವಂಶಚಕ್ರಿಯಾ ॥೧೩-೮॥

ಸಕಳೋರ್ವೀಪಾಳವಂಶಾಗ್ರಥಿತಪೃಥುತರಾನರ್ಘ್ಯರತ್ನಾವಳಿ ಸ್ಫಾ ।
ಟಿಕಭಿತ್ತಿಬ್ರಾತದೊಳ್ಮಾರ್ಪೊಳೆಯೆ ಸುರವಧೂಚಾಪಳಾದ್ಯಂಗರುಕ್ಷಂ ॥
ದಿಕೆ ಚಂಚತ್ಹಾರಹಾರದ್ಯುತಿತತಿ ಪಟವಾಸಾತಿಶುಭ್ರಾಂಶು ತಟ್ಟಿಪ್ಪು ।
ಯ್ಯೆ ಕರಂ ಚೆಲ್ವಾಯ್ತು ಸಾಂದ್ರೋದಿತಸಬಳರುಚಿಬ್ಯೂಹಮಾಸ್ಥಾನ
[ಗೇಹಂ ॥೧೩-೯॥

ಜಿತಚೇತೋಜಾಂತರೂಪಂ ತನುರುಚಿ ವಿಜಿತಸ್ವರ್ಣಶೈಳಪ್ರಭಂ ಸ ।
ನ್ನುತಸತ್ವಾದಪ್ಕೃತಾಂಭೋನಿಧಿಮಣಿನಿಕರೋತ್ಕೀರ್ಣಭೂಪಾವಳೀನಿ ॥
ರ್ಜಿತಗೀರ್ವಾಣೇಶಬಾಣಾಸನನವನಿಪಚೂಡಾವಲೀಢಾಂಘ್ರಿರಾರಾ ।
ಜಿತನಿರ್ದಂ ಸಿಂಹಪೀಠಾಗ್ರದೊಳನುಪಮಚಕ್ರೇಶ್ವರಂ ಶಾಂತಿನಾಥಂ ॥

ದಿವಿಜೇಂದ್ರಾನೀಕವಸ್ತೋತ್ಕರಧೃತಸುರರೇಳ್ದಿಂದು ನಿಂದಿರ್ದವರ್ಗಿ ।
ನ್ನವಿಸಲ್ಕಾರ್ದಿರ್ದವರ್ಬ್ಯಂತರಸುರರೆಂಬಗಲ್ಸಾರ್ದಿವಜ್ರೋರ್ಜಿತರಿಂದ್ರ ॥
ಭ್ರವನಾಮತ್ಯರ್ಸಮಂತಾಯೆಂಬಗಿದವರಿಳಾಪಾಳರಂತಿರ್ದರೆಂದು ।
ತ್ಸವದಿಂ ಚಕ್ರೇಶ್ವರಂಗೆಯ್ದಿಪ ಪಡಿಯಱರಿಂದಾಯ್ತು ವಾರಾಶಿಘೋಷಂ ॥

ವ॥ ಇಂತನತಿಶಯವಿಭೂತಿಯಿಂದೊಡ್ಡೋಲಗಂಗೊಟ್ಟರ್ದ ಚಕ್ರ
ಧರಂ ಪರಿಚಾರಕೋಪನೀತನೂತನಮಣಿಮುಕುರದೊಳ್ ಸ್ವಕೀಯಮು
ಖಾರವಿಂದಮನಾನಂದದಿಂ ನೋಡಿದಾಗಳ್—

ತನುಗಂ ಜೀವಂಗಂ ನೆ ।
ಟ್ಟನೆ ಬೇಹೆಂಬುದನೆ ತೋರ್ಪವೊಲ್ದರ್ಪಣದೊಳ್ ॥
ತನುವೆರಡಾಗಿರ್ದಂದನು ।
ನನಘುಂ ಬೋಧಾಕ್ಷಿ ಚಕ್ರಿ ನೆಱೆ ವೀಕ್ಷಿಸಿದಂ ॥೧೫೯॥
ತಾನವಿಭೇದದೊಳರ್ದೊಡ ।
ವೇನೆಂತುಂ ಜೀವಂದಲ್ತೆ ತನುವೆಂಬುದನಿ ॥
ನ್ನಾನಱಯೆನೆನುತ್ತುಂ ತ್ರಿ ।
ಜ್ಞಾನಧರಂ ಚಕ್ರಿ ಮತ್ತಮಿರದಿಂತೆಂದಂ ॥೧೬೦॥
ಕೇಡಿಲ್ಲದಾತ್ಮನೊಳ್ನಿಹ ।
ಕೂಡಿರ್ದಂ ಕೇಡನೆಯ್ದುತಿರ್ಪೊಡಲಂ ಕೊಂ ॥
ಡಾಡಿ ಕಡುವೋಹವಕದಿಂ ।
ಕೇಡೆಯ್ದುವರಲ್ತೆ ಮೂಢರೀಸಂಸೃತಿಯೊಳ್ ॥೧೬೧॥
ತವು ತಾನೇಕಸ್ಥಿತಿ..... ।
ವಿವರ್ಜಿತಂ ಪೇಸುವತದ ಪಡಗಾಗಿಯುಮು ॥
ಧ್ರುವಮಪ್ಪೊಡಲನಿದಂ ನ ।
ಶ್ವವನಬುಧಂ ವಿಬುಧನೆಂತುಮೆಂ ನಶ್ವವನೇ ॥೧೬೨॥
ಎನಸುಂ ಸಂಸೃತಿಸೌಖ್ಯಮಂ ಸವಿದ ಚೇತೋವಾಂಛೆಯಿಂ ನಿತ್ಯವಿ ।
ತನುವೆಂದಿಂತು ಸಮಂತು ನಶ್ವವೊಡಿದಗ್ರಗಾ ಸಮುಗ್ರಾಂತಕಂ ॥
ಗೆನೆ ತಾನಿತನುವೇಮದೀತನುಗೆ ಮೋಹಂಗೆಯ್ವ ಜೀವಂಗೆ ದುಃ ।
ಖನಿಬಂಧಂ ಬಿಡದೆಂದೊಡೇಂ ತನುವಿನಿಂ ಬೇಱುಂಟೆ ದುಃಖಾಕ್ಷಯಂ ॥

ತನು ಸಂಸೇವ್ಯಮಿದೆಂದು ವಾಂಛಿಪೊಡೆ ನಾನಾರೋಗಬೀಭತ್ಸಭಾ ।
ಜನಮೇಕೀತನುವೋಹವಿತನುವಿನುದ್ಯನ್ಮೋಹದಿಂ ಜನ್ಮಬಂ ॥
ಧನಮೆಂದುಂ ಬಿಡದಭ್ರದೀತನುವಿವೋಹಂ ಮಾಱ್ಪುದಾಜನ್ಮಭಂ ।
ಜನನುಂ ತಥ್ಯಮೆನುತ್ತುಮಿಂತು ಬಗೆದಂ ಚಕ್ರೇಶ್ವರಂ ಚೆತ್ತದೊಳ್ ॥

ವ॥ ಇಂತು ಶರೀರಸ್ವಭಾವಮಂ ಸಂಭಾವಿಸಿ ಸಂಜನಿತವೈರಾಗ್ಯ ವಾಸಸನಾಗಿ ವಿಶೋಧಿಪರಿಣತಿಯಿಂ ಪೊಗಟ್ಟು ನಿಜತನುಪ್ರತಿಬಿಂಬೋಜ್ಜ್ವ ಯದರ್ಶನಮೆ ಸಂಸರಣಭಯದರ್ಶನಮಾಗಿ ಸ್ವಕೀಯಪಾರ್ಶ್ವಾವಸಂಸೃತಿ ಜ್ಞಾನನಾಗಿರ್ದ ಶಾಂತಿತೀರ್ಥಕರನಿರವನಱಂದುತ್ಪನ್ನಾವಧಿಬೋಧರಾಬ್ರಹ್ಮ ಲೋಕದ ಲೋಕಾಂತಿಕದೇವರೇೞ್ತಂದು—

ಸುಮನೋಭೂರುಹಜಾತನೂತಸುಮನಸ್ಸಂತಾನದಿಂ ಪಾದಪ ।
ದ್ಮವನಾರಾಧಿಸಿ ದೇವ ನಿಮ್ಮಯವುನೋಭಿಪ್ರಾಯವಾನಿಷ್ಟದು ॥
ಷ್ಟಮಳಾಪಾಯಮಿದಾಜವಂಜವಲಶಾನಿರ್ಮೂಳನೋಪಾಯವು ।
ತ್ತಮಮಿಂತೀನೆನಹಂ ಪೆಱರ್ನೆನೆವರೇ ಶ್ರೀಶಾಂತಿತೀರ್ಥೇಶ್ವರಾ ॥೧೪೫॥

ವಸುಮತಿಯೊಳ್ಧರ್ಮಂ ವ ।
ರ್ತಿಸದೆಡವರಿದಿರ್ದುದಿಂತು ಪಲಕಾಲಂ ದೇ ॥
ವ ಸಮಂತದನೆನಸುಂ ಪ್ರಕ ।
ಟಿಸುವುದು ನೀವಿನ್ನನೂನಬೋಧನಿದಾನಂ ॥೧೪೬॥

ವ॥ ಎಂದಿಂತು ಶಾಂತೀಶ್ವರನ ಮನೋಜನಿತವೈರಾಗ್ಯಲತೆಗೆ ತ ಮ್ಮಯ ವಚೋನಿಚಯಂ ಲತಾಂತಮಾಗೆ ವಿನಯದಿಂ ಪ್ರತಿಬೋಧಿಸಿ ಸಾ ರಸ್ವತಾದಿತ್ಯವಹ್ನ್ಯರುಣಗರ್ದತೋಯತುಷಿತಾಬ್ಯಾಬಾದಾರಿಷ್ಟರೆಂಬ ನಿಮಿ ಷಭುಷಿಯರೆಂಬರುಂ ಸ್ವಕೀಯಲೋಕಮನೆಯ್ದಿದಾಗಳ್—

ದೆಸೆಯುಂ ಮಂಗಳವಾದ್ಯಹೃದ್ಯನಿನದಂ ತಟ್ಟಿಪ್ಪಯ್ಯೆ ನಾರಾಯಣಾ ।
ಖ್ಯಸುತಂಗಾಕ್ಷಣದಿಂ ಸಮಸ್ತನಿಜರಾಜ್ಯಶ್ರೀಯನೊಲ್ದಿತ್ತು ಸಂ ॥
ತಸವಾದಂ ನೆಲೆವೆರ್ದ ಭಾಸ್ವದಪವರ್ಗಶ್ರೀವಧೂಸಂಗಸೌ ।
ಖ್ಯಸಮಾಕೀರ್ಣತೆವೆತ್ತಿರಲ್ಕೆ ಬಗೆದಂ ಶಾಂತೀಶ್ವರ ಸ್ವಾಂತದೊಳ್ ॥

ವ॥ ಇಂತು ಬಗೆದು ಶಾಂತೀಶ್ವರಂ ಸ್ವಕೀಯವಿಯೋಗದೊಳುದ್ವೇ ಗಮನಸ್ಕರಾಗದಂತು ಜನನೀಜನಕರಂ ಪ್ರಣಯದಿಂ ಪ್ರತಿಬೋಧಿಸಿ ಪುತ್ರ

ಕಳತ್ರಮಿತ್ರಬಂಧುಸಂದೋಹಮೋಹಪ್ರಬಂಧಮಂ ಪತ್ತುವಿಟ್ಟು ಸಂ
ಸಾರಗಹನಬಹಳಾಂಧಕಾರಾಗಾರದಿಂ ಪೊಲನುಡುವ ಪೊಡರ್ಪನಪ್ಪ್ರಕೆಯ್ದಿ
ರ್ದ ಮನೋಧರ್ಮಮಂ ಸೌಧರ್ಮಕಲ್ಪಾಧಿಪನವಧಿಬೋಧದಿಂದಱಿದಾ
ಗಳ್—

ಕುಮುದವಂಶಶ್ರೀಶಿರಶ್ಶೇಖರನ ಚರಣಪೂಜಾಕ್ರಿಯಾವಸ್ತುಹಸ್ತಂ ।
ಬುರುಹಂ ತಾನಾಗಿ ಬೇಗಂ ಒರಿಸಿ ಬಹಳಚಾತುರ್ಮಕಾಯುಮರೌಘಂ ॥
ಬೆರಸಾಗಳ್ಬಂದನಿಂದ್ರಂ ಪೊಡೆಯಿಸಿ ಪದೆಪಿಂದುಣ್ಮುವಾತೋದ್ಯಹೃದ್ಯ ।
ಸ್ವರಮಾಶಾಕಾಶಮಂ ತೀವಿರೆ ಸರಭಸದಿಂ ಸೂಕ್ತಿಸಂದರ್ಭಗರ್ಭಂ ॥

ಗದ್ಯ॥ ಇದು ಎನಪ್ಪಮರೇಂದ್ರಮೌಳಿಮಣಿಕಿರಣಮಾಳಾಪರಾಗಪರಿರಂಜಿತ
ಚರಣಸರಸೀರುಹರಾಜಿತಪರಮಜಿನರಾಜಸಮಯಸಮುದಿತಸದಮಲಾಗಮಸುಧಾ
ಶರಧಿಶರದಿಂದು ಶ್ರೀಮಾ ಘ ಣ ಂ ದಿ ಪಂ ಡಿ ತ ಮುನೀಶ್ವರ ಮನೋಜನಿತನಿರುಪಮ
ದಯಾರಸಸರಸೀಸಂಭೂತಸಂಭವಾಮಳ ಸುಕವಿ ಕ ಮ ಲ ಭ ವ ವಿರಚಿತಮಪ್ಪ

ಶಾಂತೀಶ್ವರ ಪುರಾಣದೊಳ್

ಶಾಂತೀಶ್ವರಚಕ್ರವರ್ತಿಯ ಚಕ್ರವರ್ತಿವಿಭವವರ್ಣನಂ। ದಿಗ್ವಿಜಯವರ್ಣನಂ । ವೈರಾಗ್ಯವರ್ಣನಂ।
ಪಂಚದಶಾಶ್ವಾಸಂ ಸಂಪೂರ್ಣಂ.

ಷೋಡಶಾಶ್ವಾಸಂ

ಶ್ರೀಮಚ್ಛಾಂತೀಶ್ವರಚರ ।
ಣಾಮಳನಖರಶ್ಮಿಕುಸುಮಕಾಳಶೇಖರಶೋ ।
ಭಾಮುಕುಟನಾದನಾಸು ।
ತ್ರಾಮಂ ಜಿನಪದಪಯೋಜರಾಜಮರಾಳಂ ॥೧॥

ವ॥ ಇಂತು ಶಚೀಕಾಂತಂ ಸಾನಂದದಿಂದಾನಮ್ಮನಾಗಿ
ಪದೆದಾಗಳ್ ಹೃದಯಾನುರಾಗದೊದವಿಂ ಸೌಧರ್ಮಕಲ್ಪೇಂದ್ರನಿಂ ।
ತಿದು ಜನ್ಮಾಭಿಷವಕ್ರಿಯಾತಿಶಯದಿಂ ಮೇಲೆಂಬಿಸಂ ಸಂಭ್ರಮಂ ॥
ಪುದಿದತ್ಯಂತಪವಿತ್ರತೀರ್ಥಜಳದಿಂ ಶಾಂತೀಶ್ವರಂಗೊಲ್ದು ಮಾ ।
ಡಿದನಾರೂಢಿಯು ಮುಂಗಳಾಭಿಷವಮಂ ಪೊಣ್ಮಲ್ತೆ ತೂರ್ಯಸ್ವನಂ ॥೨॥

ಇದು ಕೈವಲ್ಯರಮಾವಿವಾಹವಿಳಸನ್ಮಾಂಗಲ್ಯಭೂಷಾಳಿ ತಾ ।
ನೆ ದಲೆಂಬಂತೆ ಸಮುತ್ತಲಂಕರಿಸಿದಂ ಶಾಂತೀಶನಂ ದಿವ್ಯಗಂ ॥
ಧದರಸ್ಮೇರನಮೇರುಚಾರುಕುಸುಮಕ್ಷ್ಮಾಮಾಂಶುಕಾನಘ್ರ್ಯಭೂ ।
ಷ್ವದನೇಕೋತ್ತಮಭೂಷಣಾವಳಿಗಳಿಂ ಸಂಕ್ರಂದನಾನಂದದಿಂ ॥೩॥

ವ॥ ಆಗಳ್ತನ್ನಯ ಜೆಸದಿಂ ಮುನ್ನಮೆ ಸುರವರ್ಧಕಿ ಸರ್ವಶೋ
ಭಾರ್ಥಸಿದ್ಧಿವಡೆಯೆ ವಿರಚಿಸಿದ ಸರ್ವಾರ್ಥಸಿದ್ಧಿಯೆಂಬ ಶಿಬಿಕೆಯಂ ಸಾ
ರ್ಚುವುದುಮುರಪತಿ ಸಮುದಿತಮಂಗಳಾತೋದ್ಯಹೃದ್ಯತ್ರಯಾದವೊದ
ವುತಿರೆ ಮುದದಿಂ ಶಾಂತೀಶನಂ ಸರ್ವಾರೂಢನಂ ಮಾಡಿ -

ನಡೆಗೊಂಡಪ್ಪೊತ್ತು ಶಾಂತೀಶ್ವರನ ಶಿಬಿಕೆಯಂ ಭಕ್ತಿಯಿಂ ಭೂಪರತ್ನೇ
ಟಿಯಂ ಮುನ್ನಂ ಒಲ್ದಿಕ್ಕೇಟಿಯನಖಿಳವಿದ್ಯಾಧರರ್ಮತ್ತಮತ್ತೇ ॥
ಟಿಯಂ ಗೀರ್ವಾಣರತ್ನಲ್ ಪೆಸರ್ವಡೆದ ಸಹಸಾಮ್ರವೆಂಬಾವನಕ್ಕಾ ।
ಗಡೆಕೊಂಡೊಯ್ದರ್ಕಿರೀಟಪ್ರಭೆ ಪುದಿಯೆ ನಭಶ್ಚಕ್ರಮಂ ಶಕ್ರರಾಗಳ್ ॥

ವ॥ ಅಸಹಸಾಮ್ರವನಮಧ್ಯದೋಳ್ಸಾರಂಬಡೆಯೆ ಶಚೀದೇವಿ
ವಿರಚಿಸಿದ ವಿಚಿತ್ರವರ್ಣಪೂರಪುಷ್ಪೋಪಹಾರಭೃಂಗಾರಾದಿಮಂಗಳದ್ರವ್ಯ
ಶೋಭಾಂಗಸಂಗತಿವೆತ್ತ ವಿಶಾಳಶಶಿಕಾಂತಶಿಳಾತಳದೊಳ್ಬಿಕೆಯಂ ತಂದಿ
ಟ್ಟಿ ದಿವಿಜರಾಜಂ ದ್ವಾರಿಕನಿಯೋಗ್ಯಯೋಗ್ಯನಾಗಿ ನಿಖಿಳಸುರಕುಳಕಳ
ಕಳವಮಂ ನಿವಾರಿಸುತ್ತುಮಿರೆ ವಿಶಿಷ್ಟಜ್ಯೇಷ್ಟಬಹುಳಚತುರ್ಥೀವಾಸರದೊಳ್ಭ
ರಣಿನಕ್ಷತ್ರದೊಳಾಶಿಳಾತಳದಲ್ಲಿ ಪರಿಹೃತಸಕಳಬಹಿರ್ವ್ಯಾಪಾರಂ ಶಾಂತೀ
ಶ್ವರನಕ್ಷಯಸುಖಾಭಿಮುಖನುತ್ತರಾಭಿಮುಖಪಲ್ಯಂಕಾಸನಾಸೀನಂ ಪ
ಪ್ಪೋಪವಾಸನಮದ್ಯೋತಸಿದ್ಧಪರಮೇಷ್ಠಿಸ್ವರೂಪನಾಗಿ

ಮನದೊಳ್ನಿಪ್ಪೆ ನಿಮಿರ್ಕೆವೆತ್ತಿರೆ ನಮುಸ್ಸಿದ್ಧೇಭ್ಯಯೆಂದಾಗಳಂ ।
ತೆ ನಿಜೋದಂಚಿತಪಂಚಮುಷ್ಟಿಯಿನವಂ ಕೇಶಂಗಳಂ ಕಂತುರಾ ॥
ಜನ ದರ್ಪದ್ರುಮಮೂಳಜಾಳಮನಣಂ ಕೀಳ್ವಂತೆ ಕೀಳ್ತಿಕ್ಕಿ ನೆ
ಟ್ಟನೆ ತಾಳ್ದಂ ಜಿನದೀಕ್ಷೆಯಂ ವಿಮಳಬೋಧಸ್ವಾಂತಶಾಂತೀಶ್ವರಂ ॥೪॥

ಅನುಜಹೆವೆತ್ತೆಸಕದ ತ ।
ನ್ನನುಜಂ ಚಕ್ರಾಯುಧಂ ಸಹಸಾಮ್ರವನಿಪಾ ॥

ಳಸಿಕಾಯಂಬೆರಸಾಗ |
ಳ್ಜಸದೀಕ್ಷೆಯನಪ್ಪುಕೆಯ್ದನತ್ಯುತ್ಸವದಿಂ ॥೬॥

ವ॥ ಆಗಳ್ಸ್ವಕೀಯಸದ್ಯೋಧಕುದ್ಧಕಾಕೋಲ್ಲಿಥ ನಿಕಾತಾವಗ್ರವೈ
ರಾಗ್ಯಮಂಡಳಾಗ್ರದಿಂ ಚಂಡತರಪಂಚಬಾಣಪ್ರಪಂಚಲತಿಕಾಬ್ಧಾನಮಂ
ಪರಿಚ್ಛಿನ್ನಂಗೆಯ್ದು ಋಜುತೆವೆತ್ತ ಪಂಚಮಗತಿಪಥದೊಳ್ಪದವಿಟ್ಟಪಂಚ
ಮಚಕ್ರಧರಂ ಪಂಚಮುಷ್ಟಿಯಿಂದುತ್ಪಾಟಿಸಿದಂಜಿತಕುಂಜಿತಾಯತನೀಳ
ಕುಂತಳಸಂಚಯಮಂ ರತ್ನಪಟಳಕದೊಳ್ತೀವಿ ತಳೆದು ಪಂಚಮಹಾ
ಕಬ್ದವೊಗೆಯೆ ಪಂಚಮಪಯೋಧಿಗೆಯ್ದಿ ತಜ್ಜನಿತಪಂಚರತ್ನರುಚಿಮಯ
ಮಹೋರ್ಮಿಗಳಂ ಬಾಳಕಾಳಾಹಿಜಾಳಮಯಂಗಳಾದುವೆಂಬ ವಿತರ್ಕಾ
ಳಂಬನಕ್ಕೆ ಪಕ್ಕಮಾಡಿ ಮಗುಳ್ದ ಪುರಂದರಂ ಪರಮಾನಂದದಿಂ ಬಂದು

ಪರಮನ ಪರಿಮುಕ್ತನವಾಂ |
ಬರಭೂಷಣಕುಸುಮವಿಸರಮಂ ದಿವಿಜೇಂದ್ರಂ |
ಧರಿಯಿಸಿ ಮಕುಟಾಗ್ರದೊಳಾ |
ದರದಿಂ ನರ್ತಿಸಿದನುತ್ಸವಂ ನಿಮಿರ್ದಾ*ಗಳ್ ॥೭॥

ಸುರವೃಂದಂ ಬೆರಸಂದು ಮೂಮೆ ಬಲವಂದಾನಂದದಿಂ ತನ್ಮನೀ
ಶ್ವರಪಾದಾಂಬುಜಭುಂಬಿತಾತ್ಮಮಕುಟಂ ತಾನಾಗಿ ಬೀಟಿಕ್ಕೊಂಡು ಸಾ
ದರದಿಂ ತದ್ಭವನಾಮರಾದ್ಯಸಿಮಿಪಬ್ರಾತಕ್ಕೆ ಬೀಜಿಕ್ಕೊಟ್ಟು ಹ
ರ್ಷರಸಂ ಕೈಮಿಗಿಲೆಯ್ದಿದಂ ನಿಜಸಿಳಿಂಪಾನಾಸವಂ ವಾಸವಂ ॥೮॥

ವ॥ ಇಂತು ಕೃತಪರಿನಿಷ್ಕ್ರಮಣಕಲ್ಯಾಣಪೂಜಾವ್ಯಾಪಾರನಾಗಿ ಪು
ರಂದರಂ ಪೋಗಲಿತ್ತಲ್ಯಾಂತೀಕಮುನೀಶ್ವರಂ ಗೃಹೀತಸಾಮಾಯಿಕಶುದ್ಧಿ
ಸಂಯಮಪ್ರಥಮಸಮಯೋತ್ಪನ್ನಮನಃಪರ್ಯಾಯಜ್ಞಾನಕೇವಲೀಲಗು
ಣವರ್ಯನೀಯರ್ಯಾಪದಸಿದ್ಧಿಯಿಂ ಜಗತ್ಕಾಯಸ್ವಭಾವಜಿಂತನಪರಂ ಮಂ
ದರಪುರಕ್ಕಭಿಮುಖನಾಗಿ ಜರ್ಯಾವಾರ್ಗದಿಂ ಪೋಗಿ ರಾಜಟುಂದಿರಮಂ
ಪೊಗುತಪ್ಪಾಗಳ್—

ಅಸಗರಿಯ ಪಸುಮಿತ್ರಮ |
ಹೀನಾಥಂ ಕ್ರಮಸಮನ್ವಿತಂ ಸಮುದಿತಳ ॥

ಕ್ತ್ಯಾನಂದದೆ ಬಲವಂದಾ ।
ಜ್ಞಾನನಿಧಿಯುಂ ತನ್ಮನೀಂದ್ರನಂ ವಂದಿಸಿದಂ ॥೯॥

ವ। ಇಂತು ಭಕ್ತಿಪೂರ್ವಕಂ ಬಂದಿಸಿ ಸ್ಥಾಪನಾದಿ ನವವಿಧಪುಣ್ಯಂಗಳಂ ಶ್ರದ್ಧಾದಿ ಸಪ್ತಗುಣಂಗಳೊಳ್ನಿಱೆದು ವಸುಮಿತ್ರಮಹಾರಾಜಂ ನಿರವದ್ಯಾನ್ನಮನಿಕ್ಕುವುದುಂ ತನ್ಮನೀಂದ್ರಂ ನಿಮಗಕ್ಷಯದಾನಮುಕ್ಕೆಂದು ಪರಸಿ ಪೋಗಮಟ್ಟಾಗಳ್—

ವಸುಧಾಜನಮಚ್ಚರಿವಡೆ ।
ವಸುಧಾರಾದಿಪ್ರಭೇದಪಂಚಾಶ್ಚರ್ಯಂ ॥
ವಸುಮಿತ್ರಾವನಿಪನೃಪಾ ।
ವಸಧಾರ್ಜಣದೊಳ್ ವಿಜಿತ್ರಮಾದತ್ತಾಗಳ್ ॥೧೦॥

ವ ಅಮುಮುಕ್ಷುಮುಖ್ಯಂ ಪದಿನಾಳಂ ಒರಿಸಂಬರಂ ಪಲವು ದೇಶಂಗಳೊಳ್ ಭದ್ರಸ್ಥನಾಗಿ ಸಕಳರ್ದ್ಧಿಭೂಷಣಪ್ರವರ್ದ್ಧಮಾನಚರಿತ್ರಂ ವರ್ತಿಸಿ ಪೂರ್ವೋಕ್ತಸಹಸಾಮ್ರವನಮಧ್ಯಪ್ರದೇಶೋದ್ದಾಸಿಯಪ್ಪನಂದ್ಯಾವರ್ತವೃಕ್ಷಮೂಳದೊಳ್ಪಕ್ಷೋಪವಾಸಮಂ ತಳೆದಚಳಿತಪಲ್ಯಂಕಯೋಗಂ ಪೂರ್ವಾಭಿಮುಖನಾಗಿ—

ಯತಿಪತಿ ಭೂಷಿಸಿ ನಿಜಮತಿ ।
ಸತಿಯುಂ ಪರನುಪ್ರವಚನರೋಹಣಶೈಳೋ ॥
ದ್ಗತನವಪದಾರ್ಥರತ್ನ ।
ಪ್ರತತಿಯನಾಜ್ಞಾವಿಚಯವಿರಾಜಿತಂ ತಾನಾದಂ ॥೧೧॥

ಬಲಿಯುಂ ಬಿಡದೆ ಭವಾರ್ಣವ ।
ದೊಳಗಾತ್ಮನನೆಂದುಮಲೆ ತೊಲಿಪ ದುರಿತಾ ॥
ವಳಯಂ ತೊಲಗಿಸಲಾಮುನಿ ।
ಕಳತಿಳಕನಪಾಕವಿಜಯಜಿಂತೆಯನಾಂತಂ ॥೧೨॥

ಪರಿದಾನುಂ ಪರಿವಿಡಿಯಿಂ ।
ದೆರಡುಂ ಕರ್ಮಂಗಳಂ ಸಮುಂಗಳ ತಪದಳಿಳೋ ॥

ಪಾ—1. ತವರೆ.

ತ್ಕರಮಂ ಪರಿಭಾವಿಸಿ ಮುನಿ ।
ವರೇಣ್ಯನೆನಿಸುಂ ವಿಪಾಕವಿಜಯಮನಾಂತಂ ॥೧೩॥

ಎಸಕದನುಪ್ರೇಕ್ಷೆಗಳಂ ।

ಪೆಸರ್ವೆತ್ತಾದ್ರವ್ಯಭೇದಸಂಸ್ಥಾನಮನಿಂ ॥
ತಸದಳವಮಾಮುನಿಪತಿ ಜೆಂ ।
ತಿಸುತುಂ ಸಂಸ್ಥಾನವಿಜಯಸಂಜೆತನಾದಂ ॥೧೪॥

† ವ ॥ ಇಂತು ಚತುರ್ವಿಧ ಧರ್ಮಧ್ಯಾನಾಧೀನಮಾನಸನುತ್ತಪ್ರಮತ್ತಸಂಯತನಾಗಿ ವಿಶೋಧಿಪರಿಣಾಮಾತಿಶಯಕೃತಯಥೋಚಿತಾಪಸರಣನನಂತಾನುಬಂಧಿವಿಸಂಯೋಜನಪ್ರಾಯೋಗ್ಯಾಧಃಪ್ರವೃತಕರಣಪರಿಣತಪ್ರತಿಸಮಯಪ್ರವರ್ಧಮಾನಾನಂತಗುಣವಿಶೋಧಿನಿಶುದ್ಧನಂ ತನ್ಮೂಹೂರ್ತಂ ತನ್ಮೂರ್ತಕೃತಹೀಯಮಾನಲಕ್ಷಣಸ್ಥಿತಿಬಂಧಾಪಸರಣಸಹಸ್ರವಿಹಿತಾಪ್ರಶಸ್ತಕರ್ಮಪ್ರತಿಸಮಯಾನಂತಗುಣಹೀಯಮಾನದ್ವಿಸ್ಥಾನಾನುರಾಗಬಂಧಂ ಕೃತಪ್ರಶಸ್ತಕರ್ಮಪ್ರತಿಸಮಯಾನಂತಗುಣಚತುಸ್ಥಾನಾನುಭಾಗಬಂಧನಾಯು[1]ರ್ವರ್ಜಿಸಪ್ತಪ್ರಕೃತಿಗತಾಂತಃಕೋಟಿಕೋಟಿಪ್ರಮಾಣಸ್ಥಿತಿಬಂಧಕನಧಃಪ್ರವೃತ್ತಕರಣಮಂ ಕಟ್ಟಿದ ಪೂರ್ವಕರಣದೊಳ್ಪ್ರತಿಸಮಯ ಪೂರ್ವಾನಂತಗುಣವಿಶೋಧಿವಶಗತಂ ಜ್ಞಾನದರ್ಶನಾವರಣವೇದನೀಯ ಮೋಹನೀಯನಾಮಗೋತ್ರಾಂತರಾಯಂಗಳೆಂಬೀಯುಂ ಕರ್ಮಂಗಳಂ ತತ್ಪರಿಣಾಮನಿಬಂಧಗುಣಶ್ರೇಣಿಸ್ಥಾನಭಾಗಪಂಡಕಂಗಳುಮನಂತಾನುಬಂಧಿಗಳ ಗುಣಸಂಕ್ರಮಣಂಗಳುಮಂ ಕೂಡುತ್ತುಮಂತರ್ಮುಹೂರ್ತದಿಂ ಪ್ರತಿಸಮೈಕಾಪೂರ್ವನಿವೃತ್ತಿಕರಣಪರಿಣಾಮಪರಿಚೆತನನಿವೃತ್ತಿಕರಣನಾಗಿ ಗುಣಶ್ರೇಣಿಗುಣಸಂಕ್ರಮಣಸ್ಥಿತ್ಯನುಭಾಗಖಾಂಡಕಂಗಳಂ ಪೂರ್ವೋಕ್ತಕ್ರಮದೊಳೆ ಮಾಡುತ್ತುಮಂತರ್ಮುಹೂರ್ತದಿಂ ತಚ್ಚರಮಸಮಯದೊಳನಂತಾನುಬಂಧಿ ಸಕಷಾಯಚತುಷ್ಟಯಮನುದಯಾವಳಿಬಹಿಷ್ಕರಮಂ ಸರ್ವಸಂಕ್ರಮಣನಿರತದ್ವಾದಶಕಷಾಯಂಗಳೊಳ್ಸಂಕ್ರಮಿಸಿ ಕೀಳ್ದಾಸುಂ ಬೇಗದಿಂ ಚತುರ್ವಿಂಶತಿಮೋಹಪ್ರಕೃತಿಸತ್ವನಾಗಿ ಸಾತಾಸಾತಾಬಂಧಪರಾವರ್ತನಸಹಸ್ರಂಗಳಂ ಮಾಡಿ ದರ್ಶನಮೋಹನೀಯಕ್ಷಪಣೋದ್ಯೋಗ್ಯ

ಪಾ—1. ವರ್ಜ್ರ. † ಈ ಗದ್ಯದಲ್ಲಿ ಬಹು ಸ್ಖಾಲಿತ್ಯಗಳಿವೆ.

ದರಿವದಿಂತು ಬಂದಂತೆನಸುಂ ವಿಮಳಕ್ಷಾಯಿಕಸಮ್ಯಕ್ತ್ವಂಗಳಂ ಪೂರ್ವೋಕ್ತವಿಧಾನದಿಂ ಕಟ್ಟಿ ತದನೀವೃತ್ತಿಕರಣಕಾಲಬುಭೂಷಾವಸಾನದೊಳ್ಕ್ರಮದೆ ಮಿಥ್ಯಾತ್ವಸಮ್ಯಙ್ಮಿಥ್ಯಾತ್ವಸಮ್ಯಕ್ತ್ವಪ್ರಕೃತಿಗಳಂ ವಿಳಯಕ್ಕೆ ಸಲಿಸಿ—

ಅಮೃತಶ್ರೀಸಂಗಂ ಸಲೆ ।
ಸಮನಿಪುದೆಂದಱಪಲಿಂತು ಬಂದಂತೆನಸುಂ ॥
ವಿಮಳಕ್ಷಾಯಿಕಸಮ್ಯ ।
ತ್ತ್ವಮುದುದ್ಭವಿಸಿತ್ತು ತನ್ಮುನೀಂದ್ರೋತ್ತಮನೊಳ್ ॥೧೫॥

ವ ॥ ಇಂತು ಕರಣಪರಿಣಾಮಮಹಾಮಂತ್ರಪ್ರಭಾವದಿಂ ಸಪ್ತಪ್ರಕೃತಿವಿಕೃತಿಸದರ್ಪಣಸರ್ಪೋರ್ಚ್ಛಾಟನಂಮಾಡಿ ಯುಕ್ತೂಣಕ್ಷಾಯಿಕಸಮ್ಯಕ್ತ್ವಮಹಾವಿಧಿಯಿಂ ಸ್ವೀಕರಿಸಿ ಯೇಕವಿಂಶತಿಮೋಹನೀಯಕರ್ಮಸತ್ವನಾಗಿ ಚಾರಿತ್ರಮೋಹಕ್ಷಪಣಾರ್ಹವಿಶುದ್ಧಿಗಳ್ಪರಿಣಮಿಸುಗುಂ ಪರಿಣಮಿಸಿಯಂತರ್ಮುಹೂರ್ತಕಾಲದೊಳ್ಪ್ರಮತ್ತಾಪ್ರಮತ್ತಪರಾವರ್ತನಸಹಸ್ರಂಗಳಂ ಮಾಡಿ ಯತುಳತಪಃಪ್ರಬಳಬಳಕಳಿತನುಂ ಸಮ್ಯಜ್ಞಾನಸೇನಾನಾಯಕಾಧಿಷ್ಠಿತನುಂ ಸಮುಜ್ವಳನಿರತಿಚಾರಚಾರುಚರಿತ್ರಪವಿತ್ರಮಹಾಧ್ವಜವಿರಾಜಿತನುಂ ಮುನಿಜನಿಜೇಯಮಾನಾನೂನಮಹಾಬ್ರಹದಿವ್ಯವಾಹನಸಹಿತನುಂ ಗುಪ್ತಿತ್ರಯಾಂಗರಕ್ಷಕರಕ್ಷಿತನುಂ ಧೈರ್ಯವಪ್ರಾಂಡರೀಕಮಂಡಳೀಮಂಡಿತನುಂ ಪ್ರಶಸ್ತಶುಕ್ಲಲೇಶ್ಯಾಪರಿಣಾಮಚಾರುಚಾಮರಬ್ರಾಜವೀಜಿತನುಂ ದಯಾಮಯವಜ್ರಕವಚನಿರ್ಮಿತನುಂ ಸದ್ಗುಣದೃಢಮಾರ್ಗಣಾತಿಶಯಧರ್ಮಸಂಶೋಭಿತನುಂ ಶುಚಿಕುದ್ಧ್ಯಾನಚಕ್ರರತ್ನಾಳಂಕೃತನುವಾಗಿ ಸ್ವಪ್ರತಿಪಕ್ಷಕರ್ಮನಿರ್ಮೂಳಪ್ರಕ್ಷಯದಿಂ ಯಥಾಖ್ಯಾತಶುದ್ಧಚಾರಿತ್ರರಾಜ್ಯಸಾಮ್ರಾಜ್ಯೈಕಾಧಿಪತ್ಯಮನಂಗೀಕರಿಸಲ್ವೇಡಿ ಮೋಕ್ಷಪ್ರಸಾದನಿಶ್ರೇಣಿದಿಗ್ವಿಜಯಾಭಿಮುಖನಪ್ಪ ಕ್ಷಾಂತರಸನಿಕ್ಷಾಂತಸ್ವಾಂತ ಕ್ಷಾಂತೀಶ್ವರಯತಿಚಕ್ರವರ್ತಿಗೆ ನಿಶಿತಖಡ್ಗರತ್ನಸದೃಕಂಗಳಂ ತನ್ಮುಹೂರ್ತಕಾಲಾವಚ್ಛೇದ್ಯಸ್ನಂಗಳಧಃಪ್ರವೃತ್ತಪೂರ್ವನಿವೃತ್ತಿಕರಣಪರಿಣಾಮಂಗಳ್ಕ್ರಮದಿ ಸಮ್ಭವವಱಿಳಧಃಪ್ರವೃತ್ತಕರಣಸ್ವರೂಪಮೆಂತೆನೆ:—(?)

ಪರಿಳತಮಪ್ಪಧಸ್ತನ ।
ಕರಿಣಾಮಂಗಳ್ವಿರಾಜಿತಾರ್ಥಸ್ಥಿತಸ ॥

ತ್ಪರಿಣಾಮಂಗಳ್ಸಮವೂ ।
ಗಿರಲಂತದಧಃಪ್ರವೃತ್ತಕರಣಮೆನಿಕ್ಕುಂ ॥೧೬॥

ವ॥ ತತ್ಕರಣಪರಿಣಾಮಪ್ರಥಮಸಮಯಂ ಮೊದಲ್ಗೊಂಡನಂತಗು
ಣವಿಶೋದ್ಯಾದಿ ಪೂರ್ವೋಕ್ತ ಕ್ರಮದಿನಧಃಪ್ರವೃತ್ತಕರಣಂ ಚರಮಸಮು
ಯಮನೆಯ್ದಿ ನಾಲ್ಕವಶ್ಯಕಂ ವೆರಸು ವರ್ತಿಸುತ್ತಿರ್ದತಿಶಯಾಪ್ರಮತ್ತ ಮು
ನಿವರನನಂತಸಮಯದೊಳ್ ಪ್ರತಿಸಮವೃದ್ಧಮಾನಾನಂತಗುಣಪೂರ್ವವಿಶೋ
ಧಿಸಿಬಂಧನ ಪೂರ್ವಕರಣ ಪರಿಣಾಮ ಪೂರ್ವಗುಣಸ್ಥಾನ ಪ್ರಪಿಪ್ಟನಾಯು
ವ್ಯಪೇತಾಶೇಷಕರ್ಮ ಪ್ರಕೃತಿಕೃತ ಗುಣಶ್ರೇಣಿ ನಿತ್ಯಮಭೂತ ಖಂಡಕ
ಪ್ರಕ್ರಮನಪ್ರಶಸ್ತಬಂಧವ್ಯಚ್ಛಿನ್ನ ಪ್ರಕೃತಿವಿಷಯ ಪ್ರವರ್ತಿತ ಗುಣ
ಸಂಕ್ರಮಣನಪೂರ್ವಕರಣಪ್ರಥಮಭಾಗಾವಸಾನವ್ಯಚ್ಛಿನ್ನ ನಿದ್ರಾಪ್ರಚಲಾ
ಭಿನವ ಸಂಬಂಧಂ ತತ್ಕರಣಷಟ್ಸಪ್ತಮಭಾಗಾಂತಿಮಕ್ಷೀಣವಿಶಿಷ್ಟಬಂಧನ
ಮುಕರ್ಮಾವಯವ ತೀರ್ಥಕರಾದಿತ್ರಿಂಶತ್ಪ್ರಕೃತಿಕಂ ತತ್ಸಪ್ತಮಭಾಗಾ
ವಸಾನ ಸಮಯೋಜಿಸ್ಸಿನ್ನಬಂಧ ಚತುರ್ದೇಕಪಾಯನನಂತರಸಮಯ
ಸಂಪ್ರಾಪ್ತಾನಿವೃತ್ತಿಕರಣಕ್ಷಪಕಗುಣ ಸ್ಥಾನನುತ್ತರಕ್ಷೀಣಪರಿಣಾಮ ಪ್ರ
ಹತನುನರಂಕ ತಿರ್ಯಗ್ಗತಿ ತತ್ಪ್ರಯೋಗ್ಯಾನುಪೂರ್ವ್ವಿಂದ್ರಿಯತಿಂದ್ರಿಯ
ಚತುಚತುರಿಂದ್ರಿಯಸ್ಥಾನಗೃದ್ಧನಿದ್ರಾನಿದ್ರಾಪ್ರಚಲಪ್ರಚಲೋದ್ಯೋತಾ
ತಪೈಕೇಂದ್ರಿಯಸಾಧಾರಣಸೂಕ್ಷ್ಮಸ್ಥಾವರನುತ್ತರೋತ್ತರಪರಿಣತಿವಿಶೇಷ
ವಿನಷ್ಟಮಧ್ಯಮಕಪಾಯಾಷ್ಟಕನಂತರ್ಮುಹೂರ್ತಕಾಲಕೃತೈಕೈಕೋನವಿಂ
ಶತಿಮೋಹನೀಯ ಸ್ಥಿತ್ಯಂತರನನುಕ್ರಮಾಂತರ್ಮುಹೂರ್ತವಿನಾಶಿತನಪುಂ
ಸಕಸ್ತ್ರೀವೇದಪಣ್ಣೋಕಪಾಯಪುಂವೇದಜರಂತನಸತ್ವಸಂಬಂಧನುಜಿತೆಕಾ
ಲವಿರಜಿತಾಶ್ವಕರ್ಣಕರಣ ಪೂರ್ವಸ್ಪರ್ಧಕವಿದಾನಂ ತದವಸಾನವಿರಜಿ
ತದ್ವಾದಶಬಾದರಕೃಷ್ಟ್ಯೇಕಂ ಪ್ರತಿಸಮಯವಿಧೀಯಮಾನಾಪೂರ್ವಕೃಷ್ಟಿಕ
ಪ್ರದೇಶವಿನ್ಯಾಸಂ ತತ್ಕಾಲಪರಿಸಮಾಪ್ತಿಪ್ರಾಪ್ತಾನುಭವನುಜಿತಕಾಲಾನು
ಭೂಯಮಾನಕೃಷ್ಟಿಸಂಕ್ರಮಣಸಂಬಂಧದ್ರವ್ಯವಿರಜ್ಯಮಾನಪೂರ್ವಾಪೂ
ರ್ವಕೃಷ್ಟಿಸರೂನುದ್ವಿಷ್ಟವಿದಿತಾಶಿಕಕ್ರೋಧಮಾನಮಾಯಾಕಪಾಯತ್ರಿ
ಕೃಷ್ಟಿಕಂ ಲೋಭಕೃಷ್ಟ್ಯನುಭವಕಾಲಸಂಪಾದಿತಸೂಕ್ಷ್ಮಕೃಷ್ಟಿತದುಭಯ

ಕೃಷ್ಟಿವೇದನಾಂತರೋಭಯಪರಿಪಾಪ್ತಬಾದರಸಾಂಪರಾಯಚರಮಸಮ
ಯನನಂತಸಮಯಾವಾಪ್ತಸೂಕ್ಷ್ಮಲೋಭೋದಯಂ ಸೂಕ್ಷ್ಮಸಾಂಪ
ರಾಯಶುದ್ಧಿಸಂಯಮಸಂಪನ್ನಂ ತದಭಿಧಾನಕ್ಷಪಕನಾಗಿ ಪೃಥಮಶುಕ್ಲ
ಧ್ಯಾನಾಧೀನನೂನಸಂ ಸ್ವಚರಮಸಮಯಾಪ್ತ ಬಂಧಮೋಢಶಪ)ಕೃತಿಕನು
ಪಪಾತದ್ರವ್ಯಭವಾತ್ಮಕಮೋಹನೀಯಕ್ಷೀಣಕಪಾಯೂದಿತರಾಗಚಕ್ಷುದ್ರಸ್ಥ
ನೇಕತ್ವವಿತರ್ಕಾವಿಚಾರಾಖ್ಯದ್ವಿತೀಯಶುಕ್ಲಧ್ಯಾನಾನಳವಂ ವಹ್ಯೆಹನಕ
ಮೇರ್ಂದ್ರನಂ ಯಥಾಖ್ಯಾತಚರಿತ್ರಪವಿತ್ರನಾತ್ಮಕಾಲಾಂತರ್ಮುಹೂರ್ತ
ಚರಮಸಮಯದೊಳ್—(?)

ವಿನುತವಿಶೋಧಿ ನಾಡೆ ನೆಲೆವೆರ್ಚಿ ಮಹೈನಸರಾಜವ್ಯೂಹಮಂ ।
ತನಿತಸಿನೃತ್ತಿ ಸೂಕ್ಷ್ಮಪರಿಣಾಮವಿಶೇಷವಿನಷ್ಟವಾಗಿ ನೆ ॥
ಟ್ಟನೆ ಶುಭಭಾನದಿಂ ಬಿದಹೆ ಬೋಧದೃಗಾವರಣಾಂತರಾಯವಾ ;
ಮುನಿಪತಿಗಂದು ಪುಟ್ಟಿದುದು ಕೇವಳಬೋಧಮಶೇಷಬೋಧನಂ ॥೧೬॥

ಅನಿಮಿಷವರ*ರ್ಗುದಯಿಸಲಾ ।
ಸನಕಂಪಂ ನೆಗಟ್ಟಿ* ಪುಷ್ಯಶುದ್ಧದ ದಶಮಿಾ ॥
ದಿನದಪರಾಹ್ಣದೊಳಂತಾ ।
ಮುನಿಪತಿಗುದಯಿಸಿದುದಲ್ತೆ ಕೇವಳಬೋಧಂ ॥೧೯॥

ವನಭವನಜ್ಯೋತಿಷ್ಕ ।
ಲ್ಪನಿಳಂಪರ ನಿಳಯವನಿತಾಖಿಳಗೊರ್ವೊದಲೊಳ್ ॥
ಜನಿಯಿಸಿದುದು ಕೃತಕಂ ಭೋಂ ।
ಕೆನೆ ಭೇರೀಶಂಖಸಿಂಹಘಂಟಾರಾವಂ ॥೧೯॥

ಪದೆಪಿಂ ಶಾಂತೀಶ್ವರವರ ।
ಹೃದಯೋದಯಗಿರಿಶಿಖರೋಗ್ರದೆ ಕೇವಳಜೋ ॥
ಧದಿನೇಶಬಿಂಬಮುದಯಿಸಿ ।
ದುದುವದನನುರೇಂದ್ರನವಧಿಬೋಧದಿನಂದಂ ॥೨೦॥

ಪರಿಶೇಷಂ ನಾಕಲೋಕಂ ಪೆಱಗೆನೆ ಪೊಱಮಟ್ಟುಚತುರ್ದೇವವೃಂದಂ ।
ಬೆರಸಿಂದ್ರಂ ಪೊಸ್ಮೆ ನಾನಾಪಟಹಪಟುರವಂ ಕೇವಳಜ್ಞಾನಪೂಜಾ ॥

ಮುರರಾಗಬೆತ್ತು ತಟಿಪ್ಪಿದವಿ ಪದೆಟಿನಿಂದರ್ಚನಾನೀಕಮುಂ ಕೊಂ ।
ಡಿರದೇಟ್ಟಿಂದಂ ವಿಹಾಯಸ್ಥಳಿ ದಿವಿಜಮಹಾನೋತ್ಕರಾಕೀರ್ಣಮಾಗಲ್ ॥

ವ ॥ ಇಂತು ಸೌಧಮೇರ್ಂದ್ರಂ ಸಕಳೇಂದ್ರವ್ಯಂದಾರಕರ್ವೆರಸು ಬೇಗದಿಂ ಬಪ್ಪುದುಮಾಗಳ್—

ಸುರಪತಿಮುನ್ನರ್ಗುಸಿರ್ದಂ* ।
ತಿರೆ ಕಾಂತಿಜಿನೇಶ್ವರಂಗೆ ವಿರಚಿಸಿದಂ ಸಾ ॥
ದರದಿಂ ವಿಜೆತ್ರಶೋಭಾ ।
ಶರಣಮಿದೆನೆ ಸಮವಸರಣಮುಂ ವೈಶ್ರವಣಂ ॥೨೦॥

ವ ॥ ಅದೆಂತೆಂದೊಡೆ—

ಹರಿನೀಳಶಿಳಾಸ್ಥಳಿ ಪ ।
ನ್ನೈರಡುಂ ಯೋಜನದ ಪವಣಖಂಡಸುವೃತ್ತಂ ॥
ಧರೆಗೈಸಾಸಿರ ಬಿಲ್ಲಂ ।
ತರದಿಪ್ಪುದು ಸಮವಸರಣಮಘಸಂಹರಣಂ ॥೨೧॥

ಸುರಚಾಪಚ್ಛವಿಯುಂ ಮಾಂ ।
ಕರಿಸುತ್ತೆಸೆವುದು ವಿಜೆತ್ರನಿತ್ಯವಿಭವಿ ॥
ಸ್ತರದಿಂ ರತ್ನಾಟ್ಟಾಳಕ ।
ಪರಿಕಳಿತಂ ಪಂಚರತ್ನ ಧೂಳೀಶಾಳಂ ॥೨೨॥

ಅದಱ ಚತುರ್ಗೋಪುರವಿವ ।
ರದ ಭೂವ್ಯಾಸಪ್ರಮಾಣದಿಂ ವಿಮಳಾಷ್ಟ ॥
ಪದವಿರಜತಂಗಳೆಸವುವು ।
ಪದೆಟಿಂ ವಿಂಶತಿ ಸಹಸ್ರಸೋಪಾನಂಗಳ್ ॥೨೩॥

ಮೊದಲಗ್ರದ ಸೋಪಾನಂ ।
ಪದಲೇಪೌಷಧಿವಿಲಿಪ್ತಮವು ನಾಲ್ದೆಸೆಯೊಳ್ ॥
ಪ್ಪುದಿದಿರ್ಪುವೆಸೆದು ಭವ್ಯ ।
ತ್ರಿದಶೋರಗತಿರ್ಯಗಾದಿಗಳನೆಯ್ದಿಸುತುಂ ॥೨೪॥

ವ॥ ಇಂತನೂನಶೋಭಾಯಮಾನ ವಿಂಶತಿಸಹಸ್ರಸೋಪಾನಪ್ರತಾನದಗ್ರಭಾಗಂಗಳೊಳ್—

ಹೊಸರನ್ನಂಗಳ ಚಾರುತೋರಣಶತಪ್ರದ್ಯೋತದಿಂ ಶೋಣರ ।
ತ್ನಸಮುದ್ಯತ್ಕಳಶಪ್ರಭಾಪಟಳದಿಂ ದಿಗ್ಭ್ಯೋಮಮುಂ ಕೂಡೆ ಚೆ ॥
ತ್ರಿಸುತುಂ ಜೈತ್ರತೆವೆತ್ತು ಬಿತ್ತರಿಸುತುಂ ಚೆಂಬೊನ್ನ ಮಾಡಂಗಳಿಂ ।
ದೆಸೆದಿರ್ಪಾ ವಿಜಯಾದಿಗೋಪುರಚತುಷ್ಕಂಗಳಂ ಮುಂಗಳಂ ॥೨೩॥

ಸ್ಫುರಿತಾಸಿತಮಣಿಕುಟ್ಟಿಮ ।
ಕಿರಣದೆ ಕತ್ತಲಿಪ ಗೋಪುರಂಗಳನೋರಂ ॥
ತಿರೆ ಬೆಳಗುತ್ತೆಸೆವ ಜ್ಯೋ ।
ತಿರಮರದೌವಾರಿಕನಿರ್ಜಾಂಗಪ್ರಭೆಯಂ ॥೨೪॥

ವ॥ ಆವಿಜಯಾದಿಗಳ ಚತುರ್ಗೋಪುರಂಗಳ ಬಹಿರಂತರದಿರ್ಕೆಲದ ತತ್ಕೇತನವಿತರ್ದಿಕೋರ್ಧ್ವಪ್ರದೇಶಂಗಳೊಳ್ಪ್ರತ್ಯೇಕಂ ಅಷ್ಟೋತ್ತರಶತಾಷ್ಟಮಂಗಳಂಗಳುಂ ಮನೋಭೀಷ್ಟತುಷ್ಟಿಪ್ರದಂಗಳಪ್ಪ ನವನಿಧಿಗಳುಂ ನಿರಂತರಮಧಿರಾಜಿಸುತ್ತುಮಿರೆ—

ಎಸೆವಾಗೋಪುರದಿಂದೆ ಮಧ್ಯದ ಲಸತ್ಪೀಠಂಬರಂ ನೀಳ್ದ ಶೋ ।
ಭಿಸುವಚ್ಛಸ್ಫಟಿಕಾಶ್ಮಭಿತ್ತಿಯುಗಳಂ ಕೊಲ್ಲೈಕವಿಸ್ತಾರಭೂ ॥
ಲಸಿತಂ ತಾನೆನಿತಾಗಿಯುಂ ಪೊಳೆವ ಪಾರ್ಶ್ವಕ್ಷುಲ್ಲಕದ್ವಾರರಾ ।
ಜಸಮಾಳಂಕೃತಿವೆತ್ತು ಬಿತ್ತರಿಸುಗುಂ ಚಾತುರ್ಮಹಾವೀಥಿಗಳ್ ॥೨೫॥

ವ॥ ಇಂತೆಸೆಯೆ ಪೆರ್ಬೀಥಿದಿಗಳ ಪೂರ್ವಾದಿದ್ವಾರಂಗಳಿಂ ತೊಟ್ಟುನೆಟ್ಟಗೆ ನಿಖಿಳಮಣಿ ತೋರಸತಾಳಂಕೃತಿವೆತ್ತ ಗಬ್ಯೂತಿಪ್ರಮಾಣ ಮಹೀತಳಾಂತರದೊಳ್—

ಮಾನಿತಪೀಠತ್ರಯಜಾಂ ।
ಬೂನದಶಾಳತ್ರಿತಯಚತುರ್ಗೋಪುರಶೋ ॥
ಭಾನಿಜಿತವಾಗಿ ನಾಲ್ಕುಂ ।
ಮಾನಸ್ತಂಭಂಗಳಪ್ಪುವಾದಿಕ್ಕುಗಳೊಳ್ ॥೨೬॥

ಬಳಸಿರ್ದಾವಪ್ರತ್ರಯ ।
ದೊಳಗಮಳಪಯಃಪ್ರಪೂರವಿಕಚತ್ಪದ್ಮ ॥
ಕಳಿತಪಯೋರುಹಷಂಡಂ ॥
ಗಳವೆನಸುಂ ಕ್ರಮದಿ ನಾಲ್ಕು ನಾಲ್ಕುಮವಿರ್ಯಾಂ ॥೩೧॥

ವ॥ ಮತ್ತಮದಱ ವಿಶಾಳತೆವೆತ್ತಿರ್ದ ತತ್ಪ್ರಥಮಶಾಳದೊಳಗ್ಗ
ಸುರಪತಿ ಪಿತೃಪತಿ ಶರಧಿಪತಿ ಧನದಪತಿಗಳ ಕೇಳೀವಿಲಾಸಶೋಭಿತಂಗಳಪ್ಪ
ನಾಲ್ಕುಂ ದೆಸೆಗಳ ರಮಣೀರತ್ನಹರ್ಮ್ಯಾಂಗಳೊಳುಂ ಮತ್ತಮಾದ್ವಿತೀಯ
ಪ್ರಾಕಾರದೊಳಗೆ ಪಾವಕ ಪುಣ್ಯಜನ ಪವಮಾನಪಶುಪತಿಗಳ ವಿನೋದ
ವಿಹಾರಯೋಗ್ಯಂಗಳಪ್ಪ ನಾಲ್ಕುಂ ಕೋಣ್ಗಳ ಸೌವರ್ಣಸೌಗಂಧಂಗ
ಳೊಳುಂ ತತ್ತೃತಯಪ್ರಾಕಾರದೊಳಗೆ ವೈಡೂರ್ಯಸುವರ್ಣಸಕಳರತ್ನ
ಮಯಂಗಳಷ್ಟಾಷ್ಟಾರ್ಧಚತುಶ್ಚತುಷ್ಪೋತ್ಸೇಧಂಗಳುಮಪ್ಪ ಮೂಱು ಪೀಠಂ
ಗಳ ಮೇಲೆ ಮನೋಹರಾನರ್ಘ್ಯಮಣಿಮಯಜಿನಪ್ರತಿಮಾಚತುಷ್ಟಯ
ಪ್ರತಿಷ್ಠಿತ ನಿಷ್ಪನ್ನಾವಷ್ಟಪದಾತಿಘಟಿತಚತುರಸ್ರವಿಶಾಳಮೂಳಪ್ರದೇಶ
ಭಾಸುರತೆವೆತ್ತಿರ್ದುದಲ್ಲದೆಯುಂ—

ಅದಱ ಮೊದಲ್ಗಸ್ವರ್ಣಘಟಿತಂ ಚತುರಸ್ರವಿಭಾಸಿ ನೀಳ್ದ ಮೇ ।
ಲೊದವಿದ ವರ್ತುಳಸ್ಫಟಿಕದಂಡಮಣಿದ್ವಿಸಹಸ್ರಧಾರೆಗಳ್ ॥
ಪುದಿದೆನಸುಂ ಋಜುತ್ವಮೆಸೆದಾಕೊರಲೊಳ್ಕ್ರಮದಂ ಪೊದಳ್ದು ಚೆಂ ।
ಬದು(?)ವದಘಂಟಿಕಾಪಟಕಮಂ ತಳೆದಿಂತೊಗೆದಿರ್ದುದೊಪ್ಪುತುಂ ॥೩೦॥

ಪೊಳೆವಾಪಳಿಕದ ಮೇಲು ।
ಜ್ಜ್ವಳಮಾಣಿಕ್ಯದ ಚತುರ್ಮುಖಾರ್ಹತ್ಪ್ರತಿಮಾ ॥
ಕಳಿತಂ ನಾಲ್ಕುಂ ಕೋಣ್ಗಳೊ ।
ಳಳವಡಲಿತ್ತಿರ್ದ ಸುವರ್ಣಕೇತುಚತುಷ್ಕಂ ॥೩೩॥

ಚತುರಾಸ್ಯರಾಜಿತಜಿನ ।
ಪ್ರತಿಮೆಯ ಮೇಲಿತ್ತಿರ್ದಮಳಮುಕ್ತಾ ಛತ್ರ॥
ತ್ರಿತಯಂ ಗಗನಶ್ಯಾಮ ।
ದ್ಯುತಿಯಂ ಬಾಸಣಿಸಿ ಭಾಸುರತೆವಡೆದಿರ್ಪುಂ ॥೩೪॥

ಕನಕದ ಘಂಟೆಗಳುಜ್ಜ್ವಳ ।
ಘನಮುಕ್ತಾಜಾಲಲಲಿತಲಂಬೂಪಂಗಳ್ ॥
ವಿನುತಸಿತಚಮರಜಾಂಗಳ ।
ವನಿತುಂ ಕಣ್ಗೊಳಪುವವು ನಾಲ್ಕೊಂಟುಗಳೊಳ್ ॥೩೫॥

ವ॥ ಇಂತೆಸೆವ ಮಾನಸ್ತಂಭಂಗಳ ಭೂಳತ್ರಿತಯದ ಚತುರ್ಗೋಪುರಂಗಳೆಡೆಯೆಡೆಯೊಳ್ ಸನುವಸರಣಕ್ಷ್ವೇತ್ರವೀಕ್ಷ್ಯಕಜನಚರಣಕ್ಷಾಲನೋಜೆತಪೋಡಶಸೋಪಾನಶೋಭಿತಚತುರಸ್ರವಾಪಿಗಳ್ ಪೂರ್ವಾದಿಪರ್ಯಾಯದಿಂ ಮನೋಹರಮಾಗಿರ್ಪುವದಲ್ಲದೆಯುಂ—

ವಿನತಿಯನೆನ್ನರೊಳಂ ನೆಱಿ ।
ಜನಿಯಿಸುವುವು ನೋಡೆ ಪನ್ನೆರಡ್ಮಡಿಯುದಯಂ ॥
ಜಿನತನುಗೆನಲೆಸಕಂ ನಿಜ ।
ಮೆನೆ ಮಾನಸ್ತಂಭಮಿಂತು ನಾಲ್ಕುಮವೆಸೆಗುಂ ॥೩೬॥

ವ॥ ಇಂತನೂನಶೋಭಾಯಮಾನನಮಾದ ಮಾನಸ್ತಂಭಚತುಷ್ಟಯದೆಡೆಯು ಧೂಳೀಶಾಳದೊಳಮೇಯರಯ್ಯಮಪ್ಪರ್ಧಯೋಜನಭೂವ್ಯಾಸದೊಳ್ ಭಾಸುರತೆನಡೆದನುಪಮಸಮಚತುರಸ್ರಂ ಪದಾದಿಕಚತುರಸ್ರಂ ವೃತ್ತಂ ವೃತ್ತಾಯತಮಷ್ಟಾಸ್ರವೆಂಬಯ್ದುಂ ತಳಚ್ಛದಂಗಳಿಂ ಪುಟ್ಟುವ ವೈರಾಜಂ ಪುಷ್ಪಕಂ ಕೈಲಾಸಂ ಮಣಿಕಂ ತ್ರಿವಿಷ್ಟಪಮೆಂಬ ತ್ರಿವಿಷ್ಟಪಸಂಭವಂಗಳಪ್ಪಯ್ದುಂ ಮಹಾಪ್ರಾಸಾದಂಗಳೊಳಂ ಸ್ವಸ್ತಿಕವರ್ಧಮಾನನಂದ್ಯಾವರ್ತ ಸರ್ವತೋಭದ್ರವಳಭಿಚ್ಛಂದಮೆಂಬಯ್ದುಂ ಭೂಮಿಜಪ್ರಾಸಾದಂಗಳೊಳಂ ನಾಗರದ್ರಾವಿಳಕಾಳಿಂಗಮೆಂಬ ಜಾತಿಗಳೊಳಂ ಜಾತಿ ರೂಢಿವಡೆದು ಮಣಿಮಯರಚಿತಮಪ್ಪ ಜಿನಚೈತ್ಯಾಯತನವೊಂದೊಂದಕ್ಕಯ್ದುಂ ಪ್ರಾಸಾದಂಗಳ್ ಬಳಸಿದಾಜಿನಭವನಂಗಳ್ ಪರಮಾರ್ಹತ್ಪೂಜಾಕ್ರಿಯಾವಿನೋದವಿಗ್ಯಾಧರ ಫಣಾಧರ ಜ್ಯೋತಿಷ್ಕ ವಾನವ್ಯಂತರ ದಿವ್ಯ ಭವ್ಯ ಜನಕಳಕಳದೊಳಂ ವಿಳಸತ್ಕಮಳವಾಕೀರ್ಣವಿಮಳಾರ್ಣಂ ಪ್ರಪೂರ್ಣವೃತ್ತತ್ರಿಕೋಣಚತುರಸ್ರವಾಪಿಗಳ್ಬಳಸಿ ಬೆಡಂಗುವಡೆದಿರ್ಪುವಂತಾಚೈತ್ಯಕ್ಷಿತಿತಳದೊಳ್—

ಪ್ರಮುದಮುದುಣ್ಮಿ ಸಂಚರಿಪ ಕಿನ್ನರ ಪನ್ನಗ ಖೇಚರಾಮರ ।
ಪ್ರಮದೆಯರೀಕ್ಷ್ಣಾಳಿನಿಕರಕ್ಕೆ [ನವೀನಸುಮ] ಪ್ರತಾನದಿಂ ॥
ಪ್ರಮದಮನಾವಗಂ ಪುದಿವ ಪಾವನವೈಕ್ಷಸಮೂವ್ಯತೋಲ್ಲಸ ।
ತ್ಪ್ರಮದವನಂಗಳೋಳಿ ಪೊಳೆದೊಪ್ಪುವುದಲ್ಲಿಯ ಚೈತ್ಯಧಾತ್ರಿಯೊಳ್ ॥

ವ॥ ಇಂತು ಮನೋಹರತೆವೆತ್ತ ಚೈತ್ಯಧಾತ್ರೀತಳದಿಂದೊಳಗೆ—

॥ ಮಾಲಿನಿ ॥

ಸಮವಸರಣಲಕ್ಷ್ಮೀಸ್ವರ್ಣಸತ್ಕಾಂಚಿಯೆಂಬಂ ।
ತನುಳಕನಕದುದ್ಯದ್ವೀದಿ ಸುತ್ತಿಪ್ರದೊಪ್ಪ ॥
ತ್ತಮೆ ತಜತಚತುರ್ದ್ವಾರಂಗಳಿಂ ಮಂಗಳಾದ್ಯ ।
ತ್ತಮನವನಿಧರಕ್ಷ್ಮಾಜ್ಯೋತಿರಸ್ವಪ್ನದಿಂದಂ ॥೩೪॥

ಪೊಳೆವಾಸುವರ್ಣವೇದಿಯಿ ।
ನೊಳಗಿಕ್ಕೋರ್ಕಂ ಪ್ರಮಾಣಮಾಗಿಂತು ಮನಂ ॥
ಗೊಳಿಸುವುದು ಸಲಿಲಖಾತಿಕೆ ।
ಸುಲಲಿತಶಶಿಕಾಂತಸಲಿಲಸಂಪೂರ್ಣತೆಯಿಂ ॥೩೫॥

ಬಳಕುರವಕಹಂಸಹಾರಿ ।
ತಕಜೀವಂಜೀವಕಂಕಸಾರಸಕಾರಂ ॥
ಡಕವಣಕಬಳಾಕಚಕೋ ।
ರಕಳಾಪಂ ನಿಸದವೆಸೆವುದಾಖಾತಿಕೆಯೊಳ್ ॥೩೬॥

ವರವಾರಿಕ್ರೀಡೆಯೊಳ್ಖೇಚರನರಸುರಕಾಂತಾಳುಚಾಸಕ್ಷಳನಪ್ರ ।
ಸ್ಫುರಿತಾಂಚತ್ಫೇನಪಿಂಡೋಜ್ಜ್ವಲರುಚಿಕಾಳದಿಂಕ್ಷ್ಮಾಲಿತೋರುಸ್ತನೋದ್ಯ
ಸುರಕಸ್ತೂರೀಕನತ್ಕರ್ದಮಕಾಳದಿಂ ಖಾತಿಕಾಂತರ್ಜಳಂ ಬಿ ।
ತ್ತರಿಸಿರ್ಕುಂ ಗಂಗೆಕಾಳಿಂದಿಗಳರದೆ ಶರಣ್ಬೊಕ್ಕವೆಂಬಂದದಿಂದಂ ॥೪೧॥

ಎರಡುಂ ಕೆಲದಿಂದೂಪಳ ।
ಮಿರದಜ್ಮೋದಕಮನೊರ್ಮೆಯುಂ ಕಹಿವುವು ಖಲೇ ॥
ಚರನರಸುರತರುಣೀಜನ ।
ತರಳೇಕ್ಷ್ಣಾಕಿರಣಸಾಂದ್ರಚಂದ್ರಿಕೆಯಿಂದಂ ॥೪೨॥

ಮುಗಿಯದ ಕಮಳಂ ಕುಮುದನು ।
ದಗಲದ ಪೊಣರ್ವಕ್ಕಿ ನಿಜಪರಸ್ಪರವೈರಂ ॥
ನೆಗೆಯದ ಜಳಚರಚಯಮೇ ।
ನಗಣಿತವೊ ಜಿನೇಶ್ವರಪ್ರಭಾತಾತಿಶಯಂ ॥೪೩॥

ವ॥ ಆಜಳಖಾತಿಕೆಯಿಂದೊಳಮೆಯ್ಯೊಳ್—

ಸದಮಳರೂಪ್ಯದ ವೇದಿಕೆ ।
ಯದಱ ಚತುರ್ಗೋಪುರಂಗಳಿಸೆದಿರ್ಕುಂ ತೀ ॥
ವಿದ ಮುಂಗಳನವನಿಧಿಸಂ ।
ಪದದಿಂ ತಜ್ಜ್ಯೋತಿರಮರದೌವಾರಿಕರಿಂ ॥೪೪॥

ವ॥ ಇಂತು ರಮಣೀಯವಾಗಿರ್ಪಾರಹತವೇದಿಕೆಯಿಂದೊಳಗೆ ಚತುಷ್ಕೋಣಪಿಪ್ಪಲಸಂಭೃತವಾಗಿ—

ಸತತಮನೂನಮಪ್ಪ ಸಳಳರ್ತುಕಶೋಭೆಯನಪ್ಪುಕೆಯ್ದು ಸಂ ।
ಗತಿವಡೆದಿರ್ದ ಚೂತನವಚಂಪಕಮಾಧವಿಮಾತುಳಂಗಮಾ ॥
ಳತಿಮುಚುಕುಂದಮೃದ್ವಿಕೆತಮಾಳಕೆಮಾಗಧಿಮಲ್ಲಿಕಾದಿಸು ।
ಬ್ರತತಿಯು ಸಾಂದ್ರಮಾದೆಸಕದಿಂದತಿಪಾವನಮಾಲತಾವನಂ ॥೪೫॥

ಸುಮನೋವಿಶಿಖವಿಜಯನಂ ।
ಸುಮನದಿನರ್ಜಿಸುವ ಭಕ್ತಿ ಮೆಯ್ವೆರ್ಚೆ ಕರಂ ॥
ಸುಮನಸ್ಸಮಿತಿಯನಾಯ ।
ರ್ಸುಮನಸ್ಸತಿಯರ್ತದೀಯವಲ್ಲೀವನದೊಳ್ ॥೪೬॥

ವಿನಂ ವರ್ಣಿಪುದಾಂತೀ ।
ಕಾನಿದ್ವಹನಪ್ರಸೂನಸೌರಭದೊಳ್ಪಂ ॥
ತಾನಿಲ್ಲಿಯೆ ಚರಿಯಿಸಿ ಪವ ।
ಮಾನಂ ಸಲೆ ಗಂಧವಾಹನಾಮಮನಾಂತಂ ॥೪೭॥

ವ॥ ಇಂತು ಸಲ್ಲಲಿತಶೋಭೆವೆತ್ತ ವಲ್ಲೀವನದಿಂದೊಳಗೆ—

ವರಜಾಂಬೂನದವಪ್ರವಪ್ರತಿಮಶೋಭಾಳಂಬಮಾಗಿರ್ಪುದಂ ।
ಬರಮಂ ತನ್ನಯ ಚೆನ್ನ ಕೆಂಬೆಳಗಿನಿಂದಾಚ್ಛಾದಿಸುತ್ತುಂ ನಿರಂ ॥

ತರಮತ್ಯುಜ್ಜ್ವಳರೂಪ್ಯಗೋಪುರಚತುಷ್ಕಾಳಂಕೃತಂ ವ್ಯಂತರಾ ।
ಮರದೌವಾರಿಕರಾಜಿ ಮುಂಗಳನಿಧಿಭ್ರಾಜೋರುವಿಭ್ರಾಜಿತಂ ॥೪೪॥

ವ॥ ಆಕನಕಪ್ರಾಕಾರದಿಂದೊಳಗೆ ಚತುಷ್ಕೋಣಪ್ರದೇಶಂಗಳಾ ಗಿಯಾನಾಲ್ಕುಂ ಮಹಾವೀಥಿಗಳಿಡೆಯಿಡೆಯೊಳಂ—

ಕಿಸುದಳರಿಂ ವಿರಾಜಿಸುವಶೋಕವನಂ ತನಿವಣ್ತುಱುಂಗಿ ತೋ ।
ರ್ಪ್ಪಸಳದ ಸಪ್ತಪತ್ರವನವೊಳ್ಳಲರ್ಗಂಪಿನ ಚಂಪಕದ್ರುವೋ* ॥
ಲ್ಲಸಿತವನಂ ಪೊದೞ್ದಿ ತಳರಿಂ ಫಳದಿಂ ಸಮಂತು ಕೋ ।
ಭಿಸುವ ವಿನೂತಚೂತವನವಿಕ್ರಮದಿಂದೆಸೆಗುಂ ಚತುರ್ವನಂ ॥೪೫॥

ಪರಮಶ್ರೀಜಿನರಾಜಸನ್ನುತಿಯ ನೋಡುತ್ತಿರ್ಪ ಕೀರಾಳಿ ಚುಂ ।
ಚುರಚಾತುಷ್ಕಭವಾಕ್ಯಮಂ ನವದೂದ್ಯತ್ತೋಕ್ತಿರಿಕ್ತಮ(?) ॥
ಚ್ಚರಿಯುಂ ಕಿನ್ನರಿಯರ್ಗೆ ಪುಟ್ಟಿಪ ಋಣತ್ರಾಕ್ರಸ್ವರಂ ಪೊಣ್ಮೆ ಗಾ ।
ವರಿಪುನ್ಮತ್ತಮದಾಳಜಾಳವೆನಸುಂ ಹೃದ್ಯಂ ತದುದ್ಯಾನದೊಳ್ ॥೪೬॥

ನೆರೆದು ನಿರಂತರಂ ಬಿನದದಿಂ ವನಲಕ್ಷ್ಮ್ಯಯ ವೊತ್ತದಂತೆ ಸಂ ।
ಚರಿಯಿಪ ಮಾನವಾಮರವಿಯಚ್ಚರಕಿನ್ನರಪನ್ನಗಾಂಗನಾ ॥
ಪರಿಕರಯಾನದಿಂದೊಗೆವ ನೂಪುರನಾದಮಯಂ ನಿರೀಕ್ಷಿಪಾ ।
ತರಳಕಟಾಕ್ಷಚಂದ್ರಿಕೆಯ ಸಾಂದ್ರಮರೀಚಿಮಯಂ ಚತುರ್ವನಂ ॥೪೭॥

ಖೇಚರಕಾಮಿನೀಕುಳಚಳಂ ನಯನದ್ಯುತಿಸಾಂದ್ರಚಂದ್ರಿಕಾ ।
ಸೇಚನಕೋಭೆಯಿಂದೆ ಪರಿಪಾಂಡುರವೃತ್ತಿಯನಪ್ಪುಕೆಯ್ದು ತ ॥
ದ್ರೋಚಿಗಳಂದೆ ಕಾಂತಶಶಿಕಾಂತಜಳಸ್ಥಳಮುಣ್ಮೆ ರಮ್ಯಹ ।
ರ್ಮ್ಯಾಚಳದಂತೆ ಕಣ್ಗೊಳಪುವಲ್ಲಿಯ ಕೇಳಿನಗಂಗಳೋಳಿಗಳ್ ॥೪೮॥

ವ॥ ಅದಲ್ಲದೆಯುಂ ಮಧ್ಯಮಧ್ಯದಲ್ಲಿ ಸುವರ್ಣಕಾಳತ್ರಯಪರಿವೃ ತೋತ್ತುಂಗರತ್ನರಜಿತಸಿದ್ಧತ್ರಯಾದೀಪ್ತಿತಮಾಗಿ ತೀರ್ಥಕರಪರಮದೇ ವಾಭಿಮುಖಪಲ್ಯಂಕಾಸನಾಂಕಿತಾಪ್ತಮಹಾಪ್ರಾತಿಹಾರ್ಯವರ್ಯಜಿನಪ್ರ ತಿಮಾವಹವಿಶಾಳಮೂಳಪ್ರದೇಶಭಾಸುರಚೈತ್ಯವೃಕ್ಷದೊಳನವರತಂ ತತ್ಪ ರಮಪೂಜೋನ್ಮುಖಾನೇಕವೈಮಾನಿಕನವನಾಮರಪರೀತದಿಂ ಕೋಭಿಸು ರ್ಪ್ಪಕೋಳಸಪ್ತಪತ್ರಚಂಪಕಚೂತಚತುರ್ವನದಿರ್ಕೆಲದ ನಾಲ್ಕುಂ ವೀಥಿಗಳ ಸೊಗಯಿಪೆಂಟೆಂದುಕ್ಷುಲ್ಲಕದ್ವಾರಂಗಳ ತದುಭಯಪಾರ್ಶ್ವಂಗಳೊಳ್—

ಒಂದೊಂದು ವೀಥಿಯೊಳ್ನಾ ।
ಲ್ಕಂದೂಪಳರಜತನೃತ್ಯಶಾಲೆಗಳವು ಚೆ ॥
ಲ್ವೊಂದಿರ್ಪ ಭೂಮಿಕಾತ್ರಯ ।
ದಿಂದಂ ಕಣ್ಗೊಳಸುತಿರ್ಪುವೆರಡುಂ ಕೆಲದೊಳ್ ॥೫೩॥

ನೆಗಟ್ಟಿನಾಟಕಶಾಲೆಯ* ।
ಸೊಗಯಿಸುವೊಂದೊಂದು ಭೂಮಿಕೆಯೊಳಮರಿಯರಾ ॥
ವಗನುಲ್ಲಿ ನರ್ತಿಪಕ್ಕೆ ।
ಮಿಗೆ ರಸಭಾವಂಗಳಿಸೆವ ಮೂವತ್ತಿರ್ವರ್ ॥೫೪॥

ಸಂದಿಸೆವ ನೃತ್ಯಶಾಲೆಗ ।
ಳೊಂದೊಂದಕೊಳೊಂದು ಧೂಪಘಟಮವು ಪದಿನಾ ॥
ಱಂ ದೊರೆವೆತ್ತಿರ್ಪುವು ಪದೆ ।
ಪಿಂದುಣ್ಮುವ ಸುರಭಿಧೂಮದೆಸಕದೆ ನಿಸದಂ ॥೫೫॥

ವ॥ ಇಂತೆಸೆವ ತದುದ್ಯಾನದಿಂದೊಳಗೆ—

ನವಕನಕದ ವೇದಿಕೆ ರಜ
ತವಿನಿರ್ಮಿತಗೋಪುರಂಗಳವು ನಾಲ್ಕುಂ ಮ ॥
ತ್ತವಕೊಳ್ ವ್ಯಂತರದಿವಿಜರ್ ।
ನವನಿಧಿಮಂಗಳನಿಕಾಯರಕ್ಷಕರೆಸೆವರ್ ॥೫೬॥

ಪೊಳೆವ ಪೊಸಪೊನ್ನವೇಡಿ ।
ನೊಳಮೆಯೊಳಗೇಕಯೋಜನವ್ಯಾಸದೆ ಸಿ ॥
ರ್ಮಳಕನಕಸ್ತಂಭಧ್ವಜ ।
ಕುಳಭೂಮಿಯೆನಿಪ್ಪ ಪೆಂಪಿನಿಂದೆಸೆದಿರ್ಕುಂ ॥೫೭॥

ಸರಸಿರುಹಗರುಡಗಜಶಿಲಿ ।
ಮರಾಳಮೃಗಲಕ್ಷ್ಮಚಕ್ರಮಾಳಾಂಬರಕೇ ॥
ಸರಿಯೆಂಬ ದಶವಿಧಾಂಕ ।
ಸ್ಫುರಿತೋಚ್ಚಧ್ವಜಸಮೂಹಮಭಿರಾಜಿಸುಗುಂ ॥೫೮॥

ಕಮನೀಯಸಮವಸರಣೋ ।
ತ್ತಮವೃತ್ತ ಕ್ಷೀತ್ರದಲ್ಲಿ ಪುಟ್ಟಿದ ಸದ್ಧ ॥
ರ್ಮಮಹೋಚ್ಚ ಸಸ್ಯಸಂತಾ ।
ನಮಿದೆನೆ ಕಣ್ಗೊಳಪುದಾಪತಾಕಾನೀಕಂ ॥೫೯॥

ವ ॥ ಮತ್ತಮಾಧ್ವಜಂಗಳೊಂದೆಡೆಯೊಳಪ್ಪೋತ್ತರಶತಂಗಳದೊಂ
ದೊಂದಕ್ಕುಪಧ್ವಜಂಗಳಪ್ಪೋತ್ತರಶತಂಗಳನಿತುಮಶೀತ್ಯುತ್ತರಾಷ್ಟಶತಸ
ಪ್ತತಿಸಹಸಾಧಿಕಚತುರ್ಲಕ್ಷಧ್ವಜಂಗಳವಶೀತ್ಯುತ್ತರಚತುಶ್ಶತಚಾಪೋ
ತ್ಸೇಧಂಗಳುಮವೊಂದೊಂದೆಣ್ಬತ್ತೆಸ್ಟರಳಗಲಮುಂ ಪ್ರತ್ಯೇಕವಿವರಂ ಪಂ
ಚವಿಂಶತಿಚಾಪಪ್ರಮಿತಮಾಗಿರ್ಪಧ್ವಜಂಗಳಿಸೆವ ಧರಾತಳದಿಂದೊಳಗೆ—

ಹಿಮವತ್ಶೈಲಮೆ ಶಾಳರೂಪವನೆ ತಾಳ್ದಿತ್ತಿಂಬಿವಂ ನೀಳ್ದ ಕು।
ಭ್ರಮಯೂಖಂ ಗಗನಕ್ಕೆ ಧೀಂಕಿಡುವ ಚಂಚದ್ಧ್ವಜವ್ರಾತಪ್ರಂ ಚತು ॥
ಷ್ಕಮುಖದ್ವಾರದಿನುದ್ಧಮಂಗಳನಿಧಿಬ್ರಾತಾಭಿರಕ್ಷೀಕೃತೋ ।
ತ್ತಮದೌವಾರಿಕರಪ್ಪ ನಾಗಸುರರಿಂದೋರಂತೆ ರಾರಾಜಿಕುಂ ॥೬೦॥

ಪ್ರದಿದೆಸೆವಾರಜತದ ವ ।
ಪ್ರದಿನೊಳಮೆಯ್ಯಲ್ಲಿ ದಶವಿಧಾಮರಧಾತ್ರೀ ॥
ಜದ ಜನ್ಮಾಸ್ಪದಮೆನಿಪ್ಪ ।
ಪ್ತದಿದಪ್ಪಸಹಸ್ರಚಾಪಮಿತಭೂವ್ಯಾಸಂ ॥೬೧॥

ನಿಳಯಮನೀವ ಭಾಜನಮನೀವ ಸುಧಾನ್ನಮನೀವ ವಸ್ತ್ರಸಂ ।
ಕುಳಮುಮನೀವ ವಾದ್ಯಮುಮನೀವ ಸುಮೂಲ್ಯವನೀವ ಭೂಷಣಾ ॥
ವಳಗಳನೀವ ಪಾನಮುಮನೀವ ಸುದೀಪಮನೀವ ಬೀಜ್ಪಿ ನು ।
ಸ್ಟೆಳಗುಮನೀವ ಕಲ್ಪಕುಜಮೊಪ್ಪುಗುಮಲ್ಲಿ ದಶಾಂಗಸಂಗತಂ ॥೬೨॥

ಕುರುಧರೆಯಿಂದುತ್ತಮಧರೆ ।
ಕುರುಚಿನಪನ ಸಮವಸರಣದೇತದ್ಧರೆ ದ ॥
ಲ್ಸರಣೆಂದನಿತುಂ ಸಾರ್ದು ।
ತ್ತಿರೆ ಕರಮೆಸೆಗುಂ ದಶಾಂಗದಿವಿಜಕುಜಂಗಳ್ ॥೬೩॥

ಹರಿನೀಳೋರ್ವೀತಳಭ್ರಾಯಸನವಳಯಮುದಂಘ್ರಿಸ್ಫುರತ್ಪಲ್ಲವಾಂಕೋ।
ತ್ಕರದಿಂ ಸಂಧ್ಯಾರುಣಾಂಬೆತ್ತವೊಲೆಸೆದಿರೆ ಸಂಚಾರಿಸುತ್ತಿರ್ಪ ನಾನಾ ॥
ಮರಕಾಂತಾನೀಕದಿಂ ಕಿನ್ನರಮಿಥುನಜಯಾಶ್ಚರ್ಯಮಾಧುರ್ಯಗೇಯ ।
ಸ್ವರಮಾಳಾಕೀರ್ಣದಿಂ ತತ್ಸುರತರುವನಮನ್ಯೂನಶೋಭಾಯಮಾನಂ ॥

ವ। ಮತ್ತಂ ಪೂರ್ವೋಕ್ತಸ್ಥಿತಿಯಿಂ ಚತುರ್ವನಂಗಳ ಮಧ್ಯಮಧ್ಯದೊಳ್‌ವಪ್ರತ್ರಯಪರಿವೃತವಿಷ್ಟರತ್ರಯಾಗ್ರವಿನ್ಯಸ್ತಕಾಯೋತ್ಸರ್ಗನಿಸರ್ಗಶುದ್ಧಸ್ಫಟಿಕಮಯಸಿದ್ಧಪ್ರತಿಮಾಧಿಷ್ಠಿತವಿಶಾಳಮೂಳಪ್ರದೇಶಸಿಸಳ (?) ಗಳಪ್ಪ ನಮೇರು ಮಂದಾರ ಪಾರಿಜಾತ ಸಂತಾನಮೆಂಬ ಸಿದ್ಧಾರ್ಥವೃಕ್ಷಂಗಳಿಂ ಮನಂಗೊಳಿಸುವನಲ್ಪಶೋಭೆವೆತ್ತ ಕಲ್ಪಕುಜವನವಸುಮತಿಯಿಂದೊಳಗೆ—

ನಿರುಪಮಮಂಗಳನವನಿಧಿ ।
ಪರಿಣತಗೋಪುರಚತುಷ್ಕಪರಿರಕ್ಷಕರ ॥
ಪ್ಪುರಗಪ್ರತಿಹಾರಕರಿಂ ।
ಕರಮೆಸೆವುದು ಕನಕಘಟಿತವೇದೀವಳಯಂ ॥೬೫॥

ವ। ಆಕಮನೀಯಕನಕವೇದಿಕೆಯಿಂದೊಳಗರ್ಧಯೋಜನದಗಲದ ಜಗತೀತಳದಲ್ಲಿ—

ಕನಕಸ್ತಂಭಾವಳಂಬಂ ಸ್ಫಟಿಕಘಟಿತನಿರ್ಯೂಹಮಾನೀಳರಂಗಾ ।
ವನಿ ನಾನಾಶ್ಚರ್ಯಜೆತಾಂಜೆತಮರಕತಸನ್ನೀತಕುಂಡ್ಯಂ ಕನದ್ಭೂ
[ಮಿಕಾನೀ ॥
ಕನಿವಿಷ್ಟಚ್ಛಾದ್ಯಘಂಟಾರುಣಮಣಿಕಳಶದ್ವಾರಚಾತುಷ್ಕವೋರಂ ।
ತೆ ನಿತಾಂತಂ ಕಣ್ಗುರ್ವಂ ಪಡೆದುದೆಸೆವ ಸಂಗೀತಕಾಲಾಸಮಾಜಂ ॥

ಜಿತಧನದಪ್ಪುಷ್ಕಮಧಃ ।
ಕೃಸತವಾಸವಮಣಿನಿವಾಸಮೆನೆ ಸೊಗಯಿಸಿದ ॥
ತ್ತತುಳತರಜಿತ್ರಶೋಳಾ ।
ತತಿಯಿಂ ಸಂಗೀತಮಂಗಳಾಲಯನಿಚಯಂ ॥೬೬॥

ಕಮನೀಯಸಮವಸರಣೋ ।
ತ್ತಮವೃತ್ತ ಕ್ಷೀತ್ರದಲ್ಲಿ ಪುಟ್ಟಿದ ಸದ್ಧ ॥
ರ್ಮಮಹೋಚ್ಚಸಸ್ಯಸಂತಾ ।
ನಮಿದೆನೆ ಕಣ್ಗೊಳಪುದಾಪತಾಕಾನೀಕಂ ॥೫೯॥

ವ ॥ ಮತ್ತಮೂಧ್ವಜಂಗಳೊಂದೆಡೆಯೊಳಷ್ಟೋತ್ತರಶತಂಗಳದೊಂ
ದೊಂದಕ್ಕುಪಧ್ವಜಂಗಳಷ್ಟೋತ್ತರಶತಂಗಳನಿತುಮಶೀತ್ಯುತ್ತರಾಷ್ಟಶತಸ
ಪ್ತತಿಸಹಸಾಧಿಕಚತುರ್ಲಕ್ಷಧ್ವಜಂಗಳವಶೀತ್ಯುತ್ತರಚತುಶ್ಶತಚಾಪೋ
ತ್ಸೇಧಂಗಳುಮವೊಂದೊಂದೆಣ್ಬತ್ತೆಸ್ಟರಳಗಲಮುಂ ಪ್ರತ್ಯೇಕವಿವರಂ ಪಂ
ಚವಿಂಶತಿಚಾಪಪ್ರಮಿತಮಾಗಿರ್ಪಧ್ವಜಂಗಳಿಸೆವ ಧರಾತಳದಿಂದೊಳಗೆ—

ಹಿಮವತ್ಶೈಳಮೆ ಶಾಳರೂಪವನೆ ತಾಳ್ದತ್ತೆಂಬಿವಂ ನೀಳ್ದ ಕು।
ಭ್ರಮಯೂಖಂ ಗಗನಕ್ಕೆ ಧೀಂಕೆಡುವ ಚಂಚದ್ಭವ್ಯವಪ್ರಂ ಚತು ॥
ಷ್ಕಮುಖದ್ವಾರದಿನುದ್ಧಮಂಗಳನಿಧಿಬ್ರಾತಾಖಿರಕ್ಷೀಕೃತೋ ।
ತ್ತಮದೌವಾರಿಕರಪ್ಪ ನಾಗಸುರರಿಂದೋರಂತೆ ರಾರಾಜಿಕುಂ ॥೬೦॥

ಪ್ರದಿದೆಸೆವಾರಜತದ ವ ।
ಪ್ರದಿನೊಳಮೆಯ್ಯಲ್ಲಿ ದಶವಿಧಾಮರಧಾತ್ರೀ ॥
ಜದ ಜನ್ಮಾಸ್ಪದಮೆನಿಪ್ಪ ।
ಪುದಿದಷ್ಟಸಹಸ್ರಚಾಪಮಿತಭೂವ್ಯಾಸಂ ॥೬೧॥

ನಿಳಯಮನೀವ ಭಾಜನಮನೀವ ಸುಧಾನ್ನಮನೀವ ವಸ್ತ್ರಸಂ ।
ಕುಳಮುಮನೀವ ವಾದ್ಯಮುಮನೀವ ಸುಮೂಲ್ಯವನೀವ ಭೂಷಣಾ ॥
ವಳಿಗಳನೀವ ಪಾನಮುಮನೀವ ಸುದೀಪಮನೀವ ಜೋಟ್ಟಿ ನು ।
ಸ್ಟೆಳಗುಮನೀವ ಕಲ್ಪಕುಜವೊಪ್ಪುಗುಮಲ್ಲಿ ದಶಾಂಗಸಂಗತಂ ॥೬೨॥

ಕುರುಧರೆಯಿಂದುತ್ತಮಧರೆ ।
ಕುರುಜಿನಪನ ಸಮವಸರಣದೇತದ್ಧರೆ ದ ॥
ಲ್ಸರಣೆಂದನಿತುಂ ಸಾರ್ದು ।
ತ್ತಿರೆ ಕರಮೆಸೆಗುಂ ದಶಾಂಗದಿವಿಜಕುಜಂಗಳ್ ॥೬೩॥

ಹರಿನೀಳೋರ್ವೀತಳಭ್ರಾಯನವಳಯಮುದಂಘ್ರಿಸ್ಫುರತ್ಪಲ್ಲವಾಂಶೋ।
ತ್ಕರಧಿಂ ಸಂಧ್ಯಾರುಣಂಬೆತ್ತವೊಲೆಸೆದಿರೆ ಸಂಚಾರಿಸುತ್ತಿರ್ಪ ನಾನಾ ॥
ಮರಕಾಂತಾನೀಕದಿಂ ಕಿನ್ನರಮಿಥುನಚಯಾಶ್ಚರ್ಯಮಾಧುರ್ಯಗೇಯ ।
ಸ್ವರಮಾಳಾಕೀರ್ಣದಿಂ ತತ್ಸುರತರುವನಮನ್ಯೂನಶೋಭಾಯಮಾನಂ ॥

ವ। ಮತ್ತಂ ಪೂರ್ವೋಕ್ತಸ್ಥಿತಿಯಿಂ ಚತುರ್ವನಂಗಳ ಮಧ್ಯಮಧ್ಯದೊಳ್‌ವಪ್ರತ್ರಯಪರಿವೃತವಿಷ್ಟರತ್ರಯಾಗ್ರವಿನ್ಯಸ್ತಕಾಯೋತ್ಸರ್ಗನಿಸರ್ಗಶುದ್ಧಸ್ಫಟಿಕಮಯಸಿದ್ಧಪ್ರತಿಮಾಧಿಷ್ಠಿತವಿಶಾಳಮೂಳಪ್ರದೇಶಸಿಸಳ (?) ಗಳಪ್ಪ ನಮೇರು ಮಂದಾರ ಪಾರಿಜಾತ ಸಂತಾನಮೆಂಬ ಸಿದ್ಧಾರ್ಥವೃಕ್ಷಂಗಳಿಂ ಮನಂಗೊಳಿಸುವನಲ್ಪಶೋಭೆವೆತ್ತ ಕಲ್ಪಕುಜವನವಸುಮತಿಯಿಂದೊಳಗೆ—

ನಿರುಪಮಮುಂಗಳನವನಿಧಿ ।
ಪರಿಣತಗೋಪುರಚತುಷ್ಕಪರಿರಕ್ಷಕರ ॥
ಪ್ಪುರಗಪ್ರತಿಹಾರಕರಿಂ ।
ಕರಮೆಸೆವುದು ಕನಕಘಟಿತವೇದೀವಳಯಂ ॥೬೫॥

ವ। ಆಕಮನೀಯಕನಕವೇದಿಕೆಯಿಂದೊಳಗರ್ಧಯೋಜನದಗಲದ ಜಗತೀತಳದಲ್ಲಿ—

ಕನಕಸ್ತಂಭಾವಳಂಬಂ ಸ್ಫಟಿಕಘಟಿತನಿರ್ಯೂಹವಾನೀಳರಂಗಾ ।
ವನಿ ನಾನಾಶ್ಚರ್ಯಜೆತಾಂಜಿತಮರಕತಸನ್ನೀತಕುಂಡ್ಯಂ ಕನದ್ಭೂ
[ಮಿಕಾನೀ ॥
ಕನಿವಿಷ್ಟಾಚ್ಛಾದ್ಯಘುಂಟಾರುಣಮಣಿಕಳಶದ್ವಾರಚಾತುಷ್ಕವೋರಂ ।
ತೆ ನಿತಾಂತಂ ಕಣ್ಗುರ್ವಂ ಪಡೆದುದೆಸೆವ ಸಂಗೀತಶಾಲಾಸಮಾಜಂ ॥

ಜಿತಧನದಪುಷ್ಪಕಮಧಃ ।
ಕೃಸತವಾಸವಮಣಿನಿವಾಸಮೆನೆ ಸೊಗಯಿಸಿದ ॥
ತ್ತತುಳತರಚಿತ್ರಶೋಳ್ಭಾ ।
ತಿಯಿಂ ಸಂಗೀತಮಂಗಳಾಲಯನಿಚಯಂ ॥೬೬॥

ವ॥ ಇಂತು ಕಣ್ಗೊಳಪ ಸಂಗೀತಶಾಲೆಗಳ ನೀಲಮಣಿರಂಗರಂಗಂ
ಗಳೊಳ್ ಲೀಲೆಯಿಂ ಸುಷಿರವಾದ್ಯವಾದನವಿಶಾರದನಪ್ಪ ಕಿನ್ನರಂ ತನ್ನೆಯ
ನೊಳಹೆಯೆಂಬ ವಾಸವುಂ ಕೊಂಡು ಹೆಲ್ಲಣಿಯಂ ಸುದ್ದವಾಗಿ ಪುಂಕಿಸಿ
ಬಿಂಕಂಬಡೆಯೆ ಮುಹಚ್ಚಾರೆಯುಮುಂ ಮಾಡಿ ರೂಢಿವಡೆದ ಮಧ್ಯಮಾದಿ
ಯೆಂಬಾದಿರಾಗಮುಂ ರೂಹುಗೊಳಿಪುದುಂ—ಗಾಂಧರ್ವಸರ್ವಜ್ಞನೆಂಬ ದಿವಿ
ಜನಾಯಕಗಾಯಕಂ ಗ್ರಾಮತ್ರಯದೊಳ್ ತ್ರಿಸ್ಥಾನಶುದ್ಧಿಯಱದು
ತಾಳಂ ಮೇಳಂ ಮೇಳವಮಾಗೆ ಖಾವುಳ ಬೊಂಬಳ ನಾರಾಟ ಮಿಶ್ರ
ಮೆಂಬ ನಾಲ್ಕುಂ ಧ್ವನಿಯ ಭೇದಮನಱದು ಸಪ್ತಸ್ವರವಿವರವಱದು ಸಪ್ತ
ವಿಧಗಮಕಮಿಸೆಯೆ ಶ್ರುತಿನಿಶ್ಚಯದಿಂದಾಳಾಪಿಸಿ ಮಂದ್ರಮಧ್ಯತಾರಮೋ
ರಾಯವಾಗೆಯುಚ್ಚ ನೀಚ ಸ್ಥಾಯ ಸಂಚಾರಿ ಠಾಯೆ ಬಾಗು ನಿಬದ್ಧಾ
ಬದ್ಧಾದ್ಯಾವಿಂಶತಿ ಶ್ರುತಿಯೇಕವಿಂಶತಿಮೂರ್ಚನೆಗಳಿಸೆಯೆ ರಾಗರಸಂಬಡೆ
ದೊಡ್ಡವಿಸೆ ರೀತಿ ನೂತನಂಬಡೆಯೆ ವಳ ವಿಳಾಸಂಬಡೆಯೆ ವಹವಣೆ
ಬಹಳಂಬಡೆಯೆ ತಿಪ್ಪು ತೊಮ್ಮೆವಡೆಯೆ ಗತಿ ಸಂಗತಿವಡೆಯೆ ಗಮಕಂ
ಗಾರವಂಬಡೆಯೆ ಗಹಗಹಿಕೆ ಗೊಂಡಂ ಗೊಂಡಿ ಚಡಂ ಬಾಹಟಂ ಲಾಲಂಗಿ
ತನ್ನೆವಣೆ ನಿಸ್ಸರಡೆ ರಂಗರಕ್ತಿ ಬೇಗವಣೆತು ತರಹರಂ ಸುಖಿವೊಟ್ಟಜೆ ದಂಳ
ವಾಳಂಪದಿರ್ಪೊಜೆ ಕೊಂಕು ಕಮ್ಮಣಿ ಪೆಸರಂ ಪಿಡಂಗುವಡೆಯೆ ಪಾಡು
ತ್ತಿರೆಯುಂ-ಸಂಚತ್ರಯಸುಸಂಚನೆಂಬಾವುಜಿಗನಾವುಜಮನಳವಡಿಸಿ ಕೊಂ
ಡು ಝುಂಕಾರವಂ ಪೊಯ್ದಳಗ ಸುಳಿಯಳಗ ಬೊಟ್ಟಾಳಂ ಒಳಕತ್ತರ
ಹೊಱಕತ್ತರ ವಿಷಮಕತ್ತರಮೆಂಬ ವಿಚಿತ್ರವಾದನದ ಬಹುಲಿಕೆಯೊಳ್ವಹಿಲ
ನೆನಿಸಿ ಖಣಿ ಬೆಡಂಗು ಜಗೆ ಜೋಕೆ ರಾಜಿಸೆ ಬಾಜಿಸುತ್ತಿರೆಯುಂ- ವಾದ್ಯ
ವಿದ್ಯಾಧರನಪ್ಪ ವಿದ್ಯಾಧರನಾರ್ದಂಗಿಕಂ ಮೃದಂಗಸಂಗತೋತ್ಸಂಗವಾಗಿ
ತದಿತೊಟ್ಟುಯೆಂಬ ನಾಲ್ಕಕ್ಕರದಿಂ ಶಬ್ದಸಂಗತಿಯನೆತ್ತಿಯಾಡಿ ಬೊಲ್ದಾ
ವಣ್ಣೆ ಬೊಲ್ದಾವಣೆ ಛಲ್ಲಿ ಪಾಡು ಪದಂ ಪರಿವಡಿ ವೊತ್ತುಕಾತಂ ಮುಲಪೆಂ
ಬೀಮಾರ್ಗಶಬ್ದಂಗಳುಂ ರಿಪುವಣೆ ಸಹರಣೆ ತುಡುಕು ದಕಿದು ವತ್ಕರಿ ಜತಿ
ಜೋಕೆಯೆಂಬ ದೇಸೆಯ ಶಬ್ದಂಗಳಿಸೆಯೆ ಬಾಜಿಸುತ್ತಿರೆಯುಂ—ಚತುರ್ವಿ
ಧಪಾತ್ರಚೂಡಾಮಣಿಯೆಂಬಮರ್ತ್ಯನರ್ತಕಿ ನಿಲವಿನ ಸುರೇಖೆಯೊಳಂ

ಚೂಡಾಮಣಿಯೆಂಬಮತ್ಯಸರ್ತಕಿ ನಿಲವಿನ ಸುರೇಖೆಯೊಳಂ ನಿಟ್ಟಿಸುವ
ದೃಷ್ಟಿಭೇದದೊಳಂ ಸ್ಥಾಯಿಭಾವಂಗಳಾಯತಿಯೊಳಂ ಸಂಚಾರಿಗಳ ಸಂಜ
ಯದೊಳಂ ಸಾತ್ವಿಕಾಪ್ಟಜೇಪ್ಟೆಗಳೊಳಂ ಅಪ್ಟರಸಂಗಳ ಘಟ್ಟಗಳೊಳಂ
ಭಾವರಸಂಗಳ ಭೇದಂಗಳೊಳಂ ವಿಜೆತ್ರವಡೆದು ರೂಪು ರೇಖೆ ಥಾವಣೆ
ತೂಕವ ಹಸನ್ಮಾಭಿನವದ ವಿಸ್ತಾರದೊಳಂ ಕರಣಂಗಳ ಕೌತುಕದೊಳಂ ಗತಿ
ಗಳ ಚತುರತೆಯೊಳಂ ವಕ್ರದ ಹಾವದೊಳಂ ಚಿತ್ತದ ಭಾವದೊಳಂ ವಿಳೋ
ಚನದ ವಿಳಾಸದೊಳಂ ಪುರ್ವಿನ ವಿಭ್ರಮದೊಳಂ ವಿಜೆತ್ರವಡೆದು ರೂಪು
ರೇಖೆ ಧ್ರಾಪಣೆ ತೂಕವಣೆ ಯಂಕೆ ಝಂಕೆ ಢಾಳ ಡಿಳ್ಳಾಯೆ ಚಂಡಣೆ ಚಳ
ಬಳಿಕೆ ಉಲ್ಲಾಸದಚ್ಚರಿವಡೆಯೆ ನರ್ತಿಸುತ್ತು ಮಿರೆಯುಮಿಂತು ಸಂತತಂ
ತೂರ್ಯತ್ರಯವಾಶ್ಚರ್ಯಮೆನಿಸಿರ್ಪ ನೃತ್ಯಮಂಡಪಮಾಳಾವಮಂಡಿತ ಮು
ಹೀವಳಯದೆಡೆಯೆಡೆಯು ಚತುರ್ವಿಧೀವಧ್ಯದ ಮಧ್ಯದೊಳ್—

ದೆಸೆಯಂ ಜಿತ್ರಪ ಜಿತಿತ್ರಾಖಿಳಮಣಿಚ್ಛತ್ರಾಂಶುವಿಂ ಚಾಮರ ।
ಪ್ರಸರಾಚ್ಛಪ್ರಭೆಯಿಂ ಕನತ್ಕನಕಘಂಟಾಧಾಮದಿಂ ದಿವ್ಯಪು ॥
ಷ್ಪಸಮೂಹದಿಂ ಪೊದಟ್ಟಿರುಣರತ್ನೋರ್ಜಿನಾರ್ಚನಾ(?)ಸಮೂ ।
ಹಸದುತ್ಕೀರ್ಣತೆಯಿಂದಣಂ ನವನವಸ್ತೂಪಾದಿ ತಟ್ಟಿತ್ತೊಪ್ಪುಗುಂ ॥೬೪॥

ವ॥ ಇಂತು ಸೊಗಯಿಸುವ ಸಂಗೀತಶಾಲಾವನೀವಳಯದಿಂದೊಳಗೆ

ಬಳಸಿದುದಾಜಿನೇಶ್ವರಸಭಾರಮಣೀಧರಹಾರಮೆಂಬಿನಂ ।
ಪಳಕಿನ ವಪ್ರವೊಪ್ಪಿರೆ ಹರಿನ್ಮಣಿನಿರ್ಮಿತಗೋಪ್ರರಂಗಳಾ ॥
ತಳತ ಗದಾಯುಧರ್ನೆಗಟ್ಟಿ* ಕಲ್ಪಳವಪ್ರತಿಹಾರರಿರ್ಪ್ಪರು ।
ಜ್ವ್ವಲಿಸುತುಮಲ್ಲಿ ಮುಂಗಳನಿಧಿಬ್ರಹರಕ್ಷ್ಮಕರಾಗಿ ರಾಗದಿಂ ॥೬೫॥

ಅವಪ್ರದಿನೊಳಮೆಯ್ಯೊಳ್ ।
ಶ್ರೀಮಂಡಪಮಿರ್ಪುದೊಪ್ಪಿ ಗಗನಸ್ಫಟಿಕೋ ॥
ದ್ಧಾಮಂ ತನ್ನಗಲಮದೊ ।
ರ್ಗಾವುದಮೆನೆ ಕಣ್ಗೆವಂದು ಕಡುವೆಳಗಿಂದಂ ॥೬೬॥

ಸೊಗಯಿಸುವಾಭಾತುರ್ವಿ ।
ಧಿಗಳೆರಡುಂ ಕೆಲಕೆಲಂಗಳೆಡೆಯೆಡೆಯೊಳ್ಪ ॥

ತ್ತಿಗಳವು ಪದಿನಾಱುಕ್ಕುಂ ।
ಸೆಗಲ್ದಿನಟಿಂಗೊಳ್ಕೋಪ್ಪವೆಸೆವ ಪನ್ನೆರಡಕ್ಕುಂ ॥೭೧॥

ಕ್ರಮದಿಂ ದ್ವಾದಶಕೋಪ್ಪದೊಳ್ಜಸಮುನೀಂದ್ರಶ್ರೇಣಿ ಕಳ್ವಮರೀ ।
ಸಮುದಾಯಂ ಮನುಜಾಂಗನಾಸುಚರಿತಾರ್ಯಾಸಂಚಯಂ ಜ್ಯೋತಿರಿಂ ॥
ದ್ರವಧೂವ್ಯಂತರಭೂಮಿನೀಭವನಭಾಸಸ್ತ್ರೀಕುಳಂ ಭಾವನಾ ।
ದ್ಯಮರೌಘಂ ನೃಚಯಂ ಮೃಗಾಳಿ ಮುದದಿಂದೊಪ್ಪಿರ್ದ್ದಿಂತಾವಗಂ ॥

ವ ॥ ಮತ್ತಮಾಚಕಾಯುಧಮುನೀಂದ್ರ ಮುಖ್ಯವಾದ ಮೂವತ್ತುಮುವರ್ಗಣಧರರುಂ ಎಂಟು ನೂರ್ವರ್ಪೂರ್ವಧರರುಂ ನಾಲ್ವತ್ತೊಂದುಸಾಸಿರದೆಂಟುನೂರ್ವರ್ಶಿಕ್ಷಕರುಂ ಮೂಸಾಸಿರವಧಿಜ್ಞಾನಿಗಳುಂ ನಾಲ್ಸಾಸಿರ್ವರ್ ಕೇವಳಿಗಳುಂ ನಾಲ್ಸಾಸಿರ್ವರ್ಮನಃಪರ್ಯಾಯಜ್ಞಾನಿಗಳುಂ ವಿಕ್ರಿಯರ್ದ್ಧಿಸಂಪನ್ನರಱುಸಾಸಿರ್ವರುಂ ಱಿರ್ಪಾಸಿರದ ನಾಲ್ನೂರ್ವರ್ವಾದಿಗಳುಂ ಹರಿಷೇಣಾರ್ಚಿತಮುಖ್ಯರಪ್ಪೞುವತ್ತುಸಾಸಿರದ ಮೂನೂರ್ವರ್ವಿರತಿಯರುಂ ಶ್ರುತಕೀರ್ತಿ ಮೊದಲಾದ ಎರಡುಲಕ್ಷ ಶ್ರಾವಕರುಂ ಅಹದ್ದಾಸಿ ಮೊದಲಾದ ನಾಲ್ಕು ಲಕ್ಷ ಶ್ರಾವಕಿಯರುಂ ಅಸಂಖ್ಯಾತದೇವದೇವಿಯರುಂ ಸಂಖ್ಯಾತತಿರ್ಯಗ್ಗಣಂಗಳುಂ ಪೂರ್ವೋಕ್ತಪರ್ಯಾಯದಿಂ ಪರಿಮಿತಪ್ರದೇಶಕೋಪ್ಪಂಗಳೊಳ್ಪರಮೇಶ್ವರಪ್ರಭಾದಿನಸಂಶ್ಲಿಷ್ಟರುವಾಗಿರ್ದರಿಂತೆಸೆವ ಗಣೋರ್ವೀವಳಯದಿಂದೊಳಗೆ—

ಗಗನಸ್ಫಾಟಿಕವೇದಿ ಸುತ್ತಿ ಗಗನಾಂತರ್ಭಾಗಮಂ ಶುಭ್ರಕಾಂ ।
ತಿಗೆ ಪಕ್ಕಾಗಿಸುತುಂ ಲಸನ್ಮರಕತದ್ವಾರಂಗಳಂ ದ್ವಾರವೇ ॥
ದಿಗಳೊಳ್ಬೃತ್ತರಿಪುದ್ಧ್ವಮಂಗಳನಿಧಿಬ್ರಾತಂಗಳಂದಲ್ಲಿ ನೆ ।
ಟ್ಟಗೆ ದೌವಾರಿಕರಪ್ಪ ಕಲ್ಪಸುರರಿಂತಾಗಿರ್ದ್ದಿಂತೊಪ್ಪುಗುಂ ॥೭೭॥

ವ ॥ ಱಿಂತು ಸೊಗಯಿಸುವ ಗಗನಸ್ಫಟಿಕವೇದೀವಳಯದಿಂದೊಳಗೆ—

ವರವೈಡೂರ್ಯಮಯಂ ।
ಸುರುಜಿರಳಾಂಜನಮಯಮನೇಳರತ್ನಮಯಂ ಱಾ ॥

ಸುರಪೀಠತ್ರಿತಯಂ ತರ ।
ತರದಿಂ ತ್ರಿಜಗಲ್ಲಲಾಮಮೆನೆ ಸೊಗಯಿಸುಗುಂ ॥೭೪॥
ವ್ಯಾಸಂ ಮೊದಲದಱಿಳಾ ।
ಲ್ಲಾಸಿರಮೆರಡನೆಯೊಳೆರಡುವರೆಸಾಸಿರಮೊ ॥
ರ್ಧಾಸಿರ ಬಿಲ್ಲಗ್ರದೊಳೆನೆ ।
ಭಾಸುರವಾಗಿರ್ದಿಂತು ಪೀಠತ್ರಿತಯಂ ॥೭೫॥
ಪ್ಪುದಿದೆಶ್ಟಲ್ಲುದಯಂ ಪ್ರಥ ।
ಮದ ಪೀಠಂ ಮಧ್ಯಪೀಠಮಂತದು ನಾಲ್ಕಿ ॥
ಲ್ಲುದಯಂ ಮಣಿಮಯಮಪ್ಪ ।
ಗ್ರದ ಪೀಠಂ ಮತ್ತಮದುವೆ ನಾಲ್ಕಿಲ್ಲುದಯಂ ॥೭೬॥
ಮುದದಿಂ ಯಕ್ಷರ್ಮಕುಟಾ ।
ಗ್ರದೊಳನುಪಮಧರ್ಮಚಕ್ರಮಂ ಧರಿಯಿಸಿ ಪೂ ॥
ರ್ವದ ವೈಡೂರ್ಯರಜಿತಪೀ ।
ಠದ ನಾಲ್ದೆಸೆಗಳೊಳಜಸ್ರಮಿಂತೆಸೆದಿರ್ದರ್ ॥೭೭॥
ಸರಸಿರುಹಸಿಂಹವೃಳಾಂ ।
ಬರಗರುಡರಥಾಂಗವೃಷಭವಾರಣಜೆಹ್ನೀ ॥
ತ್ಕರಕೇತನಂಗಳಾಡಂ ।
ಬರದಿಂ ಕಣ್ಗೊಳಪುವಿಂತು ನಡುವಣ ಪೀಠಂ ॥೭೮॥
ಅವಿರಳದಿಂ ಪುದಿದಿರ್ಪುವು ।
ನವನಿಧಿವೆರಸಷ್ಟಮಂಗಳಂಗಳ್ಕಣ್ಗಂ ॥
ತ್ಸವಮನೆಡೆವಿಡದೆ ಪಡೆಯು ।
ತ್ತವಿರಳಮೆಸಸುಂ ತೃತೀಯಪೀಠದ ಕೆಲದೊಳ್ ॥೭೯॥
ಕರಮೆಸೆದಾಪೀಠದ ಮೇ ।
ಲಿರುತಿರ್ಪುದು ಪಡ್ವನುಂಸತಾಯಾಮಂ (?) ಬಿ ॥
ತ್ತರಿಪುತ್ಸೀಧಂ ಸವಕತ ।
ಕರಾಸನಂವೆತ್ತ ಗಂಧಕುಟಿ ಮಣಿಘುಟಿತಂ ॥೮೦॥

ರಸಜಿತೋತ್ಕರಜಿತ್ರಿತಂ ವಿವಿಧಪತಾಕಾನೀಕವಿಸ್ತಾರಿತಂ ।
ಲಸಿತೋದ್ಯನ್ಮಣಿಕೂಟಕೋಟಿಘಟಿತಂ ರತ್ನಾತುಳಸ್ತಂಭಭಿ ॥
ತ್ತಿಸವಾಳಂಬಮೆನಿಪ್ಪ ಗಂಧಕುಟಿಯಿಂದೊಪ್ಪಕ್ಕೆ ಸರ್ವಾರ್ಥಸಿ ।
ದ್ಧಿಸಮುಂಬಾರದು ನೋಡೆ ನಾಡೆಯುಮೆನಲ್ಕಿನ್ನಾವನೇವರ್ಣ್ಣಿಪಂ ॥೪೧॥

ಪರಮಜಿನ ತನುವಿನನುಪಮ ।
ಪರಿಮಳದಿಂ ಪುದಿದುದಾಗಿ ಸಾರ್ಥಕನಾಮಂ ॥
ದೊರೆಕೊಂಡ ಗಂಧಕುಟಿ ಮಿಗೆ ।
ಪರಿಢವಿಪುದು ಮೃಗಮದಾದಿಗಂಧಾವಳಿಯುಂ ॥೪೨॥

ಇಂತೆಸೆವ ಗಂಧಕುಟಿಯ ।
ಭ್ಯಂತರದೊಳ್ತತ್ರೀತಯಪೀಠದ ಮೇಲೋ ॥
ರಂತೆಸೆಯುತಿರ್ಪ್ಪುದನಿಮಿಷ ।
ಸಂತತಿಸೇವ್ಯಂ ಸುರತ್ನಮಯಹರಿಪೀಠಂ ॥೪೩॥

ಪರಿದೆಸೆವಾಸಿಂಹಾಸನ ।
ತಿರದೊಳ್ತಾನಿರ್ಪ್ಪುದೊಪ್ಪು ಕಂಪನ ಸಿರಿಯಂ ॥
ಪರಕಲಿಸುವ ದಕಕತದಳ ।
ಪರಿಕರದಿಂ ಪುದಿದು ಹೇಮಕೋಮಳಕಮುಳಂ ॥೪೪॥

ತರುಣಾರ್ಕಕೋಟಿಕಾಂತಿ ।
ಸ್ಫುರಿತಾಂಗಂ ತೊಳಗಿ ಬೆಳಗುತಿರೆಯುಂ ಕಾಂತೀ ॥
ಶ್ವರನಿರ್ದಂ ಮುಟ್ಟದೆ ತ ।
ತ್ಸರಸಿಜಕರ್ಣಿಕೆಯನೇಕಮುಪ್ಪ್ಯಂತರದಿಂ ॥೪೫॥

ಪದೆಪಿಂದಾಭುವನತ್ರಯಾಗ್ರದೊಳೆ ಸಂದಿರ್ದಂದಮುಂ ಸೂಚಿಪಂ ।
ದದೆ ಪೀಠತ್ರಿತಯಾಗ್ರದೊಳ್ಮಣಿಗಣವ್ಯಾಕೀರ್ಣಸಿಂಹಾಸನಾ ॥
ಗ್ರದ ಹೇವಾಬ್ಜದೊಳೇಕಮುಷ್ಟಿಯ ಪವರ್ಣಾಂ ಮುಟ್ಟದಿರ್ದಂ ಸಮುಂ।
ತುದಯಾರ್ಕಪ್ರಭೆಯಂ ಪಟಿಂಜಲೆಯುತುಂ ಶ್ರೀಕಾಂತಿತೀರ್ಥೇಶ್ವರಂ ॥

ಕುಸುಮಾಸಾರಂ ಮರುದ್ದುಂದುಭಿ ಮಿಸುಪಕೋಕದುಗ್ರಮಂ

[ದಿವ್ಯನಾದ ।

ಪ್ರಸರಂ ಭಾಮಂಡಳಂ ಚಾಮರಮತಿಶಯಮಪ್ಪಾತಪತ್ರತ್ರಯಂ ರ ॥
ತ್ನಸಮುತ್ಕೀರ್ಣಾರ್ಹತ್ಸಿಂಹಾಸನಮೆನಿಪ ಮಹಾಪ್ರಾತಿಹಾರ್ಯಾಷ್ಟಕಂ ರಾ
ಜಿಸೆ ಯೋಗಸ್ವಾಂತನಿರ್ದಂ ನಿರುಪಮವರಶಾಂತಾತ್ಮಕಂ ಶಾಂತಿನಾಥಂ ॥

ವ॥ ಮತ್ತಮೊಳ್ತಾತಿಶಯಚತುಷ್ಟಯಕ್ಷಯಾನಂತರಂ ಪುಟ್ಟಿದ ಚತು
ರ್ಮುಖತ್ವಮುಂ ಭುಕ್ತ್ಯಭಾವಮುಂ ವಿಳಸದನಿಮೇಷತ್ವಮುಂ ಮರು
ನ್ಮಾರ್ಗಯಾನಮಹತ್ವಮುಂ ಗರ್ವ್ಯತಿಶಯಚತುಶ್ಶತಾಂತರಸುಭಿಕ್ಷತ್ವಮುಂ ನಿ
ರ್ಗತೋಪಸರ್ಗತ್ವಮುಂ ಪ್ರಾಣಿವಧವಿರಹಿತ್ವಮುಂ ಸಮಾನಸಪ್ತಕೇಶತ್ವ
ಮುಂ ಸಕಳವಿದ್ಯೇಶ್ವರತ್ವಮುಂ ಅನ್ಯಾಯತ್ವಮುಮೆಂಬ ದಶಾತಿಶಯಂ
ಗಳ ಸಂಗತಿವೆತ್ತ ಪರಮೇಶ್ವರಂ ತಾನಲ್ಲಿಯಷ್ಟೋತ್ತರಚತ್ವಾರಿಂಶದ್ಗ
ಬ್ಯೂತಿಪ್ರಮಿತಪರಿಷನ್ಮಂಡಳಮಂಡಿತನಾಗಿರ್ದನಂತುಮಲ್ಲದೆಯುಂ—

ತರುಣರುಮಬಲೆಯರುಂ ವೃ ।
ದ್ಧರುಮಿರದಂತರ್ಮುಹೂರ್ತದಿಂ ಪುಗುವರ್ಚೆ ॥
ಚ್ಚರದಲ್ಲಿಂ ಪೊಱಮಡುವ ।
ರ್ಪರಮನ ಸಾಮರ್ಥ್ಯಕೃತಮಿದೇನಚ್ಚರಿಯೋ ॥೪೪॥

ಪರಿಕಿಪೊಡೆ ಭುಕ್ತಿಭಾವಂ ।
ಪರಮನೊಳಲ್ಲೆಂಬುದಂ ದಿಟಂ ಸೂಚಿಸುವಂ ॥
ತಿರೆ ಸಮವಸರಣಮಂ ಪೊ ।
'ಕ್ಕರರಂ' ಕ್ಷುತ್ತೃಷೆಗಳೆರಡುಮುದಯಿಸವದಱಿಂ೪ಳ್ ॥೪೫॥

ವ॥ ಇಂತನತಿಶಯಮಹಿಮಾಳಂಕರಣಮಪ್ಪ ಸಮವಸರಣಮಂ
ಸಕಳಸುರಪರಿಕರಂಬೆರಸು ಸೌಧರ್ಮೇಂದ್ರಂ ಸ್ವಕೀಯನಯನಕುವ
ಳಯಸಹಸ್ರಂಗಳ್ಪರಿತುಷ್ಟಿಯಂ ಪಡೆಯೆ ಪದೆದೀಕ್ಷಿಸುತ್ತುಂ ಬಂದು
ಪೊಕ್ಕಾಗಳ್—

ಕುಳಶನಿಜಮಕುಟಕುಳಶೋ ।
ಜ್ಜ್ವಳಕಿರಣಂ ಬಳಸೆ ಗಂಧಕುಟಿಯಂ ತನ್ನಂ ॥
ಬಳಸಿ ಬರೆ ಸಕಳಸುರಸಂ ।
ಕುಳಮಾಗಳ್ಮಾವೆ ನಲವಿನಿಂ ಬಲವಂದಂ ॥೪೦॥

ಪಾ—1. ಪೊಕ್ಕಳಂ, ಪೊಕ್ಕರಂ.

ವ॥ ಅಂತಾಗಳ್ತದಶನಿಚಿಯಾಶ್ರಯಂ ತ್ರಿಪ್ರದಕ್ಷೀಕೃತಗಂಧಳು ಟ್ಯಾಶ್ರಯನಾಗಿ ನಿಖಿಳಭುವನಾಶ್ರಯನ ಪದಪದ್ಮೋಪಾಶ್ರಯಮುಪ್ಪ ಕಂಠೀರವಾಸನೋಪಕಂಠದೊಳ್ನಿಂದು—

ಹರಿಪೀಠಾನನದೊಳ್ಪೊದಟ್ಟಿ ಹರಿನೀಳೋರ್ವೀತಳಾಲಿಂಗ್ಯಟಂ ।
ಧುರಸರ್ವಾಂಗನುನಾಗಿ ರಾಗದೆ ಹರಿಸ್ವಚ್ಛಾತ್ಮಕೋರಹಿತ(?) ॥
ರರುಚಿಸ್ಫೀರಲತಾಂತಮೂಲೆಗಳಿನಾದಂ ಪೂಜೆಗೆಯ್ದಂ ಲಸ ।
ದ್ಧರಿಕೋಟಪ್ರಭನಪ್ಪ ಶಾಂತಿಜಿನ[ನಾ]ಥಾದಾರವಿಂದಂಗಳಂ ॥೯೧॥

ವ॥ ಇಂತು ವಿನತನಾಗಿ ನಿಂದಿರ್ದು ಮುಕುಳಿತಕರಾರವಿಂದಂ ಸೌಧರ್ಮೇಂದ್ರನಾಗಳ್—

ಶ್ರೀಮತ್ಕೇವಳಬೋಧಭಾಮಿನಿಗೆ ಲೋಕಾಲೋಕಗಳ್ಗರ್ಕರೋ ।
ದ್ದಾಮಸ್ವಚ್ಛವಪುರ್ವಿರಾಜಿತೆಗೆ ರತ್ನಾದರ್ಶಮಾಯ್ತಾದನಿ ॥
ನ್ನೀವಮಾಂಗಲ್ಯಮುಖೇಂದುಮಂಡಳದ ನಿರ್ಯತ್ಸಾಂದ್ರಚಂದ್ರಾತಪ ।
ಸ್ತೋಮಂ ತೂಳ್ದುಗೆ ಮನ್ಮನಸ್ತಿಮಿತಮಂ ಶ್ರೀಶಾಂತಿತೀರ್ಥೇಶ್ವರಾ ॥೯೨॥

ಗೆಲಲಾವಂಗಮತೀವದುರ್ಜಯನೆ ತಾನಪ್ಪಾ ಮನೋಜಾತಸಂ ।
ಸಲೆ ಗೆಲ್ದೋವದೆ ಮೋಹಮೂಳಭವಭೂಜೋನ್ಮೂಳನಂಗೆಯ್ದು ನಿ ॥
ರ್ಮಳನಾತ್ಮಾಂಗಮರುದ್ರುಮಕ್ಕಮೃತಲಕ್ಷ್ಮೀದೀರ್ಘದೋರ್ವಲ್ಲರೀ ।
ವಳಸಂಪತ್ತನೆ ನೀನೆ ಮತ್ತೆ ಪೊರೆರಾರ್ ಶ್ರೀಶಾಂತಿತೀರ್ಥೇಶ್ವರಾ ॥೯೩॥

ಘನತೃಷ್ಣಾಜಳಪೂರದಿಂ ಪ್ರಬಳಮೋಹಾವರ್ತದಿಂದಾರ್ತನೂ ।
ತನವೀಚೀಚಯದಿಂ ವಿಜೃಂಭಿಸುವಪಾರಂ ದುಸ್ತರಂ ತಾನೆನಿ ॥
ಪ್ಪನಿತುಂ ಪೆಂಪೆಡೆಗೊಂಡ ಸಂಸರಣಪಾರಾವಾರಮಂ ದಾಂಟಿ ಪಾ ।
ವನಕೈವಲ್ಯಸುಖೈಕಸಿದ್ಧವಡೆದೈ ಶ್ರೀಶಾಂತಿತೀರ್ಥೇಶ್ವರಾ ॥೯೪॥

ಪರಿದೊಂದಚ್ಚರಿವೆತ್ತು ಬಿತ್ತರಿಸುವೀಚ್ಛತ್ರತ್ರಯೇಭಾರಿವಿ ।
ಪ್ಪರದಿವ್ಯಧ್ವನಿಪುಷ್ಪವೃಷ್ಟಿವಿಳಸದ್ಭಾಮಂಡಳಾಶೋಕಚಾ ॥
ಮರದೇವಾಸನಕಮೆಂಬಿನಿತ್ತತಿಶಯಂ ಪೇಱುತ್ತುಮಿರ್ದತ್ತಣಂ ।
ಪರಮಶ್ರೀವಿಭುವಪ್ಪ ನಿನ್ನೆಸಕಮಂ ಶ್ರೀಶಾಂತಿತೀರ್ಥೇಶ್ವರಾ ॥೯೫॥

ಇನಿತೆಂದಿನ್ನವಿವೆಂದು ನಿನ್ನ ಗುಣಮಂ ವರ್ಣಿಪ್ರೊಡಾಪನ್ನಗೇ ।
ಕನ ಜಿಹ್ವಾಳಗತರ್ಕ್ಯಮೆನ್ನದೆ ಗುಣಸ್ತೋತ್ರಂಗೆಯಲ್ಕೆಂದು ಪೂ ॥
ಣ್ಣಿನ ತತ್ಕೀರ್ತನೆ ಮೇರುವೆಳ್ಳನಿತೆನಿಪ್ಪಂತಕ್ಕುಮೆಂತಪ್ಪ ವ ।
ರ್ಣನೆ ಹಾಸ್ಯೋಕ್ತಿ ಭವದ್ಗುಣಂ ಗಣಿದಮೇ ಶ್ರೀಶಾಂತಿತೀರ್ಥೇಶ್ವರಾ ॥

ನಿಮಿಷಾರ್ಧಂ ನುತಿಗೆಯ್ದೊಡಪ್ಪುದೆ ವಲಂ ಚಕ್ರೇಶ್ವರತ್ವಂ ನಿತಾಂ ।
ತಮದಂ ವಾಂಛಿಸುತಿರ್ಪರಿರ್ಕ್ಕಮ ಸಮಂತಾನೊಲ್ಲೆನಾವಂದದಿಂ ॥
ದಮೆ ನಿನ್ನಂದಮನೆಯ್ದಿಪೊಂದು ಮನಮುಂಟೆನ್ನೀಮನಂ ಪೂಣ್ದುದಿಂ ।
ಸಮನಿಪ್ಪಂತಿರೆ ದೇವ ಮಾಱುದಱಿವೆಂ ಶ್ರೀಶಾಂತಿತೀರ್ಥೇಶ್ವರಾ ॥೯೭॥

ನಿನತಂಘ್ರ್ಯುದ್ಯಸಂಕಜಾರ್ಚನೆಗೆ ಸಂದಾಚಂದನಂ ತನ್ನವೋ ।
ಲನಿತಂ ಮಾಡದೆ ತತ್ಸಮಾಪದ ಮಹೀಜಬ್ಯಾಜಮಂ ದೇವ ನಿ ॥
ನ್ನೆನೆವಾಳರದಿಂದೆ ಸಾರ್ದನೆನಸುಂ ನಿನ್ನಂದಮೇನಾಗದಿ ।
ರ್ದನೆ ಮೇಣ್ಮಾಡದೆ ನಿನ್ನಮ್ಮೆಮೆಯೆಸಕಂ ಶ್ರೀಶಾಂತಿತೀರ್ಥೇಶ್ವರಾ ॥

ವ ॥ ಎಂದಿಂತು ಸಾನಂದದಿಂ ಸ್ತುತಿಗೆಯ್ದು ಸೌಧರ್ಮೇಂದ್ರಂ ಕಜೇದೇವಿ ಸದ್ಭಕ್ತಿಸರಭಸದಿಂ ಸಮನಿಸುವ ಸುರಸರಿತ್ಸಲಿಲಾದಿವಿಶಿಷ್ಟಾಷ್ಟ ವಿಧಾರ್ಚನೆಗಳಿಂ ಜಗತ್ರಯಾರ್ಚಿತನನರ್ಚಿಸಿ ಸಮುಚಿತಪ್ರದೇಶದೊಳ್ಕುಳ್ಳಿರ್ದು—

ಸುರರಾಜಂ ಮುಕುಳೀಕೃತ ।
ಕರಸರಸಿಜನಾಗಿ ವಿನಯವಾಗ್ವೃತ್ತಿಪುರ ॥
ಸ್ಸರದಿಂ ಶ್ರೀವಿತ್ಯಾಂತೀ ।
ಶ್ವರನಂ ತತ್ವಸ್ವರೂಪಮಂ ಪೆಸಗೊಂಡಂ ॥೯೯॥

ವ॥ ಇಂತು ಪೆಸಗೊಂಬುದುಮಾಗಳ್—

ಪ್ರಕೃತಿಗಭೀರತರ ವಿಮುಖ ।
ವಿಕಾರವಿರಹಿತಮಭೇದದೂರಸಮೀಪಂ ॥
ಪ್ರಕಟತರಸಕಳಭಾಷಾ ।
ತ್ಮಕಮದು ಪೊಣ್ಮಿದುದು ಪರಮಜಿನದಿವ್ಯಧ್ವನಿ ॥೧೦೦॥

ಪೆಸರ್ವೆತ್ತ* ಗಣಧರಪ್ರಮು ।
ಖಸಮಸ್ತಸಭಾಜನಾಂಗತತಿಯೊಳ್ಪುಳಕ ॥
ಪ್ರಸರಮನಂದೊರ್ವೊದಲೊಳ್ ।
[ಪಸರಿಸೆ]ಪೊಣ್ಮಿದುದನೂನದಿವ್ಯಧ್ವಾನಂ ॥೧೦೧॥

ವ॥ ಅನವ್ಯದಿವ್ಯಭಾಷೆಯಿಂ ಭುವನತ್ರಯಸೇವ್ಯನಾಗಳ್ಜೀವಾಜೀವಾಶ್ರವಬಂಧಸಂವರನಿರ್ಜರಾಮೋಕ್ಷಭೇದದಿಂ ಸಪ್ತಪ್ರಕಾರಮಪ್ಪ ತತ್ವಸ್ವರೂಪಮಂ ವ್ಯಕ್ತಮಾಗಲ್ಕಾವಂತೆ ಬೆಸಸುವುದುಮದಱಿಂದಖಿಳಪರಿಷಜ್ಜನಂ ಬೆರಸು ವಿದಿತಹೃದಯನಾಗಿ ಮನೋನುರಾಗದಿಂ ನೆಲೆವೆರ್ಚಿ ಸೌಧರ್ಮೇಂದ್ರನಂತರಂ ಮಿಥ್ಯಾತ್ವಮಂ ಪರಿಹಾರಕಾಲಮನವಧಿಜ್ಞೋಧದಿಂದಱಿದು ಮುಕುಳಿತಕರಸರೋಜಂ ಜಿನರಾಜಮುಖಸರೋಜಮನಭೀಕ್ಷ್ಣಿಸಿ ಭರತಕ್ಷೇತ್ರಕರ್ಮಭೂಮಿಯೊಳ್ಭವ್ಯಜೀವಾವಳಿಗೆ ಭಾವಪರಿತೋಷವಪ್ಪಂತು ಧರ್ಮಾಮೃತಮಂ ಕರೆದು ಲೋಕಾವಲೋಕನಕ್ಕಚ್ಚರಿಯಂ ಮೆಱೆಯಲ್ಕೆ ವಿಹರಿಸುವ ಪದನಿಂತೆಂದು ಬಿನ್ನವಿಸಿ ವಾಸವಂ ನಿಜನಿವಾಸಮನೆಯ್ದಿದನಿತ್ತಲ್--

ಅನುಕೂಲಂ ಮಾರುತಂ ತಱಿಸಿ ಸಗುತಿರೆ ಮರುತ್ಸಾಡನೋದ್ಭೂತಭೇರೀ।
ನಿನದಂ ದಿಕ್ಕಕ್ರವಾಳಾಂತರನಿವಿಡುತಿರೆ ಕೇತುಪ್ರಜಾಂದೋಳದಿಂ ವ್ಯೋಮ॥
ಮನದೀಭೇನಪ್ರತಾನಂ ಕೆದಱುತಿರೆ ಸಮಸ್ತಾಮರಸ್ತೋತ್ರಮಾಧು ।
ರ್ಯನಿನಾದಂ ನೀಳ್ದ ಪೊಣ್ಮುತ್ತಿರೆ ತಳರ್ದನತಿಖ್ಯಾತಿಯಿಂ ಶಾಂತಿನಾಥಂ* ॥

ಕುಳಕಧರಂ ನಡೆಯಿಸುವೆಡೆ ।
ಯೊಳೆ ಯೋಜನಮಿತಧರಿತ್ರಿಯಂ ವಿಗತತೃಣೋ ॥
ಪಳಕಂಟಿಕಧೂಳೀಸಂ ।
ಕುಳಮೆನೆ ಸಂಮಾರ್ಜಿಪಸರ್ವಿಮಾರಕುಮಾರರ್ ॥೧೦೩॥

ಅರುಣಮಣಿಕೇಸರಂ ಮೃದು ।
ತರಮಸ್ಯೆಣಸಹಸ್ರದಳಮಯದ ಕನಕಾಬ್ಜೋ ॥
ತ್ಕರಮಂ ಸುರರಿಱಿಸುವರಾ ।
ಜರಣಂ ವ್ಯಾಸದೊಳೆ ಮುಂತೆ ಪಿಂತೇಱೀಱಂ ॥ ॥೧೦೪॥

ಪಿರಿದುಂ ಸಮಸ್ತಜನಗೋ ।
ಚರಮತಿಕೌತುಕಮಯಂ ಮಹೋತ್ಸವಮಾಗು ॥
ತ್ತಿರೆ ತೀರ್ಥನಾಥಶಾಂತೀ ।
ಶ್ವರನಾಸ್ಥಾಯಿಕೆ ಧರಿತ್ರಿಯೊಳ್ವರ್ತಿಸುಗುಂ ॥೧೦೫॥
ಮಳಯಜಮೃಗಮದಕುಂಕುಮ ।
ಜಳಮಂ ಸಲೆ ಸಮವಸರಣಭೂಮಂಡಳದೊಳ್ ॥
ತಳಿಯುತ್ತಿರ್ಪರ್ಸತತಂ ।
ಕುಳಿಶಧರನ ಬೆಸದಿನೆಸೆವ ಮೇಘಕುಮಾರರ್ ॥೧೦೬॥
ಸುಮನಃಕುಮಾರಕರ್ಸಲೆ ।
ಸುಮನಃಪತಿ ಬೆಸಸೆ ಸಮವಸರಣೋರ್ವರೆಯೊಳ್ ॥
ಸುಮಜಕುಳಭವರ್ನವ [ನವ] ।
ಸುಮನಶ್ಚಯದಿಂದೆ ವಿರಜಿಪರ್ಪೂವಲಿಯಂ ॥೧೦೭॥
ಧರೆ ಸಸ್ಯಸಕಳಸಂಪ ।
ದ್ಭರಿತಂ ನರತಿರ್ಯಗ್ಜೀವಾವಳಿಪರ ॥
ಸ್ಸರವೈರಿದೂರಮೆನೆ ಜಿನ ।
ವರನಾಸ್ಥಾಯಿಕೆ ವಿಹಾರಿಸುತ್ತಿರಲೆತ್ತಂ ॥೧೦೮॥
ದೆಸೆಗಳ್ಪ್ರಸನ್ನಮಯಮಾ ।
ಗಸಮತಿನಿಶಿತಾಸಿರೂಪಮಪಗತಮೇಘು ॥
ಪ್ರಸರಮಯಮಾಗಿ ಮಿಗೆ ಸೊಗ ।
ಯಿಸಿದುದು ಜಿನಸಮವಸ್ಥಿತಿ ವಿಹಾರಿಪ ಪದದೊಳ್ ॥೧೦೯॥
ಉದಯಾಸ್ತಮಯಂಗಳೊ ।
ರ್ದದೆ ನಿತ್ಯಂಬೆತ್ತು ಬೆಳಪ ರವಿಬಿಂಬಮಿದೆಂ ॥
ಬುದನೆನಿಸುವ ನಿರುಪಮತೇ ।
ಜದ ಪದೆಟಿಂ ಧರ್ಮಚಕ್ರಮೆಸೆದುದು ನಿಸದಂ ॥೧೧೦॥

ವ॥ ಇಂತೆಸೆವ ಸಮವಸರಣಾಧಿನಾಥಂ ಶ್ರೀಶಾಂತಿನಾಥಂ ಚತು
ಸ್ತ್ರಿಂಶದತಿಶಯಸಮೇತಂ ಸಮುತ್ಕೃಷ್ಟಾಷ್ಟಮಹಾಪ್ರಾತಿಹಾರ್ಯಪರೀತಂ
ಪರಕಾರ್ಯರುದ್ಯೋ(?) ಪೀಯೂಷಭರಿತನಾಗಳ್ ಕುರುಜಾಂಗಲಕುಂತಳ

ಕಳಿಂಗಕಾಂಭೋಜರಾಷ್ಟ್ರಮಹಾರಾಷ್ಟ್ರಪಾರಿಯಾತ್ರಪಾಂಚಾಳವಿದರ್ಭಾ
ದಿ ಸರ್ವವಿಷಯಂಗಳಂ ಛದ್ಮಸ್ಥಪ್ರಭಾವನೆಯಿಂ ಸಂಗಳಿಸುತ್ತುಮಿಂತಿರ್ಪ
ತ್ತುನಾಲ್ಸಾಸಿರದೊಂಭೈನೂಱಿಂಛತ್ತು ನಾಲ್ಕುವರ್ಷಂ ಬರಂ ವಿಹರಿಸಿದ
ನಂತರದೊಳ್

ಚತುರಸ್ವಪ್ನನಿಕಾಯದಾ ಜಯಜಯಧ್ವಾನಂ ಪೊಬಟ್ಟಿದ್ದಿಯೆ ಪೊ ।
ಣ್ಮುತಿರಲ್ಕುಣ್ಮುವ ಮಂಗಳಾನಕರವಂ ಭೂವ್ಯೋಮಮುಂ ಕೂಡಿ ತೀ ॥
ವ್ಮುತಿರಲ್ಕುದ್ಗಮಗಂಧವಾಯು ಘನಕೇತುಶ್ರೇಣಿ ತೂಗಾಡೆ ತೀ ।
ಡುತಿರಲ್ಕೆಯ್ದಿದನಿಂತು ಶಾಂತಿಜಿನಪಂ ಸರ್ವೋದಶೈಳೇಂದ್ರಮಂ ॥೧೧೧॥

ತನಗೆನ್ನಂತಾಯ್ತೆ ಶಾಂತೀಶನ ನಿರುಪಮನಿರ್ವಾಣಕಲ್ಯಾಣಯೋಗ್ಯಾ ।
ಸನಮಪ್ಪಾಸಯ್ವೆನುತ್ತುಂ ಸುರಗಿರಿಯನದಂ ಸನ್ನುತಾಧಿತ್ಯಕೋದ್ಯ ॥
ದ್ವನಕೀರಾಳಾಪದಿಂ ಕೀಲ್ವಿಡಿಸಿ ನುಡಿಯುತುಂ ನಿರ್ಝರೋದಪ್ಲವಸ್ವ ।
ಚ್ಛನವಚ್ಛಾಯಾನಳಚ್ಛದ್ಮದೆ ನಗುವುದಣಂ ನೀಳ್ದ ಸರ್ವೋದಶೈಳಂ ॥

ವ॥ ಇಂತೆಸೆವ ಸರ್ವೋದಶೈಳದ ವಿಳಾಸಶಿರೋಮಂಡಳದೊಳತೀ
ವಪಾವನಪ್ರದೇಶದೊಳ್ವಿಸರ್ಜಿತವಿಹಾರನುಮೇಕಮಾಸಂಬದಂ ಪಲ್ಯಂಕಾ
ಸನಸ್ಥಿತನುಂ ವಾಗ್ವೃತ್ತಿನಿವೃತ್ತನುಮಾತ್ಮಾಭಿಮುಖನುಂ ನಿಯಮಿತಯೋ
ಗನಿಯೋಗನುಮಾಗಿರ್ದ ಶಾಂತೀಶ್ವರಂ ಶುಕ್ಲಧ್ಯಾನಸ್ಥಮಾನಸಂ ತ್ರಿತಯ
ಪರಮಶುಕ್ಲಾಪೇಕ್ಷೆಯಿಂದಂತರ್ಮುಹೂರ್ತಕಾಲೋಜಿತ ಪರಿಣಾಮಾತಿ
ಶಯೋಪಹನೇಮಾನಾಘಾತಿವಿಷಯೋಜಿತ ಸ್ಥಿತ್ಯನುಭಾಗಖಂಡಕಂ ಸ್ವಾ
ಯುಸ್ಸಮೀಕೃತನಾವಂ ಗೋತ್ರವೇದನೀಯಸ್ಥಿತನಂತರಂ (?) ಪ್ರವರ್ತ
ಮಾನಬಾದರಕಾಯಯೋಗಂ ಬಾ[ದ]ರಮಾನಸೋತ್ಸ್ಯಾಸಕಾಯಯೋ
ಗಂಗಳಂ ಕ್ರಮದಿಂ ಕ್ರಮದಿನಂತರ್ಮುಹೂರ್ತದಿಂ ನಿರೋಧಿಸಿ ಸಂಜಾ
ತಸೂಕ್ಷ್ಮಕಾಯಯೋಗಸೂಕ್ಷ್ಮಮನೋಯೋಗೋತ್ಸ್ವಾಸಂಗಳುಮಂ
ಕ್ರಮಕ್ರಮದಿಂ ನಿಶ್ಶೇಷವಾಗಿ ಕೆಡಿಸಿ ಕೃತಯೋಗಾಪೂರ್ವಸ್ಪರ್ದಕಕೃ
ಷ್ಟ್ಯವಿಧಾನಂ ಸೂಕ್ಷ್ಮಕ್ರಿಯಾಪ್ರತಿಪಾತಿಯೆಂಬತ್ರಿತಯಶುಕ್ಲಧ್ಯಾನಪರಿಣ
ತಂನಿರುದ್ಧನಿಶ್ಶೇಷಯೋಗನಿರ್ಯಂ ಪಾದಾಸ್ರವಾಪಾಯನಯೋಗಗುಣಸ್ಥಾ
ಪಗತಭೂಪರತಕ್ರಿಯಾಸಿವೃತ್ತಿನಾವಮಾಂತ್ಯ ಶುಕ್ಲಧ್ಯಾನಾನಳದಂದಹ್ಯಮಾ
ನಾಪೂತಿವನಪಟಲನಾಶ್ಮ ಗುಣಸ್ಥಾದ್ವಿಚರಮಸಮಯ ನಿರಸ್ತದ್ವಿಸಪ್ತಪ್ರ

ಕೃತಿಕನಂತ್ಯಸಮಯೋಪಹತತ್ರಯೋದಶ ಪ್ರಕೃತಿಸಂದೋಹನೈಸಾಸಿರ್ವ
ರ್ಮುನಿವರ್ ವೆರಸಾಗಳ್—

ಇರದೇನಸ್ತಮುಮಗ್ನಿಪ್ರೋಗೆ ಪರಮಧ್ಯಾನೋಜ್ವಳಜ್ಯೋತಿಯಿಂ ।
ದೊರೆವೆತ್ತಗ್ಗದನಿರ್ಮಳೋತ್ತಮಗುಣಂ ತಾಮೆಂಟುಮಕ್ಷೂಣಮಾ ॥
ಗಿರೆ ಸಂಶುದ್ಧನಿಜಸ್ವರೂಪದೆಸಕಂ ರಾರಾಜಿಸುತ್ತಿಯ್ದಿ ಮೋ ।
ಕ್ಷರಮಾಯೋಗಮನಪ್ಪುಕೆಯ್ದನಘಮುಂ ಶ್ರೀಶಾಂತಿಭಟ್ಟಾರಕಂ ॥೧೧೩॥

ಕ್ಷಿತಿಗೆಸೆವ ಜ್ಯೇಷ್ಠಬಹುಳದ ।
ಚತುರ್ದಶಿಯ ಪೂರ್ವರಾತ್ರಿಯೊಳ್ಭರಣಿಯೆನಿ ॥
ಪ್ರತಿಶಯದ ತಾರೆಯೊಳ್ಜನ ।
ಪತಿ ಲೋಕತ್ರಿತಯಶಿಖರಶೇಖರನಾದಂ ॥೧೧೪॥

ವ॥ ಮತ್ತಮಷ್ಟಮಪೃಥ್ವೀಮಧ್ಯದೊಳಷ್ಟಯೋಜನಮಧ್ಯಬಾಹು
ಳ್ಯಮುಂ ಪಂಚಚತ್ವಾರಿಂಶಲ್ಲಕ್ಷಯೋಜನಪರ್ಮಾಣೋಪರಿಮವಿಸ್ತಾರ
ಮುಂ ಸಮವೃತ್ತಮುಂ ಸಮದಳಮಪ್ಪ ಸ್ಫಟಿಕಶಿಳಾಘಟಿತಮುಂ ಧವಳಾತ
ಪತ್ರಾಕಾರಮುಮೆನಿಸಿದೀಷತ್ಪ್ರಾಗ್ಭಾರನಾಮಧೇಯಪ್ರಸಿದ್ಧಮೆತ್ತ ಸಿದ್ಧ
ಕ್ಷೇತ್ರದ ವಿಶುದ್ಧಸ್ಥಾನದ ಮೇಗಣ ತನುವಾತಚರಮಖಂಡದೊಳ್ಕಿಂಜಿನ್ಯೂ
ನಚರಮಾಂಗಮಾತ್ರಜೀವಘನಾಕಾರಮುಂ ಕ್ಷಾಯಿಕಸಮ್ಯಕ್ತ್ವಾನಂತ
ಜ್ಞಾನದರ್ಶನವೀರ್ಯಸೂಕ್ಷ್ಮತ್ವಾವಗಾಹಾಗುರುಲಘುಕಾವ್ಯಾಬಾಧಾಪ್ಟಗು
ಣಮಣಿನಿಧಾನನುಂ ನಿಶ್ಕಳನುಂ ನಿತ್ಯನುಮತ್ಯಂತಶುದ್ಧನುಂ ನಿರಂಜನನುಂ
ನಿರ್ವಿಕಲ್ಪನುಂ ನಿಜಸ್ವರೂಪನುಂ ಮುಕ್ತಿಶ್ರೀಗಧೀಶ್ವರನಾಗಿರೆ—

ಧರೆಯೊಳ್ತ್ರಿಷೇಣಭೂಪಂ ಕುರುಧರಣಿಭವಂ ಶ್ರೀಪ್ರಭಂ ಖೇಚರಾಧೀ।
ಶ್ವರನಂತಾದಿತ್ಯಚೂಳಾಂಬರನೃಪತಿ ಪೊದಳ್ದಿಚ್ಯುತೇಂದ್ರಂ ಮಹೀಭೃ ॥
ದ್ವರನಾವಜ್ರಾಯುಧಾಖ್ಯಂ ನಿರುಪಮನಹಮಿಂದ್ರಂ ತ್ರಿಬೋ

[ಧಾತ್ಮಕಂ ಮೇ ।

ಘರಥಂ ಸರ್ವಾರ್ಥಸಿದ್ಧೀಶ್ವರನೆನೆ ನೆಗಳ್ದಂ ಷೋಡಶಂ ಶಾಂತಿನಾಥಂ ॥

ವ॥ ಮತ್ತಮನಿಂದಿತೆಯುಮಾರ್ಯೆಯುಂ ವಿಮಳಪ್ರಭದೇವನುಂ
ಶ್ರೀವಿಜಯನುಂ ಮಣಿಚೂಳನುಮನಂತವೀರ್ಯನುಂ ನಾರಕನುಂಮೇಘು

ನಿನಾದವಿದ್ಯಾಧರಸುಮಚ್ಯುತಪ್ರತೀಂದ್ರನುಂ ಸಹಸಾಯುಧನುಮಹಮಿಂ
ದ್ರನುಂ ದೃಢರಥನುಂ ಸರ್ವಾರ್ಥಸಿದ್ಧೀಶನುಂ ವಜ್ರಾಯುಧನುಮೊಗಿ—

ಕ್ರಮದಿಂದಾಚಕ್ರಾಯುಧ ।
ಯಮಿವಿಭು ಶುಭಭಾವನಾದಿಯಿಂದನಿತುಂ ಕ ॥
ರ್ಮಮನುನ್ಮೂಳಿಸಿ ಮುಕ್ತಿ ।
ಪ್ರಮದೆಯ ಪರಮಪ್ರಿಯುಕ್ಕಿ ಮೊದಲಿಗನಾದಂ ॥೧೧೬॥

ವ॥ ಮತ್ತಮೂಗಳ್

ಅಮೃತ ಶ್ರೀಸಂಗಮುಂ ಸಂಗಳಿಸಿದುದು ಜಗತ್ಸ್ವಾಮಿ ಶಾಂತೀಶ್ವರಂಗಾ ।
ದಮೆನುತ್ತುಂ ಜಿತ್ತದೊಳ್ತಾನವಧಿಯಿನಱಿದಕ್ಕೂಣನಿರ್ವಾಣಕಲ್ಯಾ ॥
ಣಮಹಾಪೂಜಾಕೈಯಾತ್ಯುತ್ಸವದೊಳಖಿಳಚತುರ್ನಿಕಾಯಾಮರಾನೀ ।
ಕಮದೆತ್ತಂ ಸುತ್ತಿ ಬರ್ಪಚ್ಚರಿ ಪುದಿದತಿ ಸಂರಂಭದಿಂ ಬಂದನಿಂದ್ರಂ ॥

ಸುರಸಂವಾದಿತವಾದ್ಯವೃಂದರುತಿ ಲೋಕಾಕೀರ್ಣಮಾಗುತ್ತಿರಲ್ ।
ಪ್ರರುಹೂತಂ ಪರಮಪ್ರಮೋದದೊದವಿಂ ಚತುರ್ನಿಕಾಯಾಮರ ॥
ರ್ವೆರಸಾರಾಧಿಸಿದಂ ಸುಬೋಧನಿಧಿ ಶಾಂತೀಶಂಗೆ ನಿರ್ವಾಣಮಂ ।
ದಿರನಿಶ್ರೇಣಿಯೆ ತಾನಿದಾದುದೆನುತುಂ ಸಮ್ಮೋದಶೈಳೇಂದ್ರನುಂ ॥೧೧೯॥

ವ॥ ಇಂತಗುರ್ವಿನಿಂ ಗೀರ್ವಾಣನಾಥಂ ಶಾಂತಿನಾಥನಿರ್ವಾಣಕಲ್ಯಾಣ
ಪೂಜೆಯಂ ವಿರಚಿಸಿದನಂತರದೊಳ್

ರಸನಾಮೂಖಿನಯಂ ವಿಜಿತ್ರತರಮಾಗಲ್ನೋೞ್ಪಿ ನಾನಾಮರಾ ।
ಕ್ಷಸಮೂಜಕ್ಕೆ ವಿನೂತಕೌತುಕರಸಂ ಚಿತ್ತಕ್ಕೆ ಹರ್ಷಾಮೃತ ॥
ಪ್ರಸರಂ ಮೆಯ್ಗೆ ಸಮಂತನೂನಪುಳಕಂ ಕೈಗಣ್ಮುತಿರ್ಪಂತೆ ನ ।
ರ್ತಿಸಿದಂ ನಿರ್ಭರಭಕ್ತಿಯುಕ್ತಹೃದಯಂ ಸೌಧರ್ಮಕಲ್ಪಾಧಿಪಂ ॥೧೧೯॥

ವ॥ ತದನಂತರದೊಳ್—

ಸುರರಾಜಂ ರಾಜಸಲ್ಲಾಜಿನಪನ ನಿಜನಿರ್ವಾಣಕಲ್ಯಾಣಪೂ ಜೋ ।
ತ್ಕರಮಂ ಸಂರಂಭದಿಂದಂ ವಿರಚಿಸಿ ಬಱಿಯಂ ಜ್ಯೋತಿರಿಂದ್ರಬ್ರಜವ್ಯಂ॥
ತರನಾಥಬ್ರಾತ ಭಾಸ್ವದ್ಭವನಜತತಿ ವೈಮಾನಿಕಸ್ತೋಮ ಸೇನಾ ।
ಭರಿತಾಂಭೋದಾಧ್ವನನ್ತಾಗಳೆ ಸುರಪುರಿಯಂ ಪೊಕ್ಕನಾನಂದದಿಂದಂ ॥